CRYSTALINFOSYSTEMS AND SERVICES

Bar Code

80722152

Bar Code

80722152

Bar Code

80722152

Karnataka State Archives,
(Departmental Library)
ಕರ್ನಾಟಕ ರಾಜ್ಯ ಪತ್ರಾಗಾರ
(ಇಲಾಖಾ ಗ್ರಂಥಾಲಯ)
ಪ್ರಾಪ್ತಿ ಕ್ರಮಾಂಕ Accession No....42011
ದಿನಾಂಕ Date..................................

(ಗ್ರಂಥ ಸ್ವೀಕಾರ ಸಂ.) ಸ್ವೀಕಾರಂಕ Accession No. 4901
ದಿನಾಂಕ Date.......
V-31 N7
N74-234
(13) 49e.

TABLE OF CONTENTS
TO THE
MYSORE LEGISLATIVE ASSEMBLY DEBATES

Volume—XXIII (Nos. 4 to 7)

(From 25th Sept. 1973 to 29th Sept. 1973)

Tuesday, the 25th September 1973

		Pages
1.	(i) Starred Questions and Answers ...	321
	(ii) Short Notice Questions ...	321
	(iii) Questions for Answers on the day (but not taken up) ...	357
2.	Calling attention to a matter of Urgent Public Importance ...	358
	(i) re. Elephant menance in Arasalu and Maleshankar Forest Range	
	(ii) re Mal-administration in MSRTC Division, Gulbarga	
	(iii) re. Disposal of Valuable Articles belonging to Mysore Palace	
3.	Papers Laid on the Table ...	369
	(i) Notification issued under the Mysore Land Revenue Act, 1964	
	(ii) Audit Report of the University of Agricultural Sciences for 1967-68	
4.	Question of Privilege against the Secretary Janasangha Party — Referred to Privileges Committee ...	369
5.	Police Excesses on Students in Hassan ...	370
6.	Mysore Sheep and Sheep Products Bill, 1973 Passed as amended ...	374
7.	University of Health Sciences Bill, 1973—Motion to the Bill to a J. S. C. (Adopted) ...	415

Thursday, the 27th September 1973

		Pages
1.	(i) Starred Questions and Answers ..	433
	(ii) Questions for Answers on the day (but not taken up) ...	455
2.	Calling attention to matters of Urgent Public Importance ...	456
	(i) re. Outbreak of Cholera epidemic in Hassan District	
	(ii) re. Non-remittance of the Insurance Premia collected by the authorities of D. Banumaiah's College from their employees.	
	(iii) re. Retrenchment of Local Candidates	
3.	Official Resolutions	465
	(i) re. Approval of the Notifications issued under Cotton Transport Act 1973 in respect of Dharwar, Chitradurga, Bellary, Mysore and Bagalkot areas—Adopted	
	(ii) re. Approval of the Cotton Transport (Mysore) (Amendment) Rules, 1973........ Adopted.	
4.	(i) Dharna by the Officers of the Mysore Iron and Steel Ltd, Bhadravathi	467
	(ii) Giving Protection to Ryots	468
	(iii) Furnishing replies to Questions	469
5.	Mysore Seed Farm Bill, 1973—passed as amended	471
6.	Mysore Private Educational Institutions (Discipl and Control Bill, 1973	510
	Motion to Consider.	
7.	Statement by the Minister for Industries : re. Dharna by the Officers of the Mysore Iron and Steel, Ltd.	519
8.	Business of the House	540

Friday, the 28th September 1973

		Pages
1.	(i) Starred Questions and Answers ...	541
	(ii) Questions for Answers on the day (but not taken up) ...	569
2.	Calling attention to Matters of Public Impo tance :	571
	(i) re. Non-filling up Posts of Teachers in High Schools of Hassan District ...	
	(ii) re. Restriction imposed on the distribution of Fertilisers in Mandya District ...	
	(iii) re. Deportation of Social Works to Pestalozzi Childrens' Village, Trogen, Switzerland ...	
	(iv) re. Incident relating to the Kidnapping of two at Gulbarga	
3.	Papers Laid on the Table : Notifications issued under Mysore Land Revenue Act and the Mysore Sales Tax Act. ...	579
4.	Arrest and Release of Sri V. N. Patil–Announced...	580
5.	Statement by Minister for Education : ...	581
	re. Appropriation of the Education Minister being the Chairman of the Mysore State Sahitya Academy ...	
6.	(i) Notices given under Rule 312 ...	583
	(ii) Breach of Maralvadi Tank in Kanakapura Taluk ...	
	(iii) Burning of important documents in Mandya...	
7.	Mysore Forest (Amendment) Bill 1973 introduced...	588
8.	Discussions on a Matter of Public Interest under Rule 146. ...	588
	re. The Food Situation in the State and the rise in prices of essential commodities ...	
9.	Statement of the Chief Minister :	687
	re. Satyagraha—Sandur Taluk ...	
10.	Half-an-hour Discussion arising out of replies to Starred Question No. 101 on....73 ...	692
	re. Kamadhenu Enter prises (Reg.) Tiptur ...	
11.	Annexure.—	694
	Mysore Forest (Amendment) Bill, 1973 ...	

Saturday, the 29th September 1973

		Pages
1.	(i) Sta red Questions and Answers ...	699
	(ii) Questions for Answers on the day (but not taken up) ...	727
2.	Calling attention to a Matter of Urgent Public Importance ...	729
	(i) re Felling of Forest in Kodakani Village of Soraba Taluk	
	(ii) re. Indiseriminate issue of No-objection Certificate by the C I. T. B. of Agricultural Land.......	
3.	Papers Laid on the Table:— re. Notification under the Mysore Sales Tax Act. ...	733
4.	T ird Report of the Committee on the Public Undertakings—Presented	
5.	Statements by the Minister for Public Works and Electricity: ...	
	(i) re. Floods in Kanakapura Taluk.	
	(ii) re Missing of Smt. Sumitra Desai	
6.	(i) Shifting of Bus Stand located at Gandhi Square, Mysore ...	751
	(ii) Action taken on the disturbances at Mandya	
7.	Mysore Municipal Laws (Amendment) Bill, 1973 Introduced	753
8.	Mysore Private Educational Institutions (Discipline and Control) Bill, 1973 — passed, as Amended ...	
9.	Mysore Public Services Commission (Conduct of Business and Additional Functions) Second Amendment) Bill, 1973 ...	
10.	Election of Members to Several Committees :	Result Announced
	(i) To the Committee on Public Undertakings	
	(ii) To the Committee on Welfare of S. C. S. and S. T. S.	
	(iii) To the Committee on Privileges.	
	(iv) To the Committee on Private Members' Bills and Resolutions.	
11.	House Adjourned *Sine-die* ...	
12.	Annexure : ...	
	Mysore Municipal Laws (Amendment) Bill, 1973	753

ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Tuesday, 25th September, 1973/Ashayuja 3, 1895 S.E.

The House met in the Assembly Chamber, Vidhana Soudha, at One of the Clock.

MADAM SPEAKER (SMT. K. S. NAGARATHNAMMA) in the Chair.

STARRED QUESTIONS

(to which oral Answers were given)

COST OF HOUSES CONSTRUCTED IN SIRSI AND SIDDAPUR

149. Sri M. H. JAYAPRAKASH NARAYAN (Sirsi).— Will the Minister for Municipal Administration be pleased to state :—

(a) the number of houses constructed in Sirsi and Siddapur Town under the Mysore Housing Board Scheme ;

(b) when the construction of these houses was completed and the cost of each house at present ;

(c) the condition in which these houses are now kept ;

(d) the reason why these houses were not disposed off as per advertisement ?

Sri B. BASAVALINGAPPA (Minister for Municipal Administration) —

(a) (1) Sirsi 109 Houses.
(2) Siddapur 11 Houses.

(b) Sirsi ... 100 Houses in 1970.
Sirsi ... 9 Houses in 1972.
Siddapur ... 11 Houses in 1967.

(for cost of each house see the statement placed on the Table of the House)*

(c) The houses require some minor repairs for wood work and roof.

(d) There was no response from the public.

ಶ್ರೀ ಎಂ. ಎಚ್ ಜಯಪ್ರಕಾಶ್ ನಾರಾಯಣ.— ಸಿರ್ಸಿಯಲ್ಲಿ ೧೦೯ ಮನೆಗಳು, ಸಿದ್ದಾಪುರದಲ್ಲಿ ೧೧ ಮನೆಗಳನ್ನು ಕಟ್ಟಿಸಿದ್ದೀರಿ ಇವು ೧೯೬೭ ನೇ ಇಸವಿಯಿಂದ ಇಲ್ಲಿಯ ವರೆಗೆ ಅಲಾಟ್ ಆಗದೆ ಈಗ ಅವು ಬಿದ್ದು ಹೋಗುವ ಸ್ಥಿತಿಯಲ್ಲಿವೆ. ಇದಕ್ಕೆ ಕಾರಣ ಕರ್ತರು ಯಾರು ?

†ಶ್ರೀ ಬಿ. ಬಸವಲಿಂಗಪ್ಪ.—ಕಾರಣ ಕರ್ತರು, ಅಧ್ಯಕ್ಷರು ಮತ್ತು ಸಂಬಂಧ ಪಟ್ಟವರು ಕಾರಣಕರ್ತರಾಗಿದ್ದಾರೆ. ಆ ಮನೆಗಳನ್ನು ಊರಿಗೆ ದೂರವಾಗಿ ಕಟ್ಟಿಸಿರುವದರಿಂದ ಅವು ಮಾರಾಟವಾಗದೆ ಹಾಗೆ ಬಿದ್ದಿವೆ. ಇದಕ್ಕೆ ಯಾರು ಜವಾಬ್ದಾರರಾಗಿದ್ದಾರೋ ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ — ಸಿದ್ದಾಪುರದಲ್ಲಿ ೧೧ ಮನೆಗಳನ್ನು ಕಟ್ಟಿ ಈಗಾಗಲೇ ೫—೬ ವರ್ಷವಾಗಿದೆ. ಅಲ್ಲಿಗೆ ಯಾರೂ ಹೋಗದೆ, ದನ ಕತ್ತೆಗಳು ನಿಲ್ಲಲು ಸೋಸ್ತಿಯಾಗಿವೆ. ಅವುಗಳನ್ನು ಊರಿಗೆ ದೂರವಾಗಿ ಕಟ್ಟಿಸಿದ್ದಾರೆ. ಯಾವದೋ ರಾಜಕೀಯ ಪ್ರಭಾವಕ್ಕೆ ಒಳಗಾಗಿ ಹಿಂದಿನವರು ಪ್ರತಿ ಮನೆಗಳಿಗೂ ೨೦—೪೦ ಸಾವಿರ ರೂಪಾಯಿಯನ್ನು ಖರ್ಚು ಮಾಡಿದ್ದರೂ ಈಗ ಅವು ಯಾರಿಗೂ ಉಪಯೋಗವಾಗದೆ ಇರುವದರಿಂದ, ಅಲ್ಲಿರತಕ್ಕ ಸರ್ಕಾರಿ ಉದ್ಯೋಗಸ್ಥರು ಅವುಗಳನ್ನು ಬಾಡಿಗೆಗೆ ಕೇಳುತ್ತಿದ್ದಾರೆ. ಕೊಡುವದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.— ಇದು ಒಂದು ಒಳ್ಳೆಯ ಸಲಹೆ, ಪರಿಶೀಲನೆ ಮಾಡುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ.— ಅನಾವಶ್ಯವಾಗಿ, ಸಿರ್ಸಿಯಲ್ಲಿ ೧೦೯ ಮನೆಗಳನ್ನು ಕಟ್ಟಿ ಈ ವರೆಗೂ ಅಲ್ಲಿ ಯಾರೂ ವಾಸ ಮಾಡದೆ ಇರುವದರಿಂದ, ಅವುಗಳನ್ನು ಬೇರೆ ಅಧಿಕಾರಿಗಳಿಗೆ ಬಾಡಿಗೆ ಕೊಡುವ ಬಗ್ಗೆ ಪರಿಶೀಲನೆ ಮಾಡುತ್ತೇನೆ ಎಂದು ಹೇಳಿದಿರಿ. ತಾವು ಇವುಗಳ ಬಗ್ಗೆ ತಕ್ಷಣ ಕ್ರಮ ತೆಗೆದುಕೊಳ್ಳದಿದ್ದರೆ ಮತಷ್ಟು ಲುಕ್ಸಾನು ಆಗುತ್ತದೆ. ದಯವಿಟ್ಟು ತಾವು ಸ್ಥಳಕ್ಕೆ ಭೆಟ್ಟಿಕೊಟ್ಟು ತಕ್ಕ ಕ್ರಮ ತೆಗೆದುಕೊಳ್ಳುತ್ತೀರಾ ?

---

*Copy placed in Mysore Legislature Library *Vide* No. 17 / D. 25-9-73.

† Indicates that remarks or speeches have not been revised by the member concerned.

ಶ್ರೀ ಬಿ. ಬಸವಲಿಂಗಪ್ಪ.— ಇಂಥ ನಿದರ್ಶನಗಳು ನಮ್ಮ ಮೈಸೂರು ದೇಶದಲ್ಲಿ ಹಲವಾರು ಇವೆ. ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಲಿಕ್ಕೆ ಆಕ್ಟನಲ್ಲಿ ಸಾಕಷ್ಟು ಅಧಿಕಾರವನ್ನು ಸರಕಾರದ ಕೈಯಲ್ಲಿ ಇಳವಡಿಸಿಲ್ಲ. ಎಲ್ಲಾ ಕಡೆ ಇಂಥ ನಿದರ್ಶನಗಳು ಇವೆ. ಎಲ್ಲಿಯೋ ಮನೆ ಕಟ್ಟುವದು, ಎಲ್ಲಿಯೋ ಜಮೀನು ತೆಗೆದುಕೊಳ್ಳುವುದು ಇದೆಲ್ಲಾ ರಾಜಕೀಯ ಪ್ರಭಾವದಿಂದ ಹಿಂದೆ ಮನೆಗಳನ್ನು ಕಟ್ಟಿಬಿಟ್ಟು ಇಂಥ ದುರುಪಯೋಗಗಳು ಆಗಿವೆ ಎಂದು ನಾನು ವಿಷಾದದಿಂದ ಹೇಳಬೇಕಾಗಿದೆ. ನಾನು ಹೋಗಿಬಿಟ್ಟು, ಸ್ಥಳ ಪರಿಶೀಲನೆ ಮಾಡಿ ಇದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ.— ಸಿರ್ಸಿಯಲ್ಲಿ ಕಟ್ಟಿರತಕ್ಕ ಮನೆಗಳು ಅಲ್ಲಿರತಕ್ಕ ಕಾಲೇಜಿನ ಮುಂಭಾಗದಲ್ಲಿವೆ. ಅವು ಸಿರ್ಸಿಯಿಂದ ಎಂದೂವರೆ ಎರಡು ಮೈಲಿ ದೂರದಲ್ಲಿದ್ದು ಪ್ರೈವೇಟ ಕಾಲೇಜಿನ ಮುಂಭಾಗದಲ್ಲಿವೆ. ಪ್ರೈವೇಟ ಕಾಲೇಜಿನವರು ಅನ್‌ಆಥರೈಸ್ಡ್ ಆಗಿ ಅಕ್ಯುಪೈ ಮಾಡಿರತದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಬಿ. ಬಸವಲಿಂಗಪ್ಪ.— ಸ್ಥಳ ಅಜಮಾಯಿಷಿ ಮಾಡಿಬಿಟ್ಟು ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ. ಮತ್ತು ತಮ್ಮ ಸಲಹೆಯನ್ನೂ ಪರಿಶೀಲನೆ ಮಾಡುತ್ತೇನೆ.

EVICTION OF HANDLOOM WEAVERS FROM FOREST AREA NEAR BANHATTI

213. Sri P. M. BANGI (Jamkhandi).—Will the Minister for Agriculture and Forests be pleased to state :—

(a) whether the houseless and landless weavers of Banhatti and their representative M.L.A. had applied to Minister to 'deforest' the area already occupied by different hutmen and grant them the sites on which they have erected the huts and are living there for more than 30 years ;

(b) if so, the reason why the area where the huts have been erected by the landless and houseless handloom workers has not been deforested and that the sites are not granted for handloom weavers so far ;

(c) whether the handloom weavers who have occupied the forest area near about Banhatti are harassed by Forest Guards for not vacating the sites ;

(d) whether the Government has any proposal to deforest the necessary area of the Banhatti forest and grant the sites free of cost to handloom, houseless and landless weavers of Banhatti ; if so, the time within which the sites would be granted ?

Sri K. H. PATIL (Minister for Agriculture and Forest)—

(a) Yes.

(b) The matter is under consideration.

(c) No. Eviction proceedings have been stayed.

(d) Final report from the Chief Conservator of Forests is awaited.

ಶ್ರೀ ಪಿ. ಎಂ. ಭಂಗಿ.—ನನ್ನ 'ಬಿ' ಪ್ರಶ್ನೆಗೆ ಉತ್ತರವಾಗಿ ಈ ವಿಷಯವು ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೀರಿ. ಇದರ ಬಗ್ಗೆ ತಮ್ಮ ಕಡೆ ಅರ್ಜಿ ಕೊಟ್ಟು ಒಂದು ವರ್ಷವಾಯಿತು. ಆ ಬಗ್ಗೆ ಏನೂ ಪರಿಶೀಲನೆಯಾಗಿಲ್ಲ. ನಿವೇಶನ ಇಲ್ಲದವರಿಗೆ, ಲಕ್ಷಾವಧಿ ನಿವೇಶನಗಳನ್ನು ಹಳ್ಳಿಗಳಲ್ಲಿ ಕೊಡುತ್ತೇವೆ ಎಂದು ಸರ್ಕಾರದ ಪರವಾಗಿ ಏನು ಹೇಳಿದ್ದೀರೋ ಆ ಪ್ರಕಾರವಾಗಿ ಅಲ್ಲಿ ನಿವೇಶನ ಇಲ್ಲದ ಬಡ ನೇಕಾರರಿಗೆ ನಿವೇಶನಗಳನ್ನು ಕೊಡುವುದು ಉಚಿತವಲ್ಲವೇ? ತಾವು ದೊಡ್ಡ ಮನಸ್ಸು ಮಾಡಿ ಅವರಿಗೆ ನಿವೇಶನಗಳನ್ನು ಕೊಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್ —ಕೊಡಬೇಕು ಎನ್ನುವುದರ ಸಲುವಾಗಿಯೋ ತಡವಾಗಿದೆ. ಸರ್ಕಾರದವರು ಅವರಿಗೆ ಎಷ್ಟೆಷ್ಟು ನಿವೇಶನಗಳನ್ನು ಕೊಟ್ಟರೆ ಸೂಕ್ತವಾದೀತು ಎನ್ನುವುದನ್ನು ಪರಿಶೀಲನೆ ಮಾಡಬೇಕು, ಅದರ ಸಲುವಾಗಿ ತಡವಾಗಿದೆ.

FAMILY PLANNING HEALTH UNIT DISPENSARIES AT MANCHALDHORE AND TARUR

220. Sri T. TAREGOWDA (Kallambella):—Will the Minister for Health be pleased to state :—

(a) whether there is any proposal to sanction a F.P. Health Unit Dispensary to Manchaldhore of Hagalwadi Hobl , Gubbi Taluk and another to Tarur, Sira Taluk during 1973-74 ;

(b) whether the Government has sanctioned F. P. and Health Dispensary to Tuppadakon, Bukkapatna Hobli, Sira Taluk and Theerthapura, Kandikere Hobli, Chikkanayakanahalli Taluk, Tumkur District and tenders were called for by the Executive Engineers concerned ;

(c) whether any tenders have been accepted; if so, when the buildings will be constructed in these places?

Sri H. SIDDAVEERAPPA (Ministser for Health).—

(a) No.

(b) Two sub-centres under Indian Population Project one at Tuppadakon and the other at Theerthapura have been sanctioned and tenders have been called for by the Executive Engineer of the I. P. P.

(c) Not yet; buildings will be constructed as soon as the tenderers are accepted.

ಶ್ರೀ ಟಿ. ತಾರೇಗೌಡ.—ಗುಬ್ಬಿ ತಾಲ್ಲೂಕಿನ ಹಗಲವಾಡಿ, ಹೋಬಳಿಯ ಮಂಚಲದೊರೆ ಹಾಗೂ ಸಿರಾ ತಾಲ್ಲೂಕು ತಾರೂರು ಗ್ರಾಮಗಳಿಗೆ ಇಂಡಿಯನ್ ಪಾಪ್ಯುಲೇಷನ್ ಪ್ರಾಜೆಕ್ಟನ ಪ್ರಕಾರವಾದರೂ ಸರ್ಕಾರದವರು ಆಸ್ಪತ್ರೆಗಳನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ? ಏಕೆಂದರೆ, ತಾತ್ಕಾಲಿಕವಾಗಿ ಕಟ್ಟಡ ಕೊಡುತ್ತೇವೆಂದು ಅಲ್ಲಿಯ ಚೇರ್ಮನ್‌ರು ತಮ್ಮಲ್ಲಿಯೂ ಕೂಡ ಬಂದು ತಿಳಿಸಿದ್ದಾರೆ ಮತ್ತು ನನಗೂ ರೆಪ್ರಸೆಂಟೇಷನ್ ಕೊಟ್ಟಿರುತ್ತಾರೆ. ಇಂಡಿಯನ್ ಪಾಪ್ಯುಲೇಷನ್ ಪ್ರಾಜೆಕ್ಟ ಪ್ರಕಾರ ಆಸ್ಪತ್ರೆ ಕೊಡುವುದಕ್ಕೆ ಯೋಚನೆ ಮಾಡುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಅದನ್ನು ವಿಚಾರ ಮಾಡಿಸುತ್ತೇನೆ.

ಶ್ರೀ ಟಿ. ತಾರೇಗೌಡ.—ತುಪ್ಪದಕೋಣ ಹಾಗೂ ಚಿಕ್ಕನಾಯಕನಹಳ್ಳಿಯ ತಾಲ್ಲೂಕಿನ ತೀರ್ಥಪುರಕ್ಕೆ ಇಂಡಿಯನ್ ಪಾಪ್ಯುಲೇಶನ್ ಪ್ರಾಜೆಕ್ಟ ಪ್ರಕಾರ ಆಸ್ಪತ್ರೆ ಕಟ್ಟುವುದಕ್ಕೆ ಟೆಂಡರ ಕರೆದಿದ್ದೇವೆಂದು ತಿಳಿಸಿದ್ದೀರಿ. ಟೆಂಡರ ಪ್ರಕಾರ ಕಂಟ್ರಾಕ್ಟನ್ನು ಯಾರಿಗೆ ಕೊಟ್ಟಿದ್ದೀರಿ?

ಶ್ರೀ ಎಚ್. ಸಿದ್ದವೀರಪ್ಪ.—ಯಾರಿಗೆ ಕೊಟ್ಟಿದ್ದಾರೆ ಎನ್ನುವುದು ಗೊತ್ತಿಲ್ಲ. ಟೆಂಡರ್ ಕಾಲ್‌ಫಾರ್ ಮಾಡಿದ್ದು ಗೊತ್ತು.

ಶ್ರೀ ಟಿ. ತಾರೇಗೌಡ.—ಟೆಂಡರು ಮಂಜೂರಾದ ತಕ್ಷಣ ಕಟ್ಟಡ ಕಟ್ಟಿಸಿ ಆಸ್ಪತ್ರೆಗೆ ಅವಕಾಶ ಮಾಡುವಿರಾ?

ಶ್ರೀ ಎಚ್. ಸಿದ್ದವೀರಪ್ಪ.—ಅದೇ ಉದ್ದೇಶದಿಂದಲೇ ಟೆಂಡರನ್ನು ಕಾಲಫಾರ್ ಮಾಡಿರುವುದು.

GRANT OF FOREST LAND IN KARA KURCHI VILLAGE

226. Sri T. M. MANJUNATH (Tiptur).—

Will the Minister for Agriculture and Forests be pleased to state :—

(a) whether villagers of Kara Kurchi, Tiptur Taluk have given any application requesting for the grant of forest lands for cultivation by mutual transfer of their own lands ;

(b) if so, the action taken by Government in that behalf ?

Sri K. H. PATIL (Minister for Agriculture and Forests).—

(a) Yes.

(b) It is being examined.

ಶ್ರೀ ಟಿ. ಎಂ. ಮಂಜುನಾಥ.—ಈ ಜನರು ಬೆಟ್ಟದಮೇಲಿದ್ದುಕೊಂಡು ತೊಂದರೆಪಡುತ್ತಿರುವುದರಿಂದ ಜಾಗ್ರತೆ ಅವರಿಗೆ ಕೇಳಿರುವ ಜಾಗ ಕೊಟ್ಟು ಅನುಕೂಲ ಮಾಡುವಿರಾ ?

† ಶ್ರೀ ಕೆ. ಎಚ್. ಪಾಟೀಲ.—ಸುಮಾರು ೧೫ ದಿವಸಗಳಲ್ಲಿ ಇದರ ಬಗ್ಗೆ ನಿರ್ಣಯ ತೆಗೆದುಕೊಳ್ಳುತ್ತೇವೆ.

ಶ್ರೀ ಟಿ. ಎಂ. ಮಂಜುನಾಥ.—ಅವರಿಗೆ ಲೀಜ್ ಬೇಸಿಸ್ ಮೇಲೆ ಕೊಡುವಿರೋ ಅಥವ ಮ್ಯುಚುಯಲ್ ಟ್ರಾನ್ಸಫರ್ ಮೂಲಕ ಕೊಡುವಿರೋ ?

ಶ್ರೀ ಕೆ. ಎಚ್. ಪಾಟೀಲ.—ಆ ವಿಚಾರ ಈಗ ಅಧಿಕಾರಿಗಳ ಪರಿಶೀಲನೆಯಲ್ಲಿದೆ. ಜನರಿಗೆ ಯಾವ ರೀತಿ ಮಾಡಿದರೆ ಅನುಕೂಲ ಎಂದು ವಿಚಾರ ಮಾಡಿ ಅದಕ್ಕೆ ತಕ್ಕಂತೆ ಕ್ರಮ ತೆಗೆದುಕೊಳ್ಳುವರು.

ಶ್ರೀ ಟಿ. ಎಂ. ಮಂಜುನಾಥ.—ಕೇಳಿರುವ ಜಮೀನು ಗುಬ್ಬಿ ತಾಲ್ಲೂಕಿಗೆ ಸಂಬಂಧಪಟ್ಟಿರುವುದು, ಗುಡ್ಡದ ಕೆಳಗಿರುವುದು. ಅವರು ಕೇಳಿರುವ ಜಮೀನನ್ನೇ ಕೊಡಲು ಅವಕಾಶ ಮಾಡುವಿರಾ ?

ಶ್ರೀ ಕೆ. ಎಚ್. ಪಾಟೀಲ.—ಅಧಿಕಾರಿಗಳು ಪರಿಶೀಲಿಸಿದ ನಂತರ ಸ್ಥಳ ನೋಡಿದ ನಂತರ ಸೂಕ್ತ ನಿರ್ಣಯ ಕೈಕೊಳ್ಳುವರು.

GODOWNS OF PRIMARY CO-OPERATIVE SOCIETIES IN AURAD TALUK

237. Sri BAPU RAO PATIL (Aurad).— Will the Minister for Co-operation be pleased to state :—

(a) the number of Godowns of the Primary Co-operative Societies constructed in Aurad Taluk during the last five years in Bidar District ;

(b) the names of villages in Aurad Taluk of Bidar District, where the Primary Co-operative Societies Godowns are left incomplete; since how long and the reasons for the same;

(c) the number and names of constructed Godowns; which are in good condition;

(d) the action taken about the incomplete Godowns; whether the construction agencies or the contractors have been served with notices ?

Sri A. SHANKARA ALVA (Minister for Co-operation).—

(a) Two

(b)

	Name of the Village		Period since pending incomplete
1.	Sanwalli	...	8 years
2.	Murki	...	6 ,,
3.	Holesamander	...	1 ,,
4.	Sonalwadi	...	1 ,,
5.	Mudhol 'B'	...	1 ,,

Reasons

Due to increase in the estimated cost and for want of sufficient financial resources by the concerned societies.

(c) Two

1. Service Co-operative Society Ekamba.
2. Large-sized Co-operative Society Thana, Kushnoor.

(d) Notices have been issued and instructions also have been issued to the Societies.

Co-operative Extension Officers have been directed to pursue the matter and to see that the Godowns are completed.

Sri BAPU RAO PATIL .—In reply to (a), which are the Godowns which have been constructed during the last five years ?

Sri A. SHANKARA ALVA.— Out of seven godowns sanctioned, two have been completed. Five are not completed. I have given details in the answer. They are at various stages of completion. Names are also given.

Sri BAPU RAO PATIL.— In reply to (a) may I know which are the godowns which have been constructed during the last five years ?

Sri A. SHANKARA ALVA.— Seven Godowns have been sanctioned and out of that 2 have been completed. Five are not yet completed. Names also are given. The Service Co-operative Society Ekamba, and large-sized Co-operative Society, Thana, Kushnoor,are completed. The other five are namely ;

Sanwalli, Murki, Holesamander, Sonalwadi and Mudhol are not completed.

Sri BAPU RAO PATIL.— Why are not completed ?

Sri A. SHANKARA ALVA.— Some for want of funds; some because labour charges have gone up; some because societies could not find finance inspite of subsidy given by Government we are trying to strengthen the societies and see that they are also completed.

Sri BAPU RAO PATIL.— May I know normally whether any period is fixed for completion ?

Sri A. HANKARA ALVA.— No period is fixed. The intention is, as early as possibly they should be constructed. When it was sanctioned, amount was also given by the Govt. But they could not find money because the Society has no funds. There is also difficulty about iron, steel, cement; Labour charges have gone up. Therefore, we are trying to strengthen the financial position of these societies

so that they could complete them. We have given instructions to the Extension officers and others to see that they are completed as early as possible.

Sri D. B. KALMANKAR.— It is found that Sanwalli godown is pending construction for the last 8 years; and Murki godown is pending for the last six years. It is not the view of the Govt. that there is inordinate delay in completion and because of this delay, naturally the cost will increase? So, whether the Govt. will make it a point to see that a period is fixed and things are completed within that period?

Sri A. SHANKAR ALVA.—It is really a good suggestion that the period is to be fixed. Unfortunately, when these were sanctioned, construction was not taken up immediately and because of that, cost of materials has gone up, and societies are not in a position to find funds for them. I entirely agree with the Hon. Member that it is better, a period is fixed. We are trying out best to see that time is fixed in future and periodical reports are obtained and we will see that these are completed early.

MADAM SPEAKER.—Once again the Minister is not here to answer the question. What can we do if Ministers are not here when questions are called.

Sri H. M. CHANNABASAPPA.—I submit that this question may be taken a little later.

MODE OF ELECTIONS TO CO-OPERATIVE SOCIETIES

397. Sri B.G.BANAKAR (Hirekerur).—Will the Minister for Co-operation be pleased to state :—

(a) whether Govt. is aware that the official year for the Board of Managements elected to the various village co-operative credit societies and any other such society is from 1st July to the end of June;

(b) whether Government is aware that elections to the Board of managements of these societies are held during the period from 1st July to end of September;

(c) whether it has come to the notice of Government that election disputes of these socities are usually settled late in the year by the Arbitrators or the Co-operative Appellate Tribunal;

(d) whether it has come to the notice of Government that on account of this the decisions given by the Arbitrators of the Tribunal become ineffective as by the time decision is given, the official year would have come to a close;

(e) whether Government have any proposal before them to remove this anamolous position either by amending the Co-operative Socities Act or the relevant rules in this behalf?

Sri A. SHANKARA ALVA (Minister for Co-operation).—

(a) Yes.

(b) Yes.

(c) No.

(d) No.

(e) No.

ಶ್ರೀ ಬಿ. ಜಿ. ಬಣಕಾರ.— ೧೯೬೭-೬೮ನೆಯ ಸಾಲಿನ ಚುನಾವಣೆ ಬಗ್ಗೆ ತಕರಾರಾಗಿ ಇವತ್ತಿನವರೆಗೂ ಆ ವಿಚಾರ ಇತ್ಯರ್ಥವಾಗದೆ ಟ್ರಿಬ್ಯೂನಲ್ಲಿನ ಮುಂದಿದೆ. ಇದರಿಂದ ತೊಂದರೆಯಾಗಿರುವುದರಿಂದ ಈಗಲಾದರೂ ಜಾಗ್ರತೆ ತೀರ್ಮಾನ ಮಾಡುವಂತೆ ತಿಳಿಸುವಿರಾ ?

ಶ್ರೀ ಎ. ಶಂಕರ ಆಳ್ವ.— ಮೊದಲು ಚುನಾವಣಾ ಡಿಸ್ಪ್ಯೂಟಗಳನ್ನು ಆರ್ಬಿಟ್ರೇಟರು ತೀರ್ಮಾನಮಾಡುತ್ತಿದ್ದರು. ಈಗ ಇಲಾಖೆ ಅದನ್ನು ಎರಡು ತಿಂಗಳಲ್ಲಿ ತೀರ್ಮಾನಮಾಡಬೇಕು ಎಂದು ಆದೇಶ ಕೊಡಲಾಗಿದೆ. ಟ್ರಿಬ್ಯೂನಲ್ಲಿಗೆ ಹಾಕಿದರೆ ಜಾಗ್ರತೆ ತೀರ್ಮಾನವಾಗುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಬೇಗ ತೀರ್ಮಾನ ಮಾಡಬಹುದು, ಮತ್ತೆ ಕೆಲವು ವೇಳೆ ಜಾಗ್ರತೆ ಇತ್ಯರ್ಥವಾಗುವುದಿಲ್ಲ.

ಶ್ರೀ ಬಿ. ಜಿ. ಬಣಕಾರ.— ಈಗ ರಾಜ್ಯದಲ್ಲಿ ಸುಮಾರು ೨೦ ಸಾವಿರ ಸೊಸೈಟಿಗಳಿವೆ. ಇವುಗಳಲ್ಲಿ ವರ್ಷಕ್ಕೊಮ್ಮೆ ಚುನಾವಣೆಗಳಾದರೆ ಇನ್ನು ತಾಲ್ಲೂಕ್ ಮಟ್ಟದಲ್ಲಿರತಕ್ಕ ಮತ್ತು ಜಿಲ್ಲಾ ಮಟ್ಟದಲ್ಲಿರತಕ್ಕ ಸೊಸೈಟಿಗಳಿಗೆ ಮೂರು

ವರ್ಗಕ್ಕೊಮ್ಮೆ ಚುನಾವಣೆಗಳಾಗುವಂತೆ ಅವಕಾಶಕೊಟ್ಟಿವೆ. ಆದುದರಿಂದ ಸರ್ಕಾರದವರು ಈ ಚುನಾವಣೆಗಳಿಗೆ ಸಂಬಂಧಪಟ್ಟ ಕಾನೂನನ್ನು ಎಲ್ಲ ಸಹಕಾರ ಸಂಘಗಳಿಗೂ ಒಂದೇ ರೀತಿಯಲ್ಲಿರುವಂತೆ ಮಾಡಲು ಸೂಕ್ತ ತಿದ್ದುಪಡಿಮಾಡತಕ್ಕ ಆಲೋಚನೆ ಏನಾದರೂ ಸರ್ಕಾರಕ್ಕಿದೆಯೇ ?

ಶ್ರೀ ಎ. ಶಂಕರ ಆಳ್ವ.— ಆ ವಿಷಯ ಸರ್ಕಾರದವರ ಪರಿಶೀಲನೆಯಲ್ಲಿದೆ.

ಶ್ರೀ ಬಿ. ಜಿ. ಬಣಕಾರ.— ಇನ್ನು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಸಹಕಾರ ಸಂಸ್ಥೆಗಳಿಗೆ ಚುನಾವಣೆಗಳನ್ನು ನಡೆಸತಕ್ಕ ವಿಚಾರದಲ್ಲಿ ಕಾರ್ಯಕಾರಿ ಸಮಿತಿಯವರು ಉಮೇದುವಾರರನ್ನು ಚುನಾವಣೆ ಮಾಡತಕ್ಕ ಬಗ್ಗೆ ನೋಟೀಸುಗಳನ್ನು ಕೊಡುತ್ತಾರೆ. ಆದರೆ ಮತ್ತೆ ಅವರೇ ಆ ಚನಾವಣೆಗೆ ನಿಂತು ಅವರೇ ಅಧ್ಯಕ್ಷರೂ, ಕಾರ್ಯದರ್ಶಿಗಳೂ ಖಜಾಂಚಿಗಳೂ ಆಗಿಬಿಡುತ್ತಾರೆ. ಆದುದರಿಂದ ಆ ಜನರು ಪದೇ ಪದೇ ಚುನಾವಣೆಗೆ ನಿಲ್ಲದಂತೆ ಪ್ರತಿಬಂಧಕ ಮಾಡುವುದಕ್ಕೆ ಒಂದು ಕಾನೂನು ಮಾಡುವುದಕ್ಕಾಗುವುದಿಲ್ಲವೇ ?

ಶ್ರೀ ಎ. ಶಂಕರ ಆಳ್ವ.— ಅದನ್ನೂ ಪರಿಶೀಲನೆ ಮಾಡಲಾಗಿದೆ. ಸಧ್ಯದಲ್ಲೇ ಸರ್ಕಾರ ಆಜ್ಞೆಯನ್ನು ಹೊರಡಿಸುವುದರಲ್ಲಿದೆ.

CADRE AND RECRUITMENT RULES FOR THE DEPARTMENT OF PUBLIC LIBRARIES

120. Sri K. R. SRINIVASULU NAYUDU (Shanthinagar) — Will the Minister of State for Youth Services be pleased to state:—

(a) whether it has come to the notice of the Government that there is no proper Cadre and Recruitment Rules in the Department of State Libraries;

(b) whether Government has any praposal to further improve the Cadre and Recruitment of this Department with a view to provide regular appointments to the technical and non-technical staff;

(c) whether it has come to the notice of Government that technical and non-technical staff in these libraries are being entertained on daily wage basis; if so, the reasons therefor;

(d) whether services of such personnel are proposed to be regularised ?

Sri V. S. KOUJALGI (Minister of State for Youth Services):—

(a) No. Cadre and Recruitment Rules for the Department of Public Libraries are already in existence.

(b) There is a proposal to effect amendments to the existing Cadre and Recruitment Rules, in respect of certain posts.

(c) Yes. Recruitment to different posts in the Department of Public Libraries is under active consideration of Government. Pending regular recruitment candidates have been appointed on daily-wage basis so as to attend to the day-to-day work in the Department and to give effective library service to the public.

(d) No.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು.— ಈ ಇಲಾಖೆಯ ಕೇಡರ್ ಆ್ಯಂಡ ರಿಕ್ರೂಟ್‌ಮೆಂಟ್ ರೂಲ್ಸ್‌ಗಳನ್ನು ಇಲ್ಲಿಯತನಕ ಫೈನಲೈಜ್ ಮಾಡದೆ ಇರುವುದಕ್ಕೇನು ತೊಂದರೆ ? ಯಾವಾಗ ಇದನ್ನು ಫೈನಲೈಜ್ ಮಾಡುತ್ತಾರೆ ?

ಶ್ರೀ ವಿ. ಎಸ್. ಕೌಜಲಗಿ.— ಇದಕ್ಕೆ ಸಂಬಂಧಪಟ್ಟ ಕೇಡರ ಆ್ಯಂಡ ರಿಕ್ರೂಟ್‌ಮೆಂಟ್ ನಿಯಮಗಳನ್ನು ತಾ : ೧೧–೬–೧೯೭೦ರಲ್ಲೇ ಮಾಡಲಾಯಿತು. ಆದರೆ ಅದರಲ್ಲಿ ಕೆಲವು ಅಡಚಣೆಗಳು ಬಂದ ಕಾರಣ ಅದನ್ನು ತಿದ್ದುಪಡೆ ಮಾಡಬೇಕಾಯಿತು, ಇದನ್ನು ಆದಷ್ಟು ಬೇಗ ಮಾಡಲಾಗುವದು.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು.— ಈಗ ಈ ತಾವು ಸರಕಾರದ ವತಿಯಿಂದ ಈ ಇಲಾಖೆಗೆ ಎಷ್ಟು ಪೋಸ್ಟುಗಳನ್ನು ಕ್ರಿಯೇಟ್ ಮಾಡಿದ್ದೀರಿ ? ಅದಕ್ಕೆ ನಿಜವಾಗಿಯೂ ಇರತಕ್ಕ ಡಿಮ್ಯಾಂಡ ಎಷ್ಟು ಎಂಬುದನ್ನು ತಿಳಿಸುವುದಕ್ಕಾಗುತ್ತದೆಯೇ ?

ಶ್ರೀ ವಿ. ಎಸ್. ಕೌಜಲಗಿ.— ನೋಟೀಸ ಬೇಕು.

ಶ್ರೀ ಎಂ. ಬಿ. ರಾಮಸ್ವಾಮಿ.— ಈ ಲೈಬ್ರರಿ ಇಲಾಖೆಯಲ್ಲಿ ಈ ನಿಯಮಗಳು ಇಲ್ಲದ ಕಾರಣ ಅಲ್ಲಿ ಹಾಲಿ ೩–೪ ವರ್ಷಗಳಿಂದ ಹಂಗಾಮಿಯಾಗಿ ಕೆಲಸ ಮಾಡುತ್ತಿರುವ ಜನರೇನಿದ್ದಾರೆ. ಅವರಿಗೆ ಈಗ ಏಜ್ ಬಾರಾಗಿರುವುದರಿಂದ ಅವರು ಬೇರೆ ಇಲಾಖೆಗೆ ಹೋಗುವುದಕ್ಕಾಗುವುದಿಲ್ಲ. ಆದ್ದರಿಂದ ಅವರನ್ನು ಅದೇ ಇಲಾಖೆಯಲ್ಲಿ ಖಾಯಂ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ವಿ. ಎಸ್. ಕೌಜಲಗಿ.— ಅವರು ಆ ಕೇಡರ್ ಆ್ಯಂಡ ರಿಕ್ರೂಟ್‌ಮೆಂಟ ನಿಯಮಗಳಲ್ಲಿ ಇರತಕ್ಕ ಅರ್ಹತೆಗಳನ್ನು ಪಡೆದಿದ್ದರೆ ಅದನ್ನು ವಿಚಾರ ಮಾಡಲಾಗುತ್ತದೆ.

MADAM SPEAKER.— Sri B. V. Kakkilaya is permitted to put Sri M. S. Krishnan's Question.

FINANCIAL ASSISTANCE TO REMCO

191. Sri B. V. KAKKILAYA (Bantwal) [on behalf of—

Sri M. S. KRISHNAN (Malleswaram)].—

Will the Minister for Industries be pleased to state:—

(a) whether the Government is aware of the deteriorating situation in REMCO, Bangalore, due to paucity of finances to run the industry;

(b) whether the Government has been approached by the Management of REMCO for financial assistance; if so when and the extent of financial assistance asked for;

(c) whether the Government is aware that 1700 workers are threatened with unemployment due to the reported decision of the Management to lay off all workmen or close the factory;

(d) whether the Government is aware that the Public Undertakings Committee of the State Legislature has recommended that adequate financial help should be given to REMCO and put the industry on a firm footing;

(e) if so, the action the Government has taken in order to provide the financial assistance, so that lay off of workmen or closure of the factory is averted and the industry put on a firm footing;

(f) the reasons for delay in providing financial assistance to this public sector industry?

Sri S. M. KRISHNA (Minister for Industries).—

(a) Yes.

(b) Yes. The Company has approached Government on 5th April 1973 for a loan of Rs. 100 lakhs. This figure has been revised to Rs. 80 lakhs in August 1973.

(c) No.

(d) Yes.

(e) and (f) The matter is under the active consideration of Government, in consultation with the state Bank of Mysore and the Management of REMCO.

ಶ್ರೀ ಬಿ. ವಿ. ಕಕ್ಕಿಲಾಯ.— ಇಲ್ಲಿ (ಇ) ಮತ್ತು (ಎಫ್) ಉತ್ತರದಲ್ಲಿ ಪರಿಶೀಲನೆ ಮಾಡಲಾಗುತ್ತಿದೆ ಎಂದು ಹೇಳಲಾಗಿದೆ. ಈ ಪರಿಶೀಲನೆಗೆ ಇನ್ನೂ ಎಷ್ಟು ಕಾಲ ಬೇಕಾಗುತ್ತದೆ ?

†ಶ್ರೀ ಎಸ್. ಎಂ. ಕೃಷ್ಣ.— ಇದಕ್ಕೆ ಬೇಕಾಗುವ ಹಣದ ಪ್ರಮಾಣ ಬಹಳ ದೊಡ್ಡದು. ಸರಕಾರದವರು ಇದರಲ್ಲಿ ಸಾರ್ವಜನಿಕರ ಹಣವನ್ನು ತೊಡಗಿಸಬೇಕಾಗಿದ್ದರೆ ಇದು ಹೇಗೆ ಕೆಲಸಮಾಡುತ್ತಿದೆ ಎಂಬುದನ್ನು ಪರಿಶೀಲನೆ ಮಾಡಬೇಕು. ಆದರೆ ಸರಕಾರ ನೇರವಾಗಿ ಇದರಲ್ಲಿ ತನ್ನ ಹಣವನ್ನು ಹಾಕುವುದಕ್ಕಾಗುವದಿಲ್ಲ. ಆದುದರಿಂದ ಸರಕಾರ ಈ ವಿಚಾರದಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ಜೊತೆ ವಿಚಾರ ವಿನಿಮಯ ನಡೆಸುತ್ತಿದೆ. ಸ್ವಲ್ಪ ಕಾಲ ಬೇಕಾಗುತ್ತದೆ.

ಶ್ರೀ ಬಿ. ವಿ. ಕಕ್ಕಿಲಾಯ.— ಇಲ್ಲಿ ತಯಾರಾಗುವ ಟಿ. ವಿ. ಸೆಟ್ಟುಗಳನ್ನು ಮತ್ತು ಎನರ್ಜಿ ಮೀಟರುಗಳನ್ನು ಬಿಲ್ಡರವರಿಗೆ ಮಾರಾಟ ಮಾಡಬೇಕೆಂಬ ಸೂಚನೆಗಳೇನಾದರೂ ಸರ್ಕಾರಕ್ಕೆ ಬಂದಿದೆಯೇ ?

ಶ್ರೀ ಎಸ್. ಎಂ. ಕೃಷ್ಣ.— ಅಂಥ ಯಾವ ಸೂಚನೆಗಳೂ ಯಾರಿಂದಲೂ ಬಂದಿಲ್ಲ.

ಶ್ರೀ ಕೆ. ಶ್ರೀರಾಮುಲು.— ಒಂದು ಕೋಟಿ ರೂಪಾಯಿ ಸಾಲ ಕೇಳಿದಾರೆಂದು ಆಗಲೆ ತಿಳಿಸೋಣವಾಯಿತು. ಮೊದಲು ಆ ಕಾರ್ಖಾನೆಗೆ ಎಷ್ಟು ಮೂಲ ಧನವನ್ನು ಹಾಕಲಾಗಿತ್ತು ? ಅವರು ಅಲ್ಲಿ ನಷ್ಟವಾಗುವುದಕ್ಕೇನು ಕಾರಣಗಳನ್ನು ಕೊಟ್ಟಿದ್ದಾರೆ ? ಅಡ್ಮಿನಿಸ್ಟ್ರೇಷನ್ ಬಾಬಿಗೆ ಹೆಚ್ಚು ಹಣ ಖರ್ಚಾಗಿ ಉತ್ಪತ್ತಿಯಲ್ಲಿ ಕಡಿಮೆ ಬರುತ್ತಿರುವುದು ಕಾರಣವೇ ಅಥವಾ ಇನ್ನೇನು ಕಾರಣ ಎಂಬುದನ್ನು ತಿಳಿಸುವುದಕ್ಕೆ ಸಾಧ್ಯವೇ ?

ಶ್ರೀ ಎಸ್. ಎಂ. ಕೃಷ್ಣ — ಈ ಕಾರ್ಖಾನೆಗೆ ನಾನಾ ವಿಧವಾದ ದೋಷ, ಕೊರತೆ ಮತ್ತು ತೊಂದರೆಗಳಿರುತ್ತವೆ. ೧೯೬೨–೬೩ ರಲ್ಲಿ ಈ ಕಾರ್ಖಾನೆಯ ವೇಜ್ ಬಿಲ್ ೨೪ ಲಕ್ಷ ರೂಪಾಯಿ ಇದ್ದುದು ಅದು ೧೯೭೧–೭೨ಕ್ಕೆ ೭೮ ಲಕ್ಷಕ್ಕೇರಿದೆ. ಅಲ್ಲಿ ೧೭೨೨ ಜನರು ಕೆಲಸಗಾರರಿದ್ದಾರೆ. ಅವರ ಜೊತೆಗೆ ೭೮ ಜನರು ಸೂಪರ್‌ವೈಜರುಗಳಿದ್ದಾರೆ. ಖಾಸಗೀ ಕಂಪನಿಯಲ್ಲಿ ಹೀಗೆ ೭೮ ಜನರು ಸೂಪರ್‌ವೈಜರುಗಳು ಇರಬೇಕಾಗಿದ್ದರೆ ಅಲ್ಲಿ ಒಬ್ಬೊಬ್ಬರ ಕೈಕೆಳಗೂ ೩೦೦–೪೦೦ ಜನರು ಕೆಲಸಗಾರರಿರಬೇಕು. ಆದರೆ ಅಲ್ಲಿ ಕಳೆದ ನಾಲ್ಕಾರು ವರ್ಷಗಳಿಂದ ರೆಕ್ರೂಟ್‌ಮೆಂಟ್ ಭಾರವು ಆ ಶರಾವತಿಯಲ್ಲಿ ಪ್ರವಾಹ ಹೇಗೆ ಏರುತ್ತದೋ ಹಾಗೆ ಇಲ್ಲಿ ಕಾರ್ಮಿಕರ ಸಂಖ್ಯೆ ಏರಿರುತ್ತದೆ. ಅಲ್ಲಿ ಅಷ್ಟೂ ಜನರಿಗೆ ಉದ್ಯೋಗ ಕೊಡಲು ಸಾಧ್ಯವಾಗುತ್ತಿಲ್ಲ. ಕೇಂದ್ರ

ಸರ್ಕಾರದವರು ನಮಗೆ ೫೦೦೦ ಟೆಲ್ವಿಜನ್ ಸೆಟ್ಟುಗಳನ್ನು ಮಾತ್ರ ಮಾಡಲು ಲೈಸೆನ್ಸ್ ಕೊಟ್ಟಿದ್ದಾರಾದ್ದರಿಂದ ಇಲ್ಲಿ ಫ್ಯಾಕ್ಟರಿಯವರು ಇನ್ನುಳಿದುದನ್ನು ರೇಡಿಯೋಗಳನ್ನು ಮಾಡುವುದಕ್ಕೆ ಪರಿಶೀಲನೆ ಮಾಡುತ್ತಿದ್ದಾರೆ. ಆದರೆ ಈ ಮಂಡಳಿಯವರು ಕೆಲವು ತೀರ್ಮಾನಗಳನ್ನು ತೆಗೆದುಕೊಂಡಿದ್ದಾರೆ. ಅವರು ಹಣ ಕೊಡತಕ್ಕ ಬಗ್ಗೆ ಮೈಸೂರು ಬ್ಯಾಂಕಿನವರೇನು ಕೆಲವು ಷರತ್ತುಗಳನ್ನು ಹಾಕಿದ್ದಾರೋ ಅವುಗಳನ್ನು ಇವರು ಅಂಗೀಕರಿಸಿದ್ದಾರೆ. ನಾನು ಈಗಾಗಲೆ ನಮ್ಮ ಸರ್ಕಾರದ ಹಣಕಾಸಿನ ಮಾನ್ಯ ಸಚಿವರನ್ನು ಕಂಡು ಮೈಸೂರು ಬ್ಯಾಂಕಿನವರು ಆ ಹಣವನ್ನು ಕೊಡತಕ್ಕ ವಿಚಾರದಲ್ಲಿ ಗ್ಯಾರಂಟಿ ಕೊಡಬೇಕೆಂದು ಪ್ರಾರ್ಥಿಸಿಕೊಂಡಿದ್ದೇನೆ. ಈ ಬಗ್ಗೆ ಪರಿಶೀಲನೆಗಳು ನಡೆಯುತ್ತಿವೆ.

ಶ್ರೀ ಬಿ. ವಿ. ಕಕ್ಕಿಲಾಯ.— ಮಾನ್ಯ ಸಚಿವರು ಅಲ್ಲಿ ೧೭೦೦ ಜನರಿಗೂ ಹೆಚ್ಚು ಜನರು ಅಲ್ಲಿ ಕೆಲಸ ಮಾಡುತ್ತಾರೆಂದು ಹೇಳಿದರು. ಆದರೆ ಅವರಿಗೆ ಕೆಲಸ ಕೊಡುವುದಕ್ಕೇ ಬಹಳ ತೊಂದರೆ ಆಗಿದೆ ಅಂದಾಗ ಆ ಕಾರ್ಮಿಕರನ್ನು ಕೆಲಸದಿಂದ ತೆಗೆಯದಂತೆ ಅಲ್ಲೇ ಉಳಿಸಲು ಭರವಸೆ ಕೊಡುತ್ತೀರಾ ?

ಶ್ರೀ ಎಸ್. ಎಂ ಕೃಷ್ಣ.— ನಾನು ಈ ವಿಚಾರದಲ್ಲಿ ಮಾನ್ಯ ಸದಸ್ಯರಿಂದ ಯಾಚನೆಯನ್ನು ಪ್ರಾರ್ಥಿಸುತ್ತಿದ್ದೇನೆ. ಈ ಕಾರ್ಖಾನೆಯ ನಷ್ಟ ೧೯೭೨-೭೩ಕ್ಕೆ ೬೦ ಲಕ್ಷ ಇದ್ದು, ೧೯೭೩-೭೪ಕ್ಕೆ ಇನ್ನೂ ಹೆಚ್ಚಾಗುವ ನಿರೀಕ್ಷಣೆ ಇದೆ. ಇದು ಒಂದು ಕೋಟಿ ರೂಪಾಯಿಗೇರಬಹುದೆಂದು ಅಂದಾಜ ಮಾಡಲಾಗಿದೆ. ಆದುದರಿಂದ ಇದನ್ನು ಹೇಗೆ ಮುಂದುವರಿಸಬೇಕೆಂಬ ವಿಚಾರದಲ್ಲಿ ಸರ್ಕಾರಕ್ಕೆ ಬಹಳ ಕಳವಳವುಂಟಾಗಿದೆ. ಇದರ ನಷ್ಟವನ್ನು ಭರಿಸುವುದಕ್ಕೆ ಬಹಳ ಕಷ್ಟವಾಗಿದೆ. ಹಿಂದೆ ಒಂದಾವರ್ತಿ ಸಕ್ಕರೆ ಕಾರ್ಖಾನೆಯಲ್ಲಿ ಸಹಾ ಇದೇ ತೊಂದರೆ ಉಂಟಾಗಿದ್ದಾಗ ಅಲ್ಲಿ ಕೆಲಸ ಮಾಡುತ್ತಿದ್ದ ೩೦೦೦ ಜನರಲ್ಲಿ ೧೮೦೦ ಜನರು ತಾವಾಗೇ ಮುಂದೆ ಬಂದು ವಾಲಂಟರಿಯರಾಗಿ ನಿವೃತ್ತಿ ಹೊಂದುವುದಕ್ಕೆ ಅವರ ಅಭಿಲಾಷೆಯನ್ನು ವ್ಯಕ್ತಪಡಿಸಿ ಅಲ್ಲಿಯ ಕೆಲಸಗಳಿಗೆ ಒಂದು ಅನುವನ್ನು ಮಾಡಿಕೊಟ್ಟರು. ಅದರಂತೆ ಇಲ್ಲಿಯೂ ಕೂಡ ಕೆಲಸಗಾರರ ಸಂಖ್ಯೆಯನ್ನು ತಗ್ಗಿಸಿ ಇದನ್ನು ಒಂದು ಭದ್ರವಾದ ತಳಹದಿಯ ಮೇಲೆ ನಿಲ್ಲುವಂತೆ ಮಾಡತಕ್ಕ ಆಲೋಚನೆಗಳು ನಡೆಯುತ್ತಿವೆ. ಅದರಲ್ಲಿ ಈ ವಾಲಂಟರಿಯರಾಗಿ ಕೆಲವರನ್ನು ನಿವೃತ್ತಿ ಮಾಡಬೇಕೆಂಬ ಆಲೋಚನೆಯೂ ಕೂಡ ಒಂದಾಗಿದೆ.

1–30 P.M.

VILLAGES ELECTRIFIED IN SHAHAPUR AND SHORAPUR TALUKS

246. Sri BAPU GOWDA RAYAPPA (Shahapur).—Will the Minister for Public Works and Electricity be pleased to state:

a) the number of villages electrified in Shahapur and Shorapur Taluks (Names of villages may be given Talukwise);

b) the number of villages in the above taluks proposed to be electrified during the financial year 1973-74 (Names of villages to be electrified may be given talukwisie)?

Sri H. M. CHANNABASAPPA (Minister for Public Works and Electricity).—

a) 75 villages and 7 Hamlets as on 31-7-1973 as indicated in Statement I placed on the Table of the House*

b) 47 villages as indicated in Statement II placed on the Table of the House*

ಶ್ರೀ ಬಾಪುಗೌಡ ರಾಯಪ್ಪ.—(ಅ)ಗೆ ಕೊಟ್ಟಿರುವ ಉತ್ತರದ ಪ್ರಕಾ ನೋಡಿದರೆ ಷಹಾಪುರ ತಾಲ್ಲೂಕಿನಲ್ಲಿ ೩೮ ಹಳ್ಳಿಗಳಲ್ಲೂ ಷೊರಾಪುರ ತಾಲ್ಲೂಕಿನ ೪೭ ಹಳ್ಳಿಗಳಲ್ಲೂ ವಿದ್ಯುಚ್ಛಕ್ತಿ ಸರಬರಾಜು ಆಗಿಲ್ಲ, ಇನ್ನೂ ಕೆಲವಾರು ಹಳ್ಳಿಗಳಿ ಇದುವರೆಗೂ ಅಲ್ಲಿ ಎಲೆಕ್ಟ್ರಿಫಿಕೇಷನ್ ಆಗಿಲ್ಲ. ಆದ್ದರಿಂದ ಎಷ್ಟು ಅವಧಿಯಲ್ಲಿ ಈ ಎಲ್ಲ ಗ್ರಾಮಗಳಿಗೂ ಎಲೆಕ್ಟ್ರಿಫಿಕೇಷನ್ ಮಾಡತಕ್ಕ ಕಾರ್ಯಕ್ರಮನ್ನು ತೆಗೆದು ಕೊಳ್ಳುತ್ತೀರಿ ?

†ಶ್ರೀ ಎಚ್. ಎಂ. ಚನ್ನಬಸಪ್ಪ — ಈ ವಿದ್ಯುಚ್ಛಕ್ತಿ ಸರಬರಾಜು ಮಾಡತಕ್ಕದ್ದು ಬರೀ ಸರ್ಕಾರವನ್ನಾಗಲಿ ಅಥವಾ ವಿದ್ಯುಚ್ಛಕ್ತಿ ಮಂಡಳಿ ಯನ್ನಾಗಲಿ ಅವಲಂಬಿಸಿರುವುದಿಲ್ಲ. ಯಾರ್‍ಯಾರು ವಿದ್ಯುಚ್ಛಕ್ತಿಯನ್ನು ಪಡೆಯ ಬೇಕೆಂದು ಇಚ್ಛೆ ಪಡುತ್ತಾರೋ ಅವರ ಕರ್ತವ್ಯಗಳೂ ಕೆಲವು ಇವೆ. ಆ ಎಲ್ಲ ಕರ್ತವ್ಯಗಳನ್ನು ಅವರು ಪೂರೈಸಿದರೆ, ಆಗ ಇದನ್ನು ಎಷ್ಟು ದಿವಸಗಳಲ್ಲಿ ಪೂರೈಸುವ ದಕ್ಕಾಗುತ್ತದೆಂದು ಉತ್ತರ ಹೇಳಬಲ್ಲೆ. ಅದಲ್ಲದೆ ಮುಂದೆ ಈಗಿನ ಒಟ್ಟು ಅಂದಾಜಿ ನಲ್ಲಿ ಮುಂದಿನ ಪಂಚವಾರ್ಷಿಕ ಯೋಜನೆಯಲ್ಲಿ ಎಲ್ಲ ಹಳ್ಳಿಗಳಿಗೂ ವಿದ್ಯುಚ್ಛಕ್ತಿ ಯನ್ನು ಕೊಡಬೇಕೆಂಬ ಯೋಜನೆ ಇದೆ. ಅದಕ್ಕಾಗಿ ಗ್ರಾಮಸ್ಥರೆಲ್ಲರೂ ಕೂಡ ಸಹಕರಿಸಬೇಕು. ಹಾಗಿದ್ದರೆ ಮಾತ್ರ ಸಾಧ್ಯವಾಗುತ್ತದೆ. ಅದು ಬಿಟ್ಟು ಹೇಗಾ ದರೂ ಸರ್ಕಾರ ನಮಗೆ ವಿದ್ಯುಚ್ಛಕ್ತಿಯನ್ನು ಒದಗಿಸುತ್ತದೆಂದು ಗ್ರಾಮಸ್ಥರು ಕೈ ಕಟ್ಟಿಕೊಂಡು ಕೂತರೆ ಎಲ್ಲ ಹಳ್ಳಿಗಳಿಗೂ ವಿದ್ಯುಚ್ಛಕ್ತಿ ಕೊಡುವುದಕ್ಕೆ ಕಷ್ಟವಾಗುತ್ತದೆ.

ಶ್ರೀ ಬಾಪುಗೌಡ ರಾಯಪ್ಪ.—ಹೈದರಾಬಾದ ಕರ್ನಾಟಕದಲ್ಲಿರತಕ್ಕ ಹಳ್ಳಿಗಳು ಒಂದೂರಿನಿಂದ ಇನ್ನೊಂದು ಊರಿಗೆ ಸುಮಾರು ೩–೪ ಮೈಲಿಗಳ ಅಂತರದಲ್ಲಿವೆ. ಆದರೆ ನಮ್ಮ ಭಾಗದಲ್ಲಿ ಬಹಳ ಹತ್ತಿರದಲ್ಲಿರುತ್ತವೆ. ಇಲ್ಲಿ ಹಾಕತಕ್ಕ ಸಬ್

*Copy placed in the Mysore Legislature Library *vide* No. 18 / dated 25-9-73.

ಟ್ರಾನ್ಸ್‌ಮಿಷನ್ ಲೈನಿಗೆ ಮಿನಿಮಂ ಖರ್ಚು ವಿಧಿಸಬೇಕು. ಆಗ ಮಾತ್ರ ಎಲ್ಲರೂ ಹೆಚ್ಚಿಗೆ ಸಹಕಾರ ಕೊಡಬಹುದು. ಆದ್ದರಿಂದ ಸರ್ಕಾರದವರು ಅಲ್ಲಿ ಆಗತಕ್ಕ ಖರ್ಚನ್ನು ಮಿತಿಗೊಳಿಸಿ ಅದನ್ನು ಆದಷ್ಟು ಕಡಿಮೆಮಾಡಿ ತೀವ್ರಗತಿಯಿಂದ ಈ ಎಲ್ಲ ಗ್ರಾಮಗಳಿಗೂ ವಿದ್ಯುಚ್ಛಕ್ತಿ ಕೊಡುವ ಯೋಜನೆಯನ್ನು ಮಾಡುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಿಯಮಾವಳಿಗಳನ್ನು ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಸಡಿಲ ಪಡಿಸುವುದಿದಕ್ಕಾಗುವುದಿಲ್ಲ. ಸುಮಾರು ೧ ಕೋಟಿ ೬೦ ಲಕ್ಷ ರೂಪಾಯಿಗಳ ಖರ್ಚು ಇದಕ್ಕಾಗಿ ಆಗುತ್ತದೆ. ಸಬ್‌ಟ್ರಾನ್ಸ್‌ಮಿಷನ್ ಲೈನುಗಳನ್ನು ಎಲ್ಲೆಲ್ಲಿ ಕೀ ಪೊಜಿಷನ್ ಇದೆಯೋ ಅಲ್ಲಿ ಡ್ರಾ ಮಾಡಬೇಕೆಂದು ಈಗಾಗಲೇ ಸರ್ಕಾರದವರು ಹುಕುಂ ಮಾಡಿದ್ದಾರೆ. ಆದ್ದರಿಂದ ಇದರ ಬಗ್ಗೆ ಈಗಾಗಲೇ ಸರ್ಕಾರದವರು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆ. ಅದರ ಖರ್ಚು ಸ್ವಲ್ಪ ಮಟ್ಟಿಗೆ ಗ್ರಾಮಸ್ಥರ ಮೇಲೆ ಬಿದ್ದಿದ್ದರೆ ಇಷ್ಟು ಹೆಚ್ಚಿಗೆ ವೆಚ್ಚವಾಗುತ್ತಿರಲಿಲ್ಲ. ಅಷ್ಟು ವರ್ಕ ಜೌಟ್ ಆಗುತ್ತಲೂ ಇರಲಿಲ್ಲ. ಈಗ ಮುಂದೆ ಎಲ್ಲ ಹಳ್ಳಿಗಳಿಗೂ ಅನುಕೂಲವಾಗುವಂತೆ ಸಬ್ ಟ್ರಾನ್ಸ್‌ಮಿಷನ್ ಲೈನುಗಳನ್ನು ಎಳೆದಮೇಲೆ ಸ್ವಲ್ಪ ಮಟ್ಟಿಗೆ ಆ ಗ್ರಾಮಗಳಲ್ಲಿ ಸುಧಾರಣೆಯಾಗುತ್ತದೆ, ಹಾಗೂ ಸುಲಭವಾಗುತ್ತದೆ. ಅದರ ಜೊತೆಗೆ ಎಲ್ಲೆಲ್ಲಿ ಸಬ್ ಟ್ರಾನ್ಸ್‌ಮಿಷನ್ ಲೈನುಗಳನ್ನು ಎಳೆಯಬೇಕು, ಯಾವ್ಯಾವ ಹಳ್ಳಿಗಳಿಗೆ ಆ ಲೈನುಗಳು ಹೋಗಬೇಕೆಂಬುದನ್ನು ಸರ್ಕಾರಕ್ಕೆ ತಿಳಿಸಿದರೆ ಒಳ್ಳೆಯದು. ಇವತ್ತಿನ ದಿವಸ ರೋಡ ಸರ್ವೆ ಫಾರಂಗಳನ್ನು ಫಿಲಪ್ ಮಾಡುವಾಗ ಈ ಲೈನ್‌ಗಳನ್ನು ಎಲ್ಲೆಲ್ಲಿ ಎಳೆದರೆ ಕೈಗಾರಿಕೆಗಳಿಗೆ, ಹಳ್ಳಿಗಳಿಗೆ ಹಾಗೂ ವ್ಯವಸಾಯಕ್ಕೆ ಅನುಕೂಲವಾಗುತ್ತದೆಂಬ ಅಂಶಗಳನ್ನು ಸರ್ಕಾರಕ್ಕೆ ಕಳುಹಿಸಿ ಕೊಟ್ಟರೆ. ಅಗತ್ಯವಾಗಿ ಅದರ ಪ್ರಕಾರ ಆದಷ್ಟು ಜಾಗ್ರತೆ ಆಯಾ ಸ್ಥಳಗಳಲ್ಲಿ ವಿದ್ಯುಚ್ಛಕ್ತಿಯನ್ನು ಒದಗಿಸಲು ಅನುಕೂಲವಾಗುತ್ತದೆ.

ಶ್ರೀ ಎಸ್. ಎಸ್. ಗುರುಸಿದ್ದಪ್ಪ.—ಇಂಜನಿಯರ್ಸ್ ಈಗ ಮುಷ್ಕರವನ್ನು ನಡೆಸುತ್ತಾ ಇರುವುದರಿಂದ ಅಲ್ಲಿ ಎಲೆಕ್ಟ್ರಿಫಿಕೇಷನ್ ಕೆಲಸ ನಿಂತುಹೋಗಿದೆ. ಆದ್ದರಿಂದ ಅವನ್ನು ಯಾವಾಗ ಸರಿಪಡಿಸುತ್ತೀರಿ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಲ್ಲಿ ಎಲೆಕ್ಟ್ರಿಫಿಕೇಷನ್ ಕೆಲಸ ನಿಂತು ಹೋಗಿದೆಯೆಂದು ಮಾನ್ಯ ಸದಸ್ಯರು ತಿಳಿದಿರುವುದು ತಪ್ಪು.

LIFT IRRIGATION SCHEME FROM GAJANUR DAM

287 Sri S. M. SHEERANALY CHANDRASEKHAR (Hosanagar) Will the Minister of State for Major Irrigation be pleased to state :—

a) whether they have received any representation from the general public of Shimoga District to provide Lift Irrgiation Scheme from Gajanur Dam (Tunga River);

b) the action the Governmnet has taken on the representation?

Sri H. N. NANJE GOWEA (Minister of State for Major Irrigation).—

a) No.

b) Dose not arise.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ:—ನನ್ನ ಎರಡು ಪ್ರಶ್ನೆಗಳಿಗೂ 'ಇಲ್ಲ' ವೆಂದು ಉತ್ತರ ಹೇಳಿದ್ದೀರಿ. ಮಾನ್ಯ ಶ್ರೀ ಚನ್ನಬಸಪ್ಪನವರು ಶಿವಮೊಗ್ಗಾಕ್ಕೆ ಸುಮಾರು ೬ ತಿಂಗಳುಗಳ ಹಿಂದೆ ಬಂದಾಗ ಆ ಜಿಲ್ಲೆಯ ಆಡಳಿತ ಪಕ್ಷದ ಶಾಸಕರು, ಪಾರ್ಲಿಮೆಂಟ ಸದಸ್ಯರು, ಮತ್ತು ಹಿಂದೆ ಅರಣ್ಯಶಾಖೆಯ ಮಂತ್ರಿಗಳಾಗಿದ್ದ ಮಾನ್ಯ ಶ್ರೀ ಎಚ್. ಎಸ್. ರುದ್ರಪ್ಪನವರೂ ಇವರೆಲ್ಲರೂ ಸೇರಿ ಒಂದು ಮೀಟಿಂಗ್ ನಡೆಸಿ ಈ ಒಂದು ಆಣೆಕಟ್ಟಿನಿಂದ ಏತ ನೀರಾವರಿಯೋಜನೆಯನ್ನು ಮಾಡಬೇಕೆಂದು ನಿರ್ಣಯಮಾಡಿದ್ದರು. ಮಳೆಗಾಲದಲ್ಲಿ ಆ ಡ್ಯಾಮಿನಮೇಲೆ ಸುಮಾರು ೯–೧೦ ಅಡಿ ನೀರು ಓವರಫ್ಲೋ ಆಗುವುದರಿಂದ, ಈ ಅಣೆಕಟ್ಟಿಗೆ ಲಿಫ್ಟ ಇರ್ರಿಗೇಷನ ಸ್ಕೀಂ ಮಾಡುವುದು ಒಳ್ಳೆಯದೆಂದು ತೀರ್ಮಾನಮಾಡಿದ್ದರು. ಶಿವಮೊಗ್ಗ ತಾಲ್ಲೂಕಿನ ಗಾರನಕೆರೆ ಎಂಬಲ್ಲಿ ಅದಕ್ಕೆ ಫೀಡ್ ಮಾಡಿದರೆ ಸುಮಾರು ೩-೪ ತಾಲ್ಲೂಕುಗಳಿಗೆ ನೀರು ಸಿಗುತ್ತದೆಂದು ಒಪ್ಪಿಕೊಂಡು ಅಲ್ಲಿನವರು ಸರ್ಕಾರಕ್ಕೆ ಒಂದು ಮನವಿಯನ್ನು ಕೊಟ್ಟಿದ್ದಾರೆ. ಅದನ್ನು ಪರಿಶೀಲನೆ ಮಾಡಿದ್ದೀರಾ?

† ಶ್ರೀ ಎಚ್. ಎನ್. ನಂಜೇಗೌಡ:—ಸರ್ಕಾರದ ಹತಿಯಲ್ಲಿರತಕ್ಕ ಮಾಹಿತಿಯ ಪ್ರಕಾರ ಇದರ ಲಿಫ್ಟ ಇರ್ರಿಗೇಷನ್ ಸ್ಕೀಂ ಇಲ್ಲ. ಟ್ರಿಬ್ಯೂನಲ್ ಮುಂದೆ ಇದರ ಬಗ್ಗೆ ಯೋಜನೆಯನ್ನು ಕೊಡುವಾಗ ತುಂಗಾ ನದಿಯ ನೀರನ್ನು ಯಾವ ರೀತಿಯಲ್ಲಿ ಉಪಯೋಗಿಸುವುದಕ್ಕೆ ಸಾಧ್ಯವೆಂಬ ಯೋಜನೆಯನ್ನು ಸಲ್ಲಿಸಿದ್ದಾರೆ. ಮಾನ್ಯ ಸದಸ್ಯರು ಆದರ ಬಗ್ಗೆ ಪ್ರಶ್ನೆ ಹಾಕಿಲ್ಲ.

ಶ್ರೀ ಎಸ್.ಎಂ. ಶೀರನಾಳಿ ಚಂದ್ರಶೇಖರ್:— ನಾನು ತುಂಗಾ ನದಿಯ ನೀರು ವೇಸ್ಟ್ ಆಗುತ್ತಿದೆ ಆದ್ದರಿಂದ ಈ ಅಣೆಕಟ್ಟಿಗೆ ಒಂದು ಏತ ನೀರಾವರಿ ಯೋಜನೆಯನ್ನು ಮಾಡಬೇಕೆಂದು ಸಾರ್ವಜನಿಕರಿಂದ ಮನವಿಯೇನಾದರೂ

ಸರ್ಕಾರಕ್ಕೆ ಬಂದಿದೆಯೇ ಎಂದು ನಾನು ಪ್ರಶ್ನೆ ಕೇಳಿದ್ದೇನೆ. ಆದ್ದರಿಂದ ಮಾನ್ಯ ಶ್ರೀ ಚನ್ನಬಸಪ್ಪನವರು ಬಂದಾಗ ಅಲ್ಲಿ ಮೀಟಿಂಗನಲ್ಲಿ ಏನೇನು ನಡೆಯಿತೆಂಬುದನ್ನು ತಾವು ವಿಚಾರಮಾಡಿ ಉತ್ತರ ಕೊಟ್ಟಿದ್ದೀರಾ?

ಅಧ್ಯಕ್ಷರು — ಈಗತಾನೇ ಮಾನ್ಯ ಮಂತ್ರಿಗಳು ಸರ್ಕಾರಕ್ಕೆ ಬಂದ ಮಾಹಿತಿ ಪ್ರಕಾರ ಉತ್ತರ ಕೊಟ್ಟಿದ್ದೇನೆಂದು ಹೇಳಿದರು.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ.—ಪ್ರತಿವರ್ಷವೂ ಬರಗಾಲ ಶಿವಮೊಗ್ಗದ ಅನೇಕ ತಾಲ್ಲೂಕುಗಳಲ್ಲಿ ಅಂದರೆ ಶಿಕಾರಿಪುರ ಮತ್ತು ಹೊಸಾಳಿ ತಾಲ್ಲೂಕಿನ ಸುಮಾರು ೭೫ ಗ್ರಾಮಗಳಲ್ಲಿ ಬರುತ್ತದರಿಂದ, ಅಲ್ಲಿ ರೇನ್ ಶ್ಯಾಡೊ ಬೆಲ್ಟ್ ಏರಿಯಾದಿಂದ ದುಃಸ್ಥಿತಿ ಇರುವುದರಿಂದ ಈ ಅಣೆಕಟ್ಟಿನಿಂದ ಯಾತ ನೀರಾವರಿ ಯೋಜನೆಯನ್ನು ಮಾಡುವುದರಿಂದ ಸುಮಾರು ೯ ಅಥವಾ ೧೦ ಅಡಿ ಎತ್ತರದಲ್ಲಿ ನೀರು ಓವರ್ ಫ್ಲೊ ಆಗುತ್ತಿದೆ ಅದು ವೇಸ್ಟ್ ಆಗುತ್ತಿದೆ. ಅದನ್ನು ಉಪಯೋಗಿಸುವುದಕ್ಕಾಗಿ ಈ ಯೋಜನೆಯನ್ನು ಕೈಗೊಳ್ಳುತ್ತೀರಾ?

ಶ್ರೀ ಎಚ. ಎನ್. ನಂಜೇಗೌಡ — ಅಪ್ಪರ ತುಂಗ ನೀರಿನ ವಿಚಾರವಾಗಿ ಆಗಲಿ ಅಥವಾ ಭದ್ರ ನೀರಿನ ವಿಚಾರವಾಗಿ ಆಗಲಿ ಟ್ರಿಬ್ಯೂನೇಲ್ ತೀರ್ಮಾನ ಅವಲಂಬಿಸಿಯೇ ಸರ್ಕಾರ ಒಂದು ತೀರ್ಮಾನವನ್ನು ಇದರ ಬಗ್ಗೆ ತೆಗೆದುಕೊಳ್ಳಬೇಕಾಗುತ್ತದೆ. ಅಂತಹ ಪರಿಸ್ಥಿತಿಯಲ್ಲಿ ಇವತ್ತು ಏನೂ ಮಾಡುವುದಕ್ಕಾಗುವುದಿಲ್ಲ. ಆದರ ಬಗ್ಗೆ ಏನೂ ಹೇಳುವುದಕ್ಕಾಗುವುದಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ:—ಕಟ್ಟೆಯ ಮೇಲೆ ೯–೧೦ ಅಡಿ ನೀರು ಓವರಫ್ಲೊ ಆಗುತ್ತಿದ್ದರೆ, ಮಾನ್ಯ ಮಂತ್ರಿಗಳು ಹೇಳುವುದನ್ನು ನೋಡಿದರೆ, ಅದರ ಕಟ್ಟೆಯನ್ನು ಏರಿಸಿ ನಮ್ಮ ತೀರ್ಥಹಳ್ಳಿ ತಾಲ್ಲೂಕನ್ನು ಮುಳುಗಿಸಬೇಕೆಂದು ಏನಾದರೂ ಯೋಜನೆಮಾಡುತ್ತಾ ಇದ್ದಾರೆಯೇ?

ಶ್ರೀ ಎಚ. ಎನ್. ನಂಜೇಗೌಡ:—ಇದು ಲಿಫ್ಟ್ ಇರ್ರಿಗೇಷನ್ನಿಗೆ ಸಂಬಂಧಪಟ್ಟ ಪ್ರಶ್ನೆ. ಟ್ರಿಬ್ಯೂನಲ್ ನತಿಯಿಂದ ತೀರ್ಮಾನ ಬಂದಮೇಲೆ ನಮಗೆ ಇಲ್ಲಿ ಎಷ್ಟು ನೀರು ಸಿಗುತ್ತದೆಂಬುದನ್ನು ನೋಡಿ ನಂತರ ಅಂತಿಮ ತೀರ್ಮಾನವನ್ನು ಇದರ ಬಗ್ಗೆ ತೆಗೆದುಕೊಳ್ಳುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ:—ಯಾವಾಗಲೂ ಕಟ್ಟೆ ಏರಿಸಬೇಕಾದರೆ ಅಲ್ಲಿರತಕ್ಕ ಜನರ ಸಾವು, ಬದುಕಿನ ಪ್ರಶ್ನೆಯನ್ನೂ ಸಹ ನೋಡಬೇಕು. ಮಲೆನಾಡಿನ ಪ್ರದೇಶಗಳಲ್ಲಿರತಕ್ಕ ಜನರಿಗೆ ಯಾವ ರೀತಿಯಲ್ಲಿಯೂ ನೀರಿಗೆ ತೊಂದರೆಯಾಗದಂತೆ ನೋಡಿಕೊಂಡು ಒಂದ ನಿರ್ಧಾರವನ್ನು ಮಾಡಬೇಕು.

SRI H. M. CHANNABASAPPA.—Why is the hon. Member streching his imagination too far?

SRI KONANDUR LINGAPPA.—It is a matter of fact. It is our life and death question-for you and for me also!

ಶ್ರೀ ಎಚ. ಎಂ. ಚನ್ನಬಸಪ್ಪ:—ಮುಳುಗಡೆಯಾಗತಕ್ಕವರಿಗೆ ಲೈಫ್ ಎಂಡ್ ಡೆತ್ ಪ್ರಶ್ನೆ ಬರುತ್ತದೆ ಅವರೇನೂ ಕಟ್ಟೆಯನ್ನು ಎತ್ತರಿಸುತ್ತೇವೆಂದು ಹೇಳಲಿಲ್ಲ. ಎತ್ತರಿಸುವ ಪ್ರಶ್ನೆ ಬಂದಾಗ ಆದರ ಸಾಧಕಬಾಧಕಗಳನ್ನು ಆಲೋಚನೆಮಾಡುತ್ತೇವೆ. ಎತ್ತರಿಸಿಬಿಡುತ್ತೇವೆಂಬು ಯೊರು, ಎಲ್ಲಿ ಯಾವಾಗ ಹೇಳಿದರು?

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್:—ನಾನು ಕೇಳುವ ಪ್ರಶ್ನೆಯೇ ಬೇರೆ. ಕಟ್ಟೆಯನ್ನು ಏರಿಸುವ ಪ್ರಶ್ನೆ ಬರುತ್ತಾ ಇಲ್ಲ. ಮಳೆಗಾಲದಲ್ಲಿ ಸುಮಾರು ೯–೧೦ ಅಡಿ ಅಲ್ಲಿ ನೀರು ಓವರಫ್ಲೊ ಆಗುತ್ತದೆ. ಅದು ವೇಸ್ಟ ಆಗುತ್ತಿದೆ. ಆದನ್ನು ತಪ್ಪಿಸಿ ಆ ನೀರನ್ನು ಉಪಯೋಗಮಾಡುವುದಕ್ಕಾಗಿ ಈ ಒಂದು ಯೋಜನೆಯನ್ನು ಮಾಡುವುದರಿಂದ ಸುಮಾರು ೩–೪ ತಾಲ್ಲೂಕುಗಳಿಗೆ ನೀರು ಫೀಡ್ ಆಗುತ್ತದೆ. ಆದ್ದರಿಂದ ಈ ಯೋಜನೆಯನು ಪರಿಶೀಲನೆಮಾಡುತ್ತೀರಾ?

ಶ್ರೀ ಎಚ. ಎಂ. ಚನ್ನಬಸಪ್ಪ:—ಮಳೆಗಾಲದಲ್ಲಿ ಇಂತಹ ಲಿಫ್ಟ್ ಇರ್ರಿಗೇಷನ್ ಸ್ಕೀಂ ಲಗತ್ತಾಗುವುದಿಲ್ಲ. ಲಿಫ್ಟ್ ಇರ್ರಿಗೇಷನ್ ಸ್ಕೀಮುಗಳನ್ನು ಹಾಕಬೇಕಾದರೆ ವರ್ಷದಲ್ಲಿ ೧೨ ತಿಂಗಳುಗಳ ಕಾಲ ಮಳೆ ಬಿದ್ದರೆ ಮಾತ್ರ ಇಂತಹ ಲಿಫ್ಟ್ ಇರ್ರಿಗೇಷನ್ ಸ್ಕೀಮುಗಳಿಂದ ಇಕಾನಮಿ ಮಾಡಬಹುದು. ಆ ರೀತಿ ಮಾಡದೆ ಕೇವಲ ೬ ತಿಂಗಳು ಮಾತ್ರ ನೀರು ಹರಿಸಿದರೆ ವಿದ್ಯುಚ್ಛಕ್ತಿಮಂಡಲಿ ಇಂತಹ ಯೋಜನೆಗಳನ್ನು ಕೊಡುವುದಕ್ಕಾಗುವುದಿಲ್ಲ. ಆದ್ದರಿಂದ ತಾವು ಹೇಳತಕ್ಕದ್ದು ಒಂದು ಪ್ರಾಕ್ಟಿಕಲ್ ಪ್ರೊಪೊಸಿಶನ್ ಅಲ್ಲ.

ಶ್ರೀ ಎಂ.ಎಚ್.ಜಯಪ್ರಕಾಶ್ ನಾರಾಯಣ.— ಮಾನ್ಯ ಮಂತ್ರಿಯವರು ಈ ಅಂಶಗಳನ್ನು ಟ್ರಿಬ್ಯೂನಲ್ ಮುಂದೆ ಇಟ್ಟಿದ್ದಾರೆ ಎಂದು ಹೇಳಿದರು. ಟ್ರಿಬ್ಯೂನಲ್ ಮುಂದೆ ಇಡುವುದಕ್ಕೆ ಮೊದಲು ಅದರಿಂದ ಎಷ್ಟು ನೀರು ವೇಸ್ಟ್ ಆಗುತ್ತದೆ, ಎಷ್ಟು ನೀರು ಉಪಯೋಗಿಸಿಕೊಳ್ಳಬಹುದು ಎಂದು ತಿಳಿದುಕೊಂಡು ಟ್ರಿಬ್ಯೂನಲ್ ಮುಂದೆ ಇಟ್ಟಿದ್ದೀರಾ ?

ಶ್ರೀ ಎಚ್. ಎನ್ ನಂಜೇಗೌಡ.— ಟ್ರಿಬ್ಯೂನಲ್ ಮುಂದೆ ಯೋಜನಯನ್ನು ಕಳಿಸಿ ಕೊಟ್ಟಿದ್ದೇವೆ. ಅದರ ಬಗ್ಗೆ ಮಾನ್ಯ ಮಂತ್ರಿಯವರು ಈಗಾಗಲೇ ಹೇಳಿದ್ದಾರೆ.

CONSTRUCTION OF BALEHOSUR TANK

289. Sri V. V. WAI (Shirahatti).—

Will the Minister for Public Works and Electricity be pleased to state:—

(a) when the Cabinet Sub Committee of Government accorded sanction for the construction of Balehosur Tank;

(b) the reasons for not starting the construction work of this tank even though sanction was accorded by them ?

Sri H. M. CHANNABASAPPA (Minister for Public Works and Electricity):—

(a) The Cabinet Sub-Committee of Government have not accorded sanction for the construction of Balehosur Tank.

(b) This question does not arise in view of reply above.

ಶ್ರೀ ವಿ. ವಿ. ಪಾಯಿ.— ಈ ಯೋಜನೆಗೆ ಕ್ಯಾಬಿನೆಟ್ ಮಂಜೂರಾತಿ ಕೊಟ್ಟಿಲ್ಲ ಎಂದು ಹೇಳಿದ್ದೀರಿ. ಅದರ ಪಕ್ಕದಲ್ಲಿರತಕ್ಕಂತಹ ಸಿರಹಟ್ಟಿ ಮುಂತಾದ ಪ್ರದೇಶಗಳು ಅಭಾವ ಪೀಡಿತ ಪ್ರದೇಶಗಳಾಗಿರುವುದರಿಂದ ಆದಷ್ಟು ಜಾಗ್ರತೆ ಅದನ್ನು ಮಂಜೂರು ಮಾಡಿ ಕೊಡುತ್ತೀರಾ ?

†ಶ್ರೀ ಎಚ್. ಎಂ. ಚನ್ನಬಸಪ್ಪ.— ಹಣದ ಪರಿಸ್ಥಿತಿಯನ್ನು ನೋಡಿಕೊಂಡು ಮಂಜೂರಾತಿ ಕೊಡುವುದಕ್ಕೆ ಯೋಚನೆ ಮಾಡುತ್ತೇವೆ.

TERMINATION OF SERVICES OF TEACHERS OF T.D.B. HIGH SCHOOLS

288. Sri S. M. SHEERANALY CHANDRASEKHAR (Hosanagar).—

Will the Minister for Education be pleased to state :—

(a) whether the teachers working in T.D.B. High Schools after the High Schools were taken over by the Government are placed in equal footing with those of the teachers, working in Government High Schools ;

(b) whether the Government has treated them as Government servants for all purposes;

(c) whether they have received any complaints from the teachers that they are not treated as Government servants ;

(d) whether it is a fact that services of some teachers appointed by the T.D.Bs. have been terminated by the Government ;

(e) if so on what grounds ;

(f) whether there is any proposal to reinstate the services of such teachers ?

Sri A.R. BADARINARAYANA (Minister for Education).—

(a) and (b) Yes, to the extent possible, pending execution of Agreement Bonds by the Local Bodies, examination of option statements given by the staff of Local Body High schools, and whether the appointments of staff have been made within the jurisdiction of the appointing authority and as per rules.

(c) Yes.

(d) Services of teachers appointed regularly as per rules and within the jurisdiction of the appointing authority have not been terminated.

(e) and (f) Does not arise in view of reply to clause (d)

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ.—(ಡಿ) ಪ್ರಶ್ನೆಯಲ್ಲಿ ನಾನು ಕೇಳಿರುವುದು ತಾಲ್ಲೂಕು ಬೋರ್ಡಿನವರು ಏನು ನೇಮಕಗಳನ್ನು ಮಾಡಿದ್ದಾರೆ ಅಂತಹ ನೇಮಕಗಳಲ್ಲಿ ಕೆಲವರನ್ನು ಟರ್ಮಿನೇಟ್ ಮಾಡಿ ಅಂಥವರಿಗೆ ಕೆಲಸವಿಲ್ಲದ್ದು ತಮ್ಮ ಗಮನಕ್ಕೆ ಬಂದಿದೆಯೇ, ಮತ್ತು ಅವರನ್ನು ಪುನಃ ಕೆಲಸಕ್ಕೆ ತೆಗೆದುಕೊಳ್ಳುವುದಕ್ಕೆ ಯೋಚನೆ ಮಾಡಿದ್ದೀರಾ ?

ಶ್ರೀ ಎ. ಆರ್. ಬದರೀನಾರಾಯಣ.—೧-೪-೧೯೭೧ರ ಹಿಂದೆ ಏನು ನೇಮಕ ಮಾಡಿಕೊಂಡಿದ್ದರು ಅದು ರೂಲ್ಸ್ ಪ್ರಕಾರ ಮಾಡಿಕೊಂಡಿದ್ದಾರೆ. ಕೆಲವರು ತಾಲ್ಲೂಕು ಬೋರ್ಡುಗಳಲ್ಲಿ ರೂಲ್ಸಿಗೆ ವಿರೋಧವಾಗಿ ಯಾರಾದರೂ ನೇಮಕ ಮಾಡಿಕೊಂಡಿದ್ದರೆ ಅದನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ರೂಲ್ಸಿಗೆ ಅನುಸಾರವಾಗಿ ಮಾಡಿದ್ದರೆ. ಪರಿಶೀಲನೆ ಮಾಡಿ ಒಪ್ಪಬೇಕಾಗುತ್ತದೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ತಾಲ್ಲೂಕು ಬೋರ್ಡಿನವರು ರೂಲ್ಸ್ ಪ್ರಕಾರ ಇಂಟರವ್ಯು ಮಾಡಿ, ಅವರನ್ನು ಕೆಲಸಕ್ಕೆ ತೆಗೆದುಕೊಂಡಿರುತ್ತಾರೆ. ಅವುಗಳನ್ನು ಸರ್ಕಾರ ತೆಗೆದುಕೊಂಡಾಗ ಅವರಿಗೆ ಕೆಲಸವಿಲ್ಲದ ಪರಿಸ್ಥಿತಿ ಬಂದದ್ದು ತಮ್ಮ ಗಮನಕ್ಕೆ ಬಂದಿದೆಯೇ; ಮತ್ತು ಹಾಗೆ ಆಗಿದ್ದರೆ ಅಂಥವರನ್ನು ಪುನಃ ಕೆಲಸಕ್ಕೆ ತೆಗೆದುಕೊಳ್ಳುತ್ತೀರಾ ?

ಶ್ರೀ ಎ. ಆರ್. ಬದರೀನಾರಾಯಣ.—ತಾಲ್ಲೂಕು ಬೋರ್ಡಿನವರು ರೂಲ್ಸಿಗೆ ವಿರುದ್ಧವಾಗಿ ನೇಮಕ ಮಾಡಿಕೊಂಡಿದ್ದರೆ ಅದನ್ನು ಸರ್ಕಾರ ಒಪ್ಪಿಕೊಳ್ಳುವುದಿಲ್ಲ.

೧-೪-೧೯೭೧ರ ಮೇಲೆ ತಾಲ್ಲೂಕು ಬೋರ್ಡಿಗೆ ನೇಮಕ ಮಾಡುವುದಕ್ಕೆ ಯಾವ ಅಧಿಕಾರವೂ ಇರುವುದಿಲ್ಲ.

ಶ್ರೀ ಎಂ. ಬಿ. ರಾಮಸ್ವಾಮಿ.—ತಾಲ್ಲೂಕು ಬೋರ್ಡ್ ಹೈಸ್ಕೂಲುಗಳನ್ನು ಸರ್ಕಾರ ತೆಗೆದುಕೊಂಡಿದೆ ಎಂದು ಹೇಳಿದ್ದೀರಿ. ಹೀಗೆ ಮಾಡುವಾಗ ಅನೇಕ ಹೈಸ್ಕೂಲುಗಳನ್ನು ಬಿಟ್ಟು ಬಿಟ್ಟಿದ್ದೀರಿ. ಆದ್ದರಿಂದ ಅಂಥವುಗಳನ್ನು ಹಿಂದೆ ಹೇಗೆ ತೆಗೆದುಕೊಂಡಿದ್ದೀರಿ, ಹಾಗೆ ತೆಗೆದುಕೊಂಡು ನ್ಯಾಯ ದೊರಕಿಸಿಕೊಡುತ್ತೀರಾ ?

ಶ್ರೀ ಎ. ಆರ್. ಬದರೀನಾರಾಯಣ.—ತಾಲ್ಲೂಕು ಬೋರ್ಡ್ ಮುನಿಸಿಪಲ್ ಬೋರ್ಡ್ ಮತ್ತು ಕೆಲವು ವಿಲೇಜ್ ಪಂಚಾಯಿತಿಗಳು ಅರ್ಜಿ ಹಾಕಿ ಅನ್ ಕಂಡಿಶನಲ್ ಆಗಿ ಒಪ್ಪಿಸುತ್ತೇವೆ ಎಂದು ಹೇಳಿದರೆ ಸರ್ಕಾರ ತೆಗೆದುಕೊಳ್ಳುತ್ತದೆ. ಆದರೆ ಕೆಲವರು ಷರತ್ತು ಹಾಕಿ ಹೇಳುತ್ತಾರೆ. ಷರತ್ತು ಇಲ್ಲದೆ ಕೊಟ್ಟರೆ ಅವರ ಆಸ್ತಿಪಾಸ್ತಿ, ನೇಮಕ ಸರಿಯಾಗಿ ಮಾಡಿದ್ದಾರೆಯೇ ಎಂಬುದನ್ನು ವಿಮರ್ಶೆ ಮಾಡಿ ಅವರಿಂದ ಒಂದು ಬಾಂಡ ಬರೆಸಿಕೊಂಡು ತೆಗೆದುಕೊಳ್ಳುತ್ತೇವೆ. ಆ ಮೇಲೆ ಮುಂದಿನ ಕಾರ್ಯಕ್ರಮ ಅನುಸರಿಸಬೇಕಾಗುತ್ತದೆ;

TRANSFERS OF EMPLOYEES OF EDUCATION DEPARTMENT ON MUTUAL REQUEST

312. Sri N. B. SIRDESAI (Khanapur).—Will the Minister for Education be pleased to state :—

(a) whether transfers of the employees of the Education Department are effected on mutual requests of the employees, on sympathetic grounds ;

(b) whether premature transfers have been effected at the request of the employees on genuine and compassionate grounds;

(c) the number of such premature transfers and the transfers effected on mutual consent in Dharwar Division by the Joint Director of Dharwar Division and the Director of Public Instruction, Bangalore;

(d) whether it is within the competence of the Joint Director to withhold or hold in abeyance or cancel the transfer orders effected by the Director of Public Instruction, Bangalore;

(e) the number of transfer orders issued by the Director of Public Instruction Bangalore, and which have not been given effect to by the Joint Director, Dharwar Division, since 1972 to this date ;

(f) whether the anonymous applications against the employees of Education Department in Dharwar Division are being delivered, entertained and attached importance by the Joint Director, Dharwar and whether his opinion is formed on the basis of such anonymous applications ?

Sri A. R. BADARINARAYANA (Minister for Education).—

(a) Yes.

(b) Yes.

(c) This information is not readily available.

(d) No.

(e) Does not arise in view of reply to clause (d).

(f) No.

Sri N. B. SIRDESAI.—May I know whether the Government is aware of the fact that in accordance with the Government Order on 23rd June 1973 some Taluks including the Khanapur Tq. have been declared as drought affected Talukas and also in accordance with a memo dated 20th March 1973 of the Director of Public Instruction, 4 additional Talukas have been declared as drought affected areas and clear instructions have been issued not to transfer any officials from these Talukas ? But in contravention of these instructions issued by the Government; transfers of officials have been effected.

†Sri A. R. BADARINARAYAN.—In those plans where it has been declared as drought affected area transfers will not normally be effected. Supposing there are complaints against a particular teacher, or supposing some teachers want transfer on personal grounds of health in such cases transfers have been effected.

Sri N. B. SIRDESAI.— Has it not come to the notice of the Government that transfers have been effected without the consent of teachers ?

Sri A. R. BADARINARAYAN.---Such cases do not exist.

Sri N. B. SIRDESAI.— In reply to sub-question (e) you have stated it 'does not arise in view of reply to clause (d).' But clause (e) is an independent question and specific answer should have been given because I wanted to know whether the transfer orders which have been issued by the Director of Public instruction have not been given effect to by the Joint Director of Dharwar Division ?

Sri A. R. BADARINARAYAN.— The question is whether the instructions of the Director of Public Instruction have been flouted by the Joint Director, Dharwar Division. To this question I have stated 'no.' This is so.

Sri N. B. SIRDESAI.— A number of transfer orders issued by the Director of Publie Instruction have not been given effect to by the Joint Director, which the Government may not be knowing.

Sri A. R. BADARINARAYAN.— There are no such transfer orders which have not been given effect to by the Joint Director. The information about this is nil.

Sri N. B. SIRDESAI.— If information is supplied to you, would you like to take action ?

Sri A. R. BADARINARAYAN.— Certainly action will be taken as per rules and regulations.

MADAM SPEAKER.—Smt. Nagamma C. Keshava Murthy is absent. Now let us take up the short notice questions.

WAIVING OF THE INALIENABILITY CLAUSE OF EX-MAHARAJA OF MYSORE

16. Sri H. T. KRISHNAPPA (Nagamangala).— Will the Chief Minister be pleased to state :—

(a) whether there was any clause contained in the merger agreement between the Maharaja of Mysore and the Central Government to the effect that the palaces of Ootacamund, Mysore and Bangalore should not be alienated by the Maharaja or his heirs ;

(b) Whether the State Government is incurring any expenditure on the maintenance of these palaces ;

(c) if so, the total expenditure per annum ;

(d) Whether it is a fact that the State Government has consented for the removal of the non-alienation condition in the merger agreement to enable the Maharaja of Mysore to sell these palaces ?

Sri D. DEVARAJ URS (Chief Minister).—

(a) Yes.

(b) Not after the withdrawal of the privileges.

(c) Does not arise in view of reply to clause (b).

(d) The matter of removal of the inalienability clause attached to the palaces, is one entirely relating to the Government of India, as per the agreement.

The Government of India have so far waived the inalienability clause in respect of Ooty palace only.

†ಶ್ರೀ ಎಚ್. ಟಿ. ಕೃಷ್ಣಪ್ಪ.—ಉದಕಮಂಡಲದ ಅರಮನೆಯನ್ನು ಮಾರಾಟ ಮಾಡುವ ವಿಚಾರದಲ್ಲಿ ಹಿಂದೆ ಅವಕಾಶ ಕೊಡಬೇಕೆಂದು ಮಾಜಿ ಮಹಾರಾಜರು ಅರ್ಜಿ ಕೊಟ್ಟಂತಹ ಸಂದರ್ಭದಲ್ಲಿ ನಮ್ಮ ಕಾನೂನು ಇಲಾಖೆಯವರು ಅದು ಕಾನೂನು ಬಾಹಿರವಾದುದು ಎಂದು ತಿಳಿಸಿದ್ದಾರೆಯೇ?

ಶ್ರೀ ಡಿ. ದೇವರಾಜ ಅರಸ.—ಅದು ಕಾನೂನು ಬಾಹಿರ ಎಂದು ಯಾರೂ ತಿಳಿಸಿಲ್ಲ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಕಾನೂನು ಇಲಾಖೆಯವರು ಇದಕ್ಕೆ ತಮ್ಮ ಸಮ್ಮತಿಯನ್ನು ಕೊಟ್ಟಿಲ್ಲ ಎಂಬುದನ್ನು ತಾವು ಒಪ್ಪುತ್ತೀರಾ?

ಶ್ರೀ ಡಿ. ದೇವರಾಜ ಅರಸ.—ಇಲ್ಲ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಹಿಂದೆ ಈ ವಿಚಾರಕ್ಕೆ ಸಮ್ಮತಿಯನ್ನು ಕೊಡಬೇಕು ಎಂದು ಸರ್ಕಾರಕ್ಕೆ ಅರ್ಜಿ ಬಂದಾಗ ಅದಕ್ಕೆ ಸಮ್ಮತಿ ಕೊಡುವುದನ್ನು ನಿರಾಕರಣೆ ಮಾಡಿದ್ದುದನ್ನು ಒಪ್ಪುತ್ತೀರಾ?

ಶ್ರೀ ಡಿ. ದೇವರಾಜ ಅರಸ.—ನಮ್ಮ ಸರ್ಕಾರ ಬರುವುದಕ್ಕೆ ಮುಂಚೆಯೇ ಹಿಂದೆ ಇದ್ದ ರಾಜ್ಯಪಾಲರ ಆಡಳಿತದಲ್ಲಿದ್ದ ಸರ್ಕಾರದವರು ಇದನ್ನು ಕೊಡಬಹುದು ಇದಕ್ಕೆ ನಮ್ಮ ಅಭ್ಯಂತರವಿಲ್ಲ ಎಂದು ಅವರು ಆಗಲೇ ಬರೆದಿದ್ದರು. ಅದು ರೆಕಾರ್ಡಿನಲ್ಲಿ ಇದೆ.

ಶ್ರೀ ಕಾಗೋಡು ತಿಮ್ಮಪ್ಪ.—ತಾವು ಅಧಿಕಾರವನ್ನು ವಹಿಸಿಕೊಂಡ ಮೇಲೆ ಈ ಬಗ್ಗೆ ಕೇಂದ್ರ ಸರ್ಕಾರದಿಂದ ಒಂದು ಪರಿಪತ್ರ ಬಂದಿದ್ದು ಆ ಪ್ರಕಾರ ಇನ್‌ಎಲಿಜಬಿಲಿಟಿ ಕ್ಲಾಜ್ ತೆಗಿದುಹಾಕುವುದರಲ್ಲಿ ನಮ್ಮ ಅಭ್ಯಂತರವಿಲ್ಲ ಎಂದು ಸರ್ಕಾರದವರು ಸೂಚನೆಯನ್ನು ಕೊಟ್ಟಿದ್ದರಿಂದ ಈಗ ಇವಕ್ಕೆ ಅವಕಾಶ ಮಾಡಿಕೊಡಲಾಗಿದೆ ಅಲ್ಲವೇ?

ಶ್ರೀ ಡಿ. ದೇವರಾಜ ಅರಸ.—ನಾವು ಅಧಿಕಾರಕ್ಕೆ ಬರುವುದಕ್ಕೆ ಮುಂಚೆಯೇ ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರದವರು ಪತ್ರವನ್ನು ಬರೆದಿದ್ದಾರೆ. ನಾವೂ ಕೂಡ ನಮ್ಮದು ಅಭ್ಯಂತರವಿಲ್ಲ ಈ ಬಗ್ಗೆ ಮೈಸೂರು ಸರ್ಕಾರಕ್ಕೆ ನೇರವಾದ ಸಂಬಂಧವಿಲ್ಲ ಎಂದು ನಾವು ತಿಳಿಸಿದ್ದೇವೆ. ಆ ಮೇಲೆ ಈ ವಿಚಾರ ಈ ಮನೆ ಮತ್ತು ಕೆಳ ಮನೆಯಲ್ಲಿ ಚರ್ಚೆಗೆ ಬಂದಾಗ ನಾನು ಸರ್ಕಾರದ ಪರವಾಗಿ ಉತ್ತರ ಹೇಳಿದ್ದೇನೆ. ಈ ವಿಚಾರದಲ್ಲಿ ಕೇಂದ್ರ ಸರ್ಕಾರದ ಅಟಾರ್ನಿ ಜನರಲ್ ಅವರಿಗೆ ಬರೆದು ಅವರಿಂದ ಓಪೀನಿಯನ್ ತರಿಸಿಕೊಂಡು ಈ ಇನ್‌ಎಲಿಯನಬಿಲಿಟ್ ಕ್ಲಾಜ ತೆಗೆಯಬಹುದು ಎಂದು ಕೇಂದ್ರ ಸರ್ಕಾರವೇ ತೀರ್ಮಾನಿಸಿತು ಎಂದು ನಾವು ಹೇಳಿದ್ದೇವೆ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಶ್ರೀಮಾನ್ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಗಳಾಗಿದ್ದಾಗ ಆ ಅರ್ಜಿಯು ಪರಿಶೀಲನೆಗೆ ಬಂದು ಈ ಬಗ್ಗೆ ಕಾನೂನು ಇಲಾಖೆಯ ಒಂದು ಅಭಿಪ್ರಾಯವನ್ನು ತೆಗೆದುಕೊಂಡು ಪರಭಾರೆಗೆ ಸಂಬಂಧಪಟ್ಟ ಷರತ್ತನ್ನು ಸಡಿಲಗೊಳಿಸುವುದಕ್ಕೆ ಆಗುವುದಿಲ್ಲ ಎಂದು ಉತ್ತರ ಕಳುಹಿಸಿಲ್ಲವೇ?

ಶ್ರೀ ಡಿ. ದೇವರಾಜ ಅರಸ.—ಕಾನೂನು ಇಲಾಖೆಯ ಅಭಿಪ್ರಾಯದ ಪ್ರಕಾರ ಅದು ಆಗುವುದಿಲ್ಲ ಎಂದು ಅವರು ಕೇಂದ್ರ ಸರ್ಕಾರಕ್ಕೆ ಬರೆದಿದ್ದರು. ಆ ಮೇಲೆ ಕೇಂದ್ರ ಸರ್ಕಾರದವರು ರಾಜ್ಯ ಸರ್ಕಾರದವರಿಗೆ ನೀವು ಆ ರೀತಿ ಹೇಳುವುದು ಸರಿಯಲ್ಲ ಎಂದು ಪತ್ರ ಬರೆದಿದ್ದಾರೆ.

ಶ್ರೀ ವಾಟಾಳ ನಾಗರಾಜ.—ಈ ಅರಮನೆಯನ್ನು ಪರಭಾರೆ ಮಾಡುವ ಬಗ್ಗೆ ಕೇಂದ್ರ ಸರ್ಕಾರದವರು ರಾಜ್ಯ ಸರ್ಕಾರದವರ ಅಭಿಪ್ರಾಯವನ್ನು ಕೇಳಿದಾಗ ನೀವು ಅದನ್ನು ಪರಭಾರೆ ಮಾಡಬಾರದು ಎಂದು ಹೇಳಿದ್ದರೆ ಏನು ತೊಂದರೆಯಾಗುತ್ತಿತ್ತು?

ಶ್ರೀ ಡಿ. ದೇವರಾಜ ಅರಸ.— ಇದು ತೊಂದರೆಯ ಪ್ರಶ್ನೆಯಲ್ಲ. ಪರಭಾರೆ ಮಾಡಬಾರದು ಎಂದರೆ ನಾವು ತೆಗೆದುಕೊಳ್ಳುವುದಿಲ್ಲ, ಬೇರೆಯವರಿಗೆ ಕೊಡುವುದಕ್ಕೂ ಸಾಧ್ಯವಾಗುತ್ತಿರಲಿಲ್ಲ. ಪರಭಾರೆ ಮಾಡಬಾರದು ಎಂದರೆ, ಆ ಅರಮನೆಗಳ ಮೇಲೆ ಯಾರಿಗೂ ಅಧಿಕಾರವಿಲ್ಲದಂತಾಗುತ್ತದೆ. ಕೇಂದ್ರ ಸರ್ಕಾರ ನಮ್ಮ ಮಾತಿನಂತೆ ನಡೆಯಬೇಕಾದ ಅಗತ್ಯವಿಲ್ಲ. ಆದ್ದರಿಂದ ಆ ರೀತಿ ಹೇಳುವುದಕ್ಕೆ ನಮಗೆ ಯಾವ ಅಧಿಕಾರವೂ ಇಲ್ಲ.

ಶ್ರೀ ಟಿ. ಎಂ. ಮಂಜುನಾಥ.—ರಾಜಧನ ರದ್ದಾಗಬೇಕು, ಆಸ್ತಿ ಮಿತಿಯನ್ನು ಗೊತ್ತುಮಾಡಬೇಕು ಎಂದು ತಮ್ಮ ಸರ್ಕಾರದವರು ಅನೇಕ ಪಾಲಿಸಿಗಳನ್ನು ಹಾಕಿ ಕೊಂಡಿದ್ದೀರಿ. ಹೀಗಿರುವಾಗ ಮಹಾರಾಜರಿಗೆ ಸಂಬಂಧಪಟ್ಟ ಆಸ್ತಿ ಬಹಳವಾಗಿರು ವುದರಿಂದ, ಆ ಆಸ್ತಿ ದೇಶದ ಹಿತದೃಷ್ಟಿಯಿಂದ ಪರಭಾರೆ ಮಾಡತಕ್ಕದ್ದಲ್ಲ ಎಂದು ತಾವು ಏತಕ್ಕೆ ನಿರ್ಬಂಧವನ್ನು ಹಾಕಲಿಲ್ಲ?

ಶ್ರೀ ಡಿ. ದೇವರಾಜ ಅರಸ.—ಕಾನೂನು ಪ್ರಕಾರ ಅವರಿಗೇ ಕೊಡಬೇಕಾದ್ದು ಇದೆ. ಆದ್ದರಿಂದ ಆ ಬಗ್ಗೆ ನಾವು ಏನೂ ಮಾಡುವುದಕ್ಕೆ ಬರುವುದಿಲ್ಲ. ಊಟಿಯಲ್ಲಿರ ತಕ್ಕ ಅರಮನೆಯನ್ನು ನಾವು ಏತಕ್ಕೋಸ್ಕರ ತೆಗೆದುಕೊಳ್ಳುವುದಿಲ್ಲ ಎಂದರೆ ಅದು ನಮ್ಮ ರಾಜ್ಯದ ಹೊರಗಡೆ ಇರತಕ್ಕದ್ದು. ಅದನ್ನು ಉಳಿಸಿದರೂ ಅದನ್ನು ನಾವು ಹಣ ಕೊಟ್ಟು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಮತ್ತೆ ಅದನ್ನು ನಾವು ಮೆಂಟೇನ್ ಮಾಡುವುದಕ್ಕೆ ಆಗುವುದಿಲ್ಲ. ಅದು ಬೇರೆ ರಾಜ್ಯದಲ್ಲಿ ಇರುವುದರಿಂದ ಅದು ಏನು ಮಾಡುವುದಕ್ಕೆ ಬರುವುದಿಲ್ಲ. ಮತ್ತೆ ಬೆಂಗಳೂರು ಪ್ಯಾಲೇಸನ್ನು ನಾವು ಅಕ್ವೈರ್ ಮಾಡಬೇಕೆಂದಿದ್ದೇವೆ. ಮೈಸೂರು ಪ್ಯಾಲೇಸನ ಬಗ್ಗೆ ಒಂದು ಟ್ರಸ್ಟ್ ಕ್ರಿಯೇಟ್ ಮಾಡಬೇಕೆಂದು ಮಾಡಿದ್ದೇವೆ ಎಂದು ನಾನು ಹಿಂದೆಯೇ ಹೇಳಿದ್ದೆನೆ. A trust will be Created and the terms and conditions of the trust are being drafted.

ಶ್ರೀ ಜೆ. ಎಲ್. ಕಬಾಡಿ.—ಕೇಂದ್ರ ಸರ್ಕಾರದವರು ಮಹಾರಾಜರಿಗೂ ನಮ್ಮ ಸರ್ಕಾರಕ್ಕೂ ಯಾವ ಸಂಬಂಧವೂ ಇಲ್ಲ ಎಂದು ಹೇಳಿದ್ದರೆ, ಅವರು ಈ ಬಗ್ಗೆ ಮೈಸೂರು ಸರ್ಕಾರದವರ ಅಭಿಪ್ರಾಯವನ್ನು ಕೇಳಬೇಕಾಗಿರಲಿಲ್ಲ. ಮಹಾರಾಜರು ಪರಭಾರೆ ಮಾಡಕೂಡದು, ಅದು ನಮ್ಮ ಆಸ್ತಿ, ನಾವು ಇಟ್ಟುಕೊಳ್ಳಬೇಕು ಎನ್ನುವ ಮನೋಭಾವ ನಿಮಗೆ ಇದ್ದರೆ ಆ ರೀತಿ ನೀವು ಏತಕ್ಕೆ ಕೇಂದ್ರ ಸರ್ಕಾರಕ್ಕೆ ಪತ್ರವನ್ನು ಬರೆದಿರಿ?

ಶ್ರೀ ಡಿ. ದೇವರಾಜ ಅರಸ್.—ಅದನ್ನು ನಾವು ಇಟ್ಟುಕೊಳ್ಳಬೇಕಾದರೆ ದುಡ್ಡು ಕೊಟ್ಟು ಇಟ್ಟುಕೊಳ್ಳಬೇಕು. ಅದಕ್ಕೋಸ್ಕರವೇ ಈಗ ನಾವು ಬೆಂಗಳೂರು ಅರಮನೆ ಯನ್ನು ಅಕ್ವೈರ್ ಮಾಡಬೇಕೆಂದಿದ್ದೇವೆ.

ಶ್ರೀ ಎಚ್. ಟಿ. ಕೃಷ್ಣಪ್ಪ.—ನನ್ನ ಪ್ರಶ್ನೆಗೆ ಉತ್ತರವಾಗಿ ಮಹಾರಾಜರ ವಿಶೇಷಾಧಿಕಾರಗಳನ್ನು ಹಿಂತೆಗೆದುಕೊಂಡ ನಂತರ ಅರಮನೆಗಳಿಗೆ ಯಾವ ಖರ್ಚನ್ನೂ ಮಾಡುತ್ತಾ ಇಲ್ಲ ಎಂದು ಹೇಳಿದ್ದೀರಿ. ಹಾಗಾದರೆ ೧೯೪೭ನೇ ಇಸವಿಯಿಂದ ಈ ಪ್ರಿವಿಲೇಜಸ್ ಅಬಾಲಿಷ್ ಆಗುವ ತನಕ ಒಂದು ವರ್ಷಕ್ಕೆ ಕನಿಷ್ಟಪಕ್ಷ ಒಂದೂವರೆ ಲಕ್ಷ ರೂಪಾಯಿಗಳು ಅರಮನೆಗೆ ಸರ್ಕಾರದ ಬೊಕ್ಕಸದಿಂದ ಕೊಟ್ಟಿಲ್ಲವೇ ?

ಶ್ರೀ ಡಿ. ದೇವರಾಜ ಅರಸ್.—ಕೊಟ್ಟಿದೆ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಅದು ನಮ್ಮ ಆಸ್ತಿ ಎಂದು ಸರ್ಕಾರ ಅದಕ್ಕೆ ಹಣವನ್ನು ಖರ್ಚು ಮಾಡಿದೆ ಅಲ್ಲವೇ?

ಶ್ರೀ ಡಿ. ದೇವರಾಜ ಅರಸ್.—ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳಿಗೆ ಆದಂತಹ ಒಂದು ಒಪ್ಪಂದದ ಪ್ರಕಾರ ಈ ಹಣವನ್ನು ಖರ್ಚು ಮಾಡಿದೆ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಯಾವುದೇ ವಿಷಯದಿಂದ ಇದನ್ನು ಸಮರ್ಥನೆ ಮಾಡಿದರೂ ಕೂಡ ಮೂಲಭೂತವಾದ ತತ್ವದ ವಿರುದ್ಧವಾಗಿ, ಸಮಾಜವಾದದ ವಿರುದ್ಧವಾಗಿ ಈ ನಿರ್ಣಯವನ್ನು ನಿಮ್ಮ ಸರ್ಕಾರದವರು ತೆಗೆದುಕೊಂಡಿದ್ದಾರೆ. ಈಗಿನ ಸರ್ಕಾರ ರಚನೆಯಾದ ಮೇಲೆ ಮಹಾರಾಜರಿಂದ ಆ ಬಗ್ಗೆ ಅರ್ಜಿಯನ್ನು ಹಾಕಿಸಿ ಇದನ್ನು ಪರಭಾರೆ ಮಾಡುವುದಕ್ಕೆ ಈಗಿರುವಂತಹ ಸರ್ಕಾರಕ್ಕೆ ಯಾವ ಆಕ್ಷೇಪಣೆಯೂ ಇಲ್ಲ ಎಂದು ಎನಿಸಿಕೊಂಡು ಈ ಬಗ್ಗೆ ತೀರ್ಮಾನ ಮಾಡಿದ್ದಾರೆ. ಮತ್ತು ಹಿಂದೆ ಇದ್ದ ಸರ್ಕಾರದವರು ಈ ಬಗ್ಗೆ ಏನು ತೀರ್ಮಾನವನ್ನು ತೆಗೆದುಕೊಂಡಿದ್ದರೋ ಆ ತೀರ್ಮಾನಕ್ಕೆ ವಿರುದ್ಧವಾಗಿ ಈ ಸರ್ಕಾರದವರು ತೀರ್ಮಾನ ತೆಗೆದುಕೊಂಡಿದ್ದಾರೆ ಮತ್ತು ಈಗಿನ ಮುಖ್ಯ ಮಂತ್ರಿಗಳು ಮಹಾರಾಜರ ಕುಟುಂಬಕ್ಕೆ ಸೇರಿದವರಾಗಿದ್ದರಿಂದ ಅವರು ಮಹಾರಾಜರಿಗೆ ಸಹಾಯ ಮಾಡುವ ದೃಷ್ಟಿಯಿಂದ ಈ ತೀರ್ಮಾನ ಮಾಡಿದ್ದಾರೆ ಎನ್ನುವ ಆಪಾದನೆ ಇದೆ. ಈ ವಿಷಯ ಲೋಕಸಭೆಯಲ್ಲಿ ಕೂಡ ಚರ್ಚೆಗೆ ಬರುವುದು ಇದೆ. ಆದ್ದರಿಂದ ಇದನ್ನು ಪುನರ್ ಪರಿಶೀಲನೆ ಮಾಡಿ ಇದನ್ನು ಪರಭಾರೆ ಮಾಡುವುದಕ್ಕೆ ಸರ್ಕಾರದವರು ಏನು ಒಪ್ಪಿಗೆಯನ್ನು ಕೊಟ್ಟಿದ್ದಾರೆ ಅದನ್ನು ವಾಪಸ್ಸು ತೆಗೆದುಕೊಳ್ಳುತ್ತೀರಾ?

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಸದಸ್ಯರು ವೀರೇಂದ್ರ ಪಾಟೀಲ್ ಕಡೆಯವರು, ಆದ್ದರಿಂದ ಈ ರೀತಿ ಮಾತನಾಡುತ್ತಿದ್ದಾರೆ. ಅವರು ಇದರಲ್ಲಿ ಆಸಕ್ತಿ ಇಟ್ಟುಕೊಂಡಿದ್ದರು ಎಂದು ಹೇಳಬಹುದಲ್ಲ. ಆ ರೀತಿ ಮಾತನಾಡಿದರೆ ಹತ್ತರಷ್ಟು ಹೇಳಬಹುದು. ಇದು ಕ್ಯಾಬಿನೆಟ್ ಡಿಸಿಷನ್. ಮೊದಲು ಇದನ್ನು ಪರಭಾರೆ ಮಾಡುವುದಕ್ಕೆ ಒಪ್ಪುವುದಿಲ್ಲ ಎಂದು ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ಬರೆದ ಮೇಲೆ ಕೇಂದ್ರ ಸರ್ಕಾರದವರು ನೀವು ಅದಕ್ಕೆ ಒಪ್ಪದಿದ್ದರೂ ಅದನ್ನು ನಾವು ಪರಭಾರೆ ಮಾಡುವುದಕ್ಕೆ ಒಪ್ಪಿಗೆಯನ್ನು ಕೊಡುತ್ತೇವೆ ಎಂದು ರಾಜ್ಯ ಸರ್ಕಾರಕ್ಕೆ ಕಾಗದವನ್ನು ಬರೆದಿದ್ದಾರೆ. ಅದು ರೆಕಾರ್ಡಿನಲ್ಲಿದೆ. ಇದು ಹೊಸದೇನೂ ಅಲ್ಲ. ಆ ಬಗ್ಗೆ ಫೈನಲ್ ಅಥಾರಿಟಿ ಕೇಂದ್ರ ಸರ್ಕಾರದವರಿಗೆ ಇದೆ. ಹಿಂದೆ ಈ ವಿಷಯ ಈ ಮನೆಯಲ್ಲಿ ಚರ್ಚೆಗೆ ಬಂದಾಗ ನಾನು ಈ ಬೆಂಗಳೂರು ಅರಮನೆಯನ್ನು ಸರ್ಕಾರದವರು ಅಕ್ವೈರ್ ಮಾಡುತ್ತಾರೆ ಎಂದು ಹೇಳಿದ್ದೇನೆ. ಮತ್ತು ಮೈಸೂರಿನಲ್ಲಿರುವ ಅರಮನೆಯ ಬಗ್ಗೆ ಒಂದು ಟ್ರಸ್ಟ್ ಮಾಡುತ್ತೇವೆ ಎಂದು ಹೇಳಿದ್ದೇನೆ. ಆ ಅರಮನೆಯ ಬಗ್ಗೆ ವೆಲ್ತ್ ಟ್ಯಾಕ್ಸ್ ಕೊಟ್ಟ ಮೇಲೆ ಅವರಿಗೆ ಉಳಿಯುವುದು ಸ್ವಲ್ಪ ಮಾತ್ರ. ಅದರ ಲೆಕ್ಕಾಚಾರವನ್ನು ನಾವು ಮಾಡಿದ್ದೇವೆ. ಈ ಅರಮನೆಗಳ ವಿಚಾರದಲ್ಲಿ ಹಿಂದೆ ಈ ಸಭೆಯಲ್ಲಿ ಹೇಳಿಕೆಯನ್ನು ನೀಡಲಾಗಿದೆ. ಕೇಂದ್ರ ಸರ್ಕಾರದಿಂದ ಈ ಬಗ್ಗೆ ಬಂದ ಪತ್ರವನ್ನು ಕೂಡ ಓದಲಾಗಿದೆ.

ಶ್ರೀ ವಾಟಾಳ್ ನಾಗರಾಜ್.— ಲೋಕಸಭೆಯಲ್ಲಿ ಶ್ರೀಮಾನ್ ಕೆ. ಹನುಮಂತಯ್ಯನವರು ಪರಭಾರೆ ಹಕ್ಕು ನಿಷೇಧವನ್ನು ಸಡಿಲಿಸಲು ರಾಜ್ಯ ಸರ್ಕಾರ ಒಪ್ಪಿದ್ದು ಸರಿಯಲ್ಲ-ಎಂದಿದ್ದಾರೆ.

ಶ್ರೀ ಡಿ. ದೇವರಾಜ ಅರಸ್.—ಈ ವಿಷಯದಲ್ಲಿ ಫೈನಲ್ ಅಥಾರಿಟಿ ಅವರಲ್ಲ. ಒಬ್ಬೊಬ್ಬರು ಒಂದೊಂದು ಹೇಳುತ್ತಾರೆ. ಫೈನಲ್ ಅಥಾರಿಟಿ ಇರತಕ್ಕ ಸಂಸ್ಥೆ ಯಾವುದು ಇದೆ ಅವರು ಹೇಳಿದಂತೆ ಹೋಗುತ್ತದೆ.

2–00 P.M.

MADAM SPEAKER.— We have already spent 8 Minutes on this Short-Notice Question. Let us take up the next Short-Notice Question.

ಶ್ರೀ ಎಚ್. ಟಿ. ಕೃಷ್ಣಪ್ಪ.— ನನಗೆ ಮತ್ತೊಂದು ಪ್ರಶ್ನೆ ಕೇಳಲು ಅವಕಾಶ ಕೊಡಬೇಕು.

MADAM SPEAKER.— I have already called the next Question. Hon. members have got to honour my decision.

ಶ್ರೀ ಎಚ್. ಟಿ. ಕೃಷ್ಣಪ್ಪ.— ಸರ್ಕಾರದವರು ಉತ್ತರ ಕೊಡಲು ತಯಾರಿದ್ದಾರೆ. ಆದ್ದರಿಂದ ನನಗೆ ಪ್ರಶ್ನೆ ಕೇಳಲು ಅವಕಾಶ ಕೊಡಬೇಕು.

ಅಧ್ಯಕ್ಷರು.— ದಯಮಾಡಿ ಸರ್ಕಾರದವರು ಉತ್ತರ ಹೇಳಬಾರದು.

ಶ್ರೀ ವಾಟಾಳ್‌ನಾಗರಾಜ್.— ತಾವು ಆ ರೀತಿ ಹೇಳಿದರೆ ವಿರೋಧಪಕ್ಷದ ನಾಯಕರಿಗೆ ಅಗೌರವ ಮಾಡಿದಂತೆ ಎಂದು ವ್ಯಥೆಯಿಂದ ಹೇಳಬೇಕಾಗಿದೆ.

ಅಧ್ಯಕ್ಷರು.— ತಾವು ಕುಳಿತುಕೊಳ್ಳಿ.

ಶ್ರೀ ವಾಟಾಳ್‌ನಾಗರಾಜ್.— ಸರ್ಕಾರದವರು ಉತ್ತರ ಕೊಡುವುದಕ್ಕೆ ತಯಾರಾಗಿರುವಾಗ ತಾವು ಆ ರೀತಿ ಡಿಕ್ಟೇಟ್ ಮಾಡುವುದು ಸರಿಯಲ್ಲ.

ಅಧ್ಯಕ್ಷರು.— ಇಲ್ಲಿ ಒಬ್ಬರಿಗೆ ಅಗೌರವ ಮಾಡುವುದಕ್ಕೆ ಯಾರಿಗೂ ಹಕ್ಕಿಲ್ಲ. ಅಧ್ಯಕ್ಷರಿಗೂ ಇಲ್ಲ, ಲೀಡರ್ ಆಫ್ ದಿ ಹೌಸ್ ಅವರಿಗೂ ಇಲ್ಲ; ಅಪೋಜಿಷನ್ ಲೀಡರ್‌ಗೂ ಇಲ್ಲ. ಇಲ್ಲಿ ಕೆಲವು ನಿಯಮಗಳು ಇವೆ. ಅದರಂತೆ ಎಲ್ಲರೂ ನಡೆಯಬೇಕಾಗಿದೆ. ಈಗಾಗಲೇ ಈ ಪ್ರಶ್ನೆಗಾಗಿ ೮ ನಿಮಿಷ ಕಳೆದಿದ್ದೇವೆ. ಇನ್ನೂ ಒಂದು ಅಲ್ಪಕಾಲಾವಧಿಯ ಪ್ರಶ್ನೆ ಇದೆ. ಅದನ್ನು ತೆಗೆದುಕೊಳ್ಳುವ ಬಗ್ಗೆ ಪ್ರಶ್ನೆ ಹಾಕಬೇಕೆಂದು ಈಗಾಗಲೇ ಸಂಬಂಧಪಟ್ಟ ಸದಸ್ಯರನ್ನು ಕರೆದಿದ್ದೇನೆ. ಅದರಂತೆ ಅವರು ಪ್ರಶ್ನೆ ಹಾಕಿದ್ದಾರೆ. ಈ ಘಟ್ಟದಲ್ಲಿ ತಾವು ಅಷ್ಟು ಲಘುವಾಗಿ ನಾನು ಅಗೌರವ ತೋರಿಸಿದ್ದೇನೆಂದು ಮಾತನಾಡಬಾರದು. ನನಗೆ ನಿಮಗಿಂತಲೂ ಹೆಚ್ಚಿನ ಗೌರವ ಬೇರೆಯವರ ಬಗ್ಗೆ ಇದೆ. ಒಬ್ಬರಿಗೆ ಗೌರವ ಕೊಡುವ ಬಗ್ಗೆ ನಾನು ಇನ್ನೊಬ್ಬರಿಂದ ಹೇಳಿಸಿಕೊಳ್ಳುವ ಅವಶ್ಯಕತೆ ಇಲ್ಲ.

ಶ್ರೀ ವಾಟಾಳ್ ನಾಗರಾಜ್.— ಆದರೂ ಸಹ ತಾವು ಸರ್ಕಾರದವರಿಗೆ ಉತ್ತರ ಕೊಡಬಾರದು ಎಂದು ಹೇಳಿದ್ದು ಸರಿಯಲ್ಲ.

ಅಧ್ಯಕ್ಷರು.— ವಿರೋಧಪಕ್ಷದ ನಾಯಕರು ಚೇರ್‌ಗೆ ಪ್ರೊಟೆಸ್ಟ್ ಮಾಡಬಹುದೇ? ನನಗೆ ಪ್ರೊಟೆಸ್ಟ್ ಮಾಡಿದರೆ ಹೇಗೆ? ನನಗೆ ಎಲ್ಲರ ಬಗ್ಗೆಯೂ ಗೌರವವಿದೆ. ಆದ್ದರಿಂದ ತಾವು ದಯವಿಟ್ಟು ಕುಳಿತುಕೊಳ್ಳಿ.

FEES PAID TO ADVOCATES AND OTHERS CONNECTED WITH KRISHNA-GODAVARI WATER DISPUTES TRIBUNAL

6. Sri M. S. KRISHNAN (Malleswaram).— Will the Minister of State for Major Irrigation be pleased to state.—

(a) the stage at which the dispute in respect of sharing of waters of Krishna-Godavari is pending before the tribunal;

(b) the amount spent for the Advocates and others who are arguing the case of Mysore or assisting the Government (Details of the names and amounts spent on each person for this work before the Tribunal may be furnished);

(c) the action the Government has taken to expedite the matter ?

Sri H. N. NANJE GOWDA (Minister of State for Major Irrigation).— (a) (i) The final arguments of all the States regarding Krishna Water Disputes in respect of sharing of waters of river Krishna have been completed on 23rd August, 1973.

(ii) Regarding Godavari Water Disputes all the States have filed their statements of case and the rejoinders to the statements filed by the other States as also the documents. The case is not taken up till now by the Tribunal. The hearing of Godavari Water Disputes is to start from 10th of October 1973.

(b) Please see the Statement appended.

(c) Since the matter is before a Tribunal, the only action possible is to assist the Tribunal in expeditious disposal. This is being done.

STATEMENT

Showing the names of Legal Experts and Technical Consultants of Mysore State connected with the Krishna-Godavari Water Disputes Tribunals, and fee paid to them.

	Name of the Expert	Period for which the amount has been paid	
	Sriyuths :—		
1	M.K.Nambyar, Senior Counsel	May 69 to July 70	2,00,000
2	N. A. Subramanyam, Jr. Counsel	July 69 to July 70	41,500
3	T. Krishna Rao, Senior Counsel	July 70 to April 73	5,98,000
4	A. G. Holla, Junior Counsel	Sept. 70 to April 73	2,03,170
5	S. S. Javali, Junior Counsel	May 69 to July 73	2,14,800
6	K. G. Datar, Legal Adviser	May 69 to May 71	84,000
7	V. S. Malimath, Ex-Adv. Genl.	Nov. 69 to Feb. 70	55,000
8	H. C. Kalra, Tech. Consultant	July 69 to Feb. 70	34,922
9	P. R. Krishna Rao, Tech. Consultant	April 70 to Nov. 70	4,500
		Total Rs.	14,35,892

FEES PAID TO COUNSELS CONNECTED WITH KRISHNA GODAVARI WATTER DISPUTE TRIBUNAL

19. Sri H. T. KRISHNAPPA (Nagamangala).—Will the Minister of State for Major Irrigation be pleased to state:-

The expenditure incurred by Government in payment of legal fees for assisting the Tribunal constituted for resolving the Krishna-Godavari water dispute (names of the counsels and the amount paid to each of them may be furnished) ?

Sri H. N. NANJE GOWDA, (Minister of State for Major Irrigation).—

Sriyuths :

1	M. K. Nambyar	Rs.	2,00,000
2	N. A. Subramanyam	Rs.	41,500
3	T. Krishna Rao	Rs.	5,98,000
4	A. G. Holla	Rs.	2,03,170
5	S. S. Javali	Rs.	2,14,800
6	K. G. Datar	Rs.	84,000
7	V. S. Malimath	Rs.	55,000

ಇಲ್ಲಿ ಕೊಟ್ಟಿರುವ ಅಂಕಿ ಅಂಶಗಳಲ್ಲಿ ಟಿ. ಎ. ಮತ್ತು ಅದರ ಎಕ್ಸ್‌ಪೆನ್ಸನ್ನು ಸೇರಿಸಿಲ್ಲ. ಇಲ್ಲಿ ಕೊಟ್ಟಿರುವ ೧೪,೩೫,೮೯೨ ರೂಪಾಯಿಗಳ ಜೊತೆಗೆ ಟಿ. ಎ. ಮತ್ತು ಅದರ ಎಕ್ಸ್‌ಪೆನ್ಸಸ್‌ಗಾಗಿ ೮೬,೪೮೪ ರೂಪಾಯಿಗಳನ್ನು ಕೊಟ್ಟಿದೆ.

ಶ್ರೀ ಎಚ್. ಟಿ. ಕೃಷ್ಣಪ್ಪ.— ಕಳೆದ ಸಲ ನಾನು ಉಪ ಪ್ರಶ್ನೆಗಳನ್ನು ಹಾಕಿದಾಗ ಕೆಲವು ವಿವರಗಳು ಇಲ್ಲ ಎಂದು ಹೇಳಿದ್ದೀರಿ. ಅಂದು ನಾವು ಕೇಳಿದ ಉಪ ಪ್ರಶ್ನೆಗಳು ಏನೆಂದರೆ, ಈ ವಿವಾದ ನ್ಯಾಯಾಲಯಕ್ಕೆ ಯಾವಾಗ ಹೋಯಿತು. ಅಲ್ಲಿಂದ ಇಲ್ಲಿಯ ವರೆಗೆ ಎಷ್ಟು ಹಿಯರಿಂಗ ಆಯಿತು; ಯಾವ ಹಂತದಲ್ಲಿ ಈ ವ್ಯವಹಾರ ನಿಂತಿದೆ; ಯಾರು ಯಾರಿಗೆ ಯಾವ ಯಾವ ಆಧಾರದ ಮೇಲೆ ಎಷ್ಟೆಷ್ಟು ಹಣ ಪಾವತಿ ಮಾಡಿದ್ದೀರಿ ಮತ್ತು ಹಣವನ್ನು ದಿವಸದ ಆಧಾರದ ಮೇಲೆ ಪಾವತಿ ಮಾಡಿದ್ದಿರೋ ಅಥವಾ ತಿಂಗಳ ಆಧಾರದ ಮೇಲೆ ಪಾವತಿ ಮಾಡಿದ್ದಿರೋ ಎಂದು. ಆ ಬಗ್ಗೆ ಇಂದು ವಿವರಗಳು ಇದ್ದರೆ ಒದಗಿಸಬೇಕೆಂದು ಕೇಳಿ ಕೊಳ್ಳುತ್ತೇನೆ.

ಶ್ರೀ ಎಚ್. ಎನ್. ನಂಜೇಗೌಡ.— ಆ ವಿವರಗಳು ಈ ಕೆಳಕಂಡಂತೆ ಇದೆ:-

1. Sri Nambyar, Senior Counsel :

a) Period : 26-5-69 to 11-7-70
b) No. of working days .... 80 days
c) 40 days Bangalore and 40 days at Delhi.
d) Fee : Rs. 2,500/- per day.
e) T. A. and other allowances : Rs. 16,997/-

2. Sri Subramanyam, Junior Counsel :

a) Period : 1-7-69 to 11-7-70
b) Working days.... 83 days
c) 44 days at Bangalore and 39 days at Delhi.
d) Fee : Rs. 500 per day.
e) T. A. and other expenses : Rs. 8,261/-

3. Sri V. S. Malimath, Senior Counsel :

a) Period : 30 days
b) Fee : Rs. 1,500/- per day.
c) Fee for Reading and Scrutiny...
d) T. A. and other expenses .... Nil.

4. Sri T. Krishna Rao, Senior Counsel :

a) Period : 6-8-72 to 28-10-72
b) No. of working days : 382 days
c) Fee : Rs. 1,200/- per day.
d) No fee paid for his participation at Bangalore.
e) Fee for Reading and settlement of Pleadings Rs. 25,000/-
f) T. A. and other expenses ... Rs. 20,462/-

5. Sri A. G. Holla, Junior Counsel :

a) Period : 13-9-70 to 27-4-72
b) No. of working days : 359 days
c) Fee : Rs. 500/- per day.
d) Daily Allowances : Rs. 25/- per day outside Bangalore.
e) T. A. and other expenses : Rs. 17,940/-

6. Sri K. G. Datar, Special Officer and Legal Consultant, Retired Judge of Bombay High Court and Member of Law Commission :

a) Period : 8-5-69 to 7-5-71.
b) Fee : Monthly Allowance of Rs. 3,500/- per month.
c) T. A. and other charges : Rs. 3,547/-.

7. Sri H. C. Kalra, Technical Consultant, Retired Chief Engineer, Punjab and Retired Joint Secretary, Government of India, Retired Commissioner, Indus Water Treaty :

a) Fee: Rs. 250/- per day with a minimum Retainer of Rs. 1,500/- per month and not exceeding Rs. 6000/- per month including the Retainer Fee.
b) T. A. and other expenses : Rs. 10,551/-
c) Period : July 1969 to February 1970.

8. Sri P. R. Krishna Rao, Technical Consultant who was Director-General of Observatories :

a) Period : 30 days
b) Fee : Rs. 150/- per day
c) T. A. and other charges : Nil.
d) Consultant at Bangalore only.

ಶ್ರೀ ಎಚ್. ಟಿ. ಕೃಷ್ಣಪ್ಪ.— ಈ ವಕೀಲರ ಸೇವೆಯನ್ನು ಪಡೆಯುವಾಗ ಕನ್‌ಸಲ್‌ಟೇಷನ್‌ಗೆ ಬೇರೆ ಫೀಜು ಮತ್ತು ಕೋರ್ಟಿನಲ್ಲಿ ಎಷ್ಟು ದಿವಸಗಳ ಸೇವೆಯನ್ನು ಮಾಡಿರುತ್ತಾರೋ ಆ ಸೇವೆಗೆ ಬೇರೆ ಫೀಜು ಎಂದು ಬೇರೆಬೇರೆಯಾಗಿ ಕೊಟ್ಟಿದ್ದೀರೋ ಅಥವಾ ಎಲ್ಲವನ್ನು ಸೇರಿಸಿ ಒಟ್ಟಿಗೆ ಕೊಟ್ಟಿದ್ದೀರೋ?

ಶ್ರೀ ಎಚ್. ಎನ್. ನಂಜೇಗೌಡ.— ಅದಕ್ಕೆ ಗೌರ್ನಮೆಂಟ ಆರ್ಡರ ಇದೆ; ಅದರ ಪ್ರಕಾರ ಕೊಟ್ಟುಕೊಂಡು ಬಂದಿದ್ದೇವೆ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಅವರನ್ನು ಕನ್‌ಸಲ್‌ಟೇಷನ್ನಿಗಾಗಿ ಏನು ಉಪಯೋಗ ಮಾಡಿಕೊಳ್ಳುತ್ತೀರಿ ಅದೂ ಸಹ ವರ್ಕಿಂಗ ಡೇಸ್‌ನಲ್ಲಿ ಬರುತ್ತದೆಯೋ?

ಶ್ರೀ ಎಚ್. ಎನ್. ನಂಜೇಗೌಡ.— ಅವರು ಎಷ್ಟು ದಿವಸ ಕೆಲಸ ಮಾಡಿದ್ದಾರೋ, ಅದನ್ನು ಗಣನೆಗೆ ತೆಗೆದುಕೊಂಡು ಕೊಟ್ಟಿದ್ದೇವೆ.

ಶ್ರೀ ಬಿ. ವಿ. ಕಕ್ಕಿಲ್ಲಾಯ — ಈ ಲಾಯರ್‌ಗಳಿಗೆ ಕೊಡುವ ಪಗಾರ ಏನಿದೆ, ಇದಕ್ಕೆ ಏನಾದರು ನಿಯಮಗಳು ಇವೆಯೇ? ಅಥವಾ ಲಾಯರ್‌ಗಳ ಹತ್ತಿರ ಮಂತ್ರಿಗಳು ಮಾತನಾಡಿ ಒಂದೊಂದು ಕೇಸನಲ್ಲಿ ಬೇರೆ ಬೇರೆ ರೀತಿಯ ಫೀಯುಸು ಏನಾದರು ಕೊಟ್ಟುಕೊಂಡು ಬರಲಾಗಿದೆಯೇ ಹೇಗೆ? ಅಂದರೆ ಅವರು ಕೇಳಿದಷ್ಟು ಫೀಯನ್ನು ಕೊಡುವುದಕ್ಕೆ ಏನಾದರು ನಿಯಮವಿದೆಯೇ?

ಶ್ರೀ ಎಚ್. ಎನ್. ನಂಜೇಗೌಡ.— ಇವರನ್ನು ಹಿಂದೆಯೇ ನೇಮಕ ಮಾಡಿದ್ದಾರೆ. ಅದಕ್ಕೆ ಸರ್ಕಾರದ ಹುಕುಂ ಆಗಿತ್ತು. ಶ್ರೀ ನಂಬಿಯಾರ್ ವಿಷಯಕ್ಕೆ ಮೊದಲೇ ತೀರ್ಮಾನವಾಗಿದೆ. ಅದಕ್ಕೆ ಸರ್ಕಾರೀ ಆಜ್ಞೆಯಾಗಿತ್ತು. ಅದರ ಪ್ರಕಾರ ಶುಲ್ಕ ಕೊಡಲಾಗಿದೆ. ಸುಪ್ರೀಂ ಕೋರ್ಟಿನಲ್ಲಿ ಇವರು ವಾದ ಮಾಡಿದರೆ ಏನು ಶುಲ್ಕ ಕೊಡಲಾಗುತ್ತದೋ ಅದರ ಒಂದು ಆಧಾರದಮೇಲೆ ಇಲ್ಲಿಯೂ ಸಹ ಮಾಡಲಾಗಿದೆ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಇದರಲ್ಲಿ ತಾವು ಹೇಳಿರುವಂತೆ ಒಂಭತ್ತು ಜನ ವಕೀಲರನ್ನು ನೇಮಕ ಮಾಡಿಕೊಂಡು ಸುಮಾರು ೧೪ ಲಕ್ಷ ರೂಪಾಯಿಗಳಷ್ಟು ಹಣ ಖರ್ಚು ಮಾಡಿದ್ದೀರಿ. ಇಷ್ಟು ಜನರ ಸೇವೆ ಅವಶ್ಯಕವಾಗಿತ್ತೆ? ಎರಡನೇದು ಈಗಾಗಲೇ ಕೃಷ್ಣ ನದಿ ವ್ಯವಹಾರ ಮುಗಿದಿದೆ, ಇದರಲ್ಲಿ ಫೈನಲ್ ಆರ್‌ಗ್ಯುಮೆಂಟು ಕೂಡ ಆಗಿದೆ. ಇನ್ನು ಗೋದಾವರಿ ಟ್ರಿಬ್ಯೂನಲ್ ಇನ್ನೂ ಬೆಳಕೇ ಕಂಡಿಲ್ಲ, ಕೃಷ್ಣ ನದಿ ವ್ಯವಹಾರಕ್ಕೆ ಕೊಟ್ಟಂತೆ ಗೋದಾವರಿ ನದಿಯ ವ್ಯವಹಾರಕ್ಕೂ ಹಣ ಕೊಟ್ಟಿದ್ದೀರಾ ಇದರ ವಿವರಗಳನ್ನು ಕೊಡುತ್ತೀರಾ ?

ಶ್ರೀ ಎಚ್.ಎನ್.ನಂಜೇಗೌಡ.—ಇದರಲ್ಲಿರುವ ಒಂಭತ್ತು ಜನರೂ ಲಾಯರುಗಳಲ್ಲ. ಇದರಲ್ಲಿ ತಾಂತ್ರಿಕ ತಜ್ಞರು ಮತ್ತು ರಿಟೈರಾದವರೂ ಇದ್ದಾರೆ. ಇವರೆಲ್ಲರ ಸಹಾಯ ಬೇಕೆಂದು ಆಗ ಒಂದು ತೀರ್ಮಾನ ಮಾಡಲಾಗಿತ್ತು ಮತ್ತು ಅವರು ಮಾಡಿರುವ ಸೇವೆಗಾಗಿ ಸರಕಾರದ ಆರ್ಡರುಗಳಂತೆ ಹಣವನ್ನು ಅವರಿಗೆ ಸಲ್ಲಿಸಲಾಗಿದೆ.

ಶ್ರೀ ಟಿ. ಎಂ. ಮಂಜುನಾಥ.—ಇದರಲ್ಲಿ ವರ್ಕಿಂಗ್ ಡೇಸ್ ಎಂದು ಹೇಳಿದ್ದೀರಿ. ಇದನ್ನು ಹೇಗೆ ನಿರ್ಧಾರ ಮಾಡುತ್ತೀರಿ ?

ಶ್ರೀ ಎಚ್. ಎನ್. ನಂಜೇಗೌಡ.— ೨೫-೫-೧೯೬೯ ರಿಂದ ೧೧-೭-೧೯೭೦ರ ವರೆಗೆ ಎಂಭತ್ತು ದಿವಸಗಳು ಅವರು ಟ್ರಿಬ್ಯೂನಲ್‌ನಲ್ಲಿ ಕೆಲಸ ಮಾಡಿದರು, ಅದಕ್ಕನುಸಾರವಾಗಿ ಅವರಿಗೆ ಹಣವನ್ನು ಸಲ್ಲಿಸಲಾಗಿದೆ.

ಶ್ರೀ ಕೆ.ಎನ್. ವೀರಪ್ಪಗೌಡ.—ಈ ಕೇಸಿನ ಕೆಲಸಗಳಿಗಾಗಿ ಲಾಯರುಗಳನ್ನು ನೇಮಕ ಮಾಡಿರುವುದು ನಮ್ಮ ಸರಕಾರ ಬಂದ ಮೇಲೆ ಮಾಡಲಾಗಿತ್ತೋ ಇಲ್ಲವೆ ಇದಕ್ಕೆ ಮೊದಲು ಇದ್ದ ಸರಕಾರ ಮಾಡಿತ್ತೋ ?

ಶ್ರೀ ಡಿ. ದೇವರಾಜ ಅರಸ.—ಎರಡು ವಿಚಾರ ಇದರಲ್ಲಿದೆ, ಇತ್ತೀಚೆಗೆ ಬಂದಿರುವ ಸರಕಾರ ಯಾವ ನೇಮಕವನ್ನೂ ಮಾಡಲಿಲ್ಲ, ಹಿಂದೆ ಯಾರನ್ನೂ ನೇಮಕ ಮಾಡಿದ್ದರೋ ಅವರನ್ನೇ ನಾವೂ ಮುಂದುವರಿಸಿಕೊಂಡು ಬರುತ್ತಿದ್ದೇವೆ ಮತ್ತು ಆಗ ಏನು ಇದರ ಬಗ್ಗೆ ಒಂದು ಟರ್ಮ್ಸ್ ಅಂಡ್ ಕಂಡೀಷನ್ಸನ್ನು ನಿಗದಿಮಾಡಿತ್ತೋ ಅದರಂತೆ ಇವರನ್ನು ನೇಮಕ ಮಾಡಿಕೊಳ್ಳಲಾಗಿದೆ, ಅದರಂತೆ ಕೆಲಸಗಳು ನಡೆಯುತ್ತಿವೆ. ಎರಡನೆಯ ವಿಚಾರ ನನಗೆ ತಿಳಿದಿರುವ ಹಾಗೆ ಇದರಲ್ಲಿ ಖರ್ಚು ಮಾಡಿರತಕ್ಕದ್ದು ಮತ್ತು ದುಡ್ಡು ಕೊಟ್ಟಿರತಕ್ಕದ್ದು ಅಷ್ಟೇನೂ ಹೆಚ್ಚಲ್ಲ. ಇದಕ್ಕಿಂತ ಸುಲಭವಾಗಿ ಫೀಸುಗಳನ್ನು ಪಡೆದು ಈ ಕೇಸುಗಳನ್ನು ನಡೆಸಲು ಸಿದ್ಧರಾಗಿರತಕ್ಕ ವಕೀಲರಿದ್ದಾರೆ ಎಂದು ಯಾರೂ ಇದುವರೆಗೆ ಮುಂದೆ ಬಂದು ಪ್ರೂವ್ ಮಾಡಿಲ್ಲ. ಇತರ ಕೇಸುಗಳಲ್ಲಿ ಕೊಟ್ಟಿರುವುದಕ್ಕೂ ಇಲ್ಲಿ ಕೊಟ್ಟಿರುವ ಹಣದ ಪ್ರಮಾಣವನ್ನೂ ಹೋಲಿಕೆ ಮಾಡಿದರೆ ಇಲ್ಲಿ ನಾವು ಕೊಟ್ಟಿರುವುದು ಅಷ್ಟು ಹೆಚ್ಚೇನಲ್ಲ.

ಅಧ್ಯಕ್ಷರು.—ಇಲ್ಲಿಗೆ ಪ್ರಶ್ನೋತ್ತರ ವೇಳೆಯಾಯಿತು.

Questions for Answers on the Day (but not taken up)

FUEL STACKED AT TARIKERE RAILWAY STATION

269. Sri. HANJI SHIVANNA (Tarikere).—

Will the Minister for Agriculture and Forests be pleased to state :—

(a) the number of years since the fuel stacked at Tarikere Railway yard has been lying;

(b) the reasons for the same;

(c) whether some portion of it has been destroyed;

(d) the loss sustained by Government due to this?

Sri K. H. PATIL (Minister for Agriculture and Forests).

(a) Since about 8 (eight) years.

(b) On 6th August 1965 the fuel stacked at Railway station yard, Tarikere was seized on information that it contained billets of species not released to the contractor and the quantity was more than that according to the transit passes. The case was filed before the Munsiff Magistrate, Tarikere and it was ordered by the Court to release the fuel on 18th April 1970. The contractor has not removed it so for.

(c) In view of the Court order the Department has nothing to do.

(d) Does not arise in view of the reply to clause (c).

UNAUTHORISED CULTIVATION OF GOVERNMENT LAND IN DAVANAGERE

370. Smt. NAGAMMA C. KESHAVAMURTHY (Davanagere).—Will the Minister for Revenue be pleased to state :—

(a) the number of applications received by the Tahsildar, Davanagere, in connection with unauthorised cultivation of Government land;

(b) the action taken by him on those applications;

(c) the time within which decision on those applications would be taken?

Sri N. HUTCHAMASTHY GODWA (Minister for Revenue).—

(a) 361 Applications were received by the Assistant Commissioner, Davanagere from May 1972. The Assistant Commissioner is the officer empowered to regularise unauthorised occupation of land.

(b) 352 applications have been rejected as none of the applicants were cultivating the land prior to 1st July 1968.

(c) The remaining nine applications will be disposed of within three months.

CALLING ATTENTION TO MATTER OF URGENT PUBLIC IMPORTANCE

Re : El phant menace to Arasalu and Maleshankar forest Range.

Sri S. M. SHEERNALY CHANDRASHEKAR (Hosnagara).—I call the attention of the Hon. Minister for Agriculture and Forests to the elephant menace in Arasalu and Maleshankar forest range in Shimoga District.

Sri K. H. PATIL. (Minister for Agriculture and Forests).

I state as follows:

The Arasalu, Maleshankar and Sacrebyle area is a continuous belt of rich forests. There are isolated patches of cultivations within these forests as also in the immediate fringe. It is inevitable that in such cases wild life, including Elephants, occasionally stray into the fields. It is for the agriculturists to take action to scare away the wild life straying into their fields as is commonly adopted in the Mysore, Kollegal belt.

A wild Elephant had caused damage in this area, particularly in fields growing, Banana and Sugarcane and in Arecanut and Cocoanut gardens. The damage, according to the villagers; is reported to be around Rs. 5,000/- to Rs. 6,000/-. The elephant had not, at any stage, attacked the villagers.

The Forest Department on receipt of information regarding damage to fields had tried to capture this Tusker by pit method. This was not successful. It is now found that this elephant is quite docile and is moving about freely with the Departmental elephants. Further attempts to capture it are in progress. However, the Forest staff do not anticipate any violence from this elephant.

It has been reported very recently that the Forest Department has already captured this elephant on 15-9-1973 and there are some other elephants *which are* also causing damage and steps are being taken to capture them.

There is a proposal to sanction certain staff during the agricultural season for the specific purpose of scaring away the elephants. This is under consideration.

I request the honourable members to bear with me on this subject. Damage to agriculture crop in the natural elephant tracts is not anything new. The solution lies is taking precautions and in scaring the elephants away when they threaten agricultural fields and not in destroying the elephants.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಸ್ವಾಮಿ, ತಾವು ಹೇಳಿರುವ ಅಂಶಗಳೆಲ್ಲ ಸತ್ಯವಾದುದು, ಇದಕ್ಕಾಗಿ ನಾನು ಸರಕಾರವನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಈ ಆನೆ ಹಾವಳಿಯಿಂದ ನೂರಾರು ರೈತರಿಗೆ ತೊಂದರೆಯಾಗಿದೆ, ಮತ್ತು ಇವರಿಗೆ ಯಾವ ಬೆಳೆ ಕೂಡ ಬರಲಿಲ್ಲ. ಈ ಏರಿಯಾದಲ್ಲಿ ಎಂದೂ ಆನೆ ಹೀಗೆ ಬಂದು ತೊಂದರೆ ಮಾಡಿರಲಿಲ್ಲ. ಈ ಸಾರಿ ಈ ಆನೆಯನ್ನು ಹಿಡಿದು ರೈತರಿಗೆ ಅನುಕೂಲ ಮಾಡಿದ್ದಾರೆ. ಇದರಲ್ಲಿ ತೊಂದರೆಗೆ ಸಿಕ್ಕಿರುವ ರೈತರಿಗೆ ಸರಕಾರ ಏನಾದರೂ ಪರಿಹಾರ ಕೊಡುವ ವ್ಯವಸ್ಥೆ ಮಾಡುತ್ತ ದೆಯೇ? ಮತ್ತು ಇಲ್ಲಿರುವ ರೇಂಜ್ ಫಾರೆಸ್ಟು ಅಧಿಕಾರಿಗಳು ಹಾಗೂ ಅವರ ಸಿಬ್ಬಂದಿಯವರು ಬಹಳ ಕಷ್ಟಪಟ್ಟು ಧೈರ್ಯದಿಂದ ಈ ಆನೆ ಹಿಡಿದಿರುವುದಕ್ಕಾಗಿ ಅವರಿಗೆ ಏನಾದರೂ ಬಹುಮಾನಗಳನ್ನು ಕೊಡುವ ವ್ಯವಸ್ಥೆ ಮಾಡುತ್ತಾರೆಯೇ?

ಶ್ರೀ ಕೆ. ಎಚ್. ಪಾಟೀಲ.—ವೈಲ್ಡ್ ಲೈಫನ್ನು ನಾಶ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲ. ಸ್ವಾಭಾವಿಕವಾಗಿ ನಾಶವಾಗಿರುವ ಕಡೆಗಳಲ್ಲಿ ಸರಕಾರ ಯಾವ ಪರಿಹಾರವನ್ನೂ ಕೊಡಲು ಸಾಧ್ಯವಿಲ್ಲ.

(ಶ್ರೀ ಕೋಣಂದೂರು ಲಿಂಗಪ್ಪ, ಶ್ರೀ ಕಾಗೋಡು ತಿಮ್ಮಪ್ಪ ಮತ್ತು ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ ಎಲ್ಲರೂ ಒಟ್ಟಿಗೆ ಎದ್ದುನಿಂತು ಹೇಳಲು ಆರಂಭಮಾಡಿದರು.)

ಶ್ರೀ ಕೋಣಂದೂರು ಲಿಂಗಪ್ಪ.—ಆನೆಯನ್ನು ಕೊಲ್ಲಬಾರದು ಎಂದು ಹೇಳಿದರೂ ಇಲ್ಲಿರುವ ಆನೆಯನ್ನು ಗುಂಡಿಕ್ಕಿ ಕೊಂದಿದ್ದಾರೆ. ಇಲ್ಲಿನ ರೈತರು ಕೊಟ್ಟಿರುವ ಅರ್ಜಿಯನ್ನು ತಮ್ಮ ಮೂಲಕ ಸರಕಾರಕ್ಕೆ ಕಳುಹಿಸುತ್ತೇನೆ. ಇದರಲ್ಲಿ ಎಲ್ಲ ವಿವರಗಳು ಸಿಗುತ್ತವೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಮಾನ್ಯ ಸದಸ್ಯರು ಆಪಾದನೆ ಮಾಡುವುದು ಸತ್ಯಕ್ಕೆ ದೂರವಾದುದು, ಇದು ಸುಳ್ಳು.

ಶ್ರೀ ಕೋಣಂದೂರು ಲಿಂಗಪ್ಪ.—ಅದನ್ನು ಅಲ್ಲಿ ಗುಂಡಿಟ್ಟು ಕೊಂದಿದ್ದಾರೆ. ಸಾವಿರ ಜನರ ಸಾಕ್ಷಿ ಬೇಕಾದರೂ ಕೊಡುತ್ತೇವೆ.

ಶ್ರೀ ಕೆ. ಹೆಚ್. ಪಾಟೀಲ.—ಸದನದಲ್ಲಿ ಈ ರೀತಿ ವಾದ ವಿವಾದ ಮಾಡುವುದು ಬೇಡ. ಕಾಡುಗಳನ್ನು ಯಾವ ಪ್ರಾಣಿಯೇ ನಾಶ ಮಾಡಲಿ ಅವುಗಳನ್ನು ತಡೆಗಟ್ಟಬೇಕು. ಇದರಲ್ಲಿ ಕೊಲ್ಲುವುದಕ್ಕೆ ಸಾಧ್ಯವಿಲ್ಲ, ಜನರಿಗೆ ತೊಂದರೆಯಾಗುತ್ತಿದ್ದರೂ ಅಂತಹ ಪ್ರಾಣಿಗಳನ್ನು ಸಹ ಕೊಲ್ಲಬಾರದು ಎಂದು ತಿಳುವಳಿಕೆ ಕೊಡಲಾಗಿದೆ. ಆದರೆ ಅನಿವಾರ್ಯವಾಗಿ ಹೆಚ್ಚು ಜನರಿಗೆ ತೊಂದರೆ ಕೊಟ್ಟು ಬೆಳೆಗಳನ್ನು ನಾಶ ಮಾಡುವುದಾಗಿದ್ದರೆ ಆಗ ಅಂತಹ ಪ್ರಾಣಿಗಳನ್ನು ಮಾತ್ರ ಕೊಲ್ಲಬೇಕೆಂದು ತಿಳಿಸಲಾಗಿದೆ. ಇದರಲ್ಲಿ ಕೇಂದ್ರ ಸರಕಾರವೇ ಆಗಲೀ ಇಲ್ಲವೆ ರಾಜ್ಯ ಸರಕಾರವೇ ಆಗಲೀ, ಆನೆಯನ್ನಾಗಲೀ ಅಥವಾ ಬೇರಾವ ಪ್ರಾಣಿಗಳನ್ನಾಗಲಿ

ಕಾಡುಗಳಲ್ಲಿ ನಾಶಮಾಡಲು ಅವಕಾಶ ಕೊಡುವುದಿಲ್ಲ. ಕಾಡುಗಳನ್ನು ಸಂರಕ್ಷಣೆ ಮಾಡಲು ಎಲ್ಲ ಕಾರ್ಯಕ್ರಮಗಳನ್ನೂ ತೆಗೆದಕೊಳ್ಳುತ್ತೇವೆ. ಮತ್ತು ಇದರ ಬಗ್ಗೆ ಹೆಚ್ಚಿಗೆ ಬೆಳೆ ನಾಶವಾಗಿದೆ ಎಂದರೆ ಅದರ ಬಗ್ಗೆ ತನಿಖೆ ಮಾಡೋಣ, ಇಲ್ಲಿ ಹೀಗೆ ವಾದ ವಿವಾದ ಮಾಡುವುದು ಬೇಡ.

(ii) Re : Mal-administration prevailing in M. S. R. T. C. Division, Gulbarga.

Sri D. B. KALMANKAR (Afzalpur).—I call the attention of the Hon. Minister for Labour to the mal-administration prevailing M. S. R. T. C. Division, Gulbarga.

Sri AZEEZ SAIT (Minister for Labour).—I state as follows :

Gulbarga Division is operating 136 schedules and a daily Kilometrage of about 32,000 K. Ms. To operate 136 schedules, the Division holds 179 vehicles in the Division and 21 vehicles in the Regional Workshops, i. e., the Division holds 200 vehicles as against the authorised strength of 163, thus holding 37 vehicles in excess. The vehicle position of Gulbarga Division is, therefore, reported to be satisfactory.

2. Regarding breakdowns and the rate of breakdowns per 10,000 Kms. pertaining to Gulbarga Division the following figures reveal that it is very much less than the average of 0-85 break down per 10,000 Kms. Actually in the month of June 1973 it was as low as 0.30 B. D. per 10,000 Kms.

Particulars.	Jan. 73.	Feb.	March	April	May	June 73.
a) Total B/D	21	20	30	17	22	28
b) Rate per 10,000 Kms.	0.14	0.15	0.21	0.19	0.22	0.30

3. It is true that there have been instances of cancellation of services for various reasons. Services have been cancelled on account of slack traffic, bad road

condition, occassional shortage of vehicles, breaching of the Roads and torrential rains. These cancellations have been only to the extent of 2,000 Kms. per day which works out to 6.2% of the scheduled Kilometres to be operated. Cancellations due to unprecedented rains in Gulbarga area where cause-ways have been washed out or over-flowing of cause-ways or breaching of roads, could not be avoided. A statement showing the cancellation of services in Afzlapur pocket during July 1973 is enclosed herein. It may be seen that most of the cancellations were due to causes which were beyond the control of the administration.

4. With regard to the alleged mal-administration, corruption, etc., unless specific instances are pointed out, no detailed remarks can be offered. However it may be stated that wherever such irregularities are reported necessary disciplinary action is taken. A statement showing the disciplinary cases instituted since July 1972 is enclosed herein. This proves that the administration is vigilent and stern action is taken against the delinquents.

5. With regard to the irregularity of services, it is true that there is scope for improvement from the present 72%. Unfortunately this irregularity is reported to be mostly due to bad road condition, want of crew and vehicle shortages occasionally on certain routes.

It may be stated that the Vice-Chairman inspected the Division during July 1973 and while reviewing the punctuality of services, during the course of his address to the workers, representatives, he emphasised the need for improving the punctuality. The representatives of the workers assured that they would educate the workers with regard to the punctuality and earnings.

Statement I.

Cancellations of services in Afzalpur Pocket During July 1973.

Date	Schedule Timings.	Route	Reasons for Cancellation
1	2	3	4
1-7-73	1505, 1950, 2040, 2200, 0845, 1025, 1135 & 1845.	Ghanagapur Stn.	Cancelled due to Goddur Nala Washed out.
1-7-73	1700, 1730, 0930, 0950, 1700 & 1730	GNP. STN-Nimberga	Due to Bus Failure
1-7-73	1800 & 0615	Gulbarga-Afzalpur GNP. Stn.-Afzalpur	Cancelled due to overflow of nala.
1-7-73 to 31-7-73	0730 & 1015	Afzalpur-Akkalkot	Cancelled due to bad road & cutcha and breaches in the culverts.
2-7-73	0700 & 1800	Afzalpur-Mannur	Due to Goddur Nala Washed out.
2-7-73 & 3-7-73	1300 & 1745	Gulbarga-GNP-Town (Operated *via* Gobbur)	-do-

1	2	3	4
2-7-73 & 3-7-73	1800 & 0615	Gulbarga-Afzalpur GNP. STN-Afzalpur (Operated *via* Gobbur)	Cancelled due to heavy rain. But operated GLB AFZ *via* Gobbur.
2-7-73 & 3-7-73	1700, 1730, 0930, 0950 1700, 1730	GNP. Stn.-Nimberga	Cancelled due to slushi and heavy rains.
6-7-73 & 7-7-73	1100 & 1615	GLB.-Mannur (Operated upto Mashal)	Cancelled due to cutcha Road from Mashal to Mannur.
12-7-73 to 25-7-73	1100 & 0615	Gulbarga-Mannur (Operated upto Mashal).	-do-
7-7-73	0700 & 1800	Afzalpur-Mannur (Operated upto Mashal)	-do-
8-7-73	1100 & 1615	Gulbarga-Mannur	-do-
9-7-73 to 24-7-73	0700 & 1800	Afzalpur-Mannur (Operated upto Mashal)	-do-

1	2	3	4
1-7-73	1600 & 0810	Gulbarga-Udchan (operated via Gabbur)	Due to Guddur Nala washed away.
16-7-73 & 24-7-73	0530 & 0640	GNP-STN-Town	Due to bus failure for tyre puncture.
14-7-73	1730 & 1100	Gulbarga-Hubli (upto Jamkhandi)	Due to nala over-flows and water flodded on the road.
16-7-73 to 22-7-73	1700 & 1100	Gulbarga-Hubli	-do-
20-7-73	0700 & 1800	Afzalpur-Mannur	Due to heavy rains overflow of nala of Gaddur.
29-7-73	0730 & 1530	Afzalpur-Kolali	Due to bus failed at Afzalpur.
30-7-73	0930	Gulbarga-Ghanagapur	Due to bus failure.
30-7-73	1350	-do-	-do-

Statement. II

STATEMENT SHOWING THE DISCIPLINARY ACTION TAKEN

Month.	Suspension	Termination	Fined	Warned	Recovery	Stoppage of increments.
July 72	7	2	1	138	1	—
August ,,	29	—	9	138	22	—
Sept. ,,	76	2	34	44	—	1
October ,,	88	—	32	44	—	—
November ,,	60	—	27	31	5	—
December ,,	54	—	64	45	11	—
January 73	82	—	91	56	2	—
February ,,	54	6	61	14	39	—
March ,,	39	5	73	31	25	1
April ,,	45	—	47	61	—	—
May ,,	45	—	37	21	7	—
June ,,	27	3	33	41	7	—
July ,,	27	—	21	33	—	—

Shri D. B. KALMANKAR.— May I know whether the Government agrees with the number of vehicles available are not adequate and that the majority of vehicles are not in good condition ?

Shri AZEEZ SAIT.—This is too a general question based by the hon. Member. In every division, th y have got adequate buses. For instance, in Gulbarga Division, there are 36 buses in excess. I have given to the hon. Member the causes for the break down. In as many as 9 instances the cause of break down was over-flow of nala which was washed out at Gaddur. But there are 36 excess buses.

Shri D.B.KALMANKAR.— In the list furnised for July, 1973, about 60 schedules have been cancelled out of which 15 to 20 are due to bus failure. It is quite evident from the list that is furnished with reference to Afzalpur. Is it not clear from this that the bus service is not satisfactory and complaints are also made by the public in this respect.

Shri AZEEZ SAIT.— Wherever complaints have been made, they have been attended to and I still hold that the Division is not short of buses. It is a fact that some old buses are there which we are trying to replace by new one's.. Till such time, these difficulties must have to be experienced. At the same time, I do not accept that there was shortage of buses.

Re : Disposal of valuable articles belonging to the Mysore Palace.

Shri KAGODU THIMAPPA (Sagara).— I call the attention of the Chief Minister regarding disposal of certain valuable articles belonging to the Mysore Palace.

Shri D.DEVARAJ URS (Chief Minister).— Madam I make the folowing statement :

Information was received on 26-8-1973 that arrangements were being made to remove certain articles from the Mysore Palace to Cochin for transhipment to Austrlia. It was stated that these articles were valuable articles of the Palace and they had been sold to a foreigner.

To ensure proper verification, immediate instructions were issued not to remove the articles.

Subsequently, the details of the articles involved were obtained. It was found that they included old coaches with harness, old howdahs, furniture, chandeliers, etc. Careful examination revealed that none of these articles was part and parcel of the Palace or may be regarded as antiquities and that on the other hand they were the personal property of the ex-ruler. In view of this, no objection could be taken regarding them. Hence the earlier instructions were revoked.

ಶ್ರೀ ಕಾಗೋಡು ತಿಮ್ಮಪ್ಪ.—ಸ್ವಾಮಿ, ಅವು ಉಪಯುಕ್ತವಾದಂಥ ಸಾಮಾನುಗಳಲ್ಲಾ ಎನ್ನುವ ಕಾರಣಕ್ಕಾಗಿ ಅದರ ಮೇಲೆ ಕ್ರಮ ಕೈಗೊಳ್ಳಲಿಲ್ಲ ಎಂದು ಹೇಳಿದರು. ಪರದೇಶದವರು ಆ ವಸ್ತುಗಳನ್ನು ತೆಗೆದುಕೊಂಡು ಹೋಗಬೇಕಾದರೆ ಅವು ಬಹುಶಃ ಉಪಯುಕ್ತವಾದ ವಸ್ತುಗಳೇ ಆಗಿರಬೇಕೆಂದು ಅದರಿಂದ ಗೊತ್ತಾಗುತ್ತದೆ. ಬೇರೆಯವರು ಖರೀದಿ ಮಾಡಿಕೊಂಡು ಹೋಗುವುದಕ್ಕೆ ಬದಲಾಗಿ ನಮ್ಮ ಸರ್ಕಾರದವರೇ ಖರೀದಿ ಮಾಡಿ ಮ್ಯುಜಿಯಂನಲ್ಲಿ ಇಡುವುದಕ್ಕೆ ಏತಕ್ಕೆ ಪ್ರಯತ್ನ ಮಾಡಲಿಲ್ಲ? ಅವು ಹಳೆಯ ರಾಜರವರಿಗೆ ಸೇರಿದ ಸಣ್ಣ ವಸ್ತುಗಳು ಆಗಿರಬಹುದು. ಅವು ಮ್ಯುಜಿಯಂನಲ್ಲಿ ಇಡುವುದಕ್ಕೆ ಉಪಯುಕ್ತವಾದಂಥ ವಸ್ತುಗಳೆಂದು ಅದರಿಂದ ಸಾಬೀತು ಆಗುತ್ತದೆ. ಬೇರೆಯವರಿಗೆ ಕೊಡುವುದಕ್ಕೆ ಬದಲಾಗಿ ನಾವೇ ಇಟ್ಟುಕೊಳ್ಳಬೇಕಾಗಿತ್ತು. ನಮ್ಮಲ್ಲಿ ಬೇಕಾದಷ್ಟು ಮ್ಯುಜಿಯಂ ಇವೆ. ಜಿಲ್ಲಾ ಹೆಡ್ ಕ್ವಾರ್ಟರ್ಸ್‌ಗಳಲ್ಲಿ ಮ್ಯುಜಿಯಂ ಮಾಡುವ ಉದ್ದೇಶ ಕೂಡ ಇದೆ. ಆದುದರಿಂದ ಆ ವಸ್ತುಗಳನ್ನು ಏತಕ್ಕೆ ಸರ್ಕಾರದವರು ಕೊಂಡುಕೊಳ್ಳುವುದಕ್ಕೆ ಪ್ರಯತ್ನ ಮಾಡಲಿಲ್ಲ? ಅದನ್ನು ರಾಜ್ಯದ ಹಿತದೃಷ್ಟಿಯಿಂದ ಬಿಟ್ಟುಕೊಟ್ಟಿರುವುದು ಅನ್ಯಾಯವಾಗಲಿಲ್ಲವೇ?

ಶ್ರೀ ಡಿ. ದೇವರಾಜ ಅರಸ್.—ಒಂದು ರೀತಿಯಲ್ಲಿ ನಾವೇ ಇಟ್ಟುಕೊಳ್ಳುವುದು ಒಳ್ಳೆಯದೆಂದು ಮಾನ್ಯ ಸದಸ್ಯರು ಹೇಳುವ ಅಭಿಪ್ರಾಯವನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದು ನಮಗೆ ಗೊತ್ತಾಗಲಿಲ್ಲ. ಅಷ್ಟು ಹೊತ್ತಿಗೆ ಅವರು ಮಾರಾಟ ಮಾಡಿದ್ದರು. ನಮಗೆ ಗೊತ್ತಾದ ಮೇಲೆ, ಸ್ಟೇಟಿಗೆ ಸಂಬಂಧಪಟ್ಟ ಪ್ರಾಪರ್ಟಿಯೋ ಅಥವಾ ಆಂಟಿಕ್ವಿಟಿ ಆಗುತ್ತದೆಯೋ ಎಂದು ನೋಡಿಸಿದೆವು. ಕಾನೂನು ಪ್ರಕಾರ ನಮಗೆ ಹಿಡಿಯುವುದಕ್ಕೆ ಕಾನೂನು ಇಲ್ಲ. ಎಂಥ ಸಾಮಾನುಗಳನ್ನು ಕಳುಹಿಸಿದ್ದಾರೆ ಎಂದು ನೋಡಿದಾಗ ಅವರು ಅಧಿಕಾರಿಗಳಿಗೆ ತೋರಿಸಿದ ಮೇಲೆ ೩ ಲಕ್ಷ ಚಿಲ್ಲರೇಗೆ ಅವರು ಮಾರಾಟ ಮಾಡಿದ್ದರು ಎಂದು ಗೊತ್ತಾಯಿತು. ೩ ಲಕ್ಷ ನಾವು ಕೊಟ್ಟು ತೆಗೆದುಕೊಳ್ಳುತ್ತೇವೆ ಮಾರಾಟ ಮಾಡಬೇಡಿ ಎಂದು ಹೇಳುವುದು ಅಷ್ಟು ಸರಿಯಾಗಿರುವುದಿಲ್ಲ. It was a contractual obligation for him to be sold. So I could not help it. ನಮ್ಮಲ್ಲಿ ಇನ್ನು ಮುಂದೆ ಯಾವುದಾದರೂ ಮಾರಾಟ ಮಾಡುವುದು ಇದ್ದರೆ ನಮಗೇ ಕೊಟ್ಟುಬಿಡಿ ಎಂದು ಹೇಳುತ್ತೇವೆ. ಸ್ಟೇಟ್ ಪ್ರಾಪರ್ಟಿ ಅಲ್ಲದೆ ಹೋದರೆ ಪರ್ಸನಲ್ ಪ್ರಾಪರ್ಟಿ ಆಗಿದ್ದರೆ ಅದನ್ನು ನಾವು ಮಾರಾಟ ಮಾಡುವುದಕ್ಕೆ ಅಡ್ಡಿ ಪಡಿಸುವುದಕ್ಕೆ ಆಗುವುದಿಲ್ಲ. ಬೇರೆಯವರಿಗೆ ಕೊಡುವುದಕ್ಕಿಂತ ನಾವು ಕೊಂಡು ಇಟ್ಟುಕೊಳ್ಳಬಹುದು. ಆ ಸಲಹೆಯನ್ನು ನಾನು ದೀರ್ಘವಾಗಿ ಆಲೋಚನೆ ಮಾಡುತ್ತೇನೆ.

PAPERS LAID ON THE TABLE

Sri N. HUCHAMASTHY GOWDA (Minister for Revenue).—Madam Speaker, I beg to lay :—

Notification No S. O. 1170 dated 30th January 1973. Remission of suspended arrears of land revenue for the revenue year 1968-69 in the villages of Navalgund Taluk, Dharwar District.

Under sub-section (2) of Section 194 of the Mysore Land Revenue Act, 1964.

MADAM SPEAKER.—The papers are laid.

Sri K. H. PATIL (Minister for Agriculture and Forests).—Madam Speaker, I beg to lay :—

Audit Report on the accounts of the University of Agricultural Sciences, Hebbal for the year 1967–68.

Under section 38(3) of the University of Agricultural Sciences Act, 1963.

MADAM SPEAKER.—The papers are laid.

2–30 P. M.

Question of privilege against the Secretary, Jana Sangha party

MADAM SPEAKER : The hon. member Sri H. S. Siddappa raised a matter of privilege on Saturday, 22nd September, alleging that the statement of Sri Deshapande, Secretary, Jan Sangh, published in Prajavani and Kannada Prabha of 22nd instant casts a reflection on him for the speech made by him on 19th September in the Assembly and therefore constituted breach of privilege. I hold the matter is in order and the hon. Member may ask for leave of the house.

Sri H. S. SIDDAPPA (Arsikere) .— I ask for leave of the House to move the privilege motion.

MADAM SPEAKER.— Is there any objection ?

HON. MEMBERS.— No.

MADAM SPEAKER.— Leave is granted.

Sri H. S. SIDDAPPA :— I move:

That the question of breach of privilege raised by me regarding the statement made by Sri Deshpande, Secretary, Jan Sangh, published in Prajavani and Kannada Prabha of 22nd instant, be referred to the Committee of Privileges for enquiry and report to the House.

MADAM SPEAKER .— The question is :

That the question of breach of privilege raised by the hon member Sri H. S. Siddappa regarding the statement alleged to have been made by Sri Deshapande, Secretary, Jan Sangh, published in Prajavani and Kannada Prabha of 22nd September, be referred to the Committee of Privileges for enquiry and report to the House.

The motion was adopted.

(The privilege motion was referred to the Privileges Committee).

Police excess on students in Hassan.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ) .— ಮಾನ್ಯ ಅಧ್ಯಕ್ಷರೇ, ನಿನ್ನೆ ಈ ಸಭೆಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಹಾಸನದ ವಿದ್ಯಾರ್ಥಿಗಳ ಮೇಲೆ ಪೋಲೀಸರು ನಡೆಸಿದ ದೌರ್ಜನ್ಯವನ್ನು ನ್ಯಾಯಾಂಗ ತನಿಖೆಗೆ ಒಪ್ಪಿಸುವುದಿಲ್ಲ ಎಂದು ಹೇಳಿದ್ದಾರೆ. ಆದರಿಂದ ಪೋಲೀಸರಿಗೆ ನಾವು ಅವರು ಕೈಗೊಂಡ ಕೃತ್ಯದ ಬಗ್ಗೆ ಬೆಂಬಲ ಕೊಟ್ಟ ಹಾಗಾಗುತ್ತದೆ. ನ್ಯಾಯವಾದ-ನಿಷ್ಪಕ್ಷಪಾತವಾದ ಒಂದು ತೀರ್ಮಾನ ನಮಗೆ ಬೇಕು. ಅಲ್ಲಿ ಒಂದು ಸಾವಿನ ಪ್ರಕರಣ ನಡೆದಿದೆ, ಆದರ ಜೊತೆಯಲ್ಲಿ ವಿದ್ಯಾರ್ಥಿಗಳ ಮೇಲೆ ಪೋಲೀಸರು ನಡೆಸಿರತಕ್ಕ ದೌರ್ಜನ್ಯವನ್ನು ಗಮನಿಸಿ, ಯಾರು ತಪ್ಪಿಸ್ಥರು ಎಂಬುದನ್ನು ಕಂಡುಹಿಡಿಯಲು ಒಂದು ನ್ಯಾಯಾಂಗ ತನಿಖೆ ಅಗತ್ಯ. ಬೆಂಗಳೂರಿನಲ್ಲೂ ಇವತ್ತು ಗಲಾಟೆ ನಡೆಯುತ್ತಿದೆ. ಅಗ್ರಿಕಲ್ಚರಲ್ ಕಾಲೇಜು ಹತ್ತಿರ ಬಸ್ ಸುಟ್ಟಿದ್ದು, ಅಶಾಂತ ವಾತಾವರಣ ಇದೆ. ವಿದ್ಯಾರ್ಥಿಗಳಮೇಲೆ ಪೋಲೀಸರು ನಡೆಸಿರತಕ್ಕ ಅಟ್ರಾಸಿಟೀಸ್ ದೌರ್ಜನ್ಯದ ಬಗ್ಗೆ ನ್ಯಾಯಾಂಗ ವಿಚಾರಣೆ ನಡೆಸಿ, ಪೋಲೀಸರು ತಪ್ಪಿತಸ್ಥರಲ್ಲ ಎಂದು ಕಂಡುಬಂದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳ ಬೇಕಾಗಿಲ್ಲ; ಈ ಪ್ರಶ್ನೆ ಗುರುತರವಾದುದು, ಗಂಭೀರವಾದುದು.

ಅಧ್ಯಕ್ಷರು .— ನಿನ್ನೆ ನಿಮ್ಮ ಲೀಡರ್, ಬಹಳ ವಿವರವಾಗಿ ಹೇಳಿದ್ದಾರೆ.

ಅದನ್ನೇ ರಿಪಿಟ್ ಮಾಡುವುದಕ್ಕೆ ಅವಕಾಶವಿಲ್ಲ. ನಿನ್ನೆ ದಿವಸ ಪೂರ್ತಿ ಇದಕ್ಕೇ ಕಾಲ ಕಳೆದಿದ್ದೀರಿ.

ಶ್ರೀ ವಾಟಾಳ್ ನಾಗರಾಜ.— ರಾಜ್ಯದಲ್ಲಿ ಈ ಹೊತ್ತು ಒಂದು ರೀತಿ ಯಾವಂಥ ಕ್ಷೋಭೆ ಪ್ರಾರಂಭವಾಗಿದೆ. ಆದಾಗ್ಯೂ ಸರ್ಕಾರ ಸೌಮ್ಯವಾಗಿ ಕೂತಿದೆ ಎನ್ನುವ ಭಾವನೆ ನನಗೆ ಕಂಡು ಬರುತ್ತದೆ. ಹಾಸನ ಪ್ರಕರಣದ ಸಂಬಂಧದಲ್ಲಿ ಎಲ್ಲವನ್ನೂ ನ್ಯಾಯಾಂಗ ತನಿಖೆಗೆ ಒಳಪಡಿಸಬೇಕೆಂದು ನಮ್ಮ ಆಗ್ರಹ. ಆ ಹಾಸನದ ಪ್ರಕರಣ ಈ ದಿವಸ ಎಲ್ಲಾ ಕಡೆಗೂ ಸುರುವಾಗಿದೆ, ಪ್ರತಿ ಹೋಬಳಿ, ತಾಲ್ಲೂಕು, ಜಿಲ್ಲಾ ಮಟ್ಟದವರೆಗೆ ಹರಡುತ್ತಾ ಬಂದಿದೆ. ಆದಾಗ್ಯೂ ಸರ್ಕಾರ ಸುಮ್ಮನೆ ಕೂತರೆ ಹೇಗೆ? ವಿದ್ಯಾರ್ಥಿಗಳಲ್ಲಿ ಅಶಾಂತಿ ವಾತಾವರಣ ಮಿತಿಮೀರಿ ಹೋಗುತ್ತಿದೆ. ಇದರ ಬಗ್ಗೆ ಸರ್ಕಾರ ಪರಿಶೀಲನೆ ಮಾಡದೇ ಇದ್ದರೆ, ನಾಳೆ ಅನಾಹುತವಾಗುತ್ತದೆ.

ಅಧ್ಯಕ್ಷರು.— ಈ ವಿಚಾರದಲ್ಲಿ ನಿಮ್ಮ ಲೀಡರ್ ಎಲ್ಲಾ ಹೇಳಿದ್ದಾರೆ. ಅವರಿಗೆ ಬಹಳ ಗೌರವ ಕೊಡಬೇಕು. ಆದುದರಿಂದ ಆ ವಿಷಯ ಅಲ್ಲಿಗೇ ಬಿಟ್ಟು, ಮುಂದಿನ ಕಾರ್ಯಕ್ರಮಕ್ಕೆ ಹೋಗೋಣ. ಇವತ್ತೂ ಇದಕ್ಕೇ ಕಾಲ ಕಳೆಯಬೇಕೆ ?

ಶ್ರೀ ವಾಟಾಳ್ ನಾಗರಾಜ್.— ಆ ಉದ್ದೇಶದಿಂದ ಮಾತನಾಡುತ್ತಾ ಇಲ್ಲ.

ಒಬ್ಬ ಸದಸ್ಯರು.— ಇಂದೂ ಕೂಡ ಪೇಪರಿನಲ್ಲಿ ನಿಮ್ಮ ಹೆಸರು ಬರಬೇಕಾಗಿದೆ.

ಶ್ರೀ ಜೆ. ಎಲ್. ಕಬಾಡಿ.— ಪೇಪರಿನಲ್ಲಿ ಹೆಸರು ಬರಲಿ ಎಂದು ಅವರು ಹೇಳುವ ಮಾತನ್ನು ನಾವು ಸ್ವೀಕರಿಸುವುದಿಲ್ಲ.

ಶ್ರೀ ಡಿ. ದೇವರಾಜ ಅರಸ.— ಒಂದೇ ವಿಷಯವನ್ನು ಎಷ್ಟು ಸಾರಿ ಮಾತನಾಡುತ್ತಿದ್ದೀರಿ ? ನೀವು ಹೀಗೆಲ್ಲಾ ಮಾತನಾಡಬಾರದು. ಮುಗಿದು ಹೋದ ಪ್ರಶ್ನೆಯನ್ನು ಮತ್ತೆ ಏಕೆ ಎತ್ತಿಕೊಂಡು ಮಾತನಾಡುತ್ತೀರಿ ?

ಶ್ರೀ ಕೆ. ಎಚ್. ಹನುಮೇಗೌಡ.— ಈಗ ಹುಡುಗರಲ್ಲಿ ಅಶಾಂತಿ ಮೂಡಿದೆ-ತಕ್ಕ ಬಂದೋಬಸ್ತ ಮಾಡಬೇಕಾಗಿದೆ.

ಶ್ರೀ ಡಿ. ದೇವರಾಜ ಅರಸ.— ಕಾನೂನು ಪ್ರಕಾರ ಮಾಡುತ್ತೇವೆ ಬಸ್‌ಗಳನ್ನು ಸುಡುವುದಕ್ಕೆ ಪ್ರಯತ್ನ ಮಾಡಿದರೆ, ಸುಮ್ಮನೆ ಬಿಡುತ್ತೇವೆಯೇ ? ಕ್ರಮ ತೆಗೆದುಕೊಳ್ಳುತ್ತೇವೆ. ಪಬ್ಲಿಕ್ ಪ್ರಾಪರ್ಟಿ ಸುಟ್ಟರೆ ಸುಮ್ಮನೆ ಇರಬೇಕೆ ?

ಶ್ರೀ ಕೆ. ಎಚ್. ಹನುಮೇಗೌಡ.— ತಪ್ಪು ಮಾಡಿದವರಿಗೆ ಶಿಕ್ಷೆ ಮಾಡಿದರೆ ನಮ್ಮ ಅಭ್ಯಂತರ ಇಲ್ಲ. ವಿನಾಕಾರಣ ನಿರಪರಾಧಿಗಳಾದ ಗವರ್ನಮೆಂಟ ಅಫಿಶಿಯಲ್ಸ್ ಮೇಲೆ ಹೊಡೆದರೆ ಹೇಗೆ ?

ಶ್ರೀ ವಾಟಾಳ್ ನಾಗರಾಜ.— ಪೋಲೀಸರು ಹದ್ದು ಮೀರಿ ವರ್ತನೆ ಮಾಡಿ

ದ್ದಾರೆ. ಬರೀ ವಿದ್ಯಾರ್ಥಿಗಳ ಮೇಲೆ ಅಲ್ಲ, ಎನ್. ಜಿ. ಓ.ಗಳ ಮೇಲೆ ದೌರ್ಜನ್ಯ ಮಾಡಿದ್ದಾರೆ. ಪೋಲೀಸರು ಹದ್ದು ಮೀರಿ ಹೋಗುತ್ತಿದ್ದಾರೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಕೂಗಿಕೊಂಡು ಮಾತನಾಡಬಾರದೆಂದು ನಾನು ವಿನಂತಿ ಮಾಡುತ್ತೇನೆ. ಮಾನ್ಯ ಸದಸ್ಯರಿಗೋಸ್ಕರ ಇಲ್ಲಿ ಒಳ್ಳೆಯ ಮೈಕ್ ಪ್ರೊವೈಡ್ ಮಾಡಿದ್ದೇವೆ. ದಯಮಾಡಿ ಮೆತ್ತಗೆ ಮಾತನಾಡಬೇಕು.

ಶ್ರೀ ವಾಟಾಳ್ ನಾಗರಾಜ.—ಪೋಲೀಸರ ಬಗ್ಗೆ ಸರ್ಕಾರದ ಹಿಡಿತ ತಪ್ಪಿದೆ. ಬಡ ನೌಕರರ ಮೇಲೆ ಕೈಮಾಡಿದ್ದಾರೆ. ಇಡೀ ವಿಧಾನ ಸಭೆಯ ಇತಿಹಾಸದಲ್ಲೇ ನಡೆಯದಿರುವಂಥ ಘಟನೆ ನಿನ್ನೆ ನಡೆದಿದೆ.

ಅಧ್ಯಕ್ಷರು.—ಮಾನ್ಯ ಸದಸ್ಯರಿಗೆ ಪೋಲೀಸರು ಎಂದರೆ ಅಲರ್ಜಿ ಇರಬಹುದು. ಅದರ ಬಗ್ಗೆ ನನ್ನ ತಕರಾರು ಇಲ್ಲ. ನಾವು ಮನೆಗೆ ಸೌಖ್ಯವಾಗಿ ಹೋದೆವು, ಏನೂ ಆಗಲಿಲ್ಲ.

ಶ್ರೀ ವಾಟಾಳ ನಾಗರಾಜ.—ನನಗೆ ಅಲರ್ಜಿ ಇಲ್ಲ. ನನಗೆ ಇರತಕ್ಕ ವೇದನೆ ಹೇಳುತ್ತಿದ್ದೇನೆ. ಪೋಲೀಸರು ಮುಖ್ಯಮಂತ್ರಿಗಳ ಹಿಂದೆ ಮುಂದೆ ಹೋಗುತ್ತಿದ್ದಾರೆ. ಆದುದರಿಂದ ಅವರಿಗೆ ತಕ್ಕ ರಕ್ಷಣೆ ಇದೆ. ಆದರೆ ನಿರಪರಾಧಿಗಳನ್ನು ಶಿಕ್ಷಿಸುತ್ತಿದ್ದಾರೆ.

ಅಧ್ಯಕ್ಷರು.—ದಯಮಾಡಿ ಸದಸ್ಯರು 'ರೂಲ್ಸಿಗೆ ಮಾನ್ಯತೆ ಕೊಡಬೇಕು. ನಿನ್ನೆ ವಿರೋಧಪಕ್ಷದ ನಾಯಕರು ಇದರ ಬಗ್ಗೆ ಮಾತನಾಡಿದ್ದಾರೆ. ಆ ಪ್ರಶ್ನೆ ಮುಗಿದು ಹೋಗಿದೆ. ಆದುದರಿಂದ ತಿರುಗಿ ತಿರುಗಿ ಇದನ್ನೇ ಪುನಃ ಪ್ರಸ್ತಾಪ ಮಾಡಲು ಸಾಧ್ಯವಿಲ್ಲ. ಇನ್ನೂ ೩ ದಿವಸ ಸಭೆಯಲ್ಲಿ ಇತರೇ ಕಾರ್ಯಕಲಾಪಗಳನ್ನು ನಡೆಸಬೇಕಾಗಿದೆ. ಒಂದೇ ವ್ಯವಹಾರವನ್ನೇ ಪ್ರತಿದಿನವೂ ನಡೆಸಿಕೊಂಡು ಹೋಗುವುದಕ್ಕೆ ಆಗುವುದಿಲ್ಲ.

ಶ್ರೀ ಎಚ್. ಬಿ. ಕೆಂಚೇಗೌಡ.—ಮಾನ್ಯ ಸದಸ್ಯರು ಆಕ್ಷೇಪಣೆ ಮಾಡಲಿ, ಟೀಕೆ ಮಾಡಲಿ, ನಾನು ಬೇಡ ಎಂದು ಹೇಳುವುದಿಲ್ಲ. ಆದರೆ ವಿದ್ಯಾರ್ಥಿಗಳನ್ನು ಉಪಯೋಗಿಸಿಕೊಂಡು ಅವರನ್ನು ಪ್ರಚೋದನೆ ಮಾಡುವುದನ್ನು, ಇನ್ನು ಮುಂದೆ ಆ ರೀತಿ ದುರುಪಯೋಗಪಡಿಸುವುದನ್ನು ತಪ್ಪಿಸಬೇಕು.

ಶ್ರೀ ಕೆ. ಎಚ್. ಹನುಮೇಗೌಡ.—ಪ್ರಚೋದನೆ ಮಾಡಿದ್ದರೆ ಆಕ್ಷೇಪಣೆ ತೆಗೆದುಕೊಳ್ಳಲಿ. ಎಲ್ಲಿ ಆ ರೀತಿ ಮಾಡಿದ್ದೇವೆಂದು ನಿರ್ದಿಷ್ಟವಾಗಿ ಹೇಳಬೇಕು.

ಶ್ರೀ ವಾಟಾಳ್ ನಾಗರಾಜ.—ಬಹುಶ: ಅವರು ಪ್ರಚೋದನೆ ಮಾಡುತ್ತಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ವಿರೋಧಪಕ್ಷದವರು ಪ್ರಚೋದನೆ ಮಾಡುತ್ತಿದ್ದಾರೆಂದು ಹೇಳುವುದನ್ನು ದಯಪಿಟ್ಟು ಹಿಂದಕ್ಕೆ ತೆಗೆದುಕೊಳ್ಳಬೇಕು.

ಶ್ರೀ ಎಚ್. ಬಿ. ಕೆಂಚೇಗೌಡ.—ಸರ್ಕಾರಿ ನೌಕರರನ್ನು ಪ್ರಚೋದನೆ ಮಾಡಲಿಲ್ಲವೇ ?

ಶ್ರೀ ವಾಟಾಳ್ ನಾಗರಾಜ.—ನಿಮ್ಮಿಂದ ದೇಶ ಹಾಳಾಗಿ ಹೋಯಿತು ಅಂತ ಹೇಳಿದ್ದಾರೆ. ಇದು ತೀವ್ರ ಅತಿರೇಕದ ಮಾತಾಯಿತು.

ಅಧ್ಯಕ್ಷರು.—ಅದು ನನಗೆ ನಿಜವಾಗಲೂ ಕೇಳಲಿಲ್ಲ. ದಯವಿಟ್ಟು ತಾವು ಕುಳಿತುಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ.—ನನಗೆ ಕೇಳಿದೆ. ಶ್ರೀಮಾನ್ ಕೆಂಚೇಗೌಡರು ನಿಮ್ಮಿಂದ ದೇಶ ಹಾಳಾಗಿ ಹೋಯಿತು ಎಂದಿದ್ದಾರೆ. ಅದು ದಾಖಲೆಯಲ್ಲಿ ಇದ್ದರೆ ದಯವಿಟ್ಟು ಅದನ್ನು ತರಿಸಿ ನೋಡಬೇಕು.

ಅಧ್ಯಕ್ಷರು.—ಅದನ್ನು ತರಿಸಿ ನೋಡುತ್ತೇನೆ. ಅವರು ಹಾಗೆ ಹೇಳದೇ ಹೋಗಿದ್ದರೆ ಏನು ಮಾಡಬೇಕು ?

ಶ್ರೀ ವಾಟಾಳ್ ನಾಗರಾಜ.—ಹೀಗೆ ಪ್ರಚೋದನೆ ಮಾಡಿಕೊಂಡು ನಾನು ಸರ್ಕಾರಕ್ಕೆ ಬರಬೇಕಾಗಿಲ್ಲ. ಅವರು ಪ್ರಚೋದನೆ ಮಾಡಿ ನಮ್ಮನ್ನು ಕೆಳಗೆ ಇಳಿಸಿ ನಿಮ್ಮನ್ನು ಮೇಲಕ್ಕೆ ಎತ್ತಿ ಕಟ್ಟಿದರೆ ಹೇಗೆ ?

ಅಧ್ಯಕ್ಷರು.—ಆ ಮಾತನ್ನು ನೀವುಗಳು ಅಂದಿರಿ. ಅವರು ಹೇಳಿದ್ದಂತೂ ನಾನು ನಿಜವಾಗಲೂ ಕೇಳಲಿಲ್ಲ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಅವರು ಹೇಳಿದ್ದು ದಾಖಲೆಯಲ್ಲಿದ್ದರೆ ಆ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕು.

ಶ್ರೀ ಹೆಚ್. ಎಂ. ಚೆನ್ನಬಸಪ್ಪ.—ತಾವು ಈ ಬಗ್ಗೆ ರೂಲಿಂಗ್ ಕೊಟ್ಟಿದ್ದೀರಿ, ಅವರು ಏನಾದರೂ ಈ ರೀತಿ ಅಂದಿದ್ದರೆ ಅದನ್ನು ತರಿಸಿ ನೋಡುತ್ತೇನೆ ಎಂದು ಹಾಗಿರುವಾಗ It is all against standards to say it again.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ನಿಮ್ಮ ರೂಲಿಂಗ ಮೇಲೆ ನಾವು ಮಾತನಾಡುತ್ತಾ ಇಲ್ಲ. ಅವರು ಅಪಾದನೆ ಮಾಡಲಿಲ್ಲಾ ಎಂದರೆ ಏನು ಮಾಡೋಣ ?

ಅಧ್ಯಕ್ಷರು.—ನಾನು ದಾಖಲೆಯನ್ನು ತರಿಸಿ ನೋಡುತ್ತೇನೆ ಎಂದು ಹೇಳಿದರೂ ಕೂಡ ನನ್ನ ಮೇಲೆ ತಮಗೆ ಅಷ್ಟು ವಿಶ್ವಾಸವಿಲ್ಲವೇ ?

ಶ್ರೀ ಹೆಚ್. ಟಿ. ಕೃಷ್ಣಪ್ಪ.—ನೀವು ಹೀಗೆ ಮಾತನಾಡಿ ಭಯಪಡಿಸಿದರೆ, ಈ ರೀತಿ ಮರ್ಯಾದೆಯನ್ನು ಕಳೆಯುವುದಾದರೆ ಏನು ಮಾಡೋಣ ?

Sri H. M. CHANNABASAPPA.—I want a ruling on that.

ಅಧ್ಯಕ್ಷರು.—ಇಲ್ಲಿ ಯಾರು ಯಾರಿಗೂ ಭಯಪಡುವುದಕ್ಕೆ ಬಂದಿಲ್ಲ. ಮತ್ತು ಇಲ್ಲಿ ಅವರ ಮರ್ಯಾದೆಯನ್ನೂ ಕಳೆಯುವುದಕ್ಕೆ ಬಂದಿಲ್ಲ ಮತ್ತು ಅವರನ್ನು

ಅವಹೇಳನ ಮಾಡುವುದಕ್ಕೆ ಬಂದಿಲ್ಲಾ. ದಯಮಾಡಿ ಮುಂದಿನ ವಿಷಯವನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಿ. ನೀವು ಹೇಳಬೇಕಾದ್ದು ನಿಮ ಕರ್ತವ್ಯ. ಅದನ್ನು ನಾನು ತರಿಸಿ ನೋಡುತ್ತೇನೆ ಎಂದ ಮೇಲೆ ನನ್ನ ಮೇಲೆ ತಮಗೆ ಅಷ್ಟು ವಿಶ್ವಾಸವಿಲ್ಲವೇ ? ದಯಮಾಡಿ ಕೂತುಕೊಳ್ಳಿ, ಮುಂದಿನ ಕಾರ್ಯ ಕಲಾಪಗಳಿಗೆ ಹೋಗೋಣ.

ಶ್ರೀ ವಾಟಾಳ್ ನಾಗರಾಜ್:—ಶ್ರೀಮಾನ್ ಕೆಂಚೆಗೌಡರರು ಯಾವತ್ತೂ ಕೂಡ ಇಷ್ಟು ಮಾತನಾಡುತ್ತಿರಲಿಲ್ಲಾ. ಈವೊತ್ತು ಅವರು ಮಾತನಾಡಿದ್ದನ್ನು ನೋಡಿದರೆ ಇದರಲ್ಲಿ ಏನೋ ರಾಜಕೀಯ ಇರಬಹುದು ಎಂದು ನನಗೆ ಅನಿಸುತ್ತದೆ.

ಶ್ರೀ ಡಿ. ದೇವಾರಾಜ್ ಅರಸ್:—ಅದನ್ನು ಅವರನ್ನೇ ಕೇಳಿ.

ಶ್ರೀ ವಾಟಾಳ್ ನಾಗರಾಜ್:—ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಯಾವತ್ತೂ ಇಲ್ಲದೇ ಇದ್ದ ಅಭಿಮಾನ ಈವೊತ್ತಿನ ದಿವಸ ಮುಖ್ಯಮಂತ್ರಿಳಿಗೆ ಇರುವುದನ್ನು ನೋಡಿದರೆ ಇದರಲ್ಲಿ ಏನೋ ಇರಬಹುದು ಎಂದು ನನಗೆ ಅನಿಸುತ್ತದೆ.

ಶ್ರೀ ಡಿ. ದೇವರಾಜ್ ಅರಸ್:— ನಿಮಗೆ ಇನ್ನೂ ಸಂಕೋಚವಾಗಿದ್ದರೆ ನಾನು ಏನು ಹೇಳಲಿ?

ಶ್ರೀ ವಾಟಾಳ್ ನಾಗರಾಜ್:—ನಿಮಗೆ ಸಂತೋಷವಾಗಿದೆ ಎಂದು ನಾನು ಆಗಲೇ ಹೇಳಿದೆ.

MYSORE SHEEP AND SHEEP PRODUCTS BILL, 1973.

Motion to Consider

MADAM SPEAKER:—I have received a recommendation from the Governor under article 207 (3) of the Constitution that the Mysore Sheep and Sheep Products Bill, 1973 be considered by the Assembly. The Hon. Minister for Industries may move it.

SRI S. M. KRISHNA (Minister for Industries):—Madam, I beg to move.

" That the Mysore Sheep Products Bill, 1973 be take and into consideration."

MADAM SPEAKER:—Motion moved:

" That the Mysore Sheep and Sheep Products Bill, 1973 be taken into consideration.

†ಶ್ರೀ ಎಸ್.ಎಂ. ಕೃಷ್ಣ:—ಮಾನ್ಯ ಅಧ್ಯಕ್ಷರೇ, ಕಳೆದ ಕೆಲವಾರು ತಿಂಗಳುಗಳಿಂದ ಈ ಕುರಿ ಪೋಷಣೆಯ ಉದ್ಯಮದ ಬಗ್ಗೆ ಮತ್ತು ಉದ್ಯೋಗದ ಬಗ್ಗೆ ಸರ್ಕಾರದ ದೃಷ್ಟಿ ಹೇಗಿದೆ ಎಂದರೆ ಒಂದು ವ್ಯವಸ್ಥಿತವಾದಂಥ ಮತ್ತು ಶಾಸ್ತ್ರೀಯವಾದಂಥ ಆಧಾರದ ಮೇಲೆ ಈ ಕುರಿ ಪೋಷಣೆಯ ಉದ್ಯೋಗವನ್ನು ಪ್ರಾರಂಭ ಮಾಡಬೇಕೆನ್ನುವ ಸದುದ್ದೇಶದಿಂದ ಕೆಲವು ತಿಂಗಳ ಕೆಳಗೆ ರಾಜ್ಯ ಸರ್ಕಾರದ ಷೀಪ್ ಡೆವಲಪ್‌ಮೆಂಟ್ ಬೋರ್ಡ್ ಅನ್ನತಕ್ಕಂಥ ಒಂದು ಮಂಡಲಿಯನ್ನು ಪ್ರಾರಂಭ ಮಾಡಿತು. ಆ ಮಂಡಲಿಯ ಶಿಫಾರಸಿನ ಮೇರೆಗೆ ಈ ಮಂಡಲಿಗೆ ಸ್ಟ್ಯಾಚುಟರಿ ರೆಕಗ್ನಿಷನ್ ಕೊಡಬೇಕು, ಮತ್ತು ಸಾಕಾದಷ್ಟು ಅಧಿಕಾರವನ್ನು ಈ ಮಂಡಲಿಗೆ ಕೊಟ್ಟು ಇನ್ನೂ ಹೆಚ್ಚು ಉತ್ಸಾಹದಿಂದ ಇದು ಕೆಲಸ ಮಾಡಬೇಕು ಎಂದು ಹೇಳುತ್ತೇನೆ. ಈ ಬಗ್ಗೆ ಸ್ಟೇಟಮೆಂಟ ಆಫ್ ಆಬ್ಜಕ್ಟ್ಸ್ ಅಂಡ್ ರೀಸನ್ಸನಲ್ಲಿ ನಮೂದು ಮಾಡಿದ್ದೇವೆ. ಈ ಬಗ್ಗೆ ಕಾರ್ಯರೂಪಕ್ಕೆತರುವುದಕ್ಕೆ ಈ ಮಸೂದಾ ಕಾನೂನು ಬಹಳ ಮಟ್ಟಿಗೆ ಅನುಕೂಲ ವಾಗುತ್ತದೆ ಎಂದು ಸರ್ಕಾರದವರೂ ಕೂಡ ಅಭಿಪ್ರಾಯ ಪಡುತ್ತಾರೆ. ನಮ್ಮ ರಾಜ್ಯದ ಕೆಲವು ಭಾಗದಲ್ಲಿ ಜನ ಕುರಿಪೋಷಣೆಯೇ ತಮ್ಮ ಜೀವನ ಎಂದು ಇದನ್ನು ಪ್ರಾಧಾನವಾದಂಥ ಒಂದು ಉದ್ಯೋಗವನ್ನಾಗಿ ಮಾಡಿಕೊಂಡಿದ್ದಾರೆ. ಆದರೆ ಅವರಿಗೆ ಇದು ಇನ್ನೂವರೆಗೂ ಗಣನೀಯವಾದ ಮಟ್ಟದಲ್ಲಿ ಆಗಲಿ ಅಥವಾ ಪ್ರಾರಂಭದ ಮಟ್ಟದಲ್ಲಾಗಲಿ ಅವರ ಈ ಉದ್ಯೋಗವನ್ನು ಮುಂದುವರಿಸುವುದಕ್ಕೆ ಸರ್ಕಾರ ದವರು ಯಾವ ವಿಧವಾದಂಥ ಸವಲತ್ತುಗಳನ್ನೂ ಸಹ ಕಲ್ಪಿಸಿಕೊಟ್ಟಿಲ್ಲ. ಈ ಕೊರತೆಯನ್ನು ನಿವಾರಣೆ ಮಾಡುವುದಕ್ಕೋಸ್ಕರ ಈ ಮಸೂದೆಯನ್ನು ಈ ಸಭೆಯ ಮುಂದೆ ಮಂಡಿಸುವುದಕ್ಕೆ ನನಗೆ ಬಹಳ ಸಂತೋಷವಾಗುತ್ತದೆ. ಇದರಲ್ಲಿ ಯಾವ ತಕರಾರೂ ಕೂಡ ಇರಲಿಕ್ಕೆ ಸಾಧ್ಯವಿಲ್ಲಾ. ಇಡೀ ಸಭೆ ಈ ಮಸೂದೆಯನ್ನು ಸ್ವಾಗತ ಮಾಡುತ್ತದೆ ಎಂದು ಹೇಳಿ ನಾನಾದರೂ ಕೂಡ ಹಾರೈಸುತ್ತೇನೆ. ಇದರ ಮುಖ್ಯವಾದಂಥ ಉದ್ದೇಶ ಶೋಷಣೆಗೆ ಒಳಗಾದಂಥ ಕುರಿ ಪೋಷಕರಿಗೆ ಸಾಕಷ್ಟು ಮಟ್ಟಿಗೆ ಪ್ರೊಡಕ್ಷನ್ ಸ್ಟೇಜ್‌ನಲ್ಲಿಯೇ ಅಧುನಿಕವಾದ ಯಂತ್ರೋಪಕರಣಗಳು ಸಿಗಬೇಕು ಮತ್ತು ಈ ಕುರಿ ಪೋಷಣೆ ಮಾಡತಕ್ಕಂಥವರಿಗೆ ಮತ್ತು ಈ ಉದ್ಯಮ ವನ್ನು ಆಧರಿಸಿ ಜೀವನ ಮಾಡತಕ್ಕಂಥವರಿಗೆ ಒಳ್ಳೆಯ ಮಾರುಕಟ್ಟೆಯ ಆಶ್ರಯವನ್ನು ಕಲ್ಪಿಸಿಕೊಡಬೇಕಾದರೆ ಇಂತಹ ಒಂದು ಸ್ಟ್ಯಾಚುಟರಿ ಮಂಡಲಿ ಇರಬೇಕು ಎಂದು ಸರ್ಕಾರದ ಆಶಯ. ಈಹೊತ್ತು ನಮ್ಮ ರಾಜ್ಯದಲ್ಲಿರತಕ್ಕಂಥ ಜನರಿಗೆ ಅಂದರೆ ಕುರಿ ಪೋಷಕರಿಗೆ ಈ ಒಂದು ಮಸೂದೆ ಪರವಾಗಿ ಪರಿಣಮಿಸಬೇಕಾದರೆ ಇದು ಹೆಚ್ಚು ಚರ್ಚೆ ಇಲ್ಲದೆ ಅಂಗೀಕರಿಸಿದರೆ ಈ ಕುರಿಪೋಷ್ಕರಿಗೆ ಇರತಕ್ಕಂಥ ಕಳಕಳಿಯನ್ನು ವ್ಯಕ್ತ ಮಾಡಿದ ಹಾಗಾಗುತ್ತದೆ. ಆದುದರಿಂದ ಈ ಮಸೂದೆಯನ್ನು ಈ ಸಭೆಯ ಮುಂದೆ ಮಂಡಿಸುತ್ತೇನೆ.

†ಶ್ರೀ ಟಿ. ಆರ್. ಶಾಮಣ್ಣ.--- (ಕೋಟೆ) ಮಾನ್ಯ ಸಭಾಧ್ಯಕ್ಷಣೀಯವರೇ, ನಿನ್ನೆಯ ದಿನ ಅತಿ ಮುಖ್ಯವಾದ ಆಹಾರ ಸಮಸ್ಯೆಯ ಬಗ್ಗೆ ಮುಖ್ಯಮಂತ್ರಿಗಳು

ಹೇಳಿಕೆಯನ್ನು ಮಾಡಿದರು. ಅದರ ಬಗ್ಗೆ ಚರ್ಚೆಯನ್ನು ಇಡುವ ಬದಲು ಕುರಿ ಪೋಷಣೆಯ ಬಗ್ಗೆ ಇವತ್ತು ಮಸೂದೆಯನ್ನು ತೆಗೆದುಕೊಂಡು ಬಂದಿದ್ದಾರೆ.

ಶ್ರೀ ಕೆ. ಎನ್. ವೀರಪ್ಪಗೌಡ.—ಇದೂ ಆಹಾರವೇ.

ಶ್ರೀ ಟಿ. ಆರ್. ಶಾಮಣ್ಣ.— ಮೊನ್ನೆ ಭಾನುವಾರ ನಡೆದಂಥ ಕುರಿ ಪೋಷಕರ ಒಂದು ಸಭೆಯಲ್ಲಿ ಭಾಗವಹಿಸಿದ ಮಂತ್ರಿಗಳು ಅವರಿಗೆ ಆಶ್ವಾಸನೆಕೊಟ್ಟಿದ್ದರ ಬಗ್ಗೆ ಇದನ್ನು ತೆಗೆದುಕೊಂಡು ಬಂದಿದ್ದಾರೆ ಎಂದು ನನಗನ್ನಿಸುತ್ತದೆ. ಆದರೂ ಕೂಡ ಒಂದು ಮಾತ್ರ ಒಪ್ಪಿಕೊಳ್ಳತಕ್ಕ ವಿಚಾರ ಇದೆ. ಮೈಸೂರು ರಾಜ್ಯದಲ್ಲಿ ಹಿಂದುಳಿದ ಮತ್ತ ಆರ್ಥಿಕಸ್ಥಿತಿಯಲ್ಲಿ ಬಹಳ ಹೀನಸ್ಥಿತಿಯಲ್ಲಿರತಕ್ಕ ಜನ ಕುರಿಯನ್ನು ಪೋಷಣೆ ಮಾಡತಕ್ಕವರು ಎಂದರೆ ತಪ್ಪಾಗಲಾರದು. ಈ ಮಸೂದೆಯ ಬಗ್ಗೆ ನನ್ನ ಮೊದಲನೆಯ ಆಕ್ಷೇಪಣೆ ಏನೆಂದರೆ, ಕುರಿಗಳನ್ನು ಬೆಳೆಸುವುದಕ್ಕೆ, ಇದ್ದಬಿದ್ದ ಜಾಗವನ್ನು ಆಗಲೇ ಹಂಚಿಕೊಂಡು ಬಿಟ್ಟಿದ್ದಾರೆ. ದನ ಮೇಯಿಸುವುದಕ್ಕೆ, ಕುರಿಗಳನ್ನು ಮೇಯಿಸುವುದಕ್ಕೆ ಜಾಗವನ್ನು ಎಲ್ಲಿ ಒದಗಿಸುತ್ತಾರೆ ಎನ್ನುವುದನ್ನು ಯೋಚನೆ ಮಾಡಬೇಕಾಗಿದೆ. ಆಸ್ಟ್ರೇಲಿಯಾ, ನ್ಯೂಜಿಲೆಂಡ್, ಮತ್ತು ಸೌತ ಅಮೇರಿಕಾ, ಮತ್ತು ಇಂಗ್ಲಂಡ್ ಇಂಥ ದೇಶಗಳಲ್ಲಿ ಉತ್ತಮವಾದಂಥ ಕುರಿಯ ತಳಿಗಳನ್ನು ಬೆಳೆಸುತ್ತಾ ಇದ್ದಾರೆ. ನಮ್ಮ ರಾಜ್ಯದಲ್ಲಿ ಬಹಳ ಉತ್ತಮವಾದಂಥ ತಳಿ ಕ್ಷೀಣ ಸ್ಥಿತಿಗೆ ಬರುತ್ತಾ ಇದೆ. ಒಂದಾನೊಂದು ಕಾಲದಲ್ಲಿ ಮೈಸೂರು ರಾಜ್ಯದಲ್ಲಿ ದಾವಣಗೇರಿಯಿಂದ ಬರುತ್ತಿದ್ದ, ಮಂಡ್ಯದಿಂದ ಬರುತ್ತಿದ್ದ ಕಂಬಳಿಗಳು ಬಹಳ ಪ್ರಸಿದ್ಧವಾಗಿದ್ದವು. ಈಗ ಸಾಧಾರಣವಾಗಿ ಆ ಕಂಬಳಿಗಳು ಕಾಣದಂತಾಗಿವೆ. ಭಾರತದಲ್ಲಿ ಮೈಸೂರು ದೇಶದ ರತ್ನಕಂಬಳಿಗಳಿಗೆ ಡ್ರಗ್ಗಿಸ್ಟ್ಸ್‌ಗಳಿಗೆ ಬಹಳ ಗಿರಾಕಿ ಇತ್ತು. ಈಗ ಕ್ವಾಲಿಟಿಯನ್ನು ಕೆಡಿಸಿಬಿಟ್ಟು, ಮಾರ್ಕೆಟ್‌ಅನ್ನುಕಳೆದುಕೊಂಡು ಹೆಚ್ಚಿನ ಫಾರಿನ್ ಎಕ್ಸ್‌ಚೇಂಜ್ ನಷ್ಟವಾಗುತ್ತಿದೆ. ಇದರಿಂದ ವ್ಯಾಪಾರ ಮಾಡತಕ್ಕವರಿಗೆ ತೊಂದರೆ ಬಂದಿದೆ. ಒಂದು ವಿಚಾರದಲ್ಲಿ ನಾನು ಮಂತ್ರಿಗಳನ್ನು ಶ್ಲಾಘಿಸಬೇಕಾಗಿದೆ. ಏನೆಂದರೆ, ಬೋರ್ಡುಗಳನ್ನು ಸೃಷ್ಟಿಮಾಡುವಾಗ ಬೋರ್ಡುಗಳ ಅಧಿಕಾರವನ್ನೆಲ್ಲಾ ಸರ್ಕಾರದವರೇ ಇಟ್ಟುಕೊಳ್ಳತಕ್ಕದ್ದು ಒಂದು ವಿಚಾರವಾಗಿದೆ. ಅನೇಕ ಬೋರ್ಡುಗಳು ಸೃಷ್ಟಿಯಾಗಿವೆ. ಆದರೆ ಈ ಮಸೂದೆಯಲ್ಲಿ ಬೋರ್ಡಿನ ಹೆಚ್ಚಿನ ಅಧಿಕಾರವನ್ನು ಸರ್ಕಾರ ತನ್ನಲ್ಲಿ ಇಟ್ಟುಕೊಳ್ಳದೆ ಇರತಕ್ಕಂಥಾದ್ದು ಒಂದು ಸ್ವಾಗತಾರ್ಹವಾದ ವಿಚಾರ. ಏಕೆಂದರೆ, ಇದುವರೆಗೂ, ಬಂದಂಥ ಬೋರ್ಡುಗಳ ಮಸೂದೆಯಲ್ಲಿ, 'ಅಟ್ ದಿ ಪ್ಲೆಷರ ಆಫ್ ದಿ ಗವರ್ನಮೆಂಟ್' ಎಂದು ಇರುತ್ತಿತ್ತು, ಆದರೆ ಇವರಲ್ಲಿ 'ಅಟ್ ದಿ ಪ್ಲೆಷರ್ ಆಫ್ ದಿ ಗವರ್ನಮೆಂಟ್' ಎಂದು ಇಲ್ಲ. ಆದರೆ, ಸರಿಯಾದಂಥ ರೀತಿಯಲ್ಲಿ ಬೋರ್ಡಿನ ಸದಸ್ಯರು ಕೆಲಸ ಮಾಡದೆ ಹೋದರೆ, ಇವನ್ನು ತೆಗೆಯಬೇಕು ಎನ್ನತಕ್ಕದ್ದು ಇದೆ. ನಮ್ಮ ರಾಜ್ಯದ ಆಡಳಿತ ಈ ಬೋರ್ಡುಗಳಮಯವಾಗುತ್ತಿದೆ. ಪ್ರತಿಯೊಂದಕ್ಕೂ ಬೋರ್ಡು, ಕಾರ್ಪೋರೇಷನ್ ಆಗುತ್ತಿವೆ. ಹೀಗಾಗಿ ಏನಾಗುತ್ತದೆ ಎಂದರೆ, ಈ ಬೋರ್ಡುಗಳ ಸೃಷ್ಟಿಯಿಂದ ಸರ್ಕಾರ ತನ್ನ ನೇರವಾದ ಜವಾಬ್ದಾರಿಯನ್ನು ತಪ್ಪಿಸಿಕೊಂಡು ಅಪ್ರತ್ಯಕ್ಷ

ವಾದ ಅಧಿಕಾರವನ್ನು ಬೋರ್ಡಿನ ಮುಖಾಂತರ ನಡೆಸಿಕೊಂಡು ಹೋಗುವುದಕ್ಕೆ ಸಾಧ್ಯವಾಗುತ್ತಿದೆ. ಸೃಷ್ಟಿಮಾಡತಕ್ಕ ಬೋರ್ಡುಗಳು ಹೆಚ್ಚು ಕಡಿಮೆ ಸರ್ಕಾರದ ಡಿಪಾರ್ಟಮೆಂಟ್‌ಗಳೇ ಎಂದು ಹೇಳಿದರೆ ತಪ್ಪಾಗಲಾರದು. ಕೊಟ್ಟಿರತಕ್ಕ ಸ್ಟೇಟ್‌ಮೆಂಟ್ಸ್ ಪ್ರಕಾರ, ಮೂರು ಕೋಟಿ ರೂಪಾಯಿಗಳ ಉಣ್ಣೆ, ಆರು ಕೋಟಿ ರೂಪಾಯಿಗಳ ಮಟನ್, ನಮ್ಮ ರಾಜ್ಯದಲ್ಲಿ ಉತ್ಪತ್ತಿಯಾಗುತ್ತಿದೆ. ಆದರೆ ಇಲ್ಲಿ ಏನಾಗಿದೆ ಎಂದರೆ, ಇದು ಲಾಭದಾಯಕವಾಗಿಲ್ಲದೆ ಹೋದ್ದರಿಂದ ಈ ವೃತ್ತಿಯಲ್ಲಿರುವವರು ಬಹಳ ಕಷ್ಟಪಡುತ್ತಿದ್ದಾರೆ. ಕುರಿ ಮಾಂಸದ ಬೆಲೆ ಎರಡು ವರ್ಷದ ಕೆಳಗೆ ಐದು ರೂಪಾಯಿ ಇದ್ದದ್ದು, ಈಗ ೧೦ ರೂಪಾಯಿ ಆಗಿದೆ. ಇದರ ಬೆಲೆ ಹೆಚ್ಚಾಗತಕ್ಕದ್ದು ಇದೆ. ಇದಕ್ಕೆ ಸಾಕಾದಷ್ಟು ಉತ್ತೇಜನಕೊಟ್ಟು, ಸಾಕಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಈ ಪ್ರಾಣಿಗಳನ್ನು ಸಾಕುವುದರಿಂದ ಆಹಾರ ಸಮಸ್ಯೆ ಸ್ವಲ್ಪ ಬಗೆಹರಿಯುತ್ತದೆ ಎನ್ನುವುದರಲ್ಲಿ ನನಗೆ ಪೂರ್ಣ ನಂಬಿಕೆ ಇದೆ. ಈಗ ಮಾನ್ಯ ಮಂತ್ರಿಗಳು ಹೇಳಿದ ಹಾಗೆ ಮಾಂಸದ ವ್ಯಾಪಾರದಿಂದಾಗಲೀ ಉಣ್ಣೆಯ ವ್ಯಾಪಾರದಿಂದಾಗಲೀ, ಹೆಚ್ಚಿನ ಲಾಭ ಬರುತ್ತಿಲ್ಲ. ಕುರಿಗಳನ್ನು ಸಾಕತಕ್ಕವರಿಗೆ ಹೆಚ್ಚಿನ ವರಮಾನ ಬರುತ್ತಿಲ್ಲ. ಬೆಂಗಳೂರಿನ ಸ್ಲಾಟರ್ ಹೌಸ್‌ಅನ್ನು ಕೆಲವರು ಮನೋಪಲೈಸ್ ಮಾಡಿಕೊಂಡಿದ್ದಾರೆ. ಅದಕ್ಕೋಸ್ಕರ ಬೆಂಗಳೂರಿನ ಸ್ಲಾಟರ್ ಹೌಸ್‌ಅನ್ನು ಮಾಡರ್ನ್ ಸ್ಲಾಟರ್ ಹೌಸ್ ಮಾಡಬೇಕು ಎಂದು ಕಾರ್ಪೋರೇಷನ್‌ನವರು ಪ್ರಯತ್ನ ಪಟ್ಟರು. ಆದರೂ ಅದು ನಾಲ್ಕೈದು ವರ್ಷಗಳಿಂದ ಹಿಂದಕ್ಕೆ ಹೋಗುತ್ತಿದೆ. ಸ್ಲಾಟರ್ ಹೌಸನ ಮಾಡರ್ನೈಸ್ ಮಾಡಿದರೆ ಆ ವೃತ್ತಿಯಲ್ಲಿರುವವರಿಗೆ ತೊಂದರೆ ಬರುತ್ತದೆ ಎಂದು ಅಡ್ಡಿಯನ್ನು ತೆಗೆದುಕೊಂಡು ಬರುತ್ತಿದ್ದಾರೆ. ಆದ್ದರಿಂದ, ತಾವು ಒಂದು ಮಾಡರ್ನ್ ಸ್ಲಾಟರ್ ಹೌಸ್‌ಅನ್ನು ಸರಿಯಾದಂಥ ರೀತಿಯಲ್ಲಿ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಮಸೂದೆಯನ್ನು ನಾನು ಮೊದಲಿನಿಂದ ಕೊನೆಯವರೆಗೂ ಓದಿದ್ದೇನೆ. ಆದರೆ ಆಕ್ಷೇಪಣೆಯಾದಂಥ ಕಾಲಂಗಳು ಏನೂ ಇಲ್ಲ. ಒಂದು ಮಾತ್ರ ನನ್ನ ಆಕ್ಷೇಪಣೆ ಏನೆಂದರೆ ಕುರಿಗಳನ್ನು ಮೇಯಿಸುವುದಕ್ಕೆ, ಸಾಕುವುದಕ್ಕೆ ಸಾಕಾದಷ್ಟು ಸೌಕರ್ಯ ರಾಜ್ಯದಲ್ಲಿ ಇಲ್ಲ ಎನ್ನತಕ್ಕದ್ದು ಅನೇಕ ಬೆಟ್ಟಗುಡ್ಡಗಳು ಇರುವ ಕಡೆ, ವ್ಯವಸಾಯಕ್ಕೆ ಅನುಕೂಲ ಇಲ್ಲದೆ ಇರುವ ಕಡೆ, ಇದಕ್ಕೆ ತಕ್ಕ ಅನುಕೂಲ ಮಾಡಬೇಕು. ಬಂಜರು ಭೂಮಿಗಳು ಎಲ್ಲಿದೆಯೋ ಅಲ್ಲಿ ಅಥವಾ ಫಲವತ್ತಾದ ಜಾಗ ಇಲ್ಲದೆ ಇದ್ದರೂ ಕೂಡ ಅಲ್ಲಿ ಕುರಿಗಳನ್ನು ಬೆಳಸುವುದಕ್ಕೆ ಸಾಧ್ಯವಾಗುತ್ತದೆ. ಅಬ್ಜೆಕ್ಟ್ಸನಲ್ಲಿ 'to conduct training centres' ಎಂದು ಇದೆ. ಯಾವ ವಿಧದಲ್ಲಿ ಕುರಿಗಳನ್ನು ಮೇಯಿಸುವುದಕ್ಕೆ, ಸಾಕುವುದಕ್ಕೆ ಟ್ರೈನಿಂಗ್ ಕೊಡಬೇಕು ಎನ್ನುವುದರ ಬಗ್ಗೆ ಸ್ವಲ್ಪ ವಿವರಣೆ ಕೊಡಬೇಕು. ಮತ್ತು 'to arrange for publici y to popularise the said products by opening stores, shops, emporia or by exhibitions. ಇದನ್ನು ಕೆಲವು ಸಾರಿ

ಮಾಡಿದ್ದಾರೆ. ಆದರೂ ಕೂಡ ಪಬ್ಲಿಸಿಟಿಯನ್ನು ಹೆಚ್ಚಿನ ರೀತಿಯಲ್ಲಿ ಮಾಡಬೇಕಾಗಿದೆ. ಆದ್ದರಿಂದ ಮೊದಲನೆಯದಾಗಿ, ಕುರಿಗಳ ಸಂಖ್ಯೆ ಹೆಚ್ಚಾಗುವುದಕ್ಕೆ ಏನೇನು ಮಾಡಬೇಕೋ ಅದನ್ನು ಮಾಡಬೇಕು. ಫಾರಿನ್ ಕಂಟ್ರೀಸ್‌ನಲ್ಲಿ ಕ್ರಾಸ್ ಬ್ರೀಡಿಂಗ್ ಮಾಡುವುದಕ್ಕೆ ಏರ್ಪಾಡು ಮಾಡಿದ್ದಾರೆ. ನಮ್ಮಲ್ಲಿಯೂಕೂಡ ಸಾಕಾದಷ್ಟು ಕ್ರಾಸ್ ಬ್ರೀಡಿಂಗ್ ಮಾಡಿ ತಳಿಗಳ ಅಭಿವೃದ್ಧಿ ಮಾಡಬೇಕು. ಸಾಧಾರಣವಾಗಿ ನಮ್ಮಲ್ಲಿ ಮಾಮೂಲಾದಂಥ ತಳಿಗಳನ್ನೇ ಬ್ರೀಡ್ ಮಾಡುತ್ತಿದ್ದಾರೆ. ನನಗೆ ಗೊತ್ತಿರುವ ಹಾಗೆ, ನಮ್ಮ ದೇಶದಲ್ಲಿ ಕುರಿಗಳು ಹೆಚ್ಚಿನ ಮಾಂಸ ಕೊಡುತ್ತಿದ್ದರೆ, ಉಣ್ಣೆಯನ್ನು ಕೊಡುವುದಿಲ್ಲ. ಈಚೆಗೆ ಕ್ರಾಸ್ ಬ್ರೀಡಿಂಗ್ ಮಾಡಿ, ಉಣ್ಣೆ ಮತ್ತು ಮಾಂಸ ಎರಡೂ ಬರುವ ರೀತಿಯಲ್ಲಿ ಕಾರ್ಯಕ್ರಮ ಹಾಕಿಕೊಂಡು ಪ್ರಯೋಗ ಮಾಡಿದ್ದಾರೆ. ಇಲ್ಲಿಯೂ ಕೂಡ ಇದರ ಬಗ್ಗೆ ಯೋಚನೆ ಮಾಡಬೇಕು. ಸರಿಯಾದಂಥ ತಳಿಯಿಂದ ಉತ್ತಮವಾದಂಥ ಮಾಂಸವನ್ನು ಪಡೆಯುವುದರ ಜೊತೆಗೆ ಉತ್ತಮವಾದ ಉಣ್ಣೆಯನ್ನು ಪಡೆಯುವುದಕ್ಕೆ ತಾವು ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ನಾನು ಹೇಳುತ್ತೇನೆ.

ಮತ್ತೊಂದು ಕೊರತೆ ಕಂಡುಬರುವುದು ಹಣದ ವಿಚಾರಕ್ಕೆ ಸಂಬಂಧಪಟ್ಟದ್ದು. ಯಾವ ರೀತಿ ಈ ಸಮಸ್ಯೆಯನ್ನು ಬಗೆಹರಿಸುವರು ಎಂಬುದಕ್ಕೆ ಸಾಕಷ್ಟು ವಿವರಣೆಯಿಲ್ಲ. ಕೇಂದ್ರ ಸರಕಾರದಿಂದ ಸ್ವಲ್ಪ ಬರುವುದು, ರಾಜ್ಯ ಸರಕಾರ ಸ್ವಲ್ಪ ಒದಗಿಸುವುದು ಎಂದು ತಿಳಿಸಿದ್ದಾರೆ ಇದು ಅಗಾಧವಾದ ಕೆಲಸವಾದುದರಿಂದ ಸಾಕಷ್ಟು ಹಣ ಒದಗಿಸಬೇಕಾಗುವದು. ಈ ಬಿಲ್ಲಿನಲ್ಲಿ ಸಾಕಷ್ಟು ಅನುಕೂಲ ಮಾಡಿಲ್ಲ. ಹಣವಿಲ್ಲದೆ ಈ ಸಂಬಂಧವಾದ ಬೋರ್ಡು ಸುಸೂತ್ರವಾಗಿ ನಡೆಯುವದು ಕಷ್ಟವಾಗುತ್ತದೆ. ಹಣ ಇದಕ್ಕೇನು ಬೇಕೋ ಅದನ್ನು ಸರಿಯಾಗಿ ಶೇಖರಿಸಬೇಕು. ಸರಿಯಾದ ರೀತಿಯಲ್ಲಿ ಅದನ್ನು ವಿನಿಯೋಗ ಮಾಡಬೇಕು. ತಳಿಯನ್ನು ಉತ್ತಮಪಡಿಸುವದರ ಜೊತೆಗೆ ಸಂಖ್ಯೆಯನ್ನು ಕೂಡ ಹೆಚ್ಚಿಸಬೇಕು. ಇದಕ್ಕೆ ಮುಖ್ಯವಾಗಿ ಹಣ ಸಾಕಷ್ಟು ಬೇಕು ಎಂಬುದನ್ನು ಗಮನಿಸಬೇಕು. ಅನೇಕ ಕಡೆಗಳಲ್ಲಿ ಕೋಲ್ಡ್ ಸ್ಟೋರೇಜ ಇಟ್ಟು ಮುಖ್ಯ ಕೇಂದ್ರಗಳಲ್ಲಿ ಮಾಂಸವನ್ನು ಕೆಡದಂತೆ ಕಾಪಾಡಬೇಕು. ಇಂದು ಕೆಲವು ವೇಳೆ ಅದು ಜಾಗ್ರತೆ ಖರ್ಚಾಗದೆ ಉಳಿಯುವದು. ಆದುದರಿಂದ ಸ್ಟೋರೇಜಗೆ ಅನುಕೂಲ ಕಲ್ಪಿಸಿದರೆ ಕೆಡದಂತೆ ಇಡಲು ಅನುಕೂಲವಾಗುವದು ಕೆಲವು ವೇಳೆ ಬೆಳಿಗ್ಗೆ ಇದ್ದ ಬೆಲೆ ಸಾಯಂಕಾಲ ಇರುವುದಿಲ್ಲ, ಬಿದ್ದುಹೋಗುವುದು. ಆದುದರಿಂದ ಮುಖ್ಯವಾದ ಕೇಂದ್ರಗಳಲ್ಲಿ ಮಾಂಸವನ್ನು ಇಡಲು ಕೋಲ್ಡ್ ಸ್ಟೋರೇಜಗೆ ಅವಕಾಶ ಕಲ್ಪಿಸಬೇಕೆಂದು ಸಲಹೆ ಮಾಡುತ್ತೇನೆ.

3-00 P.M.

ನಮ್ಮಲ್ಲಿ ಉಣ್ಣೆ ವ್ಯವಸಾಯ ಬೇಕಾದ ಹಾಗೆ ನಡೆಯುತ್ತಿತ್ತು; ಈಚೆಗೆ ಅದು ಕಡಿಮೆಯಾಗಿದೆ. ಉತ್ತಮ ರೀತಿಯ ಉಣ್ಣೆಯನ್ನು ತಯಾರಿಸಿ ಶೇಖರಿಸಿ ಸರಿಯಾದ ರೀತಿಯಲ್ಲಿ ಅದನ್ನು ಉಪಯೋಗಿಸಲು ತಕ್ಕ ಏರ್ಪಾಡು ಮಾಡಬೇಕು. ಮೈಸೂರು

ರಾಜ್ಯದಲ್ಲಿ ಕುರಿಗಳನ್ನು ಸಾಕಲು ತಕ್ಕ ವಾತಾವರಣವಿದೆ. ಆದರೆ ಅದರ ಸದುಪಯೋಗ ಪಡೆಯುತ್ತಿಲ್ಲ. ಹಿಂದೆ ಇದಕ್ಕೆ ಸಂಬಂಧಪಟ್ಟ ಕೈಸರಿಹಿಂದ ಮಿಲ್ ಇತ್ತು ಅದನ್ನು ಮುಚ್ಚಿದಮೇಲೆ ಈಗ ಬಿನ್ನಿ ಮಿಲ್ ಇದೆ. ಆ ಮಿಲ್ಲಿನವರು ಮೈಸೂರಿಗೆ ಹೊರಗಡೆಯಿಂದ ಉಣ್ಣೆ ತರಿಸುವರು. ಈ ಸಂಬಂಧವಾದ ಕೈಗಾರಿಕೆ ಲಾಭದಾಯಕವಾಗಬೇಕಾದರೆ ಸರಿಯಾದ ಉಣ್ಣೆಯನ್ನು ತಯಾರಿಸುವುದಕ್ಕೆ ಮತ್ತು ಸರಿಯಾದ ರೀತಿಯಲ್ಲಿ ಉಪಯೋಗಿಸುವದಕ್ಕೆ ತಕ್ಕ ವ್ಯವಸ್ಥೆ ಮಾಡಬೇಕು. ಆದುದರಿಂದ ಆಗಲೇ ಹೇಳಿದ ಹಾಗೆ ಮಾನ್ಯ ಮಂತ್ರಿಗಳು ಬೋರ್ಡಿನ ಅಧಿಕಾರ ಸರಕಾರ ಇಟ್ಟುಕೊಳ್ಳುವುದು ಅಥವಾ ಬೋರ್ಡಿನ ಮೇಲೆ ಸರ್ವಾಧಿಕಾರವಿಟ್ಟುಕೊಳ್ಳುವುದು ಈ ವಿಚಾರದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಸುಮ್ಮನೆ ಬೋರ್ಡನ್ನು ಮಾಡಿದರೆ ಪ್ರಯೋಜನವಿಲ್ಲ. ಬೋರ್ಡ ಫಲದಾಯಕವಾಗಬೇಕಾದರೆ ಸರಿಯಾದ ರೀತಿಯಲ್ಲಿ ಹಣ ಶೇಖರಿಸಿ ಉಪಯೋಗಿಸಲು ವ್ಯವಸ್ಥೆ ಮಾಡಬೇಕು. ಈ ಬಿಲ್ಲಿನಿಂದ ಹಿಂದುಳಿದಿರುವ ಕುರಿ ಸಾಕುವ ಜನತೆಗೆ ಒಳ್ಳೆಯದಾಗಲಿ ಎಂದು ಹಾರೈಸಿ ಈ ಬಿಲ್ಲನ್ನು ಸ್ವಾಗತಿಸುತ್ತೇನೆ.

†ಶ್ರೀ ಬಿ. ಬೈರಪ್ಪಾಜಿ (ತುರುವೇಕೆರೆ).— ಮಾನ್ಯ ಸಭಾಧ್ಯಕ್ಷಿಣಿಯವರೆ, ಮಾನ್ಯ ಕೈಗಾರಿಕಾ ಮಂತ್ರಿಗಳು ತಂದಿರುವ ದಿ ಮೈಸೂರ ಷಿಪ್ ಅಂಡ ಷಿಪ್ ಪ್ರಾಡಕ್ಟ್ಸ ಬಿಲ್ಲನ್ನು ನಾನು ಆತ್ಮೀಯವಾಗಿ ಸ್ವಾಗತಿಸುತ್ತಿದ್ದೇನೆ. ಇವತ್ತು ದೇಶದಲ್ಲಿ ವ್ಯವಸಾಯ ಮಾಡತಕ್ಕ ರೈತ ಯಾವ ವರ್ಗಕ್ಕೇ ಸೇರಿರಲಿ ಎಲ್ಲೆಲ್ಲೂ ಕೂಡ ಕುರಿ ಬೇಸಾಯ ಮಾಡುವುದು ಮೊದಲಿಂದಲೂ ಕೂಡ ಬಂದ ಒಂದು ಕಸಬಾಗಿದೆ. ಸುಮಾರು ೭ ಕೋಟಿ ಕುರಿಗಳು ಈ ದೇಶದಲ್ಲಿವೆ ಎಂಬ ಅಂದಾಜಿದೆಯೆಂದು ಹೇಳಿದರು. ಇದು ನಮ್ಮ ದೇಶಕ್ಕೆ ಏನೇನೂ ಸಾಲದು. ಕುರಿ ಸಾಕುವ ಕಸಬು ಬಹಳ ಪವಿತ್ರವಾದುದು. ಕುರಿಯಿಂದ ಬರುವ ಎಲ್ಲಾ ಪದಾರ್ಥಗಳೂ ಕೂಡ ಉಪಯೋಗಕ್ಕೆ ಬರುವವು. ಯಾವುದೂ ಉಪಯೋಗಕ್ಕೆ ಬಾರದೆ ಇಲ್ಲ. ಕುರಿ ಉಣ್ಣೆಯನ್ನು ಕೊಡುತ್ತದೆ. ಆದರೆ ಈಗ ಬರುವ ಉಣ್ಣೆ ಅಷ್ಟು ಉತ್ತಮವಾಗಿಲ್ಲ. ಅದನ್ನು ಅಭಿವೃದ್ಧಿಪಡಿಸಬೇಕು. ಅದಕ್ಕಾಗಿ ಒಳ್ಳೆಯ ತಳಿಗಳನ್ನು ಹೊರದೇಶದಿಂದ ತರಿಸಬೇಕು. ಇದು ಬಹಳ ಮುಖ್ಯವಾದುದು ಎಂದು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ. ಶ್ರೀ ಶ್ಯಾಮಣ್ಣನವರು ಹೇಳಿದಹಾಗೆ ಕೆಲವು ಕುರಿಗಳು ಹೆಚ್ಚು ಮಾಂಸ ಕೊಡುತ್ತವೆ, ಮಾಂಸ ಹೆಚ್ಚು ಕೊಡುವ ತಳಿಗಳು ಉಣ್ಣೆ ಹೆಚ್ಚು ಕೊಡುವುದಿಲ್ಲ. ಉಣ್ಣೆ ಹೆಚ್ಚು ಕೊಡತಕ್ಕವು ಮಾಂಸ ಹೆಚ್ಚು ಕೊಡುವುದಿಲ್ಲ. ಆದುದರಿಂದ ಹೆಚ್ಚು ಉತ್ತಮವಾದ ಉಣ್ಣೆ ಮತ್ತು ಮಾಂಸ ಕೊಡುವ ಕುರಿಯ ತಳಿಯನ್ನು ಅಭಿವೃದ್ಧಿ ಮಾಡಬೇಕು. ಇದು ಬಹಳ ಮುಖ್ಯವಾದುದು. ರಚನೆ ಮಾಡುವ ಬೋರ್ಡಿನ ಕರ್ತವ್ಯವೇ ಇದು. ಇದೇ ಸರಕಾರದ ಉದ್ದೇಶ. ಈ ಉದ್ದೇಶವನ್ನರಿತು ಬೋರ್ಡ ತನ್ನ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸಬೇಕು.

ಈಗ ನಮ್ಮಲ್ಲಿ ಗೊಬ್ಬರದ ಅಭಾವ ಬಹಳವಾಗಿದೆ. ಇಂದು ಒಬ್ಬ ರೈತನ ಬಳಿ

ನೂರು ಕುರಿಗಳಿದ್ದರೂ ಸಹ ಅವನ ಭೂಮಿಗೆ ಬೇಕಾದ ಗೊಬ್ಬರ ಪಡೆಯಬಹುದು. ಅವರಿಂದ ಬೇರೆ ರಾಸಾಯನಿಕ ಗೊಬ್ಬರ ಕೇಳುವ ಅವಶ್ಯಕತೆ ಇರುವದಿಲ್ಲ. ಅಲ್ಲದೆ ಉಣ್ಣೆ ಉತ್ಪತ್ತಿಯಾಗುವದು. ಅದರಿಂದ ಕಂಬಳಿ ಮಾಡಬಹುದು ಮತ್ತು ಹೆಚ್ಚು ಹಣ ಸಹ ಬರುವದು. ಸಾಕಿದ ರೈತರಿಗೆ ನಷ್ಟವಾಗುವದಿಲ್ಲ, ಕುರಿ ಮಾರುವದರಿಂದ ಹೆಚ್ಚು ಹಣ ಬರುವದು, ಮಾಂಸ ದೊರೆಯುವದು, ಉಣ್ಣೆ ಸಿಕ್ಕುವದು, ಗೊಬ್ಬರ ದೊರೆಯುವದು; ಗೊಬ್ಬರಕ್ಕೆ ಕೊಡುವ ಹಣ ಉಳಿಯುವದು. ಆದುದರಿಂದ ರೈತರಿಗೆ ಕುರಿ ಸಾಕಾಣಿಕೆ ಎಲ್ಲಾ ರೀತಿಯಿಂದಲೂ ಒಳ್ಳೆಯದು, ಆರ್ಥಿಕವಾಗಿ ಅನುಕೂಲವಾಗುವದು. ಒಬ್ಬ ರೈತ ಕನಿಷ್ಟಪಕ್ಷ ನೂರು ಕುರಿಗಳನ್ನಾದರೂ ಸಾಕಿದರೆ ಅವನ ಸ್ಥಿತಿ ಉತ್ತಮವಾಗುವದರಲ್ಲಿ ಸಂದೇಹವಿಲ್ಲ ಎಂದು ನಾನು ಭಾವಿಸುತ್ತೇನೆ.

ನಮ್ಮ ತುಮಕೂರು ಜಿಲ್ಲೆಯಲ್ಲಿ ಚಿಕ್ಕನಾಯಕನ ಹಳ್ಳಿಯಲ್ಲಿ ನೋಡಿದಹಾಗೆ ಅಲ್ಲಿರುವ ಉಣ್ಣೆ ಕಸಬಿಗೆ ಸಹಾಯಕವಾಗುವದು. ಅಲ್ಲಿ ಈ ಕಸಬಿನಲ್ಲಿ ತೊಡಗಿರುವವರಿಗೆ ಅನೇಕ ರೀತಿಯಲ್ಲಿ ತೊಂದರೆಯಾಗಿದೆ. ಆರ್ಥಿಕವಾಗಿ ಅವರು ತೊಂದರೆಗೊಳಗಾಗಿದ್ದಾರೆ, ಅನುಕೂಲ ಸಾಕಷ್ಟಿಲ್ಲ ಮತ್ತು ಉಣ್ಣೆಯ ಉತ್ಪತ್ತಿ ಕೂಡ ಸಾಕಾದಷ್ಟಿಲ್ಲ, ಇದರಿಂದ ಅವರ ಕಸಬು ಕೃಶವಾಗಿದೆಯೆಂದು ಹೇಳಬಹುದು. ಅವರ ಅಭಿವೃದ್ಧಿಯಾಗಬೇಕು. ಉಣ್ಣೆ ಉತ್ಪತ್ತಿ ಹೆಚ್ಚಲು ಅವಕಾಶ ಕಲ್ಪಿಸಿ ಅದರಿಂದ ಕಂಬಳಿ ಮಾಡಿ ಹೆಚ್ಚು ಹಣ ಸಂಪಾದಿಸಲು ಅನುಕೂಲ ಕಲ್ಪಿಸಬೇಕು. ಹೀಗೆ ಮಾಡಿದರೆ ಈ ಕಸಬನ್ನು ಅಶ್ರಯಿಸುವವರಿಗೆ ಉತ್ತೇಜನ ಕೊಟ್ಟಂತಾಗುವದು. ಇದು ಸಣ್ಣ ಪ್ರಮಾಣದ ಗೃಹ ಕೈಗಾರಿಕೆ. ಇದನ್ನವಲಂಬಿಸಲು ಅವಕಾಶ ದೊರೆತರೆ ಮನೆಯ ಎಲ್ಲ ಜನರಿಗೂ ಉದ್ಯೋಗ ದೊರೆತಂತಾಗುತ್ತದೆ.

ಈ ರೀತಿಯಾಗಿ ಒಂದು ಕುರಿ ಸಾಕುವುದರ ಮೂಲಕ ಮನೆಯಲ್ಲಿರತಕ್ಕ ಜನರಿಗೆಲ್ಲಾ ಒಂದು ಕೈಗಾರಿಕೆಯನ್ನು ಒದಗಿಸಿದಂತಾಗುತ್ತದೆ; ಅಂದರೆ ಅನೇಕರಿಗೆ ಉದ್ಯೋಗ ದೊರೆಯುವಂತಾಗುತ್ತದೆ. ಇದರಿಂದ ಅನೇಕ ಸಂಸಾರಗಳ ಆರ್ಥಿಕ ಪರಿಸ್ಥಿತಿ ಉತ್ತಮವಾಗುತ್ತದೆ. ಸರ್ಕಾರದವರು ಈ ಬೋರ್ಡನ್ನು ಒಂದು ಒಳ್ಳೆಯ ಸುದುದ್ದೇಶದಿಂದ ಮಾಡಿದ್ದಾರೆ. ಆದರೆ ಇದರ ಕಾರ್ಯವ್ಯಾಪ್ತಿಯನ್ನು ಅವರು ಯಾವ ರೀತಿಯಲ್ಲೂ ಮೊಟಕು ಮಾಡದೆ ಇದಕ್ಕೆ ಹೆಚ್ಚಿನ ಹಣವನ್ನೂ ಮತ್ತು ಅಧಿಕಾರವನ್ನೂ ಕೊಟ್ಟು, ಇದು ಯಶಸ್ವಿಯಾಗಿ ಕೆಲಸ ಮಾಡುವುದಕ್ಕೆ ಅನುಕೂಲ ಮಾಡಿಕೊಟ್ಟು ತನ್ಮೂಲಕ ಕುರಿ ಸಾಕತಕ್ಕ ಜನರ ಸಂಪದಭಿವೃದ್ಧಿಯನ್ನು ಉತ್ತಮಪಡಿಸಬೇಕೆಂಬುದೇ ಸರ್ಕಾರದವರ ಮುಖ್ಯ ಗುರಿ. ಆದುದರಿಂದ ಈ ಬಿಲ್ಲಿಗೆ ನಾನು ನನ್ನ ಹೃತ್ಪೂರ್ವಕ ಬೆಂಬಲವನ್ನು ನೀಡುತ್ತೇನೆ. ಈ ಬೋರ್ಡಿನಲ್ಲಿ ನಮ್ಮ ಸಚಿವರಿಗೆ ಹೆಚ್ಚಿನ ಆಸಕ್ತಿ ಇದೆಯೆಂಬುದು ಇದರಿಂದಲೇ ವೇದ್ಯವಾಗುತ್ತದೆ. ಇಡೀ ಇಂಡಿಯಾದಲ್ಲೇ ನಮ್ಮ ಮೈಸೂರು ಕುರಿ ಸಾಕಾಣಿಕೆಯಲ್ಲಿ ನಾಲ್ಕನೇ ಸ್ಥಾನವನ್ನು ಪಡೆದಿದ್ದರೂ ಇಲ್ಲಿ ಕುರಿ ಸಾಕತಕ್ಕವರಿಗೂ ಮತ್ತು ಕಂಬಳಿ ನೇಯತಕ್ಕ ಜನರಿಗೂ ಹೆಚ್ಚಿನ ರೀತಿಯಲ್ಲಿ ಉದ್ಯೋಗವನ್ನು ದೊರಕಿಸಿಕೊಟ್ಟು ಅವರಿಗೆ ಈ ಬೋರ್ಡಿನ

ಮೂಲಕ ಒಂದು ಬೆಂಬಲವನ್ನು ನೀಡಬೇಕಾಗಿದೆ. ಈ ಕಸುಬಿನಲ್ಲಿ ನಿರತರಾಗಿರ ತಕ್ಕ ಜನರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳು ಉತ್ತಮಗೊಳ್ಳಬೇಕು. ಆದರೆ ಈ ಬೋರ್ಡಿನಿಂದ ಆ ಕಾರ್ಯ ಸಾಧನೆಯಾಗುತ್ತದೆಂದು ನಾನಾದರೂ ಭಾವಿಸಿದ್ದೇನೆ.

ಈ ಬೋರ್ಡಿಗೆ ಈಗಾಗಲೇ ಒಬ್ಬ ದಕ್ಷ ಅಧ್ಯಕ್ಷರನ್ನೂ ಕೂಡ ನೇಮಕ ಮಾಡಿದ್ದಾರೆಂದು ನಾನು ಕೇಳುತ್ತಿದ್ದೇನೆ. ಇದರಲ್ಲಿ ಆ ಅಧ್ಯಕ್ಷರಿಗೆ ಹೆಚ್ಚಿನ ಅನುಭವ ಇದೆಯೆಂದು ಗೊತ್ತಾಗಿದೆ. ಅಷ್ಟೇ ಅಲ್ಲದೆ ಇಂಥ ಬೋರ್ಡುಗಳಲ್ಲಿ ಕೆಲಸ ಮಾಡ ತಕ್ಕ ಜನರು ನಿಸ್ಪೃಹರೂ ದಕ್ಷರೂ ಮತ್ತು ಉತ್ತೇಜನದಿಂದ ಕೆಲಸ ಮಾಡತಕ್ಕವರೂ ಆದರೆ ಒಳ್ಳೆಯದು. ಪ್ರಾಮಾಣಿಕತೆಯಿಂದ ಕೆಲಸ ಮಾಡತಕ್ಕ ಜನರನ್ನೇ ಇದಕ್ಕೆ ನೇಮಕ ಮಾಡಬೇಕಾದ್ದು ಅತ್ಯಗತ್ಯ. ಕಾರಣ ಇದಕ್ಕೆ ಕೊಡತಕ್ಕ ಹಣ ಸದುದ್ದೇಶಕ್ಕೆ ವಿನಿಯೋಗವಾಗಬೇಕು, ಆದರೆ ನಮ್ಮಲ್ಲಿ ಅನೇಕ ಬೋರ್ಡುಗಳಿವೆ. ಆ ಖಾದೀ ಬೋರ್ಡಿಗೆ ಸರ್ಕಾರ ಕೊಟ್ಟಿದ್ದ ಹಣ ಬಹಳಮಟ್ಟಿಗೆ ದುರುಪಯೋಗವಾದದ್ದು ಎಲ್ಲ ರಿಗೂ ತಿಳಿದ ವಿಷಯ ಇಲ್ಲಿ ಹಾಗಾಗಬಾರದೆಂಬುದು ನಮ್ಮೆಲ್ಲರ ಆಸೆ. ಅದಕ್ಕೆ ಸರ್ಕಾರದವರು ಒಳ್ಳೇ ದಕ್ಷರಾದ ಅಧ್ಯಕ್ಷರನ್ನು ನೇಮಕ ಮಾಡಿರುವುದಕ್ಕಾಗಿ ಸರ್ಕಾರಕ್ಕೂ ಮಾನ್ಯ ಸಚಿವರಿಗೂ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎನ್ ಬಸವಯ್ಯ (ಚಿಕ್ಕನಾಯಕನಹಳ್ಳಿ)—ಸನ್ಮಾನ್ಯ ಅಧ್ಯಕ್ಷರೇ, ಕುರಿ ಸಾಕಾಣಿಕೆಗೂ ಮತ್ತು ಈ ಕುರಿ ಉಣ್ಣೆಯ ಕಸುಬಿನಲ್ಲಿ ತೊಡಗಿರತಕ್ಕ ಲಕ್ಷಾಂ ತರ ಜನರ ಅಭಿವೃದ್ಧಿಯನ್ನು ಸಾಧಿಸತಕ್ಕಂಥ ಈ ಒಂದು ಬಿಲ್ಲನ್ನು ಸರ್ಕಾರದವರು ಈ ಸದನದ ಮುಂದೆ ತಂದುದಕ್ಕಾಗಿ ನಾನು ಮಾನ್ಯ ಕೈಗಾರಿಕಾ ಮಂತ್ರಿಗಳವರಿಗೆ ನನ್ನ ಧನ್ಯವಾದಗಳನ್ನರ್ಪಿಸುತ್ತೇನೆ.

ನಮ್ಮ ಭಾರತ ದೇಶದಲ್ಲಿ ಸುಮಾರು ಶೇಕಡಾ ಉ೦ರಷ್ಟು ಜನರು ವ್ಯವಸಾಯ ವನ್ನೇ ಅವಲಂಬಿಸಿರತಕ್ಕ ಜನರನ್ನೊಳಗೊಂಡಿದೆ. ಈ ಶೇಕಡಾ ಉ೦ರಷ್ಟು ಇರತಕ್ಕ ಜನರಲ್ಲಿ ಒಂದು ಭಾಗದ ಜನರು ಅಂದರೆ ರೈತರು ಈ ಕುರಿ ಸಾಕಾಣಿಕೆಯಲ್ಲಿ ತೊಡಗಿದ್ದಾರೆಂಬುದನ್ನು ನಾನು ಬಲ್ಲೆ. ಆದರೆ ಇತ್ತೀಚೆಗೆ ಅಂಥ ಕಾರಣಗಳಿಂದ ನಮ್ಮಲ್ಲಿ ಕುರಿ ಸಾಕತಕ್ಕ ಜನರ ಸಂಖ್ಯೆ ಬಹಳ ಕಡಿಮೆಯಾಗುವುದಕ್ಕೆ ಪ್ರಾರಂಭ ವಾಗಿದೆ. ಅದಕ್ಕೆ ಸರಿಯಾಗಿ ಇಲ್ಲಿ ಮಾಂಸ ತಿನ್ನತಕ್ಕವರ ಸಂಖ್ಯೆ ಜಾಸ್ತಿಯಾಗು ತ್ತಿದೆ. ಭಾರತದಲ್ಲಿ ನಮ್ಮ ಮೈಸೂರು ರಾಜ್ಯ ಕುರಿ ಸಾಕಾಣಿಕೆಯಲ್ಲಿ ನಾಲ್ಕನೇ ಸ್ಥಾನವನ್ನು ಪಡೆದಿದ್ದರೂ ಇಲ್ಲಿ ಉತ್ತಮ ಮಾಂಸವನ್ನು ದೊರಕಿಸಿ ಕೊಡತಕ್ಕಂಥ ಕುರಿಗಳೂ ಮತ್ತು ಉತ್ತಮ ದರ್ಜೆಯ ಹೆಚ್ಚು ಉಣ್ಣೆಯನ್ನು ದೊರಕಿಸಿಕೊಡತಕ್ಕಂಥ ಕುರಿಗಳು ಬಹಳ ಕಡಿಮೆಯಾಗುತ್ತಿವೆ. ದೇಶಕ್ಕೆ ವ್ಯವಸಾಯಗಾರನು ಹೇಗೆ ಬೆನ್ನೆಲುಬೋ ಹಾಗೇ ದೇಶದ ವ್ಯವಸಾಯಗಾರರಿಗೆ ಈ ಕುರಿಗಳೂ ಕೂಡ ಬೆನ್ನು ಎಲುಬಿದ್ದಂತೆ ಇಂಥ ಬೆನ್ನು ಎಲುಬಿನಂಥ ಕುರಿಗಳನ್ನು ಸಾಕಿ ಅವುಗಳನ್ನು ಉತ್ತಮ

ಪಡಿಸುವುದಕ್ಕಾಗಿ ಸರ್ಕಾರದವರು ಈ ಒಂದು ಬೋರ್ಡ್‌ನ್ನು ರಚಿಸುವುದಕ್ಕಾಗಿ ಈ ಬಿಲ್ಲನ್ನು ತಂದುದು ಕುರುಡನಿಗೆ ಕಣ್ಣನ್ನು ಕೊಟ್ಟ ಹಾಗಾಗಿದೆ ಎಂದು ನಾನು ಭಾವಿಸುತ್ತೇನೆ. ಆಗಲೇ ನಮ್ಮ ಮಿತ್ರರಾದ ಶ್ರೀ ಶಾಮಣ್ಣನವರು ಹೇಳಿದಂತೆ ಇಲ್ಲಿ ಇದ್ದ ಬಂಜರ್ ಭೂಮಿ ಏನಿತ್ತು ಅದೆಲ್ಲವನ್ನೂ ಸರ್ಕಾರದವರು ವ್ಯವಸಾಯಕ್ಕಾಗಿ ವಿಲೇವಾರಿ ಮಾಡಿದ್ದಾರೆ. ಆದುದರಿಂದ ಇಲ್ಲಿ ಕುರಿ ಸಾಕತಕ್ಕವನಿಗೆ ಸಾಕಷ್ಟು ಹುಲ್ಲುಗಾವಲುಗಳಿರುವುದಿಲ್ಲ. ಆದುದರಿಂದ ಮಾನ್ಯ ಅರಣ್ಯ ಸಚಿವರು ಸರ್ಕಾರಿ ಅರಣ್ಯದಲ್ಲಿ ಕುರಿಗಳನ್ನು ಮೇಯಿಸುವುದಕ್ಕೆ ಅವರು ಅವಕಾಶ ಮಾಡಿಕೊಡಬೇಕು. ಕುರಿಗಳು ಅರಣ್ಯದಲ್ಲಿ ಮೇದರೆ ಅರಣ್ಯಕ್ಕೇನೂ ಅಪಾಯ ಆಗುವುದಿಲ್ಲ. ಆದುದರಿಂದ ಅವರು ಈ ಒಂದು ಅನುಕೂಲವನ್ನು ಕಲ್ಪಿಸಿಕೊಡಬೇಕೆಂದು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಕಂಬಳಿ ಮಾಡತಕ್ಕವರ ವಿಚಾರಕ್ಕೆ ಬಂದರೆ ಹಿಂದೆ ಒಂದು ಪಲ್ಲ ಕಾಳಿಗೆ ಒಂದು ಕಂಬಳಿಯನ್ನು ನೆಯ್ದು ಕೊಡುತ್ತಿದ್ದರಂತೆ. ಹೀಗಾಗಿ ಅವರು ನಾವೇಕೆ ಭೂಮಿ ಇಟ್ಟುಕೊಳ್ಳಬೇಕು? ನಾವೇಕೆ ಬೇಸಾಯ ಮಾಡಬೇಕು? ಅನ್ನುವುದು ಅವರ ಮನೋಭಿಪ್ರಾಯವಾಗಿತ್ತು. ಆದರೆ ಇತ್ತೀಚೆಗೆ ಈ ಮಿಲ್ಲುಗಳ ಮಾಲು ಅಂದರೆ ರಗ್ಗು ಮತ್ತು ದುಪ್ಪಟಿಗಳು ಅಗ್ಗದರದಲ್ಲಿ ಯಾವಾಗ ಸಿಕ್ಕುವುದಕ್ಕೆ ಪ್ರಾರಂಭವಾಯಿತೋ ಆಗ ಈ ಕಂಬಳಿ ನೇಕಾರರ ಸ್ಥಿತಿ ಬಹಳ ದುಸ್ಥಿತಿಗೆ ಬಂತು. ಆದರೆ ಕೆಲವು ಬ್ಯಾಂಕುಗಳ ಮೂಲಕ ಇವರಿಗೆ ಸಹಾಯ ಸಹಕಾರಗಳನ್ನು ಸರ್ಕಾರ ಕಲ್ಪಿಸಿದರೂ ಅದು ಮಧ್ಯವರ್ತಿ ಜನರಿಂದ ಅವರಿಗೆ ಮುಟ್ಟದೆ ಅವರ ಜೀವನ ಬಹಳ ಕಷ್ಟಕ್ಕೆ ಬಂದಿದೆ. ಅಲ್ಲದೆ ಇಲ್ಲಿ ಅವರಿಗೆ ದೊರೆಯತಕ್ಕ ಉಣ್ಣೆಯಲ್ಲಿ ಉತ್ತಮ ತರಹ ವಸ್ತುಗಳನ್ನು ಮಾಡುವುದಕ್ಕೆ ಉತ್ತೇಜನ ದೊರೆಯಲಿಲ್ಲ. ಹೀಗಾಗಿ ಇಲ್ಲಿ ಈ ಕಸುಬು ಅಭಿವೃದ್ಧಿ ಹೊಂದದೆ ಕ್ಷೀಣಿಸುತ್ತಾ ಬಂದಿತು. ಈ ಕಾರಣದಿಂದ ಈ ದಿವಸ ಆ ಪಾಣಿಪಟ್ ಮತ್ತು ಪಂಜಾಬಿನಿಂದ ಜನರು ಇಲ್ಲಿಗೆ ಉಣ್ಣೆಯನ್ನು ಕೊಳ್ಳುವುದಕ್ಕೆ ಬಂದು ಇಲ್ಲಿ ಪೌಂಡ್ ಒಂದಕ್ಕೆ ಒಂದು ರೂಪಾಯಿ ಒಂದೂಕಾಲು ರೂಪಾಯಿ ಕೊಟ್ಟು ಕೊಂಡುಕೊಂಡು ಅದನ್ನು ತೆಗೆದುಕೊಂಡು ಹೋಗಿ ಅದರಲ್ಲಿ ಅವರು ಉತ್ತಮ ದರ್ಜೆಯ ಮಾಲನ್ನು ತಯಾರಿಸಿ ಮತ್ತೆ ನಮ್ಮ ಜನರಿಗೇ ಪೌಂಡ್ ಒಂದಕ್ಕೆ ೫-೬ ರೂಪಾಯಿಗಳ ದರದಲ್ಲಿ ಮಾರಾಟ ಮಾಡಿ ಲಾಭ ಪಡೆಯುತ್ತಿದ್ದಾರೆ. ಆದರೆ ನಮ್ಮಲ್ಲಿ ಈ ಉಪ ಕಸುಬಿನಿಂದ ಜೀವನ ಮಾಡುತ್ತಿದ್ದ ಜನರು ಬಹಳ ಕಷ್ಟಕ್ಕೆ ಸಿಕ್ಕಿದ್ದಾರೆ. ಇಂಥ ಒಂದು ಆಪತ್ಕಾಲದಲ್ಲಿ ಸರ್ಕಾರದವರು ಈ ಬೋರ್ಡನ್ನು ತೆರೆಯುವುದಕ್ಕೆ ಪ್ರಾರಂಭ ಮಾಡಿದ್ದು ಈ ನಮ್ಮ ಕುರಿ ಸಾಕತಕ್ಕವರ ಮತ್ತು ಕಂಬಳಿ ನೇಯುತಕ್ಕವರ ಭಾಗ್ಯದ ಬಾಗಿಲು ತೆರೆದಂತಾಯಿತೆಂದು ನಾನು ಭಾವಿಸುತ್ತೇನೆ. ಆದರೆ ಸರ್ಕಾರದವರು ಈ ಬೋರ್ಡಿನಲ್ಲಿ ಹೆಚ್ಚಿನ ಅಧಿಕಾರಗಳನ್ನು ತೆಗೆದುಕೊಳ್ಳದೆ ಅಲ್ಲಿನ ಅಧ್ಯಕ್ಷರಿಗೇ ಎಲ್ಲ ಅಧಿಕಾರಗಳನ್ನೂ ಕೊಟ್ಟು, ಅದಕ್ಕೆ ಹೆಚ್ಚಿನ ಹಣವನ್ನೂ ಕೂಡ ಒದಗಿಸಿ ದೇಶದ ಆರ್ಥಿಕ ಪರಿಸ್ಥಿತಿಯನ್ನು ಉತ್ತಮ ಪಡಿಸುತ್ತಾರೆಂದು ನಾನು

ಭಾವಿಸುತ್ತೇನೆ. ಆದರೆ ಹಿಂದಿನ ಕಾಲದಿಂದಲೂ ಜನರಲ್ಲಿ ಈ ಕುರಿ ಕಾಯುತಕ್ಕವರ ಹಾಗೂ ಕಂಬಳಿಯನ್ನು ಮಾಡತಕ್ಕವರ ವಿಚಾರದಲ್ಲಿ ಒಂದು ಏನು ಭಾವನೆ ಇತ್ತೆಂದರೆ ಇವರು 'ದಡ್ಡರು' ಎಂಬ ಭಾವನೆ ಇತ್ತು. ಹೀಗಾಗಿ ಅವರು ಅನೇಕ ಶತಮಾನಗಳಿಂದಲೂ ಆರ್ಥಿಕ ಮತ್ತು ಶೈಕ್ಷಣಿಕ ಅಭಿವೃದ್ಧಿಯಲ್ಲಿ ಇತರೇ ಕೋಮುಗಳ ತುಳಿತಕ್ಕೆ ಸಿಕ್ಕಿ ಬಹಳವಾಗಿ ಹಿಂದುಳಿದವರಾಗಿದ್ದಾರೆ. ನಾನು ವಿರೋಧ ಪಕ್ಷದ ಒಬ್ಬ ಸದಸ್ಯನಾದರೂ ಸರ್ಕಾರದವರು ಇಂಥ ಒಳ್ಳೇ ಕೆಲಸಗಳನ್ನು ಮಾಡಿದರೆ ಅದಕ್ಕೆ ನನ್ನ ಮನ್ನಣೆ ಯಾವಾಗಲೂ ಇದ್ದೇ ಇದೆ.

ಇನ್ನು ಈ ಕುರಿ ಸಾಕಾಣಿಕೆಯಿಂದ ಆಗತಕ್ಕ ದೊಡ್ಡ ಉಪಕಾರ ಎಂದರೆ ದೇಶದಲ್ಲಿ ವ್ಯವಸಾಯಕ್ಕೆ ಬೇಕಾದ ಅತಿ ಮುಖ್ಯವಾದ ಗೊಬ್ಬರದ ಸಮಸ್ಯೆಯನ್ನು ಇದರಿಂದ ನೀಗಲು ಸಾಧ್ಯವಿದೆ. ನಮ್ಮ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಸಾಮಾನ್ಯವಾಗಿ ನಾವು ಪ್ರತಿವರ್ಷ ಮಾರೀಕಣಿವೆ ಹತ್ರ ಹೋಗಿ ಕುರಿ ಗೊಬ್ಬರ ತರಬೇಕಾಗಿತ್ತು. ಕಾರಣ ಆ ಕುರಿ ಗೊಬ್ಬರ ಅಡಕೆ ಮತ್ತು ತೆಂಗಿನ ತೋಟಕ್ಕೆ ಬಹಳ ಶ್ರೇಷ್ಠವಾದದ್ದು. ಈ ಎರಡು ಬೆಳೆಗಳಿಗೆ ಕೃತಕ ಗೊಬ್ಬರ ಒಳ್ಳೆಯದಲ್ಲ. ಆದುದರಿಂದ ಕುರಿ ಗೊಬ್ಬರ ಬೇಸಾಯಕ್ಕೂ ಬಹಳ ಶ್ರೇಷ್ಠವಾದದ್ದು.

ಇನ್ನು ಮಾಂಸ ತಿನ್ನತಕ್ಕವರ ವಿಚಾರಕ್ಕೆ ಬಂದರೆ ಅವರ ಸಂಖ್ಯೆಯೂ ದಿನದಿನಕ್ಕೂ ಏರುತ್ತಿದೆ. ನಮ್ಮ ಮೈಸೂರಲ್ಲೇ ಇವರ ಸಂಖ್ಯೆ ಕಡಿಮೆ. ಬೇರೆ ದೇಶಗಳಲ್ಲಿ ಇದು ಬಹಳ ಜಾಸ್ತಿ ಇದೆ. ಇಂಡಿಯಾದಲ್ಲಿ ಮಾಂಸ ತಿನ್ನದೆ ಇದ್ದಂಥವರ ಸಂಖ್ಯೆ ಶೇ ೪ ಇತ್ತು. ಈಗ ಅದು ಶೇ ೨ಕ್ಕೆ ಇಳಿದಿದೆ. ಇಲ್ಲಿ ದೊಡ್ಡ ದೊಡ್ಡ ನಗರಗಳಲ್ಲಿ ಮಾತ್ರ ಒಳ್ಳೆ ಮಾಂಸ ಸಿಕ್ಕುತ್ತಿದೆ. ಗ್ರಾಮಾಂತರ ಪ್ರದೇಶದಲ್ಲಿ ಸಿಕ್ಕುವುದಿಲ್ಲ.

ಶ್ರೀ ಟಿ. ಆರ್. ಶಾಮಣ್ಣ.— ಮಾಂಸ ತಿನ್ನತಕ್ಕವರ ಸಂಖ್ಯೆ ಜಾಸ್ತಿಯಾಗಿಲ್ಲ. ಸೋಮವಾರ, ಶನಿವಾರ ಮಾಂಸವನ್ನು ತಿನ್ನುತ್ತಿರಲಿಲ್ಲ. ಈಗ ಆ ದಿನಗಳಲ್ಲೂ ಜನರು ತಿನ್ನುವದಕ್ಕೆ ಪ್ರಾರಂಭ ಮಾಡಿರುವದರಿಂದ ಹಾಗಾಗಿದೆ. ಈಗ ಗ್ರಾಮಾಂತರ ಪ್ರದೇಶಗಳಲ್ಲಿ ಬಹಳ ವ್ಯವಸ್ಥಿತವಾದ ಮತ್ತು ಆರೋಗ್ಯಕರವಾದ ಮಾಂಸ ದೊರೆಯುವದು ಬಹಳ ಕಡಿಮೆಯಾಗಿದೆ. ಹಿಂದೆ ಆರೋಗ್ಯ ಇಲಾಖೆಯಿಂದಲೇ ಒಬ್ಬ ಅಧಿಕಾರಿ ಹೋಗಿ ಕುರಿ ಕಾಯಿಲೆಯಾಗಿದೆಯೋ ಇಲ್ಲವೇ ಎಂಬುದನ್ನು ತನಿಖೆ ಮಾಡಿ ಅದನ್ನು ತಿನ್ನುವದಕ್ಕೆ ಯೋಗ್ಯವಾಗಿದೆಯೋ ಇಲ್ಲವೆ ಎಂಬುದನ್ನು ಸರ್ಟಿಫೈ ಮಾಡುತ್ತಿದ್ದರು. ಆ ರೀತಿಯ ವ್ಯವಸ್ಥೆ ಈಗ ಇಲ್ಲದೇ ಇರುವದರಿಂದ ಜನರು ಅನೇಕ ರೋಗ ರುಜಿನಗಳಿಗೆ ಒಳಗಾಗುತ್ತಿದ್ದಾರೆ. ಆದ್ದರಿಂದ ಈ ಒಂದು ಬೋರ್ಡಿನ ಮುಖಾಂತರ ಕುರಿ ಸಾಕಾಣಿಕೆಗೆ ಮತ್ತು ಕುರಿಗಳ ಉತ್ಪಾದನೆಗೆ ಹೆಚ್ಚಿನ ಸಹಾಯವನ್ನು ಒದಗಿಸಿಕೊಟ್ಟು ಅನೇಕ ಜನರಿಗೆ ಇವರಿಂದ ಹೆಚ್ಚಿಗೆ ಉದ್ಯೋಗಗಳು ದೊರೆಯುವಂಥ ಒಂದು ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ನಾನು ಹೇಳುತ್ತೇನೆ. ಈ ಒಂದು ಬೋರ್ಡನ್ನು ರಚನೆ ಮಾಡುವದರಿಂದ ಸನ್ಮಾನ್ಯ

ಕೈಗಾರಿಕೆಯ ಮಂತ್ರಿಗಳಲ್ಲಿ ನನ್ನ ವೈಯಕ್ತಿಕವಾದ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈ ಒಂದು ಕೈಗಾರಿಕೆಗೆ ಸಂಬಂಧಪಟ್ಟವರೆಲ್ಲರೂ ಬಹಳವಾಗಿ ಅವರ ಜೀವಾವಧಿಯ ಕೊನೆಯ ವರೆಗೂ ತಮ್ಮನ್ನು ನೆನೆಸುತ್ತಾರೆ. ಏಕೆಂದರೆ ತಾವು ಮಂತ್ರಿಗಳಾಗಿ ಇಂತಹ ಒಂದು ಘನೋದ್ದೇಶವನ್ನು ಇಟ್ಟುಕೊಂಡು ಕುರಿ ಸಾಕಾಣಿಕೆಯವರ ಸಂರಕ್ಷಣೆ ಮಾಡುವ ಉದ್ದೇಶದಿಂದ ಈ ಬಿಲ್ಲನ್ನು ತಂದ್ದೀರಿ ಒಟ್ಟಿನಲ್ಲಿ ಈ ಬಿಲ್ಲನ್ನು ಪಾಸ್ ಮಾಡಿ ಆ ಜನರಿಗೆ ಹೆಚ್ಚಿಗೆ ಆರ್ಥಿಕ ಸಹಾಯವನ್ನು ಒದಗಿಸಿ ಕೊಟ್ಟು ಅದರ ಪ್ರಕಾರ ರಚನೆ ಮಾಡ ತಕ್ಕ ಬೋರ್ಡಿನವರು ಆ ಜನತೆಗೆ ಸರ್ಕಾರದವರು ಶೈಕ್ಷಣಿಕವಾಗಿ, ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ರಕ್ಷಣೆ ಕೊಡುತ್ತಾರೆಂದು ನಾನು ಭಾವಿಸಿ ಮತ್ತೊಮ್ಮೆ ಅಧ್ಯಕ್ಷರಿಗೆ ಹೃತ್ಪೂರ್ವಕವಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಂ. ನಂಜೇಗೌಡ (ಗಂಡಸಿ).— ಸನ್ಮಾನ್ಯ ಅಧ್ಯಕ್ಷರೇ, ಈ ದಿನ ಸರ್ಕಾರದವರು ಈ ಸಭೆಯ ಮುಂದೆ ಇಟ್ಟಿರತಕ್ಕ ಈ ಮಸೂದೆಯನ್ನು ನಾನು ಸ್ವಾಗತಿಸುತ್ತಾ ಕೆಲವು ವಿಚಾರಗಳನ್ನು ಹೇಳಬೇಕಾಗಿದೆ. ನಮ್ಮ ಮೈಸೂರು ದೇಶದಲ್ಲಿ ಈ ಕುರಿ ಸಾಕಣೆ ನಾಲ್ಕನೆಯ ಸ್ಥಾನವನ್ನು ಪಡೆದಿರತಕ್ಕಂಥ ವಿಚಾರ ಎಲ್ಲರಿಗೂ ತಿಳಿದಿದೆ. ಆದರೆ ನಮ್ಮ ಹಾಸನ ಜಿಲ್ಲೆ ಕುರಿತು ಉತ್ಕೃಷ್ಟವಾದ ತಳಿಯ ವಿಚಾರದಲ್ಲಿ ಈ ದಿವಸ ಪ್ರಥಮ ಸ್ಥಾನವನ್ನು ಪಡೆದಿದೆ. ನನ್ನ ಹಿಂದೆ ಮಾತನಾಡಿದಂಥ ಮಾನ್ಯ ಸದಸ್ಯರು ಈ ಬಿಲ್ಲನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದರು. ಕಾರಣ ಈ ಮಸೂದೆಯಲ್ಲಿಯೇ ವೇದ್ಯವಾಗಿದೆ. ಇದರಲ್ಲಿ ಈ ಕಸಬುದಾರರಿಗೆ ರಕ್ಷಣೆ ಕೊಡುವುದು, ಕುರಿಗಳನ್ನು ಸಾಕುವ ರೈತರಿಗೆ ಒಂದು ರೀತಿಯಲ್ಲಿ ರಕ್ಷಣೆ ಕೊಡುವುದು ಮತ್ತು ಈ ದೇಶದಲ್ಲಿರತಕ್ಕ ಇದರ ಸಂಬಂಧಪಟ್ಟ ಜನರಿಗೆ ಇದರಿಂದ ಹೆಚ್ಚಿಗೆ ಅನುಕೂಲವಾಗುತ್ತದೆನ್ನುವ ದೃಷ್ಟಿಯಿಂದ ನಾನೂ ಕೂಡ ಮತ್ತೊಮ್ಮೆ ಈ ಬಗ್ಗೆ ಸರ್ಕಾರದವರನ್ನು ಅಭಿನಂದಿಸಬೇಕಾಗುತ್ತದೆ. ಈ ಸಂದರ್ಭದಲ್ಲಿ ನಾನು ಒಂದು ವಿಚಾರವನ್ನು ಸರ್ಕಾರದ ಗಮನಕ್ಕೆ ತರಬೇಕಾಗಿದೆ. ಹಾಸನದಲ್ಲಿರತಕ್ಕ ಕುರಿಗಳು ಮೈಸೂರು ದೇಶದ ಇತರ ಜಿಲ್ಲೆಗಳಿಗಿಂತ ಉತ್ಕೃಷ್ಟವಾದುದಾಗಿವೆ. ಇದು ಎಲ್ಲರಿಗೂ ತಿಳಿದಿರುವ ವಿಚಾರ. ಈ ಜಿಲ್ಲೆಯಲ್ಲಿರತಕ್ಕ ಕುರಿಗಳ ಪೈಕಿ ದೊರೆಯುತ್ತಾ ಇರತಕ್ಕ ಉತ್ಕೃಷ್ಟವಾದ ಬೀಜದ ತಳಿಗಳನ್ನು ತೆಗೆದು ಇತರ ದೇಶಗಳಿಗೆ ಕಳುಹಿಸುತ್ತಿದ್ದಾರೆ. ನಮ್ಮ ಜಿಲ್ಲೆಯಲ್ಲಿ ದೊರೆಯುತಕ್ಕ ಬಣ್ಣದ ಕುರಿಗಳು ಅದರಲ್ಲಿಯೂ ಕಪ್ಪು ಬಣ್ಣದ ಕುರಿಗಳು ಬಹಳ ಉತ್ತಮವಾದಂಥ ಹಾಗೂ ಉತ್ಕೃಷ್ಟವಾದಂಥಾದ್ದು. ಅಂತಹುಗಳನ್ನು ಉತ್ತಮಪಡಿಸುವ ಕಾರ್ಯಕ್ರಮವನ್ನು ಈ ಬೋರ್ಡ ಮುಖಾಂತರ ಹಾಕಿಕೊಳ್ಳಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ. ಇವತ್ತಿನ ದಿವಸ ಹಾಸನ ಜಿಲ್ಲೆಯಲ್ಲಿ ಯಥೇಚ್ಛವಾಗಿ ಇರತಕ್ಕ ಅಮೃತಮಹಲ್ ಕಾವಲ್ ಉಪಯೋಗವಾಗದೆ ಹಾಗೆಯೇ ಬಿದ್ದಿದೆ. ಈಗ ಜವಾಬ್ದಾರಿ ಸರ್ಕಾರ ಬರುವುದಕ್ಕೆ ಮುಂಚೆ ಇದ್ದಂಥ ಸರ್ಕಾರ ಹಾಸನ ಜಿಲ್ಲೆಯಲ್ಲಿ ಕುರಿ ಸಾಕಣೆಗೋಸ್ಕರ ಒಂದು ಫಾರಂನ್ನು ಮಾಡ

ಬೇಕೆಂಬ ಬಗ್ಗೆ ಅನೇಕ ಯೋಜನೆಗಳನ್ನು ಹಾಕಿಕೊಂಡಿದ್ದರೂ ಸಹ ಆ ಸರ್ಕಾರದಲ್ಲಿ ಒಂದು ನಿರ್ದಿಷ್ಟವಾದ ಧೋರಣೆಗಳು ಇಲ್ಲದೇ ಇದ್ದುದರಿಂದ ಆ ಯೋಜನೆಗಳನ್ನು ಮುಚ್ಚಿಬಿಟ್ಟರು. ಅಂದರೆ ಅವನ್ನು ತೆಗೆದುಕೊಳ್ಳಲಿಲ್ಲ. ಈಗಲೂ ಕೂಡ ಹಾಸನ ಜಿಲ್ಲೆಯಲ್ಲಿ ಇರತಕ್ಕ ಆ ಅಮೃತ್‌ಮಹಲ್ ಕಾವಲ್ ಹೆಚ್ಚಿಗೆ ಉಪಯೋಗವಾಗುತ್ತಾ ಇಲ್ಲ. ಅಲ್ಲಿ ಸುಮಾರು ಸಾವಿರಾರು ಹಾಗೂ ಲಕ್ಷಾಂತರ ಕುರಿಗಳನ್ನು ಸಾಕುವುದಕ್ಕೆ ಬೇಕಾದಷ್ಟು ಅನುಕೂಲಗಳುಂಟು. ಆದ್ದರಿಂದ ಈಗಲಾದರೂ ಸರ್ಕಾರದವರು ಮುಂದಡಿ ಇಟ್ಟು ನಾನು ಹೇಳಿದ ಹಾಗೆ ಹಾಸನ ಜಿಲ್ಲೆಯಲ್ಲಿ ಹೆಚ್ಚಿಗೆ ಕಾವಲುಗಳನ್ನು ಬೆಳೆಸಬೇಕೆಂದು ನಾನು ಹೇಳುತ್ತೇನೆ. ಚಿತ್ರದುರ್ಗ ಜಿಲ್ಲೆಯಲ್ಲಿ ೧೩ ಸಾವಿರ ಚಿಲ್ಲರೆ ಎಕರೆ ಇರತಕ್ಕ ಕಾವಲಿನಲ್ಲಿ ದೊಡ್ಡ ಪ್ರಮಾಣದಲ್ಲಿ ಕುರಿ ಸಾಕಣೆಗಾಗಿ ಫಾರಮ್‌ಗಳನ್ನು ತೆಗೆದಿದ್ದಾರೆ. ಅದರಂತೆ ಹಾಸನ ಜಿಲ್ಲೆಯಲ್ಲಿಯೂ ಸಹ ಅಲ್ಲಿರತಕ್ಕ ಯಥೇಚ್ಛವಾದ ಹುಲ್ಲುಗಾವಲನ್ನು ಸದುಪಯೋಗ ಮಾಡಿಕೊಂಡು ಅಲ್ಲಿಯೂ ಕುರಿಯ ತಳಿ ಅಭಿವೃದ್ಧಿ ಕೇಂದ್ರಗಳನ್ನು ಸ್ಥಾಪನೆ ಮಾಡಬೇಕು. ಇವತ್ತಿನ ದಿವಸ ಮಲೆನಾಡಿನಲ್ಲಿ ಕುರಿಗಳನ್ನು ಸಾಕುವುದು ಬಹಳ ಕಷ್ಟ. ಅಲ್ಲಿ ಬೇಸಿಗೆಯಲ್ಲಿ ವಿಪರೀತ ಬಿಸಿಲು, ಮಳೆಗಾಲದಲ್ಲಿ ವಿಪರೀತ ಮಳೆ. ಅಂತಹ ಸಂದರ್ಭದಲ್ಲಿ ಬೆಳೆಯತಕ್ಕ ತಳಿಗಳನ್ನು ಚೆನ್ನಾಗಿ ಅಭಿವೃದ್ಧಿ ಪಡಿಸಬೇಕಾದರೆ ಸರ್ಕಾರದವರು ಒಂದು ನಿರ್ದಿಷ್ಟವಾದ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಅದರಿಂದ ಈ ದೇಶಕ್ಕೆ ಒಳ್ಳೆಯದಾಗುತ್ತದೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ೧೯೫೮ನೇ ಇಸವಿಯಲ್ಲಿ ಇದಕ್ಕೆ ಸಂಬಂಧಪಟ್ಟ ಇಲಾಖೆಯವರು ಆಸ್ಟ್ರೇಲಿಯಾ ಮತ್ತು ಇತರ ದೇಶಗಳಲ್ಲಿರತಕ್ಕ ಬೀಜದ ಟಗರುಗಳನ್ನು ತರಿಸಿ ಮಿಶ್ರ ತಳಿಯನ್ನು ಮಾಡುತ್ತಿದ್ದುದನ್ನು ನಾನು ನೋಡಿದ್ದೆ. ಈಚೆಗೆ ಅಂತಹ ಒಂದು ಯೋಜನೆಗಳು ಏನು ಆದುವು ಎಂಬುದು ಗೊತ್ತಿಲ್ಲ. ಹಿಂದೆ ಇದರ ಬಗ್ಗೆ ಎಷ್ಟು ಆಸಕ್ತಿಯನ್ನು ವಹಿಸಿದ್ದರೋ ಅಷ್ಟು ಆಸಕ್ತಿಯನ್ನು ಈ ಸರ್ಕಾರ ಅಷ್ಟಾಗಿ ಇನ್ನೂ ವಹಿಸುತ್ತಿಲ್ಲ. ಇದರ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ವಹಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಕುರಿ ಸಾಕಣಿಕೆದಾರರಿಗೆ ಇದರಿಂದ ಹೆಚ್ಚಿಗೆ ಅಲ್ಪ ಸ್ವಲ್ಪವಾದರೂ ಸಹಾಯವಾಗುತ್ತದೆಂಬುದು ಎಲ್ಲರಿಗೂ ಗೊತ್ತಿದೆ. ಕುರಿಯ ತಳಿಯನ್ನು ಅಭಿವೃದ್ಧಿಪಡಿಸುವ ವಿಚಾರದಲ್ಲಿ ಸರ್ಕಾರದವರು ಸಾಕಷ್ಟು ಆಸಕ್ತಿಯನ್ನು ವಹಿಸಿ ಈ ಬೋರ್ಡಿನ ಮುಖಾಂತರ ಕುರಿ ಸಾಕಾಣಿಕೆದಾರರಿಗೆ ಹೆಚ್ಚಿನ ಸೌಲಭ್ಯಗಳನ್ನು ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ಕುರಿಗಳ ಬೆಳವಣಿಗೆಯ ವಿಚಾರದಲ್ಲಿ ನಮ್ಮ ಮೈಸೂರು ದೇಶ ಒಂದು ವಿಶಿಷ್ಟವಾದ ರೀತಿನೀತಿಯನ್ನು ಪಡೆದಿದೆ. ಇವುಗಳ ಹೆಸರುವಾಸಿಯಾಗಿರತಕ್ಕ ಬನ್ನೂರಿನಲ್ಲಿ ಇತ್ತೀಚೆಗೆ ಬೆಳೆಯುತ್ತಾ ಇರತಕ್ಕ ಕುರಿಗಳ ತಳಿ ಬಹಳ ಕ್ಷೀಣವಾಗುತ್ತಿದೆಯೆಂಬುದಾಗಿ ನಾನು ಕೇಳಿದ್ದೇನೆ. ಆದರೆ ಅಲ್ಲಿ ಬೆಳೆಯತಕ್ಕ ಕುರಿಗಳ ಉತ್ಕೃಷ್ಟವಾದ ಮಾಂಸ ಈ ದೇಶದ ಇನ್ನಾವ ಭಾಗದಲ್ಲಿಯೂ ಸಿಗುವುದಿಲ್ಲವೆಂಬುದು ಅದನ್ನು

ಅಲ್ಲಿ ನೋಡಿರುವವರ ಅಭಿಪ್ರಾಯವಾಗಿದೆ. ಆದ್ದರಿಂದ ಅಲ್ಲಿರತಕ್ಕ ಬನ್ನೂರು ಕುರಿಗಳ ತಳಿಯನ್ನು ಹೆಚ್ಚಿಗೆ ಬೆಳೆಸುವ ಪ್ರಮಾಣವನ್ನು ಕೂಡಲೇ ಕೈಗೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಮನವಿ ಮಾಡುತ್ತೇನೆ. ಆದರೆ ಕುರಿಗಳನ್ನು ಸಾಕುವವರ ಬಗ್ಗೆ ಹೆಚ್ಚಿನ ಸಂರಕ್ಷಣೆಯನ್ನು ಸರ್ಕಾರದವರು ಕೊಡಬೇಕು. ಇನ್ನು ಆಡಿನ ಬಗ್ಗೆ ಸರ್ಕಾರದವರು ಸಾಕಷ್ಟು ಮುತುವರ್ಜಿಯನ್ನು ಇನ್ನೂ ವಹಿಸಲಿಲ್ಲ. ಆಡಿನಲ್ಲಿ ದೊರೆಯುತಕ್ಕ ತಳಿಯಿಂದ ಉತ್ತಮವಾದ ಹ ಲನ್ನು ಶೇಖರಣೆ ಮಾಡಬಹುದು. ಅದು ಬುದ್ಧಿವಂತರಾದ ಜನರಿಗೆ ಚೆನ್ನಾಗಿ ಗೊತ್ತಿದೆ. ಅನೇಕ ನಗರಗಳಲ್ಲಿ ಈ ರೀತಿಯಾದ ಅಂಶವನ್ನು ಕಾಣಬಹುದು ಸಾಮಾನ್ಯವಾಗಿ ಆಡಿನ ತಳಿಯನ್ನು ಅಭಿವೃದ್ಧಿಪಡಿಸಿದರೆ ನಿಜವಾಗಿಯೂ ಹಳ್ಳಿಗಾಡಿನ ಜನರಿಗೆ ಆರ್ಥಿಕ ಪರಿಸ್ಥಿತಿಯಲ್ಲಿ ಉತ್ತಮಪಡಿಸಬಹುದು. ಅವರಿಗೆ ಹೆಚ್ಚಿಗೆ ಅನುಕೂಲವಾಗುತ್ತದೆ. ಆದ್ದರಿಂದ ಈಗ ಆಡಿನ ತಳಿಯನ್ನೂ ಸಹ ಅಭಿವೃದ್ಧಿಪಡಿಸುವ ಒಂದು ಕಾರ್ಯಕ್ರಮವನ್ನು ಈ ಬೋರ್ಡಿನ ಮುಖಾಂತರ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ. ಈ ಒಂದು ಉದ್ದಿಮೆದಾರರು ಇದುವರೆಗೂ ಯಾವ ರಕ್ಷಣೆಯೂ ಇಲ್ಲದೆ ಹಿಂದಿನಿಂದ ಬಂದಂಥ ಒಂದು ಪರಂಪರೆಯಲ್ಲಿದ್ದುಕೊಂಡು ಅವರು ಈಗ ಆರ್ಥಿಕವಾಗಿ ಬಹಳವಾಗಿ ಹಿಂದುಳಿದಿದ್ದಾರೆ. ಯಾವುದೇ ಇತರ ಜನಾಂಗದವರೊಡನೆ ಹೋಲಿಸಿದರೆ ಇವರ ಆರ್ಥಿಕ ಪರಿಸ್ಥಿತಿ ಬಹಳ ಕಡಿಮೆಯೆಂದು ನಾನು ನಿರ್ದಿಷ್ಟವಾಗಿ ಹೇಳಬಹುದು. ಏಕೆಂದರೆ ಇವರು ಮಾಡುತ್ತಾ ಇರತಕ್ಕ ವೃತ್ತಿಯಿಂದ ಇವರ ಒಂದು ನೀತಿಯೂ ಇತರರಂತೆ ಇದೆ. ಯಾವ ಒಬ್ಬ ನಾಗರೀಕನೂ ಇದರಿಂದ ಲಕ್ಷಾಂತರ ರೂಪಾಯಿಗಳನ್ನು ಪಡೆದಿಲ್ಲ. ಈಗ ಆ ಜನಗಳು ಇವರ ಬಗ್ಗೆ ಪೈಪೋಟಿ ಮಾಡುವುದಕ್ಕೆ ಸಾಧ್ಯವಾಗದೆ ಅವರು ಮಾಡುತ್ತಾ ಇರತಕ್ಕ ನೇಯ್ಗೆ ಪದಾರ್ಥಗಳ ಬೆಲೆ ತುಂಬಾ ಕುಸಿದು ಹೋಗಿದೆ. ಅವರು ತುಂಬಾ ಆರ್ಥಿಕವಾಗಿ ಹಿಂದುಳಿದಿದ್ದಾರೆ. ಆದ್ದರಿಂದ ಈ ಒಂದು ಬೋರ್ಡ್ ಮುಖಾಂತರ ಇವರ ಒಂದು ಉತ್ತಮವಾದಂಥ ಕಸುಬನ್ನು ಉತ್ತಮ ರೀತಿಯಲ್ಲಿ ಆ ಜನಾಂಗದವರಿಗೆ ಜಲಿಸಿ ಅವರೂ ಸಹ ಇತರರಂತೆ ಉತ್ತಮವಾಗಿ ಆರ್ಥಿಕ ಜೀವನವನ್ನು ನಡೆಸುವ ಹಾಗೆ ಏರ್ಪಾಡು ಮಾಡಬೇಕೆನ್ನುವುದು ಈ ಒಂದು ಮಸೂದೆಯಲ್ಲಿರುವುದರಿಂದ ಈ ಬಿಲ್ಲನ್ನು ನಾನು ಸ್ವಾಗತಿಸುತ್ತೇನೆ. ಹಾಗೂ ಇವತ್ತು ಈ ಸಭೆಯಲ್ಲಿ ನಾನು ಪದೇ ಪದೇ ಗೊಬ್ಬರದ ಅಭಾವವನ್ನು ಚರ್ಚೆ ಮಾಡುವುದನ್ನು ಕೇಳುತ್ತಲೇ ಇದ್ದೇನೆ. ಹಿಂದೆ ಇದರ ಬಗ್ಗೆ ಬೇಕಾದಷ್ಟು ಅನುಕೂಲಗಳು ಇದ್ದುವು. ಪ್ರತಿಯೊಬ್ಬ ರೈತನೂ ಹಿಂದೆ ಅನೇಕ ಕುರಿಗಳನ್ನು ಸಾಕುತ್ತಿದ್ದನು. ಗೊಬ್ಬರಕ್ಕೋಸ್ಕರ ಪರದೇಶಗಳ ಗೊಬ್ಬರವನ್ನು ಅವಲಂಬನೆ ಮಾಡಿಕೊಳ್ಳುವ ಸ್ಥಿತಿಯಲ್ಲಿರಲಿಲ್ಲ. ಈಗಲೂ ಸರ್ಕಾರ ಮನಸ್ಸು ಮಾಡಿದರೆ, ಸರ್ಕಾರದ ಒಂದು ಧೋರಣೆಯಿಂದ ಈ ದೇಶದಲ್ಲಿರತಕ್ಕ ಬಂಜರು ಭೂಮಿಯನ್ನು ಕುರಿ ಸಾಕಾಣಿಗೋಸ್ಕರ ಇಟ್ಟುಕೊಂಡು ಅಲ್ಲಿ ಸಿಗತಕ್ಕ ಕುರಿಯ ಗೊಬ್ಬರವನ್ನೂ ಸಹ ಉಪಯೋಗ ಮಾಡಬಹುದು. ಏಕೆಂದರೆ ಅನೇಕ ಕಡೆಗಳಲ್ಲಿ ಕುರಿಯ ಗೊಬ್ಬರ ಸಿಗದೆ

ತುಂಬಾ ತೊಂದರೆಯಾಗಿದೆ. ಈ ದೇಶದಲ್ಲಿ ಅನೇಕ ಕಡೆಗಳಲ್ಲಿ ಕುರಿಗಳನ್ನು ಸಾಕುವುದಕ್ಕೆ ವಿಶೇಷವಾದ ಸೌಕರ್ಯಗಳಿವೆ. ಎಲ್ಲಿ ಬಂಜರು ಭೂಮಿ ಇದೆಯೋ ಅಲ್ಲಿ ಕುರಿಗಳನ್ನು ಸಾಕುವುದಕ್ಕೆ ರೈತರಿಗೆ ಆರ್ಥಿಕ ಸಹಾಯವನ್ನು, ವಸತಿ ಸೌಕರ್ಯಗಳನ್ನು ಕಲ್ಪಿಸಿ ಕೊಟ್ಟರೆ ಅವರಿಗೆ ಹೆಚ್ಚಿಗೆ ಅನುಕೂಲವುಂಟು. ಗೊಬ್ಬರದ ಅಭಾವವೆಂದು ಏನು ಹೇಳುತ್ತಾರೋ ಅದು ಸ್ವಲ್ಪ ಮಟ್ಟಿಗೆ ಈ ಬೋರ್ಡಿನ ಮೂಲಕ ಸರ್ಕಾರ ಬಗೆಹರಿಸಬಹುದೆಂದು ನಾನು ಹೇಳುತ್ತೇನೆ. ಈ ಸರ್ಕಾರ ಬಂದಿರತಕ್ಕ ಅಲ್ಪ ಕಾಲಾವಧಿಯಲ್ಲಿ ಬಹಳ ಮಹತ್ತರವಾದಂಥ ಬಿಲ್ಲನ್ನು ಈ ಸಭೆಯಲ್ಲಿ ತರುವುದರ ಮೂಲಕ ನಿಜವಾಗಿ ರೈತರಿಗೆ ಉಪಯುಕ್ತವಾದ ಕೆಲಸಗಳನ್ನು ಮಾಡಿದೆಯೆಂದು ಇನ್ನೊಮ್ಮೆ ಹೇಳಿ ಈ ಸರ್ಕಾರವನ್ನು ಮತ್ತು ಇದಕ್ಕೆ ಸಂಬಂಧಪಟ್ಟ ಮಂತ್ರಿಯವರನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

THE CHAIRMAN (SMT. WINNIFRED F. FERNANDES) in the chair

†ಶ್ರೀ ಎಚ್. ಜಿ. ಚನ್ನಪ್ಪ (ಮಾಗಡಿ).— ಮಾನ್ಯ ಸಭಾಪತಿಗಳೇ, ಈ ದಿವಸ ನಮ್ಮ ಈ ಸದನದಲ್ಲಿ ತಂದಿರತಕ್ಕಂತಹ ಶೀಪ್ ರೇರಿಂಗ ಅಂಡ್ ಪ್ರೊಡಕ್ಟ್ ಬಿಲ್ ಏನಿದೆ, ಇದು ನಿಜವಾಗಿಯೂ ಸ್ವಾಗತಾರ್ಹವಾದುದು ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ನಮ್ಮ ಭರತ ಖಂಡದಲ್ಲಿ ೧೦೦ ಕ್ಕೆ ೮೫ ರಷ್ಟು ಜನರು ವ್ಯವಸಾಯಗಾರರು ಇರುವುದರಿಂದ ಕುರಿ ಸಾಕಾಣಿಕೆಯು ವ್ಯವಸಾಯಗಾರರ ಒಂದು ಉಪಕಸಬಾಗಿದೆ. ಇದರಿಂದ ವ್ಯವಸಾಯಕ್ಕೆ ಬೇಕಾದಂತಹ ಅತಿ ಶ್ರೇಷ್ಟವಾದ ಗೊಬ್ಬರ ದೊರೆಯುತ್ತದೆ. ಇದು ರಸಾಯನ ಗೊಬ್ಬರಕ್ಕಿಂತಲೂ ಉತ್ತಮವಾದುದು. ಅದರಲ್ಲಿಯೂ ಅಡಿಕೆ ತೋಟದವರು ಈ ಕುರಿ ಗೊಬ್ಬರಕ್ಕೆ ಎಷ್ಟು ಬೆಲೆ ಕೊಟ್ಟಾದರೂ ತೆಗೆದುಕೊಂಡು ಹೋಗುತ್ತಾರೆ. ಈಗ ನಮ್ಮಲ್ಲಿ ಕುರಿಗೆ ಒಂದು ವಿಧವಾದಂತಹ ಸಾಂಕ್ರಾಮಿಕ ರೋಗ ಬರುತ್ತಿದೆ. ಅದನ್ನು ತಡೆಯುವುದಕ್ಕೆ ಯಾವ ವೈದ್ಯರಿಗೂ ಸಹ ಸಾಧ್ಯವಾಗಿಲ್ಲ. ಈ ರೋಗದಿಂದ ಅನೇಕ ಕುರಿಗಳು ಸತ್ತುಹೋಗಿವೆ. ಈ ರೋಗವನ್ನು ಕಂಡುಹಿಡಿದು ಅದಕ್ಕೆ ತಕ್ಕ ಔಷಧಿಯನ್ನು ಹುಡುಕಬೇಕೆಂದು ನಾವೆಲ್ಲರೂ ಹೇಳಿದಾಗ ಸಂಬಂಧಪಟ್ಟವರು ಅದನ್ನು ಹೆಬ್ಬಾಳಿಗೆ ಕಳಿಸಿಕೊಟ್ಟರು. ಅವರು ಸಹ ನಮ್ಮಲ್ಲಿ ಇದನ್ನು ಕಂಡುಹಿಡಿಯುವುದಕ್ಕೆ ಸಾಧ್ಯವಿಲ್ಲ; ಡೆಲ್ಲಿಗೆ ಕಳಿಸಿಕೊಡಿ ಎಂದು ಹೇಳಿದರು. ಆದ್ದರಿಂದ ಕುರಿಸಾಕಾಣಿಕೆ ಮಾಡುವಾಗ ಅದಕ್ಕೆ ಬರತಕ್ಕಂತಹ ರೋಗಗಳನ್ನು ತಡೆಗಟ್ಟದೆ ಹೋದರೆ ನಿಜವಾಗಿಯೂ ನಾವು ಇದರಲ್ಲಿ ಅಭಿವೃದ್ಧಿಯನ್ನು ಮಾಡದೆ ಹೀನ ಸ್ಥಿತಿಗೆ ಹೋಗುತ್ತೇವೆ. ನಮ್ಮಲ್ಲಿ ಎಲ್ಲವನ್ನೂ ಮಾಡಬೇಕೆಂಬ ಆಕಾಂಕ್ಷೆ ಇರುತ್ತದೆ. ಆದರೆ ಅದನ್ನು ಮಾಡತಕ್ಕಂತಹ ರೀತಿ ನೀತಿಗಳು ಖಂಡಿತವಾಗಿಯೂ ಸರಿಯಾಗಿಲ್ಲ. ಇದರಿಂದ ನಮ್ಮ ಉತ್ಸಾಹ ಕುಗ್ಗುವುದಕ್ಕೆ ಅವಕಾಶವಾಗುತ್ತದೆ. ಈ ರೀತಿ ಆಗಬಾರದು. ಕುರಿ ಕೇಂದ್ರಗಳನ್ನು ಮಾಡಿ ಎಲ್ಲೆಲ್ಲಿ ಅವುಗಳನ್ನು ಸಾಕುವುದಕ್ಕೆ ಸಾಧ್ಯವಿದೆ, ಅದನ್ನು ಮಾಡಿದರೆ ಈ ಸಾಂಕ್ರಾಮಿಕ ರೋಗವನ್ನು ಸಹ ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆ. ಇನ್ನೊಂದು ಮಾಂಸವನ್ನು

ಹೆಚ್ಚು ಪಡೆಯುವುದಕ್ಕೋಸ್ಕರ ಕುರಿಗಳನ್ನು ಸಾಕುವುದಕ್ಕೆ ಅವಕಾಶವಿದೆ. ಆದ್ದರಿಂದ ಎಲ್ಲೆಲ್ಲಿ ಯಾವ್ಯಾವ ಜಾತಿಯ ಕುರಿಗಳನ್ನು ಸಾಕುವುದಕ್ಕೆ ಅವಕಾಶ ಇದೆ; ಅಲ್ಲಲ್ಲಿ ಒಂದೊಂದು ಕೇಂದ್ರವನ್ನು ಮಾಡಿ ಸಾಕುವುದಕ್ಕೆ ಪ್ರಾರಂಭ ಮಾಡಿದರೆ ನಮಗೆ ಹೆಚ್ಚಿನ ಪ್ರಯೋಜನವಾಗುತ್ತದೆ. ಇನ್ನು ಉತ್ತಮವಾದ ಉಣ್ಣೆ ಬರತಕ್ಕ ಕುರಿಗಳನ್ನು ಕೋಲಾರ, ಹಾಸನ, ಸಿರಾ—ಮುಂತಾದ ಪ್ರದೇಶಗಳಲ್ಲಿ ಸಾಕಿದರೆ ಉತ್ತಮವಾದ ಉಣ್ಣೆ ಬರುತ್ತದೆ ಎಂದು ಕೇಳಿದ್ದೇನೆ. ಇದನ್ನು ತಜ್ಞರು ಸಹ ಹೇಳಿದ್ದಾರೆ. ಇನ್ನು ಬನ್ನೂರು ಜಾತಿಯ ಕುರಿಗಳನ್ನು ಹೆಚ್ಚು ಮಾಂಸಕ್ಕೋಸ್ಕರ ಸಾಕುತ್ತಿದ್ದಾರೆ. ಇದು ಎಲ್ಲ ಕಡೆಗಳಲ್ಲಿಯೂ ಪ್ರಚಾರವಾಗಿದೆ. ಆದರೆ ಬನ್ನೂರು ತಳಿಯಿಂದ ಹೆಚ್ಚಿನ ಉಣ್ಣೆಯನ್ನು ಪಡೆಯುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ನಾವು ಕೇವಲ ಮಾಂಸಕ್ಕೆ ಬೇಕಾದಂತಹ ಕುರಿಗಳನ್ನು ಸಾಕುವುದರಲ್ಲಾಗಲಿ ಅಥವಾ ಉಣ್ಣೆಗೆ ಬೇಕಾಗಿ ಸಾಕತಕ್ಕ ಕುರಿಗಳನ್ನಾಗಲಿ ಸಾಕುವುದಕ್ಕೆ ಯಾವ ವಿಧವಾದ ಸೌಲಭ್ಯಗಳು ಬೇಕೋ ಅವುಗಳನ್ನು ಕೊಟ್ಟು ಅಭಿವೃದ್ಧಿಪಡಿಸಬೇಕಾಗುತ್ತದೆ. ಉಣ್ಣೆ ಹೆಚ್ಚಿಗೆ ಕೊಡತಕ್ಕ ಕುರಿಗಳಿಗೆ ಯಾವ ಪ್ರದೇಶ ಅನುಕೂಲಕರವಾಗಿದೆ, ಮಾಂಸ ಕೊಡತಕ್ಕ ಕುರಿಗಳಿಗೆ ಯಾವ ಪ್ರದೇಶ ಅನುಕೂಲವಾಗಿದೆ ಎಂದು ಕಂಡುಹಿಡಿದು, ಅಲ್ಲಲ್ಲಿ ಸಾಕುವುದಕ್ಕೆ ವ್ಯವಸ್ಥೆ ಮಾಡಬೇಕಾಗುತ್ತದೆ. ಇದರಿಂದ ನಾವು ಫಲಪ್ರದವಾಗಿ ಇದನ್ನು ಮಾಡುವುದಕ್ಕೆ ಸಾಧ್ಯವಿದೆ ಹಿಂದೆ ಆಸ್ಟ್ರೇಲಿಯಾದಲ್ಲಿರುವ ಮೆರಿನೋ ಟಗರುಗಳನ್ನು ನಾವು ತಂದು ಇಲ್ಲಿಯ ನಾಟ ಕುರಿಗಳಿಗೆ ಬೆರಕೆ ಮಾಡುವುದರಿಂದ ಉತ್ತಮವಾದ ಉಣ್ಣೆ ಕೊಡತಕ್ಕಂತಹ ಕುರಿ ಬರುತ್ತದೆ ಎಂದು ಚಿತ್ರದುರ್ಗ ಮತ್ತು ಹೆಸರುಘಟ್ಟದಲ್ಲಿ ಪ್ರಾರಂಭ ಮಾಡಿದರು. ಈಗ ಅದು ಇದೆಯೋ ಇಲ್ಲವೋ ಎಂದು ಗೊತ್ತಿಲ್ಲ. ಆ ಮೆರಿನೋ ಕುರಿಗಳು ನಮ್ಮ ದೇಶದ ಯಾವ ಭಾಗಕ್ಕೆ ಹೊಂದಿಕೊಳ್ಳುತ್ತದೆ ಎಂದು ಗೊತ್ತು ಮಾಡಿ, ಅಂಥ ತಳಿಗಳ ಕೇಂದ್ರ ಮಾಡಿ, ನಮ್ಮ ನಾಟ ಕುರಿಗಳ ಜೊತೆ ಕ್ರಾಸ್ ಮಾಡುವುದರಿಂದ ಉತ್ತಮವಾದ ತಳಿಗಳನ್ನು ತಯಾರು ಮಾಡಬಹುದು ಮತ್ತು ಇದರಿಂದ ಜನರಿಗೂ ಹೆಚ್ಚು ಅನುಕೂಲ ಸಿಗುತ್ತದೆ.

ಇನ್ನೊಂದು ಏನೆಂದರೆ, ಸಾಕತಕ್ಕಂತಹ ಪ್ರಾಣಿಗಳ ಬೆಲೆ ಬೀಳದಂತೆ ನಾವು ನೋಡಿಕೊಳ್ಳಬೇಕಾಗುತ್ತದೆ. ಅಂಥ ವ್ಯವಸ್ಥೆ ನಾವು ಮಾಡದಿದ್ದರೆ ಅದರ ಜಾತಿಯೇ ನಶಿಸಿ ಹೋಗುತ್ತದೆ. ಉದಾಹರಣೆಗೆ ಹಿಂದೆ ಜರ್ಮನ್ ಬ್ರೀಡ್ ಮತ್ತು ಹಾಲೆಂಡ್ ಬ್ರೀಡ್ ತಂದು ಇಲ್ಲಿಯ ನಾಟ ಹಂದಿ ಜೊತೆಗೆ ಕ್ರಾಸ್ ಮಾಡಿಸಿ ಉತ್ತಮ ತಳಿ ತಯಾರು ಮಾಡಲು ಪ್ರಯತ್ನ ಮಾಡಿದರು. ಹಾಗೆ ತಯಾರು ಮಾಡಲು ೬೦೦-೭೦೦ ರೂಪಾಯಿ ಖರ್ಚು ಬರುತ್ತದೆ. ಆದರೆ ಅದಕ್ಕೆ ಸರಿಯಾದ ಮಾರ್ಕೆಟ್ ಇಲ್ಲದೆ, ಲೋಕಲ್ ಮಾರ್ಕೆಟಿನಲ್ಲಿ ಕೇವಲ ೨೦೦ ರೂಪಾಯಿಗೆ ಸಹ ಕೊಂಡುಕೊಳ್ಳುವವರು ಇಲ್ಲದೆ ಹೋಯಿತು. ಇದರಿಂದಾಗಿ ಆ ಬ್ರೀಡೇ ನಶಿಸಿ ಹೋಯಿತು. ಹಾಗೆ ಇದು ಆಗಬಾರದು. ಆದ್ದರಿಂದ ಇದರಲ್ಲಿ ಬರತಕ್ಕಂತಹ ಪ್ರೊಡಕ್ಟನ್ನು ಸರ್ಕಾರ ಕೊಂಡು ಕೊಂಡು ಅದಕ್ಕೆ ಉತ್ತೇಜನಕರವಾದ ಬೆಲೆ ಕೊಡದೆ ಹೋದರೆ ನಿಜವಾಗಿಯೂ

ನಮ್ಮ ಈ ಯೋಜನೆ ಯಶಸ್ವಿಯಾಗುವುದಿಲ್ಲ. ನಾವು ಏನೊಂದು ಬೋರ್ಡು ಮಾಡು ತ್ತಿದ್ದೇವೆ, ಅದು ಕೆಲವು ಮಿತ್ರರು ಹೇಳಿದ ಹಾಗೆ, ಖಾದಿ ಬೋರ್ಡು ತರಹ ಆಗ ಬಾರದು.

೧೦೦ಕ್ಕೆ೯೫ ಜನಗಳಿಗೆ ಪ್ರಯೋಜನವಾಗತಕ್ಕಂಥಾ ಷೀಪ್ ಅಂಡ ಪ್ರಾಡಕ್ಟ್ಸ್ ಡೆವಲಪ್‌ಮೆಂಟ ಬೋರ್ಡ ರಚನೆ ಮಾಡುವಂತಹ ಈ ಒಂದು ಕಾನೂನನ್ನು ಈಗ ಈ ಸಭೆಯಲ್ಲಿ ನಾವು ಪಾಸು ಮಾಡುತ್ತಿದ್ದೇವೆ. ಹಿಂದೆ ಮಹಾತ್ಮಾ ಗಾಂಧೀಜಿ ಯವರ ಮಾತಿನ ಮೇಲೆ ಖಾದಿ ಬೋರ್ಡ ರಚನೆ ಮಾಡಿ ಪ್ರತಿಯೊಬ್ಬರು ಖಾದಿ ಯನ್ನು ಧರಿಸಬೇಕು, ಖಾದಿ ಬೋರ್ಡಿನ ಮುಖಾಂತರ ಎಲ್ಲಾ ವ್ಯವಹಾರಗಳೂ ನಡೆಯಬೇಕು ಎಂದು ಮಾಡಿದ್ದರು. ಆದರೆ ಅದು ಸರಿಯಾಗಿ ನಡೆಯದೇ ಹಾಗೂ ಹೀಗೂ ಕುಂಟಿಕೊಂಡು ನಡೆಯುತ್ತಿದೆ. ಆ ಮಟ್ಟಕ್ಕೆ ಈ ಕುರಿ ಪೋಷಣೆಯ ಡೆವಲಪ್‌ಮೆಂಟ್ ಬೋರ್ಡ ಆಗಬಾರದು. ಇದು ಹೆಚ್ಚಿನ ಮಟ್ಟದಲ್ಲಿ ಮುಂದುವರಿಯ ಬೇಕು ಎನ್ನುವುದು ನಮ್ಮ ಆಶೆ. ಕುರಿ ಸಾಕಾಣಿಕೆಯ ಕೇಂದ್ರವನ್ನು ಸ್ಥಾಪನೆ ಮಾಡಬೇಕು. ಇವೊತ್ತು ಹೆಸರುಘಟ್ಟದಲ್ಲಿ ಹಾಲೆಂಡ್ ಮತ್ತು ಡೆನ್ಮಾರ್ಕ ಹಸುಗಳ ತಳಿಗಳನ್ನು ಸಾಕುವುದರಲ್ಲಿ ಆಸಕ್ತಿಯುಳ್ಳ ರೈತರಿಗೆ, ರೈತರ ಮಕ್ಕಳಿಗೆ ಸರ್ಕಾರದವರು ಟ್ರೈನಿಂಗ್ ಕೊಡುತ್ತಿದ್ದಾರೆ. ಅದೇ ರೀತಿ ಈ ಕುರಿ ಸಾಕಾಣಿಕೆಯ ತರಬೇತಿಯನ್ನೂ ಕೊಡಬೇಕು. ಕುರಿಗಳಿಗೆ ಬರತಕ್ಕ ರೋಗರುಜಿನ, ಚಿಹ್ನೆ ಇವುಗಳನ್ನು ಕಂಡು ಹಿಡಿದು ಅದರ ನಿವಾರಣೆಯ ಬಗ್ಗೆ ತಿಳುವಳಿಕೆಯನ್ನು ಕೊಡಬೇಕು. ಕುರಿಯನ್ನು ಸಾಕ ತಕ್ಕವನಿಗೆ ಕುರಿಗೆ ಯಾವ ರೋಗ ಬಂದಿದೆ ಎಂಬುದನ್ನು ಕಂಡುಹಿಡಿಯತಕ್ಕ ಶಕ್ತಿ ಇಲ್ಲದೆ ಹೋದರೆ ಅವನು ಹಣವನ್ನು ಹಾಳು ಮಾಡಿಕೊಳ್ಳುತ್ತಾನೆ. ಆದ್ದರಿಂದ ಕುರಿ ಸಾಕಾಣಿಕೆಯ ತರಬೇತಿ ಕೇಂದ್ರಗಳನ್ನು ಸ್ಥಾಪನೆ ಮಾಡಿ ಕುರಿ ಸಾಕತಕ್ಕಂಥವರಿಗೆ ಟ್ರೈನಿಂಗ ಕೊಡಬೇಕು. ಮತ್ತು ಆ ಕುರಿಗಳಿಗೆ ಬರತಕ್ಕಂಥಾ ರೋಗರುಜಿನಗಳನ್ನು ಕಂಡುಹಿಡಿಯುವುದಕ್ಕೆ ತರಬೇತಿಯನ್ನು ಕೊಡಬೇಕು. ಈ ರೀತಿ ಮಾಡುವುದಾದರೆ ಕುರಿಯನ್ನು ಸಾಕತಕ್ಕವರಿಗೆ ಉತ್ತೇಜನವನ್ನು ಕೊಟ್ಟಂತಾಗು ತ್ತದೆ. ಇದರ ಜೊತೆಗೆ ಈ ಕುರಿಗಳಿಂದ ಬರತಕ್ಕ ಉಣ್ಣೆಯಿಂದ ಕಂಬಳಿಗಳನ್ನು ತಯಾರು ಮಾಡತಕ್ಕಂಥಾ ತರಬೇತಿಯನ್ನು ಕೊಡಬೇಕು. ಈ ಕುರಿಗಳ ಉಣ್ಣೆ ಯಿಂದ ಕಾಶ್ಮೀರದ ಶಾಲುಗಳ ಹಾಗೆ ಒಳ್ಳೆಯ ಉತ್ತಮವಾದ ಕಂಬಳಿಗಳನ್ನು ತಯಾರು ಮಾಡಿದರೆ ಒಂದು ಕಂಬಳಿಗೆ ೧೫೦ ರೂಪಾಯಿಗಳಂತೆ ಮಾರಾಟ ಮಾಡತಕ್ಕ ಸನ್ನಿವೇಶ ಇದೆ. ಆದ್ದರಿಂದ ಖಾದಿ ಬೋರ್ಡಿನಲ್ಲಿ ಕುರಿ ಉಣ್ಣೆಯಿಂದ ಒಳ್ಳೆಯ ಕಂಬಳಿಗಳನ್ನು ತಯಾರು ಮಾಡತಕ್ಕ ತರಬೇತಿಯನ್ನು ಕೊಟ್ಟು, ಉತ್ತಮ ವಾದ ಕಂಬಳಿಗಳನ್ನು ತಯಾರುಮಾಡಿ ಬಡವರು ಅವುಗಳನ್ನು ಹೊದ್ದುಕೊಳ್ಳುವಂತಹ ಸನ್ನಿವೇಶ ಬರುವ ರೀತಿಯಲ್ಲಿ ಮಾಡಬೇಕು ಎಂದು ನಾನು ಹೇಳುತ್ತೇನೆ.

ಈ ಕುರಿ ಮಾಂಸವನ್ನು ಒಂದೆರಡು ದಿವಸಗಳು ಮಾತ್ರ ಕೋಲ್ಡ್ ಸ್ಟೋರೇಜಿ ನಲ್ಲಿ ಇಡಬಹುದು. ಆಮೇಲೆ ಅದು ಕೆಟ್ಟು ಹೋಗುತ್ತದೆ. ಮದ್ರಾಸಿನಿಂದ ಮಾಂಸ

ವನ್ನು ತರಿಸಿ ಕೋಲ್ಡ್ ಸ್ಟೋರೇಜಿನಲ್ಲಿ ಇಟ್ಟಿರುತ್ತಾರೆ. ಮಾಂಸ ಕೋಲ್ಡ್ ಸ್ಟೋರೇಜಿನಲ್ಲಿ ಇರುವವರೆಗೂ ಚೆನ್ನಾಗಿರುತ್ತದೆ. ಕೋಲ್ಡ್ ಸ್ಟೋರೇಜಿನಿಂದ ಈಚೆಗೆ ತೆಗೆದ ಮೇಲೆ ಅರ್ಧ ಗಂಟೆಯಲ್ಲಿ ಅದು ಕೆಟ್ಟುಹೋಗಿ ವಾಸನೆಯಿಂದ ಕೂಡಿರುತ್ತದೆ. ಅದು ತಿನ್ನುವುದಕ್ಕೆ ಅಸಹ್ಯವಾಗಿರುತ್ತದೆ ಆದ್ದರಿಂದ ಈ ಮಾಂಸವನ್ನು ಕೋಲ್ಡ್ ಸ್ಟೋರೇಜಮಾಡಿ ಮಾರಾಟ ಮಾಡುವುದು ಸರಿಯಲ್ಲ. ಹೊರದೇಶಗಳ ಮಾಂಸವನ್ನು ಟಿನ್‌ಗಳಲ್ಲಿ ಪ್ಯಾಕ್‌ಮಾಡಿ ಬಹಳ ದಿವಸಗಳಾದರೂ ಕೆಡದಂತೆ ಇಟ್ಟಿರುತ್ತಾರೆ. ಈ ಕುರಿ ಮಾಂಸ ಓಪನ್ ಮಾರ್ಕೆಟ್ಟಿನಲ್ಲಿ ಟಿನ್ ಸಮೇತ ಜನಗಳಿಗೆ ಸಿಕ್ಕತಕ್ಕಂಥಾ ಒಂದು ವ್ಯವಸ್ಥೆ ಮಾಡಿದರೆ. ಈ ಕುರಿಗಳಿಂದ ಬರತಕ್ಕ ಮಾಂಸವನ್ನು ಹೆಚ್ಚು ಕಾಲ ಇಡುವುದಕ್ಕೆ ಸಾಧ್ಯವಾಗುತ್ತದೆ. ಈ ಮಾಂಸಕ್ಕೆ ಒಳ್ಳೆಯ ಬೆಲೆಯನ್ನೂ ದೊರಕಿಸಿ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಈ ಕುರಿ ಮಾಂಸಕ್ಕೆ ಹೆಚ್ಚಿನ ಒಂದು ಬೆಲೆಯನ್ನು ದೊರಕಿಸಿಕೊಡದೇ ಹೋದರೆ ಹಿಂದೆ ಮುಸುಕಿನ ಜೋಳವನ್ನು ಯಥೇಚ್ಛವಾಗಿ ಬೆಳೆದು ಒಂದು ಕ್ವಿಂಟಾಲ್ ಜೋಳಕ್ಕೆ ೧೦೦ ರೂ ಇದ್ದದ್ದು ೪೦ ರೂಪಾಯಿಗೆ ಇಳಿಯಿತು. ಆಗ ಅದಕ್ಕೆ ಸರ್ಕಾರದವರು ಸರಿಯಾದ ಬೆಲೆಯನ್ನು ದೊರಕಿಸಿ ಕೊಡುವ ಪ್ರಯತ್ನ ಮಾಡಲಿಲ್ಲ. ಆದ್ದರಿಂದ ರೈತರು ಆಗ ಮುಸುಕಿನ ಜೋಳವನ್ನು ಬೆಳೆಯುವುದನ್ನೇ ಕೈಬಿಟ್ಟರು. ಆ ಮಟ್ಟಕ್ಕೆ ಹೋಗಬಾರದು. ಕುರಿ ಸಾಕತಕ್ಕವನಿಗೆ ಲಾಭದಾಯಕವಾಗಿರಬೇಕು. ಕುರಿ ಮಾಂಸವನ್ನು ತಿನ್ನತಕ್ಕವನಿಗೆ ಅದು ಸ್ವಚ್ಛವಾದ ರೀತಿಯಲ್ಲಿ ದೊರಕುವಂತಾಗಬೇಕು. ಅನೇಕವೇಳೆ ಖಾಯಿಲೆಯ ಕುರಿಯನ್ನು ಮಾರಾಟ ಮಾಡತಕ್ಕದ್ದನ್ನು ನಾನು ನೋಡುತ್ತಿದ್ದೇನೆ. ಅಂಥಾ ಖಾಯಿಲೆಯ ಕುರಿಯ ಮಾಂಸದಲ್ಲಿ ವಿಷಕ್ರಿಮಿಗಳು ಇರುತ್ತವೆ. ಅದರ ಮಾಂಸವನ್ನು ಜನಗಳು ತಿನ್ನುವುದರಿಂದ ಅವರು ಖಾಯಿಲೆಗೆ ಗುರಿಯಾಗಿ ತೊಂದರೆಗೆ ಒಳಗಾಗುತ್ತಾರೆ. ಆದ್ದರಿಂದ ಖಾಯಿಲೆಯ ಕುರಿಯನ್ನು ಮಾರಾಟ ಮಾಡುವುದನ್ನು ತಪ್ಪಿಸಬೇಕು. ಕುರಿಯನ್ನು ಮಾರಾಟ ಮಾಡುವಾಗ ವೈದ್ಯರ ಸಲಹೆಯನ್ನು ಪಡೆದು ಮಾರಾಟ ಮಾಡಬೇಕು ಎಂದು ನಿರ್ಬಂಧವನ್ನು ಹಾಕಬೇಕು. ಮತ್ತು ಟಿನ್‌ಗಳಲ್ಲಿ ಈ ಕುರಿಯ ಮಾಂಸ ಓಪನ್ ಮಾರ್ಕೆಟ್ಟಿನಲ್ಲಿ ಸಿಕ್ಕುವಂತಹ ವ್ಯವಸ್ಥೆ ಮಾಡಿದರೆ ಜನಗಳಿಗೆ ಉತ್ತಮವಾದ ಆರೋಗ್ಯಕರವಾದ ಮಾಂಸವು ದೊರೆತು ಜನಗಳಿಗೆ ಖಾಯಿಲೆ ಬರುವುದನ್ನು ತಡೆಗಟ್ಟುವುದಕ್ಕೆ ಅನುಕೂಲವಾಗುತ್ತದೆ. ಇದನ್ನು ಸರ್ಕಾರದವರು ಗಮನದಲ್ಲಿಟ್ಟುಕೊಂಡು ಆಚರಣೆಗೆ ತರುವುದಕ್ಕೆ ಪ್ರಯತ್ನ ಮಾಡಬೇಕು ಎಂದು ನಾನು ಹೇಳುತ್ತೇನೆ.

ಇದಕ್ಕೆ ಸಂಬಂಧಪಟ್ಟ ಕಮಿಟಿಗಳನ್ನು ಸರ್ಕಾರದವರು ನೇಮಕ ಮಾಡುವಾಗ ಕುರಿ ಸಾಕಾಣಿಕೆಯಲ್ಲಿ ಯಾರು ಆಸಕ್ತರಾಗಿದ್ದಾರೆ, ಯಾರಿಗೆ ಇದರಲ್ಲಿ ಅನುಭವ ಇದೆ ಅಂಥಾ ತಜ್ಞರನ್ನು ಈ ಕಮಿಟಿಗಳಲ್ಲಿ ಹಾಕಬೇಕು. ಇಂಥಾ ತಜ್ಞರಿಂದ ಕೂಡಿದಂತಹ ಕಮಿಟಿಯನ್ನು ಮಾಡಿ ಬೋರ್ಡನ್ನು ರಚನೆ ಮಾಡಿದರೆ ಅದು ಮುಂದುವರೆಯುವುದಕ್ಕೆ ಅವಕಾಶವಾಗುತ್ತದೆ ಇದರ ಅನುಭವ ಇಲ್ಲದೇ ಇರತಕ್ಕವರನ್ನು

ಈ ಬೋರ್ಡಿನಲ್ಲಿ ಹಾಕಿದರೆ ಇದು ಅಷ್ಟು ಉತ್ತೇಜನಕಾರಿಯಾಗಿ ಕೆಲಸ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಈ ಕುರಿ ಸಾಕಾಣಿಕೆಯಲ್ಲಿ ತಜ್ಞರಾದವರನ್ನು ಆರಿಸಿ ಈ ಕುರಿ ಪೋಷಣೆ ಮತ್ತು ಕುರಿ ತಳಿಯ ಅಭಿವೃದ್ಧಿ ಬೋರ್ಡಿಗೆ ನೇಮಕ ಮಾಡುವುದಾದರೆ ಇದು ಒಳ್ಳೆಯ ಪ್ರವರ್ಧಮಾನಕ್ಕೆ ಬರುವ ಒಂದು ಯೋಜನೆಯಾಗುತ್ತದೆ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದು ಒಂದು ಬಡವರ ಅಭಿವೃದ್ಧಿಯ ಯೋಜನೆ ಇದು ಫಲಪ್ರದವಾಗಲೀ, ಇದು ಹೆಚ್ಚಿನ ಮಟ್ಟದಲ್ಲಿ ಅಭಿವೃದ್ಧಿಯಾಗಲಿ ಎಂದು ನಾನು ಹೇಳುತ್ತೇನೆ. ಬಡಜನಗಳಿಗೆ ಸಹಾಯವಾಗಲಿ ಎನ್ನುವ ಉದ್ದೇಶದಿಂದ ನಾನು ಈ ಮಸೂದೆಯನ್ನು ಈ ಸದನದ ಮುಂದೆ ತಂದಿದ್ದೇನೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಇದರಿಂದ ಬಡವರ ಉದ್ಧಾರವಾದರೆ ನಾನು ಅವರನ್ನು ಇನ್ನೂ ಹೆಚ್ಚಿನ ಮಟ್ಟದಲ್ಲಿ ಶ್ಲಾಘನೆ ಮಾಡುತ್ತೇನೆ. ಇಷ್ಟು ಹೇಳಿ ಈ ಮಸೂದೆಯ ಮೇಲೆ ಮಾತನಾಡುವುದಕ್ಕೆ ಮಾನ್ಯ ಅಧ್ಯಕ್ಷರು ನನಗೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರನ್ನು ಹೃತ್ಪೂರ್ವಕವಾಗಿ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಬಿ. ಪುಟ್ಟಸ್ವಾಮಯ್ಯ (ರಾಮನಗರ)—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಕೈಗಾರಿಕಾ ಸಚಿವರು ಈ ಸದನದ ಮುಂದೆ ಕುರಿ ಪೋಷಣೆ ಮತ್ತು ಅದರ ತಳಿ ಅಭಿವೃದ್ಧಿಯ ಬಗ್ಗೆ ತಂದಿರತಕ್ಕ ಮಸೂದೆಯನ್ನು ನಾನು ಮನಸಾರೆ ಒಪ್ಪಿ ಈ ಸಂದರ್ಭದಲ್ಲಿ ನಾನು ಎರಡು ಮಾತುಗಳನ್ನು ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ಈ ಕುರಿ ಪೋಷಣೆಯ ಮಸೂದೆಯಲ್ಲಿ ಒಳ್ಳೆಯ ಅಂಶಗಳು ಅಡಕವಾಗಿವೆ. ದೇಶದಲ್ಲಿ ಅನ್ನದ ಹಾಹಾಕಾರ ಎದ್ದಿರತಕ್ಕ ಕಷ್ಟ ಪರಿಸ್ಥಿತಿಯಲ್ಲಿ ಉತ್ತಮ ಮಾಂಸದ ಅಭಿವೃದ್ಧಿ ಮಾಡುವುದು ರಾಜ್ಯದಲ್ಲಿ ಅವಶ್ಯಕ ಎನ್ನತಕ್ಕಂಥಾ ಅರಿವು ಮಾನ್ಯ ಮಂತಿಗಳಿಗೆ ಆಗಿರಬಹುದು. ಮಾನ್ಯ ಮಂತ್ರಿಗಳು ಹೇಳಿರುವ ಪ್ರಕಾರ ಈ ರಾಜ್ಯದಲ್ಲಿ ೬ ಕೋಟಿ ರೂಪಾಯಿಗಳ ವರೆಗೆ ಮಾಂಸದ ಉತ್ಪತ್ತಿ ಇದೆಯೆಂದು ಹೇಳಿದ್ದಾರೆ. ಉತ್ತಮವಾದ ಮಾಂಸ ಮತ್ತು ಕುರಿಯ ಮಾಂಸ ರಾಜ್ಯದ ಜನತೆಗೆ ಹೆಚ್ಚಿನ ಪ್ರಮಾಣದಲ್ಲಿ ದೊರೆತರೆ ಆಹಾರದ ಸಂಕಟ ಪರಿಸ್ಥಿತಿ ಕೊಂಚ ಸುಧಾರಣೆಯಾಗುತ್ತದೆ ಎಂದು ನಾನು ಸಲಹೆ ಮಾಡುತ್ತೇನೆ. ಉತ್ತಮವಾದ ಕುರಿ ಮಾಂಸವನ್ನು ಚಿಕ್ಕಂದಿನಿಂದಲೂ ತಿಂದು ಅದರ ರುಚಿಯನ್ನು ನೋಡಿ ಅಭ್ಯಾಸವಿರತಕ್ಕ ನಾನು ಹೇಳಿದರೆ ಶ್ರೀಮಾನ್ ಸಿದ್ದವೀರಪ್ಪನವರು ಕುರಿ ಮಾಂಸವನ್ನು ತಿನ್ನುವುದಕ್ಕೆ ಅಭ್ಯಾಸ ಮಾಡುತ್ತಾರೆ ಎಂದು ನಾನು ನಂಬಿದ್ದೇನೆ. ಶ್ರೀಮಾನ್ ಸಿದ್ದವೀರಪ್ಪನವರು ಈ ಇಳಿ ವಯಸ್ಸಿನಲ್ಲಿ ಆರೋಗ್ಯದ ದೃಷ್ಟಿಯಿಂದ ಮುಂದೆ ಯಾವ ಕಾಯಿಲೆಯೂ ಬರಬಾರದು ಎನ್ನುವುದಾದರೆ ಅವರ ಈ ಕುರಿ ಮಾಂಸವನ್ನು ತಿನ್ನುವುದಕ್ಕೆ ಅಭ್ಯಾಸ ಮಾಡಬೇಕು. ಕಿರುಗಾವಲಿನ ಕುರಿ ಮಾಂಸ ಬಹಳ ಪ್ರಖ್ಯಾತಿಯನ್ನು ಪಡೆದಿದೆ. ಮತ್ತು ನಾರು ಇಲ್ಲದ ಒಳ್ಳೆಯ ರುಚಿಯಾದ ಕಿರುಗಾವಲಿನ ಕುರಿ ಮಾಂಸ ಎಂದು ಪ್ರತೀತಿ ಇದೆ. ಆದ್ದರಿಂದ ದೇಶದಲ್ಲಿ ಕಿರುಗಾವಲಿನ ಕುರಿ ಮತ್ತು ಟಗರಿಗೆ ಒಳ್ಳೆಯ ಬೆಲೆ ಇದೆ. ಒಳ್ಳೆಯ ಬುದ್ಧಿವಂತನಾದ ಸುಗುಣಿಯಾದ ಶಾಸಕನು ಯಾವ

ಪಕ್ಷದಡಲ್ಲಿದ್ದರೂ ಹೇಗೆ ಹೊಗಳಿಕೆಗೆ ಪಾತ್ರನಾಗುತ್ತಾನೆಯೋ ಹಾಗೆ ಉತ್ತಮವಾದ ಕುರಿ ಮಾಂಸ ಇದ್ದದ್ದೇ ಆದರೆ ಅದು ಎಲ್ಲರಿಗೂ ತಿನ್ನುವುದಕ್ಕೆ ಅಭ್ಯಾಸವಾಗುತ್ತದೆ. ಮಾಂಸವನ್ನು ಅಗೋಚರವಾಗಿ ಉಪಯೋಗಿಸುವವರು ಜಾಸ್ತಿ ಸಂಖ್ಯೆಯಲ್ಲಿದ್ದಾರೆ. ನಾವೇನೋ ಗೋಚರವಾಗಿ ಉಪಯೋಗಿಸುತ್ತಿದ್ದೇವೆ.

ಕುರಿಗಳನ್ನು ಹೆಚ್ಚಿಗೆ ಸಾಕುವುದರಿಂದ ದೇಶದಲ್ಲಿ ಈಗ ಇರುವ ಆಹಾರದ ಸಮಸ್ಯೆ ಬಗೆಹರಿಯುವುದರ ಜೊತೆಗೆ, ಈಗ ವಿದೇಶಿ ಗೊಬ್ಬರಕ್ಕೆ ಏನು ಹೆಚ್ಚಿನ ಬೇಡಿಕೆ ಇದೆ, ಅದನ್ನು ಸಹ ಈ ಕುರಿಗಳ ಮೂತ್ರ ಮತ್ತು ಮಲದಿಂದ ತಪ್ಪಿಸಬಹುದು. ಇದರ ಮಲಕ್ಕೆ ಪಿಚಕೆ ಎಂದು ಹೇಳುತ್ತೇವೆ. ಇದರಲ್ಲಿ ಸತ್ವಯುತವಾದ ಗೊಬ್ಬರದ ಶಕ್ತಿ ಇರುತ್ತದೆ. ಇದನ್ನು ಯಾವ ರೀತಿ ಶೇಖರಣೆ ಮಾಡಿ ಕೂಡಿಡಬೇಕು ಎಂಬುದನ್ನು ಬೋರ್ಡಿನವರು ರೈತಾಪಿ ಜನರಿಗೆ ಸಲಹೆ ಕೊಟ್ಟರೆ, ಈ ದಿವಸ ನಮ್ಮ ರಾಜ್ಯದಲ್ಲಿ ಏನು ಗೊಬ್ಬರದ ಅಭಾವ ಇದೆ ಅದನ್ನು ಬಹುಮಟ್ಟಿಗೆ ಕಡಿಮೆ ಮಾಡಬಹುದು. ೩ ಕೋಟಿ ರೂಪಾಯಿಗಳ ಉಣ್ಣೆ ಉತ್ಪತ್ತಿಯಾಗುತ್ತಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಇದು ಇನ್ನೂ ಹೆಚ್ಚು ಪ್ರಮಾಣದಲ್ಲಿ ಉತ್ಪತ್ತಿಯಾಗುವುದು ಅವಶ್ಯಕವಿದೆ. ಕಾರಣವೇನೆಂದರೆ, ಇಂದು ನಮ್ಮ ರಾಜ್ಯದಲ್ಲಿ ಅನೇಕ ಜನರು ನಿರುದ್ಯೋಗಿಗಳಾಗಿದ್ದಾರೆ. ಆದ್ದರಿಂದ ಉಣ್ಣೆಯ ಉತ್ಪಾದನೆ ಜಾಸ್ತಿಯಾದರೆ ಗೃಹ ಕೈಗಾರಿಕೆಗಳನ್ನು ಜಾಸ್ತಿ ಮಾಡುವುದಕ್ಕೆ ಅವಕಾಶವಾಗುತ್ತದೆ. ಇದರಿಂದ ಗಂಡು ಮತ್ತು ಹೆಣ್ಣುಮಕ್ಕಳಿಗೆ ಉದ್ಯೋಗ ದೊರಕುತ್ತದೆ. ಇದುವರೆಗೆ ಮಾತನಾಡಿದ ಸದಸ್ಯರು ಕುರಿಗಳ ತೊಗಲಿನ ಬಗ್ಗೆ ಪ್ರಸ್ತಾಪ ಮಾಡಲಿಲ್ಲ. ಕುರಿಗಳ ಗೊಬ್ಬರ ಮತ್ತು ಮಾಂಸ ಮಾತ್ರ ಮುಖ್ಯವಲ್ಲ; ಅದರ ಚರ್ಮ ಕೂಡ ನಮ್ಮ ಸಮಾಜದಲ್ಲಿ ಅತಿ ಮುಖ್ಯ. ಇದರಿಂದ ಪಾದರಕ್ಷೆಯನ್ನು ತಯಾರು ಮಾಡುತಾರೆ. ಕೈಚೀಲಗಳನ್ನು ತಯಾರು ಮಾಡುತ್ತಾರೆ. ಇದರಿಂದ ವಿದೇಶ ವಿನಿಮಯ ಗಳಿಸುವ ಅವಕಾಶವಿದೆ. ನಮ್ಮ ರಾಜ್ಯದಲ್ಲಿ ಉಣ್ಣೆಯ ಪ್ರಗತಿ ಬಹಳ ಕ್ಷೀಣ ಪರಿಸ್ಥಿತಿಗೆ ಬಂದಿತ್ತು. ಇಂತಹ ಸಮಯದಲ್ಲಿ ಮಾನ್ಯ ಮಂತ್ರಿಗಳು ಸುಧಾರಿತವಾದ ಬಿಲ್‌ನ್ನು ತರುವುದರ ಮೂಲಕ ವ್ಯವಸ್ಥಿತವಾದ ಬೋರ್ಡನ್ನು ರಚನೆ ಮಾಡಿ, ಅದರ ಮೂಲಕ ಉಣ್ಣೆಯ ಅಭಿವೃದ್ಧಿಗೆ ಅವಕಾಶ ಮಾಡಿಕೊಡುತ್ತಿರುವುದು ಸಂತೋಷಕರವಾದ ವಿಷಯ. ಮನೆಯಲ್ಲಿ ಯಾರಾದರು ಅಶಕ್ತರಾದವರು ಇದ್ದರೆ, ಸೋಮಾರಿಗಳು ಏನಾದರೂ ಇದ್ದರೆ, ಅಂತಹವರನ್ನು ಕುರಿ ಕಾಯುವುದಕ್ಕೆ ಹೋಗು ಎಂದು ಹೇಳಿ ತಾತ್ಸಾರ ಮಾಡುವುದು ನಮ್ಮ ಸಮಾಜದಲ್ಲಿ ಒಂದು ಭೂಷಣ ಪ್ರಾಯವಾಗಿತ್ತು. ಇಂತಹ ಒಂದು ಉದ್ಯಮಕ್ಕೆ ಇಂದು ಒಳ್ಳೆಯ ಸವಲತ್ತುಗಳನ್ನು ಒದಗಿಸಿ ಕೊಡುವುದರ ಮೂಲಕ, ಎಲ್ಲರೂ ಸುಖವಾಗಿ ಬದುಕಬೇಕೆಂಬ ಸದುದ್ದೇಶದಿಂದ ಮಾನ್ಯ ಮಂತ್ರಿಗಳು ಏನು ಈ ವಿಧೇಯಕವನ್ನು ಸಭೆಯ ಮುಂದೆ ತಂದಿದ್ದಾರೆ, ಇದರ ಬಗ್ಗೆ ಕೆಲವು ಸ್ಪಷ್ಟವಾದ ಸೂಚನೆಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ತಾವು ಇಳಿ ವಯಸ್ಸಿನ ಸಚಿವರು ಆಗಿದ್ದೀರಿ. ತಾವು ಈ ಬೋರ್ಡಿನಲ್ಲಿ ಪಕ್ಷಾತೀತರಾದ

ವರನ್ನು, ಒಳ್ಳೆಯ ಪರಿಣಿತರನ್ನು, ನಿಸ್ವಾರ್ಥಿಗಳನ್ನು ಇಡಬೇಕು. ಈ ನೂತನ ಸ್ಪಷ್ಟವಾಗಿ ಏತಕ್ಕೆ ಹೇಳುತ್ತಿದ್ದೇನೆಂದರೆ, ಈ ಒಂದು ಕಾರ್ಯ ಸಮಾಜದ ಉದ್ಧಾರಕ್ಕಾಗಿ ಆಗುತ್ತಿರುವುದರಿಂದ, ಇದರ ಬಗ್ಗೆ ನಿಯಮಗಳನ್ನು ಮಾಡುವಾಗ, ಅದರಲ್ಲಿ ಸಹೃದಯವನ್ನು ಇಟ್ಟುಕೊಂಡಿರುವ ವ್ಯಕ್ತಿಗಳನ್ನು, ತ್ರಿಕರಣ ಶುದ್ಧಿಯಿರುವವರನ್ನು ತದೇಕಚಿತ್ತ ಉಳ್ಳವರನ್ನು, ಅಂತರಾತ್ಮದಿಂದ ಕೆಲಸ ಮಾಡುವವರನ್ನು ಬೋರ್ಡಿನಲ್ಲಿಡುವುದು ಒಳ್ಳೆಯದು. ಮುಖ್ಯವಾಗಿ ಒಳ್ಳೆಯ ಅರ್ಹತೆ ಮತ್ತು ಒಳ್ಳೆಯ ವಿವೇಚನೆ ಇರುವವರನ್ನು ನೇಮಕ ಮಾಡಬೇಕು. ಇದೇ ರೀತಿ ಮಾಡುತ್ತೀರಿ ಎಂಬ ನಂಬಿಕೆ ನಮಗೆ ಇದೆ. ಮುಂದೆ ನೀವು ಮಾಡುವುದನ್ನು ಕಾದು ನೋಡೋಣ. ಇದಕ್ಕೆ ತಾವು ಹೆಚ್ಚು ಹಣವನ್ನು ಕೊಡಬೇಕು. ಇಲ್ಲದಿದ್ದರೆ ಇದನ್ನು ದೊಡ್ಡ ಪ್ರಮಾಣದಲ್ಲಿ ಬೆಳೆಸುವುದು ಸಾಧ್ಯವಿಲ್ಲ. ಇಂದು ರೈತರು ತಮ್ಮ ಯಥಾಶಕ್ತಿ ಕುರಿಗಳನ್ನು ಸಾಕುತ್ತಿದ್ದಾರೆ. ಇದು ಯಾವ ಒಂದು ವಂಶದ ಅಥವಾ ಜನಾಂಗದ ವೃತ್ತಿಯಲ್ಲ. ಇದು ಎಲ್ಲ ರೈತರ ವೃತ್ತಿಯಾಗಿದೆ. ನಮ್ಮ ರಾಜ್ಯದಲ್ಲಿರುವ ದಾರಿದ್ರ್ಯ ಬಗೆಹರಿಯಬೇಕಾಗಿದ್ದರೆ ಒಳ್ಳೆಯ ರೀತಿಯಲ್ಲಿ ಇದರ ಕಸುಬನ್ನು ಬೆಳೆಸಬೇಕಾಗಿದೆ. ಈ ರೀತಿ ಬೆಳೆಯಬೇಕಾದರೆ ಕುರಿಗಳ ಒಂದು ತಳಿ ಬಹಳ ಪ್ರಾಮುಖ್ಯ. ಹಿಂದೆ ಶ್ರೀಮಾನ್ ಎಂ. ವಿ. ಕೃಷ್ಣಪ್ಪನವರು ಮಂತ್ರಿಗಳಾಗಿದ್ದಾಗ ಈ ರಾಜ್ಯದಲ್ಲಿ ಹಾಲಿನ ಸಾಗರವನ್ನೇ ಹರಿಸಿದರು. ಅದರಂತೆ ತಮ್ಮ ಕಾಲದಲ್ಲಿ ಒಳ್ಳೆಯ ಕುರಿ ತಳಿಗಳ ಅಭಿವೃದ್ಧಿಯಾಗುತ್ತದೆಂದು ನಾವು ನಂಬಿದ್ದೇವೆ. ಪ್ರಾಸಂಗಿಕವಾಗಿ ಹೇಳುವುದಾದರೆ, ಶ್ರೀಮಾನ್ ಚೆನ್ನಬಸಪ್ಪನವರಂತಹ ತಳಿಗಳನ್ನು ತಯಾರು ಮಾಡಬೇಡಿ; ಶ್ರೀಮಾನ್ ದೇವರಾಜ ಅರಸ ಅವರಂತಹ ತಳಿಗಳನ್ನು ತಯಾರು ಮಾಡಿ. ಒಳ್ಳೆಯ ಕೊಬ್ಬು ಇರಬೇಕು, ನಾರು ಇಲ್ಲದ ಮಾಂಸ ಇರಬೇಕು, ಒಳ್ಳೆಯ ಉಣ್ಣೆ ಬರಬೇಕು, ಅಂತಹ ತಳಿಗಳನ್ನು ತಯಾರು ಮಾಡಿ. ನಮ್ಮ ರಾಜ್ಯದಲ್ಲಿ ಕೋಲಾರ, ಮೈಸೂರು, ಮಂಡ್ಯ ಜಿಲ್ಲೆಗಳು ಒಳ್ಳೆಯ ಕುರಿಗಳಿಗೆ ಹೆಸರುವಾಸಿಯಾದ ಜಿಲ್ಲೆಗಳು. ಎಲ್ಲಿ ತಮ್ಮ ಪಕ್ಷದವರು ಇದ್ದಾರೆ, ಅಲ್ಲಿ ಸೆಂಟರ್‌ಗಳನ್ನು ಮಾಡೋಣ ಎಂಬುದು ದುಶ್ಚಟಕ್ಕೆ ತಾವು ಒಳಗಾಗದೆ ತಾವು ಈ ವಿಚಾರದಲ್ಲಿ ಪಕ್ಷಾತೀತವಾಗಿರಬೇಕು ಭೂಮಿಯ ಗುಣ, ಹವಾಗುಣ, ಹುಲ್ಲಿನ ಗುಣ ಎಲ್ಲಿ ಚೆನ್ನಾಗಿರುತ್ತದೋ ಅಂತಹ ಕಡೆಗಳಲ್ಲಿ ಈ ಸೆಂಟರ್‌ಗಳನ್ನು ತೆರೆಯಬೇಕು. ಇಲ್ಲದಿದ್ದರೆ ರೋಗರುಜಿನುಗಳು ಬರುವುದಕ್ಕೆ ಅವಕಾಶವಾಗುತ್ತದೆ. ಇಂದು ಕುರಿಗಳಿಗೆ ಬರುತ್ತಿರುವ ಹೊಸ ಖಾಯಿಲೆಗಳಿಗೆ ಚಿಕಿತ್ಸೆಯನ್ನು ಕಂಡುಹಿಡಿಯದೇ ಇರುವುದು ಶೋಚನೀಯವಾದ ವಿಷಯ. ಗ್ರಾಮಾಂತರ ಪ್ರದೇಶಗಳಿಂದ ಸದಸ್ಯರುಗಳಿಗೆ ಮತ್ತು ಅಧ್ಯಕ್ಷರಿಗೆ ಅನುಭವವಿರಬಹುದು; ಏನೆಂದರೆ ಕುರಿಗಳು ಚೌಳುಮಣ್ಣನ್ನು ನೆಕ್ಕುತ್ತವೆ. ಏಕೆಂದರೆ ಅದು ರುಚಿಯಾಗಿರುತ್ತದೆ. ಆದ್ದರಿಂದ ಅದನ್ನು ನೆಕ್ಕಿ ತಮ್ಮ ಚಟವನ್ನು ತೀರಿಸಿಕೊಳ್ಳುತ್ತವೆ. ಇದರಿಂದ ಅವು ರೋಗ ರುಜಿನುಗಳಿಗೆ ಒಳಗಾಗುತ್ತವೆ. ಒಂದು ಕುರಿಗೆ

ಏನಾದರೂ ರೋಗ ಬಂದರೆ, ಅದು ಸಾಂಕ್ರಾಮಿಕ ರೋಗದಂತೆ ಕುರಿಹಿಂಡುಗಳಿಗೆಲ್ಲಾ ಹಬ್ಬುತ್ತದೆ. ಆಗ ಹೆಚ್ಚಿನ ಪ್ರಮಾಣದಲ್ಲಿ ಸಾಯುತ್ತವೆ. ಇದರಿಂದ ಈ ಕಸಬನ್ನೇ ಅವಲಂಬಿಸಿರುವ ರೈತರಿಗೆ ಹೃದಯಾಘಾತವಾಗುತ್ತದೆ. ಆದಕಾರಣ ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನಂದರೆ, ಈ ಕುರಿಗಳ ಅಭಿವೃದ್ಧಿ ಜೊತೆಯಲ್ಲಿಯೇ, ಯಾವ ಯಾವ ಕಾಲಲ್ಲಿ ಯಾವ ಯಾವ ರೋಗಗಳು ಈ ಕುರಿಗಳಿಗೆ ಬರುತ್ತದೋ, ಆ ರೋಗಗಳಿಗೆ ಎಂತಹ ಔಷಧಗಳನ್ನು ಉಪಯೋಗ ಮಾಡಬೇಕು ಎಂಬ ಬಗ್ಗೆ ತಿಳಿವಳಿಕೆ ಕೊಡಬೇಕು. ಈ ಬಗ್ಗೆ ಸರ್ಕಾರದ ವತಿಯಿಂದ ಮಂಡಲಿಗೆ ಮುನ್ಸೂಚನೆ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಕೆಲವರಿಗೆ ಸ್ಥಾನಗಳನ್ನು ಕೊಡುವ ದೃಷ್ಟಿಯಿಂದ ಈ ಬೋರ್ಡನ್ನು ರಚನೆ ಮಾಡುತ್ತಿದ್ದಾರೆಂದು ಕೆಲವು ಮಾನ್ಯ ಸದಸ್ಯರು ಏನು ಈಗ ಹೇಳಿದರು, ಅವರಂತೆ ತಾವು ಮಾಡಿದರೆ ತಾವು ಅನೇಕ ಜನರ ಪಾಪಕ್ಕೆ ಒಳಗಾಗುತ್ತೀರಿ ಎಂಬ ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ. ಆದಕಾರಣ ತ್ರಿಕರಣಶುದ್ಧಿಯಿಂದ ಇರುವವರನ್ನು, ದಕ್ಷರಾದವರನ್ನು, ಪ್ರಾಮಾಣಿಕರಾದವರನ್ನು, ಪ್ರಾಜ್ಞರಾದವರನ್ನು ಈ ಕಮಿಟಿಯಲ್ಲಿರಿಸಿ ಅವರಿಗೆ ಬೇಕಾದಂಥ ಸವಲತ್ತುಗಳನ್ನು ಒದಗಿಸಬೇಕು. ಹೇಗೆ ಶ್ರೀಮಾನ್ ಎಂ.ವಿ.ಕೃಷ್ಣಪ್ಪನವರು ಈ ರಾಜ್ಯದಲ್ಲಿ ಹಾಲಿನ ಡೈರಿಯನ್ನು ಸ್ಥಾಪನೆ ಮಾಡಿ, ಉತ್ತಮ ಬಿತ್ತನೆ ಹೋರಿಗಳನ್ನು ಅವರೇ ವಿದೇಶಕ್ಕೆ ಹೋಗಿ ವಿಮಾನಲ್ಲಿ ತಂದರೋ, ಅದೇ ರೀತಿ ತಾವೂ ಸಹ ಹೊರದೇಶಗಳಿಂದ ಒಳ್ಳೆಯ ಟಗರುಗಳನ್ನು ತರಿಸಿ. ಅದರ ವೀರ್ಯವನ್ನು ಕಿರುಗಾವಲಿನ ಕುರಿಗಳಿಗೆ ಪ್ರಯೋಗ ಮಾಡಿಸುವುದರ ಮೂಲಕ ಒಳ್ಳೆಯ ತಳಿಗಳನ್ನು ಬೆಳೆಸಬೇಕು. ನಾರು ಇಲ್ಲದ ಮಾಂಸ, ನಯವಾದಂಥ ಉಣ್ಣೆಯಿರುವ ಕುರಿಗಳನ್ನು ಬೆಳೆಸಬೇಕು. ಬಹಳ ವರ್ಷಗಳಿಂದ ಮೈಸೂರು ರಾಜ್ಯದ ರೇಷ್ಮೆ ಇಡೀ ಪ್ರಪಂಚದಲ್ಲಿಯೇ ಯಾವ ರೀತಿ ಪ್ರಖ್ಯಾತವಾಗಿದೆಯೋ ಆ ಒಂದು ಮಟ್ಟಕ್ಕೆ ಈ ಉಣ್ಣೆಯನ್ನು ತರಬೇಕು. ಕೊನೆಯದಾಗಿ ತಾವು ತಂದಿರುವ ಈ ವಿಧೇಯಕವನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿ ಈ ವಿಧೇಯಕವನ್ನು ತಂದಂತಹ ತಮಗೂ ಸಹ ವೈಯಕ್ತಿಕವಾಗಿ ವಂದಿಸಿ, ಅಧ್ಯಕ್ಷರಿಗೂ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಶರಣಪ್ಪ (ದೇವದುರ್ಗ).— ನಾನು ಒಂದು ಕ್ಲಾರಿಫಿಕೇಶನ್ ಕೇಳುತ್ತೇನೆ; ಏನೆಂದರೆ ಇಲ್ಲಿ ಷೀಪ್ ಎಂಬ ಒಂದೇ ಪದವನ್ನು ಉಪಯೋಗ ಮಾಡಲಾಗಿದೆ; ಅದರ ಜೊತೆಗೆ ಗೋಟ್ಸ್ ಎಂಬ ಪದವನ್ನು ಏತಕ್ಕೆ ಉಪಯೋಗ ಮಾಡಿಲ್ಲ ಎಂಬುದನ್ನು ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ತಿಳಿಸಬೇಕು.

4–00 P.M.

ಶ್ರೀ ಎಚ್. ಎಸ್. ಸಿದ್ದಪ್ಪ (ಅರಸೀಕೆರೆ) — ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಕೈಗಾರಿಕಾ ಸಚಿವರು ಸಭೆಯ ಮುಂದೆ ಮಂಡಿಸಿರುವ ೧೯೭೩ ನೇ ಇಸವಿಯ ಮೈಸೂರು ರಾಜ್ಯದ ಕುರಿ ಹಾಗೂ ಕುರಿತಳಿ ಅಭಿವೃದ್ಧಿಪಡಿಸುವುದಕ್ಕೆ ಸಂಬಂಧಿಸಿದ ವಿಧೇಯಕದ ಬಗ್ಗೆ ಈಗಾಗಲೇ ನನ್ನ ಗೆಳೆಯರು ಈಗಾಗಲೇ ಮಾತನಾಡಿದ ಹಾಗೆ

ಇದರ ಒಂದು ಅವಶ್ಯಕತೆ ಬಹಳ ದಿವಸಗಳಿಂದ ಇತ್ತು. ಈ ಕುರಿ ಸಾಕಾಣಿಕೆ ಉದ್ಯಮ ಹಾಗೂ ಅದರ ಬೈಪ್ರಾಡಕ್ಟ್ಸ್ ಏನಿದೆ, ಅದರ ಅಭಿವೃದ್ಧಿ ನಮ್ಮ ರಾಜ್ಯದ ಆರ್ಥಿಕ ಅಭಿವೃದ್ಧಿ ದೆಶೆಯಿಂದ ಬಹಳ ಅವಶ್ಯಕವಾಗಿತ್ತು. ಅದರಂತೆ ಈಗ ಈ ವಿಧೇಯಕವನ್ನು ತಂದಿದ್ದಾರೆ. ಅವರು ಈ ಬಿಲ್ಲನ್ನು ತಂದಿರುವುದಕ್ಕಾಗಿ ಎಷ್ಟು ಸ್ವಾಗತಿಸಬೇಕಾಗಿತ್ತೋ ಅಷ್ಟೇ ಆಸೆಯಿಂದ ಇದನ್ನು ಟೀಕೆ ಮಾಡಬೇಕೆಂದೂ ನನಗೆ ಆಸೆಯಾಗಿದೆ. ಇದಕ್ಕೆ ಕಾರಣ ಇಷ್ಟು ಇದಕ್ಕೆ ಇನ್ನೂ ಒಂದು ಕಾನೂನೇ ಬಂದಿಲ್ಲ. ಇದು ಬರುವುದಕ್ಕೆ ಮೊದಲೇ ಇದಕ್ಕಾಗಿ ಒಂದು ಬೋರ್ಡನ್ನು ನೇಮಕ ಮಾಡಿ ಅದಕ್ಕೆ ಏತಕ್ಕೆ ಹಣವನ್ನು ಖರ್ಚು ಮಾಡಬೇಕಾಗಿತ್ತು ಎಂದು ಕೇಳಬೇಕಾಗಿದೆ. ಇದಕ್ಕೆ ಅಂತಹ ಕಾರಣಗಳೇನು ಇದ್ದವು ? ಇದು ಹೇಗಾಗಿದೆ ಎಂದರೆ Putting the Horse behind the Cart, ಎನ್ನುವಂತೆ ಆಗಿದೆ. ನಮ್ಮಲ್ಲಿ ಇದರ ಬಗ್ಗೆ ಯಾವ ಆಕ್ಟೂ ಬಂದಿಲ್ಲ, ಆಗಲೇ ಸುಮಾರು ಒಂದು ವರ್ಷದಿಂದ ಇದಕ್ಕಾಗಿ ಒಂದು ಬೋರ್ಡು ಎಂದು ಮಾಡಿ ಹಣವನ್ನು ಏಕೆ ಕೊಡಬೇಕಾಗಿತ್ತು ಎಂದು ನಾ ಇಲ್ಲಿ ಕೇಳಬೇಕಾಗಿದೆ. ಸದುದ್ದೇಶಪೂರಿತವಾದ ಒಂದು ಕೆಲಸವನ್ನು ಮಾಡುವ ಕಾಲದಲ್ಲಿ ಅದು ಟೀಕಾತೀತವಾದುದಾಗಿರಬೇಕು. ಸಾರ್ವಜನಿಕರು ಸರಕಾರ ಇಂತಹ ಒಳ್ಳೆಯ ಕೆಲಸಗಳನ್ನು ಮಾಡುತ್ತಿದೆ ಎನ್ನುವ ಭಾವನೆ ಅವರಲ್ಲಿ ಬರಬೇಕು. ಆಗ ನಿಮ್ಮ ಮನೋಭಾವನೆಯನ್ನು ಜನ ಮೆಚ್ಚುತ್ತಾರೆ. ತಾವೇನು ಬಿಲ್ಲು ತಂದಿದ್ದೀರಿ ಅದನ್ನು ವಿರೋಧಪಕ್ಷವೇ ಆಗಲಿ ಇತರ ಪಕ್ಷವೇ ಆಗಲಿ ಅದನ್ನು ಸ್ವಾಗತಿಸುತ್ತದೆ. ಆದರೆ ಇದರಲ್ಲಿ ಮಾಡಿರುವ ವ್ಯವಸ್ಥೆಯಲ್ಲಿ ಮತ್ತು ಇದರ ರೀತಿ ನೀತಿಗಳಲ್ಲಿ ಲೋಪದೋಷಗಳಿರುವಂತೆ ಮಾಡುವುದು ಸರಿಯಲ್ಲ. ಬೋರ್ಡನ್ನು ರಚಿಸುವುದರಲ್ಲಿ ನಾನು ತಿಳಿದುಕೊಂಡಿರುವಂತೆ ಇದರಲ್ಲಿರುವ ಸದಸ್ಯರುಗಳು ಯಾರು ಎನ್ನುವುದರ ಪರಿಚಯ ನನಗಿಲ್ಲ. ಇದನ್ನು ಒಂದು ಎಕ್ಸ್‌ಪರ್ಟ್ ಬೋರ್ಡಿನಂತೆ ಮಾಡಿದ್ದರೆ ಸರಿಯಾಗುತ್ತಿತ್ತು. ಮತ್ತು ಇದೊಂದು ಸ್ಟ್ಯಾಚುಟರಿ ಬೋರ್ಡಾಗಿದೆ, ಬಹುತೇಕ ಇಂತಹ ಬೋರ್ಡುಗಳನ್ನು ಮಾಡುವಾಗ ಇದರಲ್ಲಿ ಹೆಚ್ಚು ಜವಾಬುದಾರಿಯುಳ್ಳವರು ಹಾಗೂ ತಜ್ಞರು ಹಾಗೂ ಉತ್ಸಾಹವುಳ್ಳಂತಹವರು ಇದರ ಅಧ್ಯಕ್ಷರಾಗಿದ್ದರೆ ಇದರಲ್ಲಿ ಒಂದು ರೀತಿಯಾದ ಆಸಕ್ತಿಯಿಂದ ಕೆಲಸ ಮಾಡುತ್ತಾರೆ ಮತ್ತು ಆಗ ಇದರ ಉದ್ದೇಶವೂ ಸಫಲವಾಗುತ್ತದೆ ಇಂತಹ ತಜ್ಞರನ್ನು ಇದರಲ್ಲಿ ಅಧ್ಯಕ್ಷರನ್ನಾಗಿ ಮಾಡದೇ ತಾವೀಗ ಒಬ್ಬರು ರಿಟೈರ್ಡ್ ಅಸಿಸ್ಟಂಟು ಕಮಿಷನರಾಗಿರುವವರು ಹಾಗೂ ಮುನ್ನೂರು ರೂಪಾಯಿಗಳಷ್ಟು ಪೆನ್‌ಷನ್ ಬರುತ್ತಿರುವ ಮುದಿ ಅಧಿಕಾರಿಯನ್ನು ಇಲ್ಲಿಗೆ ತಂದು ಇದರ ಅಧ್ಯಕ್ಷರನ್ನಾಗಿ ಅವರಿಗೇಕೆ ಸಾವಿರಗಟ್ಟಲೆ ಹಣ ಕೊಡಬೇಕು? ಮತ್ತು ಬೋರ್ಡಿನ ಗುರುತರವಾದ ಎಲ್ಲ ಕೆಲಸಗಳನ್ನೂ ಇವರಿಂದ ಮಾಡಲು ಸಾಧ್ಯವೆ? ನಾನು ಹೇಳುವುದು ಇಂದು ಕುರಿ ಉದ್ಯಮದಲ್ಲಿ ಪರದೇಶಗಳಿಗೆ ಹೋಗಿ ತರಬೇತಿ ಪಡೆದು ಉಣ್ಣೆ ಉದ್ಯಮವನ್ನು ಅಭಿವೃದ್ಧಿ ಮಾಡುವುದರಲ್ಲಿ ಕುರಿ ತಳಿ ಅಭಿವೃದ್ಧಿ ಮಾಡುವುದರಲ್ಲಿ ತರಬೇತಿ ಪಡೆದಂತಹ ತಜ್ಞರು ಇಂದು ನಮ್ಮ ರಾಜ್ಯದಲ್ಲೇ

ಇದ್ದಾರೆ. ಇಂತಹವರನ್ನೇಕೆ ಇದರಲ್ಲಿ ಅಧ್ಯಕ್ಷರಾಗಿ ಮಾಡಬಾರದಾಗಿತ್ತು? ಕೇವಲ ೩೦೦ ರೂಪಾಯಿಗಳ ಪೆನ್‌ಷನ್ ಬರುವಂತಹ ಒಬ್ಬರು ಅಸಿಸ್ಟಂಟು ಕಮಿಷನರನ್ನೇಕೆ ಇದರಲ್ಲಿ ನೇಮಕ ಮಾಡಬೇಕಾಗಿತ್ತು? ಹೀಗೆ ಮಾಡಿರುವುದು ಸರಿಯಲ್ಲ ಇವರಿಂದ ಇದುವರೆಗೆ ಯಾವರೀತಿಯಾಗಿ ಉಣ್ಣೆಯ ಉದ್ಯಮವಾಗಲೀ ಕುರಿಯ ಸಾಕಾಣಿಕೆ ಯಾಗಲೀ ಯಾವ ರೀತಿ ಅಭಿವೃದ್ಧಿಯಾಗಿದೆ? ಕುರಿ ಸಾಕಾಣಿಕೆ ವಿಚಾರದಲ್ಲಿ ಅನೇಕರು ಹೇಳಿದಂತೆ ಇದರಲ್ಲಿ ಬರೀ ಕುರುಬರೇ ಕುರಿ ಸಾಕುತ್ತಾರೆಂದೇನಿಲ್ಲ. ಇಂದು ಕುರಿ ಸಾಕುವವರಲ್ಲಿ ಲಿಂಗಾಯತರೂ ಇದ್ದಾರೆ ಹಾಗೂ ಇನ್ನಿತರ ವರ್ಗದ ಜನರೂ ಇದ್ದಾರೆ. ಕುರಿ ಸಾಕುವ ಉದ್ಯಮ ಪ್ರತಿಯೊಬ್ಬ ರೈತನೂ ಏಕೆ ಅಭಿವೃದ್ಧಿ ಮಾಡುತ್ತಾನೆಂದರೆ ಅವರಿಗೆ ಇದೊಂದು ಸಪ್ಲಿಮೆಂಟರಿ ಇನಕಂ ಆಗಿ ಅನುಕೂಲವಾಗುತ್ತದೆ. ಈ ಉದ್ಯಮವನ್ನು ಕುರುಬರೊಬ್ಬರೇ ಮಾಡುತ್ತಾರೆ ಎನ್ನುವ ಮನೋಭಾವ ಹೋಗಬೇಕು ಮತ್ತು ನಮ್ಮ ಸರಕಾರ ಇದಕ್ಕಾಗಿ ಮಾಡುವ ಬೋರ್ಡು ಹೆಚ್ಚು ಜವಾಬುದಾರಿಯುತವಾಗಿ ಅದರ ಕೆಲಸಗಳನ್ನು ನಿರ್ವಹಿಸಬೇಕು. ಈಗಿರುವ ಬೋರ್ಡು ಆ ರೀತಿ ಕೆಲಸ ಮಾಡುತ್ತಿಲ್ಲ ಎಂದು ನನಗನಿಸುತ್ತದೆ. ಕುರಿ ಸಾಕಾಣಿಕೆ ಉದ್ಯಮ ಹಾಗೂ ಇದರಿಂದ ಬರುವ ಉಣ್ಣೆಯ ತಯಾರಿಕೆ ಉದ್ಯಮ ನಮ್ಮ ರಾಜ್ಯದಲ್ಲಿ ಚೆನ್ನಾಗಿ ಅಭಿವೃದ್ಧಿ ಮಾಡಬೇಕು.

ಇದಕ್ಕಾಗಿ ನಮ್ಮ ರಾಜ್ಯದಿಂದ ಪರದೇಶಗಳಿಗೆ ಬೋರ್ಡಿನ ಮುಖಾಂತರ ಕೆಲವು ಜನರನ್ನು ಕಳುಹಿಸಿ ಅವರಿಗೆ ತರಬೇತಿ ಕೊಡಿಸಿ ಅವರ ಮೂಲಕ ನಮ್ಮ ರಾಜ್ಯದಲ್ಲಿ ಕುರಿಯ ತಳಿಗಳನ್ನು ಹಾಗೂ ಉಣ್ಣೆ ಉದ್ಯಮವನ್ನು ಚೆನ್ನಾಗಿ ಮಾಡಲು ಒಂದು ಅವಕಾಶ ಮಾಡಿಕೊಡಬೇಕು. ಇದಕ್ಕಾಗಿ ಮಾಡುವ ಬೋರ್ಡು ಇದರ ಬಗ್ಗೆ ತೀವ್ರವಾಗಿ ಆಲೋಚನೆ ಮಾಡಬೇಕು. ಇಂದು ನಮ್ಮ ರಾಜ್ಯದಲ್ಲಿ ಸಿರಿಕಲ್ಚರ್ ಉದ್ಯಮಕ್ಕಾಗಿ ಜನರನ್ನು ಪರದೇಶಗಳಿಗೆ ಕಳುಹಿಸಿ ಅವರಿಗೆ ತರಬೇತಿ ಕೊಟ್ಟು ಅವರಿಂದ ನಮ್ಮ ರಾಜ್ಯದಲ್ಲಿ ಸಿರಿಕಲ್‌ಚರಿನ ಅಭಿವೃದ್ಧಿ ಯಾವ ರೀತಿ ಮಾಡುತ್ತಿದ್ದಾರೋ ಅದೇ ರೀತಿ ಕುರಿಯ ಸಾಕಾಣಿಕೆ ಹಾಗೂ ಉಣ್ಣೆ ತಯಾರಿಕೆ ಇವುಗಳಲ್ಲಿ ಜನರಿಗೆ ತರಬೇತಿ ಪಡೆದು ಬರಲು ಪರದೇಶಗಳಿಗೆ ಕಳುಹಿಸಿ ಮಾಡಿದರೆ ಆಗ ನಮ್ಮ ರಾಜ್ಯದಲ್ಲೂ ಕೂಡ ಕುರಿಯ ಉದ್ಯಮ ಚೆನ್ನಾಗಿ ಬೆಳೆಸಲು ಒಂದು ಅವಕಾಶ ಸಿಗುತ್ತದೆ. ಇದರ ಬಗ್ಗೆ ಸರಕಾರ ಆಲೋಚನೆ ಮಾಡಬೇಕೆಂದು ಅವರಿಗೆ ನಾನು ಸಲಹೆ ಮಾಡುತ್ತೇನೆ. ಈಗ ತಾನೇ ಮಾತನಾಡಿದ ಶ್ರೀ ಪುಟ್ಟಸ್ವಾಮಯ್ಯನವರು ಅನೇಕ ವಿಧವಾದ ಕುರಿಗಳ ಬಗ್ಗೆ ಇಲ್ಲಿ ಹೇಳಿದರು. ಅವರು ಹೇಳಿದಂತೆ ಪರದೇಶಗಳಿಂದ ಉತ್ತಮವಾದ ಟಗರನ್ನು ತಂದು ಅದರ ಮೂಲಕ ಒಳ್ಳೆಯ ಕುರಿ ತಳಿಯನ್ನು ಅಭಿವೃದ್ಧಿ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಇಂದು ನಮ್ಮ ರಾಜ್ಯದಲ್ಲಿ ಪರಿಣತರಾದಂತಹ ಕುರಿಯ ಉದ್ಯಮಿಗಳು ಇದ್ದಾರೆ. ಅವರ ಸೇವೆಯನ್ನು ಇವರಲ್ಲಿರುವ ಬೋರ್ಡಿನವರು ಪಡೆಯಬೇಕು. ನಮ್ಮ ರಾಜ್ಯಲ್ಲಿ ಒಂದೊಂದು ಕಡೆ ಒಂದೊಂದು ರೀತಿಯಾದ ಕುರಿಯ ತಳಿಗಳಿವೆ ಎಂದರು. ಬನ್ನೂರು ಕುರಿ ತಳಿ ಎಂದು ಇದೆ. ಕಿರಗಾವಲು ಕುರಿ

ತಳಿ ಎಂದಿದೆ. ಹೀಗೆ ಅನೇಕ ಶ್ರೇಷ್ಠವಾದ ಕುರಿಯ ತಳಿಗಳು ನಮ್ಮ ರಾಜ್ಯದ ಅನೇಕ ಭಾಗಗಳಲ್ಲಿವೆ, ಇವುಗಳನ್ನೆಲ್ಲಾ ಸಮಗ್ರವಾಗಿ ಯೋಚನೆ ಮಾಡಿ ಯಾವ ಯಾವ ಪ್ರದೇಶದಲ್ಲಿ ಯಾವ ಯಾವ ರೀತಿ ತಳಿಗಳಿವೆ ಅವನ್ನು ಆಯಾ ಪ್ರದೇಶದಲ್ಲಿಯೇ ಅಭಿವೃದ್ಧಿ ಮಾಡುವುದು ಅತ್ಯಗತ್ಯ, ಇದೊಂದು ಗುರುತರವಾದ ಕರ್ತವ್ಯ. ಇದಕ್ಕಾಗಿ ಮಾಡಿರುವ ಮಂಡಲಿ ಇಂತಹ ಕೆಲಸಗಳನ್ನು ಕೈಗೊಳ್ಳಬೇಕು ಎಂದು ಇಲ್ಲಿ ಹೇಳಬಯಸುತ್ತೇನೆ. ನಮ್ಮ ಅರಸೀಕೆರೆ ತಾಲ್ಲೂಕಿನಲ್ಲಿ ಗಂಡಸಿಯಲ್ಲಿ ಕೆಂಕೆರೆ ಎಂಬ ಊರಿದೆ, ಇಲ್ಲೊಂದು ಉಣ್ಣೆಯ ಸಹಕಾರಿ ಸೊಸೈಟಿ ಇದೆ. ಈ ಸೊಸೈಟಿಯ ಮೂಲಕ ಹಿಂದೆ ಉತ್ತಮವಾದ ಕಂಬಳಿಗಳು ಹಾಗೂ ಮಫ್ಲರುಗಳನ್ನು ನೇಯ್ಗೆ ಮಾಡಿ ಮಾರಾಟ ಮಾಡುತ್ತಿದ್ದರು. ಇತ್ತೀಚಿಗೆ ಇವರಿಗೆ ಹಣದ ಅಭಾವದಿಂದಾಗಿ ಇದು ನಶಿಸಿ ಹೋಗುತ್ತಿದೆ. ಮತ್ತು ಇಲ್ಲಿ ಮಾಡಿದ ಸಹಕಾರ ಸಂಘ ನಶಿಸಿ ಹೋಗುವುದರಲ್ಲಿದೆ. ಮತು ಈ ಸ್ಟೇಜಿಗೆ ಈಗಾಗಲೇ ಬಂದಿದೆಯೆಂದು ಕೇಳುತ್ತೇವೆ. ಈ ಏರಿಯಾದಲ್ಲಿ ಒಳ್ಳೆಯ ಕುರಿಗಳು ಇವೆ ಮತ್ತು ಉತ್ತಮವಾದ ಉಣ್ಣೆ ಸಿಗುತ್ತದೆ. ಇಲ್ಲಿನ ಬಹುತೇಕ ಜನರು ಕುರಿಗಳಿಂದಲೇ ಜೀವನ ಮಾಡುತ್ತಿದ್ದಾರೆ. ಇದಕ್ಕೆ ಬೇಕಾದ ಹಣ ಸಹಾಯವನ್ನು ಸರಕಾರದವರು ಕೊಟ್ಟು ಇದರಲ್ಲಿ ತಜ್ಞರಾದವರು ಒಬ್ಬರನ್ನು ಸೆಕ್ರೆಟರಿಯನ್ನಾಗಿಯೋ ಇಲ್ಲವೇ ಮ್ಯಾನೇಜರಾಗಿಯೋ ನೇಮಕ ಮಾಡಿ ಈ ಸಂಘವನು ಅಭಿವೃದ್ಧಿಗೆ ತಂದರೆ ಇವರ ಮುಖೇನ ಕುರಿಯ ಉದ್ಯಮ ಹಾಗೂ ಉಣ್ಣೆಯ ಉದ್ಯಮ ಬೆಳೆಯಲು ಒಂದು ಅವಕಾಶ ಸಿಗುತ್ತದೆ. ಸರಕಾರ ಇವರ ಬಗ್ಗೆ ಯೋಚನೆ ಮಾಡಿ ನಶಿಸಿ ಹೋಗುತ್ತಿರುವ ಈ ಸಹಕಾರ ಸಂಘವನ್ನು ಮುಂದಕ್ಕೆ ತರಬೇಕೆಂದು ಕೇಳುತ್ತೇನೆ. ಮತ್ತು ಇಂತಹ ಕುರಿ ಉದ್ಯಮ ಮಾಡುವ ಅನೇಕ ಸಂಸ್ಥೆಗಳು ನಮ ರಾಜ್ಯದಲ್ಲಿ ಎಲ್ಲೆಲ್ಲಿವೆಯೋ ಅದರ ಆರ್ಥಿಕ ಸ್ಥಿತಿ ಸರಿಯಾಗಿಲ್ಲದಿದ್ದರೆ ಅವಕ್ಕೂ ಸಹಾಯ ಮಾಡಿ ಅದನ್ನು ಸುವ್ಯವಸ್ಥಿತವಾಗಿ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇದರಲ್ಲಿ ಕುರಿಗಳ ಆರೋಗ್ಯ ಬಹಳ ಮುಖ್ಯವಾದುದು. ಕುರಿಗಳೂ ರೋಗಗ್ರಸ್ತವಾಗಿದ್ದರೆ ಇದನ್ನು ತಿನ್ನುವ ಮನುಷ್ಯರ ಬುದ್ಧಿಯೂ ರೋಗಗ್ರಸ್ತವಾಗುತ್ತದೆ. ಇದಕ್ಕಾಗಿ ನಾನು ಮೊದಲೇ ಹೇಳಿದ ಹಾಗೆ ಇದಕ್ಕಾಗಿ ಮಾಡುವ ಬೋರ್ಡಿನಲ್ಲಿ ಪರಿಣತರಾದ ಕುರಿಯ ತಜ್ಞರು ಇದ್ದರೆ ಇವರ ಮೂಲಕ ಕುರಿಯ ಉದ್ಯಮವನ್ನು ಅಭಿವೃದ್ಧಿ ಮಾಡಬಹುದು. ಇಂತಹ ಒಂದು ತಜ್ಞರ ಬೋರ್ಡನ್ನು ಮಾಡುವುದರ ಬಗ್ಗೆ ಹಾಗೂ ಉತ್ತಮವಾದ ಕುರಿಗಳ ತಳಿಯನ್ನು ಅಭಿವೃದ್ಧಿ ಮಾಡುವುದರ ಕಡೆಗೆ ಸರಕಾರ ಗಮನ ಕೊಡುವುದು ಅವಶ್ಯಕ.

ಮಾನ್ಯ ಅಧ್ಯಕ್ಷರೇ, ಈ ರಾಜ್ಯದಲ್ಲಿ ಉತ್ತಮ ತಳಿಯ ಕುರಿಗಳನ್ನು ಕಡ್ಡಾಯವಾಗಿ ಬೆಳೆಸಬೇಕು. ಅದರ ತಳಿ ಅಭಿವೃದ್ಧಿ ಆಗಬೇಕು. ಏಕೆಂದರೆ ಖಾದಿ ಬೋರ್ಡಿನಲ್ಲಿ ಉಣ್ಣೆ ಕೊಂಡು ಕೊಳ್ಳುವುದಕ್ಕೆ ಹೋದರೆ ಕಾಶ್ಮೀರದ ಉಣ್ಣೆ ಬಟ್ಟೆ ಇದೆ ಮೈಸೂರಿನ ಉಣ್ಣೆ ಬಟ್ಟೆ ಇಲ್ಲ ಎಂದು ಹೇಳುತ್ತಾರೆ. ಆದುದರಿಂದ ಈ ಕುರಿ ಉಣ್ಣೆ ಅಭಿವೃದ್ಧಿ ಬಗ್ಗೆ ಕಳಕಳಿಯಿಂದ ಪ್ರಯತ್ನ ನಡೆಸಿದ್ದೇ ಆದರೆ ಕಾಶ್ಮೀರ ರಾಜ್ಯಕ್ಕೇ

ಉಣ್ಣೆ ರಫ್ತು ಮಾಡಿ ಹಣವನ್ನು ಗಳಿಸುವ ವ್ಯವಸ್ಥೆ ನಮ್ಮ ರಾಜ್ಯದಲ್ಲಿ ಸಾಧ್ಯವಾಗುತ್ತದೆ. ದಯಮಾಡಿ ಈ ಉಣ್ಣೆ ಮತ್ತು ಅದರ ಪ್ರಾಡಕ್ಟ್ಸ್ ಮಾಡುವ ಬಗ್ಗೆ ಸಮಗ್ರವಾಗಿ ಕೈಗಾರಿಕೆಯನ್ನು ಸ್ಥಾಪನೆ ಮಾಡಬೇಕು. ಅದಕ್ಕಾಗಿ ತಜ್ಞರ ನೆರವನ್ನು ಪಡೆಯಬೇಕು. ಶ್ರೀ ಪುಟ್ಟಸ್ವಾಮಿಯವರು ಹೇಳಿದ ಹಾಗೆ ಪಕ್ಷದ ಜನರ ದೃಷ್ಟಿಯಿಂದ ತಜ್ಞರನ್ನು ನೇಮಿಸತಕ್ಕ ವ್ಯವಸ್ಥೆ ಸಲ್ಲದು ಎಂದು ಹೇಳುತ್ತೇನೆ. ಇದರೊಳಗೆ ಉತ್ಸಾಹಿ ಪರಿಣಿತರು ಆಗಿರತಕ್ಕ ಜನ ರಾಜ್ಯದಲ್ಲಿ ಇರುವಾಗ ಅವರ ಸೇವೆ ತೆಗೆದುಕೊಳ್ಳಬೇಕು. ಅವರ ಸೇವೆ ತೆಗೆದುಕೊಳ್ಳುವುದರಿಂದ ರಾಜ್ಯಕ್ಕೆ ಅನುಕೂಲವಾಗುತ್ತದೆ ಎಂದು ಹೇಳಿ, ಈ ಎಲ್ಲಾ ದೃಷ್ಟಿಯಿಂದ ಈ ಬಿಲ್ಲು ಏನು ಇದೆ ಇದು ಸ್ವಾಗತಾರ್ಹವಾಗಿದೆ. ಇದನ್ನು ಇಂಪ್ಲಿಮೆಂಟ್ ಜಾರಿಗೆ ಕೊಡುವಾಗ ಈ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಉತ್ತಮ ಕುರಿ ಅಭಿವೃದ್ಧಿ ಮಾಡಲು ನಮ್ಮ ರಾಜ್ಯದಲ್ಲಿ ವ್ಯವಸ್ಥೆ ಮಾಡಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಜಿ. ಎಲ್. ಕಬಾಡಿ (ಬಳ್ಳೊಳ್ಳಿ).— ಮಾನ್ಯ ಅಧ್ಯಕ್ಷರೇ, ಕುರಿ ಸಾಕಾಣಿಕೆ ವಿಷಯದಲ್ಲಿ, ಕುರಿ ಉತ್ಪಾದನೆ ಆಗತಕ್ಕ ವಸ್ತುವಿನ ಬಗ್ಗೆ ತಂದಿಂತಕ್ಕ ಬಿಲ್ಲನ್ನು ಸ್ವಾಗತ ಮಾಡುತ್ತೇನೆ. ಅದರ ಬಗ್ಗೆ ಸರ್ಕಾರ ಯಾವ ಹಿಂದುಳಿದ ಜನಾಂಗದ ಬಗ್ಗೆ ಕಳಕಳಿಯನ್ನು ಇಟಕೊಂಡು ಬಿಲ್ಲು ತಂದಿದ್ದಾರೆ ಅದನ್ನು ಸ್ವಾಗತ ಮಾಡುತ್ತೇನೆ. ಆದರೆ ಅದರ ಜೊತೆಯಲ್ಲಿ ಸರ್ಕಾರಕ್ಕೆ ನಾನು ಕೇಳಿಕೊಳ್ಳುವುದು ಎಂದರೆ ರಾಜ್ಯಕ್ಕೆ ಲಿದರ್ ಅಡ್ವೈಜರಿ ಬೋರ್ಡನ್ನು ತಾವು ತೆಗೆದಿರಿ. ಈ ಬಿಲ್ಲನ್ನು ಮೊದಲು ತಂದು, ಲಿದರ್ ಅಡ್ವೈಜರಿ ಬೋರ್ಡ ಬಿಲ್ಲು ಹಿಂದೆ ಇಡುವ ಉದ್ದೇಶವಾದರೂ ಏನು ಈ ಉದ್ಯಮದಲ್ಲಿ ತೊಡಗಿರತಕ್ಕ ಜನಕ್ಕಿಂತಲೂ ಹಿಂದುಳಿದ ಜನಾಂಗ ಏನು ಇದೆ ಆ ಜನಾಂಗದ ಬಗ್ಗೆ ಇರುವ ಕಳಕಳಿ ಏನು ಇದೆ ಎನ್ನುವ ಬಗ್ಗೆ ನಾವು ಸ್ಪಷ್ಟೀಕರಣ ಕೊಡಬೇಕಾದದ್ದು ನಿಮ್ಮ ಜವಾಬ್ದಾರಿ. ಕುರಿಗಳ ಬಗ್ಗೆ ವಸ್ತುವಿನ ಬಗ್ಗೆ ಮಾತನಾಡುವುದಾದರೆ ಆ ಬಿಲ್ಲಿನಲ್ಲಿ ಒಂದು ದೋಷವಿದೆ. ಇದರಿಂದ ಬರತಕ್ಕ ಚರ್ಮದ ಬಗ್ಗೆ ಬಿಲ್ಲಿನಲ್ಲಿ ಎಲ್ಲಾ ಕಾಣಿಸಿಲ್ಲ ಎಂದು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಚರ್ಮದ ಬಗ್ಗೆ ಏನು ಮಾಡಬೇಕು ಯಾವ ರೀತಿ ಮಾಡಬೇಕು. ಹೊರಗಿನ ರಾಜ್ಯಕ್ಕೆ ಹೋಗುವ ಕುರಿ ಚರ್ಮದ ಬಗ್ಗೆ ಈ ಬಿಲ್ಲಿನಲ್ಲಿ ಯಾವ ರೀತಿಯಿಂದಲೂ ಅಳವಡಿಸಿಲ್ಲ ಎನ್ನುವ ಮಾತು ಸ್ಪಷ್ಟವಾಗಿದೆ. ದಯವಿಟ್ಟು ಇದನ್ನು ಸ್ಪಷ್ಟೀಕರಣ ಮಾಡಬೇಕು. ನಾನಾ ವಿಧವಾದ ತಳಿಗಳನ್ನು ಅಭಿವೃದ್ಧಿಗೊಳಿಸಬೇಕು ಎಂದು ನಮ್ಮ ರಾಜ್ಯದ ಅನಿಮಲ್ ಹಸ್ಬೆಂಡರಿ ಡಿಪಾರ್ಟಮೆಂಟಿನವರು ಆಸ್ಟ್ರೇಲಿಯಾದಿಂದ ತಂದಂಥ ಟಗರುಗಳನ್ನು ರೈತರಿಗೆ ಕೊಟ್ಟರು. ಆದರೆ ಆ ಟಗರುಗಳು ಯಾರ ಬಾಯಲ್ಲಿ ಹೋದವೋ ಗೊತ್ತಿಲ್ಲ. ಅಲ್ಲಿ ಕೊಟ್ಟಿರತಕ್ಕ ಬಿಲ್ಡಿಂಗ್ಸ್ ಏನು ಆಗಿವೆ ಎಂದರೆ ಕೇವಲ ಬಿದ್ದು ಹೋಗಿ ಸರ್ಕಾರದ ಸ್ವತ್ತು ನಾಶವಾಗಿ ಹೋಗಿದೆ ಎಂದು ಹೇಳಬೇಕಾಗಿದೆ. ಬಿಜಾಪುರ ಮತ್ತು ಇಂಡಿ ತಾಲ್ಲೂಕ್‌ಗಳಲ್ಲಿ ಭೂಮಿಯಲ್ಲಿ ಬೆಳೆ

ಯುವ ಉತ್ಪಾದನೆ ಕಡಿಮೆ ಇರುವುದರಿಂದ, ಜನ ಕುರಿಗಳನ್ನು ಸಾಕಿ ಉತ್ಪಾದನೆ ಮಾಡಿ ಅದರಿಂದ ಜೀವನ ಮಾಡುತ್ತಿದ್ದಾರೆ. ಯಾರ ಕೈಯಲ್ಲಿ ಟಗರು ಕೊಟ್ಟರೋ ಅವರ ಕೈಯಲ್ಲಿ ಟಗರುಗಳು ಉಳಿಯಲಿಲ್ಲ. ಮೊದಲು ಸರ್ಕಾರಕ್ಕೆ ವಿನಂತಿ ಮಾಡಿ ಕೊಳ್ಳುವುದು ಜನಕ್ಕೆ ಉಪಯುಕ್ತವಾದ ರೀತಿಯಲ್ಲಿ ಬೋರ್ಡ ರಚನೆ ಆಗಬೇಕು ಮತ್ತು ಮಾನ್ಯ ಸಿದ್ದಪ್ಪನವರು ಹೇಳಿದ ಹಾಗೆ ಬೋರ್ಡ ಇವತ್ತು ರಚನೆ ಮಾಡುವುದಾದರೆ ಪಾರ್ಟಿ ಹಿತದೃಷ್ಟಿಯನ್ನು ನಿಮ್ಮ ಮನಸ್ಸಿನಲ್ಲಿಟ್ಟುಕೊಂಡು ಅವರು ನಮ್ಮವರು ನಿಮ್ಮವರು ಎಂಬ ಭಾವನೆ ಮನಸ್ಸಿನಲ್ಲಿಟ್ಟುಕೊಂಡು ಬೋರ್ಡ ಮಾಡುವುದಾದರೆ ಹಾಳು ಮಾಡಿದ ಹಾಗಾಗುತ್ತದೆಯೇ ಹೊರತು ಉದ್ಧಾರ ಮಾಡಿದ ಹಾಗಾಗುವುದಿಲ್ಲ.

ಶ್ರೀ ಕೆ. ಎಚ್. ಪಾಟೀಲ — ಇಂಡಸ್ಟ್ರಿಯಲ್ ಮಿನಿಸ್ಟರ್‌ರವರು ಅಂಥದ್ದು ಮಾಡುವುದಿಲ್ಲ ನೀವು ಲಿದರ್ ಬೋರ್ಡಿನಲ್ಲಿ ಇಲ್ಲವೇ ?

ಶ್ರೀ ಜೆ. ಎಲ್. ಕಬಾಡಿ — ಹಾಗೆ ಮಾಡುವುದಿಲ್ಲ ಎಂದು ವಿಚಾರ ಇಟ್ಟುಕೊಂಡಿದ್ದರೂ....

ಶ್ರೀ ಕೋಣಂದೂರ ಲಿಂಗಪ್ಪ — ಫುಡ್ ಕಾರ್ಪೊರೇಷನ್‌ನಲ್ಲಿ ಇವತ್ತು ಕಾಂಗ್ರೆಸ್ ಕಾರ್ಪೊರೇಷನ್ ಆಗಿರುವುದು ಎಲ್ಲರಿಗೂ ಗೊತ್ತಿದೆ.

ಶ್ರೀ ಜೆ. ಎಲ್. ಕಬಾಡಿ.— ಇಂಡಸ್ಟ್ರಿ ಮಿನಿಸ್ಟರ್ ಒಳ್ಳೆಯ ಕೆಲಸ ಮಾಡಿದರೂ ಸಹ ಅವರಿಗೆ ಆತಂಕಗಳು ಬರುತ್ತವೆ. ತಾವು ಪಕ್ಕಪಕ್ಕದಲ್ಲಿ ಕೂತಿರುವವರು ಸಪರು ಬಿಟ್ಟರೆ ಅವರು ಕೆಲಸ ಮಾಡುತ್ತಾರೆ. ಯಾತಕ್ಕೆ ನನ್ನನ್ನು ಬೋರ್ಡಿನಲ್ಲಿ ಹಾಕಿದರು ಎಂದು ಗೊತ್ತಿಲ್ಲವೆ. ಕೃಷ್ಣನ್ನರವರು ಮತ್ತು ನಾನು ಈ ಮನೆಗೆ ಅಪರಿಚಿತರು ಅಲ್ಲ. ಆದರೆ ಯಾರು ಉದ್ಯಮದಲ್ಲಿ ತಜ್ಞರು ಇದ್ದಾರೆ ಅವರನ್ನು ಹಾಕಬೇಕು. ಅದರಲ್ಲಿ ಆಸಕ್ತಿ ವಹಿಸಿರುವಂಥ ತರುಣರು ಉದ್ಯಮದಲ್ಲಿ ನುರಿತಂಥವರನ್ನು ನೇಮಿಸಿದರೆ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ. ರಿಟೈರ್ಡ್ ಆಫೀಸರ್‌ರವರು ಅಥವಾ ಅನುಭವ ಇಲ್ಲದೇ ಇರುವವರನ್ನು ತಂದರೆ ಉದ್ದಿಮೆ ಹಾಳಾಗಿ ಉದ್ದಿಮೆ ಚೆನ್ನಾಗಿ ಕೆಲಸ ಮಾಡುವುದಿಲ್ಲ.

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಶೀಪ್ ಅಂಡ್ ವುಲ್ ಬೋರ್ಡ ತಂದಿರುವುದನ್ನು ಸ್ವಾಗತಿಸಿ ಅಧ್ಯಕ್ಷರ ಮುಖಾಂತರ ಮಂತ್ರಿಗಳನ್ನು ವಿನಂತಿಸಿಕೊಳ್ಳುವುದು ಇಷ್ಟೇ ಈ ಬೋರ್ಡನ್ನು ತೀವ್ರವಾಗಿ ತಂದು ಅದರ ಮುಖಾಂತರ ಉದ್ಧಾರ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಾಟ್ಳಾಳ್ ನಾಗರಾಜ. (ಚಾಮರಾಜಪೇಟೆ).— ಮಾನ್ಯ ಅಧ್ಯಕ್ಷರೇ ನಮ್ಮ ಕೈಗಾರಿಕಾ ಸಚಿವರು ತಂದಿರತಕ್ಕ ಈ ಬಿಲ್ಲನ್ನು ನಾನು ಸ್ವಾಗತಿಸುತ್ತೇನೆ.

ಬಹಳ ಒಳ್ಳೆಯ ಉದ್ದೇಶದಿಂದ ಬಿಲ್ಲನ್ನು ತಂದಿದ್ದಾರೆ. ಆದರೆ ಒಂದು ಕೆಲವು ಅಂಶಗಳು ಬರುತ್ತವೆ. ಅನೇಕ ಬೋರ್ಡಗಳನ್ನು, ಮಹಾ ಕಾರ್ಪೋರೇಷನ್‌ಗಳನ್ನು ಸ್ಥಾಪನೆ ಮಾಡುವಾಗ ಒಳ್ಳೆಯ ಉದ್ದೇಶವಿದ್ದರೂ ಯಾರಾದರೂ ಕೆಲವರು ರಾಜಕೀಯಕ್ಕೋಸ್ಕರವಾಗಿ ದುಡಿದಂಥವರು, ಸರಕಾರಕ್ಕೆ ಶರಕ್ ಆಗಿರುವವರು, ಚುನಾವಣೆಯಲ್ಲಿ ಸೋತಿರತಕ್ಕಂಥವರಿಗೆ ಕೆಲಸ ಕೊಡುವ ಉದ್ದೇಶದಿಂದ ಇಂಥ ಬೋರ್ಡಗಳು ಆಗುವುದು ಬೇಡ. ಈಗಿನ ಉದ್ದೇಶದಿಂದ ಕುರಿ ಸಾಕಾಣಿಕೆ ಜಾಸ್ತಿಯಾಗಬೇಕು, ಜನತೆಗೆ ಅನುಕೂಲವಾಗಬೇಕು ಎನ್ನುತಕ್ಕ ಮನೋಭಾವನೆ ಇರಬೇಕು ಎಂದು ಹೇಳಿ ಸ್ವಾಗತ ಮಾಡುತ್ತೇನೆ. ಈಗ ಅನೇಕ ಬೋರ್ಡಗಳು ರಾಜ್ಯದಲ್ಲಿ ಆಗಿವೆ. ಅನೇಕ ಕಾರ್ಯಗಳು ಆಗಿವೆ.

ಕೆಲವರಿಗೆ ನಿಜವಾಗಿಯೂ ಅಧ್ಯಕ್ಷರಾಗುವುದಕ್ಕೆ ಯೋಗ್ಯತೆ ಇದೆಯೇ ಎನ್ನುವ ಪ್ರಶ್ನೆ ಬರುತ್ತದೆ. ಬಹಳ ಉತ್ತಮವಾದ ಕುರಿ ಸಾಕಣಿಕೆಮಾಡಿ ಕುರಿಯಿಂದ ಬರತಕ್ಕ ಚರ್ಮ, ತುಪ್ಪಟಿ ಉಪಯೋಗಿಸಿ ಕಂಬಳಿ, ರಗ್ ಇವೆಲ್ಲವೂ ಮಾಡಿ ರಾಜ್ಯಕ್ಕೆ ಕೀರ್ತಿ ತರತಕ್ಕ ಉದ್ಯಮ ಪ್ರಾರಂಭ ಮಾಡುವುದಕ್ಕೆ ಅವಕಾಶವಿದೆ. ಅದಕ್ಕೆ ಈ ಬೋರ್ಡ್ ಮಾಡುವುದು ಒಳ್ಳೆಯದು. ಇನ್ನು ಮುಂದೆ ಕುರಿ ಸಾಕುವವರೆಲ್ಲರೂ ಕುರುಬರು ಎನ್ನುವುದು ಹೋಗಬೇಕು. ಕುರಿ ಕೇವಲ ಕುರುಬರ ಸ್ವತ್ತಾಗದೆ, ಎಲ್ಲ ವ್ಯವಸಾಯಗಾರರ ಸ್ವತ್ತಾಗಬೇಕು. ಕುರುಬರೇ ಕುರಿ ಸಾಕುವವರು, ತುಪ್ಪಟಿಯಿಂದ ಕಂಬಳಿ,ರಗ್ ಮಾಡುವವರು ಎನ್ನುವ ಮನೋಭಾವನೆ ಹೋಗಿ,ಇಡೀ ರಾಜ್ಯದಲ್ಲಿ ಈ ಉದ್ಯಮ ಗೃಹ ಕೈಗಾರಿಕೆಯಾಗಬೇಕು. ತಾಲ್ಲೂಕ್ ಮಟ್ಟದಲ್ಲಿ, ಹೋಬಳಿ ಮಟ್ಟದಲ್ಲಿ ಜಿಲ್ಹಾಮಟ್ಟದಲ್ಲಿ ಇದು ಮನೆಯ ಕೈಗಾರಿಕೆಯಾಗಿ ಬೆಳೆಯಬೇಕು ಇದರಿಂದ ವಿದೇಶೀ ವಿನಿಮಯ ಸಿಗುತ್ತದೆ. ಇದರಬಗ್ಗೆ ಕರ್ನಾಟಕ ರಾಜ್ಯದಲ್ಲಿ ಒಂದು ಹೊಸ ವಾತಾವರಣ ಮೂಡಿಸುವುದು ನಮ್ಮ ಕರ್ತವ್ಯ. ತಾವೆಲ್ಲಾ ಸಮಾಜವಾದ ಸರ್ಕಾರ ಸ್ಥಾಪಿಸುವ ಜನ. ಹಿಂಸೆಯನ್ನು ಒಪ್ಪತಕ್ಕವರಲ್ಲ. . ಅಹಿಂಸಾ ಮಾರ್ಗವಾಗಿ ಹೋಗತಕ್ಕವರು. ಇಷ್ಟು ಹೊತ್ತು ಲಿಂಗಪ್ಪನವರು ನಾನು ಲೆಕ್ಕಹಾಕಿದೆವು. ೧೯೫೭ ರಲ್ಲಿ ಕೆ. ಸಿ. ರೆಡ್ಡಿಯವರು ಮುಖ್ಯಮಂತ್ರಿಗಳಾಗಿದ್ದರು. ನಂತರ ಹನುಮಂತಯ್ಯನವರು ಬಂದರು, ಕಡಿದಾಳ ಮಂಜಪ್ಪನವರು, ಜತ್ತಿಯವರು ಬಂದರು, ನಿಜಲಿಂಗಪ್ಪನವರು ಬಂದರು, ಕಂಠಿಯವರು ಬಂದರು, ವೀರೇಂದ್ರ ಪಾಟೀಲರ ಸರ್ಕಾರ ಬಂತು. ಆಮೇಲೆ ನಿಮ್ಮ ಸರ್ಕಾರ ಬಂತು. ಕುರಿಗಳ ಕೊಲೆ ಜಾಸ್ತಿ ನಡೆದಿರುವುದು ನಿಮ್ಮ ಸರ್ಕಾರದಲ್ಲಿ. ಆಡಳಿತ ಕಾಂಗ್ರೆಸ ಚುನಾವಣೆ ಸಂದರ್ಭದಲ್ಲಿ ಕುರಿಗಳು ಯಥೇಚ್ಛವಾಗಿ ಧ್ವಂಸವಾಗಿದೆ. ನಮ್ಮ ಲಿಂಗಪ್ಪನವರು ಹೇಳಿದ್ದು, ಮದದಿಂದ ಎದ್ದು ಕುಣಿದಂಥ ಆನೆಯನ್ನು ಗುಂಡಿಕ್ಕಿ ಕೊಂದಿದ್ದಾರೆ ಎಂದು. ಆರೀತಿ ಹುಲಿಯನ್ನು ಕೊಲ್ಲುವುದಕ್ಕೆ ಬಿಡುವುದಿಲ್ಲ. ಚಿರತೆಗಳನ್ನು ಕೊಲ್ಲುವುದಕ್ಕೆ ಬಿಡುವುದಿಲ್ಲ. ಆನೆ ಚಿರತೆಗಳನ್ನು ಕೊಲ್ಲುವುದಕ್ಕೆ ಬಿಡುವುದಿಲ್ಲ. ಆದರೆ ಪಾಪ ಯಾರಿಗೂ ಹಿಂಸೆಕೊಡದೇ ಇರತಕ್ಕ ಕುರಿಯನ್ನು ಹಗಲು ರಾತ್ರಿ ಕೊಲ್ಲುತ್ತಾರೆ. ಒಬ್ಬಮಂತ್ರಿ ಒಂದು ಟಿ.ಬಿ ಗೆ

ಹೋದರೆ ಒಂದು ಕುರಿ ತಿನ್ನದೆ ಬರುವಹಾಗಿಲ್ಲ. ಮಂತ್ರಿಗಳ ಪರಿವಾರ ಬಂದಾಗ ಒಂದು ಕುರಿ ಮುಗಿದು ಹೋಗಬೇಕು. ಸಿದ್ದವೀರಪ್ಪನವರು ತಿನ್ನುವುದಿಲ್ಲ ಎಂದು ತಿಳಿದುಕೊಂಡಿದ್ದೇನೆ. ಗುಟ್ಟಾಗಿ ಏನು ಮಾಡುತ್ತಾರೋ ಗೊತ್ತಿಲ್ಲ.

ಅಧ್ಯಕ್ಷರು.— ನೀವೇನು ಮಾಡುತ್ತೀರಿ ?

ಶ್ರೀ ವಾಟಾಳ್ ನಾಗರಾಜ್.— ನಿಮಗೆ ಗುಟ್ಟಾಗಿ ಹೇಳುತ್ತೇನೆ. ಮಹಾತ್ಮಾ ಗಾಂಧಿ, ಬುದ್ಧ, ಬಸವಣ್ಣ, ಶಂಕರಾಚಾರ್ಯ, ಜೈನರ ಹೆಸರು ಹೇಳುವ ಜನ ನೀವು. ಈ ಬಿಲ್ಲನ್ನು ತಂದಿರುವುದು ನೋಡಿದರೆ, ಈ ಕುರಿ ಜಾತಿ ಉತ್ತಮ ಪಡಿಸಬೇಕು. ಕಡಿಯಬೇಕು, ಚರ್ಮ ಹದ ಮಾಡಬೇಕು ಎಂದು ಏನು ಉದ್ದೇಶ ಇಟ್ಟುಕೊಂಡಿದ್ದೀರಿ ಅದರಿಂದ ಹಿಂಸೆಗೆ ಹೆಚ್ಚಿನ ಬೆಂಬಲ ಕೊಡತಕ್ಕ ಮಂತ್ರಿಗಳಾಗಿದ್ದೀರಿ ಎಂದು ಗೊತ್ತಾಗುತ್ತದೆ. ಈ ಮಂತ್ರಿಮಂಡಲದಲ್ಲಿ ಜಾಸ್ತಿ ಕುರಿಗಳನ್ನು ತಿಂದು ರುಚಿನೋಡಿ ಕಬಳಿಸತಕ್ಕ ಮಂತ್ರಿಗಳು ಜಾಸ್ತಿಯಾಗಿದ್ದೀರಿ. ಈಗ ತಿನ್ನುವುದಕ್ಕೆ ಕುಡಿಯುವುದಕ್ಕೆ ಜಾತಿ, ಪಂಥ ಹೊರಟುಹೋಗಿದೆ. ಬಹಳ ಸೌಮ್ಯವಾಗಿರತಕ್ಕ ಮಡಿವಂತಿಕೆ ಇರತಕ್ಕ ಸಿದ್ದವೀರಪ್ಪನವರು ಇದ್ದಾರೆ. ಅವರು ಪಾರ್ಟಿಗೆ ಹೋದಾಗ ರುಚಿ ನೋಡಿದ್ದಾರೋ ಏನೋ ಗೊತ್ತಿಲ್ಲ. ಗುಂಡೂರಾವ್ ಅವರ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.— ಮಾನ್ಯ ಸದಸ್ಯರು ಹೇಳುವುದು ಡಿಫಮೇಟರಿ ಆದರೂ, I am denying it jocularly. ನಾನಂತೂ ಇದುವರೆಗೆ ಮಾಂಸಾಹಾರ ಮಾಡಿಲ್ಲ. ಏನೋ ಇರುವೆ ಗಿರುವೆ ಯಾವಾಗಲೂ ಬಾಯಲ್ಲಿ ಹೋಗಿರಬಹುದು.

ಶ್ರೀ ವಾಟಾಳ್ ನಾಗರಾಜ್.— ಕೋಳಿಮೊಟ್ಟೆ ಸಸ್ಯಾಹಾರ. ಅದನ್ನು ತಿನ್ನಬಹುದು. ಅದು ಮಾಂಸವೇನಲ್ಲ. ಮಾಂಸಾಹಾರ ಒಂದೇ ವರ್ಗಕ್ಕೆ ಜಾತಿಗೆ ಸೀಮಿತವಾಗಿಲ್ಲ.

ಶ್ರೀ ಎಚ್ ಸಿದ್ದವೀರಪ್ಪ.— ತಿನ್ನುವವರ ವಿಚಾರದಲ್ಲಿ ನನ್ನ ವಿರೋಧವಿಲ್ಲ.

ಶ್ರೀ ಎಸ್. ಎಂ. ಕೃಷ್ಣ.— ಕುರಿ ಜಾತ್ಯಾತೀತವಾಗಿದೆ.

ಶ್ರೀ ವಾಟಾಳ ನಾಗರಾಜ.— ಕುರಿ ಮಾಂಸ ತಿನ್ನಬಾರದು ಎಂದು ಹೇಳಿದರು. ತಿನ್ನುವಷ್ಟು ರುಚಿಯಾಗಿ ಅಡಿಗೆ ಮಾಡುತ್ತಾರೆ. ಕುರಿ ಅಡಿಗೆ ಘಮ ಘಮ ವಾಸನೆ ಬಂದಾಗ, ತಿನ್ನುವಹಾಗಿಲ್ಲ, ತಿನ್ನದೇ ಇರುವ ಹಾಗಿಲ್ಲ; ಬಹಳ ಕಷ್ಟವಾಗುತ್ತದೆ. ನಾಲಿಗೆ ಚಟ ಅಷ್ಟೆ. ನಾವು ಧರ್ಮ, ವೇದ ಎಂದು ಹೇಳಿಕೊಂಡು ಕುಳಿತುಕೊಂಡರೂ ಕೂಡ ಚಟ ಬಿಟ್ಟಿದ್ದಲ್ಲ. ಈ ಚಟಕ್ಕೆ ಬಲಿಯಾಗದೇ ಇರುವವರು ಬಹುತೇಕ ಇಲ್ಲ. ಕೈಗಾರಿಕಾ ಮಂತ್ರಿಗಳು ಕುರಿ ಅಭಿವೃದ್ಧಿಗೆ ಬೋರ್ಡ

ತಂದಿರತಕ್ಕದ್ದು ಒಳ್ಳೆಯದು. ಬಹುಶಃ ನಾವು ವಿನೋದವಾಗಿ ಮಾತನಾಡಿದರೂ, ಇದರ ಉದ್ದೇಶ ಒಳ್ಳೇಯದು. ಇದು ರಾಜಕೀಯಕ್ಕೆ ಬಲಿಯಾಗದಂಥ ಬೋರ್ಡಾಗಿ, ಇದರಿಂದ ರಾಜ್ಯದಲ್ಲಿ ಕುರಿಸಾಕತಕ್ಕ ಎಲ್ಲಾವರ್ಗದ ಜನಗಳಿಗೆ ಅನುಕೂಲವಾಗ ಬೇಕು. ಕುರುಬರ ಕೆಲಸ ಕುರಿ ಸಾಕುವುದು ಎನ್ನುವುದು ಹೋಗಬೇಕು. ಕೈಗಾರಿಕಾ ಮಂತ್ರಿಗಳು ಈ ಕುರಿ ಕೈಗಾರಿಕೆಗಳನ್ನು ಬೆಳೆಸುವುದಕ್ಕೆ ಅವರು ಹೆಚ್ಚಿನ ಆಸಕ್ತಿ ವಹಿಸಿ, ಹೆಚ್ಚಿನ ಸೌಲಭ್ಯ, ಸಹಕಾರ ಅವರಿಗೆ ಕೊಡಬೇಕು. ಈ ಬಿಲ್ಲನ್ನು ಸ್ವಾಗತಿಸಿ, ನನ್ನ ಮಾತನ್ನು ಮುಗಿಸುತ್ತೇನೆ

ಶ್ರೀ ಎಸ್. ವೈ. ಪಾಟೀಲ (ಸಿಂದಗಿ).— ಮಾನ್ಯ ಸಭಾಧ್ಯಕ್ಷಣಿಯರೇ, ಕುರಿ ಹಾಲು, ಮಾಂಸ, ಉಣ್ಣೆ, ಗೊಬ್ಬರ, ತೊಗಲು ಪರದೇಶದಿಂದ ಹಣ ದೊರಕಿಸ ತಕ್ಕ ವಿಷಯ ವಿಚಾರ ಮಾಡಬೇಕು. ನಾವು ಈ ಬಿಲ್ಲನ್ನು ಹಾಸ್ಯ ದೃಷ್ಟಿಯಿಂದ ನೋಡಿದೆ; ಇದರಿಂದ ನಮ್ಮ ರಾಷ್ಟ್ರದ ಆರ್ಥಿಕ ಪರಿಸ್ಥಿತಿಯ ಮೇಲೆ ಏನು ಪರಿಣಾಮ ವಾಗುತ್ತದೆ. ಈ ಉದ್ಯಮದ ಮೇಲೆ ಏನು ಪರಿಣಾಮವಾಗುತ್ತದೆ ಎಂಬುದನ್ನು ನೋಡಬೇಕು. ರಾಷ್ಟ್ರಪಿತ ಮಹಾತ್ಮಾಗಾಂಧಿಯವರ ಫೋಟೋ ಹಾಕಿ ಅವರಿಗೆ ನಾವು ಭಕ್ತಿ ತೋರಿಸುತ್ತೇವೆ. ಅವರು ಜೀವಂತವಾಗಿ ಇಲ್ಲದೇ ಇದ್ದರೂ, ಅವರ ಆತ್ಮಕ್ಕೆ ತಕ್ಕಂತೆ ನಾವು ನಡೆಯಬೇಕು. ಆದರೆ ನಾವು ಇವತ್ತು ಮಾತನಾಡತಕ್ಕ ಸನ್ನಿವೇಶ ನೋಡಿದರೆ, ನನಗೆ ಬಹಳ ದುಃಖವಾಗುತ್ತದೆ. ಶಾಖಾಹಾರವಾಗಲೀ, ಮಾಂಸಾಹಾರವಾಗಲಿ, ಏನಾದರೂ ಆಗಲೀ, ನಮ್ಮ ದೇಶದಲ್ಲಿ ಪ್ರತಿಯೊಂದು ಸಣ್ಣ ಮಕ್ಕಳ ಆರೋಗ್ಯ ಬಹಳ ಕೆಡಲಿಕ್ಕೆ ಹತ್ತಿದೆ. ವಿದ್ಯಾರ್ಥಿಗಳು ಈ ಪ್ರಕಾರ ಏಕೆ ಆಗಲಿಕ್ಕೆ ಹತ್ತಿದ್ದಾರೆ ಎಂದು ನಾನು ವಿಚಾರ ಮಾಡಲಿಕ್ಕೆ ಹತ್ತಿದ್ದೇನೆ. ಅವರಿಗೆ ಉತ್ತಮ ಆಹಾರ ಸಿಕ್ಕುವುದಿಲ್ಲ, ಹಾಲು ಸಿಕ್ಕುವುದಿಲ್ಲ. ಆದುದರಿಂದ ಓದುವುದಕ್ಕೆ ಮನಸ್ಸು ಬರುವುದಿಲ್ಲ. ಆ ದೃಷ್ಟಿಯಿಂದ ಪರೀಕ್ಷೆ ವೇಳೆಗೆ ಆಂದೋಳನ ನಡೆಯ ತಕ್ಕದ್ದು ಆಗಿದೆ. ನಮ್ಮ ದೇಶದಲ್ಲಿ ಹಾಲಿನ ಸಂಪತ್ತು ಬೆಳೆಯಲೇಬೇಕು. ಎಲ್ಲ ಕ್ಕಿಂತಲೂ ಮುಖ್ಯವಾಗಿ ಕುರಿ ಹಾಲು ಸರ್ವೋತ್ಕೃಷ್ಟ. ಮಹಾತ್ಮಾಗಾಂಧಿಯವರು ಪರದೇಶದಲ್ಲಿ ರೌಂಡ ಟೇಬಲ್ ಕಾನಫರೆನ್ಸ್‌ಗೆ ಹೋಗುವ ಕಾಲದಲ್ಲಿಯಾವುದನ್ನು ಒಯ್ಯಲಿಲ್ಲ.

ಅಧ್ಯಕ್ಷರು.— ಕುರಿ ಹಾಲು ಅಲ್ಲ, ಆಡಿನ ಹಾಲು.

ಶ್ರೀ ಎಸ್. ವೈ. ಪಾಟೀಲ.— ಇದರಲ್ಲಿ ಕುರಿ, ಆಡು ಎರಡೂ ಸೇರಿದೆ. ಅವು ಗಳನ್ನು ಅಭಿವೃದ್ಧಿ ಮಾಡಬೇಕು. ಆ ದೃಷ್ಟಿಯಿಂದ ಹಾಲಿನ ಸಂಪತ್ತು ಅತ್ಯಂತ ಅವಶ್ಯಕವಿದೆ. ಕುರಿ ಹಾಲು, ಆಡಿನ ಹಾಲು ಆರೋಗ್ಯಕ್ಕೆ ಒಳ್ಳೇಯದು. ಹಾಸ್ಪಿಟಲು ಗಳಿಗೆ ನಮ್ಮ ಬಡ್ಜೆಟ್ಟಿನಲ್ಲಿ ಹೆಚ್ಚು ರೊಕ್ಕ ಕೊಡುವುದಕ್ಕಿಂತ ಕುರಿಗಳನ್ನು ಅಭಿವೃದ್ಧಿ ಮಾಡಿ ಜನರ ಆರೋಗ್ಯ ಉತ್ತಮ ಪಡಿಸುವ ವಿಚಾರ ಮಾಡಬೇಕು.

4-30 P.M.

ಉತ್ತಮವಾದ ಹಾಲನ್ನು ನಿರ್ಮಾಣ ಮಾಡಬೇಕಾದರೆ ಒಳ್ಳೆಯ ತಳಿ ಬೇಕು ಎನ್ನುವ ದೃಷ್ಟಿಕೋಣದಿಂದ ನೋಡಬೇಕು. ಈ ಬಿಲ್ಲು ನೋಡಿದರೆ ಬರೀ ಇಂಡಸ್ಟ್ರೀಗೆ ಸಂಬಂಧ ಪಟ್ಟಿದ್ದು ಮಾತ್ರವೇ ಅಲ್ಲ ಇದು ಹೆಲ್ತ್ ಡಿಪಾರ್ಟಮೆಂಟಿಗೂ, ಇಂಡಸ್ಟ್ರೀ ಡಿಪಾರ್ಟಮೆಂಟಿಗೂ ಮತ್ತು ಫೈನಾನ್ಸ ಡಿಪಾರ್ಟಮೆಂಟಿಗೂ ಎಲ್ಲಾ ಇಲಾಖೆಗಳಿಗೂ ಸಂಬಂಧಪಟ್ಟದ್ದಾಗಿದೆ. ಈವೊತ್ತಿನ ದಿವಸ ಪರದೇಶದ ಗೊಬ್ಬರದ ಕಡೆ ಅಂದರೆ ಅಮೋನಿಯಂ ಸಲ್ಫೇಟ ಮತ್ತು ಸೂಪರ ಫಾಸ್ಪೇಟ ಕಡೆ ನೋಡುತ್ತಿದ್ದಾರೇ ಹೊರತು ನಮ್ಮ ರಾಜ್ಯದ ಕುರಿ ಗೊಬ್ಬರದ ಕಡೆ ಹೆಚ್ಚು ನಿಗಾ ಕೊಡುತ್ತಾ ಇಲ್ಲ. ಈವೊತ್ತು ನಮ್ಮ ಜಮಿನಿಗೆ ಆ ಪರದೇಶದ ಗೊಬ್ಬರವನ್ನು ೧೦ ಟನ್ ಹಾಕುವ ಬದಲು ನಮ್ಮ ರಾಜ್ಯದ ಕುರಿ ಗೊಬ್ಬರ ಒಂದು ಟನ್ ಹಾಕಿದರೆ ಸಾಕು. ಆ ಜಮೀನಿನಲ್ಲಿ ಹೆಚ್ಚು ಫಲವತ್ತಾಗಿ ಬೆಳೆಯುತ್ತದೆ. ಅಲ್ಲದೆ ಈ ಪರದೇಶದ ಗೊಬ್ಬರವನ್ನು ಜಮೀನಿಗೆ ಹಾಕಿದರೆ ಅದಕ್ಕೆ ಹೆಚ್ಚು ನೀರು ಬೇಕು. ನಮ್ಮ ಈ ಕುರಿ ಗೊಬ್ಬರವನ್ನು ಹಾಕಿದರೆ ಹೆಚ್ಚು ನೀರು ಇಲ್ಲದೇ ಇದ್ದರೂ ಬಹಳ ಫಲವತ್ತಾಗಿ ಬೆಳೆಯುತ್ತದೆ. ಆದುದರಿಂದ ಹಾಲಿನ ದೃಷ್ಟಿಯಿಂದ ಮತ್ತು ಗೊಬ್ಬರದ ದೃಷ್ಟಿಯಿಂದ ನೋಡಿದರೆ ಈ ಬಿಲ್ಲು ಬಹಳ ಉತ್ತಮವಾದ ಬಿಲ್ಲು ಎಂದು ನನಗೆ ಅನಿಸುತ್ತದೆ. ನಿನ್ನೆ ದಿವಸ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು ಮದ್ರಾಸಿಗೆ ಎಲೆಕ್ಟ್ರಿಸಿಟಿ ಕೊಟ್ಟು ಅಲ್ಲಿಂದ ೨ ಸಾವಿರ ಟನ್ ಆಹಾರಧಾನ್ಯ ತೆಗೆದುಕೊಂಡು ಬರುತ್ತೇವೆ ಎಂದು. ಆದುದರಿಂದ ನಾನು ಹೇಳುವುದು ಏನೆಂದರೆ ನಮ್ಮ ದೇಶದಲ್ಲಿ ಈ ಕುರಿ ಉತ್ಪಾದನಾ ಇಂಡಸ್ಟ್ರಿಯೊಂದನ್ನು ಮಾಡಿದರೆ ನಾವು ಯಾವ ರಾಜ್ಯಕ್ಕೂ ಹೋಗಿ ತಾಳಿ ಹೊಡೆದು ಈ ಆಹಾರಧಾನ್ಯವನ್ನು ತರಬೇಕಾದ್ದಿಲ್ಲ. ಪರದೇಶಕ್ಕೆ ಹೋಗಿ ತಾಳಿ ಹೊಡೆಯುವದು ಆಗಲಿ, ಮಹಾರಾಷ್ಟ್ರಕ್ಕೆ ಎಲೆಕ್ಟ್ರಿಸಿಟಿ ಸಾಲರೂಪವಾಗಿ ಕೊಟ್ಟು ಅಲ್ಲಿಂದ ಧಾನ್ಯ ತರುವುದಾಗಲಿ ಮತ್ತು ತಮಿಳುನಾಡಿಗೆ ಸಾಲರೂಪವಾಗಿ ಎಲೆಕ್ಟ್ರಿಸಿಟಿ ಕೊಟ್ಟು ಅಲ್ಲಿಂದ ಆಹಾರ ಧಾನ್ಯ ತರುವುದಾಗಲಿ ಮಾಡಬೇಕಾಗಿಲ್ಲ ಮತ್ತು ನಮ್ಮ ರಾಜ್ಯದಲ್ಲಿ ಈ ಬಗ್ಗೆ ಬಂದು ಸರ್ವೆ ಮಾಡಿ ಅದರಿಂದ ಏನೇನು ರೀಸರ್ಚ ಮಾಡಬಹುದೋ ಅದನ್ನು ಮಾಡಿದರೆ ಇದರಿಂದ ಉತ್ಕೃಷ್ಟವಾಗಿ ಉಪಯೋಗವಾಗುತ್ತದೆ. ನಮ್ಮ ರಾಜ್ಯದಲ್ಲಿ ಈ ಬಗ್ಗೆ ಸರಿಯಾದಂಥ ತಜ್ಞರು ಇದ್ದಾರೆ. ಅವರನ್ನು ಉಪಯೋಗ ಮಾಡಿಕೊಂಡರೆ ಒಂದು ಹೆಚ್ಚಿನ ಪ್ರತಿಫಲ ಬರುವಂತೆ ಉತ್ತಮವಾದ ತಳಿಯನ್ನು ಮಾಡಬಹುದು. ಮುಖ್ಯವಾಗಿ ನಾವು ಇದರಲ್ಲಿ ನೋಡಬೇಕಾದ್ದು ಇದರ ಹಾಲು, ಗೊಬ್ಬರ, ಉಣ್ಣೆ ಮತ್ತು ತೊಗಲು ಇವುಗಳಿಂದ ಏನೇನು ಉಪಯೋಗ ಬರುತ್ತದೆ ಎನ್ನುವುದನ್ನು ನೋಡಬೇಕು. ಈ ಉದ್ಯಮವನ್ನು ಒಂದೇ ಭಾಗದ ಜನರು ಅವಲಂಬಿಸಬೇಕು ಎನ್ನುವುದೇನೂ ಇಲ್ಲ. ಬೇರೆ ಭಾಗದ ಜನರೂ ಕೂಡ ಅವಲಂಬಿಸಿದರೆ ಬೇಡ ಅನ್ನುವುದಿಲ್ಲ. ಸಾಮಾನ್ಯವಾಗಿ ಈವೊತ್ತಿನ ದಿವಸ ಎಲ್ಲಾ ಕಡೆಯೂ ನೋಡಿದರೆ ಒಕ್ಕಲುತನ ಸಾಗುವಳಿ ಇದೆ. ಆದರೆ ಅವರಿಗೆ ಇರತಕ್ಕಂಥ ತೊಂದರೆ ಏನು

ಎಂದರೆ ಕುರಿಗಳಿಗೆ, ದನಗಳಿಗೆ ಮೇಯಲಿಕ್ಕೆ ಭೂಮಿ ಇಲ್ಲ. ಆದುದರಿಂದ ನಾನು ಹೇಳುವುದು ಏನೆಂದರೆ ಈ ಕುರಿಗಳಿಗೆ ಮತ್ತು ದನಗಳಿಗೆ ಮೇಯುವ ಸಲುವಾಗಿ ಸರ್ಕಾರದವರು ಒಂದು ಲ್ಯಾಂಡನ್ನು ಅಕ್ವಿಸಿಷನ್ ಮಾಡುವುದಾಗಲಿ ಅಥವಾ ಇದ್ದ ಭೂಮಿಯನ್ನು ತೆಗೆದುಕೊಂಡು ಆ ಬಗ್ಗೆ ಒಂದು ವ್ಯವಸ್ಥೆ ಮಾಡಿಕೊಡಬೇಕು. ತಾವು ಯಾವ ಬಿಲ್ಲನ್ನೇ ತನ್ನಿರಿ. ನನ್ನ ಒಂದು ಸ್ವಭಾವ ಏನೆಂದರೆ ಬಿಜಾಪುರ ದಿಂದ ಏನು ಉಪಯೋಗವಾಗುತ್ತದೆ ಅದನ್ನು ಸ್ವಾರ್ಥ ಮಾಡಿಕೊಳ್ಳುವ ಮನುಷ್ಯ. ಈ ದೃಷ್ಟಿಯಿಂದ ಹೇಳುತ್ತೇನೆ. ಬಿಜಾಪುರದ ಒಕ್ಕಲುತನದವರಿಗೆ ಉಪಯುಕ್ತ ವಾದಂಥ ಬಿಲ್ಲು ಇದು. ಆದುದರಿಂದ ಇದನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿ ಸುತ್ತೇನೆ. ಮತ್ತು ಈ ಇಂಡಸ್ಟ್ರೀ ಮೈಸೂರು ರಾಜ್ಯದಲ್ಲಿ ಚೆನ್ನಾಗಿ ಬೆಳೆಯಬೇಕು ಎಂದು ಹೇಳುತ್ತೇನೆ. ಮತ್ತು ನಮ್ಮಲ್ಲಿ ಬಯಲು ಭೂಮಿ ಜಾಸ್ತಿ ಇದೆ. ಅದನ್ನು ಫಲಪ್ರದವಾಗಿ ಮಾಡಬೇಕು ಎಂದು ಹೇಳುತ್ತೇನೆ. ಇನ್ನು ಹಳೇ ಮೈಸೂರು ಪ್ರದೇಶದಲ್ಲಿ ಹೇಳುವುದಾದರೆ ಅಲ್ಲಿ ಸರ್ ಎಂ. ವಿಶ್ವೇಶ್ವರಯ್ಯನವರ ಸಹಾಯದಿಂದ ಮತ್ತು ಅವರ ಕೃಪಾಕಟಾಕ್ಷದಿಂದ ಅರ್ಧ ಎಕರೆಯಷ್ಟಾದರೂ ನೀರಾವರಿ ಮಾಡಿ ಕೊಂಡಿದ್ದೀರಿ. ಭತ್ತ ಬೆಳೆಯುವ ಹಾಗೆ ಮಾಡಿಕೊಂಡಿದ್ದೀರಿ. ಆದುದರಿಂದ ನೀವು ಈ ಕುರಿ ಉದ್ಯಮದ ಬಗ್ಗೆ ಅಷ್ಟೊಂದು ಉಪಯೋಗ ಮಾಡಿಕೊಂಡಿಲ್ಲಾ. ಆದಕ್ಕೋಸ್ಕರ ನಾನು ಬಿಜಾಪುರದ ಒಕ್ಕಲುತನದ ದೃಷ್ಟಿಯಿಂದ ಹೇಳುವುದು ಏನೆಂದರೆ ನಮ್ಮ ಬಿಜಾಪುರದ ಜಿಲ್ಲೆ ಯಾವಾಗಲೂ ದುಷ್ಕಾಲಕ್ಕೆ ಈಡಾಗುವದ ರಿಂದಲೂ ಮತ್ತು ಅಲ್ಲಿ ಈ ಕುರಿಯ ಉದ್ಯಮದ ಸಾಗಾಣಿಕೆ ಬಹಳ ಉತ್ತಮವಾದ ಪ್ರದೇಶವಾದುದರಿಂದಲೂ ಕಾರಣ ಅಲ್ಲಿ ಬಯಲು ಭೂಮಿ ಹೆಚ್ಚಾಗಿರುವದರಿಂದ ಆ ಒಂದು ಸ್ಥಳ ಚೇಂಜ ಆಗಬೇಕಾದರೆ ಅಲ್ಲಿ ಈ ಕುರಿ ಉದ್ಯಮದ ಒಂದು ಕೈಗಾರಿಕೆ ಯನ್ನು ಬೆಳಸುವಂತಾಗಬೇಕು ಎಂದು ಹೇಳುತ್ತೇನೆ ಆ ಕೆಲಸ ಈವೊತ್ತು ಅಲ್ಲ ದಿದ್ದರೂ ನಾಳೆ ದಿವಸ ಅಂದರೆ ಬೋರ್ಡ ಮಾಡಿದ ಕಾಲಕ್ಕಾದರೂ ಮಾಡಬೇಕು. ಇಲ್ಲದೇ ಹೋದರೆ ಈ ಬೋರ್ಡ ಮಾಡಿದಾಗ ನೀವು ಏನು ಮಾಡುತ್ತೀರಿ ಅನ್ನುವದು ಗೊತ್ತಾಗುತ್ತದೆ. ನೀವು ನಮ್ಮ ರಾಜ್ಯದ ಕೈಗಾರಿಕಾ ಮಂತ್ರಿಗಳಾಗಿರುವದರಿಂದ ಈ ಮಾತನ್ನು ಹೇಳುತ್ತಿದ್ದೇನೆ. ದುರ್ದೈವವಶಾತ ನಾವು ನಿಮ್ಮ ಎದುರು ಪಕ್ಷದವ ರಾಗಿದ್ದೇವೆ. ಆದರೂ ಕೂಡ ತಾವು ಈ ಬೋರ್ಡ ಮಾಡಿದ ಕಾಲಕ್ಕೆ ಒಳ್ಳೆಯ ತಜ್ಞ ರನ್ನು ಹಾಕಿ ಒಳ್ಳೆಯ ಉದ್ಯಮವನ್ನಾಗಿ ಬೆಳೆಸಿರಿ ಮತ್ತು ಆ ಬೋರ್ಡಗೆ ನಮ್ಮ ಪಾರ್ಟಿಯವರನ್ನು ಹಾಕದೇ ಇದ್ದರೂ ಹೋಗಲಿ ನಿಮ್ಮ ಪಾರ್ಟಿಯವರನ್ನೇ ಒಬ್ಬ ರನ್ನು ಅಲ್ಲಿಯ ರೆಪ್ರೆಸೆಂಟೇಟಿವ್ ಆಗಿ ಹಾಕಿರಿ. ಈವೊತ್ತು ರಾಜ್ಯದಲ್ಲಿ ನೀವು ಒಳ್ಳೆಯ ಕೆಲಸ ಮಾಡಿದ್ದೀರಿ. ಅದು ಯಾವುದು ಎಂದರೆ ನಮ್ಮ ರಾಜ್ಯಕ್ಕೆ ಕರ್ನಾಟಕ ಅನ್ನುವ ಹೆಸರನ್ನು ಇಡಲಿಕ್ಕೆ ಒಂದು ಬಿಲ್ ತಂದು ಅದರಲ್ಲಿ ಕೀರ್ತಿ ಪಡೆದಿರಿ. ಅದೇ ತರಹ ಈ ಒಂದು ಬಿಲ್ಲು ಸಣ್ಣ ಬಿಲ್ ಆದರೂ ಬಹಳ ಮಹತ್ವದ್ದಾಗಿದೆ. ಆದುದರಿಂದ ಇದನ್ನೂ ಕೂಡ ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಂಡರೆ ಇದರ ಒಂದು ಕೀರ್ತಿಯೂ ಸಹ ನಿಮಗೆ ಬರುತ್ತದೆ.

ಇದು ಒಕ್ಕಲುತನಕ್ಕೆ ಬಹಳ ಉಪಯುಕ್ತವಾದುದರಿಂದ ಈ ಒಂದು ಮಹತ್ವವಾದ ಬಿಲ್ಲು ತಂದು ನಮ್ಮ ರಾಜ್ಯಕ್ಕೆ ಪುಣ್ಯದ ಕೆಲಸ ಮಾಡಿದ್ದಾರೆ ಎಂದು ಹೇಳುತ್ತೇನೆ. ಶ್ರೀಮಾನ್ ವಾಟಾಳ್ ನಾಗರಾಜ ಅಂಥವರೂ ಕೂಡ ವಿರೋಧ ಪಕ್ಷದಲ್ಲಿದ್ದರೂ ಸಹ ಅವರು ಈ ಬಿಲ್ ಬಹಳ ಮುಖ್ಯವಾದ ಬಿಲ್ ಅಂತ ಹೇಳಬೇಕಾದರೆ ಇದು ಎಷ್ಟು ಮಹತ್ವದ ಬಿಲ್ ಎಂದು ಕಾಣುತ್ತದೆ. ಅವರ ಕೈಯಲ್ಲಿ ಯಾವ ಬಿಲ್ಲೂ ಕೂಡ ಪಾರಾಗಲಾರದು ಅಂಥಾದ್ದರಲ್ಲಿ ಅವರು ಈವೊತ್ತು ಇದನ್ನು ಮಹತ್ವವಾದ ಬಿಲ್ ಎಂದಿದ್ದಾರೆ. ಆದುದರಿಂದ ನಾನು ಈ ಬಗ್ಗೆ ಹೇಳುವುದಾದರೆ ಯಾರೂ ಕೂಡ ಮಾಂಸಾಹಾರವನ್ನು ಮಾಡಬೇಡಿರಿ ಎಂದು ಹೇಳುವುದಕ್ಕಾಗುವುದಿಲ್ಲ. ಗೌತಮಬುದ್ಧ ಪುನರ್ಜನ್ಮವೆತ್ತಿ ಬಂದರೂ ಕೂಡ ಮಾಂಸಾಹಾರ ಮಾಡುವವರನ್ನು ತಪ್ಪಿಸುವುದದಕ್ಕಾಗುವುದಿಲ್ಲ. ಈಗ ಕಾರವಾರದಲ್ಲಿ ಮೀನು ಬೆಳೆಯುತ್ತಾರೆ. ನಮ್ಮ ಶ್ರೀಮಾನ್ ಕೆ. ಟಿ. ರಾಥೋಡ್‌ರವರು ಫಿಷರೀಸ್ ಮಿನಿಸ್ಟರ್ ಆಗಿದ್ದಾರೆ. ಅವರು ಮೀನು ತಿನ್ನಬೇಡಿರಿ ಎಂದು ಹೇಳಿದರೂ ಅದನ್ನು ತಪ್ಪಿಸುವುದಕ್ಕೆ ಸಾಧ್ಯವಿಲ್ಲಾ, ಮತ್ತು ಮಹಾತ್ಮಾಗಾಂಧೀಜಿಯವರು ಪುನರ್ಜನ್ಮ ಮಾಡಿಕೊಂಡು ಬಂದು ಮಾಂಸಾಹಾರವನ್ನು ಮಾಡಬೇಡಿರಿ ಎಂದು ಹೇಳಿದರೂ ಕೂಡ ಅದನ್ನು ತಪ್ಪಿಸುವುದಕ್ಕಾಗುವುದಿಲ್ಲ. ಆದುದರಿಂದ ಈ ಬಗ್ಗೆ ಆ ವಿಷಯಗಳನ್ನು ಮಾತನಾಡಿದರೆ ಅವರ ಆತ್ಮಕ್ಕೆ ಶಾಂತಿ ಬರುವುದಿಲ್ಲ. ಅದಕ್ಕೋಸ್ಕರವಾಗಿ ಈ ಬಿಲ್ಲು ಬರೇ ಇಂಡಸ್ಟ್ರೀಗೆ ಸಂಬಂಧಪಟ್ಟದ್ದು ಎಂದು ಹೇಳುವ ಹಾಗೆ ಇಲ್ಲ. ಇದು ಎಲ್ಲಾ ಇಲಾಖೆಗಳಿಗೂ ಅಂದರೆ, ಹೆಲ್ತ್ ಡಿಪಾರ್ಟಮೆಂಟ್, ಇಂಡಸ್ಟ್ರೀ ಡಿಪಾರ್ಟಮೆಂಟ್, ಫೈನಾನ್ಸ್ ಡಿಪಾರ್ಟಮೆಂಟ ಮತ್ತು ಫಾರೆಸ್ಟ್ ಡಿಪಾರ್ಟಮೆಂಟ್ ಇವೆಲ್ಲಕ್ಕೂ ಸಂಬಂಧಪಟ್ಟದ್ದಾಗಿದೆ. ಇದು ಒಂದು ಆರ್ಡಿನರಿ ಮ್ಯಾಟರ್ ಅಲ್ಲ. ಇದು ಒಂದು ಧರ್ಮಕ್ಕೆ ಪರ್ಮಿಸಬಲ್ ಆಗಿಲ್ಲ. ಮಹಾತ್ಮಾ ಗಾಂಧಿಯವರು ಒಂದು ಫೋಟೋ ಇಟ್ಟುಕೊಂಡು ಈ ಬಗ್ಗೆ ಒಂದು ಕಾಯಿದೆ ಮಾಡಿದರೆ ತಿನ್ನುವುದಕ್ಕೆ ಲೈಸನ್ಸ್ ಕೊಟ್ಟ ಹಾಗೆ ಎಂದು ಭಾವಿಸಿಕೊಳ್ಳಬೇಡಿ. ಹಾಗಾದರೆ ಅವರ ಆತ್ಮಕ್ಕೆ ಶಾಂತಿ ಬರುವದಿಲ್ಲ. ಯಾರನ್ನೇ ಆಗಲಿ ತಿನ್ನುವುದನ್ನು ಬಿಡಿರಿ ಎಂದು ಯಾರು ಹೇಳುವುದಕ್ಕೆ ಸಾಧ್ಯವಿಲ್ಲಾ. ದಿನಕ್ಕೆ ೨ ಸಾರೆ ತಿನ್ನುವಬದಲು ಒಂದು ಸಾರೆ ತಿನ್ನಿರಿ, ಇಲ್ಲವೆ ತಿಂಗಳಿಗೆ ಒಂದು ಸಾರೆ ತಿನ್ನಿರಿ, ನಾನು ಈ ಮಾತನ್ನು ಹಾಸ್ಯದ ದೃಷ್ಟಿಯಿಂದ ಹೇಳುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.— ಗಾಂಧೀಟೋಪಿಯವರೇ ಜಾಸ್ತಿ ತಿನ್ನುತ್ತಾರೆ.

ಶ್ರೀ ಎಚ್. ವೈ. ಪಾಟೀಲ.— ನೀವೇ ತಿನ್ನಿರಿ, ಯಾರೇ ತಿನ್ನಲಿ, ಅದನ್ನು ಯಾರೂ ತಪ್ಪಿಸುವುದಕ್ಕೆ ಸಾಧ್ಯವಿಲ್ಲಾ. ಆದರೆ ಇದರ ಮುಖ್ಯವಾದ ಗುರಿ ಏನು ಎಂದು ತಿಳಿದುಕೊಳ್ಳಬೇಕು. ಇದರ ಮುಖ್ಯವಾದ ದೃಷ್ಟಿಕೋಣ ಇದರ ಹಾಲು, ಉಣ್ಣೆ ಮತ್ತು ಚರ್ಮ ಇವುಗಳಿಗೆ ಉತ್ತೇಜನ ಕೊಡುವ ಸಲುವಾಗಿ ಇದರ ಕಾಯಿದೆಯನ್ನು ಅನಿವಾರ್ಯವಾಗಿ ಮಾಡಬೇಕಾಯಿತೇ ಹೊರತು. ಇದು ತಿನ್ನುವುದಕ್ಕೆ ಲೈಸನ್ಸ್ ಕೊಟ್ಟ ಹಾಗೆ ಆಯಿತು ಎಂದು ಭಾವಿಸಿಕೊಂಡರೆ ನಮ್ಮ ದೇಶದಲ್ಲಿ

ಭಾರತೀಯ ಅಂತ ಏನು ಹೆಸರು ಇಟ್ಟುಕೊಂಡಿರುತ್ತಾನೋ ಅವನು ಭಾರತೀಯ ಸಂಸ್ಕೃತಿಗೆ ಈಡಾಗಬೇಕಾಗುತ್ತದೆ ಎಂದು ಹೇಳುತ್ತೇನೆ. ಅಧ್ಯಕ್ಷರೇ, ತಾವು ನನಗೆ ಇಷ್ಟು ಮಾತನಾಡಲು ಪರವಾನಗೆ ಕೊಟ್ಟದ್ದಕ್ಕಾಗಿ ತಮ್ಮನ್ನು ಅಭಿನಂದಿಸಿ, ಮತ್ತು ಈ ಬಿಲ್ಲನ್ನು ತಂದಂಥ ಮಾನ್ಯ ಕೈಗಾರಿಕೆ ಮಂತ್ರಿಗಳನ್ನೂ ಕೂಡ ಅಭಿನಂದಿಸಿ, ಮತ್ತು ಈ ಬಿಲ್ಲನ್ನು ಕಾರ್ಯ ರೂಪಕ್ಕೆ ತರುವದಾಗಿ ಬಹು ಎಚ್ಚರಿಕೆವಹಿಸಬೇಕೆಂದು ಸೂಚಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಟಿ. ಎಂ. ಮಂಜುನಾಥ.— ನಾನು ಭಾಷಣ ಮಾಡುವುದಿಲ್ಲ. ಆದರೆ ತಾವು ಈ ಕುರಿ ಉಣ್ಣೆ ಸಹಕಾರ ಸಂಘಗಳಿಗೆ ಇದರ ವತಿಯಿಂದ ಪ್ರೋತ್ಸಾಹ ಕೊಡ ಬೇಕೆಂದು ನನ್ನ ಪ್ರಾರ್ಥನೆ.

† ಶ್ರೀ ಕೆ. ಪ್ರಭಾಕರ್ (ವರ್ತೂರು).— ಮಾನ್ಯ ಅಧ್ಯಕ್ಷರೆ, ಈ ಕುರಿ ತಳಿಗೆ ಸಂಬಂಧಪಟ್ಟ ಮಸೂದೆ ಸಮಯೋಚಿತವಾದುದು. ಇದು ಬಹಳ ದಿವಸಗಳ ಹಿಂದೆ ಆಗಬೇಕಾಗಿತ್ತು. ನಮ್ಮ ಸರಕಾರದವರು ಮನಸ್ಸು ಮಾಡಿ ಇಂಥ ಅನೇಕ ಬಿಲ್ಲು ಗಳನ್ನು ತಂದು ದೇಶಕ್ಕೆ ಉಪಕಾರ ಮಾಡಿದ್ದಾರೆ. ಅದೇ ರೀತಿ ಇದನ್ನು ಸಹ ತಂದಿದ್ದಾರೆ. ಆದರೆ ಕುರಿಯ ಅಭಿವೃದ್ಧಿಯ ವಿಚಾರದಲ್ಲಿ ಸಾಧಕ ಬಾಧಕಗಳೆರಡೂ ಇವೆ. ಅದು ಒಳ್ಳೆಯ ಸಾಧು ಪ್ರಾಣಿ ಎಂದೂ ಹೇಳುತ್ತಾರೆ ಮತ್ತು ಬುದ್ಧಿವಂತಿಕೆ ಕಡಿಮೆಯಾದರೆ ಜನರನ್ನು ಕುರಿಗೆ ಹೋಲಿಸುತ್ತಾರೆ. ಕುರಿಯಿಂದ ಗೊಬ್ಬರ, ಉಣ್ಣೆ, ಮಾಂಸ ಮತ್ತು ಅದರ ಕೊಬ್ಬಿನಿಂದ ಒಂದು ರೀತಿಯ ಅಂಟನ್ನು ತಯಾರ ಮಾಡುತ್ತಾರೆ ಆದರೆ ಸಂಸ್ಕೃತದಲ್ಲಿ ಮಾಂಸ ತಿನ್ನತಕ್ಕದ್ದು ಅಷ್ಟು ಉತ್ತಮವಾದ ಅಭ್ಯಾಸವಲ್ಲವೆಂದು ಹೇಳಿದೆ. ಆದರೆ ನಾವು ಓಟು ತೆಗೆದುಕೊಂಡು ಮೆಜಾರಿಟಿ ಓಟ ಪ್ರಕಾರ ತೀರ್ಮಾನ ಮಾಡುವುದರಿಂದ ನಮ್ಮ ದೇಶದಲ್ಲಿ ಮಾಂಸ ತಿನ್ನತಕ್ಕವರೇ ಹೆಚ್ಚಾಗಿರುವುದರಿಂದ ಮಾಂಸ ತಿನ್ನುವುದೇ ಸರಿ ಎಂದಾಗುತ್ತದೆ. ತಿನ್ನದೆ ಇರತಕ್ಕ ವರು ತಿನ್ನಿ ಎಂದು ಹೇಳುವುದಿಲ್ಲ. ಕದ್ದು ತಿನ್ನುನವರು ತಿನ್ನಬಾರದು ಎಂದು ಸಹ ಹೇಳುವುದಕ್ಕಾಗುವುದಿಲ್ಲ. ಇವತ್ತು ಕುರಿ ಅಭಿವೃದ್ಧಿಯಿಂದ ರೈತನಿಗೆ ಏನು ಪ್ರಯೋ ಜನವಾಗುತ್ತದೆ ಅದನ್ನು ತಿಳಿದುಕೊಂಡು ಈ ಮಸೂದೆಯನ್ನು ತಂದಿದ್ದಾರೆ. ಕುರಿಯ ಅಭಿವೃದ್ಧಿಗಾಗಿ ಗ್ರಾಸ್ ಲ್ಯಾಂಡ್ ಜಾಸ್ತಿಬೇಕಾಗುತ್ತದೆ. ಆದರೆ ನಮ್ಮಲ್ಲಿ ಗ್ರಾಸ್ ಲ್ಯಾಂಡ್ ಕೊರತೆ ಇದೆ. ಆದ್ದರಿಂದ ಫಾರೆಸ್ಟ್ ಲ್ಯಾಂಡನ್ನು ಸಹ ಕುರಿ ಮೇಯಿಸುವುದಕ್ಕೆ ಉಪಯೋಗಿಸಿಕೊಳ್ಳಬಹುದು. ಈ ರೀತಿ ಕುರಿ ತಳಿ ಅಭಿವೃದ್ಧಿ ಮಾಡುವುದರಿಂದ ದೇಶದಲ್ಲಿ ಆಸ್ಟ್ರೇಲಿಯದಲ್ಲಿರುವ ಮೆರಿನೋ ತಳಿಯ ಜಾತಿಯಂತಹ ಕುರಿಗಳನ್ನು ಇಲ್ಲೂ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈ ಮೆರಿನೋ ಜಾತಿಯ ಕುರಿ ಮೃದುವಾದ ಉಣ್ಣೆಯನ್ನು ಕೊಡುವುದಕ್ಕೆ ಪ್ರಸಿದ್ಧಿಯಾಗಿದೆ. ಭತ್ತ, ರಾಗಿಯ ತಳಿಯನ್ನು ಅಭಿವೃದ್ಧಿ ಮಾಡಿದ ಹಾಗೆ ಇದನ್ನು ಸಹ ಅಭಿವೃದ್ಧಿ ಮಾಡಿದ್ದಾರೆ. ಇದರಿಂದ ಉಣ್ಣೆ, ಗೊಬ್ಬರ, ಮಾಂಸ ಹೆಚ್ಚು ತಯಾರು ಮಾಡುವುದಕ್ಕೆ ಸಾಧ್ಯ ವಾಗುತ್ತದೆ.

ಈ ಬಿಲ್ಲಿನಲ್ಲಿ ಕುರಿ ಮೇವುಗೆ ಸಹ ಸಾಕಷ್ಟು ಅವಕಾಶ ದೊರೆಯುವ ಹಾಗೆ ಮಾಡಬೇಕು. ಆಮೇಲೆ ಇದರಲ್ಲಿ ಅನಿಮಲ್ ಹಸಬೆಂಡರಿ, ಅಗ್ರಿಕಲ್ಚರ, ಮತ್ತು ಇಂಡಸ್ಟ್ರಿ—ಇತ್ಯಾದಿ ಎರಡು ಮೂರು ಇಲಾಖೆಗಳು ಬರುವುದರಲ್ಲಿ ಇವುಗಳೊಳಗೆ ಗೊಂದಲವುಂಟಾಗಬಾರದು. ಇದನ್ನು ಯಾವುದಾದರೂ ಒಂದು ಇಲಾಖೆ ತೆಗೆದು ಕೊಂಡು ಬಹುಭಾಗವನ್ನು ಕಾರ್ಯರೂಪಕ್ಕೆ ತರಬೇಕು. ಗೊಂದಲವುಂಟುಮಾಡು ವುದರಿಂದ ಇದರ ಬೆಳವಣಿಗೆ ಕುಂಠಿತವಾಗುತ್ತದೆ. ಪ್ರಜಾಪ್ರಭುತ್ವದಲ್ಲಿ ಒಂದು ಮಂತ್ರಿಮಂಡಲ ತಂದಂತಹ ಯೋಜನೆಯನ್ನು ಇನ್ನೊಂದು ಮಂತ್ರಿಮಂಡಲ ಬಂದು ಕೈಬಿಡುತ್ತದೆ. ಇದು ಪ್ರಜಾಪ್ರಭುತ್ವದಲ್ಲಿ ಕಂಡು ಬರುವ ರೀತಿ ನೀತಿಗಳು. ಯಾವುದೇ ಸರಕಾರ ಬಂದರೂ ಜನರಿಗೆ ಪ್ರಯೋಜನವಾಗುವ ಸ್ಕೀಮುನ್ನು ಬದಲಾ ಯಿಸದೆ ಮುಂದುವರಿಸಿಕೊಂಡು ಹೋಗಬೇಕಾಗುತ್ತದೆ. ಇವತ್ತು ನಮ್ಮ ರಾಜ್ಯದಲ್ಲಿ ಕುರಿ ಸಾಕತಕ್ಕ ಜನರ ಅಭಿವೃದ್ಧಿಯೂ ಸಹ ಆಗಬೇಕಾಗಿದೆ. ಕುರಿ ಸಾಕತಕ್ಕವರು ಯಾವ ಜನರೇ ಆಗಲಿ, ಅದರಿಂದ ರೈತನಿಗೆ ನಾನಾ ರೀತಿಯಲ್ಲಿ ಪ್ರಯೋಜನ ಇರು ತ್ತದೆ. ಡೈರಿ ಫಾರ್ಮನ್ನು ಬೆಳೆಸಿದಂತೆ, ಇದನ್ನು ಸಹ ಬೆಳಸಬೇಕು. ಇದನ್ನು ಮಾಡುವುದರ ಜೊತೆಗೆ ಹೊರ ದೇಶಗಳಲ್ಲಿ ಯಾವ ರೀತಿ ಅಭಿವೃದ್ಧಿ ಮಾಡಿದ್ದಾರೆ ಎಂಬುದನ್ನು ನೋಡಲು ಪ್ರತೀ ತಾಲೂಕಿನ ಒಬ್ಬೊಬ್ಬರನ್ನು ಆರಿಸಿ, ಒಂದು ೨೦೦ ಜನರನ್ನು ಪರದೇಶಕ್ಕೆ ಕಳಿಸಿ ಅಲ್ಲಿ ಸುಧಾರಣೆ ಮಾಡಿದ ರೀತಿಯಲ್ಲಿ ಇಲ್ಲೂ ಮಾಡು ವುದಕ್ಕೆ ಅವಕಾಶ ಮಾಡುವುದು ಒಳ್ಳೆಯದು ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಸ್. ಎಂ. ಕೃಷ್ಣ.—ಮಾನ್ಯ ಅಧ್ಯಕ್ಷರೆ, ಈ ಸದನದ ನಾನಾ ಭಾಗ ಗಳಿಂದ ಈ ಮಸೂದೆಗೆ ಸಿಕ್ಕಿರತಕ್ಕಂತಹ ಸ್ವಾಗತಕ್ಕೆ ನಾನು ಚರ್ಚೆಯಲ್ಲಿ ಭಾಗ ವಹಿಸಿದಂತಹ ಮಾನ್ಯ ಸದಸ್ಯರೆಲ್ಲರಿಗೂ ಕೂಡ ನನ್ನ ಹೃತ್ಪೂರ್ವಕವಾದ ಆಭಾರ ಗಳನ್ನು ಸಮರ್ಪಣೆ ಮಾಡುತ್ತೇನೆ. ಚರ್ಚೆಯ ಕಾಲದಲ್ಲಿ ಹಲವಾರು ವಿಧವಾದಂತಹ ಮತ್ತು ರಚನಾತ್ಮಕವಾದಂತಹ ಸಲಹೆಗಳು ಬಂದಿವೆ. ಮತ್ತು ಈ ಮಂಡಳಿಯ ನಿರ್ಮಾಣದ ಬಗ್ಗೆ ಕೂಡ ಕೆಲವು ಟೀಕೆಗಳು ಬಂದಿವೆ. ಅವುಗಳೆಲ್ಲವನ್ನೂ ಕೂಡ ಯಾವ ಉದ್ದೇಶವನ್ನು ಒಳಗೊಂಡು ಈ ಮಂಡಳಿಯ ರಚನೆ ಆಗಬೇಕೆಂದು ಸರ್ಕಾರ ಭಾವಿಸಿದೆಯೋ, ಆ ಉದ್ದೇಶಕ್ಕಾಗಿ ಈ ಸಲಹೆಗಳು ಮತ್ತು ಟೀಕೆಗಳು ಬಹಳಮಟ್ಟಿಗೆ ಉಪಯೋಗಕರವಾಗುತ್ತದೆ ಎಂದು ನಾನು ಭಾವನೆ ಮಾಡುತ್ತೇನೆ. ಈ ಮಂಡಳಿಯ ಕೆಲಸಕಾರ್ಯಗಳು ಬಹಳ ಗುರುತರವಾದುದು. ಈಗ ವಹಿಸಬೇಕೆಂದು ಉದ್ದೇಶಿಸಿರ ತಕ್ಕಂತಹ ಜವಾಬ್ದಾರಿ ಸಹ ಬಹಳ ವಿಶಾಲವಾಗಿರತಕ್ಕಂತಹ ಮತ್ತು ಸ್ಪಷ್ಟವಾಗಿರ ತಕ್ಕಂತಹ ಜವಾಬ್ದಾರಿ. ಈ ಚರ್ಚೆಯಲ್ಲಿ ಭಾಗವಹಿಸಿರತಕ್ಕಂತಹ ಎಲ್ಲಾ ಸದಸ್ಯ ರಿಗೂ ಕೂಡ ಈ ಕುರಿ ಪೋಷಣೆ ಕೇವಲ ಆಹಾರ ದೃಷ್ಟಿಯಿಂದ ಒಂದೇ ಅಲ್ಲ, ಇನ್ನೂ ಹಲವಾರು ವಿಚಾರಗಳು ಮುಖ್ಯವಾದ ಗುರಿಯಾಗಿವೆಯೆಂದು ಹೇಳಿದ್ದಾರೆ. ಮುಖ್ಯ ವಾಗಿ ಕುರಿ ಗೊಬ್ಬರ, ಹಾಗೂ ಕುರಿ ಉಣ್ಣೆ ಮತ್ತು ತೊಗಲು—ಇವರ ವಿಚಾರದಲ್ಲಿ

ಸಹ ಬಹು ವಿಧವಾದ ಚರ್ಚೆಯನ್ನು ಸದಸ್ಯರು ರೂಪಿಸಿಕೊಂಡಿದ್ದಾರೆ. ಸರ್ಕಾರದ ದೃಷ್ಟಿಯಾದರೂ ಸಹ ಇಂಥ ಮಂಡಳಿಗಳು ಪಕ್ಷಾತೀತವಾಗಿ ಕೆಲಸ ಮಾಡ ಬೇಕೆಂಬುದರಲ್ಲಿ ಭಿನ್ನಾಭಿಪ್ರಾಯಗಳು ಇಲ್ಲ. ಇತ್ತೀಚಿಗಿನ ವರ್ಷಗಳಲ್ಲಿ ಅನ್ನದ ಆಹಾಕಾರ ಎದ್ದಿದೆ ಎಂದು ಮಾಸ್ಯ ಪುಟ್ಟಸ್ವಾಮಿಯವರು ಹೇಳಿದರು. ಅನ್ನದ ಆಹಾಕಾರವಾಗಲಿ ಅಥವಾ ಇನ್ನು ಯಾವುದೇ ಆರ್ಥಿಕ ಸಮಸ್ಯೆಯಾಗಲಿ ಬಗೆ ಹರಿಯಬೇಕಾದರೆ ಇಂಥ ಹೆಜ್ಜೆಗಳು ಮುಖ್ಯ. ಕುರಿ ಪೋಷಣೆಗೆ ಸಮಾಜದಲ್ಲಿ ಒಂದು ಗೌರವಯುತವಾದ ಸ್ಥಾನವನ್ನು ಕಲ್ಪಿಸಿಕೊಡತಕ್ಕ ದಿಕ್ಕಿನಲ್ಲಿ ಇದು ಒಂದು ಒಳ್ಳೆಯ ಹೆಜ್ಜೆಯೆಂಬುದನ್ನು ನಾವೆಲ್ಲರೂ ಒಪ್ಪಿಕೊಳ್ಳತಕ್ಕ ವಿಚಾರ.

ಕೆಲವು ಸದಸ್ಯರು ಈ ಕುರಿ ಪೋಷಣೆಯ ಬಗ್ಗೆ ಮಾತನಾಡುವಾಗ ಇದಕ್ಕೆ ಬೇಕಾಗುವ ಗ್ರೇಜಿಂಗ ಗ್ರೌಂಡ ಎಲ್ಲಿದೆ ಎಂಬ ಪ್ರಶ್ನೆಯನ್ನು ಮುಂದೆ ಮಾಡಿದ್ದಾರೆ. ಈ ಸಮಯದಲ್ಲಿ ನಮ್ಮ ಅರಣ್ಯ ಮತ್ತು ವ್ಯವಸಾಯ ಖಾತೆಯ ಸಚಿವರಾದ ಶ್ರೀ ಕೆ. ಎಚ್. ಪಾಟೀಲರು ಈಗಾಗಲೆ ಸ್ಪಷ್ಟಪಡಿಸಿದ್ದಾರೆ, ಎಲ್ಲಿ ಕಾಡಿದೆ ಅದನ್ನು, ಸಮೃದ್ಧಿಯಾಗಿ ಬೆಳೆದಿರುವ ಕಾಡನ್ನು ಕುರಿ ಪೋಷಣೆಗೆ ಗ್ರೇಜಿಂಗ್ ಗ್ರೌಂಡ ಆಗಿ ಉಪಯೋಗಿಸಿಕೊಳ್ಳಬಹುದು ಎಂದು ತೀರ್ಮಾನ ತೆಗೆದುಕೊಂಡಿರುವುದಾಗಿ ತಿಳಿಸಿದ್ದಾರೆ. ಜೊತೆಗೆ ಅಮೃತಮಹಲ್ ಕಾವಲು ಏನು ತುಮಕೂರು ಮತ್ತಿತರ ಜಿಲ್ಲೆಗಳಲ್ಲಿದೆ ಆ ಕಾವಲುಗಳನ್ನು ಕುರಿ ಪೋಷಣೆಗೆ ಉಪಯೋಗಿಸಕೊಳ್ಳಲು ಸಾಧ್ಯವಾಗಬಹುದೋ ಏನೋ ಎಂದು ವಿಚಾರ ಮಾಡಬಹುದು. ಕಾಡು ಅಂದರೆ ಮಲೆನಾಡಿನಲ್ಲಿರುವ ಕಾಡನ್ನು ಉದ್ದೇಶಿಸಿ ಹೇಳಿಲ್ಲ. ನಾಗಮಂಗಲದಲ್ಲಿ ಕುರಿ ಪೋಷಣೆಗೆ ಬಹಳ ಅನುಕೂಲವಾದ ವಾತಾವರಣವಿದೆ. ಅಲ್ಲಿ ಈಗ ಸಣ್ಣ ಪುಟ್ಟ ಕಾಡನ್ನು ಬೆಳೆಸಲು ಪ್ರಯತ್ನ ಮಾಡುತ್ತಿದ್ದಾರೆ. ಅಂಥ ಕಾಡುಗಳಲ್ಲಿ ಕುರಿ ತನಗೆ ಬೇಕಾದ ಆಹಾರವನ್ನು ದೊರಕಿಸಿಕೊಳ್ಳಲು ಸಾಧ್ಯವಿದೆ. ಹಾಗೆಯೇ ತುಮಕೂರು ಮತ್ತಿತರ ಜಿಲ್ಲೆಗಳಲ್ಲಿ ಮೈದಾನದಲ್ಲಿ ಇಂಥ ಅನುಕೂಲವಿದೆ. ಅಲ್ಲಿ ಕುರಿ ಪೋಷಣೆ ಮಾಡಲು ಶಕ್ಯವಿದೆ ಎಂದು ಭಾವಿಸುತ್ತೇನೆ.

ಶ್ರೀ ಎಚ್. ಟಿ ಕೃಷ್ಣಪ್ಪ.— ನಾಗಮಂಗಲದಲ್ಲಿ ಸುಮಾರು ೧೦ ಸಾವಿರ ಎಕರೆ ಕಾಡಿದೆ. ಅಲ್ಲಿ ಸಾರ್ವಜನಿಕರ ದನಕರುಗಳು ಮತ್ತು ಕುರಿಗಳನ್ನು ಬಿಡುತ್ತಿಲ್ಲ, ಇದರಿಂದ ತೊಂದರೆಯಾಗಿದೆ. ಅದು ಗೋಮಾಳದ ಭೂಮಿ. ಮೊದಲು ಅಲ್ಲಿ ಮೇಯಿಸುವುದಕ್ಕೆ ತೊಂದರೆ ಮಾಡುವುದಿಲ್ಲವೆಂದು ಹೇಳಿದರು. ಈಗ ಕಾಡಿಗೆ ದನಕರುಗಳನ್ನು ಬಿಡುತ್ತಿಲ್ಲ. ಬಿಡುವಂತೆ ಆದೇಶ ಕೊಡುವಿರಾ ?

ಶ್ರೀ ಕೆ. ಎಚ್. ಪಾಟೀಲ.— ಈಗಾಗಲೇ ಸರಕಾರದ ಆದೇಶವಿದೆ. ದನಗಳನ್ನು ಮೇಯಿಸಲು ತೊಂದರೆ ಮಾಡಬಾರದು ಎಂದು ತಿಳಿಸಿದೆ. ಆದರೆ ಅರಣ್ಯವನ್ನು ನಷ್ಟಮಾಡಬಾರದು ಹಾಗೆ ಮಾಡಿದರೆ ತಡೆಮಾಡುವರು.

ಶ್ರೀ ಎಸ್. ಎಂ. ಕೃಷ್ಣ.— ಈ ಮಂಡಲಿಯವರು ಕುರಿಗಳಿಗೆ ಬರುವ ಸಾಂಕ್ರಾಮಿಕ ರೋಗವನ್ನು ಕೂಡ ತಡೆಯುವುದಕ್ಕೆ ವ್ಯವಸ್ಥೆ ಮಾಡಬೇಕು ಮತ್ತು

ಉಣ್ಣೆಗೆ ಸರಿಯಾದ ಬೆಲೆ ಸಿಕ್ಕುವಂತೆ ಮಾಡಬೇಕು, ಹಾಗೆಯೇ ರಿಸರ್ಚ ಮತ್ತು ಡೆವಲಪ್‌ಮೆಂಟ್ ಇವುಗಳಿಗೆ ಹೆಚ್ಚು ಗಮನ ಕೊಡಬೇಕು ಎಂದು ಈ ಸಮಿತಿಯ ಕಾರ್ಯವ್ಯಾಪ್ತಿಯಲ್ಲಿ ತಿಳಿಸಲಾಗುವುದು. ಮಾನ್ಯ ಸದಸ್ಯರು ಕೋಲ್ಡ್ ಸ್ಟೊರೇಜ್ ಅನುಕೂಲ ಮಾಡಿಕೊಡಬೇಕು, ಕಲೆಕ್ಟಿಂಗ್ ಸೆಂಟರ್ಸ್ ಅನುಕೂಲ ಕಲ್ಪಿಸಬೇಕು ಎಂದು ತಿಳಿಸಿದ್ದಾರೆ ಆರ್ಥಿಕವಾಗಿ ಹಿಂದುಳಿದ ಈ ಉದ್ಯಮವನ್ನವಲಂಬಿಸಿರುವ ಲಕ್ಷಾಂತರ ಸಂಸಾರಗಳಿಗೆ ಈ ಸುಧಾರಿತ ಕಾರ್ಯಕ್ರಮ ಕಾರ್ಯರೂಪಕ್ಕೆ ತಂದರೆ ಬಹಳ ಹೆಚ್ಚಿನ ಅನುಕೂಲವಾಗುತ್ತದೆ ಎಂಬುದು ಸರಕಾರದ ಅಭಿಪ್ರಾಯ. ಅದಕ್ಕನುಸಾರವಾಗಿ ಈ ಮಸೂದಾ ಕಾನೂನಿಗೆ ಈ ಸಭೆ ಸರ್ವಾನುಮತದ ಬೆಂಬಲ ಕೊಟ್ಟಿರುವುದಕ್ಕಾಗಿ ಮಾನ್ಯ ಸಭೆಗೆ ಸರಕಾರದ ಪರವಾಗಿ ಕೃತಜ್ಞತೆಗಳನ್ನು ಅರ್ಪಿಸಿ ಈ ಮಸೂದೆಯನ್ನು ಸಭೆ ಒಪ್ಪಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

MADAM SPEAKER.— I will now put the motion to the vote of the House. The question is:

"That the Mysore Sheep and Sheep products Bill, 1973, be taken into consideration."

The motion was adopted.

(Clauses 2 to 26)

MADAM SPEAKER.— I will now take up consideration of the Bill clause by clause. I will put clauses 2 to 26 both inclusive to the vote of the House. The question is:

"That Clauses 2 to 26, both inclusive, do stand part of the Bill."

The motion was adopted

Clauses 2 to 26, both inclusive were added to the Bill.

Clause 27

MADAM SPEAKER.- There is an amendment by the Government to Clause 27.

Sri S. M. KRISHNA.— I move the following amendmet:

"That In clause 27- (1) in Sub-clause (2) after the words "shall be referred to a Tribunal constituted by the State Government for the purpose" the words, brackets and figures "under sub-section (3)" shall be inserted."

(ii) for sub-clause (3) the following clause shall be substituted, namely.-

"(3) The Tribunal shall consist of a Judicial Officer not below the rank of a District Judge."

"Provided that pending constitution of the Tribunal the District Judge of each District shall function as the Tribunal for the purpose of this Act."

MADAM SPEAKER.- Amendment moved:

"That in Clause 27-

(i) in sub-clause (2) after the words "shall be referred to a Tribunal constituted by the State Government for the purpose", the words, brackets and figures "under sub-section (3) " shall be inserted.

"(ii) for sub-clause (3) the following clause shall be substituted, nemely:

"(3) The Tribunal shall consist of a Judicial Officer not below the rank of a District Judge."

"Provided that pending constitution of the Tribunal the District Judge of each District shall function as the Tribunal for the purpose of this Act."

ಶ್ರೀ ಎಸ್. ಎಂ. ಕೃಷ್ಣ— ಇದು ಸ್ವಯಂ ವಿದಿತವಾಗಿರುವ ತಿದ್ದುಪಡಿ. ಇದನ್ನು ಒಪ್ಪಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ.

MADAM SPEAKER.- I Will put the amendment moved by the Hon. Minister to the vote of the House. The question is :

"That In clause 27-

(i) in sub-clause (2) after the words "shall be referred to a Tribunal constituted by the State Government for the purpose" the words, brackets and figures "under sub-section (3)" shall be inserted.

(ii) for sub-clause (3) the following clause shall be substituted, namely.-

(3) "The Tribunal shall consist of a Judicial Officer not below the rank of a District Judge."

"provided that pending constitution of the Tribunal the District Judge of eahc District shall function as the Tribunal for the purpose of this Act."

The amendent was adopted

MADAM SPEAKER.- I will put Clause 27 as amended to the vote of the House. The question is:-

"That Clause 27 as amended do stand part of the Bill"

The motion was adopted

Clause 27 as amended, was added to the Bill.

Clause 28 and 29

MADAM SPEAKER.—I will put Clauses 28 and 29 to the vote of the House. The question is : "That Clauses 28 and 29 do stand part of the Bill."

The motion was adopted

Clauses 28 and 29 were added to the Bill.

Clause 30.

MADAM SPEAKER.—There is an amendment by the Hon. Minister.

SRI S. M. KRISHNA.—I move the following amendment, "That In Clause 30, to sub-clause (1) the following proviso shall be added, namely.—

"Provided that no such declaration shall be made by the State Government unless a resolution to that effect has been moved in and passed by both Houses of the State Legislature."

MADAM SPEAKER.—Amendment moved:

" That in Clause 30, to sub-clause (1), the following proviso shall be added, namely.—

" Provided that no such declaration shall be made by the State Government unless a resolution to that effect has

been moved in and passed by both Houses of the State Legislature."

ಶ್ರೀ ಎಸ್. ಎಂ. ಕೃಷ್ಣ.— ಈ ಮಂಡಲಿ ರದ್ದುಮಾಡಬೇಕಾದರೆ ಸರಕಾರದಲ್ಲಿ ಇದರ ಬಗ್ಗೆ ಅಧಿಕಾರ ಕೇಂದ್ರೀಕೃತವಾಗಬಾರದು ಎಂಬ ದೃಷ್ಟಿಯಿಂದ, ಆರ್ಬಿಟ್ರರಿಯಾಗಿ ಯಾವ ಮಂಡಲಿಯನ್ನು ಸರಕಾರ ರದ್ದುಮಾಡುವ ಪರಿಸ್ಥಿತಿ ಬಾರದೆ ಇರಲಿ ಎಂದು, ಒಂದು ಪಕ್ಷ ರದ್ದು ಮಾಡಬೇಕಾದರೆ ಶಾಸಕಾಂಗದ ಎರಡು ಸದನಗಳಲ್ಲಿ ಇದರ ಬಗ್ಗೆ ಒಂದು ನಿರ್ಣಯ ಅಂಗೀಕೃತವಾದ ಮೇಲೆ ಮಂಡಲಿ ರದ್ದುಮಾಡುವುದಕ್ಕೆ ಅವಕಾಶ ಮಾಡಿಕೊಡುವುದಕ್ಕೆ ಈ ತಿದ್ದುಪಡಿ ತರಲಾಗಿದೆ. ಇದನ್ನು ಒಪ್ಪಬೇಕು.

ಶ್ರೀ ಟಿ ಆರ್. ಶಾಮಣ್ಣ.— ಈ ತಿದ್ದುಪಡಿ ತಂದಿರುವುದರಿಂದ ತಮಗೆ ವಂದನೆಗಳನ್ನು ಸಲ್ಲಿಸುತ್ತೇನೆ.

MADAM SPEAKER.— I will now put the Amendment moved by the Hon. Minister to the vote of the House. The question is:

"That In Clause 30, to sub-clause (1), the following proviso shall be added, namely.--

"Provided that no such declaration shall be made by the State Government unless a resolution to that effect has been moved in and passed by both Houses of the State Legislature."

THE AMENDMENT WAS ADOPTED

MADAM SPEAKER.— I will put Clause 30 as amended to the vote of the House. The question is :

"That Clause 30 as amended do stand part of the Bill."

THE MOTION WAS ADOPTED

Clause 30 as amended, was added to the Bill.

CLAUSES 31 and 32

MADAM SPEAKER.— I will put Clauses 31 and 32 to the vote of the House. The question is:

"That Clauses 31 and 32 do stand part of the Bill."

The motion was adopted

Clauses 31 and 32 were added to the Bill.

CLAUSE 33.

MADAM SPEAKER.— There is an amendment.

SRI S. M. KRISHNA.—I move the following amendment.

For Clause 33, the following clause shall be substituted namely.—

"The State Government may by notification add any matter to the Schedule ;

Provided that no matter unrelated to the objccts of this Act shall be so added."

MADAM SPEAKER.— Amendment moved.

"That for Clause 33, the following clause shall be substituted, namely.—

"The State Government may by notification add any matter to the Schedule:

Provided that no matter unrelated to the objects of this Act shall be so added."

ಶ್ರೀ ಎಸ್. ಎಂ. ಕೃಷ್ಣ.— ಷೆಡ್ಯೂಲನ್ನು ಸರಕಾರ ಯಾವಾಗ ಬೇಕಾದರೂ ಸೇರಿಸಬಹುದು ಅಥವಾ ಅದರಿಂದ ಕೆಲವು ಭಾಗ ತೆಗೆದುಹಾಕಬಹುದು ಎಂಬ ಉದ್ದೇಶದಿಂದ ಈ ತಿದ್ದುಪಡಿ ತರಲಾಗಿದೆ.

MADAM SPEAKER.— I will now put Amendment moved by the Hon. Minister to vote. The question is :

"That for Clause 33, the following clause shall be substitued, namely :—

"The State Government may by notification add any matter to the Schedule :

Provided that no matter unrelated to the objects of this Act shall be so added."

The motion was adopted

Clause 33 as substituted was added to the Bill.

5-00 P.M.

Clause 34 and the Schedule

MADAM SPEAKER.— I will put the clause 34 and Schedule to the vote of the House.

The question is :

"That Clause 34 and the Schedule do stand part of the Bill."

The motion was adopted

Clause 34 and Schedule were added to the Bill.

Clause I etc.

MADAM SPEAKER.— I will put clause I, the long title, the Preamble and the Enacting Formula to the vote of the House.

The question is :

"The Clause I, the long Title, the Preamble and the Enacting Formula do stand part of the bill."

The motion was adopted.

Clause I, the Long Title, the Preamble and the Enacting Formula were added to the Bill.

Motion to pass

Sri S. M. KRISHNA.— I move that the Mysore Sheep and Seep Products Bill, 1973, as amended be passed.

MADAM SPEAKER.— The question is :

"That the Mysore Sheep and Sheep Products Bill, 1973, as amended be passed."

The motion was unanimously adopted and the Bill as amended was passed.

University of Health Sciences Bill 1973.

Motion to consider

MADAM SPEAKER.— I have received a recommendation from the Governor of Mysore about the University of Health Science, Bill, 1973.

"In pursuance of Clause (3) of Article 207 of the Constitution of India, I Mohanlal Sukhadia, Governor of Mysore, do hereby recommend that the University of Health Sciences Bill, 1973 be considered by the Mysore Legislative Assembly."

Sri H. SIDDAVEERAPPA — I beg to move.

"That the University of Health Sciences Bill, 1973, be taken into consideration."

MADAM SPEAKER.— Motion moved.

"That the University of Health Sciences Bill, 1973, be taken into consideration."

ಶ್ರೀ ಎಚ್. ಸಿದ್ದವೀರಪ್ಪ (ಆರೋಗ್ಯ ಸಚಿವರು).— ಮೇಡಂ ಸ್ಪೀಕರ್....

ಶ್ರೀ ಟಿ. ಆರ್. ಶಾಮಣ್ಣ.— ಮಾನ್ಯ ಸಚಿವರು ಬಿಲ್ಲನ್ನು ಮಂಡಿಸತಕ್ಕ ಈ ಅವಧಿಯಲ್ಲಿ ಇಂಥ ಒಂದು ಹೊಸ ಯುನಿವರ್ಸಿಟಿಯನ್ನು ಸ್ಥಾಪಿಸುವುದರಿಂದ ಸರ್ಕಾರಕ್ಕೆ ಹೆಚ್ಚಿನ ಖರ್ಚುವೆಚ್ಚಗಳು ಬರುವುದಿಲ್ಲವೇ? ಇಂಡಿಯಾದಲ್ಲಿ ಬೇರೆ ಎಲ್ಲಿಯಾದರೂ ಇಂಥ ಯುನಿವರ್ಸಿಟಿಗಳು ಇವೆಯೇ? ಮತ್ತು ಹಾಲಿ ಇರತಕ್ಕ ಯುನಿವರ್ಸಿಟಿಯಿಂದ ಈ ಹೊಸ ಯುನಿವರ್ಸಿಟಿಯನ್ನು ಸ್ಥಾಪನೆ ಮಾಡದೆ ಇದರ ಕರ್ತವ್ಯಗಳನ್ನು ನಡೆಸುವುದಕ್ಕಾಗುವುದಿಲ್ಲವೇ ಎಂಬುದನ್ನು ತಿಳಿಸಿದರೆ ಚರ್ಚೆಯ ವ್ಯಾಪ್ತಿಯನ್ನು ಕಡಿಮೆ ಮಾಡಬಹುದು.

†ಶ್ರೀ ಎಚ್. ಸಿದ್ದವೀರಪ್ಪ.— ಶ್ರೀ ಶ್ಯಾಮಣ್ಣನವರು ಕೇಳತಕ್ಕ ಪ್ರತಿಯೊಂದು ವಿಷಯದ ಬಗ್ಗೆ ನಾನು ಸಮಂಜಸವಾದ ಉತ್ತರಗಳನ್ನು ಕೊಡುತ್ತೇನೆ. ಅಲ್ಲದೇ ಈ ಬಿಲ್ಲನ್ನು ಮಂಡಿಸತಕ್ಕ ವಿಚಾರದಲ್ಲಿ ಇದೊಂದು ಟೆಕ್ನಿಕಲ್ ಸಬ್‌ಜೆಕ್ಟಾದ್ದರಿಂದ ಇದನ್ನು ಕನ್ನಡದಲ್ಲಿ ಮಂಡಿಸುವುದಕ್ಕೆ ಸೂಕ್ತ ಕನ್ನಡ ಪದಗಳನ್ನು ಜೋಡಿಸುವುದು ಕಷ್ಟವಾದ್ದರಿಂದ ಮಾನ್ಯ ಕೋಣಂದೂರು ಲಿಂಗಪ್ಪನವರ ಕ್ಷಮೆ ಬೇಡಿ ನಾನು ಮಸೂದೆಯನ್ನು ಇಂಗ್ಲೀಷಿನಲ್ಲಿ ಮಂಡಿಸುವುದಕ್ಕೆ ಪ್ರಾರಂಭಮಾಡುತ್ತೇನೆ.

Madam Speaker, my friend Sri T. R. Shamanna has raised a very relevant objection as to where was the need for a University on Health Science. I may tell him after a good deal of thought and deliberation I have brought this measure before this Hon'ble House not for any vanity or anything of that sort but to see the medical education that we have to impart and prepare the future Doctors for the service of humanity and for the service of our State is well based on proper lines. It may appear that this new type of University does not appear any where in India. I may tell him that All India Institute of Medical Science, New Delhi, and also All India Medical Sciences, Chandhighar, are more or less of the same type and I have brought this Bill here more or less on the same pattern except with a difference. The difference is in those Universities they do grant the Degrees both M.B.B.S. and Post Graduate, but they do not have other systems of medicines which I have included. These Institutes are confined to Allopathy. I have included all the systems of medicine both Allopathy and various other systems which my Hon. Friends might have understood by having gone through the Bill by now. Therefore the need to use the word 'University' has arisen with a view to confer Degrees in different faculties. There is an Article in the Journal of Indian Medical Association on the Medical Education in the month of September 1972 where the then President of Indian Medical Association Dr. A.K.N. Sinha has contributed an Article called 'Changing Pattern in Medical Education'. He has highlighted the differences that are found in having the Medical faculty attached to the various other Universities. After examining all other points, he has mentioned at page 189 that Medical University-a Must for future. He has further said on the subject as follows:

"As I have said earlier, the number of Medical Colleges in each State has gone up considerably and these Medical Colleges are attached to different Universities in a State. The result is that even in a State the Standard of education and examination varies from College to College.

In order to bring some uniformity in the standard of Medical Education and Examinations, may I most humbly place before you the idea of having a Medical University in each of our States. This University will be an affiliating body to which all the Medical Colleges in a State will be affiliated and it shall have control over all affairs concerning the Medical Colleges and their attached hospitals. I am aware of the argument that a University is meant for interchange of ideas between different faculties. However, we are having agricultural and other technological Universities not only in our own country but abroad also. So, why not have a Medical University ? I have been on various University bodies in my State for some time and it is strange to see that in various bodies in the Universities people who have no idea about medical education or of medical Colleges, participating in debates on medical curriculum and appointment of teachers and their merits. The details of this medical University could be worked out and it will not mean any great financial burden on State's finances.

It is a pity that in our country there is no body of the Medical profession to control the post-graduate education. At present there are certain criteria laid down by the Medical Council of India, but the various Universities do not necessarily follow them and the result has been a sort of confusion throughout the country in post-graduate medical Education and its standards. The Royal Commission on Medical Education in Great Britain (1968) recommended that "a Central Body should be set to exercise general oversight of post-graduate medical education and training". I humbly suggest that the Government and the Medical Educationists should examine that......"

I do not want to tire you by giving you more details. The main purpose of having a University of Health Sciences, as you all agree, health is wealth for a nation. If we have to develop it on proper lines, we must have one University with all sciences under its roof and they must be guided by technically qualified people or people who know what the subject is. That is why I have mentioned the Vice-Chancellor must be one who belongs to those faculties- a medical faculty, not a man who is there on any other ground. Therefore I should tell my friends that this University will be a boon to the satisfaction of all concerned. Our Medical Council in Mysere State have appd. of it, the Indian Medical Councii has given its blessings and to whomsoéver we have approached, they have all said that this is a welcome measure worthy of emulation by all others. I want to despel the fears of my friends that we are going to establish this University not with a view to discourage others or to have additional finances. From the Financial Memorandom you can find that only Rs. 6 lakhs have been provided and all other expenditure is already there. What is now required is take over all the medical colleges and put them under one control. What has happened is, one Karnatak University says that 40 percent is sufficient for admission and 4½ years' course would do. The Mysore University has a different curriculum and a different standard. Likewise Bangalore University. It has become very difficult for inter-change of students from one college to other or from one University to another. All these difficulties are being experienced by our students today. Since this bill is proposed to be referred to the Joint Select Committee, I do not want to take much time of this Hon. House. It is there fore just sufficient for me to mention some of the salient points in this Bill.

In the Bill, you will see for the first time, the Indian system of medicine has been brought into its fold and all its branches including naturopathy and various other things. I was attracted towards it for the reason that in China, what they have done is- they have allopathy, but at the sametime Mr. Mao. has put in 90 percent of the indigeneous system of medicine into the curriculum in those Univer-

sities. Even in the advanced countries they have included naturopathy because science is universal for all the countries of the world. Now what they have done is that Scientists from Russia and America are going there (China) to learn what it is and they have 90 percent of the indigeneous system of medicine included in the curriculum. In India, hitherto we had not attached so much importance to our Indian system of medicine. There are certain species in our medicine which cannot be found in the allopathy. For instance, for jaundice (Arushana Kamale) the medicine that we have in Ayurveda, we have not got medicine anywhere in any system of medicine. But if we use it, I am sure, it is bound to have a good effect. We have to take whatever is best from other sytem. It is with that object in view, we have included the Indian system of medicine for which a separate Directorate has been formed.

We have now issued an advertisement to get one of the best qualified man by giving very good salary of Rs. 1,300–1,800.

What we have said is that the Indian system of medicine must be encouraged in our country and I may inform you what our Prime Minister has said in this behalf. She has said that it is necessary for us to advance the different system of Indian medicines because the modern medicine has not been able to reach 75 percent of our population in a vast coutry like India. Most of our doctors who are here are only confined to the Cities and 60 percent of our doctors are catering to the needs of the 25 percent of our population. Therefore we have thought of developing the Indian sytem of medicines on proper lines and on a scintific besis where proper training and education are given There would be different faculties and each faculty will have its own Board of Studies and other things. In this Bill, I hope my friends will agree with me, that I have not used the phrase 'they will have to remain during the pleasure of the Governmet' I have followed the old University standards. Now we have got a Vice-Chancellor who is all powerfull; the Pro-Chancellor is there only as a

figure-head. So far as the Vice-Chancellor is concerned, he is a man who must be wellversed in the knowledge of sciences; due representation has been given to the members of the Legislature and various other faculties. Of course, Government will have to maintain some control and that control is mentioned in clause 8 and various other clauses of the Bill. This University would be on the same pattern as other Universities where the fullest autonomy has been given for the Syndicate, Senate and the Academic Council. It is only those people who will have to control the curriculum and all other things.

So far as the finances are concerned, it may be seen from the financial memorandum attached to the Bill, this University perhaps will have the least expenditure. After this University is formed, I visualise that so many World Organisations like the WHO AND UNICEF might associate with us and provide all facilities when we establish this University. As it is, we have not been able to fully utilise their assistance because the Universities which have got the medical faculties are not interested in their development. That might be seen from the fact that although medical faculty is there in all the Universities, all these years not even a few original papers have been published by our staff for the reason that hitherto these doctors were only concerned with giving some medicine and seeing that they treat only the c rative aspect of it. Nobody has seriously thought of the research. Medical science is a growing subjct. The Indian system of medicine has been given very little attention .It is may earnest desire and whish that when the Univ ersity is established, it will pay very special attention for research and for the development of the science and the faculty in which that Professor or the teacher works.

It is with that object in view we have provided so many other faculties. I need not mention much about the financial memorandum because the expenditure is very little. The hon. members might say that all the other expenditure is there; we are paying it. What is now required is to transfer the staff of the medical colleges to the University and under one control.

There are 15,000 students and there are ten colleges, viz., Dental, Nursing and various other colleges and there are various faculties. We will have to develop the health side. We will have to train Health Inspectors and Sanitary Inspectors, each one integrated with the health of the people. Therefore, if there is only one University, it will serve them well, and they will have to take an overall picture of the health of the country. Not only that. Now on account of the overcrowding in cities we are having air pollution and water pollution. If most of us eat in the hotels, what the health point of it would be will have to be considered. For all these things, if there is a University and if we give proper training, it will be useful. It is with that object in view this Bill is brought and I hope there will be no controversy over it. I need not mention more details about this Bill, because it will have to come up before this House again after going to the Joint Select Committee. I hope I will have the fullest support of the hon. House for this Bill.

†ಶ್ರೀ ಟಿ. ಆರ್. ಶಾಮಣ್ಣ (ಕೋಟೆ).—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಈ ಬಿಲ್ಲಿನ ಬಗ್ಗೆ ಇದ್ದ ಅನೇಕ ಸಂದೇಹಗಳನ್ನು ನಿವಾರಣೆ ಮಾಡುವುದಕ್ಕೆ ವಿವರವಾಗಿ ಹೇಳಿದ್ದಾರೆ. ಇದು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹೋಗುವುದರಿಂದ ಇದರ ಮೇಲೆ ನಾನು ದೀರ್ಘವಾದ ಭಾಷಣ ಮಾಡಲಿಕ್ಕೆ ಹೋಗುವುದಿಲ್ಲ ಆದರೆ ಕೆಲವು ಅಂಶಗಳ ಬಗ್ಗೆ ಒಂದೆರಡು ಮಾತನ್ನು ಹೇಳುತ್ತೇನೆ. ಇದು ಅಗ್ರಿಕಲ್ಚರ್ ಯೂನಿವರ್ಸಿಟಿ ಬಿಲ್ ಹಾಗೆ ಕಾಂಟ್ರವರ್ಷಿಯಲ್ ಆಗದೆ ಇದ್ದುದಕ್ಕೋಸ್ಕರ ಮಾನ್ಯ ಮಂತ್ರಿಗಳನ್ನು ನಾನು ಅಭಿನಂದಿಸುತ್ತೇನೆ. ಮೊದಲನೆಯದಾಗಿ, ಈ ಬಿಲ್ಲನ್ನು ನಾವು ಪರಿಶೀಲನೆ ಮಾಡುವಾಗ ಖಾಸಗೀ ಕಾಲೇಜುಗಳಿಗೂ ಮತ್ತು ಸರ್ಕಾರಿ ಕಾಲೇಜುಗಳಿಗೂ ಫೀಸ್‌ನಲ್ಲಿರುವ ವ್ಯತ್ಯಾಸವನ್ನು ಆದಷ್ಟು ಕೂಡ ಇಲ್ಲದ ಹಾಗೆ ಏನು ಏನು ಏರ್ಪಾಟುಗಳು ಬೇಕೋ ಅವನ್ನು ಮಾಡಿಕೊಡಬೇಕು. ಎರಡನೆಯದಾಗಿ ಸರ್ಕಾರದವರು ಮೆಡಿಕಲ್ ಎಜುಕೇಶನ್ ಬಗ್ಗೆ ಬೇಕಾದಷ್ಟು ದುಡ್ಡನ್ನು ಖರ್ಚು ಮಾಡುತ್ತಿದ್ದಾರೆ. ಆದ್ದರಿಂದ ಡಾಕ್ಟರುಗಳನ್ನು ಕಂಪಲ್ಸರಿಯಾಗಿ ಐದು ವರ್ಷ ರೂರಲ್ ಏರಿಯಾಸ್‌ನಲ್ಲಿ ಸೇವೆ ಸಲ್ಲಿಸಬೇಕು ಎನ್ನುವುದರ ಬಗ್ಗೆ ನಿಯಮಾವಳಿಗಳನ್ನು ಮಾಡಿದರೆ ಉತ್ತಮ ಎಂದು ನನ್ನ ಅಭಿಪ್ರಾಯ. ಆಮೇಲೆ ರೀಸರ್ಚ್ ಬಗ್ಗೆ ಸಾಕಾದಷ್ಟು ಪ್ರಯತ್ನಪಟ್ಟಿಲ್ಲ. ರೀಸರ್ಚ್ ಬಗ್ಗೆ ಸಾಕಾದಷ್ಟು ಪ್ರಯತ್ನ ಪಟ್ಟು ಉತ್ತಮವಾದಂಥ ಮತ್ತು ಫಲಕಾರಿಯಾದಂಥ ಔಷಧಿಗಳನ್ನು ಕಂಡುಹಿಡಿಯುವುದರ ಬಗ್ಗೆ ಅನುಕರಣೆಯನ್ನು ಇಟ್ಟುಕೊಂಡಂತೆ ಇದರಲ್ಲಿ ಕಾಣಲಿಲ್ಲ. ಇದರ ಬಗ್ಗೆಯೂ ನಿಯಮಾವಳಿ

ಯನ್ನು ತೆಗೆದುಕೊಂಡು ಬರತಕ್ಕದ್ದು ಉತ್ತಮ. ಆಮೇಲೆ, ಡಾಕ್ಟರ್ಸಗಳಲ್ಲಿ ಸರ್ವೀಸ ಮೈಂಡ ಎನ್ನತಕ್ಕದ್ದು ಬರುವ ಹಾಗೆ, ಏನಾದರೂ ಒಂದು ತೀರ್ಮಾನ ತೆಗೆದು ಕೊಳ್ಳುವುದು ಉತ್ತಮ. ಇದು ಒರೀ ಹಣ ಸಂಪಾದನೆ ಮಾಡತಕ್ಕ ಕೆಲಸವಲ್ಲ. ನಾವು ಕೆಲಸ ಮಾಡುವುದು ಸೇವಾ ಮನೋಭಾವನೆಯಿಂದ ಎನ್ನುವುದು ಅವರ ಮನ ಸ್ಸಿನಲ್ಲಿ ಬರುವ ಹಾಗೆ ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವೇ ಎನ್ನುವದನ್ನು ಯೋಚನೆ ಮಾಡಬೇಕು.

ಆಮೇಲೆ ಯೂನಿವರ್ಸಿಟಿ ಕಮಿಷನ್‌ನಿಂದ ಇರತಕ್ಕ ಏನಾದರೂ ಹಣ ಬರು ತ್ತದೆಯೇ ಎನ್ನುವುದರ ಬಗ್ಗೆ ಇಲ್ಲಿ ಏನನ್ನೂ ಹೇಳಿಲ್ಲ. ಸರ್ಕಾರದಿಂದ ಏನಾದರೂ ಹಣ ಪಡೆಯುವುದಕ್ಕೆ ಅವಕಾಶ ಇದೆಯೇ ಎನ್ನುವುದರ ಬಗ್ಗೆ ತಾವು ವಿವರ ಕೊಡ ಬೇಕು ಎಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಮೆಡಿಕಲ್ ಕಾಲೇಜಿನಲ್ಲಿ ಸೆಲೆಕ್ಷನ್ ಬಗ್ಗೆ ಕೆಲವು ಮಾತುಗಳನ್ನು ನಾನು ಹೇಳಬೇಕಾಗಿದೆ. ಬ್ಯಾಕ್‌ವರ್ಡ ಕಮ್ಯೂನಿಟೀಸಗೆ ನೀವು ಬೇಕಾದಷ್ಟು ಉತ್ತೇಜನ ಕೊಡಿ, ನಾನು ಬೇಡ ಎಂದು ಹೇಳುವುದಿಲ್ಲ. ಯಾವ ಕಮ್ಯುನಿಟಿಯನ್ನು ತೆಗೆದುಕೊಂಡರೂ ಕೂಡ ಮೆರಿಟ್ ಮುಖಾಂತರ ತೆಗೆದುಕೊಳ್ಳಬೇಕು ಎನ್ನತಕ್ಕದ್ದಕ್ಕೆ ಸ್ವಲ್ಪ ಪ್ರಾಧಾನ್ಯತೆ ಕೊಡಬೇಕು ಎಂದು ನನ್ನ ಒಂದು ಸಲಹೆ. ನಮ್ಮ ದೇಶದಲ್ಲಿ ಅನೇಕರಿಗೆ, ಫಾರಿನ್ ಕಂಟ್ರಿಸಗೆ ಹೋಗಬೇಕು ಎನ್ನುವ ಹಂಬಲ ಬಂದಿದೆ. ಅದನ್ನು ತಪ್ಪಿಸಿ, ಸಾಧ್ಯವಾದಷ್ಟೂ ಕೂಡ ಫಾರಿನ್ ಕಂಟ್ರಿಸಿನಲ್ಲಿ ಸಿಕ್ಕ ತಕ್ಕ ಸ್ಪೆಷಲೈಸ್ಡ ಸ್ಟಡೀಸ ಏನೇನು ಇವೆಯೋ ಅವನ್ನು ನಮ್ಮಲ್ಲಿ ಕೊಡುವುದಕ್ಕೆ ಸಾಧ್ಯವೇ ಎನ್ನುವುದರ ಬಗ್ಗೆ ತಾವು ಯೋಚನೆ ಮಾಡಬೇಕು. ಆಮೇಲೆ ಮೆಡಿಕಲ್ ಕಾಲೇಜು ಜೊತೆಗೆ, ಡೆಂಟಲ ಕಾಲೇಜು, ಫಾರ್ಮಾ ಕಾಲೇಜು, ನರ್ಸಿಂಗ್ ಕಾಲೇಜು, ಆಯುರ್ವೇದಿಕ್ ಕಾಲೇಜು, ಮತ್ತು ಮೆಂಟಲ್ ಸೈನ್ಸ ಇನ್ಸಟ್ಯೂಟ್‌ಗಳನ್ನು ಸೇರಿಸಿರತಕ್ಕದ್ದು ಬಹಳ ಉತ್ತಮವಾದುದು. ಮತ್ತು ಈಗಿರುವಂತೆ, ಆಸ್ಪತ್ರೆಗಳನ್ನು ಸಿಟಿಗಳಲ್ಲಿ ಕಾನ್ಸಂಟ್ರೇಟ್ ಆಗದಹಾಗೆ, ಬೇರೆ ಕಡೆ ಆದಷ್ಟು ಡಿಸೆಂಟ್ರಲೈಸ ಆಗುವಂತೆ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎನ್ನ ತಕ್ಕ ಮಾತನ್ನು ಸಲಹಾ ರೂಪದಲ್ಲಿ ತಮಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಬಿಲ್ ಜಾಯಿಂಟ ಸೆಲೆಕ್ಟ ಕಮಿಟಿಗೆ ಹೋಗುವುದರಿಂದ, ಹೆಚ್ಚು ಭಾಷಣ ಮಾಡುವು ದಕ್ಕೆ ಇಷ್ಟಪಡುವುದಿಲ್ಲ. ರೋಗವನ್ನು ಬಂದಮೇಲೆ ವಾಸಿಮಾಡುವುದಕ್ಕಿಂತ, ರೋಗ ಬಾರದ ಹಾಗೆ ಹೆಲ್ತ ಕಂಡಿಷನ್ಸ ಅನ್ನು ಇಂಪ್ರೂವ್ ಮಾಡುವುದರ ಬಗ್ಗೆ ಏನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೋ ಎನ್ನುವುದಕ್ಕೆ ಒಂದು ಯೋಜನೆಯನ್ನು ಹಾಕಿಕೊಂಡರೆ ಉತ್ತಮ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಕೊನೆಯದಾಗಿ, ನಮಗೆ ಇದ್ದಂಥ ಅನೇಕ ಸಂದೇಹಗಳನ್ನು ತಾವು ನಿವಾರಣೆ ಮಾಡಿದ್ದೀರಿ. ಅದಕ್ಕೆ ತಮ್ಮನ್ನು ವಂದಿಸಿ, ತಮ್ಮ ಪ್ರಯತ್ನ ಸಫಲವಾಗಲೀ ಎಂದು ಹಾರೈಸಿ ನನ್ನ ಎರಡುಮಾತನ್ನು ಮುಗಿಸುತ್ತೇನೆ.

ಶ್ರೀ ಟಿ. ಎಂ. ಮಂಜುನಾಥ (ತಿಪಟೂರು) — ಮಾನ್ಯ ಅಧ್ಯಕ್ಷರೇ, ನಮ್ಮ

ಹಿರಿಯ ಮಂತ್ರಿಗಳಾದಂಥ ಸನ್ಮಾನ್ಯ ಸಿದ್ದವೀರಪ್ಪನವರು ಆರೋಗ್ಯ ವಿಜ್ಞಾನ ವಿಶ್ವ ವಿದ್ಯಾನಿಲಯ ಸ್ಥಾಪನೆ ಬಗ್ಗೆ ಒಂದು ಮಸೂದೆಯನ್ನು ತಂದಿರತಕ್ಕದ್ದು ನಮ್ಮ ದೇಶ ಇತಿಹಾಸದಲ್ಲಿಯೇ ಒಂದು ದಿಟ್ಟ ಹೆಜ್ಜೆ ಎಂದರೆ ತಪ್ಪಾಗಲಾರದು. ಅವರು ಆರೋಗ್ಯವೇ ಭಾಗ್ಯ ಎಂದು ಆರೋಗ್ಯದ ಬಗ್ಗೆ ಒಂದು ಹೆಚ್ಚಿನ ಪ್ರಗತಿಯ ಕಾರ್ಯಕ್ರಮವನ್ನು ನಾವು ಹಾಕಿಕೊಳ್ಳಬೇಕು. ಸರಿಯಾದಂಥ ವೈದ್ಯರನ್ನು ನಾವು ತಯಾರು ಮಾಡಬೇಕು, ಎನ್ನತಕ್ಕ ಉದ್ದೇಶವನ್ನು ಇಟ್ಟುಕೊಂಡು ಈ ಒಂದು ಮಸೂದೆಯನ್ನು ತಂದಿರತಕ್ಕದ್ದು ತುಂಬಾ ಸಂತೋಷದ ಸಂಗತಿ. ಅವರು ಸೂಕ್ಷ್ಮವಾಗಿ ಈ ವಿಧೇಯಕವನ್ನು ಏಕೆ ತಂದಿದ್ದೇವೆ ಎನ್ನತಕ್ಕ ಅಂಶವನ್ನು ಹೇಳಿದ್ದಾರೆ. ಅದೂ ಅಲ್ಲದೇ ಈ ವಿಧೇಯಕ ಜಾಯಿಂಟ್ ಸೆಲೆಕ್ಟ ಕಮಿಟಿಗೆ ಹೋಗತಕ್ಕ ಸಂದರ್ಭ ಇರುವುದರಿಂದ ನಾನು ಹೆಚ್ಚು ಮಾತನಾಡಲಾರದೆ, ಒಂದೆರಡು ವಿಚಾರಗಳನ್ನು ಮಾತ್ರ ಅವರ ಗಮನಕ್ಕೆ ತರುತ್ತೇನೆ.

ಸನ್ಮಾನ್ಯ ಮಂತ್ರಿಗಳು. ಅಲೋಪತಿಕ್, ಔಷಧಿಗಿಂತ ಆಯುರ್ವೇದಿಕ್ ಔಷಧಿಯ ಮೇಲೆ, ನೇಚರ್ ಕ್ಯೂರ್ ಮೇಲೆ ನಂಬಿಕೆ ಇರತಕ್ಕವರು. ನಮ್ಮ ದೇಶದಲ್ಲಿ ಆಯುರ್ವೇದಿಕ ಕಾಲೇಜುಗಳು ಏಳು ಇವೆ. ಈ ೭ ಕಾಲೇಜುಗಳಿಗೆ ಒಂದು ಆರೋಗ್ಯ ವಿಶ್ವವಿದ್ಯಾನಿಲಯವನ್ನು ಏಕೆ ಮಾಡಬಾರದು ಎನ್ನುವ ಪ್ರಶ್ನೆಯನ್ನು ನಾನು ಮಂತ್ರಿಗಳಿಗೆ ಕೇಳುತ್ತೇನೆ. ಈ ಮಸೂದೆಯಲ್ಲಿ ವಿದ್ಯಾರ್ಥಿಗಳನ್ನು ಒಂದು ಕಾಲೇಜಿನಿಂದ ಮತ್ತೊಂದು ಕಾಲೇಜಿಗೆ ವರ್ಗ ಮಾಡಬೇಕಾದರೆ, ಒಂದು ಅವಕಾಶವಿದೆ. ಒಂದೇ ಅಡ್ಮಿನಿಸ್ಟ್ರೇಷನ್‌ಲ್ಲಿ ಇವು ಬರುವುದರಿಂದ ಅನುಕೂಲವಾಗುತ್ತದೆ ಎಂದು ಹೇಳಿದ್ದಾರೆ. ಬಹಳ ಸಂತೋಷ ಇದೇ ಸಂದರ್ಭದಲ್ಲಿ, ಅಲ್ಲಿ ಕೆಲಸ ಮಾಡತಕ್ಕ ಅಧಿಕಾರಿಗಳು ಏನು ಇದ್ದಾರೆ. ಕೆಲಸಗಾರರು ಏನು ಇದ್ದಾರೆ, ಅವರ ವರ್ಗಾವಣೆ ಮಾಡತಕ್ಕ ಸಂದರ್ಭದಲ್ಲಿ ಅವರ ಪೇ ಸ್ಕೇಲ್ಸ್ ಒಂದು ಕಾಲೇಜಿನಿಂದ ಮತ್ತೊಂದು ಕಾಲೇಜಿಗೆ ವ್ಯತ್ಯಾಸ ಇರಬಹುದು, ಸೀನಿಯರ್ ಪ್ರೊಫೆಸರ್, ಪ್ರೊಫೆಸರ್ಸ್, ಕೆಳಗಿನ ನೌಕರರಿಗೆ ಪೇ ವ್ಯತ್ಯಾಸ ಇರಬಹುದು, ಇಂಥ ವ್ಯತ್ಯಾಸ ಇದ್ದಾಗ ಇದನ್ನು ಯಾವ ರೀತಿಯಲ್ಲಿ ಬಗೆಹರಿಸುತ್ತೀರಿ ಎನ್ನುವುದನ್ನು ತಾವುಗಮನದಲ್ಲಿಟ್ಟುಕೊಳ್ಳಬೇಕು.

ಇನ್ನೊಂದು ವಿಚಾರ ಏನೆಂದರೆ ಇದಕ್ಕೆ ಅಷ್ಟೊಂದು ಆರ್ಥಿಕ ಸಹಾಯವೇನೂ ಬೇಕಾಗಿಲ್ಲ. ಈ ಮಸೂದೆಯಲ್ಲಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾನಿಲಯದ ಸ್ಥಾಪನೆಗಾಗಿ ೫-೬ ಲಕ್ಷ ರೂಪಾಯಿಗಳನ್ನು ಕೇಳಿದ್ದಾರೆ. ಇದು ಇನ್ನೂ ಹೆಚ್ಚಾದರೂ ಪರವಾಯಿಲ್ಲ. ಆಯುರ್ವೇದ ಕಾಲೇಜುಗಳಿಗೆ ಸಂಬಂಧಪಟ್ಟಹಾಗೆ ಒಂದು ವಿಶ್ವವಿದ್ಯಾನಿಲಯವನ್ನು ಏತಕ್ಕೆ ಮಾಡಬಾರದು ಎಂದು ಹೇಳಿ ಅಧ್ಯಕ್ಷರು ಮಾತನಾಡುವುದಕ್ಕೆ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ವಿ. ಕಕ್ಕಿಲಾಯ (ಬಂಟ್ವಾಳ)—ಮಾನ್ಯ ಅಧ್ಯಕ್ಷರೇ, ಮಾನ್ಯ ಆರೋಗ್ಯಶಾಖೆಯ ಮಂತ್ರಿಗಳು ಈ ಸಭೆಯ ಮುಂದೆ ಮಂಡಿಸಿರತಕ್ಕ ಆರೋಗ್ಯ

ವಿಜ್ಞಾನ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡುವುದಕ್ಕೆ ಸಂಬಂಧಪಟ್ಟ ಮಸೂದೆಯನ್ನು ಸ್ವಾಗತಿಸುತ್ತಾ ನಾನು ಒಂದೆರಡು ವಿಚಾರಗಳನ್ನು ಮಾನ್ಯ ಸಚಿವರ ಗಮನಕ್ಕೆ ತರಬೇಕೆಂದಿದ್ದೇನೆ. ನಮ್ಮ ರಾಜ್ಯದಲ್ಲಿ ಒಂದು ಆರೋಗ್ಯ ವಿಜ್ಞಾನ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವಂಥಾದ್ದು ಬಹಳ ಸೂಕ್ತವಾದ ಒಂದು ದಿಟ್ಟ ಹೆಜ್ಜೆಯಾಗಿದೆ. ಇದು ಇಡೀ ದೇಶಕ್ಕೇ ಎಲ್ಲಾ ರಾಜ್ಯಗಳಿಗೂ ಒಂದು ಮಾದರಿಯಾದಂತಾಗುತ್ತದೆ. ನಮ್ಮ ಆರೋಗ್ಯ ಸಚಿವರು ಇಂಥಾ ಒಂದು ಮಸೂದೆಯನ್ನು ತಂದದ್ದಕ್ಕಾಗಿ ನಾನು ಅವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಈ ಮಸೂದೆಯಲ್ಲಿ ಅವರು ಹೇಳಿದ ಹಾಗೆ ಸರ್ಕಾರ ಎಷ್ಟರಮಟ್ಟಿಗೆ ವಿಶ್ವವಿದ್ಯಾನಿಲಯವನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳಬೇಕೋ ಅಷ್ಟು ಮಾತ್ರ ಅಧಿಕಾರವನ್ನು ಇಟ್ಟುಕೊಂಡು ಆರೋಗ್ಯ ಮತ್ತು ವೈದ್ಯಕೀಯ ವಿದ್ಯಾಭ್ಯಾಸಕ್ಕೆ ವಿನಿಯೋಗಿಸಲು ಬೇಕಾದಂತಹ ಎಲ್ಲ ಅಧಿಕಾರಗಳನ್ನು ಈ ವಿಶ್ವವಿದ್ಯಾನಿಲಯಕ್ಕೆ ಕೊಟ್ಟಿರುವುದು ಬಹಳ ಸೂಕ್ತ. ಮತ್ತು ವೈಸ್-ಛಾನ್ಸಲರ್, ಸಿಂಡಿಕೇಟ್, ಸೆನೆಟ್ ತಮ್ಮ ಸ್ವಂತ ಅಧಿಕಾರಗಳಿಂದ ವಿಶ್ವವಿದ್ಯಾನಿಲಯದ ಆಡಳಿತವನ್ನು ನಡೆಸಿಕೊಂಡು ಹೋಗುವುದಕ್ಕೆ ಅವಕಾಶ ನೀಡಿರುವುದಕ್ಕೆ ನಾವು ಮಾನ್ಯ ಮಂತ್ರಿಗಳನ್ನು ಅಭಿನಂದಿಸಬೇಕಾಗಿದೆ. ಇದೇ ಒಂದು ಮಾದರಿಯನ್ನು ಕೃಷಿ ವಿಶ್ವವಿದ್ಯಾನಿಲಯ ಮತ್ತು ಇತರ ವಿಶ್ವವಿದ್ಯಾನಿಲಯಗಳ ನಿಯಮಗಳಲ್ಲಿ ಕೂಡ ಅಳವಡಿಸಿಕೊಂಡರೆ ಬಹಳ ಸೂಕ್ತವಾಗುತ್ತದೆ ಎಂದು ನನಗೆ ಅನ್ನಿಸುತ್ತದೆ. ಆರೋಗ್ಯ ಸಚಿವರು ತಂದಿರತಕ್ಕ ಸೂಚನೆಯನ್ನು ಸರ್ಕಾರದ ಧೋರಣೆಯಾಗಿ ಅಂಗೀಕರಿಸಿಕೊಂಡು ವಿಶ್ವವಿದ್ಯಾನಿಲಯಗಳಿಗೆ ಆದಷ್ಟು ಸ್ವಾಯತ್ತತೆಯನ್ನು ಕೊಡುವಂತಹ ಧೋರಣೆಯನ್ನು ಸರ್ಕಾರದವರು ಅನುಸರಿಸುವುದಾದರೆ ಬಹಳ ಒಳ್ಳೆಯದಾಗುತ್ತದೆ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಈ ಮಸೂದೆಯಲ್ಲಿ ಹೆಲ್ತ್ ಸೈನ್ಸ್ ಎನ್ನುವುದನ್ನು ವ್ಯಾಖ್ಯಾನ ಮಾಡಿದ್ದಾರೆ. ಇದರ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ಇಂಡಿಯನ್ ಸಿಸ್ಟಂ ಆಫ್ ಮೆಡಿಸಿನ್ ಅನ್ನು ಇದರಲ್ಲಿ ಸೇರಿಸಿದ್ದಾರೆ ಇದು ಬಹಳ ಒಳ್ಳೆಯದು. ಇಂಡಿಯನ್ ಸಿಸ್ಟಮ್ ಆಫ್ ಮೆಡಿಸಿನ್, ಆಯುರ್ವೇದ, ಯೂನಾನಿ, ಸಿದ್ಧ ಮುಂತಾದ ಎಲ್ಲಾ ಸಿಸ್ಟಂಗಳಿಗೂ ನಮ್ಮ ವಿಶ್ವವಿದ್ಯಾನಿಲಯದಲ್ಲಿ ಪ್ರೋತ್ಸಾಹ ಕೊಟ್ಟು ಅವುಗಳ ಬೆಳವಣಿಗೆಯನ್ನು ಮಾಡುವುದು ಸೂಕ್ತವಾಗಿದೆ. ಆ ರೀತಿ ಮಾಡುವುದಾದರೆ ಸಾಮಾನ್ಯ ಜನತೆಗೆ ಒಂದೊಂದು ಕ್ರಮದಲ್ಲಿಯೂ ಕೂಡ ಹೆಚ್ಚು ಡಾಕ್ಟರರನ್ನು ಒದಗಿಸುವುದಕ್ಕೆ ಅನುಕೂಲವಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಇದರ ಬಗ್ಗೆ ನಾನು ಒಂದು ಎಚ್ಚರಿಕೆಯ ಮಾತನ್ನು ಸರ್ಕಾರಕ್ಕೆ ಹೇಳುತ್ತೇನೆ. ಚರಕ, ಶುಶೃತ ಮುಂತಾದ ಆಯುರ್ವೇದ ಮೂಲ ಗ್ರಂಥಗಳಲ್ಲಿ ಅನಾಟಮಿ ಬಗ್ಗೆ ಏನು ಹೇಳುತ್ತಾರೆ? ಶರೀರ ರಚನೆಯ ಬಗ್ಗೆ ಏನು ಹೇಳುತ್ತಾರೆ? ಜೀವಾಣುಗಳು ಮತ್ತು ಅವುಗಳ ಪ್ರತಿಕ್ರಿಯೆಗಳ ಬಗ್ಗೆ ಏನು ಹೇಳುತ್ತಾರೆ? ಈ ಗ್ರಂಥಗಳನ್ನು ಬರೆದಂತಹ ಕಾಲದಲ್ಲಿ ವಿಜ್ಞಾನ ಇವೊತ್ತು ಬೆಳೆದಿರುವ ಮಟ್ಟಕ್ಕೆ ಬೆಳೆದಿರಲಿಲ್ಲ. ಆ ಗ್ರಂಥಗಳನ್ನು ಬರೆದಂತಹ ಮೇಧಾವಿಗಳು, ಆಗ ವಿಜ್ಞಾನ ಎಷ್ಟರಮಟ್ಟಿಗೆ ಬೆಳೆ

ದಿತ್ತೋ ಅದೆಲ್ಲವನ್ನು ಅಳವಡಿಸಿಕೊಂಡು ಪುಸ್ತಕಗಳನ್ನು ಬರೆದು ನಮ್ಮ ಜನತೆಗೆ ಉಪಕಾರ ಮಾಡಿದ್ದಾರೆ. ಆದ್ದರಿಂದ ಆ ಒಂದು ಪರಂಪರೆಯನ್ನು ಬಿಟ್ಟು ಕೊಡ ಬಾರದು. ಆದರೆ ಅದಷ್ಟೇ ಸಾಲದು. ಅದನ್ನು ಬೆಳೆಸಬೇಕು. ಅದರ ಇತಿಮಿತಿ ಗಳನ್ನು ಅರಿತುಕೊಳ್ಳಬೇಕು ಎಂದು ನಾನು ಹೇಳುತ್ತೇನೆ. ಅಸ್ಟ್ರಾಲಜಿಯಲ್ಲಿ ವರಾಹ ಮಿಹಿರ ಭಾಸ್ಕರ ಮುಂತಾದವರು ಇಡೀ ಪ್ರಪಂಚದಲ್ಲೇ ಹೆಸರುವಾಸಿಯಾಗಿದ್ದರು. ಅವರು ಲೋಕಕ್ಕೆ ಮಾರ್ಗದರ್ಶನ ಮಾಡತಕ್ಕ ಅನೇಕ ವಿಚಾರಗಳನ್ನು ಜನತೆಯ ಮುಂದೆ ಇಟ್ಟಿದ್ದಾರೆ. ಆದರೆ ಮತ್ತೆ ಅಸ್ಟ್ರನಮಿ, ಎಸ್ಟ್ರಾಲಜಿಯಾಯಿತು ಹಸ್ತ ಸಾಮುದ್ರಿಕ, ಜೋತಿಷ್ಯ, ಕಣಿ ಮುಂತಾದುವು ಆಗಿ ಬದಲಾಯಿತು. ಆದ್ದರಿಂದ ನಮ್ಮ ಪರಂಪರೆಯ ಮಹತ್ವ ಹಾಳಾಗದ ರೀತಿಯಲ್ಲಿ ನೋಡಿಕೊಳ್ಳುವಾಗಲೇ ಅಷ್ಟಕ್ಕೆ ನಿಂತು ಅಂಧಾನುಕರಣೆಗೆ ಅವಕಾಶ ನೀಡಬಾರದು ಅದನ್ನು ಬೆಳೆಸಬೇಕು. ಆಧು ನಿಕ ಜ್ಞಾನಕ್ಕೆ ಅಳವಡಿಸಬೇಕು. ಇಂಡಿಯನ್ ಮೆಡಿಸಿನ್‌ಗೆ ಸಂಬಂಧಪಟ್ಟ ಹಾಗೆ ವಿಶ್ವವಿದ್ಯಾನಿಲಯದಲ್ಲಿ ಸಂಶೋಧನೆ ನಡೆಸುವುದಕ್ಕೆ ಬೇಕಾದಂತಹ ತರಬೇತಿಯನ್ನು ಕೊಡಬೇಕು. ಇಂಡಿಯನ್ ಮೆಡಿಸಿನ್ ಸಿಸ್ಟಂ ಕಲಿಯುವಂತಹ ವಿದ್ಯಾರ್ಥಿಗಳಿಗೆ ಆರಂಭದ ಮೂರು ವರ್ಷಗಳಾದರೂ ಕೂಡ ಬಯಾಲಜಿ, ಫಿಜಿಯಾಲಜಿ ಮತ್ತು ಅನಾಟಮಿ ಇತ್ಯಾದಿ ವಿಷಯಗಳನ್ನು ಹೇಳಿಕೊಡುವಂತಹ ವ್ಯವಸ್ಥೆಯಾಗಬೇಕು. ಅದರ ಜೊತೆಗೆ ಈ ವಿದ್ಯಾರ್ಥಿಗಳಿಗೆ ಅಲೋಪತಿಕ್ ಸಿಸ್ಟಂ ಆಫ್ ಮೆಡಿಸಿನ್ ಕೂಡ ಕಲಿಸಿಕೊಡುವಂತಹ ಅವಶ್ಯಕತೆ ಇದೆ. ಈ ಒಂದು ಬುನಾದಿ ಇಲ್ಲದೆ ಇಂಡಿಯನ್ ಸಿಸ್ಟಂ ಆಫ್ ಮೆಡಿಸಿನ್ ಉಪಯೋಗಿಸಿದರೆ ಅದರಿಂದ ಹೆಚ್ಚಿನ ಅನಾಹುತವಾಗ ಬಹುದು ಎಂದು ನಾನು ಹೇಳುತ್ತೇನೆ.

ಡಿಫಿನಿಷನ್‌ನಲ್ಲಿ ಇನ್ನೊಂದು ಅಂಶವನ್ನು ಸೇರಿಸಬೇಕು. ಅದೇನಂದರೆ ನಮ್ಮಲ್ಲಿ ಕೆಲವು ವೆಟರನರಿ ಕಾಲೇಜುಗಳು ಇವೆ. ಇವತ್ತು ನಮ್ಮ ಮನುಷ್ಯರಿಗೆ ಎಷ್ಟರಮಟ್ಟಿನ ಆರೋಗ್ಯ ಸಂರಕ್ಷಣೆ ಮಾಡುತ್ತೇವೆಯೋ ಅಷ್ಟೇ ಮಟ್ಟಿಗೆ ಪಶುಗಳ ಆರೋಗ್ಯಸಂರಕ್ಷಣೆ ಮಾಡಬೇಕು. ಮತ್ತು ಅದಕ್ಕೆ ಬೇಕಾದ ವೈದ್ಯಕೀಯ ಸವ ಲತ್ತುಗಳನ್ನು ಒದಗಿಸುವುದು ಬಹಳ ಮುಖ್ಯವಾದುದು. ಮತ್ತು ವೆಟರ್‌ನರಿ ಕಾಲೇಜನ್ನು ಕೂಡ ಕೃಷಿ ವಿಶ್ವವಿದ್ಯಾನಿಲಯದ ಅಧಿಕಾರ ವಾಪ್ತಿಯಿಂದ ತಪ್ಪಿಸಿ ಅದನ್ನು ಕೂಡ ಈ ವಿಶ್ವವಿದ್ಯಾನಿಲಯದ ಅಧಿಕಾರ ವ್ಯಾಪ್ತಿಯಲ್ಲಿ ತೆಗೆದುಕೊಂಡು ಬಂದರೆ ಅನುಕೂಲವಾಗುತ್ತದೆ. ನಮ್ಮ ೭೫ ಪರ್ಸೆಂಟ್ ಜನಗಳಿಗೆ ಅನುಕೂಲ ಆಗಬೇಕಾಗಿದ್ದರೆ, ಸಹಾಯವಾಗಬೇಕಾಗಿದ್ದರೆ ಈ ವೈದ್ಯಕೀಯ ವಿದ್ಯಾಭ್ಯಾಸ ವಿದ್ಯಾರ್ಥಿಗಳಿಗೆ ಕಡಿಮೆ ಖರ್ಚಿನಲ್ಲಿ ಆಗುವುದಕ್ಕೆ ಬೇಕಾದಂತಹ ಅನುಕೂಲತೆಗಳನ್ನು ಕಲ್ಪಿಸಬೇಕು. ಇಲ್ಲದೇ ಹೋದರೆ ವಿದ್ಯಾರ್ಥಿಗಳು ೩೫–೪೦ ಸಾವಿರ ಕ್ಯಾಪಿಟೇಷನ್ ಫೀಜ್ ಕೊಟ್ಟು ಅವರು ಪರೀಕ್ಷೆಯನ್ನು ಪಾಸು ಮಾಡಿದ ಮೇಲೆ ಅವರನ್ನು ಹಳ್ಳಿಗೆ ಹೋಗಿ ಎಂದರೆ ಅವರು ಹಳ್ಳಿಗೆ ಹೋಗುವುದಿಲ್ಲ. ಯಾವ ಡಾಕ್ಟರೂ ಹಳ್ಳಿಗೆ

ಹೋಗುವುದಕ್ಕೆ ಇಷ್ಟಪಡವುದಿಲ್ಲ. ವೈದ್ಯಕೀಯ ಕಾಲೇಜಿನಲ್ಲಿ ವಿದ್ಯಾರ್ಥಿಯ ಸಾಮರ್ಥ್ಯ ಮತ್ತು ನೈಪುಣ್ಯತೆಯನ್ನು ನೋಡಿಕೊಂಡು ಅವನಿಗೆ ಪ್ರವೇಶವನ್ನು ಕೊಡಬೇಕು. ಹಣದ ಪ್ರಭಾವದಿಂದ ಪ್ರವೇಶವನ್ನು ಪಡೆಯುವುದಕ್ಕೆ ಅವಕಾಶ ವನ್ನು ಕೊಡಬಾರದು. ಹೆಚ್ಚು ಹಣ ಖರ್ಚು ಮಾಡಿ ಡಾಕ್ಟರ್ ಪರೀಕ್ಷೆಯನ್ನು ಪಾಸು ಮಾಡಿದವರನ್ನು ಹಳ್ಳಿಗೆ ಹೋಗಿ ಎಂದರೆ ಅವರು ಹೋಗುವುದಿಲ್ಲ. ಆದ್ದ ರಿಂದ ವೈದಕೀಯ ಕಾಲೇಜುಗಳಲ್ಲಿ ಪ್ರವೇಶವನ್ನು ಕೊಡಬೇಕಾದರೆ ವಿದ್ಯಾರ್ಥಿಗಳ ಸಾಮರ್ಥ್ಯ ಮತ್ತು ನೈಪುಣ್ಯದ ಮೇಲೆ ಸೀಟು ಕೊಡುವಂತಾಗಬೇಕು. ಕಡಿಮೆ ವೆಚ್ಚದಲ್ಲಿ ವೈದ್ಯಕೀಯ ವಿದ್ಯಾಭ್ಯಾಸ ದೊರೆಯುವಂತೆ ವ್ಯವಸ್ಥೆ ಮಾಡಬೇಕು. ಆ ರೀತಿ ಕಡಿಮೆ ವೆಚ್ಚದಲ್ಲಿ ವಿದ್ಯಾಭ್ಯಾಸವನ್ನು ಪಡೆಯುವುದಕ್ಕೆ ವಿಶ್ವವಿದ್ಯಾನಿಲಯ ದವರು ಮಾಡಬೇಕು. ಅದಕ್ಕೆ ಬೇಕಾದ ನಿಯಮಗಳನ್ನು ಅಂಗೀಕರಿಸುವ. ಹಾಗೆ ಮಾಡಬೇಕು. ಇಷ್ಟು ಹೇಳಿ ಈ ಮಸೂದೆಯನ್ನು ಮಾನ್ಯ ಮಂತ್ರಿಗಳು ಈ ಸಭೆ ಯಲ್ಲಿ ತಂದದ್ದಕ್ಕಾಗಿ ಅವರನ್ನು ಮತ್ತೊಂದು ಸಾರಿ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).— ಮಾನ್ಯ ಅಧ್ಯಕ್ಷರೇ ಸನ್ಮಾನ್ಯ ಆರೋಗ್ಯ ಸಚಿವರು ಈ ಸದನದಲ್ಲಿ ಏನು ಆರೋಗ್ಯ ವಿಜ್ಞಾನದ ವಿಶ್ವ ವಿದ್ಯಾನಿಲಯಕ್ಕೆ ಸಂಬಂಧಿಸಿದ ವಿಧೇಯಕವನ್ನು ತಂದಿದ್ದಾರೆ ಅದಕ್ಕೆ ಅವರನ್ನು ಅಭಿನಂದಿಸಿ ಸಂಕ್ಷಿಪ್ತವಾಗಿ ಎರಡು ಮಾತುಗಳನ್ನು ನಾನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಈ ಮಸೂದೆಯು ಸಂಯುಕ್ತ ಪರಿಶೀಲನಾ ಸಮಿತಿಗೆ ಹೋಗುವ ಕಾರಣ ಈ ಬಗ್ಗೆ ಯಾವುದನ್ನೂ ನಾನು ವಿವರವಾಗಿ ಹೇಳುವುದಕ್ಕೆ ಹೊಗುವುದಿಲ್ಲ. ಮೂಲಭೂತವಾಗಿ ಎರಡು ಸಂಗತಿಗಳನ್ನು ತಮ್ಮ ಗಮನಕ್ಕೆ ನಾನು ತರಬೇಕೆಂದಿ ದ್ದೇನೆ. ಈ ಆರೋಗ್ಯ ವಿಜ್ಞಾನ ವಿಶ್ವವಿದ್ಯಾನಿಲಯ ಎನ್ನುವುದು ಬಹುಶಃ ನನಗೆ ತಿಳಿದಂತೆ ಈ ಭೂಲೋಕದಲ್ಲಿ ಎಲ್ಲೂ ಇಲ್ಲ. ಈ ಭೂಲೋಕದಲ್ಲಿ ಇಲ್ಲದೇ ಇರು ವಂತಹ, ವಿಶ್ವವಿದ್ಯಾನಿಲಯವನ್ನು ಹೊಸದಾಗಿ ಸೃಷ್ಟಿ ಮಾಡತಕ್ಕ ವಿಶ್ವಾಮಿತ್ರನಂತಿ ರುವ ಶ್ರೀಮಾನ್ ಸಿದ್ದವೀರಪ್ಪನವರನ್ನು ನಾನು ಹೃತ್ಪೂರ್ವಕವಾಗಿ ಅಭಿನಂಸುತ್ತೇನೆ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುತ್ತೇನೆ. ಇದರಲ್ಲಿ ಒಂದೆರಡು ಅಪಾಯದ ಸೂಚನೆಗಳಿವೆ. ಆರನೇ ಕ್ಲಾಸ್‌ನಲ್ಲಿ ಯೂನಿವರ್ಸಿಟಿ ಓಪನ್ ಟು ಆಲ್ ಎಂಬ ವಿಚಾರದಲ್ಲಿ ಹೇಳಿದ್ದಾರೆ. ಈ ರೀತಿ ಹೇಳಿದ ಮೇಲೆ ಮುಗಿಯಿತು; ಎಲ್ಲರಿಗೂ ತೆರೆಯಲ್ಪಟ್ಟ ಸಂಸ್ಥೆಗಳು ಎಂದು ಅರ್ಥ ಬರುತ್ತದೆ. ಇದರಿಂದ ಮುಂದೆ ನಮ್ಮ ಕರ್ನಾಟಕ ರಾಜ್ಯದ ಭವಿಷ್ಯ ಏನಾಗುತ್ತದೆ ಎಂಬುದನ್ನು ಊಹೆ ಮಾಡುವುದಕ್ಕೆ ಸಾಧ್ಯವಿದೆ. ಓಪನ್ ಟು ಆಲ್ ಎಂದು ಹೇಳಿರುವ ಕಡೆ ನಮ್ಮ ಕರ್ನಾಟಕದವರಿಗೆ ಇಷ್ಟು ಪರ್ಸೆಂಟ್ ಕೊಡುತ್ತೇವೆಂಬುದನ್ನಾದರೂ ಹೇಳಬೇಕಾಗಿತ್ತು. ಏಕೆಂದರೆ ಇಂದು ನಮ್ಮ ಮೆಡಿಕಲ್ ಕಲೇಜುಗಳ ಅಡ್ಮಿಷನ್ ಬಗ್ಗೆ ಹೇಳುದಾದರೆ ....

ಶ್ರೀ ಎಚ್. ಸಿದ್ದವೀರಪ್ಪ.—ತಾವು ಹೇಳುತ್ತಿರುವುದು ಅಡ್ಮಿಷನ್‌ಗೆ ಸಂಬಂಧ

ಪಡುವುದಿಲ್ಲ. ಅದು ಮುಂದೆ ಬರುತ್ತದೆ. ಇಂನೇ ಕ್ಲಾಸ್‌ನಲ್ಲಿರುವ ಆರ್ಡಿನೆನ್ಸಸ್, ಸ್ಟ್ಯಾಚ್ಯೂಟ್ಸ್‌ರೂಲ್ಸ್ ಇದರೊಳಗೆ ತಾವು ಹೇಳುವುದು ಬರುತ್ತದೆ. ಆದ್ದರಿಂದ ತಾವು ಅದನ್ನು ಸ್ವಲ್ಪ ನೋಡಬೇಕು.

ಶ್ರೀ ಕೋಣಂದೂರು ಲಿಂಗಪ್ಪ.—ತಾವೇನೋ ಇದನ್ನು ಒಂದು ದೊಡ್ಡ ದೃಷ್ಟಿಯಿಂದ ತಂದಿದ್ದೀರಿ. ಆದರೆ ಬರಬರುತ್ತಾ ಏನಾಗುತ್ತದೆಂದರೆ, ಈ ಮೆಡಿಕಲ್ ಕಾಲೇಜುಗಳಲ್ಲಿ ಪೂರ್ತಿಯಾಗಿ ಪರಕೀಯರೇ ತುಂಬಿ ಹೋಗಿ ಬಿಡುತ್ತಾರೆ. ಆರ್ಥಿಕ ವಾಗಿ ಯಾರು ಮುಂದೆ ಇರುತ್ತಾರೋ ಅಂತಹವರಿಗೆ ಮಾತ್ರ ಈ ಸೀಟುಗಳು ಲಭ್ಯವಾಗುತ್ತದೆ. ಓಪನ್ ಟು ಆಲ್ ಎಂದು ಹೇಳಿರುವುದರಿಂದ ಈಗ ಮಣಿಪಾಲ್ ಕಾಲೇಜಿನಲ್ಲಿ ಏನಾಗಿದೆ ಎಂಬುದನ್ನು ನಾವು ನೋಡಬಹುದಾಗಿದೆ- ಅಲ್ಲಿ ಸಿಂಗಪುರ್, ಸಿಲೋನ್ ಮುಂತಾದ ಹೊರ ದೇಶದವರೇ ತುಂಬಿ ಹೋಗಿದ್ದಾರೆ. ಈ ರೀತಿ ಯಾದರೆ ಇನ್ನು ನಮ್ಮವರಿಗೆ ಎಲ್ಲಿ ಸೀಟು ಸಿಗುತ್ತದೆ. ಇಂತಹ ಅಪಾಯ ನಮ್ಮ ಕರ್ನಾಟಕ ರಾಜ್ಯದವರಿಗೆ ಆಗುವುದಕ್ಕೆ ತಾವು ಅವಕಾಶ ಕೊಡಬಾರದು.

ಶ್ರೀ ಎಚ್. ಸಿದ್ದವೀರಪ್ಪ.—ತಾವು ಇಂ ಕ್ಲಾಸ್‌ನ್ನು ನೋಡಿ. ಆರ್ಡಿ ನೆನ ಸ್‌ನಲ್ಲಿ ಅದಕ್ಕೆ ಪ್ರೊವೈಡ್ ಮಾಡಲಾಗುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—ಮತ್ತು ಉಪಕುಲಪತಿಗಳನ್ನು ನೇಮಕ ಮಾಡುವ ವಿಚಾರದಲ್ಲಿಯೂ ಸಹ ಅಖಿಲ ಭಾರತ ಮಟ್ಟದಲ್ಲಿ ಪ್ರಕಟಣೆ ಮಾಡಿದ್ದೀರಿ. ಅಂತಹ ವ್ಯಕ್ತಿಗಳು ನಮ್ಮ ಕರ್ನಾಟಕ ರಾಜ್ಯದಲ್ಲಿ ಯಾರೂ ಸಿಗುವುದಿಲ್ಲವೇ ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ.—ಅದನ್ನು ಡೈರೆಕ್ಟರ್ ಆಫ್ ಇಂಡಿಯನ್ ಮೆಡಿಸನ್ ಬಗ್ಗೆ ಹೇಳಿರುವುದು. ವೈಸ್-ಛಾನ್ಸಲರ್ ಬಗ್ಗೆಯಲ್ಲ. ಹೊಸದಾಗಿ ನ್ಯೂ-ಡೈರೆಕ್ಟರನ್ನು ನೇಮಕ ಮಾಡಬೇಕಾಗುತ್ತದೆ. ಅದಕ್ಕೆ ಸರಿಯಾದ ಕಾಂಪಿ ಟೆಂಟ್ ಪರ್ಸನ್ ಬೇಕಾಗುತ್ತದೆ ಈಗ ಹಿಂದುಸ್ಥಾನದಲ್ಲಿ ಎರಡು ವಿಶ್ವವಿದ್ಯಾ ನಿಲಯಗಳು ಮಾತ್ರ ಇವೆ. ಒಂದು ಗುಜರಾತಿನ ಜಾಮ್ ನಗರದಲ್ಲಿದೆ. ಮತ್ತೊಂದು ಕಾಶಿಯದಲ್ಲಿದೆ. ಇಂಡಿಯನ್ ಸಿಸ್ಟಮ್ ಆಫ್ ಮೆಡಿಸನ್‌ನಲ್ಲಿ ಸರಿ ಯಾದ ಟ್ರೈನಿಂಗ್ ಸಿಗುತ್ತಿರುವುದು ಈ ಎರಡು ಕಡೆಗಳಲ್ಲಿ ಮಾತ್ರ. ಆದ್ದರಿಂದ ಈ ಸಬ್ಜೆಕ್ಟ್‌ನಲ್ಲಿ ಟ್ರೈನಿಂಗ್ ಆಗಿರುವವರು ಹೆಚ್ಚಿನ ಸಂಖ್ಯೆಯಲ್ಲಿ ಸಿಗುವುದು ಕಷ್ಟ. ಅದಕ್ಕಾಗಿಯೇ ಆಲ್-ಇಂಡಿಯಾ ಬೇಸಿಸ್ ಮೇಲೆ ಕರೆದಿದ್ದೇವೆ. ನಮ್ಮಲ್ಲಿಯೇ ಯಾರಾದರು ಸಿಕ್ಕಿದರೆ ನಾವು ಬೇಡ ಎಂದು ಹೇಳುವುದಿಲ್ಲ. We want to have the best men in that system of medicine. ಅದಕ್ಕೆ ನಾವು ಕ್ವಾಲಿಫಿಕೇಷನ್ ಹಾಕುತ್ತೇವೆ. ಮತ್ತು ಸರಿಯಾದವರನ್ನು ಆರಿಸುವುದಕ್ಕಾಗಿ ಒಂದು ಕಮಿಟಿಯನ್ನು ರಚನೆ ಮಾಡುತ್ತೇವೆ. ಆ ಕಮಿಟಿಯಲ್ಲಿ ದೆಹಲಿಯಲ್ಲಿರುವ ಡೈರೆಕ್ಟರ್ ಆಫ್ ಇಂಡಿಯನ್ ಸಿಸ್ಟಮ್ ಆಫ್ ಮೆಡಿಸನ್ ಅವರು ಇರುತ್ತಾರೆ; ನಮ್ಮ ಹೆಲ್ತ್

ಕಮಿಷನರ್ ಅವರು ಇರುತ್ತಾರೆ; ಮತ್ತು ಇನ್ನೊಬ್ಬರು ಡಾಕ್ಟರ್ ಆದವರು ಮೆಂಬರ್ ಆಗಿರುತ್ತಾರೆ. ಇವರುಗಳು ಸೇರಿಕೊಂಡು ಯೋಗ್ಯರಾದವರನ್ನು ಸೆಲೆಕ್ಟ ಮಾಡುತ್ತಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ಈ ಜಾಗಕ್ಕೆ ಯೋಗ್ಯರಾದವರು ಮತ್ತು ಅರ್ಹತೆಯಿರುವವರು ಪ್ರಪಂಚದ ಯಾವುದೇ ಭಾಗದಲ್ಲಿ ಇರಲಿ, ಅವರನ್ನು ಕರೆಸಿ ಕೊಂಡು ಉಪಯೋಗಿಸಿಕೊಂಡರೆ ಅದಕ್ಕೆ ನಮ್ಮ ಭಿನ್ನಾಭಿಪ್ರಾಯವೇನೂ ಇರುವುದಿಲ್ಲ. ಮುಖ್ಯವಾಗಿ ಪ್ರತಿಭೆಗೆ ಪುರಸ್ಕಾರ ಕೊಡಬೇಕಾಗುತ್ತದೆ. ಆದರೆ ಅಡ್ಮಿನಿಸ್ಟ್ರೇಷನ್ನಿಗೆ ಸಂಬಂಧ ಪಟ್ಟಂತೆ ಬೇರೆ ಬೇರೆ ಅಧಿಕಾರಿಗಳನ್ನು ನೇಮಕ ಮಾಡುವಾಗ ಮತ್ತು ಉಪಕುಲಪತಿಗಳನ್ನು ನೇಮಕ ಮಾಡುವಾಗ ನಮ್ಮ ಕರ್ನಾಟಕ ರಾಜ್ಯವದರಿಗೇ ಪ್ರಾತಿನಿಧ್ಯ ಕೊಡಬೇಕೆಂದು ನಾನು ಹೇಳುತ್ತಿರುವುದು.

ಶ್ರೀ ಎಚ್. ಸಿದ್ದವೀರಪ್ಪ.—ಅವರು ಎಲಕ್ಷನ್‌ನಲ್ಲಿ ಆರಿಸಿ ಬರುತ್ತಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ಎಲಕ್ಷನ್ ಮೂಲಕ ಆರಿಸಿದರೆ ಸರಿಯಾದವರಿಗೆ ಪ್ರಾತಿನಿಧ್ಯ ಸಿಗುವುದು ಕಷ್ಟವಾಗುತ್ತದೆ. ಈಗ ನನಗೆ ಬಂದ ಒಂದು ವರ್ತಮಾನದ ಪ್ರಕಾರ ಶ್ರೀಮತಿ ಜಯಲಕ್ಷ್ಮಮ್ಮಣ್ಣಿಯವರನ್ನು ಕರ್ನಾಟಕ ವಿಶ್ವವಿದ್ಯಾನಿಲಯಕ್ಕೆ ಉಪಕುಲಪತಿಗಳನ್ನಾಗಿ ನೇಮಕ ಮಾಡಿರುವುದು ಒಂದು ಸಂತೋಷದ ಸುದ್ದಿ. ಇಂತಹ ದಕ್ಷರಾದವರು ನಮ್ಮ ರಾಜ್ಯದಲ್ಲಿ ಬಹಳ ಮಂದಿ ಇದ್ದಾರೆ. ಇಂತಹವರನ್ನು ಹುಡುಕಿ ನೇಮಕ ಮಾಡಬೇಕೇ ಹೊರತು, ಎಲ್ಲದಕ್ಕೂ ಎಲಕ್ಷನ್ ಮಾಡುವುದು ಸರಿಯಲ್ಲವೆಂದು ಹೇಳುತ್ತೇನೆ. ನಮ್ಮ ರಾಜ್ಯದ ಜನರಿಗೆ ಏನಾದರು ಪ್ರಯೋಜನವಾದರೆ, ತನ್ಮೂಲಕ ರಾಷ್ಟ್ರದ ಜನರಿಗೂ ಅನುಕೂಲವಾಗುತ್ತದೆ. ಇಂದು ಮೆಡಿಕಲ್ ಸೈನ್ಸ್‌ನಲ್ಲಿ ಸೃಷ್ಟಿಯಾದಂಥ ಜ್ಞಾನವನ್ನು ತಿಳಿದುಕೊಳ್ಳಬೇಕಾದರೆ ಜರ್ಮನಿ ಮತ್ತು ರಷ್ಯಾಕ್ಕೆ ಹೋಗಬೇಕೆಂದು ತಜ್ಞರು ಹೇಳುತ್ತಾರೆ. ಆದರೆ ಅಲ್ಲಿಯೂ ಕೂಡ ಮೆಡಿಕಲ್ ಎಜ್ಯುಕೇಷನ್ ಇಂಗ್ಲೀಷ್‌ನಲ್ಲಿ ನಡೆಯುತ್ತಿಲ್ಲ. ಜರ್ಮನಿಯಲ್ಲಿ ಜರ್ಮನ್ ಭಾಷೆಯಲ್ಲಿ, ರಷ್ಯಾದಲ್ಲಿ ರಷ್ಯನ್ ಭಾಷೆಯಲ್ಲಿ ನಡೆಯುತ್ತಿದೆ. ಅಂದರೆ ನಾನು ಇಂಗ್ಲೀಷ್ ಭಾಷೆ ಇರವುದು ಬೇಡ ಎಂದು ಹೇಳವುದಿಲ್ಲ. ಅದನ್ನು ಸಹ ಅವಶ್ಯಕ ಇದ್ದಷ್ಟು ಇಟ್ಟುಕೊಳ್ಳೋಣ.

ಆದರೆ ಇಂದು ಮೂಲತಃ ಏನು ಮಾಧ್ಯಮವಿದೆ, ಅದನ್ನು ನಮ್ಮ ದೇಶದ ಭಾಷೆಗೆ ಬದಲಾವಣೆ ಮಾಡಿದರೆ, ಅದರಿಂದ ಇನ್ನೂ ಹೆಚ್ಚಿನ ಪ್ರಯೋಜನ ವಿದ್ಯಾರ್ಥಿಗಳಿಗೆ ಆಗುತ್ತದೆ. ಆದರೆ ನಾವು ಪರಕೀಯ ಭಾಷೆಯನ್ನು ಉಪಯೋಗ ಮಾಡುವುದು ಸರಿಯಲ್ಲ. ಕೆಲವು ತಾಂತ್ರಿಕ ಶಬ್ದಗಳು ಇಂಗ್ಲೀಷ ಭಾಷೆಯಲ್ಲಿ ಏನಿವೆ, ಅವನ್ನು ಕನ್ನಡಕ್ಕೆ ಅನುವಾದ ಮಾಡಿದರೆ ಯಾರಿಗೂ ಅರ್ಥವಾಗುವುದಿಲ್ಲ ಎಂದು ಹೇಳುವುದಾದರೆ, ಅಂತಹ ಶಬ್ದಗಳನ್ನು ಬೇಕಾದರೆ ಉಪಯೋಗ ಮಾಡಿಕೊಳ್ಳೋಣ. ಆದರೆ ಪೂರ್ತಿಯಾಗಿ ಇಂಗ್ಲೀಷನ್ನು ಉಪಯೋಗ ಮಾಡುವುದು ಸರಿಯಲ್ಲ. ಕನ್ನಡ ಮಾಧ್ಯಮವನ್ನು ಜಾರಿಗೆ ತರುವ ಬಗ್ಗೆ ಮೂಲಭೂತವಾಗಿ ವಿಚಾರ ಮಾಡಬೇಕೆಂದು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ ಮತ್ತು ನಮ್ಮ ಜನರಿಗೆ ಎಲ್ಲ ಕಡೆ

ಗಳಲ್ಲಿಯೂ ಹೆಚ್ಚಿನ ಪ್ರಾತಿನಿಧ್ಯ ದೊರಕುವುದಕ್ಕೆ ವಿಶೇಷ ಆಸಕ್ತಿ ವಹಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇದರಲ್ಲಿ ಮುಖ್ಯವಾಗಿ ಭಾರತೀಯ ವೈದ್ಯ ಶಾಸ್ತ್ರದ ವಿಚಾರವನ್ನು ಅಂದರೆ ಆಯುರ್ವೇದವನ್ನು ಸೇರಿಸಿರುವುದು ಪ್ರಶಂಸಾರ್ಹವಾದ ವಿಷಯ. ಏಕೆಂದರೆ ಇಂದು ಆಯುರ್ವೇದ ಪದ್ಧತಿಯನ್ನು ಅನುಸರಿಸುತ್ತಿರುವ ಅಳಲೆಕಾಯಿ ಪಂಡಿತರನ್ನು ಬಹಳ ನಿರ್ಲಕ್ಷ್ಯ ಮಾಡಲಾಗುತ್ತಿದೆ. ಈ ದೃಷ್ಟಿಯಿಂದಲಾದರೂ ಸಹ ಈ ಭಾರತೀಯ ವೈದ್ಯ ಪದ್ಧತಿಯನ್ನು ಇದರಲ್ಲಿ ಅಳವಡಿಸಿರುವುದು ಸಂತೋಷದ ಸಂಗತಿ. ಭಾರತೀಯ ವೈದ್ಯ ಪದ್ಧತಿಯು ಭಾರತಿಯ ಭಾಷೆಯಲ್ಲಿಯೇ ಇರುವುದರಿಂದ, ಶಿಕ್ಷಣವನ್ನು ಸಹ ಕನ್ನಡ ಮಾಧ್ಯಮದಲ್ಲಿಯೇ ಬೋಧಿಸುವುದಕ್ಕೆ ವ್ಯವಸ್ಥೆ ಮಾಡುವುದು ಒಳ್ಳೆಯದೆಂದು ಹೇಳುತ್ತೇನೆ. ಈ ಒಂದು ಕೇಂದ್ರವನ್ನು ಮೈಸೂರು ನಗರದಲ್ಲಿ ಸ್ಥಾಪನೆ ಮಾಡುವುದಕ್ಕೆ ಇಷ್ಟಪಟ್ಟಿದ್ದಿರಿ. ಅದನ್ನು ನಾನು ಸ್ವಾಗತ ಮಾಡುತ್ತೇನೆ ಮತ್ತು ಮೆಚ್ಚುತ್ತೇನೆ. ಆದರೆ ಎಲ್ಲವೂ ಬೆಂಗಳೂರು ನಗರ ಮತ್ತು ಮೈಸೂರು ನಗರಗಳಲ್ಲಿಯೇ ಕೇಂದ್ರೀಕೃತವಾಗಬೇಕೇ ಎಂದು ಕೇಳುತ್ತೇನೆ. ನಮ್ಮ ಶಿವಮೊಗ್ಗದಲ್ಲಿ ಏತಕ್ಕೆ ಮಾಡಬಾರದು? ಅಲ್ಲಿ ಈಗ ಮೆಡಿಕಲ್ ಕಾಲೇಜು ಇಲ್ಲ.

ಶ್ರೀ ಎಚ್. ಸಿದ್ದವೀರಪ್ಪ.— ಅಲ್ಲಿ ಶಾರದೆಯ ಒಲುಮೆಯಿದೆ.

ಶ್ರೀ ಕೋಣಂದೂರು ಲಿಂಗಪ್ಪ.— ಆ ಬಗ್ಗೆ ನಾವು ಹೆಮ್ಮೆ ಪಡುತ್ತೇವೆ. ಶೃಂಗೇರಿಯ ಮಾನ್ಯ ಸದಸ್ಯರು ಈಗ ತಮ್ಮ ಪಕ್ಷದಲ್ಲಿಯೇ ಕುಳಿತಿದ್ದಾರೆ. ಮೈಸೂರು ನಗರದಲ್ಲಿ ಈ ಕೇಂದ್ರವನ್ನು ಸ್ಥಾಪನೆ ಮಾಡುವುದರ ಬಗ್ಗೆ ನಮ್ಮ ಸಂಪೂರ್ಣ ಬೆಂಬಲವಿದೆ. ಅಲ್ಲಿ ಬೇಕಾದಷ್ಟು ಅನುಕೂಲವಿದೆ ಮತ್ತು ಸವಲತ್ತುಗಳು ಇವೆ. ನಾನೂ ಸಹ ಮೈಸೂರಿನಲ್ಲಿಯೇ ಓದಿದವನು. ಆದರೆ ಎಲ್ಲವನ್ನೂ ಒಂದೇ ಕಡೆ ಕೇಂದ್ರೀಕೃತ ಮಾಡುವುದರಿಂದ ಅಪಾಯವಿದೆ. ಈ ಬಗ್ಗೆ ಎಚ್ಚರಿಕೆ ಇರುವುದು ಅವಶ್ಯಕವೆಂದು ಹೇಳುತ್ತೇನೆ. ನಾನು ಹೇಳಿದ ಅಂಶಗಳನ್ನೆಲ್ಲಾ ಸಂಯುಕ್ತ ಪರಿಶೀಲನಾ ಸಮಿತಿಯವರು ವಿಮರ್ಶೆ ಮಾಡುತ್ತಾರೆಂದು ನಂಬಿದ್ದೇನೆ. ಅವರು ವಿಮರ್ಶೆ ಮಾಡಿದ ನಂತರ ಮತ್ತೊಮ್ಮೆ ಈ ಸದನಕ್ಕೆ ಇದು ಬರುವುದರಿಂದ, ಈಗ ಇದರ ಬಗ್ಗೆ ವಿಶೇಷವಾಗಿ ಹೇಳುವುದಕ್ಕೆ ಅಪೇಕ್ಷೆ ಪಡೆದೆ, ಅಲ್ಲಿಂದ ಬೇಗ ಬರಲಿ ಎಂದು ಕೇಳಿಕೊಂಡು ಮತ್ತೊಮ್ಮೆ ಇದನ್ನು ಸ್ವಾಗತಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಚ್. ಸಿದ್ದವೀರಪ್ಪ.— ಮಾನ್ಯ ಅಧ್ಯಕ್ಷರೆ, ಇದುವರೆಗೆ ಮಾತನಾಡಿದ ಸದಸ್ಯರು ಅನೇಕ ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಮತ್ತು ಹೃತ್ಪೂರ್ವಕವಾಗಿ ಈ ಮಸೂದೆಗೆ ತಮ್ಮ ಸ್ವಾಗತವನ್ನು ನೀಡಿದ್ದಾರೆ. ಅದಕ್ಕಾಗಿ ಅವರನ್ನು ನಾನು ಹಾರ್ದಿಕವಾಗಿ ವಂದಿಸುತ್ತೇನೆ. ಅನೇಕ ವಿಷಯಗಳಲ್ಲಿ ಮಾನ್ಯ ಸದಸ್ಯರು ಏನು ಸಲಹೆಗಳನ್ನು ಕೊಟ್ಟಿದ್ದಾರೆ ಅದನ್ನೆಲ್ಲಾ ಜ್ಞಾಪಕದಲ್ಲಿ ಇಟ್ಟುಕೊಂಡು, ಜಾಯಿಂಟ್ ಸೆಲೆಕ್ಟ್ ಕಮಿಟಿಯಲ್ಲಿ ಕೂಲಂಕಷವಾಗಿ ನೋಡುತ್ತೇವೆ. ಶ್ರೀಮಾನ್ ಮಂಜುನಾಥ ಅವರು ಆಯುರ್ವೇದಕ್ಕೆ ಒಂದು ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಬೇಕೆಂದು ಹೇಳಿದರು. ಆದರೆ ಅದು ಸಮಂಜಸವಲ್ಲ. ಏಕೆಂದರೆ ಈಗ ಇಂಟ

ಗ್ರೇಟೆಡ್ ಸಿಸ್ಟಮ ಮಾಡಬೇಕಾಗಿದೆ. ಅದರಂತೆ ಒಂದೊಂದು ವಿಷಯಕ್ಕೆ ಒಂದೊಂದು ಫ್ಯಾಕಲ್ಟಿ ಇರುತ್ತದೆ. ಆಯುರ್ವೇದಕ್ಕೂ ಸಹ ಫ್ಯಾಕಲ್ಟಿ ಇರುವುದರಿಂದ ಅದೂ ಸಹ ಅನುಕೂಲಕರವಾದ ರೀತಿಯಲ್ಲಿ ಡೆವಲಪ್ ಆಗುವುದಕ್ಕೆ ಅವಕಾಶ ವಿರುತ್ತದೆ. ಆದ್ದರಿಂದ ಇದಕ್ಕೇ ಪ್ರತ್ಯೇಕವಾದ ವಿಶ್ವವಿದ್ಯಾನಿಲಯ ಇರಬೇಕೆಂದು ಹೇಳುವುದು ಸರಿಯಾದ್ದಲ್ಲವೆಂದು ನನ್ನ ಅಭಿಮತ. ಮಾನ್ಯ ಕಕ್ಕಿಲ್ಲಾಯ ಅವರು ಅಸ್ಟ್ರಾಲಜಿ ವಿಚಾರ ಹೇಳಿದರು. ಅಸ್ಟ್ರಾಲಜಿ ಸಿಸ್ಟಮ್ ಆಫ್ ಮೆಡಿಸನ್‌ಗೆ ಹೊಂದಿ ಕೊಂಡಿರುವ ಸಬ್ಜೆಕ್ಟ್. ಈ ಅಸ್ಟ್ರಾಲಜಿ ಇಂದು ಯಾರ ಯಾರ ಕೈಗೋ ಸಿಕ್ಕಿ ನಾಡಿ ನೋಡುವುದು, ಹಸ್ತ ನೋಡುವುದು ನಡೆಯುತ್ತಿದೆ. ಈ ರಾಹುಕಾಲ ಮತ್ತು ಗುಳಿಕಕಾಲದಿಂದ ಮನುಷ್ಯನ ಆರೋಗ್ಯದ ಮೇಲೆ ಏನೇನು ಆಗುತ್ತದೆ ಎಂಬುದನ್ನು ನೀವು ನೋಡಬೇಕಾದರೆ ಶ್ರೀ ಬಿ. ವಿ. ರಾಮನ್ ಅವರ ಮಂಥಲಿ ಮ್ಯಾಗ್‌ಜೈನ್ ನೋಡಿದರೆ ತಿಳಿಯುತ್ತದೆ. ಅದರಲ್ಲಿ ಬಹಳ ಚನ್ನಾಗಿ ವರ್ಣನೆ ಮಾಡಿರುತ್ತಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ಅದನ್ನು ನಂಬಿಕೊಂಡರೆ ನಾವು ಚುನಾವಣೆಗೆ ನಿಲ್ಲುವುದಕ್ಕೂ ಸಹ ಆಗುತ್ತಿರಲಿಲ್ಲ. ಇದರಲ್ಲಿ ನಂಬಿಕೆ ಎನ್ನತಕ್ಕದ್ದು ಮುಖ್ಯ. ಇದು ಒಂದು ರೀತಿಯಾದ ಸೈನ್ಸ್. ಅವರು ಮಾಡುವ ಕ್ಯಾಲ್‌ಕ್ಯುಲೇಷನ್‌ಗಳನ್ನು ಕೊಟ್ಟಿದ್ದಾರೆ. ಅದು ಪರಿಸ್ಥಿತಿಯ ಮೇಲೆ ಅವಲಂಬಿಸಿರುತ್ತದೆ. ಇದನ್ನು ಸುಳ್ಳು ಎಂದು ಹೇಳುವುದಕ್ಕಾಗುವುದಿಲ್ಲ. ಇದನ್ನು ಕೆಲವರು ತಪ್ಪು ಎಂದು ಹೇಳಬಹುದು ಇನ್ನು ಕೆಲವರು ಇದು ಪರಿಸ್ಥಿತಿಯ ಮೇಲೆ ಹೋಗುತ್ತದೆ ಎಂದು ಹೇಳುತ್ತಾರೆ. ಈ ಚೀಚೆಗೆ ನಮ್ಮಲ್ಲಿ ಹೆಲ್ತ್ ಸೈನ್ಸ್ ಎನ್ನುವುದು ಬಹಳವಾಗಿ ಇಂಪ್ರೂವ್ ಆಗುತ್ತಿದೆ. ನಮ್ಮ ಆರೋಗ್ಯದ ದೃಷ್ಟಿಯಿಂದ ಈಗಿರತಕ್ಕ ಅನುಕೂಲಗಳನ್ನು ನಾವು ಸರಿಯಾಗಿ ಉಪಯೋಗಿಸಿಕೊಂಡು ಹೆಚ್ಚಿಗೆ ಹಣ ಖರ್ಚು ಮಾಡುತ್ತಿದ್ದೇವೆ. ಮತ್ತು ನಮ್ಮ ದೇಶದಲ್ಲಿರುವ ವೈದ್ಯರುಗಳು ಆರೋಗ್ಯದ ವಿಷಯದಲ್ಲಿ ಇನ್ನೂ ಹೆಚ್ಚು ಪರಿಣತರಾಗ ಬೇಕು ಮತ್ತು ಅವರಿಗೆ ಸಹಾಯ ಮಾಡಬೇಕು ಮತ್ತು ಇಲ್ಲಿಗತಕ್ಕ ಎಲ್ಲ ಅನುಕೂಲ ಗಳನ್ನೂ ಉಪಯೋಗಿಸಿಕೊಳ್ಳಬೇಕು ಎನ್ನುವ ಒಂದು ದೃಷ್ಟಿಯಿಂದ ಇಂತಹ ಒಂದು ವಿಶ್ವವಿದ್ಯಾನಿಲಯವನ್ನು ಮಾಡಬೇಕೆಂದು ಈ ಬಿಲ್ಲನ್ನು ತರಲಾಗಿದೆ. ಇದು ಯಾವ ರೀತಿಯಾಗುತ್ತದೆ ಎನ್ನುವುದನ್ನು ನಾವು ಕಾದು ನೋಡಬೇಕು. ನನಗನಿಸುವುದು ನಮ್ಮ ರಾಜ್ಯದ ಎಲ್ಲ ಜನರೂ ಆರೋಗ್ಯವಾಗಿರಬೇಕು. ಈ ಆರೋಗ್ಯ ಎನ್ನುವುದೂ ಕೂಡ ಒಂದು ರೀತಿಯಾದ ಹೆಲ್ತ್ ಸೈನ್ಸ್ ಎಂದು ಹೇಳುತ್ತಾರೆ. ನಮ್ಮ ರಾಜ್ಯದ ಇಡೀ ಜನರ ಮೇಲೆ ಅನುಕಂಪವಿಟ್ಟು ಕೆಲಸ ಮಾಡುವಂತಹ ವೈದ್ಯರು ಗಳು ತಯಾರಾಗತಕ್ಕ ರೀತಿಯಲ್ಲಿ ಅವರಿಗೆ ತರಬೇತಿ ಕೊಟ್ಟು ಅವರಿಂದ ಕೆಲಸಗಳನ್ನು ಮಾಡಿಸಬೇಕು ಎನ್ನುವುದು ಒಂದು ಅಂಶ ಮತ್ತು ಅದಕ್ಕನುಕೂಲವಾಗುವಂತೆ ಕರ್‌ಕ್ಯುಲಮ್ಮನ್ನು ಯಾವ ರೀತಿ ಹೊಂದಿಕೊಳ್ಳುವಂತೆ ಮಾಡಬೇಕು ಎನ್ನುವುದು ಇನ್ನೊಂದು ಅಂಶ. ಈಗ ನಿಮಗೆಲ್ಲಾ ತಿಳಿದಿರುವಂತೆ ಡಾಕ್ಟರುಗಳ ವಿಚಾರದಲ್ಲಿ ಬರೀ ಹಣ ಸುರಿದರೂ ಏನೂ ಉಪಯೋಗವಾಗುತ್ತಿಲ್ಲ ಎಂದು ಕೇಳುತ್ತಿದ್ದೇವೆ. ನಮಗೆ

ಬಡವರ ಬಂಧು ಎನ್ನಿಸಿಕೊಳ್ಳುವಂತಹ ವೈದ್ಯರುಗಳು ಬೇಕು. ಹೆಲ್ತ್ ಸೈನ್ಸ್‌ನ್ನು ನಮ್ಮ ದೇಶದಲ್ಲಿ ಡೆವಲಪ್ ಮಾಡಬೇಕು ಎನ್ನುವ ದೃಷ್ಟಿಯಿಂದ ಈ ಮಸೂದೆಯನ್ನು ತರಲಾಗಿದೆ. ಅಷ್ಟೇ ಅಲ್ಲ ಇದರಲ್ಲಿರುವ ಸೆಕ್ಷನ್ (೬)ರಲ್ಲಿ ಹೇಳಿರುವುದನ್ನು ನೋಡಿದರೆ ಯಾವ ಅನುಮಾನವೂ ಬರಲು ಕಾರಣವಿಲ್ಲ. ಪ್ರೈವೇಟ್ ಮೆಡಿಕಲ್ ಕಾಲೇಜುಗಳನ್ನು ಇನ್ನು ಮುಂದೆ ತಡೆಯಲು ಇದರಿಂದ ಯಾವ ರೀತಿ ಆಗುತ್ತದೆ ಎನ್ನುವುದನ್ನೂ ಸರಕಾರ ಗಮನದಲ್ಲಿಟ್ಟುಕೊಂಡಿದೆ. ಸರಕಾರ ಇದರ ಬಗ್ಗೆ ತಕ್ಕ ನಿಬಂಧನೆಗಳನ್ನು ಇದರಲ್ಲಿ ಅಳವಡಿಸಿ ಅದಕ್ಕನುಸಾರವಾಗಿ ಮಾಡಬೇಕೆಂದು ಹೇಳಿದ್ದೇವೆ. ಅಷ್ಟೇ ಅಲ್ಲ. ಈ ವರ್ಷದಿಂದ ಪ್ರತಿಯೊಂದು ಕಾಲೇಜಿನಲ್ಲೂ ಇಷ್ಟೇ ವಿದ್ಯಾರ್ಥಿಗಳು ಇರಬೇಕು, ಇಷ್ಟೇ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಬೇಕೆಂದೂ ಮಾಡಲಾಗಿದೆ. ಇದಕ್ಕೆ ವಿರೋಧವಾಗಿ ಯಾರಾದರೂ ಹೋದರೆ ಅಂತಹವರ ಮೇಲೆ ಉಗ್ರ ಕಾರ್ಯಕ್ರಮ ಕೈಗೊಳ್ಳುತ್ತೇವೆಂದೂ ಹೇಳಿದ್ದೇವೆ. ಇದು ವರೆಗೂ ಯಾರೂ ನಮ್ಮ ನಿಬಂಧನೆಗಳನ್ನು ಮೀರಿ ಹೋಗಿಲ್ಲ. ಇದರಲ್ಲಿ ಎಲ್ಲರಿಗೂ ಫ್ರೀಡಂ ಇರಬೇಕು ಮತ್ತು ಇದರಲ್ಲಿ ಹೆಚ್ಚು ಆಸಕ್ತಿ ಇರುವಂತಹವರು ಇರಬೇಕು. ಅವರಿಗೆ ಜನರ ಬಗ್ಗೆ ಒಂದು ರೀತಿಯಾದ ಉತ್ಸಾಹ ಇರಬೇಕು. ದೇಶದ ಹಿತದೃಷ್ಟಿಯಿಂದ, ಸಮಾಜದ ಹಿತದೃಷ್ಟಿಯಿಂದ ನಮ್ಮ ನಿಯಮಗಳಿಗೆ ಒಳಪಟ್ಟು ಪ್ರೈವೇಟ್ ಕಾಲೇಜುಗಳನ್ನೂ ಅಫಿಲಿಯೇಟು ಕಾಲೇಜುಗಳಾಗಿ ಮಾಡಲು ಅವಕಾಶ ಕಲ್ಪಿಸಲಾಗಿದೆ. ನಮಗೆ ಕ್ವಾಲಿಟಿ ಬೇಕು. ನಮ್ಮ ನಿಬಂಧನೆಗಳಿಗೆ ಒಪ್ಪಿಗೆ ಕೊಡುವಂತಿರಬೇಕು. ವೈಸ್ ಚಾನ್ಸಲರ್ ನೇಮಕ ಮಾಡುವಾಗ ಇದರಲ್ಲಿ ಹೇಳಿರುವಂತೆ ಮೂರು ಜನರ ಒಂದು ಪ್ಯಾನಲ್‌ನಲ್ಲಿ ಒಬ್ಬರನ್ನು ಆರಿಸಬೇಕೆಂದು ಸೆಕ್ಷನ್ ೧೨ (೨)ರಲ್ಲಿ ತಿಳಿಸಲಾಗಿದೆ. ಇದು ಬೆಂಗಳೂರು ಯೂನಿವರ್ಸಿಟಿಯ ನಿಬಂಧನೆಗಳಂತೆಯೇ ಇದೆ. ಅದರ ಪ್ರಕಾರ ಮಾಡಬೇಕೆಂದು ಇಲ್ಲೂ ಮಾಡಲಾಗಿದೆ. ಇದಕ್ಕೆ ತಾವೆಲ್ಲರೂ ಸರ್ವಾನುಮತದಿಂದ ಪ್ರೋತ್ಸಾಹ ಕೊಟ್ಟು ಈ ಬಿಲ್ಲನ್ನು ತರಲು ನನಗೆ ಒಂದು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಈ ಸಭೆಗೆ ನಾನು ನನ್ನ ಹೃತ್ಪೂರ್ವಕವಾದ ವಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಪೂರೈಸುತ್ತೇನೆ.

MADAM SPEAKER.— The question is :

"That the University of Health Sciences Bill, 1973 be taken into consideration."

The motion was adopted.

Motion to refer to Joint Select Committee.

SRI H. SIDDAVEERAPPA.— Madam, I beg to move :

"That the University of Health Sciences Bill, 1973 be referred to a Joint Select Committee consisting of a total number of 20 members (15 from the Legislative Assembly and 5 from the Legislative Council), that the concurrence

of the Legislative Council be obtained therefor and that the following members of the House shall be members of the Joint Select Committee, viz.

Sriyuths :

1.	B. Puttakamaiah	2.	H. Puttadas
3.	M. M. Nadaf	4.	K. Puttaswamy
5.	S. H. Puttaranganath	6.	S. M. Sheeranalli Chandrasekhar
7.	S. Puttaswmy		
8.	S. A. Patil	9.	K. P. Nadagouda
10.	K. M. Rudrappa	11.	N. Basavaiah
12.	K. H. Hanume Gowda	13.	M. S. Krishnan
14.	Bettaswamy Gowda	15.	B. S. Veerabhadrappa"

MADAM SPEAKER.— Motion move :

"That the University of Health Sciences Bill, 1973 be referred to a Joint Select Committee consisting of a total number of 20 members (15 from the Legislative Assembly and 5 from the Legislative Council), that the concurrence of the Legislative Council be obtained therefor and that the following members of this House shall be members of the Joint Select Committee, viz.

Sriyuths :

1.	B. Puttakamaiah	2.	H. Puttadas
3.	M. M. Nadaf	4.	K. Puttaswamy
5.	S. H. Puttaranganath	6.	S. M. Sheeranalli Chandrasekhar
7.	S Puttaswamy		
8.	S. A. Patil	9.	K. P. Nadagouda
10.	K. M. Rudrappa	11.	N. Basavaiah
12.	K. H. Hanume Gowda	13.	M. S. Krishnan
14.	Bettaswamy Gowda	15.	B. S. Veerabhadrappa"

The motion was adopted.

MADAM SPEAKER.— The House now stands adjourned to meet at 1 P. M. on Thursday, the 27th September 1973.

[The House adjourned at Fifty Eight Minutes past Five of the Clock to meet again at One of the Clock on Thursday, the 27th September 1973.]

ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Thursday, 27th September, 1973/Ashvayuja 5, 1895 S.E.

The House met in the Assembly Chamber, Vidhana Soudha, at One of the Clock.

MADAM SPEAKER (SMT. K. S. NAGARATHNAMMA) in the Chair.

STARRED QUESTIONS

(to which oral Answers were given)

POULTRY DEVELOPMENT CENTRES IN MANGALORE CITY

301 Smt. ADDY SALDANHA (Mangalore).—

Will the Minister of State for animal Husbandry be pleased to state.—

(a) the number of Poultry Development Centres located in mangalore City;

(b) whether it has come to the notice of Government that Poultry Development Programme in Mangalore city is not working properly;

(b) if so, the action taken by Government to encourage development of poultry in Mangalore city?

Sri. N. CHIKKEGOUDA. (Minister of State for Animal Husbandry).—

(a) One

(b) No.

(c) Does not arise in view of reply to clause (b).

Smt. ADDY SALDHANHA.— May I know whether this Poultry Development Centre in Mangalore is fully Developed and whether qualified and experience Officers are posted to it and whether they give guidance to private parties ?

†Sri. N. CHIKKEGOUDA.— This Regional Poultry Development Centre is equipped with a Class II Officer and other staff. This Regional Poultry Development Centre is catering to the needs of the farmers in and around Mangalore; apart from Mangalore City also they are supplying hatched eggs to the area. The Centre was started in 1965-66. I have got the figures regarding the progress achieved.

Smt. ADDY SALDANHA.— I want to know whether there is any scheme to extend it as lot of people are interested in poultry farming ?

Sri. N. CHIKKEGOUDA.— The main purpose of the Regional Poultry Development Centre is to cater to the needs of the farmers who take up poultry industry. We have given lot of facilities to them by way of supplying vaccine and we are also giv.ng training facilities.

Smt. ADDY SALDANHA.— I wish to know whether there is any programme to encourage development of poultry in other parts of Mangalore City ?

Sri. N. CHIKKEGOUDA.— This Centre does not pertain to Mangalore City only. The jurisdiction of this Centre includes in and around Mangalore City also. This is a Regional poultry Development Centre which caters not only Mangalore City but other Districts also. But the main concentration is on Mangalore and Mangalore District. We are supplying number of layers as also one day old chickens to the farmers. All facilities are given through this Regional Poultry Development Centre.

---

† indicates that remarks or speeches have not been revised by the member concerned.

BOYS' AND GIRLS' HOSTELS FOR S. C. STUDENTS

316. Sri MALLIKARJUN KHARGE (Gurmitkal).— Will the Minister for Cummunity Development and Social Welfare be pleased to state.—

(a) the number of boys' and girls' hostels constructed by Social Welfare Department for the Scheduled Castes students in the year 1973-74;

(b) whether the Government has got any proposal to take over all the hostels run by private institutions;

(c) if so, within what period the Government propose to take over such Hostels?

Sri. M. MALLIKARJUNA SWAMY (Minister for Community Development and Social Welfare).—

(a) No new hostel building has been constructed during 1973–74 so far.

(b) None as at present.

(c) In view of reply to clause (b) the question does not arise.

Sri MALLIKARJUN KHARGE.—May I know the reason for the Government not taking up any Hostel building construction work in the entire Mysore State in the year 1973–74?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಕಳೆದ ವರ್ಷ ಮಂಜೂರಾದ ೬೦ ಹಾಸ್ಟಲುಗಳ ಕೆಲಸ ಸುಮಾರು ೩೦ ಲಕ್ಷದ ೨೫ ಸಾವಿರ ರೂಪಾಯಿಗಳ ವೆಚ್ಚದಲ್ಲಿ ಆಗುತ್ತಿದೆ. ಈ ಸಾರಿ ಕೂಡ ಸುಮಾರು ೧೬ ಲಕ್ಷದ ೮ ಸಾವಿರ ರೂಪಾಯಿಗಳನ್ನು ಹಾಸ್ಟಲುಗಳನ್ನು ಕಟ್ಟಲು ಕೊಟ್ಟಿದ್ದೇವೆ. ಮತ್ತು ಈಗಾಗಲೆ ೧೨ ಪ್ರಪೋಸಲ್ಸ್ ಬಂದಿವೆ, ಅವನ್ನು ಪರಿಶೀಲನೆ ಮಾಡುತ್ತಿದ್ದೇವೆ.

Sri MALLIKARJUN KHARGE.—May I know what the policy of the Government is in regard to hostels for S. C. students–whether Government is going to take over all the private Hostels run by the other private institutions?

Sri M. MALLIKARJUNASWAMY.—We have said 'No' emphatically.

ಶ್ರೀ ಟಿ. ಎಂ. ಮಂಜುನಾಥ್ — ತಿಪಟೂರು ತಾಲ್ಲೂಕಿನಲ್ಲಿ ಸುಮಾರು ಎರಡು ವರ್ಷದಿಂದ ತಾಲ್ಲೂಕು ಬೋರ್ಡ್‌ನಿಂದ ಹಣ ಕೊಡುವುದಾಗಿ ತಿಳಿಸಿದ್ದರೂ, ನಿರ್ಣಯಮಾಡಿದ್ದರೂ ಕೆಲಸ ವಿಳಂಬವಾಗಿದೆ ಏಕೆ ವಿಳಂಬವಾಗಿದೆ? ಅಲ್ಲಿ ಹಾಸ್ಟಲನ್ನು ಕಟ್ಟುವುದಕ್ಕೆ ಅನಾನುಕೂಲವೇನು?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ — ಈ ಪ್ರಶ್ನೆ ಬಿದರೆ ಜಿಲ್ಲೆಗೆ ಸಂಬಂಧ ಪಟ್ಟಿರುವುದರಿಂದ ಮಾನ್ಯ ಸದಸ್ಯರ ಪ್ರಶ್ನೆ ಉದ್ಭವವಾಗುವುದಿಲ್ಲ.

ಶ್ರೀ ಟಿ. ಎಂ. ಮಂಜುನಾಥ — ಇಡೀ ರಾಜ್ಯಕ್ಕೆ ಸಂಬಂಧಪಟ್ಟ ಪ್ರಶ್ನೆ ಇದು.

ಅಧ್ಯಕ್ಷರು.— ಆಗಲಿ, ನೋಡಿ ಹೇಳುವರು.

Sri D. B. KALMANKAR.—May I know which are these 12 places where the construction of these Hostels is going to take place? I also want to know whether there is any scheme with the Government to extend the existing Hostels?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.— ಈಗ ೧೨ ತಾಲ್ಲೂಕುಗಳಿಂದ ಏನು ಪ್ರಪೋಸಲ ಬಂದಿದೆ ಅದು ಡೈರೆಕ್ಟರ ಹತ್ತಿರವಿದೆ, ನನ್ನ ಹತ್ತಿರ ಅದಕ್ಕೆ ಸಂಬಂಧಪಟ್ಟ ವಿವರವಿಲ್ಲ. ಆದರೆ ಈಗಿರುವ ಹಾಸ್ಟಲುಗಳಿಗಿರುವ ಅನುಕೂಲಗಳನ್ನು ಹೆಚ್ಚಿನ ರೀತಿಯಲ್ಲಿ ಕೊಡಬೇಕೆಂಬ ಉದ್ದೇಶದಿಂದ ರಾಷ್ಟ್ರಪತಿಗಳ ಆಡಳಿತದ ಕಾಲದಲ್ಲಿ ಒಂದು ಸಮಿತಿ ಮಾಡಲಾಗಿತ್ತು. ಆ ಸಮಿತಿಯವರು ವರದಿಯನು ಸಲ್ಲಿಸಿದ್ದಾರೆ. ಆ ವರದಿಯನ್ನು ಕಾರ್ಯರೂಪಕ್ಕೆ ತರಬೇಕು. ಎಜುಕೇಷನಲ್ ಅಡ್ವಾನ್ಸ್‌ಮೆಂಟ್ ಆಗಬೇಕು ಎಂಬ ದೃಷ್ಟಿಯಿಂದ ಸುಮಾರು ೪೫ ಲಕ್ಷ ರೂಪಾಯಿಗಳನ್ನು ಇದಕ್ಕಾಗಿ ಇಡಲಾಗಿದೆ.

ಶ್ರೀ ಟಿ. ಎಂ. ಮಂಜುನಾಥ.— ಹಣ ಮಂಜೂರು ಮಾಡಿದ್ದೀರಿ. ಅದಕ್ಕೆ ಅನೇಕ ರೀತಿಯ ಕ್ವೈರಿ ಹಾಕಿರುವುದರಿಂದ ಸುಮಾರು ಎರಡು ವರ್ಷದಿಂದ ಉದ್ದೇಶ ಸಾರ್ಥಕವಾಗಿಲ್ಲ. ಸ್ಪೆಸಿಫಿಕ್ಕಾಗಿ ಇಂಥ ಕೇಸುಗಳನ್ನು ನೋಡಿ ಕಟ್ಟಿಸಲು ಅವಕಾಶ ಮಾಡುವಿರಾ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.— ಅದನ್ನು ಪರಿಶೀಲನೆ ಮಾಡೋಣ.

ಶ್ರೀ ಕೆ. ಶ್ರೀರಾಮುಲು.— ೧೯೭೩–೭೪ ರಲ್ಲಿ ಯಾವುದೂ ಮಾಡಿಲ್ಲ. ಇದು ಸರಕಾರದ ಕರ್ತವ್ಯವಲ್ಲವೇ? ಸರಕಾರ ಈ ನೀತಿ ಅನುಸರಿಸಿದರೆ ಕಟ್ಟಡ ಕಟ್ಟುವುದನ್ನು ಪೂರ್ಣ ಮಾಡದಿದ್ದರೆ ಕರ್ತವ್ಯ ಲೋಪವಲ್ಲವೇ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.— ಕಳೆದ ೨೬ ವರ್ಷಗಳಲ್ಲಿ ಸ್ವಾತಂತ್ರ್ಯ ಬಂದಮೇಲೆ ಸುಮಾರು ೩೬ ಹಾಸ್ಟಲುಗಳಿಗೆ ಕಟ್ಟಡ ಒದಗಿಸಲಾಗಿದೆ. ಕಳೆದ ವರ್ಷ ೬೦ ಹಾಸ್ಟಲುಗಳನ್ನು ಮಂಜೂರು ಮಾಡಿದೆ. ಕಳೆದ ವರ್ಷದ ಕೆಲಸ ಈಗಲೂ ಕೂಡ ಸ್ಪಿಲ್‌ಓವರ್ ಕೆಲಸ ನಡೆಯುತ್ತಿದೆ. ಇತರ ಸಂಸ್ಥೆಗಳವರಿಂದ ಬರಬೇಕಾದ

ಭಾಗ ಬರದ ಸೈಟು ದೊರೆಯದ ಕಾರಣಾಂತರದಿಂದ ಸ್ಪಿಲ್ ಓವರ್ ಕೆಲಸವಾಗಿ ಅದು ನಡೆಯುತ್ತಿದೆ.

ಶ್ರೀ ಬಾಪೂಗೌಡ ರಾಯಪ್ಪ.— ಈಗ ಜನರಲ್ ಹಾಸ್ಟಲುಗಳಿವೆ, ೯೦ ಮಾಡಿದ್ದೀರಿ. ಇನ್ನುಳಿದ ಹಾಸ್ಟಲುಗಳಿಗೆ ತಾಲ್ಲೂಕು ಬೋರ್ಡಿನಲ್ಲಿ ಹಣವಿದೆ. ಅದರ ಬಗ್ಗೆ ಆರ್ಡರು ಮಾಡಿ ಅದನ್ನು ಉಪಯೋಗಿಸಲು ಅವಕಾಶ ಮಾಡುವಿರಾ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಈಗಾಗಲೆ ೧೫ ದಿವಸದ ಹಿಂದೆ ಸರಕಾರದ ಆರ್ಡರಾಗಿದೆ. ಸುಮಾರು ಸೇಕಡ ೭೮ ಭಾಗದಷ್ಟು ಹಣ ತಾಲ್ಲೂಕು ಅಭಿವೃದ್ಧಿ ಮಂಡಲ ಹರಿಜನರ ಅಭಿವೃದ್ಧಿಗೆ ಖರ್ಚುಮಾಡಬೇಕ., ಹರಿಜನರ ಮಕ್ಕಳು ಜಾಸ್ತಿ ಇರುವ ಕಡೆ ಸೇಕಡ ೭೫ ರಷ್ಟು ಇರುವ ಕಡೆ ಮೊದಲು ಖರ್ಚು ಮಾಡಬೇಕು, ಬೇರೆ ಜನರಲ್ ಹಾಸ್ಟಲುಗಳ ಕೆಲಸ ಇದು ಮುಗಿದ ಮೇಲೆ ತೆಗೆದುಕೊಳ್ಳಬಹುದು ಎಂದು ನೀತಿಯ ಬಗ್ಗೆ ನಿರ್ಣಯವೇನು ಆಗಿದೆ ಅದನ್ನು ಡಿವಿಜನಲ ಕಮೀಷನರು ಮತ್ತು ಡೆಪ್ಯುಟಿ ಕಮೀಷನರುಗಳಿಗೆ ಕಳುಸಿ ಅದರ ಬಗ್ಗೆ ಆದೇಶ ಕೊಡಲಾಗಿದೆ.

Sri M. MALLAPPA.—If the private managements running the General Hostels agree to the conditions laid down by the Government and come forward to give site, will the Government help them to construct hostels for Schedule Castes students?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಪ್ರತಿಯೊಂದು ಕೇಸನ್ನೂ ಕೂಡ ಸರಕಾರ ಪರಿಶೀಲಸಿ ಕೊಡುವುದಕ್ಕೆ ಯೋಗ್ಯವಾಗಿದ್ದರೆ ಕೊಡುತ್ತೇವೆ.

Sri MALLIKARJUN KHARGE.— Now there is no hostel facility for College boy students. I want to know whether the Government is going to considering construction of hostels for these College boy students belonging to Scheduled Castes?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ —ಕಾಲೇಜುಗಳಲ್ಲಿ ಓದುವ ವಿದ್ಯಾರ್ಥಿಗಳ ವಿಚಾರವನ್ನು ಸಮಾಜ ಕಲ್ಯಾಣ ಇಲಾಖೆ ನೋಡಿಕೊಳ್ಳುವುದು. ಮತ್ತೊಂದು ಪಾಲಿಸಿ ಡಿಸಿಷನ್ ತೆಗೆದುಕೊಂಡು ಐದನೆ ಪಂಚವಾರ್ಷಿಕ ಯೋಜನೆಯಲ್ಲಿ ಕಾಲೇಜು ವಿದ್ಯಾರ್ಥಿಗಳಿಗೆ ಹಾಸ್ಟಲಿನ ಅನುಕೂಲ ಒದಗಿಸಬೇಕೆಂದಿದ್ದೇವೆ. As advance action, we have already sanctioned construction of three hostel buildings Two at Bangalore City and one at Mysore.

SENIORITY LIST OF OFFICERS OF P. W. D.

336. Sri J. P. SARWESH (Sedam).— Will the Minister for Public Works and Electricity be pleased to state :—

(a) whether any Mysore Civil Service Ordinance has been promulgated on 29th June 1973 ;

(b) whether the gradation list of seniority of Public Works Department Officers have been prepared ;

(c) whether the direct recruits are given benefit of seniority from the dates of their appointment only ;

(d) whether the promotions given so far are being reviewed and reversions of promoted P. W. D., Officers are being done ?

Sri H. M. CHANNABASAPPA (Minister for Public Works and Electricity).—

(a) Yes.

(b) The seniority list of officers of P. W. D., is being prepared and action has been taken separately to publish the seniority list (gradation list of the officers of the PWD).

(c) The direct recruits in the cadre of Assistant Engineers are given seniority on the basis of the provisions made in the Recruitment Rules.

(d) The Mysore Ordinance No. 1 of 1973 provides among others that promotion etc., of the allottees be reviewed on the basis of ranks in the Final Inter-State Seniority List made from 1st November 1956 upto date Action is being taken by Government in accordance with the provisions of the said Ordinance.

Sri J. P. SARWESH.— I have no supplementaries.

DIKSANGA PROJECT IN AFZALPUR TALUK

346. Sri D. B. KALMANKAR (Afzalpur).— Will the Minister of State for Major Irrigation be pleased to state :—

(a) whether the Diksanga Project has been investigated on top priority basis in Afzalpur Taluk as ordered by the Government;

(b) if so, whether the Government has any proposal to sanction the same in view of chronic drought condition in that area ?

Sri H. N. NANJE GOWDA (Minister of State for Major Irrigation).—

(a) and (b) The Diksanga Project is still under investigation.

Sri D. B. KALMANKAR.—Is it not a fact that the investigation of this particular project was completed during the year 1964-65 and it was only pending sanction ?

Sri H. N. NANJE GOWDA.— Investigation is going on since 1959 itself. First investigation was for an achkat of 1264 acres but it was felt that it was economically not feasible. Again it was reinvestigated to irrigate 8,000 acres but the cost per acre also had increased. The present proposal is to have a lift irrigation scheme to irrigate 20,000 acres. It is under investigation. A final decision will have to be taken only after the decision of the Tribunal.

Sri D. B. KALMANKAR.— Is it not a fact that last year, orders were passed to take up this investigation on a top priority basis, because Afzalpur Taluk is a worst affected area ?

Sri H. N. NANJE GOWDA.— We have ordered to take up investigation of all projects ; this is one of them.

Sri D. B. KALMANKAR.— Normally, what time does the department takes to investigate ?

Sri H. N. NANJE GOWDA.— It depends upon individual cases. Since 1959, this project is pending.

P. W. D. ROADS IN DAVANGERE TALUK

366. Smt. NAGAMMA C. KESHAVAMURTHY (Davanagere).— Will the Minister for, Public Works and Electricity be pleased to state:—

(a) the number and names of roads constructed and maintained by the Public WorksDepartment in Davanagere Taluk.

(b) the amount spent for these roads during the last three years.

(c) the roads that have been taken up during the current year (i. e. 1972–73) in Davanagere Taluk ?

Sri H. M. CHANNABASAPPA (Minister for Public Works and Electricity).—

(a) and (b) Vide Statement I placed on the Table of the House.*

(c) Vide Statement II placed on the Table of the House *

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ತಾವು ಟೇಬಲ್ ಮೇಲೆ ಇಟ್ಟಿದ್ದ ತಃಖ್ತೆಯ ೧೨ ನೇ ಐಟಂನಲ್ಲಿ ಕರಡ ರಸ್ತೆಗೆ ೪ ಸಾವಿರ ರೂಪಾಯಿಗಳು ಖರ್ಚಾಗಿದೆ ಎಂದು ಹೇಳೋಣವಾಗಿದೆ. ಆದರೆ ಅಲ್ಲಿ ಆ ರಸ್ತೆ ಇರುವುದೆಲ್ಲಾ ೭ ಮೈಲಿ ೪ ಫರ್ಲಾಂಗ್ ಮಾತ್ರ. ಅಷ್ಟು ಹಣವನ್ನು ಖರ್ಚುಮಾಡಿ ಅಲ್ಲಿ ರಸ್ತೆ ಮಾಡಿದ್ದಾಗ್ಲೂ ಮೊನ್ನೆ ಮಳೆಗಾಲದಲ್ಲಿ ಅಲ್ಲಿ ಸುಮಾರು ೫–೬ ದಿನಗಳಾದರೂ ಸತ್ತಿರಬೇಕು. ಇನ್ನು ಜನರಂತು ಆ ಕೊಚ್ಚೆ ಕೆಸರಲ್ಲಿ ಓಡಾಡುವುದಕ್ಕೆ ಸಾಧ್ಯವೇ ಇಲ್ಲ ಅಂದಾಗ ಅಷ್ಟು ಹಣ ಅಲ್ಲಿ ಏತಕ್ಕೆ ಖರ್ಚಾಯಿತು? ಅದನ್ನು ದುರಸ್ತಿ ಮಾಡದ ವಿನಾ ಅಲ್ಲಿ ಜನರು ಓಡಾಡುವುದಕ್ಕೆ ಸಾಧ್ಯವೇ ಇಲ್ಲ. ಆದುದರಿಂದ ಅದನ್ನು ಬೇಗ ದುರಸ್ತಿ ಮಾಡಿಸಿ ಕೊಡುತ್ತೀರಾ ?

† ಶ್ರೀ ಎಚ್. ಎಂ. ಚನ್ನಬಸಪ್ಪ.— ತಾವು ಹೇಳುತ್ತಿರುವುದು ವಿಲೇಜ್ ಸ್ಟಾಂಡರ್ಡ್ ರೋಡ್. ನಮ್ಮಲ್ಲಿ ಸ್ಟೇಟ್ ಹೈವೆ, ಡಿಸ್ಟ್ರಿಕ್ ರೋಡ್ಸ್ ಮತ್ತು ರೂರಲ್ ಸ್ಟಾಂಡರ್ಡ್ ರೋಡ್ಸ್ ಎಂದು ಮೂರು ನಾಲ್ಕು ನಮೂನೆ ರಸ್ತೆಗಳಿವೆ. ಅವುಗಳಲ್ಲಿ ತಾವು ಹೇಳುತ್ತಿರುವುದು ಕೊನೆ ದರ್ಜೆಗೆ ಸೇರಿದ ರಸ್ತೆ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ— ಆ ರಸ್ತೆಗೆ ಜಲ್ಲಿಯನ್ನು ಹಾಕಿರುವುದಿಲ್ಲ. ಅಲ್ಲಿ ಬಹಳ ನೀರಾವರಿ ಪ್ರದೇಶವಿರುವುದರಿಂದ ಜನರ ಓಡಾಟ ಜಾಸ್ತಿಯಾಗಿರುತ್ತದೆ. ಅದುದರಿಂದ ಅದನ್ನು ಬೇಗ ದುರಸ್ತಿ ಮಾಡಿಸಿಕೊಡುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.— ಹಣಕಾಸಿನ ಪರಿಸ್ಥಿತಿ ಮತ್ತು ರಸ್ತೆಯ ಪ್ರಾಮುಖ್ಯತೆ ಈ ಎರಡನ್ನೂ ನೋಡಿ ಎಷ್ಟರ ಮಟ್ಟಿಗೆ ಅನುಕೂಲವಾಗುತ್ತದೋ ಅಷ್ಟರ ಮಟ್ಟಿಗೆ ಅದಕ್ಕೆ ಗಮನ ಕೊಡಲಾಗುತ್ತದೆ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.— ಈ ವರ್ಷ ಪಿ. ಡಬ್ಲ್ಯು. ಡಿ. ಅವರು ನಮ್ಮಲಿ ಯಾವ ಯಾವ ರಸ್ತೆ ಕಾಮಗಾರಿಗಳನ್ನು ತೆಗೆದುಕೊಂಡಿದ್ದಾರೋ

*Copies placed in the Mysore Legislature Liurary *Vide* No. 48/ dated 1–6–73.

ಅಲ್ಲಿ ೬೦ ಸಾವಿರಕ್ಕೂ ಹೆಚ್ಚು ಎಕರೆ ನೀರಾವರಿ ಸಾಗುವಳಿಯಾಗುತ್ತಿರುವುದರಿಂದ ಅಲ್ಲಿ ಗಾಡಿ ಮತ್ತು ಜನರ ಓಡಾಟ ಜಾಸ್ತಿ ಇರುವುದರಿಂದ ಆ ರಸ್ತೆಗಳನ್ನು ಬೇಗ ದುರಸ್ತಿ ಮಾಡಿಸಿ ಕೊಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ—ಅಲ್ಲಿ ಈ ವರ್ಷ ನಾವು ಯಾವ ರಸ್ತೆಗಳನ್ನೂ ತೆಗೆದುಕೊಂಡಿಲ್ಲ.

M. S. R. T. C. BUS STAND AT TUMKUR

384. Sri. K. ADBUL SUBHAN (Tumkur) —Will the Minister for Labour be pleased to state—

(a) whether Government intends to take up the construction of a M. S. R. T. C. bus stand at Tumkur;

(b) if so, when;

(c) the place and amount allotted for the construction of the bus stand ?

Sri AZEEZ SAIT (Minister for Labour)—

(a) No.

(b) and (c) Does not arise in view of the reply to clause (a) of the question.

There is a little amendment to the answers printed. The M. S. R. T. C. would like to take up construction of a bus stand but unfortunately, we have no land. The moment we secure the land, all the other things will be considered.

Sri K. ABDUL SUBHAN.—When the Hon. Minister for Labour had come to Tumkur, he had personally inspected one site at Balanakatte and given oral instructions to the Deputy Commissioner, Tumkur to recommend this piece of land. Will the Hon. Minister consider the question of constructing M.S.R.T.C. bus stand on that piece of land ?

†Sri AZEEZ SAIT.—As I have already stated, we have to secure a land. I have inspected the land no doubt, but certain formalities have to be observed. The moment all the formalities are observed, the question of estimates and sanction will have to be taken up.

Sri BAPU RAO PATIL.—Will the Minister finalise the formalities and take up construction of the bus stand on the piece of land mentioned, within two or three months ?

Sri AZEEZ SAIT.—As I have already stated, I am trying to secure a land. I have inspected that land but that again has to go through certain processes. The Hon. Member will bear with me that my answer 'No, No, No' has been converted into slightly 'yes'. So, he must be satisfied.

Sri T. M. MANJUNATH.—How many places have you seen ? Is the Government aware that it is on the National Highway and is near the capital City of the State ?

Sri AZEEZ SAIT.—Two or three places have been inspected. Government is aware that it is in the National Highway, and buses going to several parts of the country pass through Tumkur. The importance of Tumkur has been taken into consideration. The Technical Assistant, the Engineer, the Vice-Chairman and the General Manager will go into the details and recommend one of the two or three sites that have been inspected. The site most suited for the purpose will be selected. It is for the hon. Members to use their good offices with the Municipality and if they can get the Municipal bus stand, I will convert it into a beautiful Bus stand.

T. A. AND D. A. DRAWN BY JOINT DIRECTOR OF AGRICULTURE, MYSORE DIVISION

389. Sri N. S. GURUSIDDAPPA (Biligere).—Will the Minister for Agriculture and Forests be pleased to state :—

(a) the number of days in each month the Joint Director of Agriculture, Mysore Division has toured after assuming the charge as Joint Director;

(b) the amount of T. A. and D. A. claimed by the Joint Director in each month;

(c) the names of the places he visited in each month;

(d) the number of days he stayed in district head-quarter ?

Sri K. H. PATIL (Minister for Agriculture and Forests).-

(a) Details are furnished in Columns 1 and 2 to of the Statement placed on the Table of the House.*

(b) *Vide* Column 5 of the Statement placed on the Table of the House.*

(c) *Vide* Column 3 of the Statement placed on the Table of the House.*

(d) *Vide* Column 4 of the Statement placed on the Table of the house.*

ಶ್ರೀ ಎನ್. ಎಸ್. ಗುರುಸಿದ್ದಪ್ಪ.— ನಾನು ನೋಡಿದ ಪಟ್ಟಿಯಲ್ಲಿ ಈ ಜಾಯಿಂಟ್ ಡೈರೆಕ್ಟರವರು ತಿಂಗಳಿಗೆ ೨೦-೨೨ ದಿನಗಳು ಬರಿ ಟೂರಿಂಗಿನಲ್ಲೇ ಇದ್ದಾರೆ. ಆದರೆ ಇವರು ತಮ್ಮ ಪ್ರವಾಸ ಕಾಲದಲ್ಲಿ ರೈತರುಗಳನ್ನು ಭೆಟ್ಟಿಮಾಡಿ ಬೆಳೆಗಳನ್ನು ಪರೀಕ್ಷೆ ಮಾಡಿ ರೈತರ ಕಷ್ಟ ಸುಖಗಳನ್ನು ಅರಿತುಕೊಂಡು ಆ ಬಗ್ಗೆ ಸರ್ಕಾರಕ್ಕೇನಾದರೂ ವರದಿಯನ್ನು ಮಾಡಿದ್ದಾರೆಯೇ ?

†ಶ್ರೀ ಕೆ. ಎಚ್. ಪಾಟೀಲ.— ಅವರು ತಮ್ಮ ಪ್ರವಾಸ ಕಾಲದಲ್ಲಿ ಸರ್ಕಾರದವರ ಪರವಾಗಿ ರೈತರನ್ನು ಭೆಟ್ಟಿಮಾಡಿ ಅವರಿಗೆ ಅವಶ್ಯಕವಾದ ಸಲಹೆಗಳನ್ನು ಕೊಟ್ಟು ಅವರ ಕಷ್ಟ ಸುಖಗಳನ್ನು ಅರಿತುಕೊಂಡಿದ್ದಾರೆ. ಅವರ ಪ್ರವಾಸ ಕಾಲದಲ್ಲಿ ಅಂಥ ಪ್ರಾಮುಖ್ಯವಾದ ವಿಚಾರಗಳೇನಾದರೂ ಇದ್ದರೆ ಅವುಗಳನ್ನು ಡೈರೆಕ್ಟರವರು ಮಾತ್ರ ಸರ್ಕಾರಕ್ಕೆ ವರದಿ ಮಾಡುತ್ತಾರೆ.

ಶ್ರೀ ಎನ್. ಎಸ್. ಗುರುಸಿದ್ದಪ್ಪ.— ನಾನು ಕೇಳುತ್ತಿರುವುದು ಜಾಯಿಂಟ್ ಡೈರೆಕ್ಟರ ವಿಚಾರ ?

ಶ್ರೀ ಕೆ. ಎಚ್. ಪಾಟೀಲ.— ನಾನು ಹೇಳುತ್ತಿರುವುದು, ಜಾಯಿಂಟ್ ಡೈರೆಕ್ಟರು ಡೈರಕ್ಟರಿಗೆ ವರದಿ ಮಾಡಿದ್ದನ್ನು, ಡೈರೆಕ್ಟರು ಸರ್ಕಾರಕ್ಕೆ ವರದಿ ಮಾಡುತ್ತಾರೆಂದು ತಿಳಿಸಿದೆ.

ಶ್ರೀ ಎನ್. ಎಸ್. ಗುರುಸಿದ್ದಪ್ಪ.— ಹಾಗಾದರೆ ಅವರು ಸರ್ಕಾರಕ್ಕೆ ನಮ್ಮ ಜಿಲ್ಲೆಯಲ್ಲಿ ಇರತಕ್ಕ ಗೊಬ್ಬರದ ಅಭಾವ ಮತ್ತು ಅಲ್ಲಿ ಜೋಳದ ಬೆಳೆ ಹಾಳಾಗುತ್ತಿರುವುದರ ಬಗ್ಗೆ ಏನಾದರೂ ತಿಳಿಸಿದ್ದಾರೆಯೇ ?

ಶ್ರೀ ಕೆ. ಎಚ್. ಪಾಟೀಲ.— ಅಲ್ಲಿ ಕೆಲವು ಕಡೆ ಜೋಳದ ಬೆಳೆಗೆ ಕ್ರಿಮಿಕೀಟಗಳು ಬೀಳುತ್ತಿವೆ ಎಂಬ ವಿಚಾರವನ್ನು ತಿಳಿಸಿದ್ದಾರೆ. ಆದರೆ ಅವರು ನನಗೆ ಗೊಬ್ಬರದ ಅಭಾವದ ಬಗ್ಗೇನೂ ತಿಳಿಸಬೇಕಾಗಿಲ್ಲ. ಏಕೆಂದರೆ ಅಲ್ಲಿ ಅದರ ಅಭಾವ ಇದೆ. ಎಂಬುದು ಸ್ವತಃ ನನಗೇ ತಿಳಿದಿದೆ.

---

*Copy placed in the Mysore Legislature Library *vide* No. 19 / dated 27-9-73.

TERMINATION OF SERVICES OF PANCHAYAT SECRETARIES IN BIDAR DISTRICT

465. Sri BAPURAO PATIL (Aurad).—

Will the Minister for Community Development and Social Welfare be pleased to state :—

(a) whether the Village Panchayat Secretaries in Bidar District are serving as temporary Secretaries since last ten years;

(b) if so, on what pay scale they are serving;

(c) reasons for not making them permanent;

(d) whether Panchayat Secretaries are going to be discharged from service after the recruitment of the Village Accountants, without having taken any consideration of their services on mere pittance;

(e) whether Government would consider sympathetically the poor salary on which they served and their sad plight in which the work be placed after they are discharged from their services, at least on humanitarian grounds;

(f) whether Government have received representations dated 21st July 1972 and 25th September 1972 from the Union of Panchayat Secretaries in Bidar ?

Sri M. MALLIKARJUNASWAMY (Minister for Community Development and Social Welfare).—

(a) Yes.

(b) Rs. 50 consolidated pay per month.

(c) Appointment is purely temporary.

(d) Action is being taken to terminate the services of persons appointed temporarily as Panchayat Secretaries after giving reasonable notice.

(e) The matter is under consideration of Government

(f) No.

Sri BAPURAO PATIL.— With reference to (e), you have stated that the matter is under consideration of Govern-

ment. May I know how long the Government will take to finalise it ?

†Sri M. MALLIKARJUNASWAMY.— It will take some time.

Sri BAPURAO PATIL.— In answer to (f) Government have stated 'No', though they have received representations in this matter. Why is the Government denying the fact that they have received representations ?

Sri M. MALLIKARJUNASWAMY.— We have not received representations.

ಶ್ರೀ ಬಾಪೂಗೌಡ ರಾಯಪ್ಪ.— ಈಗಾಗಲೆ ಕೆಲವು ಪಂಚಾಯ್ತಿ ಸೆಕ್ರೆಟರಿಗಳನ್ನು ಕೆಲಸದಿಂದ ತೆಗೆದುಹಾಕಲಾಗಿದೆ. ಇನ್ನು ಕೆಲವರು ಹೈಕೋರ್ಟಿಗೆ ಹೋಗಿ ಸ್ಟೇ ಆರ್ಡರನ್ನು ತಂದಿದ್ದಾರೆ. ಸರ್ಕಾರದವರು ಆದಷ್ಟು ಬೇಗ ಇವರನ್ನು ಖಾಯಂ ಮಾಡುವುದಕ್ಕೆ ಒಂದು ತೀರ್ಮಾನ ತೆಗೆದುಕೊಳ್ಳುತ್ತಾರೆಯೇ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.— ಅವರನ್ನು ಖಾಯಂ ಮಾಡತಕ್ಕ ವಿಚಾರ ಸರ್ಕಾರದವರ ಗಮನದಲ್ಲಿಲ್ಲ. ಇವರೆಲ್ಲರನ್ನೂ ಹಿಂದೆ ಕೆಲಸಕ್ಕೆ ತೆಗೆದುಕೊಳ್ಳುವಾಗ ಲೋಕಲ್ ಬೋರ್ಡ್ ಆಂಡ್ ಪಂಚಾಯತ್ ರಾಜ್ ಆಕ್ಟ್ ಪ್ರಕಾರ ಇಲ್ಲಿ ಹೇಳಿರತಕ್ಕ ೧೪ ಕ್ಯಾಟಗರೀಸ್ ಆಫ್ ನೌಕರರಿಗೂ ಅವರಿಗೆ ಕೊಡತಕ್ಕ ಕೆಲಸಗಳು ಪೂರಾ ಹಂಗಾಮಿ ಕೆಲಸಗಳೆಂದೇ ಅವರಿಗೆ ಹುಕುಂ ಕೊಡಲಾಗಿದೆ. ಕೆಲವರೇನು ಹೈಕೋರ್ಟಿಗೆ ಹೋಗಿ ಸ್ಟೇ ಆರ್ಡರನ್ನು ತಂದಿದ್ದಾರೆ ಅದು ಕೇವಲ ಒಂದು ಟೆಕ್ನಿಕಲ್ ಗ್ರೌಂಡ್ ಮೇಲೆ ಕೊಟ್ಟಿದ್ದಾಗಿದೆ. ಆದರಲ್ಲಿ ಇವರನ್ನು ಕೆಲಸದಿಂದ ತೆಗೆಯಬೇಕಾಗಿದ್ದರೆ ಒಂದು ತಿಂಗಳ ನೋಟೀಸನ್ನು ಕೊಟ್ಟು ಕೆಲಸದಿಂದ ತೆಗೆಯಬೇಕೆಂದು ಹೈಕೋರ್ಟ್ ಆರ್ಡರಲ್ಲಿ ಹೇಳಿದೆ.

Sri N. B. SIRDESAI.— With reference to answer (e), may I know whether the Deputy Commissioner, Bidar District, will be directed to make recruitment having due regard to G. O No. DPC-72 ET-17-3-71 regarding absorbing in the cadre of Village Accountants and Panchayet Secretaties and the recent G. O. No. DPC -0 ET 22-/13-6-72 because the Deputy Commissioner, Belgaum District has not complied with this matter ?

Sri M. MALLIKARJUNASWAMY.— Directions have already been issued to the Deputy Commissioners by my Department as well as the Revenue Department.

ಶ್ರೀ ಎಂ. ಬಿ. ರಾಮಸ್ವಾಮಿ — ಬಹುಭಾಗ ವಿಲೇಜ್ ಅಕೌಂಟೆಂಟ್ಸ್ ಎಲ್ಲೆಲ್ಲಿ ಕೆಲಸ ಮಾಡಬೇಕೋ ಅಲ್ಲಿ ಕೆಲಸ ಮಾಡುವುದನ್ನು ಬಿಟ್ಟು ಅವರಲ್ಲಿ ಅನೇಕರು ಹೆಡ್ ಕ್ವಾರ್ಟರಗಳಲ್ಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಇದರಿಂದ ಅನೇಕ ಜನ ರೈತರಿಗೆ ಅವರಿಂದ ತುಂಬಾ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಅಧ್ಯಕ್ಷರು.— ಬಿದರ್ ಜಿಲ್ಲೆಯಲ್ಲಿ ಆಗಿರುವುದು ತಮ್ಮ ಗಮನಕ್ಕೆ ಹೇಗೆ ಬಂದಿದೆ?

ಶ್ರೀ ಎಂ. ಬಿ ರಾಮಸ್ವಾಮಿ,— ಇದು ಬಹಳ ಮುಖ್ಯವಾದಂಥ ಪ್ರಶ್ನೆ. ಅನೇಕ ಕಡೆಗಳಲ್ಲಿ ಪಂಚಾಯತಿ ಸೆಕ್ರೆಟರಿಗಳನ್ನು ತೆಗೆದಿದ್ದಾರೆ. ಅದಕ್ಕಾಗಿ ನಾನು ಮಂತ್ರಿಗಳಿಗೆ ಪ್ರಶ್ನೆಮಾಡಿದ್ದು.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.— ಈ ಪ್ರಶ್ನೆಯನ್ನು ಅವರು ರೆವಿನ್ಯೂ ಮಂತ್ರಿಗಳಿಗೆ ಹಾಕಲಿ.

UTILISATION OF RIG MACHINES FOR DIGGING WELLS IN GULBARGA DISTRICT

203. Sri PRABHAKAR TELKAR (Kalagi).—

Will the Chief Minister be pleased to state.—

(a) the number of Rigs including high speed Rigs working in Gulbarga district ;

(b) in view of the improved conditions in the supply of drinking water, whether Government intend to utilise these rig machines to dig wells in fields for irrigation purpose ;

(c) whether there is any programme of digging wells by these rigs in the fields ?

Sri H. M. CHANNABASAPPA (Minister for Public Works and Electricity) [on behalf of Sri D. DEVARAJ URS (Chief Minister)].—

(a) Six (6).
(b) No.
(c) No.

Sri PRABHAKAR TELKAR.— You have said six rigs are working in Gulbarga District at present. I want to know whether they are really working in Gulbarga District ?

† Sri H. M. CHANNABASAPPA.—Yes.

Sri PRABHAKAR TELKAR.— If not, what steps will Government take to utilise these rigs for the purpose of irrigation?

Sri H. M. CHANNABASAPPA.— When I said YES: to the first question, the question 'If Not' does not arise.

Sri PRABHAKAR TELKAR.— My question is: whether these six rigs are working in Gulbarga district?

Sri H. M. CHANNABASAPPA — I said YES: for drinking water wells.

Sri BAPU RAO HULSURKAR.— Whether the Government has any plans to dig bore-wells in the field of agriculture in view of what is done in other States?

Sri H. M. CHANNABASAPPA.— We have been thinking in terms of providing Bore-wells for irrigation and Govt. have appointed a committee to go into the question of lift irrigation in general including the exploitation of the under-ground water by rig wells, and the report is expected to be submitted in the course of one or two or three weeks. After receiving that report, Government is thinking in terms of getting up an organisation which would undertake utilisation of ground water for irrigation purposes by providing bore-wells in individual lands; and that question will arise after the agency is appointed. Government is considering and thinking in that direction.

IMPORT OF C. R. G. O. STEEL BY N. G. E. F.

212. Sri P. M. BANGI (Jamkhandi).—

Will the Minister for Industries be pleased to state.—

(a) the quantity of C. R. G. O. steel imported from foreign countries since 1970 upto July 1973, by N. G. E. F.;

(b) the purchase price of this steel imported per ton including transport, octroi and other charges;

(c) the quantum of this steel allegedly treated as scrap by the concerned authorities;

(d) the reasons for treating large quantity of this scarce imported material as scrap and whether this steel was examined and certified by Deputy General Manager and General Manager and found to be scrap;

(e) whether this scrap was sold by public auction or by negotiation with a firm at Bombay or with any Company or person; if so, the name of the person or Company and the rate at which it is sold;

(f) the efforts made by N. G. E. F. to use this alleged scrap of scrace and imported material (C. R. G. O. Steel) by cutting in to required size before declaring it as scrap;

(g) the reasons for not selling this alleged scrap to the highest bidder in public auction;

(h) the amount of loss sustained by N. G. E. F. by this scale of steel as scrap?

Sri S. M. KRISHNA (Minister of Industries).—

(*a*)

Year	*Quantity (in M. T.)*
January to December 1970	574.866
January to December 1971	882.859
January to December 1972	1421.044
January to July 1973	248.216
Total	3126.985

(*b*) *Grade 41*

Year	*Average price at N. G. E. F.* Rs.
January to December 1970	6,000 M. T.
January to December 1971	6,120 M. T.
January to December 1972	6,000 M. T.
January to July 1973	6,400 M. T.
	(approximately)

Grade 46

(*b*) Year	Average price at N. G. E. F. Rs.
January to December 1970	5,500 M. T.
January to December 1971	—
January to December 1972	6,200 M. T.
January to December 1973	—

(No octroi is payable)

(*c*) The scrap generated since 1970 during course of conversion of C. R. G. O. steel sheets into transformer laminations in the transformer core laminations plant was approximately 50 M. T. in the size noted below :—

Width 25 to 100 mm.

Length 300 to 1000 mm.

The very process of manufacture involves scrap to the extent of 8 to 10 per cent. No steel held in stock has been declared as scrap.

(*d*) The scrap cited above arises invariably during the manufacture of transformer laminations out of the C.R.G.O. material and this is the accumulated quantity since March 1970 when N.G.E.F. started manufacturing laminations. This scrap has been examined and certified by the Works Manager of the transformer Factory as required under the regulations of the Company. So far as certification of scrap in the normal course of manufacture is concerned, the decision lies with the factory Manager concerned. Such matters do not normally come up before Deputy General Manager and General Manager so long as they are within the norms fixed.

(*e*) An open tender was published in the newspapers on 11 th March 1973 for the disposal of various kinds of surplus and scrap items, and in the tender, the quantity of CRGO Steel scrap (useful) was also included. Only one valid offer was received from M/s Indian Steel Corporation of Bombay, who quoted Rs. 3 per Kg. for this item. This

offer was not accepted and as such the sale was deferred. Finally after negotiations, they were sold to M/s Sahney Steel and Press Work Private Limited of Hyderabad. and M/s Paradise Electronic Industries of Bombay at Rs. 3,250 M. T. The price is higher than the highest offer from the notified tender.

(*f*) A decision to dispose of these left-overs and scrap was taken only after considering the possibilities of its utilisation by the Company.

(*g*) The reply to clause (*e*) holds good to this clause.

(*h*) No loss was sustained by the Company.

ಶ್ರೀ ಪಿ ಎಂ. ಬಾಂಗಿ — (ಸಿ) ಪ್ರಶ್ನೆಗೆ ಉತ್ತರ ಕೊಟ್ಟಿರುವುದನ್ನು ನೋಡಿದರೆ, (ಅ) ಪ್ರಶ್ನೆಗೆ ಉತ್ತರವಾಗಿ ಅದರ ಪರ್ಚೇಜ್ ೩ ಸಾವಿರ ೧೨೬ ಟನ್ನುಗಳು ಚಿಲ್ಲರೆ ಎಂದು ಹೇಳುತ್ತೀರಿ ಅದರಲ್ಲಿ ಸ್ಕ್ರೈಜ್ ೫೦ ಎಂ. ಟಿ. ಎಂದು ಬೇರೆ ಹೇಳುತ್ತೀರಿ. ಇದರ ಪ್ರಕಾರ ಲೆಕ್ಕ ಸರಿ ಹೋಗುತ್ತದೆಯೇ ? ಸ್ಕ್ರ್ಯಾಪ್ ಶೇಕಡ ೮ ಅಥವಾ ೧೦ ರಷ್ಟು ಆಗುತ್ತದೆಂದು ಬೇರೆ ಅದರಲ್ಲಿ ಹೇಳಿದ್ದೀರಿ ? ಇದು ಹೇಗೆ ?

†ಶ್ರೀ ಎಸ್. ಎಂ. ಕೃಷ್ಣ.— ಈ ಕಾರ್ಖಾನೆಯಲ್ಲಿ ನಾನಾ ವಿಧವಾದಂಥ ಸ್ಕ್ರಾಪಗಳಿವೆ. ಅವು ಅಲ್ಲಿ ಸಿಗುತ್ತವೆ. ಆದರೆ ಮಾನ್ಯ ಸದಸ್ಯರು ಹೇಳಿದಂಥ ಇಂಪೋರ್ಟೆಡ್ ಸ್ಕ್ರಾಪ್‌ಗಳು ಏನಿವೆಯೋ ಅದರ ಬಗ್ಗೆ ಇಲ್ಲಿ ಅಂಕಿ ಅಂಶಗಳನು ಕೊಟ್ಟಿದ್ದೇವೆ.

ಶ್ರೀ ಪಿ. ಎಂ. ಬಾಂಗಿ.— (ಇ) ಪ್ರಶ್ನೆಗೆ ಉತ್ತರವಾಗಿ ಟೆಂಡರ್ ಕರೆದ ಮೇಲೆ ಒಂದು ಕೆ. ಜಿ. ಗೆ ೩ ರೂಪಾಯಿಯಂತೆ ಒಂದು ಆಫರ್ ಬಂತು. ಅದನ್ನು ಸ್ಟೇ ಓವರ್ ಮಾಡಿ ಪುನ: ನೆಗೋಷಿಯೇಷನ್ಸ್ ಪೂರ್ತಿಯಾದಮೇಲೆ ಈ ಸ್ಕ್ರ್ಯಾಪಗಳ ಬಗ್ಗೆ ಟೆಂಡರನ್ನು ಏಕೆ ಪುನಃ ಕಾಲಫಾರ್ ಮಾಡಲಿಲ್ಲ ?

ಶ್ರೀ ಎಸ್. ಎಂ. ಕೃಷ್ಣ.— ಒಂದು ಕೆ. ಜಿ. ಗೆ ೩ ರೂಪಾಯಿನಂತೆ ಅದು ಒಂದು ಮೆಟ್ರಿಕ್ ಟನ್‌ಗೆ ೩೦೨೦ ರೂಪಾಯಿಗಳು ಆಗುತ್ತಿತ್ತು. ಅದು ಲಾಭ ದಾಯಕ ಬೆಲೆಯಲ್ಲವೆಂದು ಅಲ್ಲಿನ ಮ್ಯಾನೇಜಮೆಂಟನವರ ಅಭಿಪ್ರಾಯ. ಆದ್ದರಿಂದ ಅವರು ಇನ್ನೂ ಕೆಲವು ಫರ್ಮ್ಸ್ ಜೊತೆಯಲ್ಲಿ ವಿವರವಾಗಿ ಆಲೋಚನೆ ಮಾಡಿ ಕೊನೆಗೆ ಒಂದು ಮೆಟ್ರಿಕ್ ಟನ್ನಿಗೆ ೩೨೫೫ ರೂಪಾಯಿಗಳಷ್ಟು ಬೆಲೆಯನ್ನು ನಿಗದಿ ಮಾಡಿ ಮಾರಿದ್ದಾರೆ.

ಶ್ರೀ ಪಿ. ಎಂ. ಬಾಂಗಿ.— (ಎಫ್) ಪ್ರಶ್ನೆಗೆ ಉತ್ತರವಾಗಿ ಹೇಳಿರುವಂತೆ ಕಂಪನಿಯವರು ಇದರ ಬಗ್ಗೆ ಒಂದು ಅಭಿಪ್ರಾಯವನ್ನು ತೆಗೆದುಕೊಳ್ಳುವ ಪೂರ್ವದಲ್ಲಿ ಏನೇನು ಎಫರ್ಟ್ಸ್ ಮಾಡಿದ್ದಾರೆಂಬ ಬಗ್ಗೆ ವಿವರಗಳನ್ನು ಹೇಳುತ್ತೀರಾ ?

ಪ್ರಾಪ್ತಿ ಕ್ರಮಾಂಕ Accession No. 4901
ದಿನಾಂಕ Date

ಶ್ರೀ ಎಸ್. ಎಂ. ಕೃಷ್ಣ.— ಟ್ರಾನ್ಸ್‌ಫಾರ್ಮರ್ ಲ್ಯಾಮಿನೇಷನ್ಸ್ ಮಾಡುವ ಕಾಲದಲ್ಲಿ ಸಿ. ಆರ್. ಜಿ. ಒ ಸ್ಟೀಲ್ ಷೀಟ್‌ಗಳನ್ನು ಅನೇಕ ವಿಧಗಳ ಸೈಜಿಗೆ ಕಟ್ ಮಾಡಿ ಅನಂತರ ಅವನ್ನು ಉಪಯೋಗಿಸುತ್ತಾರೆ. ಆ ಸಂದರ್ಭದಲ್ಲಿ ಸ್ಕ್ರಾಪ್ ಆಗುವುದು ಸಹಜವಾಗುತ್ತದೆ. ಅದೂ ಅಲ್ಲದೆ ಈ ಕಾರ್ಖಾನೆಯಲ್ಲಿ ಅಲ್ಲಿನ ಮ್ಯಾನೇಜರ್ಸ್ ಯಾವ ಸ್ಕ್ರಾಪನ್ನು ಉಪಯೋಗಿಸಬಹುದು, ಯಾವ್ಯಾವುದು ಉಪಯೋಗಿಸಲಿಕ್ಕೆ ಅರ್ಹವಾಗಿಲ್ಲವೆಂಬುದನ್ನು ಅವರೇ ನಿಗದಿ ಮಾಡುತ್ತಾರೆ. ಆ ತೀರ್ಮಾನದ ಪ್ರಕಾರ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ — (ಡಿ) ಪ್ರಶ್ನೆಗೆ ಉತ್ತರ ಹೇಳಿರುವುದನ್ನು ನೋಡಿದರೆ, ಇಂತಹ ಒಂದು ಪ್ರಮುಖವಾದ ವಿಚಾರದಲ್ಲಿ ಈ ಕಾರ್ಖಾನೆಯ ಕಚ್ಚಾ ವಸ್ತುಗಳು ಏನಿವೆಯೋ ಅವನ್ನು ಮಾರಾಟ ಮಾಡುವ ಸಂದರ್ಭದಲ್ಲಿ ಬಹು ಮುಖ್ಯವಾಗಿ ಅಲ್ಲಿನ ಜನರಲ್ ಮ್ಯಾನೇಜರ್ ಅವರ ಅವಗಾಹನೆಗೆ ತರುವುದು ಸೂಕ್ತವಲ್ಲವೇ ? ಆ ರೀತಿಯಾಗಿ ಅವರ ಗಮನಕ್ಕೆ ತಾರದೆಯೇ ಅವನ್ನು ಮಾರಾಟ ಮಾಡುವುದರಿಂದ ದುರುಪಯೋಗಕ್ಕೆ ಕಾರಣವಾಗುವುದಿಲ್ಲವೇ ?

ಶ್ರೀ ಎಸ್. ಎಂ. ಕೃಷ್ಣ.— ಇಂತಹ ನವೀನ ಕಾಲದಲ್ಲಿ ಇಲ್ಲಿನ ಮ್ಯಾನೇಜಮೆಂಟನ್ನು ಡಿ–ಸೆಂಟ್ರಲೈಜ್ ಮಾಡಿ ಅಲ್ಲಿನ ಎಲ್ಲ ಅಧಿಕಾರಗಳನ್ನೂ ಕೇವಲ ಒಬ್ಬ ಜನರಲ್ ಮ್ಯಾನೇಜರ್ ಅಥವಾ ಮ್ಯಾನೇಜಿಂಗ್ ಡೈರೆಕ್ಟರ್ ಅವರಿಗೆ ಕೇಂದ್ರೀಕೃತ ಮಾಡುವದನ್ನು ನಮಗೆಲ್ಲರಿಗಿಂತಲೂ ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರೇ ಹೆಚ್ಚಿಗೆ ವಿರೋಧಿಸುತ್ತಾರೆಂದು ನಾನು ತಿಳಿದಿದ್ದೇನೆ. ಆದ್ದರಿಂದ ಅಲ್ಲಿನ ಫ್ಯಾಕ್ಟರಿ ಮ್ಯಾನೇಜರ ಅವರಿಗೆ ಅದರ ಒಂದು ಜವಾಬ್ದಾರಿ ಜಾಸ್ತಿಯಾಗಿರುತ್ತದೆ ಅದಕ್ಕಾಗಿ ಅವರಿಗೆ ಇನ್ನೂ ಹೆಚ್ಚಿನ ಅಧಿಕಾರವನ್ನು ಕೊಡಬೇಕೆಂಬುದನ್ನು ಮಾನ್ಯ ಸದಸ್ಯರು ಒಪ್ಪುತ್ತಾರೆಂದು ನಾನು ತಿಳಿದಿದ್ದೇನೆ. ಆ ಕಾರ್ಖಾನೆಯ ಮ್ಯಾನೇಜರ ಅವರೂ ಕೂಡ ಬಹಳ ದೊಡ್ಡ ಜವಾಬ್ದಾರಿಯುಳ್ಳ ಅಧಿಕಾರಿಗಳು. ಹೆಚ್ಚಿನ ಸಂಬಳವನ್ನು ಪಡೆಯುತ್ತಿದ್ದಾರೆ. ಆದ್ದರಿಂದ ಇದರಲ್ಲಿ ಒಂದು ಪ್ರೊಸೀಜರನ್ನು ಇವಾಲ್ವ್ ಮಾಡಿದ್ದಾಗಿದೆ.

LOCATING ALL GOVERNMENT OFFICES IN MANGALORE CITY

303 Smt. ADDY SALDANHA (Mangalore).— Will the Minister for Public Works and Electricity be pleased to state.—

(a) whether there is any proposal before Government to locate all the Government Offices in the city areas of Mangalore City, South Kanara District;

(b) if so, the steps the Government has taken so far to locate the Offices in Mangalore City ;

(c) the latest position with regard to the location of Government offices in Mangalore City ?

† Sri H.M. CHANNABASAPPA (Minister for Public Works and Electricity).—

(a) Yes.

(b) Construction of Multistoried Building I Stage in Executive Engineer's Office Compound, Mangalore at an estimated cost of Rs. 25 lakhs, is under consideration.

(c) Many Government Offices are now located in private buildings.

Smt. ADDY SALDANHA.— Sir, when was the estimate sanctioned; and at what stage it is and how long will it take to sanction the estimate and comple the work ?

Sri H.M. CHANNABASAPPA : Answer to the first question is ; no estimate has been sanctioned.

Smt. ADDY SALDANHA.—You have given here as Rs. 25 laksh.

Sri H. M. CHANNABASAPPA.— That is the estimate prepared for the first stage.

Smt. ADDY SALDANHA ; Has it come to the notice of the Government that for want of sufficient building, the offices are located in congested places and locations ?

Sri H. M. CHANNABASAPPA.— I do concede that in Mangalore offices are being run in rented buildings and there is need for providing Government building for these offices. The question is one of funds and immediately funds are available and the financial position is eased, we will consider the question.

Smt. ADDY SALDANHA.— Will the Government give top-priority to this proposal ?

Sri H. M. CHANNABASAPPA ; I could not straightaway tell you about the top-priority. Priority is always for productive purposes.

1–30 P. M.

REPRESENTATION FOR BORE WELLS IN DAVANAGERE TALUK

375. Smt. NAGAMMA C. KESHAVAMURTHY (Davanagere).—Will the Minister for Community Development and Social Welfare be pleased to state :—

(a) the number of bore wells sunk in the Chitradurga District since the last three years (Talukwise details may be furnished) ;

(b) whether the Government has received any representation regarding sinking of more bore wells in Davanagere taluk ;

(c) if so, the action taken in the matter ?

Sri M. MALLIKARJUNASWAMY (Minister for Community Development and Social Welfare).—

(a) No. 642.			1971–72	1972–73	1973–74
1.	Chitradurga	(5)	1	4	...
2.	Challakere	(17)	17	...	...
3.	Molkalmuru	(18)	9	9	...
4.	Holalkere	(6)	...	5	1
5.	Hiriyur	(298)	277	21	...
6.	Hosadurga	(265)	231	34	...
7.	Davanagere	(2)	1	1	...
8.	Harihar		...	...	...
9.	Jagalur	(31)	13	18	...
			550	91	1

(b) No.

(c) Does not arise.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ದಾವಣಗೆರೆ ತಾಲ್ಲೂಕಿಗೆ ಈಗ್ಗೆ ೩ ವರ್ಷಗಳ ಹಿಂದೆ ಒಂದು ಬೋರ್‌ವೆಲ್ ಕೊಟ್ಟಿದ್ದರು. ಈಗ ನಮ್ಮ ದಾವಣಗೆರೆ ತಾಲ್ಲೂಕಿನಲ್ಲಿ ೯ ಹಳ್ಳಿಗಳಲ್ಲಿ ನೀರಿಗೆ ಬಹಳ ಕಷ್ಟವಾಗಿದೆ. ಅಲ್ಲಿರತಕ್ಕ ಬಾವಿಗಳು ತುಂಬಾ ಹಳೆಯ ಬಾವಿಗಳು. ಆ ಬಾವಿಗಳನ್ನು ರೀಬೋರ್ ಮಾಡುವುದಕ್ಕೆ ಪ್ರಯತ್ನ ಮಾಡಿದಾಗ ಅವುಗಳಲ್ಲಿ ಸಾಕಷ್ಟು ನೀರು ಸಿಕ್ಕಲಿಲ್ಲ. ಹೊಸ ಬಾವಿಗಳನ್ನು

ತೆಗೆಯುವುದಕ್ಕೆ ಪ್ರಯತ್ನ ಮಾಡಿದಾಗ ಸುಮಾರು ೮೦–೯೦ ಅಡಿ ಆಳ ತೋಡಿದರೂ ವಾಟರ್‌ಲೆವೆಲ್ ತುಂಬಾ ಕೆಳಗೆ ಇರುವುದರಿಂದ ನೀರು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ. ಆದ್ದರಿಂದ ಈ ೯ ಹಳ್ಳಿಗಳಲ್ಲಿಯೂ ಸರ್ಕಾರದವರು ಬೋರ್‌ವೆಲ್ ತೆಗೆಸಿಕೊಟ್ಟು ಅಲ್ಲಿ ನೀರಿನ ಪರಿಸ್ಥಿತಿಯನ್ನು ಸುಧಾರಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

†ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ಅಲ್ಲಿ ೯ ಹಳ್ಳಿಗಳಲ್ಲಿ ಅಲ್ಲ, ೧೭ ಹಳ್ಳಿಗಳಲ್ಲಿ ನೀರಿನ ತೊಂದರೆ ಇದೆ ಎಂದು ಆ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮೀಷನರರಿಂದ ಪ್ರಪೋಜಲ್ಸ್ ಬಂದಿದೆ. ಅದನ್ನು ತೆಗೆದುಕೊಳ್ಳಬೇಕೆಂದು ನಾವು ತಿಳಿಸಿದ್ದೇವೆ.

RESTORATION OF TANKS OF BEERANAHALLY GOWRAHALLY IN HIRIYUR TALUK

392. Sri V.MASIYAPPA (Challakere).—Will the Minister for Public Works and Elecrticity be pleased to state :—

(a) whether the estimates for the restoration of the Tanks of Beeranahally and Gowrahally in Hiriyur Taluk have been sanctioned by the Govarnment ;

(b) if so, when tha Government would start the works ?

Sri H. M. CHANNABASAPPA (Minister for Public Works and Electricity).—

(a) No.

(b) This does not arise in view of reply to clause (a) above.

Sri V. MASIYAPPA.—Are there any representations made to Government requesting for increasing the capacity of the tanks by effecting improvements and bring in additional atchkat under this tanks ?

†Sri H. M. CHANNABASAPPA.—Representation is received from the Hon. Member.

Sri V.MASIYAPPA.—Will the Government consider examining the pssibilities of geting up estimates and sanction the projects ?

Sri H. M. CHANNABASAPPA.—In the case of Beeranahally Tank there is some surplus water according to the

present indication. The Government will examine the question of utilising the surplus water.

MADAM SPEAKER.—Sri H. G. Channappa and Sri K. Prabhaker are absent. The questions are over.

Questions for Answers on the Day (but not taken up)

CONSTRUCTION OF HOUSES UNDER RURAL HOUSING SCHEME

332. Sri H.G.CHANNAPPA (Magadi).—Will the Minister for Municipal Administration be pleased to state.—

(a) whether it is not a fact that Government have decided to construct and allot small houses free of cost under Rural Housing Scheme.

(b) whether those houses are sufficient for a family.

(c) for how many years the materials used for construction of these houses will last.

(d) whether Government is aware that these houses can last for only 2 or 3 years.

(e) whether it is possible for the Government to construct houses which will last for many more years instead of constructing such houses?

Sri B.BASAVALINGAPPA (Minister for Municipal Administration).—

(a) No.

(b) Does not arise.

(c) Does not arise.

(d) Does not arise.

(e) Does not arise.

CONSTRUCTION OF A MIDDLE SCHOOL BUILDING AT VARTHUR

361. Sri K. PRABHAKAR (Varthur) —Will the Minister for Education be pleased to state.—

(a) since how long the question of constructing the Middle School building at Varthur is pending after a request for the same was made by the people of Varthur.

(b) the amount of the peoples' contribution paid by the public in this case.

(c) the present nature of its pendency ?

Sri A. R. BADARINARAYANA (Minister for Education).—

(a) Since 1963.

(b) Rs. 3,000.

(c) The revised estimate of Rs. 82,000 since received is being examined as to how to bridge the gap between the donation and the total cost of the estimate.

CALLING ATTENTION TO MATTERS OF URGENT PUBLIC IMPORTANCE.

(i) Re : Out break of Cholera epidemic in Hassan District.

Sri H. S. SIDDAPPA (Arsikere).— I call the attention of the Minister for Health to the out break of Cholera epidemic in Hassan District.

Sri H. SIDDAVEERAPPA (Minister for Health).— Sir I make the following Statement :

The incidence of Cholera in Hassan District was first reported on 13th May 1973 and the last case of attack was reported on 27th August 1973. No cases are reported after 27th August 1973.

During this period there were 76 attacks and 13 deaths due to Cholera and attacks and 10 deaths due to Gastro-enterities in 16 Villages and 2 Towns of 5 Taluks. The 5 taluks affected are Hassan, Sakleshpur, Alur, Arsikere and

Holenarasipur. The District Health & Family Planning Officer, Hassan has taken necessary precausionary measures to check the spread of the infection. One Health Supervisor (Gazetted) from the Directorate of Health & Family Planning Services was also deputed to Holenarasipur to take up containment measures such as Chlorination of wells and water sources. A total number of 99,803 A. C. inoculations have been done in the 5 taluks of District. Prompt treatment was also arrang d in the Primary Health Centres Dispensaries and District Hospital to be given to infected persons and sufficient drugs were also supplied.

The District Health & Family Planning Officer, Hassan has also taken action through the Deputy Commissioner, Hassan, to notify the areas and also taken action for the closure of Hotels, Cinemas, Sweetmeat Stalls, Cutt fruits, Eating Houses, etc. All containment measures are under progress and the situation is under control.

ಶ್ರೀ ಎಚ್. ಎಸ್. ಸಿದ್ದಪ್ಪ —ಸ್ವಾಮಿ ಅರಸೀಕೆರೆ ತಾಲ್ಲೂಕಿನಲ್ಲಿ ಯಾವ ಯಾವ ಗ್ರಾಮಗಳಲ್ಲಿ ಕಾಲರಾ ರೋಗ ತಗುಲಿತ್ತು;. ಆ ರೀತಿ ಕಾಲರಾ ರೋಗ ತಗುಲಿದ ಗ್ರಾಮಗಳಲ್ಲಿ ಕಾಲರಾದಿಂದ ಸತ್ತವರು ಎಷ್ಟು ಜನ ಮತ್ತು ಗ್ಯಾಸ್ಟ್ರೋ ಎಂಟರಿಟೀಸಿಂದ ಸತ್ತವರು ಎಷ್ಟು ಜನ ಎಂಬುದನ್ನು ಹೇಳುತ್ತೀರಾ ?

Sri SIDDAVEERAPPA.—I am sorry Madam, those details are not with me. If the Hon. Member desires, I will supply the information.

ಶ್ರೀ ಎಚ್. ಎಸ್. ಸಿದ್ದಪ್ಪ.—ಆರೋಗ್ಯ ಇಲಾಖೆಯವರು ತಾವು ಹೇಳಿದ ಹಾಗೆ ಮುಂಜಾಗರೂಕತೆ ಕ್ರಮ ತೆಗೆದುಕೊಳ್ಳುವುದಕ್ಕೆ ಮುಂಚೆ ಇದನ್ನು ಡೆಪ್ಯುಟಿ ಕಮೀಷನರು ಕಾಲರಾ ಏರಿಯಾ ಎಂದು ನೋಟಿಫೈ ಮಾಡಿದ ೮ ದಿವಸಗಳ ಮೇಲೆ ಅಲ್ಲಿಯ ಜನಗಳಿಗೆ ಡಾಕ್ಟರರು ಎ ಸಿ. ಇನಾಕ್ಯುಲೇಷನ್ ಕೊಟ್ಟಿದ್ದಾರೆಂಬುದು ತಮ್ಮ ಗಮನಕ್ಕೆ ಬಂದಿದೆಯೋ ? ಮತ್ತು ಅವರು ಇನಾಕ್ಯುಲೇಷನ್ ಕೊಡುವ ವೇಳೆಗೆ ಆಗಲೇ ಕೆಲವು ಜನ ಸತ್ತು ಹೋಗಿದ್ದರು ಎಂಬುದು ತಮ್ಮ ಗಮನಕ್ಕೆ ಬಂದಿದೆಯೋ ?

ಶ್ರೀ ಎಚ್. ಸಿದ್ದವೀರಪ್ಪ.—ಅದು ನನ್ನ ಗಮನಕ್ಕೆ ಬಂದಿಲ್ಲ. ಆ ರೀತಿ ಕಾಲರಾ ಔಟ್‌ಬ್ರೇಕ್ ಆಗಿ ಅದು ಆಫೀಸರುಗಳ ಗಮನಕ್ಕೆ ಬಂದ ಮೇಲೆ ತಕ್ಷಣ ಕಂಟೈನ್‌ಮೆಂಟ್ ಮೆಜರ್ಸ್ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದಾರೆ. ನನಗೆ

ಬಂದಿರುವ ವರದಿಯ ಪ್ರಕಾರ ಅರಸೀಕೆರೆಯ ತಾಲ್ಲೂಕಿನಲ್ಲಿ ೨ ಗ್ರಾಮಗಳಲ್ಲಿ ಕಾಲರಾ ಉಂಟಾಗಿತ್ತು ಎಂದು ವರದಿ ಬಂದಿದೆ. ಆ ಗ್ರಾಮಗಳ ಹೆಸರು ಇಲ್ಲ.

ಶ್ರೀ ಎಚ್. ಎಸ್. ಸಿದ್ದಪ್ಪ.—ಕಾಲರಾ ಅಟ್ಯಾಕ್ ಆದ ಬಗ್ಗೆ ಈ ಸದನವಲ್ಲಿ ಉತ್ತರವನ್ನು ಹೇಳಬೇಕಾದರೆ ಅಧಿಕಾರಿಗಳು ಜವಾಬ್ದಾರಿಯಿಂದ ಇಂತಿಂಥಾ ಹಳ್ಳಿಯಲ್ಲಿ ಕಾಲರಾ ಅಟ್ಯಾಕ್ ಆಗಿತ್ತು ಎಂದು ಹಳ್ಳಿಗಳ ಹೆಸರುಗಳನ್ನು ತಮಗೆ ವರದಿ ಮಾಡದೇ ಇರುವುದು ಸರಿಯೇ ?

ಶ್ರೀ ಎಚ್. ಸಿದ್ದವೀರಪ್ಪ —ಇನ್ನು ಮುಂದೆ ಇಂಥಾ ಸಂದರ್ಭದಲ್ಲಿ ಕಾಲರಾ ಆದಾಗ ಆ ಬಗ್ಗೆ ವರದಿಯನ್ನು ಸರ್ಕಾರಕ್ಕೆ ಕಳುಹಿಸಬೇಕಾದರೆ ಯಾವ ಯಾವ ಊರಿನಲ್ಲಿ ಎಷ್ಟು ಜನ ಸತ್ತರು, ಆ ಪೈಕಿ ಗಂಡಸರು ಎಷ್ಟು ಜನ, ಹೆಂಗಸರು ಎಷ್ಟು ಜನ ಎಂಬುದನ್ನು ಬರೆದು ಕಳುಹಿಸಬೇಕು ಎಂದು ಹೇಳುತ್ತೇನೆ.

(ii) Re : Non-remittance of the Insurance Premia collected by the authorities of D.Banumaiah's College from their employees.

Sri KAGODU THIMMAPPA (Sagar).—I call the attention of the Minister for Education to the non-remittance of the Insurance Premia collected by the authorties of D. Banumaiah's College from their employees.

Sri A. R. BADARINARAYANA (Minister for Education).—

I make the following Statement :

The Secretary, D. Banumaiah's College Staff Association, Mysore has complained that the Insurance premium of the staff of D. Banumaiah's College, Mysore deducted from their salary from August 1972 till May 1973, has not been paid to the Life Insurance Corporation, resulting in considerable inconvenience to the staff members. However it is subsequently learnt that the premium due upto the end of December, 1972 has been remitted to the Life Insurance Corporation by the College authorities. In the meantime, the insurance policies of the staff members lapsed and the Life Insurance Corporation authorities considered the non-remitance of the premium in time as temporary mis-appropriation of Life Insurance Corporation funds. However, on an assurance given by the Principal, the Life Insurance Corporation authorities, seem to have agreed to accept the premiums collected from January 1973 to May 1973 subject to the following conditions:

i) Premium collected form January 1973 to May 1973 should b remitted before 30-6-1973.

ii) Premium collected from June 1973 onwards should be remitted before 10th of the next month.

iii) Assurance from the Principal to the effect that there would be no further delay in remitting the premium.

2. The Director of Collegiate Education has further reported in this behalf that as per the intimation received from the college authorities, the insurance-premia from January 1973 to July 1973 has been paid to the Life Insurance Corporation by means of cheques on Vijaya Bank as detailed below and the premium demand list for the month of August 1973 is not yet received in the College from the Life Insurance Corporation.

	Month	Amount of Premium	Cheque date
1)	January 1973 to April 1973	Rs. 13,624,-06	19-6-1973
2)	May, 1973	Rs. 3,406-69	26-6-1973
3)	June, 1973	Rs. 3,377-41	10-7-1973
4)	July, 1973	Rs. 3,395-62	14-8-1973
5)	August, 1973	Demand list not yet received in the college from Life Insurance Corporation.	

ಶ್ರೀ ಕಾಗೋಡು ತಿಮ್ಮಪ್ಪ.— ತಮ್ಮ ಹೇಳಿಕೆಯಲ್ಲಿ ಆಗಸ್ಟ ೧೯೭೨ ರಿಂದ ಡಿಸೆಂಬರ ೭೨ರ ವರೆಗೆ ಹಣ ಪಾವತಿ ಮಾಡಿದ್ದಾರೆಂದು ಹೇಳಿದ್ದೀರಿ. ಆದರೆ ಜನವರಿ ೧೯೭೩ ರಿಂದ ಹಿಡಿದು ಎಪ್ರಿಲ್ ೧೯೭೩ರ ವರೆಗಿನ ಪ್ರೀಮಿಯಮ್‌ನ್ನು ೧೯-೬-೧೯೭೩ ರಂದು ಕೊಟ್ಟಿದ್ದಾರೆಂದು ಹೇಳಿದ್ದೀರಿ. ಕಾಲಕ್ಕೆ ಸರಿಯಾಗಿ ಪ್ರಿಮಿಯಮ್‌ನ್ನು ಕಟ್ಟದಿರುವುದರಿಂದ ಅವರು ಹಣವನ್ನು ದುರುಪಯೋಗ ಮಾಡಿಕೊಂಡಂತೆ ಆಗಲಿಲ್ಲವೆ? ಈ ಬಗ್ಗೆ ಏನಾದರೂ ಸರ್ಕಾರದವರು ಅವರ ಮೇಲೆ ಕೇಸ ಹಾಕಿದ್ದಾರೆಯೇ?

ಶ್ರೀ ಎ. ಆರ್. ಬದರಿನಾರಾಯಣ.—ಹಣ ಏನೋ ತಾತ್ಕಾಲಿಕವಾಗಿ ದುರುಪಯೋಗವಾಗಿದೆ.

ಶ್ರೀ ಕೋಣಂದೂರು ಲಿಂಗಪ್ಪ.— ತಾತ್ಕಾಲಿಕ ದುರುಪಯೋಗ ಮತ್ತು ಶಾಶ್ವತವಾದ ದುರುಪಯೋಗ ಎಂದು ದುರುಪಯೋಗದಲ್ಲಿ ಎರಡು ತರಹ ಇದೆಯೇ?

ಶ್ರೀ ಎ. ಆರ್. ಬದರಿನಾರಾಯಣ.—ಇದು ಟೆಂಪರರಿ ಮಿಸ್ ಅಪ್ರೋಪ್ರಿಯೇಷನ್.

ಶ್ರೀ ಕೋಣಂದೂರು ಲಿಂಗಪ್ಪ.— ಹಾಗಿದ್ದರೆ ನಮಗೂ ಒಂದು ಕೋಟಿ ರೂಪಾಯಿಗಳನ್ನು ಕೆಲವು ಕಾಲದ ವರೆಗೆ ಕೊಡಿ.

ಶ್ರೀ ಎ. ಆರ್ ಬದರಿನಾರಾಯಣ.—ಇದ್ದರೆ ಕೊಡೋಣ. ಆದರೆ ಈ ರೀತಿ ದುರುಪಯೋಗ ಮಾಡಿಕೊಳ್ಳಬಾರದಾಗಿತ್ತು. ಅವರ ಮೇಲೆ ಕಾರ್ಯಕ್ರಮವನ್ನು ಅಧಿಕೃತವಾಗಿ ತೆಗೆದುಕೊಂಡಿರುವ ಬಗ್ಗೆ ನನಗೆ ವರ್ತಮಾನ ಬಂದಿಲ್ಲ. ಆದರೆ ತೆಗೆದುಕೊಂಡಿದ್ದಾರೆಂದು ತಿಳಿದು ಬಂದಿದೆ. ಬೇಕಾದರೆ ಅದನ್ನು ತಿಳಿದು ಹೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ — ಇನ್ನು ಮುಂದೆ ಪ್ರೀಮಿಯಂನ್ನು ಕಟ್ಟುವ ಬಗ್ಗೆ ಇಲ್ಲಿ ಕೆಲವು ಷರತ್ತುಗಳನ್ನು ಹಾಕಿದ್ದಾರೆ.

"Premium collected from June 1973 onward should be remitted before 10th of the next month."

ಎನ್ನುವ ಕಂಡಿಷನನ್ನು ಇಲ್ಲಿ ಹಾಕಲಾಗಿದೆ. ಈ ರೀತಿ ಹಾಕಿದ್ದರೂ ಸಹ ಜುಲೈ ೧೯೭೩ರ ಪ್ರೀಮಿಯಮ್‌ನ್ನು ೧೪-೮-೧೯೭೩. ರಂದು ಕಟ್ಟಿದ್ದಾರೆ. ನ್ಯಾಯವಾಗಿ ೧೦ನೇ ತಾರೀಖಿನೊಳಗೇ ಕಟ್ಟಬೇಕಾಗಿತ್ತು. ಮತ್ತು ಅಗಸ್ಟ ತಿಂಗಳದ್ದು ಲಿಸ್ಟ ಇನ್ನೂ ಬಂದಿಲ್ಲ ಎಂದು ಹೇಳಿದ್ದಾರೆ. ಹತ್ತನೇ ತಾರೀಖಿನೊಳಗೆ ಹಿಂದಿನ ತಿಂಗಳ ಕಂತನ್ನು ಕಟ್ಟಬೇಕೆಂದು ಲೈಫ್ ಇನ್ಶೂರೆನ್ಸ ಕಾರ್ಪೊರೇಷನ್‌ನವರು ತಿಳಿಸಿದ್ದರೂ ಸಹ ಅವರು ಅದರಂತೆ ಕಟ್ಟದೆ ಡಿಫಾಲ್ಟರ ಆಗಿದ್ದಾರೆ. ಕ್ರಮವಾಗಿ ಪಾವತಿ ಮಾಡುತ್ತಿಲ್ಲವೆಂಬುದು ತಮಗೆ ತಿಳಿಯುತ್ತಿಲ್ಲವೇ? ಈ ರೀತಿಯಾಗದಂತೆ ಸರಿಪಡಿಸುತ್ತೀರಾ?

ಶ್ರೀ ಎ. ಆರ್. ಬದರಿನಾರಾಯಣ.—ಜೂನ ತಿಂಗಳ ಪ್ರೀಮಿಯಮ್‌ನ್ನು ಸರಿಯಾಗಿ ಕಟ್ಟಿದ್ದಾರೆ. ಆದರೆ ಜುಲೈ ತಿಂಗಳದ್ದು ಮಾತ್ರ ೧೪ನೇ ತಾರೀಖು ಕಟ್ಟಿದ್ದಾರೆ. ಅದು ತಪ್ಪು. ಹತ್ತನೇ ತಾರೀಖಿನೊಳಗೆ ಕಟ್ಟಬೇಕೆಂದು ನಿಯಮ ಇರುವದು. ಇನ್ನು ಮುಂದೆ ಕಂಡೀಷನ್ ಪ್ರಕಾರ ಕಟ್ಟಿಸುವುದಕ್ಕೆ ಏನು ತಾಕೀತು ಮಾಡಬೇಕೋ ಅದನ್ನು ಮಾಡುತ್ತೇವೆ.

(iii) Re. Retrenchment of local candidates.

Sri KAGODU TIMMAPPA (Sagar). I call the attention of the Chief Minister to the retrenchment of Loclal Candidates.

Sri H. M. CHANNABASAPPA (Minister for Public Works and Electricity) [on behalf of the Chief Minister I make the following Statement.]

Government have taken a decision to make provision for regular direct recruitment to Class III posts of local candidates in such posts appointed on or after 1st October,

1969 and who have rendered one year of continuons service prior to 1st April 1973. It has been also decided that such appointments will be done subject to reservations in favour of Scheduled Castes, Scheduled Tribes and Backward Classes and that if local candidates belonging to Scheduled Castes and Scheduled Tribes are not available, the vacancies reserved for them would be carried forward in accordance with the existing orders. Such regular appointments of local candidates will, however, be against posts remaining vacant after appointing candidates selected by the Public Service Commission or other Recruitment Committees for Class III posts as it would not be legally correct to appoint the local candidates regularly in preference to the candidates already selected by the Public Service Commission and Recruiting Committees in accordance with the statutory rules. Instructions have accordingly been issued to appoint the candidates selected by the Public Service Commission or the Recruitment Committees first and thereafter, if vacancies are still available, to continue the local candidates against such vacancies after working out the reservations to be made in favour of Scheduled Castes, Scheduled Tribes and Backward Classes. "It has also been directed that if candidates belonging to Scheduled Castes and Scheduled Tribes are not available among the local candidates working in a department, candidates belonging to other categories should not be continued against such vacancies and that the vacancies should be kept unfilled in such an event." This has been done in order to ensure that the candidates belonging to Scheduled Castes and Scheduled Tribes get their due share. After taking action as indicated above, the local candidates were permitted to be continued till 30th September 1973. Statutory rules will have to be issued to enable regular appointment of such candidates. These rules have been drafted and are at present under the consideration of Government. As it may take some time more before the rules are issued, the Heads of Departments have been instructed separately to continue beyond 30th September 1973 such of the local candidates as would be eligible for regular appointment under the proposed rules, i. e.,

such local candidates who were appointed on or after 1-10-1969 and who have put in one year continuous service prior to 1-4-1973 and who were within the age limit prescribed and who possessed the prescribed educational qualifications at the time of their initial continuous appointment, if vacancies are available for them and to terminate the services of local candidates who will not be eligible for such regular appointments. Orders in this regard have been issued. "Even the local candidates whose services have been terminated or would be terminated hereafter for want of vacancies will be eligible for regular appointments in other departments after the statutory rules are issued, if they satisfy all the conditions relating to continuous service, qualifications, age limit, etc."

ಶ್ರೀ ಕಾಗೋಡು ತಿಮ್ಮಪ್ಪ.— ಸ್ವಾಮಿ, ತಾವು ಇಲ್ಲಿ ತಾ. ೧-೧೦-೧೯೬೯ ರಿಂದ ತಾ ೧-೪-೧೯೭೩ ರವರೆಗೆ ಯಾರಿಗೆ ಒಂದು ವರ್ಷ ಸರ್ವಿಸ್ ಆಗಿರುತ್ತದೋ ಅಂತಹ ಸ್ಥಳೀಯ ಅಭ್ಯರ್ಥಿಗಳನ್ನು ಆ ಸ್ಥಾನದಲ್ಲಿಯೇ ಕಾಯಂ ಮಾಡುವುದಾಗಿ ಹೇಳಿದ್ದೀರಿ. ಆದರೆ ಇದೇ ಅವಧಿಯಲ್ಲಿ ಯಾರಿಗೆ ಒಂದು ವರ್ಷದ ಸರ್ವಿಸ್ ಆಗಿರುತ್ತದೋ, ಅಂತಹವರ ಜಾಗಕ್ಕೆ ಪಿ. ಎಸ್ ಸಿ. ಅವರು ಬೇರೆ ಅಭ್ಯರ್ಥಿಗಳನ್ನು ನೇಮಕ ಮಾಡಿರುವುದರಿಂದ ಸ್ಥಳೀಯ ಅಭ್ಯರ್ಥಿಗಳಿಗೆ ತೊಂದರೆಯಾಗುತ್ತಿದೆ. ಈ ಕಾರಣದಿಂದ ಪಿ. ಎಸ್. ಸಿ. ಅವರು ಏನು ನೇಮಕ ಮಾಡಿದ್ದಾರೆ, ಆ ಲಿಸ್ಟನ್ನು ವಜಾ ಮಾಡುವಂತೆ ಅವರಿಗೆ ಸಲಹೆ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.— ಈ ಬಗ್ಗೆ ಉತ್ತರ ಈ ಸ್ಟೇಟ್‌ಮೆಂಟಿನಲ್ಲಿಯೇ ಅಡಕವಾಗಿದೆ.

ಶ್ರೀ ಕೆ. ಎಚ್. ಹನುಮೇಗೌಡ.— ೧೯೬೯ನೇ ಇಸವಿಗಿಂತ ಮುಂಚೆಯೇ ೪೦ ಜನ ಅಭ್ಯರ್ಥಿಗಳು ತೋಟಗಾರಿಕೆ ಇಲಾಖೆಯಲ್ಲಿ ಸ್ಥಳೀಯ ಅಭ್ಯರ್ಥಿಗಳಾಗಿ ಸೇರಿಕೊಂಡು ಸೇವೆ ಮಾಡುತ್ತಿದ್ದರೂ ಸಹ ಅವರನ್ನು ಇದೇ ತಿಂಗಳ ೩೦ ರಂದು ಕೆಲಸದಿಂದ ಟರ್ಮಿನೇಟ್ ಮಾಡುವುದಾಗಿ ನೋಟೀಸ್ ಜಾರಿ ಮಾಡಿದ್ದಾರೆ. ತಮ್ಮ ಹೇಳಿಕೆಯ ಪ್ರಕಾರ ಇವರೂ ಸಹ ಕಂಟಿನ್ಯೂ ಆಗಬೇಕಾಗಿತ್ತು. ಆದರೆ ಟರ್ಮಿನೇಟ್ ಮಾಡುವುದಾಗಿ ನೋಟೀಸ್ ಜಾರಿ ಮಾಡಿದ್ದಾರೆ. ಈಗಲಾದರೂ ಸಹ ಆ ನೋಟೀಸ್‌ಗಳನ್ನು ವಾಪಸ್ ತೆಗೆದುಕೊಂಡು ಅದೇ ಜಾಗದಲ್ಲಿ ಅವರನ್ನು ಕಂಟಿನ್ಯೂ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.— ಈ ಸ್ಟೇಟ್‌ಮೆಂಟಿನಲ್ಲಿ ಅಡಕವಾಗಿರುವ ಅಂಶಗಳಿಗೆ ವಿರುದ್ಧವಾಗಿ ಏನಾದರೂ ನಡೆದಿದ್ದರೆ ಅದನ್ನು ಸರಿಪಡಿಸುತ್ತೇವೆ.

ಶ್ರೀ ಎಚ್ ಟಿ. ಕೃಷ್ಣಪ್ಪ — ಇಲ್ಲಿ ಒನೇ ದರ್ಜೆಗೆ ಸೇರಿದ ನೌಕರರ ಬಗ್ಗೆ ಮಾತ್ರ ಹೇಳಿಕೆ ಕೊಟ್ಟಿದ್ದೀರಿ. ಈ ಒಂದು ಸ್ಟೇಟ್‌ಮೆಂಟ್ ಬೇರೆ ವರ್ಗದ ನೌಕರರಿಗೂ ಸಹ ಅನ್ವಯವಾಗುತ್ತದೋ ಅಥವಾ ಇಲ್ಲವೋ ಎಂಬುದನ್ನು ತಾವು ಸ್ಪಷ್ಟಪಡಿಸಬೇಕು.

ಇನ್ನು ಎರಡನೆಯದಾಗಿ ತಾವು ಇಲ್ಲಿ

"It has also directed that if candidates belonging to Scheduled Castes and Scheduled Tribes are not available amongst the local candidates working in a department, candidates belonging to other categories should hot be continued against such vacancies and that the vacancies should be kept unfilled in such an event."

ಎಂದು ಹೇಳಿದ್ದೀರಿ. ವೇಕೆನ್ಸಿ ಇರುವ ಕಡೆಗಳಲ್ಲಿ ಈ ವರ್ಗದ ಜನರು ಸಿಗುವವರೆಗೆ ಬೇರೆಯವರನ್ನು ಮುಂದುವರಿಸುವುದಕ್ಕೆ ಇರುವ ತೊಂದರೆಯಾದರೂ ಏನು ಎಂದು ಕೇಳುತ್ತೇನೆ. ಕೊನೆಯಲ್ಲಿ

"Even the local candidates whose services have been terminated or would be terminated hereafter for want of vacancies will be eligible for regular appointments in other departments after the statutory rules are issued if they satisfy all the conditions relating to continuous service, qualifications, age limit, etc.,

ಎಂದು ಹೇಳಿದ್ದೀರಿ. ಈ ರೀತಿ ಹೇಳಿರುವುದು ಬಹಳ ಆಪ್ಯಾಯಮಾನವಾಗಿದೆ. ಏಕೆಂದರೆ ಇದರಿಂದ ಎಷ್ಟೋ ಜನರಿಗೆ ಅನುಕೂಲವಾಗುತ್ತದೆ. ಆದರೆ ಏಜ್ ಲಿಮಿಟ್ ಎಂದು ಹೇಳಿರುವುದರಿಂದ ಕೆಲವರಿಗೆ ತೊಂದರೆಯಾಗುವುದಿಲ್ಲವೇ ಎಂದು ಕೇಳುತ್ತೇನೆ. ಏಕೆಂದರೆ ಕೆಲಸಕ್ಕೆ ಸೇರುವಾಗ ವಿತ್ ಇನ್ ದಿ ಏಜ್ ಲಿಮಿಟ್ ಇದ್ದರೂ ಸಹ ತಾವು ಇಲ್ಲಿ ಹೇಳಿರುವ ಪ್ರಕಾರ ಕನ್ಸಿಡರ್ ಮಾಡುವಾಗ ಏಜ್ ಬಾರ್ ಆಗಿದ್ದರೆ ಅಂತಹವರಿಗೆ ತೊಂದರೆಯಾಗುವುದಿಲ್ಲವೇ? ಇದನ್ನು ಯಾವ ರೀತಿ ಕನ್ಸಿಡರ್ ಮಾಡುತ್ತೀರಿ? ಈ ಮೂರು ಅಂಶಗಳಿಗೂ ತಾವು ಉತ್ತರ ಕೊಡಬೇಕು;

ಶ್ರೀ ಎಚ್. ಎಂ. ಚನ್ನಬಸಪ್ಪ — ಮಾಡಿರತಕ್ಕ ಸ್ಟೇಟ್‌ಮೆಂಟ್ ಸ್ವಲ್ಪ ಮಟ್ಟಿಗೆ ವಿಶದವಾಗಿಯೇ ಇದೆ, ಅನುಮಾನಕ್ಕೆ ಎಡೆಕೊಡುವ ರೀತಿಯಲ್ಲಿ ಮಾಡಿಲ್ಲ. ಹರಿಜನರಿಗೆ ನಿಗದಿ ಮಾಡಿರತಕ್ಕ ವೇಕೆನ್ಸಿಗಳಿಗೆ ಆಕಸ್ಮಾತ್ ಹರಿಜನರು ಸಿಕ್ಕದೆ ಇದ್ದರೆ ಅವನ್ನು ಭರ್ತಿ ಮಾಡಬೇಡಿ ಎಂದು ಹೇಳಿರತಕ್ಕ ವಿಚಾರದ ಬಗ್ಗೆ ಕೇಳಿದ್ದಾರೆ. ಹರಿಜನಗಿರಿಜನರಿಗೆ ಶೇಕಡ ಇಂತಿಷ್ಟು ಸ್ಥಾನ ಸೇರಬೇಕಾದ್ದು ತಪ್ಪಿ ಹೋಗಬಾರದು ಎನ್ನುವ ಉದ್ದೇಶವಿದೆಯೇ ಹೊರತು ಇನ್ನೇನೂ ಇಲ್ಲ. ಎರಡನೆಯದಾಗಿ ಏಜ್

ಲಿಮಿಟ್ ಬಗ್ಗೆ ಮಾತನಾಡುತ್ತ ಕೆಲಸಕ್ಕೆ ಸೇರುವ ಕಾಲಕ್ಕೆ ಏಜ್ ಲಿಮಿಟ್‌ನೊಳಗೇ ಇದ್ದು ಈಗ ಏಜ್ ಬಾರ್ ಆಗುವುದರಿಂದ ಅದನ್ನು ಈ ಹೊತ್ತು ಸಡಿಲ ಮಾಡ ಬೇಕೆಂದು ಹೇಳಿದ್ದಾರೆ. ಅದು ಅಷ್ಟು ಸಾಧುವಾಗಿ ಕಾಣುವುದಿಲ್ಲ. ಏಜ್ ಲಿಮಿಟ್ ನಾವು ಪರಿಗಣನೆಗೆ ತೆಗೆದುಕೊಳ್ಳದೆ ಹೋದರೆ ಉದಾಹರಣೆಗೆ ಒಬ್ಬ ನಾಲ್ಕು ವರ್ಷವಾದ ಮೇಲೆ ಅರ್ಜಿ ಹಾಕಿಕೊಂಡು ನಾನು ಸ್ಥಳೀಯ ಅಭ್ಯರ್ಥಿಯಾಗಿ ಕೆಲಸ ಮಾಡುತ್ತಿದ್ದೆ, ಒಂದು ವರ್ಷ ಕಂಟಿನ್ಯುಯಸ್ ಸರ್ವಿಸ್ ಆಗಿದೆ ಎಂದು ತಿಳಿಸಿದರೆ ಅದನ್ನು ನಾವು ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಈಗ ನಾವು ರೂಲ್ಸ್ ಮಾಡುತ್ತಿದ್ದೇವೆ. ಆ ಜನಗಳಿಗೆ ತೊಂದರೆಯಾಗದ ರೀತಿಯಲ್ಲಿ ಮಾಡಬೇಕು ಎನ್ನುವುದೇ ಸರ್ಕಾರದ ಆಸೆಯಾಗಿದೆ. ರೂಲ್ಸ್ ಮಾಡುವಾಗ ಎಷ್ಟು ಹೆಚ್ಚು ಅನು ಕೂಲಗಳನ್ನು ಅವರಿಗೆ ಮಾಡಿಕೊಡಬಹುದೋ ಅಷ್ಟು ಪ್ರಮಾಣದಲ್ಲಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎಚ್. ಟಿ. ಕೃಷ್ಣಪ್ಪ.— ಮಾನ್ಯ ಮಂತ್ರಿಗಳ ಹೇಳಿಕೆ ಕೇವಲ ಮೂರನೇ ದರ್ಜೆ ವರ್ಗದ ನೌಕರರಿಗೆ ಅನ್ವಯವಾಗುವ ರೀತಿಯಲ್ಲಿದೆ. ಅದು ಎಲ್ಲ ವರ್ಗದ ನೌಕರರಿಗೂ ಅನ್ವಯವಾಗುತ್ತದೆಯೋ ಇಲ್ಲವೋ ? ಹರಿಜನ ಗಿರಿಜನರಿಗೆ ೧೮ ಪರ್ಸೆಂಟ್ ವೇಕೆನ್ಸಿ ಇದ್ದಾಗ ಸ್ಯೂಟಬಲ್ ಕ್ಯಾಂಡಿಡೇಟ್ಸ್ ಆ ವರ್ಗಗಳಿಂದ ದೊರೆಯದೆ ಹೋದಾಗ ಈಗ ಇರತಕ್ಕ ಸ್ಥಳೀಯ ಅಭ್ಯರ್ಥಿಗಳನ್ನು ಮುಂದುವರಿಸು ವುದರಿಂದ ಆಗತಕ್ಕ ತೊಂದರೆಗಳೇನು ? ಏಜ್ ಲಿಮಿಟ್ ಸೇರಿಕೊಳ್ಳುವ ಕಾಲಕ್ಕೆ ಇರಬೇಕಾದ ವಯೋಮಿತಿಯಲ್ಲಿದ್ದು ಈಗ ಏಜ್ ಲಿಮಿಟ್ ಮೀರಿರುತ್ತದೆ. ಅವರ ಗತಿ ಏನು ? ಇವರ ವಿಚಾರವನ್ನೂ ಸಹಾನುಭೂತಿಯಿಂದ ಪರಿಶೀಲನೆ ಮಾಡ ಲಾಗುತ್ತದೆಯೋ ಇಲ್ಲವೋ ?

ಶ್ರೀ. ಎಚ್. ಎಂ. ಚನ್ನಬಸಪ್ಪ.— ಮೂರನೇ ದರ್ಜೆ ಮತ್ತು ಅದಕ್ಕೆ ಕೆಳ ಪಟ್ಟ ಹುದ್ದೆಗಳಿಗೆ ಮಾತ್ರ ಸ್ಥಳೀಯ ಅಭ್ಯರ್ಥಿಗಳನ್ನು ನೇಮಕಮಾಡಿಕೊಳ್ಳ ಲಾಗುತ್ತದೆ.

ಶ್ರೀ ಎಚ್. ಟಿ. ಕೃಷ್ಣಪ್ಪ.— ಎರಡನೇ ದರ್ಜೆಗೂ ನೇಮಕ ಮಾಡಿಕೊಳ್ಳ ಲಾಗುತ್ತಿದೆ. ಅವರಿಗೂ ಇದು ಅನ್ವಯವಾಗುತ್ತದೆಯೋ ಇಲ್ಲವೋ ?

ಶ್ರೀ ಎಚ್. ಎಂ. ಚನ್ನಬಸಪ್ಪ.— ಎರಡನೇ ದರ್ಜೆಗೆ ಸ್ಥಳೀಯ ಅಭ್ಯರ್ಥಿ ಗಳನ್ನು ನೇಮಕ ಮಾಡಿಕೊಳ್ಳುವದಿಲ್ಲ. ಒಂದು ವೇಳೆ ಹಾಗೇನಾದರೂ ನೇಮಕ ಗಳಾಗಿದ್ದರೆ ಅವರಿಗೆ ಇದು ಅನ್ವಯವಾಗುವುದಿಲ್ಲ. ಹರಿಜನ ಗಿರಿಜನರಿಗೆ ನಿಗದಿ ಮಾಡಿರತಕ್ಕ ಜಾಗಗಳನ್ನು ಕಾದಿಟ್ಟು ಅವರಿಗೇ ಕೊಡಬೇಕೆಂಬುದು ಸರ್ಕಾರದ ಇಚ್ಛೆಯಾಗಿದೆ. ಸಾಕಷ್ಟು ಸಂಖ್ಯೆಯಲ್ಲಿ ಅಭ್ಯರ್ಥಿಗಳಿದ್ದಾರೆ. As a measure of abundant Caution ಅದನ್ನು ಹಾಕಿದ್ದೇವೆ. ಮಾನ್ಯ ಸದಸ್ಯರು ಹೇಳುವುದನ್ನೂ ಪರ್ಯಾಲೋಚನೆ ಮಾಡುತ್ತೇವೆ. ಏಜ್ ಲಿಮಿಟ್ ರಿಲ್ಯಾಕ್ಸ್ ಮಾಡುವ ವಿಚಾರ

ದಲ್ಲಿ ನನ್ನ ಪ್ರಥಮ ಪ್ರತಿಕ್ರಿಯೆ ಏನಂದರೆ ಆ ರೀತಿಯಾಗಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದರೆ ಮಾನ್ಯ ಸದಸ್ಯರು ವಯೋಮಿತಿಯನ್ನು ಸಡಿಲಗೊಳಿಸುವ ವಿಚಾರವನ್ನು ಪರಿಶೀಲಿಸಬೇಕು ಎಂದು ಹೇಳುತ್ತಿರುವುದರಿಂದ ಆ ರೀತಿ ಮಾಡುವುದಕ್ಕೆ ನನ್ನ ಆಭ್ಯಂತರವಿಲ್ಲವೆಂದು ಮಾತ್ರ ಹೇಳುತ್ತೇನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.— ೧೯೬೯ಕ್ಕೆ ಮೊದಲು ಅನೇಕ ಜನ ಹೆಣ್ಣು ಮಕ್ಕಳನ್ನು ಎರಡು ಮತ್ತು ಮೂರನೆ ದರ್ಜೆ ನೌಕರರಾಗಿ ತಾತ್ಕಾಲಿಕವಾಗಿ ನೇಮಕ ಮಾಡಿಕೊಂಡಿದ್ದು, ಒಂದು ಕಡೆ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜಿನವರು ಅವರ ಹೆಸರುಗಳನ್ನು ಪುನಃ ಇಲಾಖೆಗೆ ಕಳುಹಿಸಿಲ್ಲ. ಅವರನ್ನೆಲ್ಲ ೩೦–೯–೧೯೭೩ಕ್ಕೆ ರಿಲೀವ್ ಮಾಡಬೇಕೆಂದು ಅಪ್ಪಣೆ ಬಂದಿವೆ. ಅವರನ್ನೆಲ್ಲ ರಿಲೀವ್ ಮಾಡಬೇಡಿ ಎಂದು ಸೂಚನೆಗಳನ್ನು ಕಳುಹಿಸುತ್ತಾರೆಯೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.— ನಾನು ಮಾಡಿರುವ ಹೇಳಿಕೆಯಲ್ಲಿ ಈ ವಿಚಾರವನ್ನು ಸ್ಪಷ್ಟವಾಗಿ ಹೇಳಿದ್ದೇನೆ.

OFFICIAL RESOLUTIONS

(i) Re : Approval of the notification issued under the Cotton Transport Act 1923 in respect of Dharwar, Chitradurga, Bellary, Mysore and Bagalkot Area.

Sri K. H. PATIL (Minister for Agriculture and Forests).— I beg to move :—

> "That the four Notifications in respect of Dharwar, area, Chitradurga-Bellary area, Mysore area, Bagalkot area (copies already circulated to members) to be issued in exercise of the powers conferred by Section 3 of the Cotton Transport Act 1923 (Central Act 3 of 1923) be approved."

MADAM SPEAKER.— Motion moved :

> "That the four Notifications in respect of Dharwar area, Chitradurga-Bellary area, Mysore area, Bagalkot area (copies already circulated to members) to be issued in exercise of the powers conferred by Section 3 of the Cotton Transport Act 1923 (Central Act 3 of 1923) be approved."

†Sri K. H. Patil.— The notifications are very simple. They pertain only to the allotment of the area where cotton is to be grown in 4 divisions, viz., Dharwar, Chitradurga-Bellary, Mysore and Bagalkot area, which are considered as protected areas. The Notifications are simple, and I hope the House will approve the notifications.

MADAM SPEAKER.— The question is :—

"That the four Notifications in respect of Dharwar area, Chitradurga-Bellary area, Mysore area, Bagalkot area (copies already circulated to members) to be issued in exercise of the powers conferred by Section 3 of the Cotton Transport Act 1923 (Central Act 3 of 1923) be appreved."

The motion was adopted unanimously.

(ii) Re : Approval of the Cotton Transport (Mysore) (Amendment) Rule 1973.

Sri K. H. PATIL (Minister for Agriculture and Forests): I beg to move :

"That this House hereby approves the Cotton Transport (Mysore) (Amendment) Rules, 1973 proposed to be issued by the State Government under Section 7 of the Cotton Transport Act, 1923 (Central Act 3 of 1923), the draft of which has been laid before this House on 30th March 1973."

MADAM SPEAKER.— Motion moved.

"That this House hereby approves the Cotton Transport (Mysore) (Amendment) Rules, 1973 proposed to be issued by the State Government under section 7 of the Cotton Transport Act, 1923 (Central Act 3 of 1923) the draft of which has been laid before this House on 30th March 1973."

†Sri K. H. PATIL.— The rules are very simple. When these rules came into force the Indian Central Cotton Committee was in force and the Secretary of the Indian Central Cotton Committee was its license issuing authority. This licence issuing authority is now being substituted. I hope the House will approve of it.

MADAM SPEAKER.— The question is :—

"That this House hereby approv s the Cotton Transport (Mysore) (Amendment) Rules, 1973 proposed to be issued by the State Government under section 7 of the Cotton Transport Act, 1923 (Central Act 3 of 1923), the draft of which has been laid before this House on 30th March 1973."

The motion was adopted unanimously.

Re : Dharana of Officers of the Mysore Iron and Steel Ltd., Bhadravathi.

ಶ್ರೀ. ಎಚ್. ಟಿ. ಕೃಷ್ಣಪ್ಪ (ನಾಗಮಂಗಲ).— ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದ ಹೆಮ್ಮೆಯ ಊರು ಎನಿಸಿಕೊಂಡಿರತಕ್ಕ ಭದ್ರಾವತಿ ಕಬ್ಬಿಣ ಕಾರ್ಖಾನೆ ಈ ಈ ದಿವಸ ಕೆಲಸದಿಂದ ಮಾಡದೆ ನಿಷ್ಕ್ರಿಯೆಗೊಂಡಿದೆ. ನಾನು ರೂಲ್ ೩೭೨ರ ಪ್ರಕಾರ ಒಂದು ಸೂಚನೆಯನ್ನು ಕಳುಹಿಸಿದ್ದೇನೆ. ಅದರ ಬಗ್ಗೆ ಸಂಕ್ಷಿಪ್ತವಾಗಿ ಹೇಳುವದಕ್ಕೆ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಸುಮಾರು ೪೦೦ ಜನ ನೌಕರರು ಈ ದಿವಸ ಧರಣಿ ಮುಷ್ಕರ ಕೂತಿದ್ದಾರೆ.

†Sri S. M. KRISHNA (Minister for Industries) .—Madam Speaker if I may be permitted to intervene, before the hon. the Leader of the Opposition attemts to make certain points, I wish to state th t I have the latest message from Bhadravati, which would certainly help the deliberations of the House. With this, I am not coming in his way of making whatever points he wants to make. If it helps matters, I may be permitted to read the message, which says.

"That all the officers have decided unanimously to resume their work from 3-00 P.M. today to 6-30 P. M. and from tomorrow they will be working according to usual hours."

2-00 P. M.

ಶ್ರೀ ಎಚ್. ಟಿ. ಕೃಷ್ಣಪ್ಪ.— ನಿನ್ನೆ ದಿವಸ ಧರಣಿ ಮುಷ್ಕರವಾಯಿತು. ಈ ದಿವಸ ಪ್ರವೇಶಕ್ಕೆ ಅಡ್ಡಿ ಮಾಡಿ ಪೋಲೀಸ್ ಕಾವಲು ಹಾಕಿದ್ದಾರೆ. ಪರಿಸ್ಥಿತಿ ಗಂಭೀರವಾಗಿದೆ.

ಅಧ್ಯಕ್ಷರು.— ಆ ಪರಿಸ್ಥಿತಿ ಈಗ ಇಲ್ಲ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ.

ಶ್ರೀ ಎಚ್. ಟಿ. ಕೃಷ್ಣಪ್ಪ.— ಯಾತಕ್ಕೋಸ್ಕರ ಹೀಗೆ ಆಯಿತು. ಇಬ್ಬರು ಕಿರಿಯ ಅಧಿಕಾರಿಗಳಾದ ಶ್ರೀ ಸಣ್ಣತಿಪ್ಪಯ್ಯ ಮತ್ತು ಶ್ರೀ ಚಿಕ್ಕಅರಸ್ ಎಂಬುವವರನ್ನು ೧೫೦ ಹಿರಿಯ ಅಧಿಕಾರಗಳನ್ನು ಕಡೆಗಣಿಸಿ ಮೇಲೆ ಹಾಕಿದ್ದಾರೆ.

ಅಧ್ಯಕ್ಷರು.— ಅದರ ಬಗ್ಗೆ ರೂಲ್ ೩೧೨ರ ಪ್ರಕಾರ ನೋಟೀಸ್ ಕಳುಹಿಸಿದ್ದೀರಿ, ಸಾಯಂಕಾಲ ತೆಗೆದುಕೊಳ್ಳಬಹುದು.

ಶ್ರೀ ಎಚ್. ಟಿ. ಕೃಷ್ಣಪ್ಪ — ನೇರವಾಗಿ ವಿಷಯಗಳನ್ನು ಪ್ರಸ್ತಾಪ ಮಾಡಿದರೆ ಮಾನ್ಯ ಮಂತ್ರಿಗಳಿಗೆ ಉತ್ತರ ಕೊಡುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಎಸ್. ಎಂ. ಕೃಷ್ಣ.— ಮಾನ್ಯ ಅಧ್ಯಕ್ಷರೇ, ಇದು ವಿಶೇಷವಾಗಿ ಚರ್ಚೆಗೆ ಯೋಗ್ಯವಾದ ವಿಚಾರವಲ್ಲ. ಇಷ್ಟು ಮಾತ್ರ ಹೇಳಬಯಸುತ್ತೇನೆ....

Sri ABDUL KHUDUS ANWAR.— This is a question of 2000 employees remaining outside.

Sri S. M. KRISHNA.— It is not at all concerning 2000 employees. I do not know where my distinguished friend, Mr. Khudus Anwar has got this information. As the Leader of the Opposition very rightly put it. this concerns about 200 or 300 Officers. There are 400 Officers out of which some of them have disassociated with this move. Certainly it boils to 200 or 300 Officers only. Let me assure this House that no Company worth the name even with the modicum of discipline could subject themselves to such a thing.

ಅಧ್ಯಕ್ಷರು.— ಮಂತ್ರಿಗಳು ಇದರ ಬಗ್ಗೆ ಸಾಯಂಕಾಲ ಸ್ಟೇಟ್‌ಮೆಂಟ್ ಮಾಡಬಹುದು.

ಶ್ರೀ ಎಚ್. ಎಸ್. ಸಿದ್ದಪ್ಪ.— ೨೪ನೇ ತಾರೀಖು ರಾಯಚೂರಿನ ಶ್ರೀ ಬಿ. ಜಿ ನಾರಾಯಣಗೌಡ ಪೂಲ್ ಆಫೀಸರ್, ಲ್ಯಾಂಡ ಡವಲಪ್‌ಮೆಂಟ್— ಅದರ ಬಗ್ಗೆ ಕಾಲಿಂಗ್ ಅಟೆನ್‌ಷನ್ ನೋಟೀಸ್ ಕಳುಹಿಸಿದ್ದೇನೆ. ಅದಕ್ಕೆ ಇನ್ನೂ ಉತ್ತರ ಬರಲಿಲ್ಲ.

ಅಧ್ಯಕ್ಷರು — ನಾಳೆಯ ದಿನ ಬರುತ್ತದೆ.

Re : Giving protection to ryots.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).— ಕಳೆದ ಅಧಿವೇಶನದಲ್ಲಿ ಭೂಸುಧಾರಣೆ ಮಸೂದೆ ಅಂಗೀಕಾರವಾಗಿ ಅದು ಈಗ ರಾಷ್ಟ್ರಾಧ್ಯಕ್ಷರ ಮಂಜೂರಾತಿ

ಪಡೆದು ಬರಬೇಕಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಬಂಟವಾಳ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ಈಗಾಗಲೇ ಫಸಲು ಜಮೀನಿನಲ್ಲಿ ನಿಂತಿವೆ. ಫಸಲು ಸಂಪೂರ್ಣವಾಗಿ ಬರುವುದರೊಳಗೆ ಒಕ್ಕಲು ಎಬ್ಬಿಸಲಿಕ್ಕೆ ಕುತಂತ್ರ ಮಾಡುತ್ತಿದ್ದಾರೆ. ಇದರಿಂದ ದುಷ್ಪರಿಣಾಮ ಆಗತಕ್ಕ ಪರಿಸ್ಥಿತಿ ಇದೆ. ಆದುದರಿಂದ ತತ್‌ಕ್ಷಣ ಸರ್ಕಾರ ಪ್ರವೇಶ ಮಾಡಿ ಯಾವುದೇ ರೀತಿಯ ಒಕ್ಕಲಿನಿಂದ ಜಮೀನು ಸ್ವಾಧೀನ ತಪ್ಪಿಸದ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಬಿ. ವಿ. ಕಕ್ಕಿಲಾಯ.— ಕೋ-ಆಪರೇಟಿವ್ ಮಿನಿಸ್ಟರ್‌ರವರ ಮತ್ತು ನನ್ನ ಕ್ಷೇತ್ರದಲ್ಲಿ ಈ ರೀತಿ ಕುತಂತ್ರ ನಡೆಯುತ್ತಿದೆ, ಅನೇಕ ಪತ್ರಗಳೂ ಬರುತ್ತಿವೆ. ಇದರ ಬಗ್ಗೆ ಯಾವುದೇ ಕ್ರಮ ಇದುವರೆಗೂ ತೆಗೆದುಕೊಂಡಿಲ್ಲ. ಗಂಭೀರವಾದ ಪರಿಸ್ಥಿತಿ ಉದ್ಭವವಾಗುತ್ತಿದೆ. ಆದ್ದರಿಂದ ಇದರ ಬಗ್ಗೆ ಗಮನ ಹರಿಸಬೇಕು.

ಶ್ರೀ ಎಚ್. ಎಂ ಚನ್ನಬಸಪ್ಪ.— ತಾವು ಎಷ್ಟು ಕಳಕಳಿಯಿಂದ ಈ ವಿಷಯ ವ್ಯಕ್ತಪಡಿಸುತ್ತಿದ್ದೀರಿ, ಅಷ್ಟೇ ಕಳಕಳಿ ಸರ್ಕಾರಕ್ಕೆ ಇದೆ. ಸೂಕ್ತ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ.

Re : Furnishing replies to Questions

ಶ್ರೀ ಕೆ. ಶ್ರೀರಾಮುಲು.— ಈ ಅಧಿವೇಶನದಲ್ಲಿ ೧೦ ಪ್ರಶ್ನೆ ಕೇಳಿದ್ದೆ, ನನ್ನ ಗೈರು ಹಾಜರಿಯಲ್ಲಿ ಒಂದಕ್ಕೆ ಮಾತ್ರ ಉತ್ತರ ಬಂತು. ಕಳೆದ ಅಧಿವೇಶನದಲ್ಲಿಯೂ ಕೂಡ ನನ್ನ ಪ್ರಶ್ನೆಗಳಿಗೆ ಉತ್ತರ ಬಂದಿಲ್ಲ. ದಯವಿಟ್ಟು ಉತ್ತರ ದೊರಕಿಸಬೇಕು ಎಂದು ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಎಚ್. ಹನುಮೇಗೌಡ.— ರಾಜ್ಯದ ಅನೇಕ ಪ್ರೌಢ ಶಾಲೆಗಳಲ್ಲಿ ಜೂನ್ ತಿಂಗಳಿಂದ ಮಾಸ್ಟರ್ ಇಲ್ಲ ಇದರ ಬಗ್ಗೆ ಸದನದಲ್ಲಿ ಪ್ರಸ್ತಾಪ ಮಾಡಿದೆ, ಪರೀಕ್ಷೆ ನಡೆಯುತ್ತಿದೆ, ಪಬ್ಲಿಕ್ ಪರೀಕ್ಷೆಗಳು ನಡೆಯಲಿವೆ. ಇನ್ನು ಕೇವಲ ೩-೪ ತಿಂಗಳು ಇದೆ. ವಿದ್ಯಾರ್ಥಿಗಳು ತೊಂದರೆಗೆ ಸಿಕ್ಕಿ ಹಾಕಿಕೊಂಡಿದ್ದಾರೆ. ಡಿಪಾರ್ಟ್‌ಮೆಂಟಿನವರು ಎಕಾನಮಿ ಮೆಜರ್ಸ್ ಇದೆ. ಟೀಚರ್ಸ್‌ನ್ನು ಅಪಾಯಿಂಟ್ ಮಾಡುವ ಹಾಗಿಲ್ಲ ಎಂದು ಅವರು ಹೇಳುತ್ತಿದ್ದಾರೆ. ವಿದ್ಯಾ ಮಂತ್ರಿಗಳನ್ನು ಕೇಳಿದಾಗ ಪಾಠ ಹೇಳಿಕೊಡುವ ಟೀಚರ್ಸ್‌ಗೆ ಎಕಾನಮಿ ಮೆಜರ್ಸ್ ಅಪ್ಲೈ ಆಗುವುದಿಲ್ಲ ಎಂದು ಹೇಳಿದರು.

ಅಧ್ಯಕ್ಷರು.— ಇದರ ಬಗ್ಗೆ ನಾಳೆ ಕಾಲಿಂಗ್ ಅಟೆನ್‌ಷನ್ ನೋಟೀಸ್ ಬರುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.— ಮಲೆನಾಡಿನಲ್ಲಿ ಎಲ್ಲಾ ಹಳ್ಳಿಗಳಲ್ಲಿ ಪ್ರಾಥಮಿಕ ಶಾಲೆಗಳು ಮುಚ್ಚಲ್ಪಟ್ಟಿವೆ. ಸ್ಟೇಟ್‌ಮೆಂಟ್ ಕೊಡಬೇಕಾದರೆ ಪ್ರಾಥಮಿಕ

ಶಾಲೆ, ಮಾಧ್ಯಮಿಕ ಶಾಲೆ ಮತ್ತು ಜ್ಯೂನಿಯರ್ ಕಾಲೇಜು ಅಧ್ಯಾಪಕರ ಬಗ್ಗೆ ಕಾಂಪ್ರಹೆನ್ಸಿವ್ ಸ್ಟೇಟಮೆಂಟ್ ಕೊಡಬೇಕೆಂದು ಪ್ರಾರ್ಥನೆ.

ಶ್ರೀ ಎ. ಆರ್. ಬದರೀನಾರಾಯಣ್.— ಕಾಲ್ ಅಟೆನ್‌ಷನ್ ನೋಟೀಸ್ ಇರುವುದು ಹಾಸನ ಹೈಸ್ಕೂಲಿನ ಬಗ್ಗೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.— ಹೊಸನಗರ ತಾಲ್ಲೂಕಿನಲ್ಲಿ ಜೂನ್ ೧೫–೧೬ನೇ ತಾರೀಖು ೨ ದಿವಸದ ಮಳೆಯಿಂದ ಬಹಳ ಜಮೀನು ಲುಕ್ಸಾನು ಆಗಿದೆ. ಅದರ ಬಗ್ಗೆ ಕಾಲಿಂಗ್ ಅಟೆನ್‌ಷನ್ ನೋಟೀಸು ಕಳುಹಿಸಿದ್ದೆ. ನಂತರ ಶಿವಮೊಗ್ಗ ಜಿಲ್ಲೆಯ ನಗರಗಳಲ್ಲಿ ಹರಿಜನರಿಗೆ ಕೆಲಸವಿಲ್ಲದೆ ಕಷ್ಟಪಡುತ್ತಿದ್ದಾರೆ.

ಅಧ್ಯಕ್ಷರು.— ೧೦–೨೦ ನಿಮಿಷ ಇದರ ಬಗ್ಗೆ ಕಾಲ ಕಳೆಯುವ ಬದಲು ಮಾನ್ಯ ಸದಸ್ಯರು ದಯವಿಟ್ಟು ನನ್ನ ಛೇಂಬರಿಗೆ ಬಂದು ಜ್ಞಾಪಿಸುವುದು ಒಳ್ಳೆಯದು. ಈ ಸಭೆಯಲ್ಲಿ ಹೀಗೆ ನಿಂತುಕೊಂಡು ಕೇಳಿದರೆ ನನಗೆ ಜ್ಞಾಪಕ ಇರುವುದಿಲ್ಲ.

ಶ್ರೀ ಟಿ ಆರ್. ಶಾಮಣ್ಣ.— ನಿಮಗೆ ತಿಳಿದ ಹಾಗೆ ಆಹಾರ ಧಾನ್ಯಗಳ ಬೆಲೆಗಳ ಬಗ್ಗೆ ಚರ್ಚೆ ತೆಗೆದುಕೊಳ್ಳಬೇಕು. ಅದು ಚರ್ಚೆಯಾಗದೆ ಬೇರೆ ವಿಷಯ ಇಲ್ಲಿ ಚರ್ಚೆಗೆ ಬರುತ್ತಿದೆ.

ಅಧ್ಯಕ್ಷರು.— ಆಹಾರ ಸಮಸ್ಯೆ ಚರ್ಚೆ ೨೮ನೇ ತಾರೀಖು ಬರುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.— ಮುಖ್ಯ ಮಂತ್ರಿಗಳು ಸಂಡೂರಿನ ಬಗ್ಗೆ ಹೇಳಿಕೆ ಕೊಡುತ್ತೇನೆ ಎಂದು ಹೇಳಿದ್ದರು.

ಶ್ರೀ ಕಾಗೋಡು ತಿಮ್ಮಪ್ಪ.— ಮುಖ್ಯ ಮಂತ್ರಿಗಳು ಹೇಳಿಕೆ ಕೊಡುವುದು ಬಹಳ ಇದೆ. ಸುಮಿತ್ರಾ ದೇಸಾಯಿ ಬಗ್ಗೆ ಹೇಳಿಕೆ ಕೊಡುತ್ತೇವೆ ಎಂದು ಹೇಳಿದ್ದರು. ಇದುವರೆಗೂ ಕೊಟ್ಟಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.— ಸಾಹಿತ್ಯ ಅಕಾಡೆಮಿಗೆ ಸಂಬಂಧಪಟ್ಟ ವಿಷಯವನ್ನು ಪ್ರಸ್ತಾಪಿಸುವುದಕ್ಕೆ ಅನುಮತಿ ಕೇಳಿಕೊಂಡಿದ್ದೇನೆ.

Sri K. H. Patil (Minister for Agriculture and Forests). Madam Speaker yesterday I had submitted to you to take up the Mysore Seed Farms Bill, 1973 which is a very small and non-controversial Bill. Fortunately, both the sides agreed that it may be taken up to day. I would now request you to permit me to move the Bill.

MYSORE SEED FORM BILL, 1973

Motion to Consider

MADAM SPEAKER.—ಅದನ್ನೂ ತೆಗದುಕೊಳ್ಳೋಣ. I have received the recommendation from the Governor under article 273 of the Constitution that the Mysore Seed Farms Bill, 1973 be considered by the Legislative Assembly. The Hon. Minister may move the motion for consideration of the Bill.

Sri K. H. PATIL (Minister for Agriculture and Forests). I beg to move.

"That the Mysore Seed Farms Bill, 1973 be taken into consideration."

MADAM SPEAKER.—Motion moved:

"That the Mysore Seed Farms Bill, 1973 be taken into consideration."

†ಶ್ರೀ ಕೆ. ಎಚ್. ಪಾಟೀಲ್.— ಸನ್ಮಾನ್ಯ ಸಭಾಧ್ಯಕ್ಷಣಿಯವರೇ, ಈ ಬಿಲ್ಲಿನ ವಿಷಯವಾಗಿ ಬಹಳಷ್ಟು ಹೇಳಬೇಕಾದುದಿಲ್ಲ. ರಾಜ್ಯದಲ್ಲಿ ಹಾರ್ಟಿಕಲ್ಚರಲ್ ಡಿಪಾರ್ಟ್‌ಮೆಂಟ್ ಉತ್ತಮವಾದ ಬೀಜದ ತಳಿ ಉತ್ಪಾದನೆ ಮಾಡುವ ಸಲುವಾಗಿ ಸೀಡ್ ಫಾರಂಗಳನ್ನು ಎಲ್ಲಾ ಕಡೆಗೂ ತೆಗೆಯಬೇಕು ಎನ್ನುವುದು ಈ ಬಿಲ್ಲಿನ ಉದ್ದೇಶವಾಗಿದೆ. ಸೀಡ್ ಫಾರಂ ತೆಗೆಯುವ ಸಲುವಾಗಿ ಸರ್ಕಾರದ ನಿಯಂತ್ರಣ ಇಟ್ಟುಕೊಂಡು ಎಲ್ಲೆಲ್ಲಿ ಸೀಡ್ ಫಾರಂ ತೆಗೆಯಬೇಕು, ಅವುಗಳ ಸುತ್ತಮುತ್ತ ಸಹ ಯಾವ ಯಾವ ಕ್ಷೇತ್ರಗಳಲ್ಲಿ ಬೀಜಗಳನ್ನು ಸುಧಾರಿಸಿದ ಪದ್ಧತಿಯಲ್ಲಿ ಬೆಳಸಲಿಕ್ಕೆ ಅನುಕೂಲ ವಾತಾವರಣ ನಿರ್ಮಾಣ ಮಾಡಬೇಕು ಎನ್ನುವ ಬಗ್ಗೆ ಇದೆ. ಇದಕ್ಕೆ ವಿರೋಧವಾಗಿ ವರ್ತಿಸುವ ಕೃಷಿಗಾರರ ಬಗ್ಗೆ ಶಾಸನ ಮಾಡಬೇಕು ಎಂದು ಇದೆ. ನಿಜವಾಗಿ ರೈತನ ಹಿತದೃಷ್ಟಿಯಿಂದ ಉತ್ತಮವಾದ ಬೀಜದ ತಳಿಯನ್ನು ಉತ್ಪಾದನೆ ಮಾಡುವ ದೃಷ್ಟಿಯಲ್ಲಿ ಈ ಬಿಲ್ಲನ್ನು ತಂದಿದ್ದೇನೆ. ಇಲ್ಲಿಯವರೆಗೆ ಬೇರೆ ರಾಜ್ಯಗಳನ್ನು, ನ್ಯಾಷನಲ್ ಸೀಡ್ ಕಾರ್ಪೊರೇಷನ್‌ನನ್ನು ಬೀಜದ ಸಲುವಾಗಿ ಅವಲಂಬನೆ ಮಾಡಬೇಕಾಗಿತ್ತು. ಹೊಸದಾಗಿ ನಮ್ಮ ರಾಜ್ಯದಲ್ಲಿ ಸೀಡ್ ಫಾರಂಗಳನ್ನು ಮಾಡಿ ಅವುಗಳ ಮುಖಾಂತರ ನಮಗೆ ಬೇಕಾಗುವ ಹೈಬ್ರಿಡ್ ಮತ್ತು ಸುಧಾರಿತ ಬೀಜಗಳನ್ನು ಉತ್ಪಾದನೆ ಮಾಡುವ ಮಸೂದೆ ಇರುವುದರಿಂದ ಸರ್ವ ಸದಸ್ಯರು ಇದಕ್ಕೆ ಬೆಂಬಲ ಕೊಡಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಕೆ.ಎಚ್. ಹನುಮೇಗೌಡ — ಯಾವ ಯಾವ ಬೀಜಗಳನ್ನು ಉತ್ಪಾದನೆ ಮಾಡುತ್ತೀರಿ ? ಹಾರ್ಟಿಕಲ್ಚರ್‌ಗೆ ಸಂಬಂಧಪಟ್ಟಿದ್ದೇ ಅಥವಾ ಅಗ್ರಿಕಲ್ಚರ್‌ಗೆ ಸಂಬಂಧಪಟ್ಟಿದ್ದೇ ?

ಶ್ರೀ ಕೆ. ಎಚ್. ಪಾಟೀಲ್.— ಹಾರ್ಟಿಕಲ್ಚರ್‌ಗೆಸಂಬಂಧಪಟ್ಟಿದ್ದು. ಇದರಲ್ಲಿ ಕಾಯಿಪಲ್ಲೆ, ತೆಂಗು ಅಡಿಕೆ ಬರುತ್ತದೆ. ಡೈರೆಕ್ಟರ್ ಮೀನ್ಸ್ ಡೈರೆಕ್ಟರ್ ಆಫ್ ಹಾರ್ಟಿಕಲ್ಚರ್ ಎಂದು ಇರುತ್ತದೆ. ಹಾರ್ಟಿಕಲ್ಚರಲ್‌ಗೆ ಸಂಬಂಧಿಸಿದ ಸೀಡ್ ಫಾರಂನ್ನು ತರಲಿಕ್ಕೆ ಈ ಬಿಲ್ ತರಲಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಅಧ್ಯಕ್ಷರೇ, ಈ ಬೀಜದ ಫಾರಮ್ಮಿನ ಬೆಳೆಗೆ ಸಂಬಂಧಪಟ್ಟ ಬಿಲ್ಲನ್ನು ತೀವ್ರವಾಗಿ ನಾನು ವಿರೋಧಮಾಡಬೇಕಾಗಿದೆ. ಕಾರಣವೇನೆಂದರೆ, ಕೃಷಿ ಸಚಿವರಾದ ಶ್ರೀ ಕೆ. ಎಚ್. ಪಾಟೀಲರು ಒಂದು ಮಹತ್ವ ಪೂರ್ಣವಾದ ಮಸೂದೆಯನ್ನು ತಂದಿದ್ದಾರೆ. ಅದರ ದೃಷ್ಟಿಕೋನ ಏನಾಗಿದೆಯೆಂದರೆ, ಇಂತಹ ಬೀಜಗಳನ್ನು ಸರ್ಕಾರ ಮಾತ್ರ ಬೆಳೆಯಬೇಕು, ಸರ್ಕಾರ ಎಲ್ಲೆಲ್ಲಿ ಫಾರ್ಮ್ ಗಳನ್ನು ಮಾಡಿರುತ್ತದೆ, ಅಂಥಾ ಕಡೆ, ಇನ್ನು ಯಾರೂ ಬೆಳೆಯಬಾರದು ಎಂದು ನಿಷೇಧ ಹಾಕುವುದೇ ಇದರ ಮುಖ್ಯ ಉದ್ದೇಶವಾಗಿದೆ. ಇವತ್ತು ಬೀಜದ ಫಾರ್ಮ್ಸ ನಾಕಷ್ಟು ಪ್ರಮಾಣದಲ್ಲಿ ಸರ್ಕಾರ ಸ್ಥಾಪನೆ ಮಾಡಿ ಅಲ್ಲಿಂದ ಬೀಜ ಉತ್ಪಾದನೆ ಮಾಡುವ ಪ್ರದೇಶ ಮಾತ್ರ ಇವೆ, ಇಷ್ಟು ಮಾತ್ರಕ್ಕೆ ಇರತಕ್ಕ ಬೀಜೋತ್ಪಾದನೆ ಕ್ಷೇತ್ರಗಳಿಂದ ರಾಜ್ಯಕ್ಕೆ ಬೇಕಾದ ಎಲ್ಲಾ ಬೀಜ ಉತ್ಪಾದನೆ ಮಾಡಿ, ರೈತನಿಗೆ, ಕೃಷಿ ವ್ಯವಸಾಯಗಾರನಿಗೆ ಬೇಕಾದಂಥ ಬೀಜಗಳನ್ನು ಸರಬರಾಜು ಮಾಡುವ ಸ್ಥಿತಿ ಸರ್ಕಾರಕ್ಕೆ ಇಲ್ಲ. ಆ ದೃಷ್ಟಿಯಿಂದ ಏನಾದರೂ ಸರ್ಕಾರ ಸರಬರಾಜು ಮಾಡತಕ್ಕ ಬೀಜದಿಂದಲೇ ವ್ಯವಸಾಯಗಾರ ಅವಲಂಬಿಸಿದ್ದಾನೆ ಎಂದು ತಿಳಿದುಕೊಂಡಿದ್ದರೆ ಅದು ಸುಳ್ಳು. ಅವನು ಸ್ವತಃ ಬೆಳೆಸಿ, ಸ್ವತಃ ಉತ್ಪನ್ನ ಮಾಡುವ ಬೀಜದಿಂದ ಅನೇಕ ಕೃಷಿ ಕ್ಷೇತ್ರಗಳನ್ನು ಉತ್ತಮಪಡಿಸಿದ್ದಾರೆ. ಇವತ್ತು ಅನೇಕ ಸಾರಿ ನಮ್ಮ ಪ್ರಚಾರ ದಿಂದ, ಹಸಿರು ಕ್ರಾಂತಿ ಹೆಸರಿನಲ್ಲಿ ನಡೆದಂಥ ಪ್ರಚಾರದಿಂದ ಅನೇಕ ಜನ ಉತ್ತಮ ವಾದ ಕ್ಷೇತ್ರವನ್ನು ಬೆಳೆಸಿದ್ದಾರೆ.

ಇದು ತೋಟಗಾರಿಕೆ ಕ್ಷೇತ್ರ ಆಗಿರಬಹುದು, ಅಥವಾ ಬೇರೆ ಆಹಾರ ಪದಾರ್ಥ ಗಳನ್ನು ಬೆಳೆಯತಕ್ಕಂಥ ಕ್ಷೇತ್ರ ಆಗಿರಬಹುದು. ಇದರಲ್ಲಿ ಉತ್ತಮವಾದ ಕೃಷಿ ಗಾರರು ಇದ್ದಾರೆ. ಆದರೆ ಸರ್ಕಾರ ಉತ್ತಮವಾದ ಬೀಜವನ್ನು ಮಾಡುವುದಕ್ಕೆ ಸೀಡ್ ಫಾರಂ ಮಾಡಬೇಕು ಎನ್ನುವ ಒಂದು ನಿರೀಕ್ಷಣೆ ಏನು ಇಟ್ಟುಕೊಂಡಿದ್ದರೋ ಅಷ್ಟೇ ಪ್ರಮಾಣದಲ್ಲಿ ಅಷ್ಟೇ ಪ್ರಾಮಾಣಿಕವಾಗಿ, ಅಷ್ಟೇ ಬುದ್ಧಿವಂತರಾಗಿ, ಅಷ್ಟೇ ತಿಳುವಳಿಕೆ ಉಳ್ಳವರಾಗಿ ಇಂತಹ ಬೀಜವನ್ನು ಉತ್ಪಾದನೆ ಮಾಡತಕ್ಕಂಥ ಸಾಹಸ ನಮ್ಮ ರಾಜ್ಯದ ಕೃಷಿಗಾರರು ಪಡೆದಿದ್ದಾರೆ. ಈವೊತ್ತಿನ ದಿವಸ ನಮ್ಮ ಸರ್ಕಾರದ ವಶದಲ್ಲಿರತಕ್ಕಂಥ ಗ್ರಾಮಸೇವಕರು ಏನು ಇದ್ದಾರೋ ಅವರು ಗ್ರಾಮಾಂತರದಲ್ಲಿ ಕೆಲಸ ಮಾಡಿ ಕೃಷಿಯಲ್ಲಿ ಹೆಚ್ಚು ನೈಪುಣ್ಯತೆ ಪಡೆದಿದ್ದರೂ ಸಹ ಅವರೆಲ್ಲರಿಗಿಂತಲೂ ಹೆಚ್ಚಾಗಿ ನಮ್ಮ ರಾಜ್ಯದಲ್ಲಿರುವ ಕೃಷಿಗಾರರು ಅಂದರೆ ವ್ಯವಸಾಯಗಾರರು ಮನಸ್ಸು ಮಾಡಿದರೆ ಸರ್ಕಾರದವರು ಬೆಳೆಸುವುದಕ್ಕೆ ಸಾಧ್ಯವಾಗದೇ ಇರತಕ್ಕಂಥ ಉತ್ತಮ ವಾದ ಬೀಜವನ್ನು ಅವರು ಉತ್ಪಾದನೆ ಮಾಡುವುದಕ್ಕೆ ಸಾಧ್ಯವಿದೆ, ಅವರಿಗೆ ಅಷ್ಟು

ಅನುಭವ ಇದೆ ಮೇಲಾಗಿ ಅವರಿಗೆ ಭೂಮಿ ಇದೆ. ಈಗ ಈ ಮಸೂದೆಯಿಂದ ಏನಾಗಿದೆ ಎಂದರೆ ನಮ್ಮ ಜನರಿಗೆ ಇರತಕ್ಕಂಥ ಉತ್ಪಾದನಾ ಸಾಮರ್ಥ್ಯವನ್ನು ಹತ್ತಿಕ್ಕುವುದಕ್ಕೆ ಕಾರಣವಾಗಿದೆಯೇ ಹೊರತು ಮತ್ತಾವುದಕ್ಕೂ ಪ್ರಯೋಜನವಾಗಿಲ್ಲ. ಆದುದರಿಂದ ನಮ್ಮ ರಾಜ್ಯದ ವ್ಯವಸಾಯಗಾರರ ದೃಷ್ಟಿಯಿಂದ ಈ ಮಸೂದೆಯನ್ನು ಪ್ರಭಲವಾಗಿ ವಿರೋಧ ಮಾಡುತ್ತೇನೆ.

ಇನ್ನು ಈ ಮಸೂದೆಯಲ್ಲಿ ತಾವು ಏನು ಉದ್ದೇಶ ಪಟ್ಟಿದ್ದೀರಿ ಎನ್ನುವುದನ್ನು ಹೇಳುತ್ತೇನೆ. ಒಂದು ಕೃಷಿ ಬೀಜದ ಉತ್ಪಾದನೆ ಆ ಕ್ಷೇತ್ರದಲ್ಲಿ ಇದ್ದರೆ ಆ ಕ್ಷೇತ್ರಕ್ಕೆ ತಾವು ಒಂದು ನೊಟಿಫಿಕೇಷನ್ ಹೊರಡಿಸಿದರೆ, ಆ ಕ್ಷೇತ್ರದಲ್ಲಿ ಬೇರೆಯವರು ಯಾರೇ ಆಗಲೀ ಅಥವಾ ಅದರ ಸುತ್ತಮುತ್ತಲಿನ ಪ್ರದೇಶದವರಾಗಲಿ ಆ ಗ್ರಾಮದಲ್ಲಿ ಯಾರೂ ಕೂಡ ಈ ಉತ್ಪಾದನಾ ಬೀಜವನ್ನು ಬೆಳೆಸುವುದಕ್ಕೆ ಸಾಧ್ಯವಿಲ್ಲಾ. ಅದೇ ಗ್ರಾಮದಲ್ಲಿ ಯಾವ ಬೀಜವನ್ನು ಉತ್ಪಾದನೆ ಮಾಡಬೇಕು ಎಂದು ಒಂದು ಫಾರಂ ಮಾಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಿದರೆ ಅಷ್ಟೇ ಪ್ರಮಾಣದಲ್ಲಿ ಒಬ್ಬ ಖಾಸಗೀ ಮನುಷ್ಯ ಈ ಬೀಜವನ್ನು ಬೆಳೆಸುವುದಕ್ಕೆ ಆಗುವುದಿಲ್ಲ ಅನ್ನುವುದಕ್ಕೆ ಇವರು ಯಾರು? ಈ ರೀತಿಯಾಗಿ ಸ್ವಾತಂತ್ರ್ಯಹರಣ ಮಾಡುವುದಕ್ಕೆ ಇವರು ಯಾರು? ಅದು ಹಣ್ಣು ಹಂಪಲು ಕ್ಷೇತ್ರವೇ ಆಗಿರಬಹುದು ಅಥವಾ ಬೇರೆ ಯಾವುದೇ ಕ್ಷೇತ್ರವಾಗಿರಬಹುದು. ಆದರೆ ಅವನು ತನ್ನ ಸ್ವಯಂ ಪ್ರೇರಣೆಯಿಂದಾಗಲಿ ಅಥವಾ ತನ್ನ ಬುದ್ಧಿಯಿಂದಾಗಲಿ ಉತ್ತಮವಾದ ಬೀಜವನ್ನು ಮಾಡುವುದಕ್ಕೆ ಸಾಧ್ಯತೆ ಇರುವುದಾದರೆ ಆ ಸಾಧ್ಯತೆಯನ್ನು ಅವನಿಗೆ ಏತಕ್ಕೆ ಕೊಡಬಾರದು? ಈ ಮಸೂದೆಯಿಂದ ಏನು ಗೊತ್ತಾಗುತ್ತದೆ ಎಂದರೆ ಅವನಿಗೆ ಇರತಕ್ಕಂಥ ಬುದ್ಧಿಯನ್ನು ಕಸಿದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ ಅಷ್ಟೆ. ಹಲವಾರು ವಿಧದಲ್ಲಿ ವಿಜ್ಞಾನಿಗಳು ಪಾಂಡಿತ್ಯವನ್ನು ಪಡೆದುಕೊಂಡು ಬಂದಿರುತ್ತಾರೆ. ಅವರು ಆ ವಿಜ್ಞಾನದಲ್ಲಿ ತಮ್ಮ ಮುಂದಿನ ಕಾರ್ಯಾಚರಣೆಯನ್ನು ಪರಿಶೋಧನೆ ಮಾಡುವುದು ಬೇಡ, ಆ ಬಗ್ಗೆ ಸಂಶೋಧನೆ ಮಾಡುವುದು ಬೇಡ ಅನ್ನುವುದಾದರೆ ಇದಕ್ಕಿಂತ ಹಾನಿ ಇನ್ನಾವುದೂ ಇಲ್ಲ. ತಮಗೆಲ್ಲಾ ಗೊತ್ತಿರುವ ಹಾಗೆ ನಮ್ಮ ದೇಶದಲ್ಲಿ ನೂರಕ್ಕೆ ೮೦ರಷ್ಟು ಜನ ವ್ಯವಸಾಯಗಾರರು ಇದ್ದಾರೆ. ಈ ರೀತಿ ಆದರೆ ಅವರು ತಮಗೆ ಬೇಕಾದಷ್ಟು ಆಹಾರ ಧಾನ್ಯವನ್ನು ಬೆಳೆಸುವುದಕ್ಕೆ ಸಾಧ್ಯವಿಲ್ಲದಾಗುತ್ತದೆ. ಈವೊತ್ತಿನ ದಿವಸ ನಮ್ಮ ರಾಜ್ಯದಲ್ಲಿ ನೂರಕ್ಕೆ ೮೦ರಷ್ಟು ಜನ ವ್ಯವಸಾಯಗಾರರು ಇದ್ದರೂ ಕೂಡ ಈವೊತ್ತಿನ ಆಹಾರದ ಪರಿಸ್ಥಿತಿಯಲ್ಲಿ ಎಷ್ಟು ಆಹಾರ ಕೊರತೆ ಇದೆ ಎನ್ನುವ ಒಂದು ದೊಡ್ಡ ಕಠಿಣ ಪರಿಸ್ಥಿತಿಯನ್ನು ನಾವು ನೋಡುತ್ತಾ ಇದ್ದೇವೆ. ಇಂತಹ ಒಂದು ಸಂದರ್ಭ ಈವೊತ್ತಿನ ದಿವಸ ಇರುವಾಗ ನಮ್ಮ ರಾಜ್ಯದ ವ್ಯವಸಾಯಗಾರರಿಗೆ ಒಂದು ಹೆಚ್ಚಿನ ಉತ್ತೇಜನ ಕೊಡಬೇಕಾದುದು ನ್ಯಾಯ. ವ್ಯವಸಾಯಗಾರರಿಗೆ ಇರತಕ್ಕಂಥ ಪಾಂಡಿತ್ಯವನ್ನು ವಿಸ್ತಾರ ಮಾಡುವ ಬದಲು ಈ ಮಸೂದೆ ಮುಖಾಂತರ ಅವರಿಗೆ ಒಂದು ಕಂದಕ

ವನ್ನು ಇಡುವುದಕ್ಕೆ ಹೋಗುಟ್ಟಿದ್ದೀರಿ. ಇದರಿಂದ ನಮ್ಮ ರಾಜ್ಯದಲ್ಲಿ ಯಾವ ವ್ಯವಸಾಯಗಾರನೂ ಕೂಡ ಬುದ್ಧಿವಂತನಾಗುವುದಕ್ಕೆ ಸಾಧ್ಯವಿಲ್ಲಾ. ಈಗ ತಾವು ಕೃಷಿ ವಿಶ್ವವಿದ್ಯಾನಿಲಯವನ್ನು ನಮ್ಮ ರಾಜ್ಯದಲ್ಲಿ ಇನ್ನೊಂದನ್ನು ಮಾಡಬೇಕು ಎಂದು ಹೊಸದಾಗಿ ಸ್ಥಾಪನೆ ಮಾಡುವುದಕ್ಕೆ ಒಂದು ಮಸೂದೆಯನ್ನು ತಂದಿದ್ದೀರಿ. ರಾಜ್ಯದ ಎಲ್ಲಾ ಕ್ಷೇತ್ರಗಳಲ್ಲೂ ಈ ಕೃಷಿ ವಿಶ್ವವಿದ್ಯಾನಿಲಯಗಳು ವ್ಯಾಪಕವಾಗಿ ಕೆಲಸ ಮಾಡಬೇಕು, ಈ ಕೃಷಿ ವಿಶ್ವವಿದ್ಯಾನಿಲಯದ ಸೇವೆ ಎಲ್ಲಾ ಭಾಗದವರಿಗೂ ಸಿಗಬೇಕು, ಆದುದರಿಂದ ಮತ್ತೊಂದು ಕೃಷಿ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಬೇಕೆಂದು ಸರ್ಕಾರ ಆಲೋಚನೆ ಮಾಡುತ್ತಿದೆ. ಪರಿಸ್ಥಿತಿ ಹೀಗಿರುವಾಗ ಈ ವ್ಯವಸಾಯವನ್ನು ಉತ್ತಮ ಪಡಿಸುವುದಕ್ಕೆ ಏನು ಪ್ರಚಾರ, ಸಾಹಿತ್ಯಗಳು ಬೇಕೋ ಅದನ್ನು ಮಾಡಬೇಕೇ ಹೊರತು ಈ ಮಸೂದೆ ಮುಖಾಂತರ ವ್ಯವಸಾಯಗಾರನಿಗೆ ಕಂದಕವನ್ನು ಉಂಟು ಮಾಡುವುದಕ್ಕೆ ಹೋಗಬಾರದು. ಆದುದರಿಂದ ಇದನ್ನು ಕಂಡಿಯಲ್ಲಿರುವಾಗಲೇ ಜಿಗುಟಿ ಹಾಕಬೇಕೇ ವಿನಾ ಅದನ್ನು ದೊಡ್ಡದಾಗಿ ಬೆಳೆಸುವುದಕ್ಕೆ ಹೋಗಬಾರದು. ಆದುದರಿಂದ ವ್ಯವಸಾಯಗಾರನು ಉತ್ತಮವಾದ ಬೀಜವನು ಬೆಳೆಯುವುದಕ್ಕೆ ಪ್ರಯತ್ನ ಪಟ್ಟರೆ ಅವನಿಗೆ ಇದರಲ್ಲಿ ಸಂಪೂರ್ಣ ಸ್ವಾತಂತ್ರ್ಯ ಇರಬೇಕೇ ವಿನಾ ಅದನ್ನು ಮೊಟಕು ಮಾಡುವುದಕ್ಕೆ ಯಾವುದೇ ಸರ್ಕಾರವಾಗಲಿ, ಯಾವುದೇ ಸಮಾಜವಾಗಲಿ ಹೋಗಬಾರದು. ಮಾನ್ಯ ಅಧ್ಯಕ್ಷರೇ ವ್ಯವಸಾಯಗಾರನ ಮೂಲಭೂತ ಹಕ್ಕುಗಳಿಗೆ ಒಂದು ದೊಡ್ಡ ಕೊಡಲಿ ಏಟನ್ನು ಈ ಮಸೂದೆ ಮುಖಾಂತರ ಹಾಕುವುದರಿಂದ ಈ ಮಸೂದೆಯನ್ನು ತಾವು ವಾಪಸ್ಸು ಪಡೆಯಬೇಕು ಎಂದು ಹೇಳುತ್ತೇನೆ.

ಇನ್ನು ಈ ಬಗ್ಗೆ ಒಂದು ಉದಾಹರಣೆ ಹೇಳುವುದಾದರೆ ಈವೊತ್ತಿನ ದಿವಸ ಶ್ರೀಮಾನ್ ಹೆಚ್.ಎಂ. ಚೆನ್ನಬಸಪ್ಪನವರು ಒಳ್ಳೆಯ ಉತ್ತಮ ವ್ಯವಸಾಯಗಾರರಾಗಿ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಆದರೆ ಶ್ರೀಮಾನ್ ಚನ್ನಬಸಪ್ಪನವರಿಗೆ ಆಗದೇ ಇರತಕ್ಕಂಥ ಒಬ್ಬ ಮಂತ್ರಿಗಳು ಇದ್ದರೆ ಅಥವಾ ರಾಜಕಾರಣಿಗಳು ಇದ್ದರೆ ಅವರಿಗೆ ಜಮೀನು ಇರತಕ್ಕಂಥ ಕಡೆಯಲ್ಲಿಯೇ ಈ ಒಂದು ಸೀಡ ಫಾರಂವನ್ನು ಹಾಕುವುದು, ಶ್ರೀಮಾನ್ ಚನ್ನಬಸಪ್ಪನವರು ಮಾಡತಕ್ಕಂಥ ಬೀಜದ ಉತ್ಪಾದನೆ ನಿಲ್ಲಿಸಬೇಕು. ಅವನ್ನು ತುಳಿಯಬೇಕು ಎಂದು ಸರ್ಕಾರದ ಪ್ರಚೋದನೆ ಇದ್ದರೆ ಸರ್ಕಾರದ ಪ್ರಭಾವದಿಂದ ಅವರ ಹತ್ತಿರದ ಪ್ರದೇಶದಲ್ಲೇ ಒಂದು ಬೀಜದ ಉತ್ಪಾದನಾ ಕ್ಷೇತ್ರ ಸ್ಥಾಪನೆ ಮಾಡಿದರೆ ಉತ್ತಮ ಕೃಷಿಗಾರರಾದ ಶ್ರೀಮಾನ್ ಚೆನ್ನಬಸಪ್ಪನವರಂಥವರಿಗೆ, ಅವರು ಮಾಡಿದ ಹಾಗೆ ಉತ್ತಮವಾದ ಬೀಜವನ್ನು ಉತ್ಪಾದನೆ ಮಾಡುವುದಕ್ಕೆ ಯಾರಿಗೂ ಸಾಧ್ಯವಿಲ್ಲಾ. ಈವತ್ತಿನ ದಿವಸ ರಾಜಕಾರಣಿಗಳು ಯಾವ ರೀತಿ ಮುಂದುವರೆದಿದ್ದಾರೆ ಎನ್ನುವುದನ್ನು ನಾವು ನೋಡುತ್ತಾ ಇದ್ದೇವೆ. ಇಂಥಾ ಸನ್ನಿವೇಶದಲ್ಲಿ ಬಹಳ ಜಾಗ್ರತೆ ಇಲ್ಲದೇ ಹೋದರೆ ಯಾರು ಉತ್ತಮವಾದ ಕೃಷಿಗಾರರು ಇದ್ದಾರೆ ಅವರು ಮಾಡಬೇಕಾದಂಥ ಕೆಲಸಕ್ಕೆ

ಒಂದು ದೊಡ್ಡ ಆತಂಕ ಉಂಟಾಗುತ್ತದೆ. ಇದನ್ನು ತಾವು ದೂರದೃಷ್ಟಿಯಿಂದ ಆಲೋಚನೆ ಮಾಡಬೇಕು. ಈ ದೃಷ್ಟಿಯಿಂದ ಈ ಅಧಿಕಾರವನ್ನು ಸರಕಾರದ ಯಂತ್ರಕ್ಕೆ ಕೊಡುವುದಾದರೆ ಅನೇಕ ಖಾಸಗೀ ಕೃಷಿಗಾರರ ಮೇಲೆ ಅನ್ಯಾಯ ಎಸಗುವುದಲ್ಲದೆ ಅವರ ಬೆಳವಣಿಗೆಗೂ ಕೂಡ ಒಂದು ಆತಂಕವುಂಟಾಗುತ್ತದೆ. ವ್ಯವಸಾಯಗಾರರಿಗೆ ಇರತಕ್ಕಂಥ ಅಧಿಕಾರವನ್ನು ಹರಣ ಮಾಡುವುದಕ್ಕೆ ಹೋಗ ಬಾರದು. ಇದು ತಾವು ದೀರ್ಘವಾಗಿ ಯೋಚನೆ ಮಾಡಿ. ಇದು ರೈತರ ಸ್ವಾತಂತ್ರ್ಯದ ಹರಣದ ವಿಧೇಯಕವಾಗುತ್ತದೆ. ಆದುದರಿಂದ ಕೃಷಿ ಸಚಿವರು ಈ ಮಸೂದೆ ಯನ್ನು ಆತುರಾತುರವಾಗಿ ತರತಕ್ಕಂಥಾ ಮಸೂದೆ ಅಲ್ಲ. ಇನ್ನೂ ೧೦ ವರ್ಷ ಆದಮೇಲೆ ತಂದಿದ್ದರೆ ಚೆನ್ನಾಗಿರುತ್ತದೆ. ಏತಕ್ಕೆಂದರೆ ಈಗ ವ್ಯವಸಾಯಗಾರ ಇನ್ನೂ ಬೆಳವಣಿಗೆ ಆಗಬೆಕಾದ್ದು ಇದೆ. ಆದುದರಿಂದ ಇದನ್ನು ಹಂತಹಂತವಾಗಿ ತರುವುದಕ್ಕೆ ಈಗಾಗಲೇ ಕಾನೂನು ತರುವುದಾದರೆ ವ್ಯವಸಾಯಗಾರನು ಇದನ್ನು ಯಾವರೀತಿಯಲ್ಲೂ ತನ್ನ ಕ್ಷೇತ್ರವನ್ನು ವಿಸ್ತಾರ ಮಾಡುವುದಕ್ಕೆ ಆಗುವುದಿಲ್ಲ. ಈ ದೃಷ್ಟಿಯಿಂದ ಈ ಮಸೂದೆಯನ್ನು ವಾಪಸ್ಸು ಪಡೆಯಬೇಕು ಎಂದು ತಮ್ಮನ್ನು ಕೇಳಿ ಕೊಳ್ಳುತ್ತೇನೆ.

ಇನ್ನು ಈ ಬಗ್ಗೆ ಇನ್ನೊಂದು ವಿಷಯ ಹೇಳುವುದಾದರೆ ಅಧ್ಯಕ್ಷರೇ ತಾವು ನೋಡಿದ ಹಾಗೆ ಮತ್ತು ಇದು ನಮ್ಮೆಲ್ಲರ ಅನುಭವಕ್ಕೆ ಬಂದ ಪ್ರಕಾರ ಸರಕಾರದ ಕ್ಷೇತ್ರದಲ್ಲಿ ನಡೆಯುತ್ತಾ ಇರತಕ್ಕಂಥ ಬೀಜದ ಉತ್ಪಾದನಾ ಕ್ಷೇತ್ರ ಎಷ್ಟರಮಟ್ಟಿಗೆ ಕೆಲಸ ಮಾಡುತ್ತಾ ಇದೆ ಎನ್ನುವುದನ್ನು ನೋಡಿದ್ದೇವೆ. ಸರಕಾರದ ಯಂತ್ರ ಎಷ್ಟರ ಮಟ್ಟಿಗೆ ತೂಕಡಿಕೆ ಹಾಕಿಕೊಂಡು ನಡೆಯುತ್ತಾ ಇದೆ ಎನ್ನುವುದನ್ನು ನೋಡಿದ್ದೇವೆ. ಅದೇ ರೀತಿ ಈ ಸರಕಾರದ ಬೀಜದ ಉತ್ಪಾದನಾ ಕ್ಷೇತ್ರವೂ ಕೂಡ ನಡೆಯುತ್ತದೆ. ಈ ಕ್ಷೇತ್ರದಲ್ಲಿ ವ್ಯವಸಾಯಗಾರನಿಗೆ ಸಾಕಷ್ಟು ಪ್ರಮಾಣದಲ್ಲಿ ಉತ್ತಮವಾದ ಬೀಜವನ್ನು ಒದಗಿಸುವುದಕ್ಕಾಗುವುದಿಲ್ಲ. ಒಂದು ವೇಳೆ ಒದಗಿಸಿದರೂ ಕೂಡ ಅದನ್ನೇ ನಂಬಿ ಯಾವ ವ್ಯವಸಾಯಗಾರರೂ ನೆಮ್ಮದಿಯಿಂದ ಇರಲು ಸಾಧ್ಯವಿಲ್ಲ. ಸರಕಾರ ಒದಗಿಸಿದಂಥ ಬೀಜವನ್ನೇ ತೆಗೆದುಕೊಳ್ಳಿ ಅಥವಾ ಗೊಬ್ಬರವನ್ನೇ ತೆಗೆದು ಕೊಳ್ಳಿ ಆದರಿಂದ ಯಾವ ರೀತಿ ತೊಂದರೆಗಳು ಬರುತ್ತವೆ ಎನ್ನುವುದು ಎಲ್ಲರಿಗೂ ಗೊತ್ತು. ಆದರೆ ಒಬ್ಬ ಕೃಷಿ ವ್ಯವಸಾಯಗಾರನಿಂದಾಗಲಿ ಅಥವಾ ಒಬ್ಬ ಖಾಸಗೀ ಮನುಷ್ಯನಿಂದಾಗಲಿ ಬೀಜವನ್ನು ತೆಗೆದುಕೊಂಡರೆ ಯಾವ ರೀತಿಯೂ ತೊಂದರೆ ಬರುವುದಿಲ್ಲ. ಕಾರಣ ಅವನು ಉತ್ತಮವಾದ ಬೀಜವನ್ನು ಉತ್ಪಾದನೆ ಮಾಡಿದರೆ ಯಾವ ದೃಷ್ಟಿಯಿಂದ ಉತ್ಪಾದನೆ ಮಾಡುತ್ತಾನೆ ಎಂದರೆ ತನ್ನ ಹತ್ತಿರ ತೆಗೆದು ಕೊಂಡು ಹೋಗುವ ಗಿರಾಕಿ ತನ್ನಲ್ಲಿಗೆ ಮತ್ತೆ ಬರಬೇಕು. ಅದರಿಂದ ಹೆಚ್ಚು ಉತ್ತಮವಾದ ಫಸಲು ಸಿಗುವಂತಾಗಬೇಕು ಎನ್ನುವ ದೃಷ್ಟಿಯಿಂದ ಉತ್ತಮವಾದ ಬೀಜವನ್ನು ತಯಾರು ಮಾಡುತ್ತಾನೆ. ಆದರೆ ಸರಕಾರದ ಯಂತ್ರವನ್ನು ನೋಡಿ ದರೆ ಅವರು ಉತ್ಪಾದನೆ ಮಾಡಿದಂಥ ಬೀಜವನ್ನು ವಿತರಣೆ ಮಾಡುವ ಬಗೆ

ಹೇಗೆಂದರೆ ಯಾವ ಜನ ತೆಗೆದುಕೊಂಡು ಹೋದರೆಷ್ಟು, ಬಿಟ್ಟರೆಷ್ಟು, ಯಾವ ಗಿರಾಕಿ ಬಂದರೆಷ್ಟು, ಹೋದರೆಷ್ಟು ಉತ್ತಮವಾದ ಫಸಲು ಬಂದರೆಷ್ಟು, ಬಿಟ್ಟರೆಷ್ಟು, ನನಗೆ ೧೨ ತಿಂಗಳು ಸಂಬಳ ಬರುತ್ತದೆಯಲ್ಲಾ ಎನ್ನುವುದನ್ನು ಆಲೋಚನೆ ಮಾಡುತ್ತಾನೆ. ಸರಕಾರದ ವಿತರಣೆ ವ್ಯವಸ್ಥೆ ಸರಿಯಾಗಿಲ್ಲ. ಆದುದರಿಂದ ನಾನು ಹೇಳುವುದು ಏನೆಂದರೆ ಒಬ್ಬ ಖಾಸಗೀ ಮನುಷ್ಯ ತನ್ನ ಕ್ಷೇತ್ರದಲ್ಲಿ ಎಷ್ಟು ಪ್ರಮಾಣದಲ್ಲಿ ಉತ್ತಮವಾದ ಬೀಜವನ್ನು ಬೆಳೆದು ಹಂಚುತ್ತಾನೊ ಅಷ್ಟೇ ಪ್ರಮಾಣದಲ್ಲಿ ಸರಕಾರದ ಯಂತ್ರ ಕೆಲಸ ಮಾಡುತ್ತಿದೆಯೇ ಎನ್ನುವುದನ್ನು ನಾವು ಪ್ರತಿನಿತ್ಯ ನೋಡುತ್ತಾ ಇದ್ದೇವೆ. ಸರಕಾರದ ಯಂತ್ರದಿಂದ ಬೀಜವನ್ನು ಹಂಚುವ ವ್ಯವಸ್ಥೆಯಾಗಲಿ, ಗೊಬ್ಬರದ ಹಂಚಿಕೆಯ ವ್ಯವಸ್ಥೆಯಾಗಲಿ, ವ್ಯವಸಾಯಗಾರರಿಗೆ ಸಾಲ ಕೊಡುವ ವ್ಯವಸ್ಥೆಯಾಗಲಿ ಯಾವ ರೀತಿ ಮಾಡುತ್ತಿದ್ದಾರೆ ಎನ್ನುವುದನ್ನು ನಾವು ಪ್ರತಿನಿತ್ಯ ನೋಡುತ್ತಿದ್ದೇವೆ. ಈ ದೃಷ್ಟಿಯಿಂದ ನೋಡಿದರೆ ಯಾವವಿಷಯದಲ್ಲೂ ಕೂಡ ತೆಗೆದುಕೊಂಡರೆ ಸರಕಾರದ ಯಂತ್ರದಿಂದ ಈ ವ್ಯವಸಾಯ ಕ್ಷೇತ್ರವನ್ನು ಅಭಿವೃದ್ಧಿ ಪಡಿಸುವುದಕ್ಕೆ ಸಾಧ್ಯವಿಲ್ಲಾ. ಆದುದರಿಂದ ನೀವು ಈ ಒಂದು ಕಾನೂನು ಮಾಡಿ ಅಕ್ಕಪಕ್ಕದ ಜನರಿಗೂ ಕೊಡುತ್ತೇವೆ ಎಂದರೆ ವ್ಯವಸಾಯಗಾರನ ಒಂದು ಹಿತಕ್ಕೆ ಒಂದು ಕುಂದುಕ ಇಟ್ಟಂತಾಗುತ್ತದೆ. ಆ ರೀತಿ ಮಾಡಬೇಡಿ. ಈ ಮಸೂದೆಯಿಂದ ತಕ್ಕ ಬಂದೋಬಸ್ತು ಏರ್ಪಾಡು ಮಾಡುತ್ತೇವೆ ಎಂದು ಈ ಒಂದು ಕಾನೂನನ್ನು ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ.

2-30 P. M.

ಈಗ ನೀವು ಮಾಡುತ್ತಿರುವುದು ಎಷ್ಟರಮಟ್ಟಿಗೆ ನ್ಯಾಯ ಎಂದು ದೀರ್ಘವಾಗಿ ಆಲೋಚನೆ ಮಾಡಬೇಕಾಗುತ್ತವೆ. ವ್ಯವಸಾಯ ಕ್ಷೇತ್ರ ಎಲ್ಲೆಲ್ಲಿ ಇದೆಯೋ ಆ ಕಾರ್ಯ ಕ್ಷೇತ್ರವನ್ನು ಕುಂಠಿತವಾಗುವಂತೆ ಮಾಡಲು ಯಾರೂ ಪ್ರಯತ್ನ ಮಾಡಬಾರದು. ಮಾನ್ಯ ಅಧ್ಯಕ್ಷರೇ, ಈಗ ಏನು ಮಸೂದೆಯನ್ನು ತಂದಿದ್ದಾರೆ ಇದು ಸಮರ್ಪಕವಾದುದು ಅಲ್ಲ ಇದನ್ನು ೧೦ ವರ್ಷಗಳಾದಮೇಲೆ ತರಬೇಕಾಗಿತ್ತೇ ಹೊರತು ಈಗ ತರತಕ್ಕಂಥಾದ್ದು ಯೋಗ್ಯವಲ್ಲ ಆ ಕಾಲ ಇನ್ನೂ ಬಂದಿಲ್ಲ, ಪಕ್ವವಾಗಿಲ್ಲ ಆದ್ದರಿಂದ ಈ ಮಸೂದೆ ನ್ಯಾಯ ಸಮ್ಮತವಾದ ಮಸೂದೆಯಲ್ಲವೆಂದು ಈ ಸಂದರ್ಭದಲ್ಲಿ ಹೇಳಲು ಇಷ್ಟಪಡುತ್ತೇನೆ. ಈ ಕಾನೂನಿನಿಂದ ದೊಡ್ಡ ಆತಂಕ ಬರುತ್ತದೆ. ಇದರಲ್ಲಿ ಸರ್ಕಾರದವರು ನಿರ್ದೇಶನ ಏನು ಈ ಕ್ಷೇತ್ರದಲ್ಲಿ ಇದೆ ಇದು ಕೂಡ ಇಲಾಖೆಗೆ ಉಳಿದಿರತಕ್ಕಂಥದ್ದು ಸರಿಯಲ್ಲ. ಒಂದು ಗ್ರಾಮದಲ್ಲಿ ಬೀಜದ ಉತ್ಪಾದನಾ ಕೇಂದ್ರವನ್ನು ತೆಗೆದರೆ ಮತ್ತೊಂದು ಗ್ರಾಮಕ್ಕೆ ವಿಸ್ತರಿಸುವುದಕ್ಕೆ ಬರುವುದಿಲ್ಲ ನಿರ್ಬಂಧಹಾಕಿದಂತಾಗುತ್ತದೆ. ಆರೀತಿ ನಿರ್ಬಂಧಗಳನ್ನು ವ್ಯವಸಾಯ ಕ್ಷೇತ್ರಗಳಲ್ಲಿ ಹಾಕಿದರೆ ವ್ಯವಸಾಯಗಾರ ಯಾವುದೇ ಒಂದು ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಮಾಡುವುದಕ್ಕೆ ತೊಂದರೆಯಾಗುತ್ತದೆ. ಉದಾಹರಣೆಗೆ ಹೇಳುವುದಾದರೆ ಒಂದು ತಾಲ್ಲೂಕಿನಲ್ಲಿ ಅಥವಾ ಹಳ್ಳಿಯಲ್ಲಿ ಯಾವುದಾದರೂ ಒಂದು

ಉತ್ಪಾದನಾ ಕೇಂದ್ರವನ್ನು ಮಾಡಿ ಅಲ್ಲಿ ಬೀಜವನ್ನು ಉತ್ಪಾದನೆ ಮಾಡುತ್ತಾರೆ. ಅಂದಮಾತ್ರಕ್ಕೆ ಇಡೀ ತಾಲ್ಲೋಕಿನಲ್ಲಿ ಬೇರೆ ಎಲ್ಲಿಯೂ ಈ ರೀತಿ ಉತ್ಪಾದನಾ ಕೇಂದ್ರ ವನ್ನು ಹಾಕಬಾರದು ಎಂದು ನಿರ್ಬಂಧ ಹಾಕಿದರೆ, ಯಾರು ಉತ್ಪಾದನೆ ಮಾಡ ಬೇಕೆಂದು ಆಕಾಂಕ್ಷೆ ಇಟ್ಟುಕೊಂಡಿರುತ್ತಾರೆ ಅವರಿಗೆ ನಿರಾಶೆಯಾಗುತ್ತದೆ. ಇಂಥ ಅಧಿಕಾರ ಸರ್ಕಾರಕ್ಕೆ ಕೊಟ್ಟರೆ ಒಂದು ತಾಲ್ಲೋಕಿನಲ್ಲಿ ಯಾವುದಾದರೂ ಉತ್ಪಾದನೆ ಕೇಂದ್ರ ಇದ್ದರೆ ಆ ತಾಲ್ಲೋಕಿನಲ್ಲಿ ಬೇರೆ ಯಾವ ಉತ್ಪಾದನಾ ಕೇಂದ್ರವನ್ನು ತೆಗೆಯಲು ಅವಕಾಶ ಇಲ್ಲದೆ ಜನರಿಗೆ ದೊಡ್ಡ ಕಷ್ಟವಾಗುತ್ತದೆ. ಸುಮಾರು ೧೭೭ ತಾಲ್ಲೋಕು ಗಳಲ್ಲಿ ಕೇಂದ್ರಗಳು ಇದ್ದರೆ ಸರ್ಕಾರ ೨೫–೩೦ ಕೇಂದ್ರಗಳನ್ನು ಕೈಗೊಳ್ಳುತ್ತದೆ. ಉಳಿದ ಕ್ಷೇತ್ರಗಳಲ್ಲಿ ಒಂದು ಜಿಲ್ಲೆಯಲ್ಲಿ ಒಂದು ಬೀಜದ ಉತ್ಪಾದನಾ ಕೇಂದ್ರವನ್ನು ತೆರೆದರೆ ಬೇರೆ ಯಾವ ತರಹದ ಬೀಜದ ಕೇಂದ್ರವನ್ನು ಮಾಡಲು ಅವಕಾಶವಿಲ್ಲದಂತೆ ಆಗುತ್ತದೆ.

ಅಧ್ಯಕ್ಷರು.— ತಿಮ್ಮಪ್ಪನವರೇ, ಇದು ಕೃಷಿಗೆ ಸಂಬಂಧಪಟ್ಟದ್ದು ಅಲ್ಲ. ಇದು ಹಾರ್ಟಿಕಲ್ಚರ್ ಬಗ್ಗೆ....

ಶ್ರೀ ಕೆ. ಎಚ್. ಪಾಟೀಲ.— ಇದು ಸೀಡ್‌ಫಾರಂ ಎಸ್ಟಾಬ್ಲಿಷ್ ಮಾಡುವು ದಕ್ಕೆ ಅವಕಾಶ ಇರಲಿ ಎಂದು ಇದನ್ನು ತಂದಿದ್ದೇವೆ ಅಷ್ಟೇ?

ಶ್ರೀ ಕಾಗೋಡು ತಿಮ್ಮಪ್ಪ.— ಉದಾರಣೆಗೆ ಕೆಲವರು ಮಾವಿನಗಿಡ ಕಸಿಮಾಡಿ ಅದನ್ನು ಹೈಬ್ರೀಡ್ ತಳಿಯನ್ನಾಗಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆಂದು ಇಟ್ಟುಕೊಳ್ಳಿ.

ಶ್ರೀ ಎಚ್ ಎಂ. ಚೆನ್ನಬಸಪ್ಪ.— ಮಾನ್ಯ ತಿಮ್ಮಪ್ಪನವರೇ, ಈ ಮಸೂದೆ ಬಗ್ಗೆ ಇಷ್ಟೊಂದು ವ್ಯಾಖ್ಯಾನ ಮಾಡಬೇಕಾದ್ದು ಅವಶ್ಯವಿಲ್ಲ. ಹೈಬ್ರೀಡ್‌ಸೀಡ್ಸ್ ಒದಗಿಸುವ ವಿಷಯದಲ್ಲಿ ಯಾವ ಭಿನ್ನಾಭಿಪ್ರಾಯವಿಲ್ಲ. ಇದನ್ನು ಯಾರು ಮಾಡ ಬೇಕು ಎಂಬುದು ಪ್ರಶ್ನೆ. ಇದು ತಾಂತ್ರಿಕವಾಗಿ ಒಳ್ಳೆಯ ಮೇಲ್ವಿಚಾರಣೆ ಇಟ್ಟು ಕೊಂಡು ಒಳ್ಳೆಯ ತಾಂತ್ರಿಕ ರೀತಿಯಲ್ಲಿ ಮಾಡಬೇಕಾದ್ದು ಅವಶ್ಯಕ. ಅದನ್ನೇ ಈಗ ನಾವು ಮಾಡಿರುವುದು. ಯಾರು ಹೈಬ್ರೀಡ್ ಸೀಡ್ಸ್‌ನ್ನು ಬೆಳೆಯುತ್ತಾರೆ ಅವರು ಸರಿಯಾದ ವ್ಯವಸ್ಥಿತ ರೀತಿಯಲ್ಲಿ ಬೀಜವನ್ನು ಉತ್ಪಾದನೆ ಮಾಡಿದರೆ ಸರಿ, ಇಲ್ಲವಾದರೆ ದೇಶದಲ್ಲಿ ಉತ್ಪಾದನೆ ಕಡಿಮೆಯಾಗಿ ಕೃಷಿ ಉತ್ಪಾದನೆ ಹೆಚ್ಚಾಗಲು ಅವಕಾಶವಾಗುವುದಿಲ್ಲ. ತಾವು ಹೇಳುವುದು ನನ್ನ ಮನಸ್ಸಿಗೆ ತಿಳಿದಹಾಗೆ ತಾಂತ್ರಿಕ ವಾಗಿ ದಕ್ಷತೆಯಿಂದ ಸರ್ಕಾರದ ಮೇಲ್ವಿಚಾರಣೆಯಲ್ಲಿ ಈ ಕೇಂದ್ರಗಳ ಅನುಕೂಲವನ್ನು ಉಪಯೋಗಿಸಿಕೊಳ್ಳಬಹುದು ಎನ್ನುವ ಒಂದು ಅಭಿಪ್ರಾಯ ತಮ್ಮದು. ಯಾವ ಜನ ಸರ್ಕಾರದ ಮೇಲ್ವಿಚಾರಣೆಯಲ್ಲಿ ಲೋಪಬಾರದಂತೆ ಉತ್ತಮ ತಳಿಯನ್ನು ಉತ್ಪಾದನೆ ಮಾಡುವುದಕ್ಕೆ ಮುಂದೆ ಬರುತ್ತಾರೆ ಅಂತಹ ಸರ್ಟಿಫೈಡ್ ಜನಗಳಿಗೂ ಅವಕಾಶ ಕೊಡಬೇಕು ಎನ್ನುವುದೇ ತಮ್ಮ ವಾದವೆಂದು ನಾನು ತಿಳಿದುಕೊಂಡಿದ್ದೇನೆ. ಇದರ

ಬಗ್ಗೆ ತಾವು ಒಂದು ಅಮೆಂಡ್‌ಮೆಂಟ್ ತಂದರೆ ಅದನ್ನು ಸರ್ಕಾರದವರು ಪರಿಗಣಿಸ ಬಹುದು.

ಶ್ರೀ ಕಾಗೋಡು ತಿಮ್ಮಪ್ಪ — ಉದಾಹರಣೆಗೆ ಗೇರುಗಿಡ, ಮಾವಿನಗಿಡ ಮುಂತಾದ ಇನ್ನು ಅನೇಕ ರೀತಿ ಗಿಡಗಳನ್ನು ಬೆಳೆಯಲು....

ಶ್ರೀ ಕೆ. ಎಚ್. ಪಾಟೀಲ್.— ಯಾವುದಾದರೂ ಸೀಡ್ ಬೆಳೆಯಲು ಖಾಸಗಿ ಜನಗಳಿಗೆ ಅವಕಾಶ ಕೊಟ್ಟರೂ ಕೂಡ ಅದರ ಪಕ್ಕದಲ್ಲಿ ಮತ್ತೊಬ್ಬರು ಜೋಳ ಬೆಳೆಯಬಾರದು ಎಂದು ಪ್ರೋಹಿಬಿಟ್ ಮಾಡುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ.— ನಿಮ್ಮ ಸರ್ಕಾರದ ಫಾರಂನಲ್ಲಿ ಬೆಳೆಯತಕ್ಕಂಥ ತಳಿಗಿಂತ ಉತ್ತಮ ತಳಿಯನ್ನು ಬೆಳೆಯುವ ಖಾಸಗಿಯವರು ಇದ್ದಾರೆಂದು ನಾನು ಬೇಕಾದರೆ ತೋರಿಸುತ್ತೇನೆ.

ಶ್ರೀ ಎಚ್. ಎಂ. ಚೆನ್ನಬಸಪ್ಪ —ಹೈಬ್ರೀಡ್ ಉತ್ತಮ ತಳಿಯನ್ನು ಉತ್ಪಾದನೆ ಮಾಡಲು ಕೆಲವು ಪ್ರಕೃತಿ ನಿಯಮಗಳು ಬೇಕು. ಈಗ ಇರತಕ್ಕಂಥ ರೀತಿಯಲ್ಲಿ ಸರ್ಕಾರವೇ ಮಾಡಲಿ, ಖಾಸಗಿಯವರ ಕೈಯಲ್ಲೇ ಮಾಡಿಸಲಿ ಒಂದು ಫರ್ಲಾಂಗ್ ಎರಡು ಫರ್ಲಾಂಗ್ ದೂರದಮೇಲೆ ಮಾಡಬೇಕಾಗುತ್ತದೆ. ಆದ್ದರಿಂದ ಮಾಡ ಕೂಡದು ಎಂದು ಹೇಳಲು ಸರ್ಕಾರಕ್ಕೆ ಅಧಿಕಾರವಿಲ್ಲ. ಇದಕ್ಕೆ ಬೇಕಾಗಿರುವ ಪ್ರಕೃತಿ ವಿಶೇಷಗಳನ್ನು ನಿರ್ಮಾಣ ಮಾಡಿಕೊಳ್ಳುವುದಕ್ಕೆ ಸರ್ಕಾರವೇ ಮಾಡಲಿ, ಅಥವಾ ಸಾರ್ವಜನಿಕರೇ ಮಾಡಲಿ, ಅವಕಾಶ ಕೊಡುತ್ತೇವೆಂದು ಇಟ್ಟುಕೊಳ್ಳಿ, ನೀವು ಉತ್ತಮ ತಳಿ ಬೀಜವನ್ನು ಬೆಳೆಯಿರಿ ಎಂದರೆ ಒಂದೆರಡು ಫರ್ಲಾಂಗ ಒಳಗೆ ಬೇರೆ ತಳಿಯ ಬೀಜವನ್ನು ಬೆಳೆಯಬಾರದು. ಆ ರೀತಿ ಏನಾದರೂ ಬೆಳೆದರೆ ನಮ್ಮ ಉದ್ದೇಶ ಸಫಲವಾಗುವುದಿಲ್ಲ. ಅದನ್ನು ಕ್ರಿಯೇಟ್ ಮಾಡಿಕೊಳ್ಳಬೇಕಾದರೆ ಅಧಿಕಾರ ಬೇಕೋ ಇಲ್ಲವೋ ಹೇಳಿ. ಇಷ್ಟೇ ಇದರ ಮೂಲ ಉದ್ದೇಶ.

ಶ್ರೀ ಕಾಗೋಡು ತಿಮ್ಮಪ್ಪ.— ಸೆಕ್ಷನ್ ನಾಲ್ಕರಲ್ಲಿ ತಾವು ಏನು ಹೇಳುತ್ತೀರಿ? ಸೆಕ್ಷನ್ ಮೂರರ ಪ್ರಕಾರ ಏನು ಹೇಳುತ್ತೀರಿ? ಈ ಸೀಡ್ ಫಾರಂ ಗ್ರಾಮ ಗ್ರಾಮಕ್ಕೂ ಸೀಮಿತವಾಗಿರುತ್ತದೆ. ಇಡೀ ತಾಲ್ಲೂಕಿನಲ್ಲಿ ಒಂದು ಫಾರಂ ಮಾಡಿದರೆ ಮತ್ತೊಬ್ಬರು ಯಾರು ಮಾಡಬಾರದು ಎಂದು ಹೇಳಿದರೆ ಅದು ಹೇಗೆ ಸಾಧ್ಯ ವಾಗುತ್ತದೆ?

ಶ್ರೀ ಕೆ. ಎಚ್. ಪಾಟೀಲ.— ಇಷ್ಟು ದೂರದಲ್ಲಿ ಈ ಬೆಳೆಯನ್ನು ಇಡ ಬಾರದು ಎಂದು ಹೇಳುತ್ತೇವೆ ಅಷ್ಟೆ. ಯಾರು ಯಾವ ಬೆಳೆಯನ್ನೂ ಬೆಳೆಯ ಬಾರದು ಹೇಳುವುದಕ್ಕೆ ಆಗುವುದಿಲ್ಲ.

ಶ್ರೀ ಎಚ್. ಎಂ. ಚೆನ್ನಬಸಪ್ಪ — ಎರಡು, ಮೂರು ಫರ್ಲಾಂಗ ಎಂದರೆ ಅರ್ಥ ಎಲ್ಲೂ ಬೆಳೆಯಬಾರದು ಎಂದು ಅಲ್ಲ, ಯಾವಾಗಲೂ ಪರ್ಟಿಕುಲರ್ ಕ್ರಾಪ್ ಬೆಳೆಯಬೇಕಾದರೆ ಅದಕ್ಕೆ ತಕ್ಕಂತೆ ಏರಿಯಾ ಇರುತ್ತವೆ, ಆ ಬೆಳೆಗೆ ಬೇಕಾದಂಥ

ವಿಧಾನಗಳು ಇರುತ್ತವೆ. ಯಾವ ಬೆಳೆಗೆ ಎಷ್ಟು ಜಾಗ ಮತ್ತು ಎಷ್ಟು ಅಂತರ ದೂರ ಇರಬೇಕೆಂದು ತಾಂತ್ರಿಕವಾಗಿ ಇರುತ್ತದೆ ಅಷ್ಟನ್ನು ಮಾತ್ರ ಪ್ರೋಹಿಬಿಟ್ ಮಾಡುತ್ತೇವೆ. ಅವೆಲ್ಲಾ ಈ ರೂಲಿನಲ್ಲಿ ಬರುತ್ತವೆ.

ಶ್ರೀ ಕೆ. ಎಫ್. ಪಾಟೀಲ.— ಹೈಬ್ರೀಡ್ ಬೀಜ ಬೆಳೆಯುವ ವಿಷಯದಲ್ಲಿ ಖಾಸಗಿಯವರೇ ಆಗಲಿ ಅಥವಾ ಸರ್ಕಾರದವರೇ ಆಗಲಿ ಈ ಬೆಳೆಯನ್ನು ತೆಗೆಯು ಚೆ ಕಾದರೆ ಇದರಲ್ಲಿ ಬಹಳ ಕಷ್ಟವಿರುತ್ತದೆ. ಉದಾಹರಣೆಗೆ ಹೇಳಬೇಕೆಂದರೆ ನಾನು ಸ್ವತಃ ಹೈಬ್ರೀಡ್ ಬೆಳೆ ಬೆಳೆದಿದ್ದೇನೆ. ಈ ಬೆಳೆಯನ್ನು ಇಡಬೇಕಾದರೆ ಪಕ್ಕದಲ್ಲಿ ಸುಮಾರು ೮ ನೂರು ಅಡಿಗಳಷ್ಟಾದರೂ ಅಂತರವಿರಬೇಕು. ಸಾದಾ ಜೋಳದ ಬೀಜ ಹಾಕಿದರೂ ಕೂಡ ಈ ಅಂತರ ಇಲ್ಲದೆ ಹೋದರೆ ಹೈಬ್ರೀಡ್ ಬೆಳೆ ಕೆಟ್ಟು ಹೋಗುತ್ತವೆ. ಇದರಿಂದ ಬಹಳಷ್ಟು ಜನರು ಮೈಜ್ ಬೆಳೆಯಲು ಹೋಗಿ ಬೇಕಾದಷ್ಟು ನಷ್ಟ ಹೊಂದಿರುವವರು ಇದ್ದಾರೆ.

ಮಾನ್ಯ ತಿಮ್ಮಪ್ಪನವರ ಅಭಿಪ್ರಾಯದ ಪ್ರಕಾರ ಸರ್ಕಾರದವರು ಸೀಡ್ ಪಾರ್ಮಿಂಗ್ ಮಾಡಲೀ ಅಥವಾ ಖಾಸಗೀಯವರು ಸೀಡ ಫಾರ್ಮಿಂಗ್ ಮಾಡಲೀ, ೮೦೦ ಅಡಿ ಅಥವಾ ೩೦೦ ಅಡಿಯ ತನಕ ಬೇರೆಯವರು ಇದೇ ಬೀಜವನ್ನು ಬೆಳೆಸ ಬಾರದು ಎನ್ನುವ ರಿಸ್ಟ್ರಿಕ್ಶನ್ ಹಾಕುವುದು ಅತ್ಯಾವಶ್ಯಕ. ಇದನ್ನು ಸರ್ಕಾರದವರು ಮಾಡಬೇಕೇ, ಖಾಸಗೀಯವರು ಮಾಡಬೇಕೇ ಎನ್ನುವ ಅಭಿಪ್ರಾಯಗಳು ನಮ್ಮ ಮುಂದೆ ಇವೆ. ಇವತ್ತು ಕೆಲವೊಂದು ಹಿತಾಸಕ್ತಿಗಳು ಇಡೀ ಊರಿಗೆ ಊರಿನಲ್ಲಿ ನಿರ್ಧಿಷ್ಟವಾದ ಬೀಜಗಳನ್ನು ಬೆಳೆಸಲಿಕ್ಕೆ ಲಾವಣಿ ಹಾಕಿಕೊಂಡು ಕೋಟ್ಯಾಧೀಶ್ವರ ರಾಗಿದ್ದಾರೆ. ಸೀಡ್ ಕಿಂಗ್ಸ್ ಆಗಿದ್ದಾರೆ. ಇಲ್ಲಿ ಅತ್ಯುತ್ತಮವಾದ ಬೀಜಗಳನ್ನು ಬೆಳೆಯುವುದಕ್ಕೆ ಪ್ರಾಶಸ್ತ್ಯ ಕೊಡಬೇಕಾಗಿದೆ. ಇವತ್ತಿನ ಪರಿಸ್ಥಿತಿಯಲ್ಲಿ ಸರ್ಕಾರ ದವರೇ ಎಲ್ಲವನ್ನೂ ಒದಗಿಸುವುದಕ್ಕೆ ಸಾಧ್ಯವಾಗುವುದಿಲ್ಲ ಇದರ ಬಗ್ಗೆ ಮಾನ್ಯ ಸಚಿವರು ಸ್ಪಷ್ಟೀಕರಣ ಮಾಡಬೇಕು. ಎಲ್ಲವನ್ನೂ ಸರ್ಕಾರದವರೇ ಮಾಡುತ್ತಾರೆಯೇ ಅಥವಾ ಖಾಸಗೀಯವರಿಗೂ ಪರವಾನಗೆ ಕೆಸಡುತ್ತಾರೆಯೇ ಎನ್ನುವುದರ ಬಗ್ಗೆ ಮಾನ್ಯ ಸಚಿವರು ಸ್ಪಷ್ಟೀಕರಣ ಮಾಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ — ಮಾನ್ಯ ಪಾಟೀಲರ ಉದ್ದೇಶ ಏನೆಂದರೆ, ಸೀಡ್ಸ್ ಪಾಲಿನೇಷನ್ ಆಗಬೇಕು ಎನ್ನುವ ದೃಷ್ಟಿಯಿಂದ ಒಂದು ಸೀಡ್ ಫಾರ್ಮಿನಿಂದ ಇನ್ನೊಂದು ಸೀಡ್ ಫಾರಂಗೆ ಇಷ್ಟು ದೂರ ಇರಬೇಕು, ಇಷ್ಟು ಅಂತರ ಇರಬೇಕು ಎನ್ನುವ ಅವರ ಅಭಿಪ್ರಾಯವನ್ನು ನಾನು ಒಪ್ಪುತ್ತೇನೆ. ಆದರೆ ಇಲ್ಲಿ ಏನಾಗಿದೆ ಎಂದರೆ, ವ್ಯವಸಾಯ ವಿಜ್ಞಾನದಲ್ಲಿ ಇನ್ನೂ ಸ್ಪಷ್ಟವಾದಂಥ ಕೆಲವು ತೀರ್ಮಾನಕ್ಕೆ ನಾವು ಬಂದಿಲ್ಲ. ಜೋಳ ಹಾಕಿದಾಗ, ಆ ಜೋಳದ ನಿರ್ಧಿಷ್ಟವಾದ ಪ್ರದೇಶದಿಂದ ಒಂದೇ ಪಾಲನೇಷನ್ ಆಗಬೇಕು ಎನ್ನುವ ದೃಷ್ಟಿಯಿಂದ ಇನ್ನೊಂದು ಪ್ರದೇಶಕ್ಕೆ ಒಂದೆರಡು ಫರ್ಲಾಂಗ ಇಷ್ಟು ದೂರ ಇರಬೇಕು ಎಂದು ಯಾವ ಥಿಯರಿಯಲ್ಲಿಯೂ ಖಚಿತವಾಗಿ ಹೇಳಿಲ್ಲ. ನಾವು ಯಾವ ಒಂದು ಕ್ಷೇತ್ರವನ್ನು ಇದಕ್ಕಾಗಿ ಸೀಮಿತ

ಗೊಳಿಸುತ್ತೀರೋ ಅದರ ಅಕ್ಕ ಪಕ್ಕದಲ್ಲಿ ಯಾರೂ ಇದೇ ಬೀಜವನ್ನು ಹಾಕಬಾರದು ಎನ್ನುವ ನಿಷೇಧವನ್ನು ತಾವು ಹಾಕುತ್ತಿದ್ದೀರಿ. ಎಷ್ಟು ದೂರ ಇದೇ ರೀತಿಯ ಬೀಜವನ್ನು ಹಾಕಬಾರದು ಎನ್ನುವುದಕ್ಕೆ ತಾವು ವಿವರಣೆಯನು ಕೊಡಬೇಕು.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ನಾವು ರೂಲ್ಸ ಮಾಡುವಾಗ, ಇಂಥಿಂಥ ಕಡೆಗೆ ಇಷ್ಟು ಇಷ್ಟು ದೂರ ಇಂಥಿಂಥ ಬೀಜಗಳನ್ನು ಬೆಳೆಯಬೇಕು ಎಂದು ಮಾಡ ತಕ್ಕದ್ದು ಇದೆ. ಬೀಜಗಳನ್ನು ಸರ್ಕಾರದವರು ಮಾಡುವುದರ ಜೊತೆಗೆ ಖಾಸಗಿ ಜನರು ಹಾಕಬಹುದೇ ಎನುವುದಕ್ಕೆ ಮಾನ್ಯ ಮಂತ್ರಿಗಳು ಯೋಚನೆ ಮಾಡಿ ತವ ಗೆ ಹೇಳುತ್ತಾರೆ. ಇಲ್ಲಿ ಒಂದು ಅಂಶವನ್ನು ನಾನು ಸ್ಪಷ್ಟಪಡಿಸಬೇಕಾಗುತ್ತದೆ. ಉದಾ ಹರಣೆಗೆ, ಎಬ್ಬ ಒಂದು ಎಕರೆಯಲ್ಲಿ ಒಂದು ರೀತಿಯ ಬೀಜವನ್ನು ಹಾಕಿದರೆ, ಮತ್ತೊಬ್ಬ ನಾನು ಅದೇ ಬೀಜವನ್ನು ಹಾಕುತ್ತೇನೆ ನೀವು ಯಾರು ಕೇಳಲಿಕ್ಕೆ ಎಂದು ಹೇಳಿದರೆ, ಹೇಗೆ? ಅವನು ಉತ್ತಮವಾದ ಬೀಜವನ್ನು ಬೆಳೆಯದೇ ಇದ್ದ ಪಕ್ಷದಲ್ಲಿ ತೊಂದರೆಯಾಗುತ್ತದೆ. ಆದ್ದರಿಂದ ಸರ್ಕಾರದವರು ಇಷ್ಟು ಇಷ್ಟು ದೂರದಲ್ಲಿ ಇಂಥಿಂಥ ಬೀಜಗಳನ್ನು ಹಾಕಬೇಕು ಎಂದು ಲೈಸನ್ಸ ಕೊಟ್ಟ ಪಕ್ಷದಲ್ಲಿ ಬೀಜಗಳಿಗೆ ತೊಂದರೆಯಾಗಲಾರದು.

ಶ್ರೀ ಎಚ್. ಸಿದ್ದವೀರಪ್ಪ.—ಯಾರಾದರೂ ಆಗಲೀ, ಅವರು ಕೊಟ್ಟ ಬೀಜ ಹುಟ್ಟುವುದಿಲ್ಲ ಎಂದರೆ ಅವರಿಗೆ ಶಿಕ್ಷೆ ಮಾಡಬೇಕು.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಇದು ಸರ್ಕಾರದ ಕಂಟ್ರೋಲಿನಲ್ಲಿ ಬೆಳೆಯ ಬೇಕು. ಅಥವಾ ಸರ್ಕಾರದವರೇ ಬೆಳೆಸುವಂತೆ ಆಗಬೇಕು. ಈ ರೀತಿ ಮಾಡದೇ ಇದ್ದರೆ, ದೇಶದಲ್ಲಿ ಜನಗಳಿಗೆ ತೊಂದರೆಯಾಗುತ್ತದೆ. ಎರಡೂ ಇಲ್ಲದೆ, ಯಾರಾದರೂ ಬೀಜ ಬೆಳಿಯಬಹುದು ಎಂದರೆ ಇದರಿಂದ ನಷ್ಟವಾಗಬಹುದು.

ಶ್ರೀ ಕಾಗೋಡು ತಿಮ್ಮಪ್ಪ.—ಇವತ್ತು ಅನೇಕ ವ್ಯವಸಾಯ ತಾಂತ್ರಿಕಜ್ಞರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ತುಮಕೂರು ಜಿಲ್ಲೆಗಳಲ್ಲಿ ಮತ್ತು ಇತರ ಜಿಲ್ಲೆಗಳಲ್ಲಿ ತೆಂಗಿನ ಸಸಿಗಳನ್ನು, ಮಾವಿನ ಸಸಿಗಳನ್ನು ಉತ್ತಮವಾಗಿ ಬೆಳೆಸುತ್ತಾರೆ ಎಂದು ಹೇಳಿದ್ದಾರೆ ಖಾಸಗೀ ಜನರ ಉತ್ತಮವಾದ ಬೀಜಗಳನ್ನು ಜನರಿಗೆ ಕೊಡುತ್ತಿದ್ದಾರೆ.

ಅರಸೀಕೆರೆ ಜಿಲ್ಲೆಯಲ್ಲಿ ಸಸಿಗಳನ್ನು ತಂದು ಮಲೆನಾಡಿನಲ್ಲಿ ಉತ್ತಮವಾದಂಥ ತೆಂಗಿನ ಮರಗಳನ್ನು ಬೆಳೆಸಿದ್ದಾರೆ ಆದ್ದರಿಂದ ಅಲ್ಲಿ ಉತ್ತಮವಾಂಥ ಸಸಿಗಳನ್ನು ಬೆಳೆಸತಕ್ಕ ಜನಗಳು ಇದ್ದಾರೆ. ಅರಸೀಕೆರೆ ಸೀಡ್ ಫಾರ್ಮಿಂಗ್ ಏನು ಇದೆ ಅದರ ಸುತ್ತುಮುತ್ತು ಖಾಸಗೀ ಜನರು ತೆಂಗಿನ ಸಸಿಗಳನ್ನು ಬೆಳೆಸುತ್ತಾರೆ. ಇವತ್ತು ಸರ್ಕಾರದವರು ತಮ್ಮ ಸೀಡ್ ಫಾರ್ಮಿಂಗ್ ಇಂದ ಇಷ್ಟು ದೂರು ಯಾರೂ ತೆಂಗಿನ ಸಸಿಗಳನ್ನು ಬೆಳೆಸಬಾರದು ಎನ್ನುವ ನಿರ್ಬಂಧವನ್ನು ಹಾಕಿದರೆ, ದೇಶದಲ್ಲಿ ಜನಗಳಿಗೆ ತೊಂದರೆಯಾಗುತ್ತದೆ. ಅಕ್ಕಪಕ್ಕದ ಜಿಲ್ಲೆಯವರು ಇವರನ್ನೇ ನಂಬಿ

ಕೊಂಡು ಕೂತಿದ್ದಾರೆ. ಇವರಿಂದ ಸಂಪೂರ್ಣವಾಗಿ ಫಲವನ್ನು ಅವರು ಪಡೆಯು ಬೇಕಾಗಿದೆ. ಖಾಸಗೀ ಜನರು ಒದಗಿಸತಕ್ಕಂಥ ತೆಂಗಿನ ಸಸಿಗಳನ್ನು ನೆಟ್ಟು ಇವತ್ತು ಒಳ್ಳೆಯ ಫಸಲನ್ನು ಕೃಷಿದಾರರು ಪಡೆಯುವುದಕ್ಕೆ ಸಾಧ್ಯವಾಗಿದೆ. ಕೆಲಸಕ್ಕೆ ಬಾರದೆ ಇರತಕ್ಕಂಥ ಸಸಿಗಳನ್ನು ಬೆಳೆಸುವುದಕ್ಕೆ ತಾವು ಪ್ರೋತ್ಸಾಹ ಕೊಡಬೇಡಿ. ಆದ್ದರಿಂದ ತಮ್ಮ ನಿರ್ಭಂದ ಏನು ಇದೆ, ಇದಕ್ಕೆ ಸ್ವಲ್ಪ ಬ್ರೇಕ್ ಹಾಕಬೇಕಾಗುತ್ತದೆ. ಆ ಪ್ರದೇಶದಲ್ಲಿ ಯಾರೂ ತೆಂಗಿನ ಸಸಿಗಳನ್ನು ಬೆಳೆಸುವುದಕ್ಕಾಗುವುದಿಲ್ಲ ಎನ್ನುವ ನಿರ್ಭಂದವನ್ನು ಹಾಕಿದರೆ, ಜನರಿಗೆ ತೊಂದರೆಯಾಗುತ್ತದೆ. ನಾನು ಈ ಸಂದರ್ಭ ದಲ್ಲಿ ತಮ್ಮನ್ನು ಒಂದು ಪ್ರಶ್ನೆ ಕೇಳಬೇಕಾಗಿದೆ, ಸರ್ಕಾರದವರು, ತೆಂಗಿನ ಸಸಿ, ಅನಾನಸ್, ಮತ್ತು ಇನ್ನು ಇತರೆ ಸಸಿಗಳನ್ನು ಸಂಪೂರ್ಣವಾಗಿ, ವ್ಯವಸಾಯ ಗಾರರಿಗೆ ಬೇಕಾಗುವಷ್ಟು ಸಸಿಗಳನ್ನು ಒದಗಿಸುತ್ತೇನೆ ಎನ್ನುವ ಭರವಸೆಯನ್ನು ಕೊಡುತ್ತಾರೆಯೇ ? ಇದು ಆಗುವುದಿಲ್ಲ ಎಂದು ನನ್ನ ಭಾವನೆ. ತಾವು ಹೈ ಈಲ್ಡಿಂಗ್ ಸೀಡ್ ಫಾರ್ಮಿಂಗ್ ಮಾಡಿದರೆ, ಅದರ ಒಂದು ನೂರು ಗಜದಲ್ಲಿ ಯಾರೂ ಅದೇ ಬೀಜವನ್ನು ಬೆಳೆಯಬಾರದು ಎಂದು ಕಾನೂನನ್ನು ಮಾಡಲಿ, ಆದರೆ ಇದೇ ಸಂದರ್ಭವನ್ನು ಬೇರೆ ಜನರು ಉಪಯೋಗಿಸಿಕೊಂಡು, ತಮ್ಮ ಒಲುವನ್ನು ಪಡೆದು ಕೊಂಡು, ಅವರು ಒಂದು ಪ್ರದೇಶದಲ್ಲಿ ಬೀಜವನ್ನು ಬೆಳೆಯಲಿಕ್ಕೆ ಪರವಾನಿಗೆ ಪಡೆದುಕೊಂಡು, ಅವರ ಜಮೀನಿನ ಸುತ್ತಮುತ್ತ ನಿರ್ದಿಷ್ಟವಾದ ಬೀಜವನ್ನು ಯಾರೂ ಹಾಕಬಾರದು ಎಂದು ನೋಟಿಫಿಕೇಷನ್‌ಅನ್ನು ಹೊರಡಿಸಿದರೆ ಉತ್ತಮ ಬೀಜ ಪಡೆಯಕ್ಕ ವ್ಯವಸಾಯಗಾರನ ಗತಿ ಏನಾಗಬೇಕು ? ಇದನ್ನು ತಾವು ಚೆನ್ನಾಗಿ ಮನಗಾಣಬೇಕು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಉತ್ತಮವಾದಂಥ ಮಾವಿನ ಸಸಿಗಳನ್ನು ಬೆಳೆಸುತ್ತಾರೆ. ಇದು ಸರ್ಕಾರದ ಸೀಡ್ ಫಾರ್ಮಿಂಗ್ ಇಂದ ಸಾಧ್ಯವಾಗುವುದಿಲ್ಲ. ಅಲ್ಲಿ ತಮ್ಮ ಸೀಡ್ ಫಾರ್ಮಿಂಗ್‌ನ ಅಕ್ಕಪಕ್ಕದವರು ಯಾರೂ ಸಸಿಗಳನ್ನು ಬೆಳೆಸಬೇಡಿರಿ ಎಂದು ನಿರ್ಭಂದ ಹಾಕುವುದಾದರೆ ತೊಂದರೆಯಾಗುತ್ತದೆ ಆದ್ದರಿಂದ ಕಂಟ್ರೋಲ್ಡ್ ಏರಿಯಾದ ಸೀಮಿತವನ್ನು ಸ್ಪಷ್ಟಪಡಿಸಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಇಂದು ಹೈ ಬ್ರೀಡ್ ಡೆವಲಪ್‌ಮೆಂಟ್ ಆಗುತ್ತಿದೆ, ಒಂದೊಂದು ಪ್ರದೇಶದಲ್ಲಿ ಒಂದೊಂದು ತರಹ ಬೀಜ ಕೊಟ್ಟರೆ ಉತ್ತಮ ಫಸಲು ಬೆಳೆಯಲು ಸಾಧ್ಯ. ರೂಲ್ಸ್‌ನಲ್ಲಿ ಎಲ್ಲವನ್ನೂ ಮಾಡುವುದಕ್ಕಾಗುವುದಿಲ್ಲ. ನೋಟಿಫಿಕೇಷನ್ ಹೊರಡಿಸುವಾಗ ಸಾರ್ವಜನಿಕರ ಅಭಿಪ್ರಾಯ ತಿಳಿದು ಮಾಡ ಲಾಗುವದು. ಮುಖ್ಯವಾಗಿ ರೈತರಿಗೆ ಸಹಾಯವಾಗುವಂತಿರಬೇಕು ಎಂಬುದು ಎಲ್ಲರ ಅಭಿಪ್ರಾಯ.

ಶ್ರೀ ಕಾಗೋಡು ತಿಮ್ಮಪ್ಪ.—ಈ ದಿವಸ ನೀವು ಪಬ್ಲಿಷ್ ಮಾಡುವ ರೂಲ್ಸ್

ಮತ್ತು ರೆಗ್ಯುಲೇಷನ್ನುಗಳು ಎಷ್ಟುಮಟ್ಟಿಗೆ ಗ್ರಾಮಗಳಲ್ಲಿರುವವರಿಗೆ ಗೊತ್ತಾಗಿದೆ ? ಅಲ್ಲಿರುವವರಿಗೆ ಯಾರು ಓದಿ ಹೇಳುವರು ?

Sri H. M. CHANNABASAPPA.—It is very unfortunate that Sri Kagodu Thimmappa who hails from village and who is keen on production of hybrid seeds, is speaking in this manner. Is it ever possible to put in the Act, so much of isolation distance is prescribed ? There are different isolation spaces for different crops. ಇವತ್ತು ೨೦೦ ಗಜ ದೂರದಲ್ಲಿರಬೇಕೆಂದು ತಿಳಿಸಿದರೆ ನಾಳೆ ನೂರು ಗಜ ಸಾಕು ಎಂದು ಹೇಳಬಹುದು, ೫೦ ಗಜ ಸಾಕು ಎಂದು ಹೇಳಬಹುದು. ಇದನ್ನು ಆತುರವಾಗಿ ಮಾಡುವುದಕ್ಕಾಗುತ್ತದೆಯೇ ? Therefore, is it ever possible to presc'ibe it in the Bill the enactment ? No. The principle is accepted that depending upon the recommendations of the technical people, we will prescribe certain isolation spaces for certain crops.

ಶ್ರೀ ಕಾಗೋಡು ತಿಮ್ಮಪ್ಪ.—ಇಂದು ಮಲೆನಾಡಿನಲ್ಲಿ ಅಡಿಕೆ ಬೆಳೆಯುತ್ತೇವೆ. ಉತ್ತಮ ತಳಿ ಉಪಯೋಗಿಸಬೇಕೆಂದು ಹೇಳುತ್ತೀರಿ, ಅದನ್ನು ಒಪ್ಪುತ್ತೇನೆ. ಎಲ್ಲರಿಗೂ ಅದನ್ನೇ ಉಪಯೋಗಿಸಬೇಕೆಂಬ ಅಭಿಲಾಷೆ ಇದೆ. ಇಂದು ನಾನು ಕೆಲವರನ್ನು ಕೇಳಿದ್ದೇನೆ ಅಡಿಕೆ ಸೊಸಿ ಬೆಳೆಸುವಾಗ ಒಂದು ಸಸಿಗೂ ಇನ್ನೊಂದಕ್ಕೂ ಎಷ್ಟು ದೂರ ಇರಬೇಕು ಎಂಬುದನ್ನು ಕಂಡುಹಿಡಿದಿಲ್ಲವೆಂದು ಹೇಳುವರು. ಸಾಗರದಲ್ಲಿ ಅಡಿಕೆ ಸಸಿಗಳನ್ನು ಸೀಡ್ ಫಾರಂನಲ್ಲಿ ಬೆಳೆಸುತ್ತಿದ್ದಾರೆ. ನೂರು ಅಡಿ ದೂರದಲ್ಲಿ ಅವನ್ನು ಹಾಕಿದರೆ ಮಧ್ಯ ಇರುವ ಜಾಗದಲ್ಲಿ ಬೇರೆ ಏನಾದರೂ ಬೆಳೆಸುವುದಕ್ಕೆ ಅವಕಾಶವಿದೆ. ನೀವೇ ತಿಳಿಸಿರುವ ವಿಚಾರ ಇದು. ಹಾರ್ಟಿಕಲ್ಚರಿನಲ್ಲಿ ನೂರಾರು ಕುಲ ಎಲ್ಲಿದೆ ? ತೆಂಗು, ಮಾವು, ಅಡಿಕೆ ಅನಾನಸ್ ಮುಂತಾದ ೫ ಜಾತಿಯ ಗಿಡಗಳನ್ನು ಬೆಳೆಸುವ ಸಂದರ್ಭವಿದೆ. ಆದುದರಿಂದ ಉದ್ದೇಶಗಳನು ವಿವರಿಸುವಾಗ ಕೆಲವು ಮಾಹಿತಿಗಳನ್ನಾದರೂ ಕೊಡಬೇಕಾಗಿತ್ತು. ಮಾವಿನ ಸಸ್ಸಿ ಬೆಳೆಸಬೇಕಾದರೆ ಇಷ್ಟು ಪ್ರದೇಶದಲ್ಲಿ ಯಾವುದೂ ಇರಬಾರದು ಎಂದು ವಿವರಣೆ ಕೊಡಬೇಕಾಗಿತ್ತು. ಇಲ್ಲದಿದ್ದರೆ ಸರಿಯಾಗಿ ಬೆಳೆಯುವುದಿಲ್ಲ ಎಂದು ಹೇಳಬೇಕಾಗಿತ್ತು. ಹೀಗೆ ಮಾಡಿದ್ದರಿಂದ ಬೀಜ ಕೆಟ್ಟು ಹೋಗಿದೆ ಎಂದು ಹೇಳಿದ್ದೀರಿ. ನೀವು ಹೇಳುವುದೇ ವೇದವಾಕ್ಯ ಎಂದು ಹೇಗೆ ನಂಬಿಕೊಂಡಿರಲು ಸಾಧ್ಯ ? ಇಷ್ಟು ದೂರದಲ್ಲಿ ಬೇರೆ ಯಾವುದೂ ಇರಬಾರದು ಎಂದು ತಿಳಿಸಬೇಕು.

Sri H. M. CHANNABASAPPA.—If not the hon. member a farmer and a lawyer also? Unfortunately he is an able lawyer and not an able farmer. That is the difference.

Sri KAGODU THIMMAPPA.–This Bill involves a politician's approach ನೀವು ಪಾಲಿಟಿಕ್ಸ್ ಬಿಡಿ. ನಾನು ವಕೀಲಿ ಬಿಡುತ್ತೇನೆ. ವ್ಯವಸಾಯಗಾರರಾಗಿ ಇಬ್ಬರೂ ಯೋಚನೆ ಮಾಡೋಣ. ವ್ಯವಸಾಯಗಾರರು ಬಹಳ ಕೆಳಮಟ್ಟದಲ್ಲಿದ್ದಾರೆ. ಅವರ ದೃಷ್ಟಿ ಗಮನಿಸಿ ತಕ್ಕ ಕ್ರಮ ತೆಗೆದುಕೊಳ್ಳಬೇಕು. ನಾವು ಮಾಡಿದ್ದೇ ಸರಿ ಎಂದರೆ ಅದನ್ನು ಒಪ್ಪುವುದಕ್ಕಾಗುವದಿಲ್ಲ. ಆದುದರಿಂದ ಪ್ರಗತಿಪಥದಲ್ಲಿ ಹೋಗಬೇಕು, ಜನರ ಸ್ಥಿತಿಗತಿ ನೋಡಿ ಮಸೂದೆ ಮಾಡಬೇಕಾಗುತ್ತದೆ. ಜನ ಕೆಳಮಟ್ಟದಲ್ಲಿ ಆಲೋಚನೆ ಮಾಡುವಾಗ ಎತ್ತು ಎರಿಗೆಳೆದರೆ ಕೋಣ ನೀರಿಗೆಳೆಯಿತು ಎನ್ನುವಂತಾಗಬಾರದು. ದೂರದ ವಿಚಾರ ನಿಯಮಗಳಲ್ಲಿ ನಮೂದು ಮಾಡುವುದಾಗಿ ಹೇಳುತ್ತೀರಿ. ಕಾನೂನಿನಲ್ಲೇ ಅದನ್ನು ನಿಗದಿಮಾಡಿ ತಿಳಿಸಿ; ನಿರ್ದಿಷ್ಟಪಡಿಸಿ.

ಶ್ರೀ ಎಚ್. ಎಂ. ಚನ್ನಬಸಪ್ಪ.— ರೂಲ್ಸ್ ಎಲ್ಲಾ ನಿಮ್ಮ ಮುಂದೆ ಬರುತ್ತದೆ. ಆಕ್ಟಿನಲ್ಲೇ ತಾವು ಹೇಳುವುದನ್ನೆಲ್ಲಾ ಪ್ರಿಸ್ಕ್ರೈಬ್ ಮಾಡುವುದಕ್ಕಾಗುತ್ತದೆಯೇ?

ಶ್ರೀ ಕಾಗೋಡು ತಿಮ್ಮಪ್ಪ.— ಬೀಜ ಉತ್ಪತ್ತಿಯಾಗಲು ಇಂಟರ್ ಪಾಲಿನೇಷನ್ ಆಗಬೇಕು, ಅದು ಎಲ್ಲ ಸಂದರ್ಭಗಳಲ್ಲೂ ಆಗಬೇಕು. ಪಾಲಿನೇಷನ್ ಆಗುವ ವಿಧಾನ ಒಂದೇ. ಅದಕ್ಕೆ ಒಂದು ಫಾರ್ಮುಲ ಇದೆ. ಪಾಲಿನೇಷನ್ ಆಗಬೇಕಾದ್ದು ಮುಖ್ಯವಾದುದು. ಈ ದೃಷ್ಟಿಯಿಂದ ಕೆಲವು ಗೊತ್ತಾದ ದೂರದಿಂದಾಚೆಗೆ ಇರಬೇಕು ಎಂದು ಹೇಳುವುದು.

ಶ್ರೀ ಕೆ. ಎಚ್. ಪಾಟೀಲ.— ಈಗ ಟೊಮ್ಯಾಟೋ ಇದೆ, ಇದರ ವಿಚಾರದಲ್ಲಿ ನೂರು ಅಡಿಗಿಂತ ಹೆಚ್ಚಾಗಿ ದೂರ ಇರಬಾರದೆಂದಿದೆ, ಮಾವು ಹತ್ತು ಮೈಲಿ ಆಚೆ ಹಾಕಿದರೂ ಆಗಬಹುದು. ಇಲ್ಲದಿರುವುದನ್ನು ಈಗ ಮಾಡುತ್ತಿದ್ದೇವೆ. ಸುಧಾರಣೆ ಮಾಡಬೇಕು. ಹೈಬ್ರಿಡ್ ಬೀಜ ಉಪಯೋಗಿಸಿ ಹೆಚ್ಚು ಬೆಳೆಯುಬೇಕು ಎಂಬುದೇ ಇದರ ಉದ್ದೇಶ.

ಶ್ರೀ ಕಾಗೋಡು ತಿಮ್ಮಪ್ಪ.— ಮಾವಿನ ಗಿಡ ಇಷ್ಟು ದೂರದಲ್ಲಿರಬೇಕು, ಅಡಿಕೆ ಮರ ಇಷ್ಟು ದೂರದಲ್ಲಿರಬೇಕು ಎಂದು ಯಾರು ತಿಳಿಸಿದ್ದಾರೆ?

Sri H. M. CHANNABASAPPA.— I will appeal to the hon. member to make a study. Let him take it from that different distances are required for different crops By further experimentation it may be reduced and it may have to be increased. We will have to fix these ranges of isolation as and when the results of researches are available. As known today, there are certain distances. But by further experimentation and research it can be reduced or increased. I want Sri Thimmappa to appreciat this position. There

is no intention on the part of the Government to harass any body. It is necessary that Government should take power to enforce things in the interest of national development.

ಶ್ರೀ ಕಾಗೋಡು ತಿಮ್ಮಪ್ಪ.— ಶ್ರೀ ಚನ್ನಬಸಪ್ಪನವರು ಹೇಳುವ ಮಾತನ್ನು ಒಂದು ದೃಷ್ಟಿಯಿಂದ ಒಪ್ಪುವುದಾದರೂ ಇನ್ನೊಂದು ದೃಷ್ಟಿಯಿಂದ ಒಪ್ಪುವಂತಿಲ್ಲ. ಒಂದು ಖಾತರಿ ಮಾಡಿಕೊಡಬೇಕು. ನೀವು ಬೆಳೆಸುವ ಒಂದು ಗೊತ್ತಾದ ಪ್ರದೇಶ ದಲ್ಲಿ ಬೇರೆಯವರಿಗೆ ಬೆಳೆಸಲು ಅವಕಾಶ ಇರಬಾರದು ಎಂಬ ಉದ್ದೇಶವಿದ್ದರೆ ತುಂಬ ತೊಂದರೆಯಾಗುತ್ತದೆ. ನಿಮ್ಮ ಸೀಡ್ ಫಾರಂ ಅಭಿವೃದ್ಧಿಯಾಗಿಲ್ಲ. ಹಾಗಿರುವಾಗ ಈ ರೀತಿ ಮಾಡಬಾರದು. ವ್ಯವಸಾಯಗಾರರಿಗೆ ಯಾವುದೇ ದೃಷ್ಟಿಯಿಂದ ಬಾಧಕ ವಾಗದಂತೆ ಆಸಕ್ತಿ ವಹಿಸಿ ತಕ್ಕ ಅವಕಾಶ ಕಲ್ಪಿಸಬೇಕು. ಈ ದಿವಸ ಇಂಥ ಮಸೂದೆ ಯನ್ನು ಅಧಿಕಾರಿಗಳು ಕೊಟ್ಟ ಮಾಹಿತಿಯ ಪ್ರಕಾರ ತರುವುದರಿಂದ ಏನು ಪರಿಣಾಮ ವಾಗುತ್ತದೆ ಎಂದು ಇನ್ನೊಂದು ಸಲ ಆಲೋಚನೆಮಾಡಬೇಕು ಎಂದು ಕೇಳಿಕೊಳ್ಳು ತ್ತೇನೆ. ವ್ಯವಸಾಯಗಾರರನ್ನು ಬಿಟ್ಟು ಮಾತನಾಡುವ ಪ್ರಶ್ನೆಯಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.— ಇದನ್ನು ಬರೀ ಸರಕಾರ ನಡೆಸುವುದಲ್ಲ ಉತ್ತಮ ದರ್ಜೆಯಲ್ಲಿ ನಡೆಸುವವರಿಗೆ ತಿಳಿದವರಿಗೆ ಅವಕಾಶವಿರಬೇಕು ಎಂಬುದು ತಮ್ಮ ಉದ್ದೇಶ. ಇದಕ್ಕೆ ಅವಕಾಶವಾಗುವಹಾಗೆ ಸೂಕ್ತ ಬದಲಾವಣೆ ಮಾಡುವರು.

ಶ್ರೀ ಕಾಗೋಡು ತಿಮ್ಮಪ್ಪ.— ಆಗಬಹುದು ವಿದೇಶಗಳಲ್ಲಿ ವಿಜ್ಞಾನಿಗಳು ಪಂಡಿತರು ಇರುವರು. ಅವರು ತಮ್ಮ ಜ್ಞಾನವನ್ನು ರೂಢಿಸುವಾಗ ಸ್ವತಃ ಕೆಲಸ ಮಾಡುವರು. ಕೃಷಿ ಪ್ರೊಫೆಸರ್ ಇದ್ದಾರೆ. ಗದ್ದೆ ಉಳುವುದಕ್ಕೆ, ನಾಟಿ ಹಾಕುವುದಕ್ಕೆ ಅವರಿಗೆ ಬರುತ್ತದೆಯೇ ಅವರು ಕೇವಲ ಬುಕ್ ಪ್ರೊಫೆಸರ್ ಆಗಿದ್ದಾರೆ. ನಮ್ಮ ಜನ ಕನ್ನಡದಲ್ಲಿ ಓದಿ ತಿಳಿದು ಕೊಳ್ಳಬೇಕು. ನಿಮ್ಮ ಪ್ರೊಫೆಸರ್ ದೂರದಲ್ಲಿ ನಿಂತು ಹೇಳು ವುದರಿಂದ ಕಾರ್ಯಗತ ಮಾಡುವಾಗ ವ್ಯವಸಾಯಗಾರರು ಅಡ್ಡದಾರಿ ಹಿಡಿಯಲು ಅವಕಾಶವಾಗಬಹುದು.

3-00 P.M.

ನಾನು ಈ ದಿವಸ ನೋಡಿದ್ದರಲ್ಲಿ ಈ ಗ್ರಾಮಸೇವಕರಿಂದೇನು ಕೆಲರು ಗ್ರಾಮ ಗ್ರಾಮಕ್ಕೆ ವ್ಯವಸಾಯಗಾರರಿಗೆ ಸಲಹೆಗಳನ್ನು ಕೊಡುವುದಕ್ಕೆ ಎಂದು ಬರುತ್ತಿದ್ದಾರೆ, ಅವರಲ್ಲಿ ನೂರಕ್ಕೆ ಐದು ಜನರಿಗೆ ಉಳುವುದಾಗಲಿ ಅಥವಾ ನಾಟಿ ಹಾಕುವುದಾಗಲಿ ಬರುವುದಿಲ್ಲ. ಆದಾಗ್ಯೂ ಅವರು ಬದುಗಳ ಮೇಲೆ ನಿಂತು ಜನರಿಗೆ ಭತ್ತದ ಪೈರನ್ನು ಒಂದು ಸಾಲಿನಿಂದ ಇನ್ನೊಂದು ಸಾಲಿಗೆ ಇಷ್ಟು ಅಂತರ ಇಟ್ಟು ನಾಟಿ ಮಾಡಿ ಎಂದು ಅಷ್ಟನ್ನು ಮಾತ್ರ ಹೇಳುತ್ತಿದ್ದಾರೆ. ಆದರೆ ಅದನ್ನೇ ಅವರಿಗೆ ಸ್ವತಃ ಮಾಡಿ ತೋರಿಸು ವುದಕ್ಕೆ ಬರುವುದಿಲ್ಲ. ಹೀಗಾಗಿ ನಮ್ಮ ಕೃಷಿ ವಿಜ್ಞಾನಿಗಳೇನಿದ್ದಾರೆ ಅವರೆಲ್ಲರೂ ಬರೀ ಪುಸ್ತಕದ ವಿಜ್ಞಾನಿಗಳಾಗಿದ್ದಾರೆ. ಅವರಿಗೆ ಸ್ವತಃ ಅನುಭವವೇನೂ ಇರುವುದಿಲ್ಲ.

ಆದುದರಿಂದ ನನಗೆ ಈ ಬಿಲ್ಲಿನ ಬಗ್ಗೆ ಇಷ್ಟು ಅನುಮಾನಗಳು ಬರುತ್ತಿವೆ. ಮಾನ್ಯ ಚನ್ನಬಸಪ್ಪನವರು ಹೇಳಿದ ಕೆಲವು ವಿಚಾರಗಳಿಂದ ನನಗೆ ಸ್ವಲ್ಪ ಸಮಾಧಾನ ಆದರು ನಾನು ಸರ್ಕಾರಕ್ಕೆ ರೈತರ ಹಿತದೃಷ್ಟಿಯಿಂದ ಒತ್ತಾಯ ಮಾಡುವುದೇನಂದರೆ ಇದನ್ನು ಇನ್ನೊಮ್ಮೆ ಅಮೂಲಾಗ್ರವಾಗಿ ಪರಿಶೀಲನೆ ಮಾಡಬೇಕೆಂದೂ, ನಮ್ಮ ಮಾನ್ಯ ಉಪಾಧ್ಯಕ್ಷರಿಗೆ ಈ ಹಾರ್ಟಿಕಲ್ಚರಿನ ಬಗ್ಗೆ ಆಳವಾದ ಅನುಭವ ಇರುವುದ ರಿಂದ ಅವರನ್ನೂ ಕರೆಸಿಕೊಂಡು ಸಮಾಲೋಚನೆ ಮಾಡಿ ಇದನ್ನು ಪುನರ್ವಿಮರ್ಶೆ ಮಾಡಿ ತರಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸು ತ್ತೇನೆ.

ಶ್ರೀ ಪಿ.ಎಮ್.ಭಾಂಗಿ (ಜಮುಖಂಡಿ).— ಅಧ್ಯಕ್ಷರೇ, ಮಾನ್ಯ ಕೃಷಿ ಮಂತ್ರಿ ಗಳು ಸಭೆಯ ಮುಂದೆ ಮಂಡಿಸಿರತಕ್ಕ ಈ ಸೀಡ್ ಫಾರಂ ಮಸೂದೆಯನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತೇನೆ; ಮತ್ತು ಇದನ್ನು ಸ್ವಾಗತಿಸುತ್ತೇನೆ. ಆದರೆ ಈ ಸೀಡ್ ಫಾರಂ ಬಿಲ್ಲಿನಲ್ಲಿ ಹೆಚ್ಚಿಗೆ ಹಾರ್ಟಿಕಲ್ಚರಿಗೇ ಸಂಬಂಧ ಇರುವುದರಿಂದ ಇದ ರಿಂದೇನೂ ವ್ಯವಸಾಯಗಾರರಿಗೆ ಅಷ್ಟು ಹೆಚ್ಚಿನ ಪ್ರಯೋಜನ ಬೀಳುವುದಿಲ್ಲ. ಆದುದ ರಿಂದ ಈ ಮಸೂದೆಯಲ್ಲಿ ವ್ಯವಸಾಯಗಾರ್ರಿಗೂ ಅನುಕೂಲವಾಗತಕ್ಕ ರೀತಿಯಲ್ಲಿ ಅವ ರನ್ನೂ ಕೂಡ ಇದರಲ್ಲಿ ಅಳವಡಿಸಿ ಒಂದು ಸಮಗ್ರ ಬಿಲ್ಲನ್ನು ಮಾಡಬೇಕೆಂದು ನಾನು ಈ ಒಂದು ಸಲಹೆ ಸರ್ಕಾರಕ್ಕೆ ಕೊಡಬಯಸುತ್ತೇನೆ. ಈ ದಿವಸ ನಮ್ಮ ಭಾಗದಲ್ಲಿ ಜೋಳ, ಕೆಂಜೋಳ ಮತ್ತು ಬಾಜ್ರ ಇವು ಇಂಪ್ರೂವ್ಡ್ ಥಳಿಯನ್ನು ಬಿತ್ತನೆ ಮಾಡಿದ ಕಡೆ ಆ ಬಿತ್ತನೆ ಮಾಡಿದ ಜಾಗದಿಂದ ೬೫೦ ಫೂಟ್ ದೂರದಲ್ಲಿ ಯಾರೂ ಅದೇ ಸಂಬಂಧವಾದ ಬಿತ್ತನೆ ಮಾಡಬಾರದೆಂದು ಒಂದು ನಿರ್ಬಂಧ ಹಾಕಿದರೆ ಒಳ್ಳೆಯ ದಾಗುತ್ತದೆ. ಈಗ ವ್ಯವಸಾಯಗಾರರಿಗೆ ಈ ಬಗ್ಗೆ ಯಾವ ವಿಧವಾದ ಒಂದು ರಕ್ಷಣೆ ಯನ್ನೂ ಸರ್ಕಾರದವರು ಕೊಟ್ಟಿಲ್ಲ. ಇಂಥ ರಕ್ಷಣೆ ಕೊಡತಕ್ಕ ಸಂಬಂಧವಾದ ಯಾವ ಒಂದು ಕಾಯಿದೆಯೂ ಇಲ್ಲಿಯತನಕ ಹೊರಟಿಲ್ಲ. ಅಲ್ಲದೆ ಈ ಬಿಲ್ಲಿನಲ್ಲಿ ಸರಕಾರದವರಿಗೇ ಒಂದು ಮುನಾಪಲಿ ಪ್ರಾವಿಜನ್ ಇಟ್ಟುಕೊಳ್ಳಬೇಕು. ಅದನ್ನೂ ಸೈತಾ ಇದರಲ್ಲಿ ಹಾಕಿಲ್ಲ ಆದುದರಿಂದ ಈ ಮಸೂದೆಗೆ ಕೆಲವು ತಿದ್ದುಪಡಿಗಳಾಗ ಬೇಕಾದ್ದು ಅವಶ್ಯಕ.

ಇನ್ನು ಈ ಮಸೂದೆಯ ಕಲಂ ೪ರಲ್ಲಿ ಯಾರಾದರೂ ಸರಕಾರದವರು ಕೊಡ ತಕ್ಕ ಹುಕುಂಗೆ ವ್ಯತಿರಿಕ್ತವಾಗಿ ನಡೆದಲ್ಲಿ, ಬೆಳೆ ಇಟ್ಟಪಕ್ಷದಲ್ಲಿ ಅಂಥವರಿಗೆ ೫೦೦ ರೂಪಾಯಿಗಳ ದಂಡ ಹಾಕುವುದಕ್ಕೂ ಮತ್ತು ಅಂಥ ಬೆಳೆಯನ್ನು ಅಲ್ಲಿಂದ ಕಿತ್ತೊ ಗೆಯುವುದಕ್ಕೂ ಸರ್ಕಾರ ಅಧಿಕಾರ ಇಟ್ಟುಕೊಂಡಿದೆ. ಆದರೆ ಹಾಗೆ ರೈತನಿಗೆ ಅವನ ಬೆಳೆಯನ್ನು ಕಿತ್ತೊಗೆದಾಗ ಅವನಿಗೆ ಪರಿಹಾರ ಕೊಡಬೇಕಾದ್ದು ಅಗತ್ಯ. ಅದನ್ನೂ ಕೂಡ ಇದರಲ್ಲಿ ಅಡಕ ಮಾಡಬೇಕು. ಇನ್ನು ಮಾದರಿ ಬೆಳೆಯ ಬಿತ್ತನೆ ಬೀಜಗಳನ್ನು ತಯಾರಿಸತಕ್ಕ ರೈತನಿಗೆ ಒಂದು ರಕ್ಷಣೆ ಬೇಕು. ಆ ದೃಷ್ಟಿಯಿಂದ ಇದರಲ್ಲಿ ಒಂದು ಕಲಂ ಸೇರಿಸಬೇಕಾದ್ದು ಅವಶ್ಯಕ. ಆದುದರಿಂದ ಈ ಎಲ್ಲಾ ವಿಚಾರಗಳನ್ನು ಇದರಲ್ಲಿ

ಅಡಕವಮಾಡತಕ್ಕ ಬಗ್ಗೆ ಕೆಲವು ತಿದ್ದುಪಡಿಗಳಾಗಬೇಕಾದ್ದು ಅಗತ್ಯ ಅದೆ; ಎಂದು ಸೂಚನೆ ಮಾಡುವುದಕ್ಕೆ ಇಷ್ಟಪಡುತ್ತೇನೆ. ಸರ್ಕಾರದ ಸೀಡ್ ಫಾರಂಗೆ ಅಗತ್ಯ ಇರುವುದರಿಂದ ಅದಕ್ಕೆ ಮನಾಪಲಿ ಮಾಡಿಲ್ಲ. ಅದನ್ನು ಮಾಡಬೇಕೆಂದು ಹೇಳಿ ನಾನು ಮಸೂದೆಯನ್ನು ಸ್ವಾಗತಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಚ್. ಜಿ. ಚನ್ನಪ್ಪ (ಮಾಗಡಿ) — ಸನ್ಮಾನ್ಯ ಸಭಾಪತಿಯವರೇ, ಸರ್ಕಾರದವರೇನು ಈ ದಿವಸ ಈ ಒಂದು ಸೀಡ್ ಫಾರಂ ಬಿಲ್ಲನ್ನು ತಂದಿದ್ದಾರೆ ನಿಜವಾಗಿಯೂ ಅದನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಏಕೆಂದರೆ ಈ ದಿವಸ ನಾವು ಪ್ರಗತಿಪಥದಲ್ಲಿ ಸಾಗಬೇಕು. ಹಿಂದಿನ ಹಳೇ ಸಂಪ್ರದಾಯಗಳನ್ನು ಹೀಗೆ ಮುಂದುವರಿಸುತ್ತಾ ಹೋದರೆ ನಮಗೆ ಉತ್ತಮ ಬೀಜಗಳು ದೊರೆಯುದಕ್ಕೆ ತುಂಬಾ ಕಷ್ಟವಾಗುಗುತ್ತದೆ. ರೈತನಿಗೆ ಶ್ರಮಕ್ಕೆ ತಕ್ಕ ಫಲದೊರೆಯುದಿಲ್ಲ. ಅದರಿಂದ ರೈತನ ಕಸಬು ಲಾಭದಾಯಕ ರೀತಿಯಲ್ಲಿ ಸಾಗುವುದಕ್ಕೆ ಕಷ್ಟವಾಗುತ್ತದೆ. ಆದರೆ ಈ ದಿವಸ ನಮ್ಮಲ್ಲಿ ಕೆಲವು ಅಗ್ರಿಕಲ್ಚರಲ್ ಸೀಡ್ ಫಾರಂಗಳಿವೆ. ಅಲ್ಲಿ ಉತ್ತಮ ಥಳಿಯರಾಗಿ, ಭತ್ತ ಮತ್ತು ಜೋಳ ಇತ್ಯಾದಿಗಳನ್ನು ತಯಾರಿಸುತ್ತಾರೆ. ಅಷ್ಟೇ ಅಲ್ಲದೆ ಸರ್ಕಾರದವರು ಹೀಗೆ ಏನೊಂದು ಉತ್ತಮ ಬೀಜಗಳನ್ನು ತಯಾರಿಸುತ್ತಿದ್ದಾರೆ ಅದೇ ಮಾರ್ಗದಲ್ಲಿ ಕೆಲವು ಖಾಸಗೀಜನರೂ ಈ ಬಿತ್ತನೆ ಬೀಜಗಳನ್ನು ತಯಾರಿಸುತ್ತಿದ್ದಾರೆ. ನಾವು ಸರ್ಕಾರಿ ಫಾರಂಗೆ ಹೋಗಿ ಉತ್ತಮ ಬಿತ್ತನೆ ಬೀಜಗಳನ್ನು ಕೇಳಿದರೆ ಅವರು ಖಾಸಗೀ ಜನರೇನು ಇವನ್ನು ತಯಾರಿಸುತ್ತಿದ್ದಾರೆ ಅವರತ್ತ ಕೈ ತೋರಿಸುತಾರೆ. ಆದರೆ ಅದರಂತೆ ಈ ಹಾರ್ಟಿಕಲ್ಚರಲ್ ಸೀಡ್ ಫಾರಂ ಆಗಬಾರದೆಂದು ನಾನು ಹೇಳುತ್ತಿದ್ದೇನೆ. ಜನರು ಸರ್ಕಾರಿ ಫಾರಂಗಳಲ್ಲಿ ಉತ್ತಮ ದರ್ಜೆಯ ಬಿತ್ತನೆ ಬೀಜಗಳು ಸಿಕ್ಕುತ್ತವೆ ಎಂದು ಹೋದಾಗ ಅವರು ಇಲ್ಲ ಎಂದರೆ ರೈತರಿಗೆ ಬಹಳ ನಿರಾಶೆಯಾಗುತ್ತದೆ. ಹಾಗಾಗಬಾರದು. ನಾವು ಅವುಗಳಿಗೆ ಲಕ್ಷಗಟ್ಟಲೆ ಹಣವನ್ನು ಹಾಕಿ ಅಲ್ಲಿ ಹೆಚ್ಚಿನ ಶಿಬ್ಬಂದಿವರ್ಗ ಇಟ್ಟಿರುವಾಗ ಅವರು ಹೀಗೆ ಖಾಸಗೀ ಜನರತ್ತ ಕೈ ತೋರಿಸುವುದು ಸರಿಯಲ್ಲ. ಅದರಿಂದ ಹಣವನ್ನು ಖರ್ಚುಮಾಡಿದ ಉದ್ದೇಶ ಸಾರ್ಥಕವೂ ಆಗಲಿಲ್ಲ. ಆದುದರಿಂದ ಈ ಹಾರ್ಟಿಕಲ್ಚರಲ್ ಸೀಡ್ ಫಾರಂ ಏನಿದೆ ಇದು ಹಾಗಾಗದಿರಲೆಂದು ಸೂಚನೆ ಮಾಡುತ್ತಿದ್ದೇನೆ.

ಈಗ ನಮ್ಮ ಕೆಲವು ಸ್ನೇಹಿತರು ಅಡಿಕೆ ತೆಂಗಿನ ಗಿಡಗಳ ವಿಚಾರ ಹೇಳಿದರು. ಅದೇ ಸಮಸ್ಯೆ ತರಕಾರಿ ಬೆಳೆಗೂ ಇದೆ. ಆದುದರಿಂದ ಕೆಲವರು ಈ ಉತ್ತಮ ಥಳಿಯ ಬಿತ್ತನೆಯನ್ನು ಹಾಳು ಮಾಡಬೇಕೆಂಬ ದುರುದ್ದೇಶದಿಂದಲೇ ಕೆಲವು ಸಮಾಜ ಕಂಟಕರು, ಸಮಾಜ ಘಾತುಕರು ಅದರ ಹತ್ತಿರದಲ್ಲೇ ಬೇರೆ ಬೆಳೆಯನ್ನು ಹಾಕಿ ಅದನ್ನು ಕೆಡಿಸುತ್ತಿದ್ದಾರೆ. ಆದುದರಿಂದ ಈ ಒಂದು ನಿರ್ಬಂಧವನ್ನು ಹಾಕುವುದು ಬಹಳ ಒಳ್ಳೆಯದು. ಹೀಗೆ ಕಾನೂನಿಗೆ ವಿರೋಧವಾಗಿ ವರ್ತಿಸತಕ್ಕವರಿಗೆ ದಂಡ ಹಾಕತಕ್ಕ ಹಾಗೂ ಶಿಕ್ಷೆ ವಿಧಿಸುವುದನ್ನು ಅನೇ ಕಲಂನಲ್ಲಿ ಹೇಳಿದ್ದಾರೆ ಇದರ ಬಗ್ಗೆ ಇನ್ನೂ ಉಗ್ರ ಶಿಕ್ಷೆವಿಧಿಸುವುದು ಒಳ್ಳೆಯದೆಂದು ನಾನು ಹೇಳುತ್ತೇನೆ.

ಇನ್ನು ಖಾಸಗೀ ಜನರಿಗೂ ಇದನ್ನು ಬೆಳೆಸುವುದಕ್ಕೆ ಅವಕಾಶ ಮಾಡಿದ್ದಾರೆ. ಆದರೆ ಅಂಥ ಜನರು ಸರ್ಕಾರದವಲ್ಲಿ ತಮ್ಮ ಹೆಸರನ್ನು ರಿಜಿಸ್ಟರ್ ಮಾಡಿಸಿ ಸರ್ಕಾರದಿಂದ ಲೈಸೆನ್ಸ್ ಪಡೆದು ಈ ಉತ್ತಮ ಬೀಜ ತಯಾರಿಸುವಂತೆ ಮಾಡುವುದು ಅಗತ್ಯ. ಮತ್ತು ಸರ್ಕಾರ ಅವರಿಗೆ ಧನಸಹಾಯ ಕೂಡ ಒದಗಿಸಬೇಕಾದ್ದು ಅಗತ್ಯ ಎಂದು ಹೇಳುತ್ತೇನೆ. ಅಲ್ಲಿಗೆ ಸರ್ಕಾರದ ಅಧಿಕಾರಿಗಳನ್ನು ಮೇಲ್ವಿಚಾರಕರನ್ನಾಗಿ ಹಾಕಬೇಕು. ಅಂತಹ ಕಡೆ ಖಾಸಗೀಯವರಿಗೆ ಅವಕಾಶ ಕೊಟ್ಟರೆ ಸರಿಹೋಗುವುದಿಲ್ಲ. ಸರ್ಕಾರದ ಅಧಿಕಾರಿಗಳು ಹೋಗಿ ಅದನ್ನು ಪರೀಕ್ಷೆ ಮಾಡದೆ ಹೋದರೆ ತಜ್ಞರು ಉದಾಸೀನವಾಗಿ ಏನಾದರೂ ಒಂದು ಸರ್ಟಿಫಿಕೇಟನ್ನು ಕೊಟ್ಟರೆ ಅದರ ಮುಖಾಂತರ ಹಣವನ್ನು ಸಂಪಾದನೆ ಮಾಡುತ್ತಾರೆ. ಅಂತಹವರು ಅನೇಕ ಸಂದರ್ಭಗಳಲ್ಲಿ ಜನಗಳಿಂದ ಡಿಮ್ಯಾಂಡ್ ಬಂದಾಗ ಕೆಲಸಕ್ಕೆ ಬಾರದೇ ಇರುವ ಬೀಜಗಳನ್ನು ಮಾರಾಟ ಮಾಡಿ ಹಣವನ್ನು ಸಂಪಾದನೆ ಮಾಡಿರುವುದೂ ಉಂಟು. ಕಳೆದ ೮-೧೦ ವರ್ಷಗಳಿಂದಲೂ ರೈತರಲ್ಲಿ ಅನೆಕರು ಸರಿಯಾದಂಥ ಮೇಜ್ ಸೀಡ್‌ಗಳನ್ನು ಸರಬರಾಜು ಮಾಡದೇ ಇರುವುದರಿಂದ ತಮ್ಮ ಬೆಳೆಗಳನ್ನು ನಾಶಪಡಿಸಿಕೊಂಡು ಸಾಲಗಾರರಾಗಿ ರೈತ ಸಾಕಷ್ಟು ಬೆಳೆಯನ್ನು ಬೆಳೆಯದೇ ಫೇಲ್ಯೂರ್ ಆಗಿ ಕಂಗಾಲರಾಗಿದ್ದಾರೆ ಒಂದೊಂದು ಸಂದರ್ಭದಲ್ಲಿ ಹೈಬ್ರಿಡ್ ಬೀಜಗಳಲ್ಲಿ ಕೆಲವು ವೈರೆಟಿಗಳಿಂದ ರೈತರು ಒಳ್ಳೆಯ ಫಸಲನ್ನು ತೆಗೆದಿದ್ದಾರೆ. ಇಂಥಾದ್ದನ್ನೂ ಕೂಡ ನಂಬಲು ಸಾಧ್ಯವಿಲ್ಲವೆಂದು ಕೆಲವು ಸಂದರ್ಭಗಳಲ್ಲಿ ತಜ್ಞರು ಹೇಳುತ್ತಾ. ಕೆಲಸಕ್ಕೆ ಬಾರದೇ ಇರುವಂಥ ಬೀಜಗಳನ್ನು ಸರ್ಟಿಫೈ ಮಾಡುವುದರಿಂದ ಅಂತಹ ತಜ್ಞರು ಅನೇಕ ಸಂದರ್ಭಗಳಲ್ಲಿ ಸಮಯಕ್ಕೆ ಬಂದಹಾಗೆ ನಡೆಯುವುದರಿಂದ, ಅಂತಹವರನ್ನು ಇದರಲ್ಲಿ ಸೇರಿಸುವುದು ಸರಿಯಲ್ಲ. ಇಂತಹವರಿಂದ ಏನಾದರೂ ಅನ್ಯಾಯಗಳು ಆದರೆ ಸಂಬಂಧಪಟ್ಟ ಅಧಿಕಾರಿಗಳೇ ಆಗಲೀ ಅವರಿಂದ ಪಡೆದಂಥ ಸರ್ಟಿಫಿಕೇಟಿನಿಂದ ಕೆಲಸಕ್ಕೆ ಬಾರದೇ ಇರುವ ಬೀಜಗಳನ್ನು, ಖಾಸಗೀಯವರ ಸೀಡ್ ಫಾರಂಗಳಿಂದ ಕೊಂಡಿದ್ದೇ ಆದರೆ, ಅಂತಹವರಿಗೆ ನಿಜವಾಗಿ ಹೆಚ್ಚಿಗೆ ಶಿಕ್ಷೆಯನ್ನು ವಿಧಿಸುವುದನ್ನು ಇದರೊಳಗೆ ಅಳವಡಿಸಬೇಕು. ಅಂತಹವರು ಯಾವುದೋ ಒಂದು ನೆಪ ಹೇಳಿ ತಪ್ಪಿಸಿಕೊಳ್ಳುತ್ತಾರೆ. ಅದಕ್ಕೆ ಅವಕಾಶವನ್ನು ಕೊಡಕೂಡದು. ನಾನು ನೋಡಿರುವ ಹಾಗೆ ತೆಂಗು, ಅಡಿಕೆ, ಬಾಳೆ—ಇವು ಬಹಳ ದೀರ್ಘಕಾಲ ಬಾಳತಕ್ಕದ್ದು. ಅದನ್ನು ಒಂದುಸಾರಿ ಬೆಳೆಸಿದ ಮೇಲೆ ಅದನ್ನು ಕಿತ್ತುಹಾಕುವುದಕ್ಕೆ ಆಗುವುದಿಲ್ಲ. ಆದರೆ ರಾಗಿ, ಬತ್ತ ಮುಂತಾದುವು ಕೇವಲ ೩-೪ ತಿಂಗಳ ಬೆಳೆಗಳು. ಅವನ್ನು ಯಾವಾಗ ಬೇಕಾದರೂ ಕಿತ್ತುಹಾಕಬಹುದು. ಆದರೆ ತೆಂಗು, ಅಡಿಕೆ, ಬಾಳೆ— ಈ ಗಿಡಗಳು ದೀರ್ಘಾವಧಿ ಬಾಳತಕ್ಕವು. ಈ ಫಸಲುಗಳನ್ನು ನಾವು ತಕ್ಷಣ ಕಿತ್ತು ಹಾಕುವುದಕ್ಕಾಗುವುದಿಲ್ಲ. ಬದಲಾಯಿಸುವುದಕ್ಕೂ ಆಗುವುದಿಲ್ಲ ಆದ್ದರಿಂದ ಇಂತಹ ಫಾರಂಗಳನ್ನು ಮಾಡುವಾಗ ಉತ್ತಮವಾದಂಥ ಸಸಿಗಳನ್ನು ತಯಾರು ಮಾಡದೇ ಸಸಿಗಳಲಿ ಸಾರವಿಲದೆ ಇರತಕ್ಕವುಗಳನು, ರೈತರಿಗೆ ಕೊಟ್ಟದ್ದೇ ಆದರೆ, ಅಂತಹವರ

ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಸರಿಯಾದ ಗಮನವನ್ನು ಕೊಡದೇ ಹೋದರೆ, ಅವನ್ನು ಸರಬರಾಜು ಮಾಡುವಂಥ ಖಾಸಗೀ ಸೀಡ್ ಫಾರಂಗಳ ಓನರ್‌ಗಳನ್ನೂ ಸಹ ಶಿಕ್ಷೆ ಮಾಡುವಂಥ ಒಂದು ಕಾನೂನು ಇದರಲ್ಲಿ ಅಳವಡಿಸಬೇಕು. ಆಗ ಅವರು ಭಯದಿಂದ ಕೆಲಸಗಳನ್ನು ನಿರ್ವಹಿಸುತ್ತಾರೆ. ಮುಂದೆ ಉತ್ತಮವಾದಂಥ ಸಸಿಗಳನ್ನೂ ಕೊಡುತ್ತಾರೆ. ತೆಂಗಿನ ಸಸಿಗಳನ್ನೂ ಸಹ ಚೆನ್ನಾಗಿ ನರ್ಸರಿಮಾಡಿ ರೈತರಿಗೆ ಸರಬರಾಜು ಮಾಡುತ್ತಾರೆ. ನಾನು ಯಾವ ಡೈರೆಕ್ಟರನ್ನೂ ಆಕ್ಷೇಪಣೆ ಮಾಡುತ್ತಾ ಇಲ್ಲ. ಲಕ್ಷಾಂತರ ಕಾಯಿಗಳನ್ನು ಕೊಂಡುಕೊಳ್ಳಬೇಕಾದರೆ ಕೇವಲ ಡೈರೆಕ್ಟರ್ ಆಗಿರುವವರೇ ಹೋಗುವುದಿಲ್ಲ ಪ್ರತಿಯೊಂದು ಕಾಯಿಯನ್ನೇ ಆಗಲೀ ಅಥವಾ ತೆಂಗಿನ ಸಸಿಯನ್ನಾಗಲಿ ಅವರೊಬ್ಬರೇ ಇನ್‌ಸ್ಪೆಕ್ಷನ್ ಮಾಡುವುದಕ್ಕಾಗುವುದಿಲ್ಲ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳನ್ನು ಬಿತ್ತನೆ ಬೀಜಗಳನ್ನು ಸೆಲೆಕ್ಟ್ ಮಾಡುವುದಕ್ಕಾಗಲೀ ಅಥವಾ ಉತ್ತಮವಾದಂಥ ಸಸಿಗಳನ್ನು ಆಯ್ಕೆ ಮಾಡುವುದಕ್ಕಾಗಲೀ ಕಳುಹಿಸಿದಾಗ ಅವರು ಎಲ್ಲೋ ಒಂದು ಕಡೆ ಕೂತುಕೊಂಡು ಉದಾಸೀನದಿಂದ ಯಾವುದೋ ಒಂದು ಸಸಿಯನ್ನು ಕೆಲಸಕ್ಕೆ ಬಾರದೇ ಇರುವಂಥಾದ್ದನ್ನು ಕೊಡುವುದು ಸರಿಯಲ್ಲ. ಅನೇಕ ಜನಗಲ್ಲಿ ಸರ್ಕಾರೀ ಫಾರಂಗಳಲ್ಲಿ ಏನು ಈ ಸಸಿಗಳನ್ನು ಬೆಳೆಸುತ್ತಾರೋ ಅವು ಉತ್ತಮವಾದಂಥ ಸಸಿಗಳಲ್ಲ ಎಂಬ ಅಪನಂಬಿಕೆ ಉಂಟಾಗಿದೆ. ಆದ್ದರಿಂದಲೇ ಖಾಸಗೀಯವರು ಅವರ ಸ್ವಂತಕ್ಕೆ ಹಾಕಿಕೊಂಡಿರುವ ಕಡೆಗಳಿಂದ ಅಂತಹ ಸಸಿಗಳನ್ನು ತೆಗೆದುಕೊಂಡು ಬರುತ್ತಿದ್ದಾರೆ. ಅವು ಮುಂದೆ ಬಹಳ ಉತ್ತಮ ಸಸಿಗಳಾಗಿ ಬೆಳೆಯುತ್ತವೆ. ಇದರಲ್ಲಿ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಗೆ ಸರ್ಕಾರದ ಸಸಿಗಳನ್ನು ತೆಗೆದುಕೊಳ್ಳದೆ ಖಾಸಗೀಯವರು ಅವರ ಸ್ವಂತವಾಗಿ ಬೆಳೆಸಿದಂಥ ಸಸಿಗಳನ್ನು ಕೊಂಡುಕೊಳ್ಳುವುದಕ್ಕೆ ಜನರು ಹೋಗುತ್ತಿದ್ದಾರೆಂಬುದು ಮನವರಿಕೆಯಾಗಬೇಕು ಆ ಒಂದು ಭೀತಿ ಅವರಿಗೆ ಹೋಗಬೇಕು. ನಿಜವಾಗಿ ಸರ್ಕಾರೀ ಫಾರಂಗಳಲ್ಲಿ ಕಡಿಮೆ ದುಡ್ಡಿನಲ್ಲಿ ಇಂತಹ ಸಸಿಗಳನ್ನು ಪಡೆಯಬಹುದು. ಅವನ್ನು ಉತ್ತಮ ಸಸಿಗಳನ್ನಾಗಿ ಬೆಳೆಸಬಹುದೆಂಬ ನಂಬಿಕೆ ಈಗಿನ ಸನ್ನಿವೇಶದಲ್ಲಿ ಜನಗಳಿಗೆ ಬರಬೇಕು. ಸರ್ಕಾರದ ಫಾರಂಗಳಲ್ಲಿಯೂ ಸಹ ಖಾಸಗೀಯವರು ಬೆಳೆಸುವ ಉತ್ತಮ ಸಸಿಗಳಂತೆ ಬೆಳೆದು ಅಂತಹ ಉತ್ತಮವಾದ ಸಸಿಗಳನ್ನು ಜನರಿಗೆ ಸರಬರಾಜು ಮಾಡಲು ಸರ್ವ ಪ್ರಯತ್ನವನ್ನು ಸರ್ಕಾರದವರು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಆದರೆ ನನ್ನ ಉದ್ದೇಶ ಸರ್ಕಾರದ ಫಾರಂಗಳಲ್ಲಿಯೂ ಬಹಳ ಉತ್ತಮವಾದಂಥ ಸಸಿಗಳನ್ನು ಪಡೆಯಬೇಕೆಂಬದು. ನಮ್ಮ ದೇಶದಲ್ಲಿ ಹೆಚ್ಚುಹೆಚ್ಚಾಗಿ ಉತ್ತಮವಾದ ಫಸಲನ್ನು ಕೊಡತಕ್ಕ ಸಸಿಗಳನ್ನು ಬೆಳೆಯಬೇಕಾಗಿದೆ. ಆದರೆ ಈ ಕಾರ್ಯವನ್ನು ಕಾರ್ಯರೂಪಕ್ಕೆ ತರುವಾಗ ಅದರ ಉದ್ದೇಶ ಕೆಟ್ಟದ್ದು ಆಗಬಾರದು, ಕಾರ್ಯಾಚರಣೆಯೂ ಕೆಟ್ಟದ್ದು ಆಗಬಾರದೆಂದು ನನ್ನ ಆಶೆ. ಸರ್ಕಾರದವರು ಈಗ ಏನೊಂದು ಹೆಬ್ಬಯಕೆಯನ್ನು ಇಟ್ಟುಕೊಂಡು ಈಗ ಈ ಸೀಡ್ ಫಾರಂಗಳನ್ನು ಮಾಡುತ್ತಿದ್ದಾರೋ ಅದನ್ನು ಬೆಳೆಸುವಾಗ ಅದರ ಬೆಳವಣಿಗೆಯಲ್ಲಿ ಕುಂಠಿತವಾಗಬಾರದು. ಕೆಲಸಕ್ಕೆ ಬಾರದೇ ಇರತಕ್ಕ

ಸಸಿಗಳು ಸಿಕ್ಕಿ ಜನರು ನಿರಾಶರಾಗಬಾರದು. ಅಗ್ರಿಕಲ್ಚರಲ್ ಸೀಡ್ ಫಾರಂಗಳಲ್ಲಿ ಮತ್ತು ಹಾರ್ಟಿಕಲ್ಚರಲ್ ಸೀಡ್ ಫಾರಂಗಳಲ್ಲಿ ಇವುಗಳ ಬೆಳವಣಿಗೆಯ ಬಗ್ಗೆ ಕುಂಠಿತ ಕೆಲಸವಾಗಬಾರದು. ನನ್ನ ಮಿತ್ರರು ಹೇಳಿದ ಹಾಗೆ ಅಲ್ಲಿ ಅಧಿಕಾರಿಗಳಾಗಿರುವವರು ತಿಂಗಳಾದರೆ ಸಂಬಳ ಬಂದುಬಿಡುತ್ತದೆ, ಈ ಸಸಿ ಬೆಳೆದರೇನು, ಬೆಳೆಯದಿದ್ದರೇನೆಂದು ಅಸಡ್ಡೆಯಿಂದ ವರ್ತಿಸಬಾರದು. ಲಾಭದಾಯಕವಾಗಿ ಕೆಲಸ ಮಾಡದೇ ಹೋದಪಕ್ಷದಲ್ಲಿ ಅವುಗಳಿಂದ ನಿರೀಕ್ಷಿಸಿದಷ್ಟು ಫಸಲು ಬಾರದೇ ಹೋದ ಪಕ್ಷದಲ್ಲಿ ಅದಕ್ಕೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳ ಮೇಲೂ ಉಗ್ರವಾದಂಥ ಕ್ರಮವನ್ನು ತೆಗೆದುಕೊಳ್ಳುತ್ತೇವೆಂಬ ಕಾನೂನನ್ನು ಸರ್ಕಾರದವರು ಇದರಲ್ಲಿ ಅಳವಡಿಸಬೇಕು. ಆಗಲಾದರೂ ಹೆಚ್ಚಿನ ಭಯದಿಂದಲಾದರೂ ಚೆನ್ನಾಗಿ ಕೆಲಸ ಮಾಡಿ ನಮ್ಮ ಜನರಿಗೆ ಉತ್ತಮವಾದಂಥ ಸಸಿಗಳನ್ನು ಒದಗಿಸಿಕೊಡುತ್ತಾರೆಂದು ನಾನು ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಅವು ಫಸಲು ಕೊಡುವುದು ಸ್ವಲ್ಪ ಮಟ್ಟಿಗೆ ನಿಧಾನವಾದರೂ ಉತ್ತಮವಾದಂಥ ಸಸಿಗಳನ್ನು ರೈತರು ಪಡೆಯಬೇಕು. ಆಗ ಬಹಳ ಸಂತೋಷವಾಗುತ್ತದೆ. ಏಕೆಂದರೆ ನಾವು ಈಗ ಏನೊಂದು ಪ್ರಗತಿಯನ್ನು ಈ ಸಸಿಗಳನ್ನು ಬೆಳೆಸುವುದರಿಂದ ಪಡೆಯಬೇಕೆಂದು ಹೋಗುತ್ತೇವೋ ಅದಕ್ಕೆ ಅನುಗುಣವಾಗಿ ನಮಗೆ ಉತ್ತಮವಾದಂಥ ಸಸಿಗಳು ಸಿಕ್ಕಿದರೆ ನಾವು ನಿಜವಾಗಿಯೂ ನಮ್ಮ ತೋಟಗಾರಿಕೆಯನ್ನು ಸುಧಾರಿಸುವುದಕ್ಕೆ ಅವಕಾಶವಾಗುತ್ತದೆ. ನಾವು ನಮ್ಮ ಈ ಕೆಲಸಗಳನ್ನು ಜಾಗ್ರತೆಯಾಗಿ ಪೂರೈಕೆ ಮಾಡುವುದಾದರೆ ಅಂತಹ ಉತ್ತಮವಾದಂಥ ಸಸಿಗಳನ್ನು ಬೆಳೆಯುವಂಥ ಫಾರಂಗಳು ಬಂದರೆ ಬಹಳ ಒಳ್ಳೆಯದು. ಜನರಲ್ಲಿಯೂ ಉತ್ತಮವಾದಂಥ ಫಾರಂಗಳನ್ನು ಬೆಳೆಸಬೇಕೆಂಬ ಅತಿ ಆಕಾಂಕ್ಷೆಯೂ ಹೆಚ್ಚುತ್ತದೆ ಹಾರ್ಟಿಕಲ್ಚರನ್ನು ಡೆವಲಪ್ ಮಾಡುವುದೂ ಕೂಡ ಜಾಸ್ತಿಯಾಗುತ್ತದೆ. ನಿಜವಾಗಿಯೂ ಅಂತಹ ಒಂದು ಒಳ್ಳೆಯ ಕಾಲ ಬಂದು ನಮ್ಮ ದೇಶದಲ್ಲಿ ಉತ್ತಮವಾದಂಥ ಸಸಿಗಳನ್ನು ಬೆಳೆಸುವುದಕ್ಕೆ ಸರ್ಕಾರದವರು ಹೆಚ್ಚಿಗೆ ಪ್ರಯತ್ನ ಮಾಡುತ್ತಾರೆಂದು ಹೇಳಿ, ಈ ಒಂದು ಸಂದರ್ಭದಲ್ಲಿ ನನಗೆ ಮಾತನಾಡುವುದಕ್ಕೆ ಒಂದು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಎಚ್. ಎಸ್. ಸಿದ್ದಪ್ಪ (ಅರಸೀಕೆರೆ).—ಮಾನ್ಯ ಅಧ್ಯಕ್ಷರೇ, ಗಾಹಿಸೀ ಮೈಸೂರು ಸೀಡ್ ಫಾರಂಗಳ ಮಸೂದೆಯನ್ನು ನಾನು ಸ್ವಾಗತಿಸುತ್ತೇನೆ. ಆದರೆ ನನಗೊಂದು ಭಯ ಬಂದಿದೆ. ಈ ಸಂದರ್ಭದಲ್ಲಿ ನನಗೆ ರಕ್ತಬೀಜಾಸುರನ ಕಥೆಯೊಂದು ಜ್ಞಾಪಕಕ್ಕೆ ಬರುತ್ತಿದೆ. ಹಿಂದೆ ಆತನ ಮೈಯಿಂದ ಒಂದು ತೊಟ್ಟು ರಕ್ತ ಬಿದ್ದಕೂಡಲೇ ನೂರಾರು ಜನ ರಾಕ್ಷಸರು ಹುಟ್ಟಿದರಂತೆ. ಹಾಗೆ ಇವರು ಕೊಡತಕ್ಕ ಬೀಜದಿಂದ ಎಲ್ಲಿ ನೂರಾರು ಗೊಡ್ಡು ಮರಗಳು ಹುಟ್ಟುತ್ತವೋ ಎನ್ನುವುದು ನನ್ನ ಭಯ. ಆದ್ದರಿಂದ ಮಾನ್ಯ ಸಚಿವರು ಇಂಥಾದ್ದಕ್ಕೆ ಅವಕಾಶ

ವನ್ನು ಇಲ್ಲಿ ಕೊಡದೆ ತುಂಬಾ ಜಾಗ್ರತೆಯಿಂದ ನೋಡಬೇಕೆಂದು ನಾನು ಈ ಸಂದರ್ಭದಲ್ಲಿ ಅವರಿಗೆ ಎಚ್ಚರಿಕೆಯನ್ನು ಕೊಡುತ್ತೇನೆ. ಏಕೆಂದರೆ ನಮ್ಮ ಊರಿನಲ್ಲಿ ಒಂದು ಕೋಕೋನಟ್ ರಿಸರ್ಚ್ ಫಾರಂ ಇದೆ. ಅದು ಸುಮಾರು ೨೦ ವರ್ಷ ಗಳಿಂದಲೂ ಇದೆ. ಅಲ್ಲಿ ತೆಂಗಿನ ಸಸಿಯನ್ನು ಒಬ್ಬರಿಗೆ ಕೊಟ್ಟಿದ್ದಾರೆ. ಬಹಳ ಬೆಲೆಯಾದಂಥಾದ್ದು ಎಂದು ಹೇಳಿ ಕೊಟ್ಟಿದ್ದರೂ ಅದರಿಂದ ಏನೂ ಫಲ ಬರದೆ ಕೊಟ್ಟ ಹಣ ಅವರಿಗೆ ನಷ್ಟವಾಯಿತು. ಅನೇಕ ವರ್ಷಗಳಿಂದಲೂ ಒಂದು ಕಾಯನ್ನು ಬಿಟ್ಟಿಲ್ಲ. ಅಲ್ಲಿನ ಫಾರಂನಲ್ಲಿ ಏನು ಮಾಡುತ್ತಾರೆಂದರೆ, ಆ ಏರಿಯಾದ ಒಬ್ಬ ಪ್ರತಿಭಾವಂತ ಮನುಷ್ಯನ ಮೂಲಕ ४೦೦ ರೂಪಾಯಿಗಳು ಮಾರ್ಕೆಟ್ ರೇಟ್ ಇದ್ದರೆ, ಒಳ್ಳೆಯ ಬೀಜದ ತೆಂಗಿನ ಸಸಿಯನ್ನು ಹಾಕಿಸುತ್ತೇವೆಂದು ಹೇಳಿ ೬೦೦ ರೂಪಾಯಿಗಳಿಗೆ ಕಾಯಿ ಕೊಳ್ಳುತ್ತಾರೆ. ಈ ಕಾಯಿ ಕೇವಲ ಕಡೆ ದರ್ಜೆಯ ಕಾಯಿಗಳು ಇದರಿಂದ ಅವನಿಗೆ ಸುಮಾರು ೨೦೦ ರೂಪಾಯಿಗಳಷ್ಟು ಕಮಿಷನ್ ಹೊಡೆದುಕೊಳ್ಳುತ್ತಾನೆ. ಹಿಂದೆ ನಾನೇ ನೋಡಿದ ಹಾಗೆ ಮಧ್ಯಮ ವರ್ಗದ ಹಾಗೂ ಕೆಳವರ್ಗದ ತೆಂಗಿನ ಸಸಿಯನ್ನು ಕೇವಲ ೮ ಆಣೆಯಂತೆ ಮಾರುತ್ತಿದ್ದರು. ಈಗ ಬೆಲೆ ಜಾಸ್ತಿಯಾಗಿದೆ. ಸುಮಾರು ೨–೩೦ ರೂಪಾಯಿ ಆಗಿದೆ. ತಮಗೆ ನಾನು ಒಂದು ಉದಾಹರಣೆಯನ್ನು ಬೇಕಾದರೆ ಕೊಡುತ್ತೇನೆ ಅಲ್ಲಿದ್ದ ಒಬ್ಬ ಅಧಿಕಾರಿಯ ಹೆಸರನ್ನು ಬೇಕಾದರೆ ಹೇಳುತ್ತೇನೆ. ಅಲ್ಲಿನ ಹಾಸನ ಜಿಲ್ಲಾಧಿಕಾರಿಗಳು ಒಂದು ಸಾರಿ ೨ ಸಾವಿರ ತೆಂಗಿನ ಸಸಿಗಳನ್ನು ತೆಗೆದುಕೊಂಡರೂ ಒಂದು ಸಸಿಯೂ ಸರಿಯಾಗಿ ಹುಟ್ಟಲಿಲ್ಲ. ಆಗ ಆ ಫಾರಮ್ಮಿನ ಅಧಿಕಾರಿಯೊಬ್ಬರು ಹೋಗಿ ಜಿಲ್ಲಾಧಿಕಾರಿಗೆ, ಸ್ವಾಮಿ ದಯಮಾಡಿ ಇದನ್ನು ಯಾರಿಗೂ ತಿಳಿಸಬೇಡಿ, ನಿಮಗೆ ಒಳ್ಳೆಯ ಉತ್ತಮವಾದ ಬೀಜದ ಸಸಿಯನ್ನು ಕೊಡುತ್ತೇನೆ. ನೀವೆಲ್ಲೋ ಸರಿಯಾಗಿ ಗೊಬ್ಬರ ಹಾಕಿಲ್ಲ, ಸರಿಯಾಗಿ ಗುಂಡಿ ತೆಗೆದಿಲ್ಲವೆಂದು ಹೇಳಿ ಅವರ ಮುಖಕ್ಕೆ ಮಸಿ ಬಳಿದಿರುವಂತಹ ನಿದರ್ಶನವಿದು. ಹಾಗೆಯೇ ಇನ್ನೊಂದು ಉದಾಹರಣೆಯನ್ನು ಬೇಕಾದರೆ ಹೇಳುತ್ತೇನೆ. ನಿಮ್ಮ ಹಾರ್ಟಿಕಲ್ಚರಲ್ ಡಿಪಾರ್ಟಮೆಂಟಿನಲ್ಲಿ ಒಬ್ಬ ಮಾನ್ಯ ಶ್ರೀ ವಿಷಕಂಠ ಎಂಬ ಅಧಿಕಾರಿ ಸುಮಾರು ಮೂರು ವರ್ಷಗಳ ಹಿಂದೆ ಮಾಜೀ ಶಾಸಕರೊಬ್ಬರಿಗೆ ಹೈಬ್ರಿಡ್ ಆಲೂಗಡ್ಡೆ ಬೀಜ ಕೊಟ್ಟರು. ಅದಕ್ಕೆ ಅವರು ಸುಮಾರು ಅದಕ್ಕಾಗಿ ೯ ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಮೂರು ಎಕರೆ ಜಮೀನಿನಲ್ಲಿ ಬೆಳೆದರೂ ಒಂದು ಆಲೂಗಡ್ಡೆ ಸಹ ಹುಟ್ಟಿಲ್ಲ. ಕೊನೆಗೆ ಈ ಶಾಸನಸಭೆಯ ಸೀಟನ್ನು ಕಳೆದುಕೊಂಡು ತುಂಬಾ ಬಡತನಕ್ಕೆ ಸಿಕ್ಕಿಹಾಕಿಕೊಂಡು ಕೊನೆಗೆ ಅವರು ಮನೆಯಲ್ಲಿ ಹೆಣ್ಣುಮಕ್ಕಳ ಮದುವೆ ಮಾಡುವುದಕ್ಕೂ ಬಹಳ ತೊಂದರೆಪಟ್ಟು ಮುಂದಿನ ವರ್ಷದಿಂದ ಈ ಆಲೂಗಡ್ಡೆಯ ತಂಟೆ ಬೇಡವೆಂದು ಹೇಳಿ ಕೇವಲ ೧೦೦ ರೂಪಾಯಿಗಳನ್ನು ಅವರು ಕೊಡುವುದಕ್ಕಾಗದೆ ಅನೇಕ ಸಾಲಗಾರರು ತಿರುಗಿ ತಿರುಗಿ ಕೊನೆಗೆ ಸೋತುಹೋದರು. ಇಂತಹ ಹಾರ್ಟಿಕಲ್ಚರಲ್ ಫಾರಂಗಳು ಆದರೆ ಇವರಿಂದೇನು ಪ್ರಯೋಜನವಾಗುತ್ತದೆಂಬುದನ್ನು ಯೋಚನೆಮಾಡಿ.

ಈ ಎಳೆವಾರೆಯಲ್ಲಿ ಒಂದು ಸೀಡ್ ಫಾರಂ ಇದೆ. ಅದು ಸ್ಥಾಪನೆಯಾಗಿ ೨೦ ವರ್ಷವಾಗಿದೆ ಆ ಸೀಡ್ ಫಾರಂನಲ್ಲಿ ಎಷ್ಟು ಜನ ರೈತರಿಗೆ ಉತ್ತಮವಾದ ಬೀಜವನ್ನು ಕೊಟ್ಟಿದ್ದಾರೆ? ಆ ಮೇಲೆ ಶ್ರೀಮಾನ್ ಚನ್ನಪ್ಪನವರು ಮತ್ತು ಕಾಗೋಡು ತಿಮ್ಮಪ್ಪನವರು ಹೇಳಿದಂತಹ ಎರಡು ವಿಷಯಗಳನ್ನು ನಾನು ಸಮರ್ಥನೆ ಮಾಡುತ್ತೇನೆ. ಬಾಳೆಗಿಡ, ಟೊಮ್ಯಾಟೋ ಬದನೇಕಾಯಿಗಿಡ, ಹುರುಳೀಕಾಯಿ ಮುಂತಾದವುಗಳ ಸೀಡ್ ಫಾರಂಗಳನ್ನು ಮಾಡಿಕೊಳ್ಳಿ. ತೆಂಗಿನಗಿಡ ಏನಿದೆ ಇದು ನೂರಾರು ವರ್ಷಗಳ ತನಕ ಬೆಳೆ ಕೊಡುವ ಗಿಡ. ಇದು ಸುಮಾರು ೧೦೦ ವರ್ಷಗಳ ವರೆಗೂ ಇರುತ್ತದೆ ಈ ಗಿಡವನ್ನು ರೈತ ಬೆಳೆಸುವುದಕ್ಕೆ ಒಳ್ಳೆಯ ಫಸಲನ್ನು ಕೊಡದೇ ಇಂತಕ್ಕ ಟಿ. ಬಿ. ಪೇಷಂಟಿನ ಹಾಗೆ ಎರಡು ರೆಕ್ಕೆ ಇರತಕ್ಕ ತೆಂಗಿನ ಸಸಿಯನ್ನು ರೈತನಿಗೆ ಸೀಡ್‌ಫಾರಮ್‌ನವರು ಕೊಟ್ಟರೆ ಅವನ ಗತಿ ಏನಾಗಬೇಕು ಎಂಬುದನ್ನು ಯೋಚನೆ ಮಾಡಿ. ಸರ್ಕಾರದ ಗಿಡಕ್ಕೆ ಎರಡು ರೆಕ್ಕೆ ಇರುತ್ತೆ ಕ್ಷಯ ರೋಗಿ ತರಹ ಇರುತ್ತೆ. ಅಡಿಕೆ ಸಸಿ ಬಹಳ ಕಡಿಮೆ ವಯಸ್ಸಿನಲ್ಲಿಯೇ ಬಿದ್ದು ಹೋಗುತ್ತದೆ. ಆದರೆ ತೆಂಗಿನ ಮರ ೬೦–೮೦, ೧೨೦ ವರ್ಷಗಳವರೆಗೂ ಇರುತ್ತದೆ. ಅವರು ಹಾಕಿದ ಗಿಡ ಮೊಮ್ಮಕ್ಕಳು ಇರುವವರೆಗೆ ಬರುತ್ತೆ. ಈಗ ನಮ್ಮಲ್ಲಿ ಹೆಣ್ಣು ಗಂಡು ಸಂಬಂಧವನ್ನು ಮಾಡಬೇಕಾಗಿದ್ದರೆ ಅವರ ವಂಶ, ಎಂಥಾದ್ದು ಅವರ ಬುಡ ಎಂಥಾದ್ದು ಅವರ ಅಪ್ಪ ಅಜ್ಜ ಎಂಥಹವರು ಇತ್ಯಾದಿ ಮೂಲಗಳನ್ನೆಲ್ಲಾ ನೋಡಿ ಮದುವೆ ಮಾಡಿಕೊಳ್ಳುತ್ತಾರೆ. ಅದೇ ರೀತಿ ಯಾರಾದರೂ ಒಬ್ಬ ರೈತ ತೆಂಗಿನ ಸಸಿಯನ್ನು ತೆಗೆದುಕೊಂಡು ಹೋಗಬೇಕಾದರೆ ಆ ತೆಂಗಿನಸಸಿ ಯಾವ ತೋಟದ್ದು, ಅಲ್ಲಿ ಎಷ್ಟು ತೆಂಗಿನ ಮರಗಳು ಇವೆ, ಕೊಬ್ಬರಿ ಒಂದು ಸಾವಿರಕ್ಕೆ ಎಷ್ಟು ಮಣ ಆಗುತ್ತದೆ ಇವುಗಳನ್ನೆಲ್ಲ ನೋಡಿಕೊಂಡು ತೆಂಗಿನ ಸಸಿಯನ್ನು ತೆಗೆದುಕೊಂಡು ಹೋಗುತ್ತಾರೆ. ಆದ್ದರಿಂದ ಸೀಡ್ ಫಾರಂನಲ್ಲಿರತಕ್ಕ ಅಧಿಕಾರಿಗಳು ದೇಶದ ದೃಷ್ಟಿಯಿಂದ ಜನತೆಯ ದೃಷ್ಟಿಯಿಂದ ಒಳ್ಳೆಯ ಬೀಜ ಮತ್ತು ಒಳ್ಳೆಯ ತೆಂಗಿನ ಸಸಿಗಳನ್ನು ಬೆಳೆದು ರೈತರಿಗೆ ಒದಗಿಸಬೇಕು ಎಂದು ನಾನು ಹೇಳುತ್ತೇನೆ. ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಯಾವುದೇ ಒಂದು ಕಾನೂನನ್ನು ಈ ಅಸೆಂಬ್ಲಿಯಲ್ಲಿ ಮಾನ್ಯ ಮಂತ್ರಿಗಳು ತಂದು ಪಾಸು ಮಾಡಿದಮೇಲೆ ಅದನ್ನು ಇಂಪ್ಲಿಮೆಂಟ್ ಮಾಡುವವರು ಮಂತ್ರಿಗಳಲ್ಲ. ಮಂತ್ರಿಗಳು ಈ ಕಾನೂನನ್ನು ಅಧಿಕಾರಿಗಳ ಕೈಯಲ್ಲಿ ಕೊಟ್ಟು ಇಂಪ್ಲಿಮೆಂಟ್ ಮಾಡುವುದಕ್ಕೆ ಹೇಳುತ್ತಾರೆ ಆದ್ದರಿಂದ ಇದನ್ನು ಇಂಪ್ಲಿಮೆಂಟ್ ಮಾಡುವಾಗ ಅಧಿಕಾರಿಗಳಿಗೆ ನಿಷ್ಠೆ ಇರಬೇಕು. ಅವರಿಗೆ ಸಹೃದಯತೆ ಇರಬೇಕು ದೇಶದ ಜನ ನಮ್ಮವರು ಎನ್ನುವ ಅಭಿಮಾನ ಅವರಿಗೆ ಇರಬೇಕು. ಅಂಥಾ ಅಧಿಕಾರಿಗಳು ನಮ್ಮ ದೇಶದಲ್ಲಿ ಎಷ್ಟು ಜನ ಇದ್ದಾರೆ ಎನ್ನತಕ್ಕ ಬಗ್ಗೆ ಒಂದು ವೋಟ್ ತೆಗೆದುಕೊಳ್ಳಿ ಆಗ ತಮಗೆ ಗೊತ್ತಾಗುತ್ತವೆ ಈಗ ನಮ್ಮ ಮಾನ್ಯ ಮಂತ್ರಿಗಳಿಗೆ ಈ ಬಗ್ಗೆ ಇರತಕ್ಕಂಥಾ ನಿಷ್ಠೆಯಲ್ಲಿ ಈ ಅಧಿಕಾರಿಗಳಿಗೆ ಒಂದು ಸಾವಿರದಲ್ಲಿ ಒಂದು ಪಾಲು ಕೂಡ ಇಲ್ಲ.

ಆದ್ದರಿಂದ ಈ ಮಸೂದೆಯ ವ್ಯಾಪ್ತಿಯಲ್ಲಿ ಬರತಕ್ಕ ಬೀಜ ಹಾಗೂ ಸಸಿಗಳಲ್ಲಿ ನೂರಾರು ವರ್ಷ ಫಸಲು ಕೊಡತಕ್ಕಂಥ ತೆಂಗು ಮತ್ತು ಮಾವು ಇತ್ಯಾದಿ ಸಸಿಗಳನ್ನು ಇದರ ವ್ಯಾಪ್ತಿಯಿಂದ ತೆಗೆದು ಹಾಕಬೇಕು. ಒಂದುವೇಳೆ ಅವುಗಳನ್ನು ಇದರಿಂದ ಎಲಿಮಿನೇಟ್ ಮಾಡದೇ ಹೋದರೆ ಕಾಂಪಿಟಿಟೀವ್ ಬಿಜಿನೆಸ್ ಮಾಡುವುದಕ್ಕೆ ಬಿಡಿ. ಅದನ್ನು ಬೆಳೆಯುವದಕ್ಕೆ ಏರಿಯಾ ರಿಸ್ಟ್ರಿಕ್ಷನ್ ಇರುವುದನ್ನು ತೆಗೆಯಿರಿ. ಆ ಕೆಲಸವನ್ನು ನಿಷ್ಠಾವಂತ ರೈತ ಮಾಡಿಕೊಳ್ಳುತ್ತಾನೆ. ನೂರಾರು ವರ್ಷ ಫಲ ಕೊಡತಕ್ಕಂಥಾ ತೆಂಗು ಮತ್ತು ಮಾವಿನ ಗಿಡಗಳನ್ನು ಬೆಳೆಸತಕ್ಕ ಕೆಲಸವನ್ನು ರೈತನೇ ಮಾಡಿಕೊಳ್ಳುತ್ತಾನೆ. ಆದ್ದರಿಂದ ಅವನಿಗೆ ಅವಕಾಶವನ್ನು ಕೊಡಿ. ಅವನಿಗೆ ಭಯ ಇರುತ್ತದೆ. ನಾಳೆ ಒಂದುವೇಳೆ ಅವನು ಒಳ್ಳೆಯ ಗಿಡವನ್ನು ರೈತನಿಗೆ ಕೊಡದೇ ಹೋದರೆ ಯಾರೋ ನಮಗೆ ಕೆಟ್ಟ ಸಸಿಯನ್ನು ಕೊಟ್ಟ ಎಂದು ಅವನನ್ನು ಶಪಿಸುತ್ತಾರೆ ಎಂದು ನಿಷ್ಠೆಯಿಂದ ಒಳ್ಳೆಯ ಸಸಿಯನ್ನು ಬೆಳೆಸಿ ಬೇರೆಯವರಿಗೆ ಅವನು ಮಾರುತ್ತಾನೆ. ಈ ದೃಷ್ಟಿಯಿಂದ ಖಾಸಗೀ ಬಿತ್ತನೆ ಬೀಜ ಕ್ಷೇತ್ರಗಳಿಗೆ ಅವಕಾಶ ಇರಬೇಕು. ಆದರೆ ಅಧಿಕಾರಿಗಳು ನಾವು ದುಡ್ಡು ಮಾಡಿಕೊಂಡರೆ ಸಾಕು ಎಂಬ ಯಾವುದೋ ಒಂದು ಸಸಿಯನ್ನು ಫಾರಂನಲ್ಲಿ ಬೆಳೆದು ರೈತನಿಗೆ ಕೊಡುತ್ತಾರೆ. ಅವನು ಅಲ್ಲಿ ಸಾಕಷ್ಟು ದುಡ್ಡು ಮಾಡಿಕೊಂಡು ಮೇಲೆ ತನಗೋ ತನ್ನ ಮನೆಯವರಿಗೋ ಖಾಯಿಲೆ ಆಗಿದೆ ಬೆಂಗಳೂರು ಆಸ್ಪತ್ರೆಯಲ್ಲಿ ಸೇರಬೇಕು ನನಗೆ ಬೆಂಗಳೂರಿಗೆ ಟ್ರಾನ್ಸ್‌ಫರ್ ಮಾಡಿಕೊಡಿ ಎಂದು ಅವನು ಟ್ರಾನ್ಸ್‌ಫರ್ ಮಾಡಿಸಿಕೊಂಡು ಹೋದರೆ ಅಲ್ಲಿಗೆ ಮುಗಿದು ಹೋಯಿತು. ಈ ರೀತಿಯಾಗಿ ಅಧಿಕಾರಿಗಳು ನಿಷ್ಠೆಯಿಂದ ಕೆಲಸ ಮಾಡುವದಿಲ್ಲ ಎಂದು ನಾನು ಮನನೊಂದು ಈ ಮಾತನ್ನು ಹೇಳುತ್ತಿದ್ದೇನೆ ಹಾರ್ಟಿಕಲ್ಚರಲ್ ಡಿಪಾರ್ಟಮೆಂಟ್ ಸೀಡ್ ಫಾರಂನಲ್ಲಿ ಬೆಳೆದಂತಹ ಬೀಜಗಳನ್ನು ಗ್ರಾಮಾಂತರ ಪ್ರದೇಶದ ಜನಗಳಿಗೆ ಸರ್ಕಾರದವರು ಯಾವರೀತಿ ಹಂಚುತ್ತೀರಿ? ಈಗ ತಾಲ್ಲೂಕು ಪಟ್ಟದಲ್ಲಿರತಕ್ಕ ಹಾರ್ಟಿಕಲ್ಚರಲ್ ಆಫೀಸುಗಳಲ್ಲಿ ಕೆಲವು ಆಫೀಸರುಗಳ ಕ್ವಾರ್ಟರ್ಸ್ ಮುಂದೆ ಬೆಳೆದಿರತಕ್ಕ ಯಾವುದೋ ತರಕಾರಿ ಬೀಜಗಳನ್ನು ತಂದು ನಾಲ್ಕು ಆಣೆಗೆ ಒಂದು ಪಾಕೆಟ್‌ನಂತೆ ಮಾರಾಟ ಮಾಡುತ್ತಾರೆ. ನಾನು ಅದನ್ನು ತಂದು ನಮ್ಮ ತೋಟದಲ್ಲಿ ಹಾಕಿದೆ ಆ ಬೀಜಗಳು ಹುಟ್ಟಲೇ ಇಲ್ಲ. ಆ ಮೇಲೆ ಈ ಬೀಜವನ್ನು ಕೊಟ್ಟ ತಾಲ್ಲೂಕು ಹಾರ್ಟಿಕಲ್ಚರಲ್ ಆಫೀಸಿನಲ್ಲಿ ವಿಚಾರಿಸಿದಾಗ ಬೀಜವನ್ನು ಹಾಕುವ ಸ್ಥಳದಲ್ಲಿ ೬ ಅಡಿ ಮಣ್ಣು ಅಗೆಯಬೇಕು, ಬೇರೆ ಮಣ್ಣನ್ನು ಅಲ್ಲಿ ತಂದು ಹಾಕಬೇಕು ಗೊಬ್ಬರ ಹಾಕಬೇಕು ನಂತರ ಬೀಜವನ್ನು ಹಾಕಬೇಕು ಆಗ ಬೀಜಗಳು ಹುಟ್ಟುತ್ತವೆ ಎಂದು ಹೇಳಿದರು. ಅದು ಒಂದು ಗಾರ್ಡನ್ ಅಲ್ಲಿ ೬ ಅಡಿ ಅಗೆಯಬೇಕು ಎಂದರೆ ಹೇಗೆ? ಆಮೇಲೆ ನಾನು ಬೆಂಗಳೂರಿಗೆ ಬಂದು ಮಾವಳ್ಳಿ ಟಿಫಿನ್ ರೂಮಿನ ಪಕ್ಕದಲ್ಲಿರತಕ್ಕ ಪ್ರೈವೇಟ್ ಫಾರಂನಲ್ಲಿ ಬೀಜಗಳನ್ನು ತೆಗೆದುಕೊಂಡು ಹೋಗಿ ಹಾಕಿದೆ. ೬ ಅಡಿ ನೆಲವನ್ನು ಅಗಿಯಲೂ ಇಲ್ಲ ಏನೂ ಮಾಡಲಿಲ್ಲ. ಆದರೆ ಬೀಜ ಒಳ್ಳೆಯ ಸೊಗಸಾಗಿ ಹುಟ್ಟಿತು. ಆದರೆ ಹಾರ್ಟಿಕಲ್ಚರಲ್ ಡಿಪಾರ್ಟಮೆಂಟಿನಲ್ಲಿ

ಕವರಿನಲ್ಲಿ ಹಾಕಿ ಹಾರ್ಟಿಕಲ್‌ಚರಲ್ ಡಿಪಾರ್ಟ್‌ಮೆಂಟ್ ಎಂದು ಸೀಲ್ ಒತ್ತಿರುತ್ತಾರೆ. ಆದರೆ ಅವರು ಕೊಟ್ಟಂತಹ ಬೀಜ ಸರಿಯಾಗಿ ಹುಟ್ಟುವುದಿಲ್ಲ. ಆದ್ದರಿಂದ ಈ ಕಾನೂನು ಜಾರಿಗೆ ತರಬೇಕಾದರೆ ಮೊದಲು ಈ ಹಾರ್ಟಿಕಲ್‌ಚರಲ್ ಡಿಪಾರ್ಟ್‌ಮೆಂಟನ್ನು ಓವರ್ ಆಯಿಲ್ ಮಾಡಬೇಕು. ತುಕ್ಕು ಹಿಡಿದಿರುವ ಈ ಇಲಾಖೆಗೆ ಲೂಬ್ರಿಕೇಟ್ ಮಾಡಬೇಕು. ಆ ಮೇಲೆ ಇದನ್ನು ಜಾರಿಗೆ ತರಬೇಕು. ಈ ಇಲಾಖೆಯವರು ಕೆಟ್ಟ ಬೀಜಗಳನ್ನು ರೈತರಿಗೆ ಹಂಚುತ್ತಿದ್ದಾರೆ, ಆದ್ದರಿಂದ ಇದನ್ನು ಸರಿಪಡಿಸಬೇಕು. ಈಗ ನಮ್ಮ ರಾಜ್ಯದಲ್ಲಿರತಕ್ಕ ಕೋಕನಟ್ ರಿಸರ್ಚ ಸ್ಟೇಶನ್‌ನಲ್ಲಿ ಮಲೆಯ ಸೀಡ್, ಸಿಂಗಪುರ ಸೀಡ್, ಫಿಲಿಫೈನ ಸೀಡ್ ಮುಂತಾದ ಬೀಜಗಳನ್ನು ಏನು ತರಿಸುತ್ತಿದ್ದಾರೆ ಅವುಗಳನ್ನು ಟ್ರೈಲ್ ನೋಡಿ ತೆಂಗಿನ ಗಿಡಗಳನ್ನು ಬೆಳೆದು ನೋಡಿ ಒಳ್ಳೆಯ ಗಿಡಗಳನ್ನು ರೈತರಿಗೆ ಹಂಚುತ್ತಾ ಇಲ್ಲ. ಅನೇಕ ವರ್ಷಗಳಿಂದ ಪ್ರಯೋಗ ನಡೆಯುತ್ತಿದೆ. ಇನ್ನೂ ಪ್ರಯೋಗವೇ ಆದರೆ ರೈತರಿಗೆ ಬೀಜದ ಗತಿಯೇನು? ಈ ದೃಷ್ಟಿಯಿಂದ ಈ ರಿಸರ್ಚ ಸ್ಟೇಷನ್‌ಗಳಲ್ಲಿ ಮೊದಲು ಒಳ್ಳೆಯ ಬೀಜಗಳನ್ನು ಹಾಕಿ ಬೆಳೆದು ಅವು ಸರಿಯಾಗಿ ಚನ್ನಾಗಿ ಬೆಳೆದರೆ ಆಗ ಅಂಥಾ ಗಿಡಗಳನ್ನು ರೈತರಿಗೆ ಹಂಚುವಂತಹ ವ್ಯವಸ್ಥೆ ಮಾಡಬೇಕು ಎಂದು ನಾನು ಹೇಳುತ್ತೇನೆ.

ಇನ್ನೊಂದು ವಿಷಯ. ತೆಂಗಿನ ಬೆಳೆಯ ಅಭಿವೃದ್ಧಿಗಾಗಿ ಅಗ್ರಿಕಲ್‌ಚರಲ್ ರೀಫೈನಾನ್ಸ ಕಾರ್ಪೋರೇಷನ್ನಿನವರು ರೈತರಿಗೆ ಸಾಲ ಕೊಡತಕ್ಕ ಒಂದು ಯೋಜನೆಯನ್ನು ಹಾಕಿಕೊಂಡಿದ್ದಾರೆ. ಈ ಅಗ್ರಿಕಲ್‌ಚರ್ ರೀಫೈನಾನ್ಸ ಕಾರ್ಪೋರೇಷನ್ನಿನವರ ಕಂಡೀಷನ್ ಏನು ಎಂದರೆ ಹಾರ್ಟಿಕಲ್‌ಚರಲ್ ಡಿಪಾರ್ಟ್‌ಮೆಂಟಿನಿಂದ ತೆಂಗಿನ ಸಸಿಗಳನ್ನು ತೆಗೆದುಕೊಂಡಿದ್ದರೆ ಮಾತ್ರ ಸಾಲವನ್ನು ಕೊಡುತ್ತೇವೆ ಎಂದು ಹೇಳುತ್ತಾರೆ. ನನ್ನದು ೧೨ ಎಕರೆ ಜಮೀನು ಇದೆ. ಅದರಲ್ಲಿ ತೆಂಗಿನ ಗಿಡ ಸಮೃದ್ಧಿಯಾಗಿ ಬೆಳೆದಿದೆ. ೧೦೦ ತೆಂಗಿನ ಗಿಡಕ್ಕೆ ೧೫ ಸಾವಿರ ತೆಂಗಿನಕಾಯಿ ಬಿಡುತ್ತದೆ. ನನ್ನ ತಮ್ಮನ ಜಮೀನು ನನ್ನ ಜಮೀನಿನ ಪಕ್ಕದಲ್ಲಿಯೇ ಇದೆ. ಅಲ್ಲಿ ತೆಂಗು ಬೆಳೆಯುವುದಕ್ಕೆ ನನ್ನ ತಮ್ಮ ಹಾರ್ಟಿಕಲ್‌ಚರಲ್ ಡಿಪಾರ್ಟ್‌ಮೆಂಟಿಗೆ ಅರ್ಜಿಯನ್ನು ಕೊಟ್ಟಾಗ ಹಾರ್ಟಿಕಲ್‌ಚರಲ್ ಡಿಪಾರ್ಟ್‌ಮೆಂಟಿನ ಸೂಪರಿಂಟೆಂಡೆಂಟ ಆ ಜಮೀನನ್ನು ನೋಡಿ ಆ ಜಮೀನು ತೆಂಗಿನ ಸಸಿಯನ್ನು ಹಾಕುವುದಕ್ಕೆ ಅನ್‌ಫಿಟ್ ಎಂದು ಬರೆದು ಹೊರಟು ಹೋದರು. ಅದಕ್ಕೆ ಕಾರಣವೇನೆಂದರೆ ಆ ಸೂಪರಿಂಟೆಂಡೆಂಟ ಅಲ್ಲಿಗೆ ಬಂದಾಗ ಅವರನ್ನು ಸರಿಯಾಗಿ ನೋಡಿಕೊಂಡು ಅವರಿಗೆ ಟಿ.ಬಿ.ಯಲ್ಲಿ ಒಳ್ಳೆಯ ಊಟವನ್ನು ಹಾಕಿಸಿ, ಚಾಪಿಸು ತಿನ್ನಿಸಿ ಎಲ್ಲಾ ವ್ಯವಸ್ಥೆಯನ್ನು ಮಾಡಿದ್ದರೆ ಸಾಲವನ್ನು ಮಂಜೂರು ಮಾಡುವದಕ್ಕೆ ಶಿಫಾರಸ್ಸು ಮಾಡುತ್ತಿದ್ದರು. ಆ ರೀತಿ ಮಾಡದೆ ಇದ್ದುದರಿಂದ ನನ್ನ ತಮ್ಮನಿಗೆ ಸಾಲವನ್ನು ಮಂಜೂರು ಮಾಡಲಿಲ್ಲ. ಆದ್ದರಿಂದ ನಾನು ನೊಂದ ಹೃದಯದಿಂದ ಹೇಳುತ್ತಿದ್ದೇನೆ. ಮೊದಲು ಈ ಹಾರ್ಟಿಕಲ್‌ಚರಲ್ ಇಲಾಖೆ ಪರಿಶುದ್ಧವಾಗಬೇಕು. ನಂತರ ಈ ಸೀಡ್ ಫಾರಂ ಆಕ್ಟನ್ನು ತರುವುದಾದರೆ ಅದನ್ನು ದೇಶದ ಮೂಲೆ ಮೂಲೆಯಲ್ಲಿರತಕ್ಕ ಪ್ರತಿಯೊಬ್ಬ ರೈತನೂ ಸಂತೋಷದಿಂದ ಸ್ವಾಗತಿಸುತ್ತಾನೆ.

ಹಾರ್ಟಿಕಲ್‌ಚರಲ್ ಡಿಪಾರ್ಟಮೆಂಟಿನವರು ವೆರೈಟಿ ಸೀಡ್ ಫಾರಂ ಮಾಡಿದ ಮೇಲೆ ಬೀಜವನ್ನು ರೈತರಿಗೆ ಯಾವರೀತಿ ಹಂಚಿಕೆ ಮಾಡುತ್ತಾರೆ ಎನ್ನುವದು ಈ ಮಸೂದೆಯಲ್ಲಿ ಕಂಡು ಬರುವುದಿಲ್ಲ. ಅದನ್ನು ಸರ್ಕಾರದವರು ಹೇಗೆ ಮಾಡುತ್ತಾರೆ ಎನ್ನುವದನ್ನು ಮಾನ್ಯ ಮಂತ್ರಿಗಳು ಸ್ಪಷ್ಟೀಕರಣ ಮಾಡಬೇಕು. ಈಗ ಇರತಕ್ಕ ಪದ್ಧತಿಯ ಪ್ರಕಾರ ತಾಲ್ಲೂಕು ಅಭಿವೃದ್ಧಿ ಮಂಡಲಿಗಳ ಮುಖಾಂತರ ವೆರೈಟಿ ಸೀಡ್ ಅನ್ನು ಹಂಚಿಕೆ ಮಾಡುತ್ತಿದ್ದಾರೆ. ಅದು ಬಿಟ್ಟರೆ ಕೆಲವೊಂದು ಮಾರ್ಕೇಟಿಂಗ ಸೊಸೈಟಿಗಳ ಮುಖಾಂತರವೂ ರೈತರಿಗೆ ಬೀಜವನ್ನು ಹಂಚಿಕೆ ಮಾಡುತ್ತಿದ್ದಾರೆ. ಈ ತಾಲ್ಲೂಕು ಅಭಿವೃದ್ಧಿ ಮಂಡಲಿಗಳು ಉತ್ತಮ ತಳಿ ಬೀಜವನ್ನು ಸರಬರಾಜು ಮಾಡುವಾಗ ನನ್ನ ತಾಲ್ಲೂಕಿನಲ್ಲಿ ತಾಲ್ಲೂಕು ಅಭಿವೃದ್ಧಿ ಮಂಡಲಿಯ ಅಧ್ಯಕ್ಷರು ಹೆಚ್ಚು ಬೀಜಗಳನ್ನು ಉಪಯೋಗ ಮಾಡಿಕೊಳ್ಳುತ್ತಿದ್ದಾರೆ. ಆದರೆ ಯಾವ ರೈತರಿಗೂ ಅವರು ಬೀಜವನ್ನು ಸರಿಯಾಗಿ ಹಂಚಿಕೆ ಮಾಡುತ್ತಿಲ್ಲ.

3-30 P. M.

ಇದಕ್ಕೆ 'ನೀವು' ಏನು ಮಾಡಿದ್ದೀರಾ ಎಂದರೆ, ಒಂದು ಸೊಸೈಟಿ ಮಾಡಿ, ಅದರ ಮೂಲಕ ಹಂಚಿಕೆ ಮಾಡುವ ವ್ಯವಸ್ಥೆ ಮಾಡಿದ್ದೀರಿ. ಅಂದರೆ ರೈತರೇ ಸೇರಿಕೊಂಡು ಒಂದು ಸೊಸೈಟಿ ಮಾಡಿಕೊಂಡರೆ, ಅದರ ಮೂಲಕ ಹಂಚಬೇಕೆಂದು ಮಾಡಿದ್ದೀರಿ. ಈ ಒಂದು ವ್ಯವಸ್ಥೆ ಯಾವ ರೀತಿಯಿದೆ ಎಂದರೆ, ಶ್ರೀಮತಿ ಇವಾವಾಜ್ ಅವರು ಹಂಚುತ್ತಿರುವ ರೇಷನ್ ಜನರಿಗೆ ಯಾವ ರೀತಿ ಸೊಸೈಟಿಗಳ ಮೂಲಕ ಹೋಗುತ್ತಿದೆಯೋ ಅದೇ ರೀತಿ ಇದೂ ಸಹ ಇದೆ. ಮುಖ್ಯವಾಗಿ ಈಗ ನಡೆಯುತ್ತಿರುವ ಅನ್ಯಾಯಗಳನ್ನು ಸರಿ ಮಾಡಿ ನಂತರ ಈ ಬಿಲ್‌ನ್ನು ತಂದಿದ್ದರೆ ಚೆನ್ನಾಗಿರುತ್ತಿತ್ತು ಎಂದು ನನಗನ್ನಿಸುತ್ತದೆ. ನಮ್ಮ ರೈತರ ಪರಿಸ್ಥಿತಿಯನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಬಹುದಿನಗಳ ವರೆಗೆ ಇರುವ ತೆಂಗಿನಸಸಿ, ಮಾವಿನಸಸಿ, ಹಲಸಿನ ಸಸಿ ಇವುಗಳ ಬಗ್ಗೆ ಈ ಆಕ್ಟ್‌ನಲ್ಲಿ ಹೇಳಿರುವುದನ್ನು ಪುನರ್ ಪರಿಶೀಲನೆ ಮಾಡಬೇಕೆಂದು ಕೇಳುತ್ತೇನೆ. ತಾವು ಯಾವುದನ್ನೂ ಕಡ್ಡಾಯ ಮಾಡುವುದಕ್ಕೆ ಹೋಗಬೇಡಿ ಎಂದು ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಬೇಕಾದರೆ ತಾವು ನನ್ನ ತಾಲ್ಲೂಕ್‌ಗೆ ಬನ್ನಿ; ಅಲ್ಲಿ ಬಡ ರೈತರು ನರ್ಸರಿ ಮಾಡಿಕೊಂಡು ಬೆಳೆಸಿರುವ ಸಸಿಗಳು ಏನಿವೆ, ಅವುಗಳು ಒಳ್ಳೆಯ ಬೀಜಗಳಲ್ಲ ಎಂದು ನೀವು ಪ್ರೂವ್ ಮಾಡಿದರೆ, ನೀವು ಕೇಳಿದ ದಂಡ ಕೊಡುತ್ತೇನೆ. ಕೆಟ್ಟ ಸಸಿಗಳನ್ನು ಬೆಳೆಸಿದರೆ ಅದರಿಂದ ತಮ್ಮ ವಂಶಕ್ಕೆ ಕೆಡಕಾಗುತ್ತದೆ ಮತ್ತು ತಮ್ಮ ಮಕ್ಕಳು ಮತ್ತು ಮೊಮ್ಮಕ್ಕಳಿಗೆ ಕೆಡಕಾಗುತ್ತದೆಂಬ ಭಯ ರೈತರಿಗೆ ಇರುವುದರಿಂದ ಅವರು ಒಳ್ಳೆಯ ಸಸಿಗಳನ್ನೇ ಬೆಳೆಸುತ್ತಾರೆ ಆದರೆ ಈ ಒಂದು ಭಯ ನಿಮ್ಮ ಅಧಿಕಾರಿಗಳಿಗೆ ಇಲ್ಲ. ಆದಕಾರಣ ಇದರ ಬಗ್ಗೆ ತಾವು ಪುನರ್ ಪರ್ಯಾಲೋಚನೆ ಮಾಡುವುದು ಒಳ್ಳೆಯದು. ಈಗ ನೀವು ತಂದಿರುವ ಮೈಸೂರು ಸೀಡ್ ಫಾರಮ್ಸ್ ಬಿಲ್ ಏನಿದೆ, ಇದನ್ನು ಕೆಲವು ಭಾಗಗಳಿಗೆ ಮಾತ್ರ ಬೇಕಾದರೆ ಸೀಮಿತ ಮಾಡಿ. ನೂರಾರು ವರ್ಷಗಳ ವರೆಗೆ ಇರುವ ಸಸಿಗಳನು

ಬೆಳೆಸುವ ವಿಚಾರದಲ್ಲಿ ಕಾಂಪಿಟಿಷನ್ ಇದ್ದರೆ ಒಳ್ಳೆಯದು. ಇದಕ್ಕೆ ತಾವು ವ್ಯವಸ್ಥೆ ಮಾಡಬೇಕು. ಈಗ ತಮ್ಮ ಜವಾಬ್ದಾರಿಯನ್ನು ಅರಿಯದೆ ಇರತಕ್ಕಂಥ ಅಧಿಕಾರಿಗಳು ಏನಿದ್ದಾರೆ ಮತ್ತು ಸರ್ಕಾರದ ಕಳಕಳಿಯನ್ನು ಅರಿತುಕೊಳ್ಳದೆ ಸ್ವಾರ್ಥವನ್ನು ಸಾಧನೆ ಮಾಡಿಕೊಳ್ಳುವ ಅಧಿಕಾರಿಗಳು ಏನಿದ್ದಾರೆ, ಅವರನ್ನು ಮೊದಲು ತಾವು ಸರಿ ಮಾಡಿ; ಇಲ್ಲದೆ ಹೋದರೆ ಇದರಿಂದ ಯಾವ ಅನುಕೂಲವೂ ರೈತರಿಗೆ ಆಗುವುದಿಲ್ಲ. If you cannot mend them, end them and then bring this Act into force ಎಂದು ಹೇಳಿ, ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

Mr. Deputy Speaker in the Chair

†ಶ್ರೀ ಟಿ. ಆರ್. ಶ್ಯಾಮಣ್ಣ (ಕೋಟೆ).— ಮಾನ್ಯ ಅಧ್ಯಕ್ಷರೆ, ನನಗೆ ವ್ಯವಸಾಯದ ವಿಚಾರ ಸ್ವಲ್ಪ ಗೊತ್ತಿದ್ದರೂ ಕೂಡ ನಾನು ವ್ಯವಸಾಯಗಾರನಲ್ಲ. ಆದರೂ ಇಲ್ಲಿ ನನಗೆ ಬಂದಿರುವ ಮುಖ್ಯವಾದ ಅನುಮಾನ ಏನೆಂದರೆ, ಸೆಕ್ಷನ್ ಎರಡರಲ್ಲಿ

> "seed" means any of the classes of seeds used for sowing or planting and includes seedlings and tubers, bulbs, rhizomes, roots, cuttings, all types of grafts and other vegetatively propagated material.

ಎಂದು ಹೇಳಿದ್ದಾರೆ. ಆದ್ದರಿಂದ ಸೀಡ್ ಎನ್ನುವ ಡೆಫನಿಷನ್‌ನಲ್ಲಿ ಯಾವುದು ಬೇಕಾದರೂ ಆಗಬಹುದು.

ಶ್ರೀ ಕೆ. ಎಚ್. ಪಾಟೀಲ್.— ಹೈಕ್ವಾಲಿಟಿ ಸೀಡ್‌ಗೆ ಡೆಫನಿಷನ್ ಕೊಟ್ಟಿಲ್ಲ.

ಶ್ರೀ ಟಿ. ಆರ್. ಶಾಮಣ್ಣ.— ನಾನು ಇದರ ಬಗ್ಗೆ ಮಾತನಾಡಬೇಕಾದಂಥ ಪ್ರಮೇಯ ಇಷ್ಟೆ; ಇಂದು ಬೆಂಗಳೂರು ನಗರದಲ್ಲಿ ಅನೇಕ ನರ್ಸರಿಗಳಿವೆ. ಈ ನರ್ಸರಿಗಳು ಇಡೀ ಭಾರತದಲ್ಲಿಯೇ ಹೆಸರು ಪಡೆದಿವೆ. ಆದ್ದರಿಂದ ಬೇರೆ ಬೇರೆ ದೇಶದವರು ಇಲ್ಲಿಗೆ ಬಂದು ತಮಗೆ ಬೇಕಾದುದನ್ನು ತೆಗೆದುಕೊಂಡು ಹೋಗುತ್ತಿದ್ದಾರೆ. ಬನಶಂಕರಿಯ ಹತ್ತಿರ ಒಂದು ಸೈಂಟಿಫಿಕ್ ನರ್ಸರಿ ಇದೆ. ಅದು ಎಷ್ಟು ಆಕರ್ಷಕವಾಗಿದೆ ಎಂದರೆ, ನಮ್ಮ ಸರ್ಕಾರದವರು ಸಹ ಅಷ್ಟೊಂದು ಆಕರ್ಷಕವಾದ ನರ್ಸರಿಯನ್ನು ಮಾಡುವುದಕ್ಕೆ ಸಾಧ್ಯವಿಲ್ಲ ಎನ್ನುವ ನಂಬಿಕೆ ನನಗೆ ಪೂರ್ಣವಾಗಿ ಇದೆ. ಹೊಸ ವೈದ್ಯನಿಗಿಂತ ಹಳೆಯ ರೋಗಿ ಉತ್ತಮ ಎನ್ನುವ ಗಾದೆ ಈಗ ನನಗೆ ನೆನಪಿಗೆ ಬರುತ್ತಿದೆ. ಏಕೆಂದರೆ, ರೈತನಾದವನಿಗೆ ಯಾವ ಜಮೀನಿನಲ್ಲಿ ಯಾವ ಬೀಜವನ್ನು ಹಾಕಬೇಕು, ಯಾವ ಬೆಳೆ ತೆಗೆಯಬೇಕು ಎಂಬುದು ಚೆನ್ನಾಗಿ ಗೊತ್ತಿರುತ್ತದೆ. ಈ ಒಂದು ಅನುಭವ ಅಧಿಕಾರಿಗಳಲ್ಲಿ ಇರುವುದಿಲ್ಲ. ಇದಕ್ಕೆ ಒಂದು ಉದಾಹರಣೆ ಕೊಡುತ್ತೇನೆ. ನಾನು ವೃತ್ತಿಯಲ್ಲಿ ಇಂಜಿನಿಯರಿಂಗ್ ಗ್ರಾಜ್ಯುಯೇಟ್ ಅಲ್ಲ.

ಆದರೂ ಸಹ ಅನೇಕರು ನನ್ನನ್ನು ಹುಡುಕಿಕೊಂಡು ಬಂದು ಕಟ್ಟಡ ಕಟ್ಟಿಸಿ ಕೊಡಬೇಕೆಂದು ಅಡ್ವಾನ್ಸಾಗಿ ಹಣ ಕೊಟ್ಟು ಹೋಗುತ್ತಾರೆ. ಇಂದು ಅನೇಕ ಇಂಜಿನಿಯರ್‌ಗಳಿಗೆ ಮೂಲೆ ಮಟ್ಟ ಹಿಡಿಯುವುದಕ್ಕೆ ಬರುವುದಿಲ್ಲ. ಇಂಜಿನಿಯರ್‌ಗಳಾದ ನಮಗೇ ಕೆಲಸ ಸಿಗುತ್ತಿಲ್ಲ. ನಿಮಗೆ ಯಾವ ರೀತಿ ಕೆಲಸ ಸಿಗುತ್ತದೆ ಎಂದು ಕೆಲವು ಇಂಜಿನಿಯರ್‌ಗಳು ಕಪ್ಲೈಂಟ್ ಸಹ ಮಾಡಿದ್ದಾರೆ. ಮುಖ್ಯವಾಗಿ ಕೆಲಸದಲ್ಲಿ ಶ್ರದ್ಧೆ ಇರಬೇಕೆಂದು ನನ್ನ ಅಭಿಪ್ರಾಯ. ಆದ್ದರಿಂದ ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ, ಸರ್ಕಾರದವರು ಉತ್ತಮವಾದ ತಳಿಗಳನ್ನು ಬೆಳೆಸುವ ಬಗ್ಗೆ ಮತ್ತು ಅದಕ್ಕೆ ಪ್ರೋತ್ಸಾಹ ಕೊಡುವುದರ ಬಗ್ಗೆ ನನ್ನ ಅಡ್ಡಿಯೇನೂ ಇಲ್ಲ. ಆದರೆ ನನ್ನ ಮುಖ್ಯವಾದ ಅಡ್ಡಿ ಏನೆಂದರೆ, ಯಾರಾದರು ಖಾಸಗಿಯಾಗಿ ಸರಿಯಾದ ರೀತಿಯಲ್ಲಿ ತಳಿಗಳನ್ನು ಬೆಳೆಸುವುದಕ್ಕೆ ಹೊರಟಿದ್ದರೆ ಅದಕ್ಕೆ ಅಡ್ಡಿ ಮಾಡುವುದು ಸರಿಯಲ್ಲ ಎಂಬುದು. ಉತ್ತಮವಾದಂಥ ಬೀಜಗಳನ್ನು ಉತ್ಪತ್ತಿ ಮಾಡುವುದಕ್ಕೆ ಖಾಸಗಿಯವರಿಗೂ ಅನುಕೂಲ ಮಾಡಿಕೊಡಬೇಕು ಜೊತೆಗೆ ಸರ್ಕಾರದವರು ಸಹ ಉತ್ಪತ್ತಿ ಮಾಡಬೇಕೆಂಬುದೇ ನನ್ನ ಸಲಹೆಯಾಗಿದೆ.

ಮುಂದೆ ಪಾಲಿನೇಷನ್ ಆಗುವಾಗ, ಉತ್ಪಾದನೆಗೆ ಬರತಕ್ಕ ಬೀಜದ ಪ್ರೋಲರೈಸೇಷನ್ ಆದರೆ ಅದರಲ್ಲಿ ಯೀಲ್ಡ್ ಕಡಿಮೆಯಾಗುವ ಸಂಭವವಿರುತ್ತದೆ. ಪ್ರೋಲರೈಸೇಷನ್ ತಪ್ಪಿಸಬೇಕಾದರೆ ನಿರ್ಬಂಧ ಹಾಕಬೇಕಾದ್ದು ಬಹಳ ಮುಖ್ಯವಾದುದು. ಇಲಾಖೆಯ ಅಧಿಕಾರಿಗಳು ಕಡ್ಡಾಯವಾಗಿ ಇದರ ಬಗ್ಗೆ ಗಮನ ಕೊಟ್ಟು ಯಾರ ಒತ್ತಡಕ್ಕೂ ಒಳಗಾಗದೆ ಆ ನಿಯಮಗಳನ್ನು ಪರಿಪಾಲಿಸಿದರೆ ಉತ್ತಮವಾದ ಕೆಲಸವಾಗುತ್ತದೆ. ನಾಲ್ಕೈದು ವರ್ಷಗಳ ಹಿಂದೆ ಅನೇಕ ಜನ ರೈತರಿಗೆ ಹೈ ಯೀಲ್ಡಿಂಗ್ ವೆರೈಟಿ ಜೋಳವನ್ನು ಬಿತ್ತನೆ ಬೀಜ ಬೆಳೆಸುವುದಕ್ಕೆ ಕೊಟ್ಟರು. ಹಾಗೆ ಬಿತ್ತನೆ ಬೀಜವನ್ನು ಬೆಳೆದಾಗ ಸುಮಾರು ೧೫೦ ಗಜ ಫಾಸಲೆಯಲ್ಲಿ ಬೇರೆ ತರಹ ಲೋಕಲ್ ಜೋಳವನ್ನು ಬೆಳೆಯಬಾರದು ಎಂದು ಇದೆ. ಅಂಥ ಸಂದರ್ಭದಲ್ಲಿ ಅನೇಕ ಜನ ರೈತರು ಈ ನಿಯಮಿತವಾದ ಫಾಸಲೆಯೊಳಗೇ ಲೋಕಲ್ ವೆರೈಟಿ ಜೋಳವನ್ನು ಹಾಕಿ, ಹೈ ಯೀಲ್ಡಿಂಗ್ ವೆರೈಟಿ ಹಾಕಿರತಕ್ಕವರ ಹತ್ತಿರ ಹೋಗಿ ಜಾಸ್ತಿ ದುಡ್ಡು ಡಿಮಾಂಡ್ ಮಾಡಿ ಅಷ್ಟು ದುಡ್ಡು ಕೊಟ್ಟರೆ ಲೋಕಲ್ ವೆರೈಟಿ ತೆಗೆಯುತ್ತೇನೆ ಇಲ್ಲವಾದರೆ ಇಲ್ಲ ಎಂದು ದುಡ್ಡು ವಸೂಲ ಮಾಡಿರತಕ್ಕ ಅನೇಕ ನಿದರ್ಶನಗಳಿವೆ. ಎಷ್ಟೋ ಸಂದರ್ಭಗಳಲ್ಲಿ ಹೈ ಯೀಲ್ಡಿಂಗ್ ವೆರೈಟಿ ಹಾಕಿರತಕ್ಕ ರೈತ ಅಜೂಬಾಜು ಇರತಕ್ಕ ರೈತರಿಗೆ ದುಡ್ಡು ಕೊಡದೆ ಹೋಗಿ, ಲೋಕಲ್ ವೆರೈಟಿ ಜೋಳ ಪಕ್ಕದಲ್ಲಿ ಬಿತ್ತನೆಯಾಗಿದ್ದ ಕಾರಣದಿಂದ ಹೈ ಯೀಲ್ಡಿಂಗ್ ವೆರೈಟಿ ಬೀಜವನ್ನು ರಿಜೆಕ್ಟ್ ಮಾಡಿರುವ ನಿದರ್ಶನಗಳೂ ಇವೆ. ಆದ್ದರಿಂದ ಕೆಲವು ನಿರ್ಬಂಧಗಳನ್ನು ಹಾಕಿರುವುದು ಒಳ್ಳೆಯದು. ಆದರೆ ಅಧಿಕಾರಿಗಳು ಯಾವ ವಿಧವಾದ ಒತ್ತಡಕ್ಕೂ ಒಳಗಾಗದೆ ಅದನ್ನು ಪರಿಪಾಲಿಸಿಕೊಂಡು ಬರಬೇಕು. ಮತ್ತು ಯಾರು

ಈ ನಿರ್ಬಂಧಗಳನ್ನು ಉಲ್ಲಂಘನೆ ಮಾಡುತ್ತಾರೆಯೋ ಅವರಿಗೆ ಇದರಲ್ಲಿ ಸೂಚಿತ ವಾಗಿರುವಂತೆ ಶಿಕ್ಷೆಗೆ ಗುರಿಪಡಿಸಬೇಕು.

ಹಾರ್ಟಿಕಲ್ಚರಲ್ ಇಲಾಖೆ ಸೀಡ್ ಫಾರಂಗಳನ್ನು ಮಾಡಬೇಕು ಎನ್ನುವುದರ ಬಗ್ಗೆ ಒಂದು ವಿಚಾರವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ರಾಜ್ಯದಲ್ಲಿ ಆಲೂ ಗಡ್ಡೆ ೫೦ ಸಹಸ್ರ ಎಕರೆಯಲ್ಲಿ ಬೆಳೆಯಾಗುತ್ತಿದೆ. ಆದರೆ ನೇಕಡ ೧೦ರಷ್ಟು ಕೂಡ ಒಳ್ಳೆಯ ಬಿತ್ತನೆ ಬೀಜ ಸಿಕ್ಕುತ್ತಿಲ್ಲ. ಎಷ್ಟೋ ಸಂದರ್ಭಗಳಲ್ಲಿ ಸೀಡ್ ಬೋರನ್ ಡಿಸೀಸ್ ಇದ್ದು ಅಂಥ ಬೀಜದಿಂದ ರೈತನು ಹಾಳಾಗಿರತಕ್ಕ ಉದಾಹರಣೆಗಳು ಬೇಕಾದಷ್ಟಿವೆ. ಆ ದೃಷ್ಟಿಯಿಂದ ಸೀಡ್ ಫಾರಂಗಳನ್ನು ಹೆಚ್ಚು ಸಂಖ್ಯೆಯಲ್ಲಿ ಮಾಡಬೇಕು ಎನ್ನುವ ಯಾವ ಸದುದ್ದೇಶದಿಂದ ಈ ಮಸೂದೆಯನ್ನು ಸರ್ಕಾರ ತಂದಿದೆಯೋ, ಮತ್ತು ಅದರಲ್ಲಿ ಯಾವ ಯಾವ ನಿಬಂಧನೆಗಳನ್ನು ಹಾಕಿದೆಯೋ ಅವುಗಳನ್ನು ಅಧಿಕಾರಿಗಳು ಕಡ್ಡಾಯವಾಗಿ ಪಾಲಿಸುವಂತೆ ಆಗಬೇಕು.

ಹಾಸನ ತಾಲ್ಲೂಕು ಸೋಮನಹಳ್ಳಿಯಲ್ಲಿ ಸರ್ಕಾರದ ಒಂದು ಆಲೂಗಡ್ಡೆಯ ಸೀಡ್ ಫಾರಂ ಇದ್ದು ಅದಕ್ಕೆ ಲಕ್ಷಾಂತರ ರೂಪಾಯಿ ಸರ್ಕಾರ ಇನ್‌ವೆಸ್ಟ್ ಮಾಡಿದೆ ಆದರೆ ನನಗೆ ತಿಳಿದು ಬಂದಿರುವ ಪ್ರಕಾರ ಯಾವ ಘನ ಉದ್ದೇಶದಿಂದ ಸರ್ಕಾರದವರು ಆ ಸೀಡ್ ಫಾರಂ ಮಾಡಿದ್ದಾರೆಯೋ ಆ ಉದ್ದೇಶ ಈಡೇರದೆ ಅದರಿಂದ ಪ್ರಯೋಜನ ಸರ್ಕಾರಕ್ಕೆ ಆಗಲೀ ದೇಶದ ರೈತರಿಗಾಗಲೀ ದೊರೆಯುತ್ತಿಲ್ಲ. ಇದು ಮಾನ್ಯ ಸಚಿವರಿಗೂ ಗೊತ್ತಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಅನೇಕ ರೈತರು ದೂರು ಕೊಟ್ಟಿದ್ದರೂ ಕೂಡ ಮಾನ್ಯ ಸಚಿವರು ಅತ್ತಕಡೆ ಗಮನ ಹರಿಸಿಲ್ಲ. ಅಲ್ಲಿ ಒಬ್ಬ ಅಧಿಕಾರಿ ಇದ್ದಾನೆ. ಒಬ್ಬ ಸ್ಪ್ರೇ ಅಟೆಂಡರ್ ಆಗಿ ಸೇರಿಕೊಂಡಿದ್ದು ಈಗ ದೊಡ್ಡ ಅಧಿಕಾರಿಯಾಗಿದ್ದಾನೆ. ಆತ ಹಗಲು ದರೋಡೆ ಮಾಡುತ್ತಿದ್ದು ದುರ್ವ್ಯವಹಾರ ನಡೆಯುತ್ತಿದೆ. ರೈತನಿಗೆ ಸರಿಯಾದ ಬೀಜ ದೊರೆಯುತ್ತಿಲ್ಲ. ಮೂರು ನಾಲ್ಕು ತಿಂಗಳ ಹಿಂದೆ ಆತನಿಗೆ ಬೇರೆ ಕಡೆಗೆ ವರ್ಗವಾಗಿತ್ತು ಆತ ಪುನಃ ಅಲ್ಲಿಗೇ ರಾಜಕೀಯ ಒತ್ತಡವನ್ನು ಉಪಯೋಗಮಾಡಿ ಬಂದಿದ್ದಾನೆ. ಇಂಥ ಅಧಿಕಾರಿ ಗಳನ್ನು ಬೇರೆ ಎಲ್ಲಿಯಾದರೂ ಹಾಕಿ, ನಿಸ್ಪೃಹರಾಗಿರತಕ್ಕ, ರೈತರ ಬಗ್ಗೆ ಅನುಕಂಪ ವಿರತಕ್ಕ, ಕೈಬಾಯಿ ಶುದ್ಧವಾಗಿರತಕ್ಕ ಅಧಿಕಾರಿಗಳನ್ನು ಅಂಥ ಸೀಡ್ ಫಾರಂಗಳಿಗೆ ಹಾಕದೆ ಹೋದರೆ ಯಾವ ಉದ್ದೇಶದಿಂದ ಈ ಮಸೂದೆಯನ್ನು ತಂದಿದ್ದಾರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ, ದುಡ್ಡು ಮಾತ್ರ ವ್ಯಯವಾಗುತ್ತದೆ.

ಚಿಕ್ಕಬಳ್ಳಾಪುರ ಭಾಗದಲ್ಲಿ ಕೆಲವರು ಬಿತ್ತನೆ ಬೀಜವನ್ನು ಬೆಳೆಯುತ್ತಾರೆ ಮತ್ತು ಸರ್ಕಾರಕ್ಕೆ ಕೊಡುತ್ತಿದ್ದಾರೆ. ಅವರಿಗೆ ಎಷ್ಟು ಖರ್ಚು ಬೀಳುತ್ತದೆ ಮತ್ತು ಸರ್ಕಾರದ ಸೀಡ್ ಫಾರಂನಲ್ಲಿ ಅನೇಕ ಜನ ಅಧಿಕಾರಿಗಳನ್ನು ಇಟ್ಟುಕೊಂಡು ಬೀಜ ವನ್ನು ತಯಾರು ಮಾಡುತ್ತಿರುವ ಕಡೆ ಎಷ್ಟು ಖರ್ಚು ಬೀಳುತ್ತದೆ? ಸರ್ಕಾರದ ಸೀಡ್ ಫಾರಂನಲ್ಲಿ ಅವ್ಯವಸ್ಥೆಯಾಗಿ ಸಾವಿರಾರು ಜನ ಹಾಳಾಗಿರುತ್ತಾರೆ. ಜನ

ತಮ್ಮ ಬೆವರು ಸುರಿಸಿ ಕಷ್ಟಪಟ್ಟು ದುಡಿದು ಕೊಡುವ ದುಡ್ಡನ್ನು ಈ ರೀತಿ ವ್ಯಯ ಮಾಡಬಾರದು. ಬೇಕಾದವರಿಗೆಲ್ಲ ದೊಡ್ಡ ಹುದ್ದೆಗಳನ್ನು ಕೊಡುವುದಕ್ಕೆ ಹೋಗ ಬಾರದು.

ವರ್ಷಕ್ಕೆ ಇಷ್ಟು ಖರ್ಚು ಮಾಡುತ್ತಿರುವಾಗ ಅಲ್ಲಿ ಉತ್ಪತ್ತಿಯಾದ ಬೀಜವೆಷ್ಟು ಮತ್ತು ಅದರ ಬೆಲೆ ಎಷ್ಟು, ಬೇರೆ ಕಡೆ ಬೆಳೆದಿರುವುದರ ಬೆಲೆ ಎಷ್ಟು ಎನ್ನುವುದನ್ನು ಒಂದಕ್ಕೊಂದನ್ನು ಹೋಲಿಸಿ ನೋಡಬೇಕು. ಅನೇಕ ವಿಧವಾದ ಅವ್ಯವಹಾರಗಳು ಹಾಸನ ತಾಲ್ಲೂಕಿನಲ್ಲಿರುವ ಆಲೂಗಡ್ಡೆ ಸೀಡ್ ಫಾರಂನಲ್ಲಿ ನಡೆದಿವೆ ಮತ್ತು ಹಣ ದುರ್ವ್ಯಯವಾಗಿದೆ. ಆದ್ದರಿಂದ ಸೀಡ್ ಫಾರಂಗಳನ್ನು ಮಾಡುವಾಗ, ಅವು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಬೇಕಾದರೆ ದಕ್ಷರಾದ ಮತ್ತು ನಿಸ್ಪೃಹರಾದ, ಜನಗಳಬಗ್ಗೆ ಅನುಕಂಪವಿಟ್ಟುಕೊಂಡು ದೇಶದಜನ ಕೊಟ್ಟ ದುಡ್ಡಿನಲ್ಲಿ ಸಂಬಳ ತೆಗೆದುಕೊಳ್ಳುವುದ ರಿಂದ ತಮ್ಮ ಸೇವೆ ಅವರಿಗೆ ದೊರೆಯಬೇಕು ಎನ್ನುವ ದೃಷ್ಟಿಯಿಂದ ಇರತಕ್ಕ ಮೇಧಾವಿಗಳನ್ನು ಹಾಕಬೇಕು. ಈಗ ಹಾಸನದಲ್ಲಿರುವಂಥ ಅಧಿಕಾರಿಗಳನ್ನು ಹಾಕಿ ಜನರ ಶಾಪಕ್ಕೆ ಮಾನ್ಯಮಂತ್ರಿಗಳು ಗುರಿಯಾಗಬಾರದು ಎಂದು ಹೇಳುತ್ತೇನೆ.

ಪೋಲರೈಸೇಷನ್ ಸಂಬಂಧದಲ್ಲಿ ಏನಾದರೂ ತಪ್ಪು ಆಗಿದ್ದರೆ ಅಂಥವರಮೇಲೆ ಕ್ರಮ ತೆಗೆದುಕೊಂಡು ಶಿಕ್ಷೆಗೆ ಗುರಿಪಡಿಸುವುದಕ್ಕೆ ಮಸೂದೆಯಲ್ಲಿ ಅವಕಾಶವಿದೆ. ಆದರೆ ಇಲಾಖೆಯ ಮೂಲಕ ತಯಾರು ಮಾಡಿ ಕೊಡುವ ಬೀಜದಲ್ಲಿ ಏನಾದರೂ ದೋಷಗಳಿದ್ದರೆ ಸಂಬಂಧಪಟ್ಟ ಅಧಿಕಾರಿಯಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಇದರಲ್ಲಿ ಏನೂ ಅಳವಡಿಸಿಲ್ಲ. ಖಚಿತವಾಗಿ ಯಾರೇ ತಪ್ಪು ಮಾಡಲಿ, ಯಾವ ಅಧಿಕಾರಿಯ ಕಾಲದಲ್ಲಿ ಅಂಥ ಕೆಟ್ಟ ಬೀಜ ಉತ್ಪಾದನೆಯಾಯಿತೋ ಅಂಥವರಮೇಲೆ ರೈತರಿಂದ ದೂರುಗಳು ಬಂದಾಗ ಸೂಕ್ತವಾದ ಕ್ರಮ ತೆಗೆದುಕೊಂಡು ಶಿಕ್ಷೆಗೆ ಒಳಪಡಿಸತಕ್ಕ ಕಾರ್ಯಕ್ರಮವನ್ನು ದಿಟ್ಟತನದಿಂದ ತೆಗೆದುಕೊಳ್ಳಬೇಕು. ಯಾವದೇ ರಾಜಕೀಯ ಒತ್ತಡಕ್ಕೂ ಮಣಿಯಬಾರದು. ಒಂದು ಸಲ ಆರ್ಡರ ಮಾಡಿದಮೇಲೆ ಪುನಃ ಅದನ್ನು ಯಾವುದೇ ಕಾರಣದಮೇಲೆ ಬದಲಾವಣೆ ಮಾಡಬಾರದು. ಸೀಡ್ ಫಾರಂ ಉತ್ತಮವಾಗಿ ಕೆಲಸಮಾಡಿ ಅದರಿಂದ ರೈತರಿಗೆ ಉತ್ತಮ ಬೀಜ ದೊರೆಯ ಬೇಕು ಎನ್ನುವುದು ಸರ್ಕಾರದ ಗಮನದಲ್ಲಿ ಇರಬೇಕು.

ಅನೇಕ ಜನ ರೈತರು ತೆಂಗು ಮತ್ತು ಮಾವು ಸಸಿಗಳನ್ನು ತಯಾರುಮಾಡಿ ಹಂಚಿಕೆ ಮಾಡುತ್ತಿದ್ದಾರೆ. ಅವರು ಆ ರೀತಿ ಮಾಡಕೂಡದು ಎನ್ನುವ ಪ್ರತಿಬಂಧಕ ಈ ಮಸೂದೆಯಲ್ಲಿ ಇದ್ದಹಾಗೆ ಕಾಣುವುದಿಲ್ಲ. ಯಾವ ಒಂದು ಏರಿಯಾ ಎಂದು ಒಳಪಡಿಸಿರುತ್ತಾರೆ ಅಷ್ಟರೊಳಗೆ ಮಾತ್ರ ಮಾಡಬಾರದು ಉಳಿದಕಡೆ ಮಾಡಬಹುದು ಎಂದು ಕಾಣುತ್ತದೆ. ಒಳ್ಳೆಯ ಬೀಜವನ್ನು ರೈತ ಕೊಟ್ಟರೆ ಅದು ಸ್ವಾಗತಾರ್ಹ. ಎಷ್ಟೋ ಸಂದರ್ಭಗಳಲ್ಲಿ ನೂರಕ್ಕೆ ನೂರೂ ಒಳ್ಳೆಯ ಬೀಜವಿರುವುದಿಲ್ಲ. ಕೆಟ್ಟ ಬೀಜವನ್ನೂ ಬೆರೆಯುವರು ಕೊಡುತ್ತಾರೆ. ಅಂಥ ಸಂದರ್ಭಗಳಲ್ಲಿ ಕ್ರಮ ತೆಗೆದು ಕೊಳ್ಳಲು ಸೀಡ್‌ಆಕ್ಟ್ ಜಾರಿಯಲ್ಲಿದೆ ಎಂದು ತಿಳಿಯುತ್ತೇನೆ. ದೋಷಪೂರಿತವಾದ

ಬೀಜಗಳನ್ನು ಕೊಡುವಂಥ ರೈತರಮೇಲೆ ಕೂಡ ಕ್ರಮ ತೆಗೆದುಕೊಳ್ಳುವುದಕ್ಕೆ ಒಂದು ವ್ಯವಸ್ಥೆ ಇರಬೇಕು ಎಂದು ನಾನು ಹೇಳುತ್ತೇನೆ.

ಸೆಕ್ಷನ್ 4ರಲ್ಲಿ

"Prohibition of cultivation of crop plants.—(1) No person shall in a controlled area cultivate any kind of crop plant, the cultivation of which has been prohibited in such area under section 3."

ಎಂದು ಹೇಳಿದೆ. ಈ ಕ್ಲಾಸನ್ನು ಇಟ್ಟುಕೊಂಡು ಕೆಲವು ಸಂದರ್ಭಗಳಲ್ಲಿ ಕಿರುಕುಳ ಕೊಡಬಹುದು. ಉತ್ತಮವಾದ ತಳಿಗಳನ್ನು ಉತ್ಪಾದನೆ ಮಾಡುವುದಕ್ಕೆ ನಾವು ಅಡ್ಡಿ ತರುವುದಿಲ್ಲವೆಂದು ಮಾನ್ಯ ಚನ್ನಬಸಪ್ಪನವರು ಸ್ಪಷ್ಟವಾಗಿ ನಮಗೆ ಆಶ್ವಾಸನೆ ಕೊಟ್ಟರು. ಅದೇ ರೀತಿಯ ಆಶ್ವಾಸನೆ ತಮ್ಮ ಬಾಯಿಯಲ್ಲಿಯೂ ಬರಲಿ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಸೆಕ್ಷನ್ ೧೧ ರಲ್ಲಿ "Special Provision in respect of Elite Coconut Seed Farm at Kannamangala."

ಎಂದು ಇದೆ. ಕೆಲವು ಸಂದರ್ಭದಲ್ಲಿ ಉತ್ತಮವಾದ ಜಾಗಗಳಲ್ಲಿ ಉತ್ತಮವಾದ ತೆಂಗಿನ ಸಸಿಗಳು ಬರುತ್ತವೆ. ಆದರೆ ಅನೇಕ ಸಂದರ್ಭಗಳಲ್ಲಿ ಏನಾಗುತ್ತದೆಂದರೆ, ರೈತರು ಸರಿಯಾದಂಥ ಸಸಿಗಳನ್ನು ಹಾಕದೆ ನಷ್ಟಕ್ಕೆ ಒಳಗಾಗುತ್ತಾರೆ. ಇದಕ್ಕೆ ಕಾರಣ ಅವರಿಗೆ ಸರಿಯಾದ ಸಸಿಗಳು ದೊರೆಯದೇ ಇರುವುದು. ರೈತರು ಇಂದು ಉತ್ಸಾಹಶಾಲಿಗಳಾಗಿರುವುದರಿಂದ ಅವರಿಗೆ ಒಳ್ಳೆಯ ಸಶಿಗಳನ್ನು ಒದಗಿಸುವುದು ಸರ್ಕಾರದ ಕರ್ತವ್ಯವಾಗಿದೆ ಮಾನ್ಯ ಸಿದ್ದಪ್ಪನವರು ಹೇಳಿದಂತೆ, ಸರಿಯಾದ ಶಿಸ್ತು, ನಿಯಮಗಳನ್ನು ಅನುಸರಿಸುವಂತಹ ಅಧಿಕಾರಿಗಳನ್ನು ತಾವು ತಯಾರು ಮಾಡಬೇಕು. ಒಳ್ಳೆಯ ಬೀಜಗಳನ್ನು ಉತ್ಪಾದನೆ ಮಾಡತಕ್ಕಂಥ ಅಧಿಕಾರಿಗಳನ್ನು ತಯಾರು ಮಾಡಬೇಕು. ಅನಂತರ ಇದನ್ನು ಜಾರಿಗೆ ತರಬೇಕು. ಈ ಬಿಲ್ಲಿನ ಉದ್ದೇಶದ ಬಗ್ಗೆ ನನ್ನ ವಿರೋಧವಿಲ್ಲ. ಆದರೆ ಖಾಸಗಿಯಾಗಿ ಯಾರು ಉತ್ತಮವಾದಂಥ ಕೆಲಸ ಮಾಡುತ್ತಿದ್ದಾರೋ ಅಂತಹವರ ಕೆಲಸಕ್ಕೆ ಮೊಟಕು ಮಾಡಬೇಡಿ ಎಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಚ್. ಹನುಮೇಗೌಡ (ಹಾಸನ) — ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ತಂದಿರತಕ್ಕ ಮೈಸೂರು ಸೀಡ್ ಫಾರಮ್ಸ್ ಬಿಲ್ ಏನಿದೆ, ಇದನ್ನು ಅವರು ಯಾವ ಉದ್ದೇಶದಿಂದ ತಂದಿದ್ದಾರೋ ಆ ಉದ್ದೇಶ ಸಫಲವಾಗುವುದಾಗರೆ ಈ ಬಿಲ್‌ನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತ ಮಾಡುತ್ತೇನೆ. ಕಾರಣ ಇಷ್ಟೆ; ಸರಿಯಾದ ಉತ್ಪತ್ತಿ ಬರತಕ್ಕಂಥ ಒಳ್ಳೆಯ ಬೀಜ ರೈತನಿಗೆ ಹಂಚಿಕೆಯಾಗದೆ ಅನೇಕ ಜನ ರೈತರು ಬೆಳೆಯನ್ನು ಕಳೆದುಕೊಂಡು ಅನೇಕ ವಿಧವಾದ ತೊಂದರೆಗೀಡಾಗಿದ್ದಾರೆ.

ಮುಖ್ಯವಾಗಿ ಒಳ್ಳೆಯ ಉತ್ಪಾದನೆ ಬರತಕ್ಕಂಥ ಮತ್ತು ಒಳ್ಳೆಯ ಗುಣ ಇರುವಂತಹ ಬೀಜಗಳನ್ನು ಒದಗಿಸಬೇಕು. ಮತ್ತು ರೋಗ ಇಲ್ಲದಿರತಕ್ಕಂಥ ಉತ್ತಮವಾದ ತಳಿ ಬೀಜಗಳನ್ನು ಉತ್ಪಾದನೆಮಾಡಿ ರೈತರಿಗೆ ಒದಗಿಸುವುದು ಬಹು ಪ್ರಾಮುಖ್ಯವಾದ ವಿಚಾರ. ಈ ಬಿಲ್‌ನಲ್ಲಿ ಅಡಕವಾಗಿರತಕ್ಕಂಥ ಅನೇಕ ನಿಬಂಧನೆಗಳು ಸ್ವಾಗತಾರ್ಹವಾಗಿವೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದಂತೆ ಒಳ್ಳೆಯ ಬೀಜಗಳನ್ನು ಉತ್ಪಾದನೆಮಾಡಿ ರೈತರಿಗೆ ಕೊಡಬೇಕಾದರೆ ಕೆಲವೊಂದು ನಿರ್ಬಂಧ ಹಾಕಬೇಕಾದುದು ಮುಖ್ಯವಾದ ವಿಚಾರ.

ಇನ್ನೊಂದು ವಿಚಾರ. ಈ ಸೀಡ್ಸ್‌ಗಳಿಂದ ಆಲುಗಡ್ಡೆ ಆಗಲೀ ಅಥವಾ ಬೇರೆ ಸೀಡ್ಸ್‌ಗಳನ್ನು ಉತ್ಪಾದನೆ ಮಾಡುವಾಗ ಬಹಳ ಜನ ರೈತರ ದೂರು ಏನೆಂದರೆ ಜಾಸ್ತಿ ಕೆಮಿಕಲ್ ಮೆನ್ಯೂರ್ ಹಾಕಿ ಬೆಳೆದು ಬಿಡುತ್ತೇವೆ. ಸೀಡ್ಸ್ ರೈತರಿಗೆ ಕೊಡುವಾಗ ನಿರೀಕ್ಷಿಸಿದ ಮಟ್ಟದಲ್ಲಿ ಬೆಳೆ ಕೊಡುವುದಿಲ್ಲ ಎಂಬ ದೂರು ಹೇಳುತ್ತಾರೆ. ಇಂಥ ಕೆಮಿಕಲ್ ಮ್ಯೆನ್ಯೂರ್ಸ್ ಪ್ರಾಹಿಬಿಟ್ ಮಾಡಬೇಕು.

ಉಪಾಧ್ಯಕ್ಷರು.— ಫರ್ಟಿಲೈಜರ್ಸ್ ಕೆಮಿಕಲ್ ಮ್ಯೆನ್ಯೂರ್ಸ್ ಇದರಲ್ಲಿ ಬರುವುದಿಲ್ಲ.

ಶ್ರೀ ಕೆ. ಎಚ್. ಹನುಮೇಗೌಡ.— ಒಳ್ಳೆಯ ಬೀಜ ಉತ್ಪಾದನೆ ಮಾಡುವಾಗ ಬಹಳ ಮುಖ್ಯವಾಗಿ ದೋಷರಹಿತವಾದ ಬೀಜಕೊಡಿ, ಒಳ್ಳೆಯ ಬೀಜ ಉತ್ಪಾದನೆ ಮಾಡುವಾಗ ಇದು ಬಹಳ ಮುಖ್ಯ ಎಂದು ಅನ್ನಿಸುತ್ತದೆ. ಈ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಕೊನೆಯದಾಗಿ ಒಂದು ಮಾತು ಮಾನ್ಯ ಸಚಿವರನ್ನು ವಿನಯದಿಂದ ಭಿನ್ನವಿಸಿಕೊಳ್ಳುತ್ತೇನೆ. ಸೀಡ್ ಆಕ್ಟ್ ತಂದಿದ್ದೀರಿ, ಬಹಳ ಒಳ್ಳೆಯ ಉದ್ದೇಶ ಇದರಲ್ಲಿದೆ, ಇದರ ಉದ್ದೇಶ ಕಾರ್ಯಗತ ಮಾಡಿದರೆ ರೈತರಿಗೆ ಅನುಕೂಲವಾಗುತ್ತದೆ. ಯಾವ ವಿಧವಾದ ದಾಕ್ಷಿಣ್ಯಕ್ಕೆ ಮಣಿಯದೇ ಸೀಡ್‌ಫಾರಂ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಬೇಕು, ಒಳ್ಳೆಯಬೀಜ ರೈತರಿಗೆ ವಿತರಣೆ ಮಾಡಬೇಕು. ಈ ಬಗ್ಗೆ ತಪ್ಪಿತಸ್ಥರು ರೈತರು ಆಗಿರಬಹುದು, ಅಧಿಕಾರಿಗಳು ಆಗಿರಬಹುದು, ಯಾರೇ ಆಗಿರಲಿ ಅವರ ಮೇಲೆ ದಯಾದಾಕ್ಷಿಣ್ಯವಿಲ್ಲದೆ ಕ್ರಮ ಕೈಕೊಳ್ಳಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಸ್. ವೈ. ಪಾಟೀಲ (ಸಿಂದ್ಗಿ).—ಸಭಾಧ್ಯಕ್ಷರೇ, ಸೀಡ್ ಫಾರ್ಮ್ಸ್ ಬಿಲ್ಲು ಅತ್ಯಂತ ಸ್ವಾಗತಾರ್ಹವಾಗಿದೆ. ಅದರ ಪರಿಣಾಮ ಏನು ಆಗುತ್ತದೆ ಎನ್ನುವುದರ ವಿಷಯ ನಮ್ಮ ಮುಂದಿನ ಬಡ್ಜೆಟ್ ಕಾಲಕ್ಕೆ ಮಾತನಾಡಬೇಕಾಗುತ್ತದೆ. ತಾವು ಮೆಜಾರಿಟಿ ಪಾರ್ಟಿ ಗೌವರ್ನ್ಮೆಂಟ ಇರುವುದರಿಂದ ಮುಂದೆ ರೂಲ್ಸ ಏನು ಫ್ರೇಂ ಮಾಡುತ್ತೀರಿ ಆ ರೂಲ್ಸ ಪಾಸ ಆಗುತ್ತದೆ. ತಾವು ಮೆಜಾರಿಟಿ ಇರುವುದರಿಂದ, ನೀವೇ ಬ್ರಹ್ಮ, ವಿಷ್ಣು, ಮಹೇಶ್ವರರು ಎಲ್ಲವೂ ಆಗಿರುತ್ತೀರಿ. ಸರ್ಕಾರದ ಮೇಲೆ ವಿಶ್ವಾಸವಿಟ್ಟು ಚೊಲೋದು ಮಾಡುತ್ತಾರೆಂಬ ದೃಷ್ಟಿಯಿಂದ ಪಾಸ್ ಮಾಡಲಿಕ್ಕೆ

ಅನುಮತಿಯನ್ನು ಕೊಡುತ್ತೇನೆ. ಒಂದು ಮಾತನ್ನು ನಮ್ರತೆಯಿಂದ ಸೂಚನೆ ಮಾಡುತ್ತೇನೆ. ಸರ್ಕಾರದ ಫಾರಂನಲ್ಲಿ ಏನು ದೋಷವಿದೆ ಖಾಸಗಿ ಜನರಲ್ಲಿ ಏನು ದೋಷವಿದೆ ಎನ್ನುವ ಬಗ್ಗೆ ಎರಡು ಮಾತುಗಳನ್ನು ಹೇಳುತ್ತೇನೆ. ಖಾಸಗಿ ಜನರಿಗೆ ಸೈನ್ಸ ಪ್ರಜ್ಞೆ ಇರುವುದಿಲ್ಲ. ಮಾನ್ಯ ಸಿದ್ದಪ್ಪನವರು ಹೇಳಿದಹಾಗೆ ಸರ್ಕಾರದಲ್ಲಿ ಹಣ ಇರುವುದರಿಂದ, ಅವರಿಗೆ ಸ್ವಂತ ಆಸಕ್ತಿ ಇರುವುದಿಲ್ಲ. ಮಾರೇ ಗೌಡರು ರಿಟೈರ್ ಆದರೆ ಅಂಥ ಜನರ ಸೇವೆ ರೈತರಿಗೆ ಸಿಗುವಂತೆ ಮಾಡಬೇಕು. ಖಾಸಗಿ ಜನರಿಗೆ ಸಬ್ಸಿಡಿ ಕೊಟ್ಟು ಲೋನ್ ಕೊಟ್ಟು ಪ್ರೋತ್ಸಾಹ ಮಾಡಿದರೆ ಸರ್ಕಾರ ತಪ್ಪು ಮಾಡಿದೆ ಎನ್ನುವ ಬಗ್ಗೆ ಟೀಕೆಗೆ ಒಳಗಾಗುವುದಿಲ್ಲ. ಮಂಜುನಾಥ ಮತ್ತಿತರ ಕೆಲವು ಸ್ನೇಹಿತರು ಹೇಳಿದಂತೆ ಸತ್ಯಾಂಶ ಒಂದು ವ್ಯಕ್ತಿಗೆ ಜೀವನದಲ್ಲಿ ತಪ್ಪು ಮಾಡಿದರೆ ಸಮಾಜದಲ್ಲಿ ಆತನ ಮೇಲೆ ದೋಷಾರೋಪಣೆ ಮಾಡುತ್ತಾರೆ. ಅಧಿಕಾರಿಗಳ ಮೇಲೆ ಬರುವುದಿಲ್ಲ.

ಖಾಸಗೀ ಜನರು ಯಾರಾದರೂ ಡಿಗ್ರಿ ತೆಗೆದುಕೊಂಡವರು, ಬೀಜ ಉತ್ಪಾದನೆ ಮಾಡುವುದಕ್ಕೆ ಸಾಲದ ರೂಪದಲ್ಲಿ ಅಥವಾ ಸಬ್ಸಿಡಿ ರೂಪದಲ್ಲಿ ಸರ್ಕಾರ ಅವರಿಗೆ ಪ್ರೋತ್ಸಾಹ ಕೊಡಬೇಕು. ಸರ್ಕಾರ ಈ ಸೀಡ್ ಫಾರಂನಲ್ಲಿ ಹೆಚ್ಚು ಹಣವನ್ನು ಖರ್ಚು ಮಾಡುವುದಕ್ಕಿಂತ ಖಾಸಗಿ ಜನರಿಗೆ ಪ್ರೋತ್ಸಾಹ ಕೊಟ್ಟರೆ ಅದರಿಂದ ಲಾಭವಾಗುತ್ತದೆ ಎನ್ನುವ ದೃಷ್ಟಿಯಿಂದ ವಿಚಾರ ಮಾಡಬೇಕು. ಯಾರಾದರೂ ಇಂಥ ಸೀಡ್ ಫಾರಂ ತೆಗೆಯುತ್ತೇವೆಂದು ಮುಂದೆ ಬಂದರೆ ಅವರಿಗೆ ಸರ್ಕಾರ ಹಣ ಸಹಾಯ ಮಾಡಿದರೆ ಅವರು ಮುಂದೆ ಬರುತ್ತಾರೆ. ಮಾನ್ಯ ಶ್ರೀ ಭಂಗಿಯವರು ಸಲಹೆ ಮಾಡಿದರು ಹಾರ್ಟಿಕಲ್ಚರಲ ಸೀಡ್‌ಫಾರಂ ಮಾಡಿದ ಹಾಗೆ ಉಳಿದ ಎಲ್ಲವಕ್ಕೂ ಅನುಕೂಲವಾಗುವಂಥ ಫಾರಂ ಮಾಡಬೇಕು ಎಂದು ಹೇಳಿದ್ದನ್ನು ನಾನು ಸಮರ್ಥಿಸುತ್ತೇನೆ.

ಸಿದ್ದಪ್ಪನವರು ಹೇಳಿದ ಹಾಗೆ ತೆಂಗು ಮತ್ತು ಮಾವು ನೂರಾರು ವರ್ಷಗಳು ಇರುವ ಬೆಳೆ. ಮುಂಬೈ ಕರ್ನಾಟಕದ ಬಿಜಾಪುರ ಜಿಲ್ಲೆಯಲ್ಲಿ ತೆಂಗಿನ ಬೆಳೆ ಬೆಳೆಯುವುದಕ್ಕೆ ಆಗುವುದಿಲ್ಲ. ಎನ್ನುವ ತಮ್ಮ ಭಾವನೆ ಇದೆ. ಎಂ. ಎಸ್. ಇ. ಬಿ. ಚೇರ್ಮನ್ ನಾರಾಯಣರಾವ ಅವರ ಮನೆಗೆ ಹೋಗಿದ್ದೆ. ತೆಂಗಿನ ಮರ ಸಣ್ಣದು ಇದ್ದರೂ ಒಳ್ಳೆಯ ಕಾಯಿ ಬಿಡುವಂತೆ ಬೆಳೆದಿದೆ. ಅಂತಹ ರೀತಿಯಲ್ಲಿ ತಜ್ಞರ ಅಭಿಪ್ರಾಯವನ್ನು ಪಡೆದು ಬಿಜಾಪುರ ಜಿಲ್ಲೆಗಳಲ್ಲಿ ಬೆಳೆಯುವುದಕ್ಕೆ ಪ್ರಯತ್ನ ಮಾಡಬೇಕು ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಟಿ. ಎಂ. ಮಂಜುನಾಥ್ (ತಿಪಟೂರು).—ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಮಂತ್ರಿಗಳು ಈ ವಿಧೇಯಕವನ್ನು ಸಭೆಯ ಮುಂದಿಟ್ಟಿದ್ದಾರೆ. ಈ ಒಂದು ಕಾಯಿದೆ ನಮ್ಮ ದೇಶದಲ್ಲಿ ಸುಮಾರು ೮೦ ಭಾಗ ವ್ಯವಸಾಯದ ಕಸುಬನ್ನೇ ಅವಲಂಬಿಸಿರತಕ್ಕ ರೈತಾಪಿ ಜನಗಳಿಗೆ ಅನುಕೂಲವಾಗುವಂಥ ಒಂದು ಕಾಯಿದೆ ಎಂಬುದು ಎಲ್ಲರಿಗೂ ಗೊತ್ತಿರತಕ್ಕ ವಿಚಾರ. ಬೀಜ ಇಲ್ಲದೆ ಬೆಳೆ ಇಲ್ಲ. ಉತ ಮ

ವಾದಂಥ ಬೆಳೆ ಬರಬೇಕಾದರೆ ಶ್ರೇಷ್ಠ ಮಟ್ಟದ ಅತ್ಯಂತ ಹೆಚ್ಚಿನ ಇಳುವರಿಯನ್ನು ಕೊಡತಕ್ಕ ಬೀಜವನ್ನು ರೈತಾಪಿ ಜನಗಳಿಗೆ ಒದಗಿಸಿಕೊಡಬೇಕಾದ್ದು ಸರ್ಕಾರ ಬಹಳ ಮುಖ್ಯವಾದ ಕರ್ತವ್ಯ. ನನಗಾದರೂ ಅನ್ನಿಸುತ್ತದೆ, ಅಧ್ಯಕ್ಷರೇ, ಈ ವರ್ಷ ಆಹಾರದ ಬೆಳೆ ಮತ್ತು ಇತರ ಬೆಳೆಗಳು ಕಡಿಮೆಯಾಗಿರುವುದಕ್ಕೆ ಮೂಲ ಕಾರಣ ದೋಷಪೂರಿತವಾದಂಥ ಬೀಜಗಳು. ಅನೇಕ ವಿಧವಾದಂಥ ಬೆಳೆಗಳಿಗೆ ದೋಷಪೂರಿತವಾದಂಥ ಬೀಜಗಳನ್ನು ಕೊಟ್ಟಿರುವುದರಿಂದ ಬಹುಶ: ನಮ್ಮ ದೇಶದಲ್ಲಿ ಆಹಾರದ ಬೆಳೆ ಇಳಿತವಾಗಿದೆ ಎಂದು ನನ್ನ ಭಾವನೆ. ತಮಗೆ ಗೊತ್ತಿರುವ ಹಾಗೆ ಈ ಬೀಜವನ್ನು ಉತ್ತಮ ಪಡಿಸುವಂಥ ಸ್ಥಿತಿಯಲ್ಲಿ ನಮ್ಮ ವ್ಯವಸಾಯದ ಪರಿಣಿತರು, ತಜ್ಞರು ಸಾಕಷ್ಟು ಇದರ ಬಗ್ಗೆ ರಿಸರ್ಚ್ ಮಾಡುತ್ತಿದ್ದಾರೆ, ಮಾಡಿದ್ದಾರೆ. ಅದರ ಬಗ್ಗೆ ನನ್ನ ಅಭಿನಂದನೆ ಇದೆ.

ನಾವು ನೋಡಿದ ಹಾಗೆ ಪ್ರತಿಯೊಬ್ಬ ರೈತನು ತನ್ನಲ್ಲಿರತಕ್ಕ ಜಮೀನಿನಲ್ಲಿ ಹೆಚ್ಚು ಹೆಚ್ಚಾಗಿ ಬೆಳೆಯಬೇಕು, ಆಹಾರದ ಅಭಾವವನ್ನು ನೀಗಬೇಕು ಎಂದು ಆಶೆ ಇಟ್ಟುಕೊಂಡಿರತಕ್ಕ ಕಾಲದಲ್ಲಿ ಈ ಮಹತ್ತರವಾದ ಜವಾಬ್ದಾರಿಯನ್ನು ಹೊತ್ತಿರತಕ್ಕ ಅಧಿಕಾರಿಗಳು ಮತ್ತು ಸರ್ಕಾರದ ಯಂತ್ರ ತನ್ನ ಕರ್ತವ್ಯವನ್ನು ಬಹಳ ಚೆನ್ನಾಗಿ ನಿರ್ವಹಣ ಮಾಡುವುದು ಬಹಳ ಮುಖ್ಯವಾದುದು.

4.00 P. M.

ಇದರ ಬಗ್ಗೆ ಎಲ್ಲಾ ಸದಸ್ಯರು ಕಳಕಳಿಯಿಂದ ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಟ್ಟಿದ್ದಾರೆ. ಬಹುಶ: ಅಧ್ಯಕ್ಷರೇ, ನಾನು ತೆಂಗನ್ನು ಬೆಳೆಯುವ ಕ್ಷೇತ್ರದಿಂದ ಬಂದಿರುವುದರಿಂದ, ಅದರ ಬಗ್ಗೆ ಹೆಚ್ಚಿನ ಮಹತ್ವವನ್ನು ಕೊಟ್ಟು ಮಂತ್ರಿಗಳ ಗಮನವನ್ನು ಸೆಳೆಯಲು ಅಪೇಕ್ಷೆ ಪಡುತ್ತೇನೆ. ತೆಂಗಿನ ಬೆಳೆ, ರಾಗಿ ಬೆಳೆ, ಅಥವಾ ಭತ್ತದ ಬೆಳೆಯಂತೆ ಅಲ್ಲ. ಅದು ರೈತರ ಬಾಳಿನ ಒಂದು ಪ್ರಶ್ನೆ; ಜೀವನದ ಒಂದು ಪ್ರಶ್ನೆ. ಈ ರೀತಿ ಇರಬೇಕಾದರೆ ರೈತನ ಒಂದು ಬೆಳೆಯನ್ನು ಸರಿಯಾದ ರೀತಿಯಲ್ಲಿ, ಜವಾಬ್ದಾರಿಯುತವಾದ ರೀತಿಯಲ್ಲಿ ನೋಡಿಕೊಳ್ಳಬೇಕಾದುದು ಸಂಬಂಧಪಟ್ಟ ಸರ್ಕಾರದ ಇಲಾಖೆಯ ಮುಖ್ಯ ಕರ್ತವ್ಯ. ಆದರೆ ಒಂದು ಮಾತನ್ನು ತಮ್ಮ ಮುಂದೆ ನಾನು ಒತ್ತಿ ಒತ್ತಿ ಹೇಳುವುದೇನಂದರೆ, ತೆಂಗಿನ ಬೆಳೆ ಬೀಜವನ್ನು ಹಾಕಿದ ಮೇಲೆ ೧೦ ವರ್ಷ ಆದ ನಂತರ ರೈತ ಅದರಿಂದ ಫಲವನ್ನು ತೆಗೆದುಕೊಳ್ಳತಕ್ಕ ಮಟ್ಟಕ್ಕೆ ಬರುತ್ತಾನೆ. ಈ ೧೦ ವರ್ಷಗಳ ಅಂತರದಲ್ಲಿ ಅವನು ಎಷ್ಟು ಹಣವನ್ನು ಖರ್ಚು ಮಾಡಿರುತ್ತಾನೆ, ಎಷ್ಟು ದಿನಗಳನ್ನು ಕಳೆದಿರುತ್ತಾನೆ ಎಂಬುದನ್ನು ಯೋಚನೆ ಮಾಡಬೇಕು. ನಮ್ಮ ಭಾಗದಲ್ಲಿ ತೆಂಗಿನ ಬೆಳೆ ಕೇವಲ ಮಳೆಯ ನೀರಿನ ಆಧಾರದ ಮೇಲೆ ಬೆಳೆಯುತಕ್ಕ ಬೆಳೆ. ನೀರಾವರಿಯಿಂದ ಅಥವಾ ಭಾವಿಯಿಂದ ನೀರು ತೆಗೆದು ಬೆಳೆಯುವ ಅವಕಾಶ ನಮ್ಮ ಕಡೆ ಇಲ್ಲ. ಏನಿದ್ದರೂ ಪ್ರಕೃತಿದತ್ತವಾದ ಮಳೆಯ ಆಧಾರದಿಂದ ಬೆಳೆಯುತಕ್ಕ ಇಂತಹ ಬೆಳೆಗಳಿಗೆ ಯಾವ ಮಟ್ಟದ ಬೀಜಗಳನ್ನು ಒದ

ಗಿಸಬೇಕು ಎಂದು ನೋಡಬೇಕು. ನನ್ನ ಅನುಭವದಿಂದ ಹೇಳುವುದಾದರೆ, ಅರ್ಹವಾಗಿಲ್ಲದ ಬೀಜವನ್ನು ಯಾರು ತಂದು ಹಾಕಿದ್ದರೂ ಅದರಿಂದ ೨೫ ವರ್ಷಗಳಾದರೂ ಉತ್ತಮವಾದ ಫಲ ಪಡೆದಿಲ್ಲ ಎಂಬುದನ್ನು ಕಣ್ಣಾರೆ ನೋಡಿದ್ದೇನೆ. ಆದರೂ ನಿಮ್ಮ ಅಧಿಕಾರಿಗಳು ಯಾವುದು ಬೀಜಕ್ಕೆ ಅರ್ಹವಾಗಿಲ್ಲ ಅಂತಹ ಬೀಜಗಳನ್ನು ತೆಗೆದು ಕೊಂಡು ಬಂದು ಹಾಕುತ್ತಾರೆ. ಇದು ಸರಿಯಾದ ಕ್ರಮವಲ್ಲ. ತೆಂಗಿನ ಬೆಳೆಗೆ ಬೀಜವನ್ನು ಸಂಗ್ರಹಿಸಬೇಕಾದರೆ ಅಕ್ಟೋಬರ್, ನವಂಬರ್, ಡಿಸೆಂಬರ್ ತಿಂಗಳಿನಲ್ಲಿ ಸಂಗ್ರಹಿಸಬೇಕು. ಮತ್ತು ೬೦ ವರ್ಷಗಳಾಗಿರತಕ್ಕ ಮರದಿಂದ ಸಂಗ್ರಹಿಸಬೇಕು. ತೆಂಗಿನ ಬೀಜವನ್ನು ೬೦ ವರ್ಷಗಳ ಮೇಲ್ಪಟ್ಟು ಇರತಕ್ಕ ಮರದಿಂದ ಸಂಗ್ರಹಿಸಬೇಕು ಎನ್ನುವ ತಿದ್ದುಪಡಿ ತಾವು ಮಾಡಬೇಕು. ಅದರಲ್ಲೂ ಸಹ ಬೀಜವನ್ನು ಸಂಗ್ರಹಿಸಬೇಕಾದರೆ ಅಕ್ಟೋಬರ್, ನವಂಬರ್, ಡಿಸೆಂಬರ್ ಮತ್ತು ಜನೆವರಿ ಈ ೪ ತಿಂಗಳಲ್ಲಿ ಬರತಕ್ಕ ತೆಂಗಿನಕಾಯಿ ಏನು ಇದೆ, ಇದರಲ್ಲಿ ನೀರಿನ ಅಂಶ ಕಡಿಮೆ ಇರುತ್ತದೆ. ಯಾವುದರಲ್ಲಿ ನೀರಿನ ಅಂಶ ಕಡಿಮೆ ಇರುತ್ತದೆ, ಅವುಗಳನ್ನು ಕಿತ್ತು ಒಂದು ತಿಂಗಳು ಇಟ್ಟು, ನೀರಿನ ಅಂಶ ಕಡಿಮೆ ಆದ ಮೇಲೆ ಭೂಮಿಯಲ್ಲಿ ಒಂದು ಒಂದೂವರೆ ಅಡಿ ಅಂತರದಲ್ಲಿ ಇಟ್ಟು ಸಸಿಯನ್ನು ಮಾಡತಕ್ಕ ವಿಧಾನವನ್ನು ಹಳ್ಳಿಯ ರೈತರು ತಮ್ಮ ಇಲಾಖೆಗಿಂತ ಚೆನ್ನಾಗಿ ಕಲತಿದ್ದಾರೆ. ಒಂದು ವಿಷಯವನ್ನು ಮುಖ್ಯವಾಗಿ ಹೇಳುತ್ತೇನೆ. ಖಾಸಗಿ ಉದ್ಯಮದಲ್ಲಿ, ಖಾಸಗಿ ಕ್ಷೇತ್ರದಲ್ಲಿ ಸಾಕಷ್ಟು ಪ್ರೋತ್ಸಾಹ ಕೊಡದೇ ಹೋದ ಪಕ್ಷದಲ್ಲಿ ಇದರಿಂದ ರೈತರಿಗೆ ತೊಂದರೆ ಕಟ್ಟಿಟ್ಟದ್ದು ಎಂದು ತಮ್ಮ ಮುಂದೆ ನಿವೇದನೆ ಮಾಡುತ್ತೇನೆ. ನಮ್ಮ ದೇಶಕ್ಕೆ ಬೇಕಾದಂಥ ಎಲ್ಲಾ ತರಹದ ಬೀಜಗಳನ್ನು, ಎಲ್ಲಾ ತರಹದ ಹಣ್ಣಿನ ಗಿಡದ ಸಸಿಗಳನ್ನು ಕೊಡತಕ್ಕ ಸಾಮರ್ಥ್ಯ ನಿಮಗೆ ಇದೆಯೋ ಎನ್ನುವ ಪ್ರಶ್ನೆ ಕೇಳುವಾಗ ನಿಮಗೇ ಅರ್ಥವಾಗುತ್ತದೆ.

ಉಪಾಧ್ಯಕ್ಷರು.—ತಾವು ಇದನ್ನೆಲ್ಲಾ ಇಲ್ಲಿ ಹೇಳಿದರೆ ಹೇಗೆ ? Though the scope is limited, all matters connected with agriculture and horticulture are just pushed here,

ಶ್ರೀ ಟಿ. ಎಂ. ಮಂಜುನಾಥ.—ನಿರ್ದಿಷ್ಟವಾಗಿ ತೋಟಗಾರಿಕೆ ಇಲಾಖೆ ಹೆಚ್ಚಾಗಿ ಉತ್ಪಾದನೆ ಮಾಡತಕ್ಕ ಬೀಜಗಳನ್ನು ಸಪ್ಲೈ ಮಾಡುವುದು ಗೊತ್ತಿದೆ. ಆದರೆ ಆ ದಿಶೆಯಲ್ಲಿ ಮಾಡಬೇಕಾದ ಕಾರ್ಯ ಕುಂಠಿತವಾಗಿದೆ, ಲೋಪವಾಗಿದೆ. ಅದನ್ನು ಎತ್ತಿ ಹಿಡಿಯುವುದು ನನ್ನ ಕರ್ತವ್ಯ ಎಂದು ತಿಳಿದು ಹೇಳುತ್ತಿದ್ದೇನೆ. ತೆಂಗಿನ ವ್ಯವಸಾಯ ನಮ್ಮ ದೇಶದ ತೆಂಗು ಬೆಳೆಗಾರರ ಜೀವನದ ಪ್ರಶ್ನೆ ಆಗಿದೆ. ಸರ್ಕಾರ ಇದರ ಬಗ್ಗೆ ಗಮನಕೊಡಬೇಕಾದುದು ಮುಖ್ಯ. ಅವರು ನೋಟಿಫಿಕೇಷನ್ ಮಾಡಬೇಕು ಎಂದು ಹೊರಟಿದ್ದಾರೆ. ರಾಗಿ ಬೀಜ, ಭತ್ತದ ಬೀಜ ತಯಾರು ಮಾಡುವುದಕ್ಕೆ, ಭೂಮಿಯ ಮೇಲೆ ದುಂಬಿ ಹುಳುಗಳಿಂದ ಪಾಲನೇಷನ್ ಆಗುವುದರಿಂದ ಅದಕ್ಕೆ ತಕ್ಕಷ್ಟು ಏರಿಯಾ ಬೇಕು. ತೆಂಗಿನ ಬೀಜದ ಸಸಿಯನ್ನು

ಉತ್ಪಾದನೆ ಮಾಡುವುದಕ್ಕೆ ಏರಿಯಾ ನೋಟಿಫಿಕೇಷನ್ ಆಗಬೇಕಾಗಿಲ್ಲ. ಮಂತ್ರಿಗಳು ಇದಕ್ಕೆ ಸಮರ್ಥನೆ ಕೊಡಬೇಕು. ಸರ್ಕಾರಿ ಕ್ಷೇತ್ರದಲ್ಲಿ ತಯಾರು ಮಾಡಿದ್ದಕ್ಕಿಂತ, ಖಾಸಗೀ ಕ್ಷೇತ್ರದಲ್ಲಿ ತಯಾರು ಮಾಡಿದ ಸಸಿಗಳು ಬಹಳ ಚೆನ್ನಾಗಿ ಬಂದಿವೆ. ಆದುದರಿಂದ ಅನೇಕ ಕಡೆಗಳಿಂದ ಹೆಚ್ಚಿಗೆ ಜನ ಬರುತ್ತಾರೆ. ಯಾರು ತೆಂಗಿನ ಬೆಳೆಯುವ ಜನ ಬರುತ್ತಾರೆ ಅವರು ತೋಟಗಾರಿಕೆ ಇಲಾಖೆಗೆ ಹೋಗುತ್ತಾರೆ, ನೋಡುತ್ತಾರೆ ಸಸಿಗಳನ್ನು ನೋಡಿ ಇದು ಹೆಚ್ಚಿಗೆ ಬೆಳೆ ಕೊಡುತ್ತದೆಯೇ ಎಂಬ ಅನುಮಾನ ಅವರಿಗೆ ಆಗಲೇ ಹುಟ್ಟುತ್ತದೆ. ಖಾಸಗೀ ಕ್ಷೇತ್ರದಲ್ಲಿ ಪೈಪೋಟಿ ಇದೆ. ತೋಟಗಾರಿಕೆ ಇಲಾಖೆ ೨–೨೦, ೧–೨೦ಕ್ಕೆ ಒಂದು ವರ್ಷದ ಸಸಿ ಕೊಡಬಹುದು. ೩ ವರ್ಷದ ಸಸಿಗೆ ಖಾಸಗಿ ಕ್ಷೇತ್ರದಲ್ಲಿ ೧೦ ರಿಂದ ೧೨ ರೂಪಾಯಿಯ ವರೆಗೆ ದುಬಾರಿ ಹಣ ಕೊಟ್ಟು ತೆಗೆದುಕೊಳ್ಳುವುದು ಗೊತ್ತಿದೆ.

ಉಪಾಧ್ಯಕ್ಷರು.—ಅದೆಲ್ಲಾ ಈ ಕಾಯಿದೆಯಲ್ಲಿ ಬರುವುದಿಲ್ಲ.

ಶ್ರೀ ಟಿ. ಎಂ. ಮಂಜುನಾಥ.—ತೆಂಗಿನ ಬೀಜಗಳನ್ನು ಉತ್ಪಾದನೆ ಮಾಡುವುದಕ್ಕೆ ಇರತಕ್ಕ ನೋಟಿಫಿಕೇಷನ್ ದಯವಿಟ್ಟು ಪರಿಶೀಲನೆಮಾಡಿ ನೋಟಿಫೈಡ್ ಏರಿಯಾ ಎಂದು ಇರುವುದನ್ನು ತೆಗೆಯಬೇಕು. ಬೀಜಗಳನ್ನು ಉತ್ಪಾದನೆ ಮಾಡುವ ಕಾರ್ಯದಲ್ಲಿ ಖಾಸಗೀ ವ್ಯಕ್ತಿಗಳಿಗೂ ಹೆಚ್ಚಿಗೆ ಪ್ರೋತ್ಸಾಹ ಕೊಡಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎನ್. ಎಸ್. ಗುರುಶಿದ್ದಪ್ಪ (ಬಿಳಿಗೆರೆ).— ಸನ್ಮಾನ್ಯ ಅಧ್ಯಕ್ಷರೇ, ಈ ಮಸೂದೆಯನ್ನು ಸ್ವಾಗತಿಸುತ್ತಾ ಒಂದೆರಡು ವಿಷಯಗಳನ್ನು ಸಭೆಯ ಗಮನಕ್ಕೆ ತರಲು ಅಪೇಕ್ಷೆ ಪಡುತ್ತೇನೆ. ಇವತ್ತಿನ ದಿವಸ ನಮ್ಮ ದೇಶದಲ್ಲಿ ಆಹಾರ ಸಮಸ್ಯೆ ಬೃಹದಾಕಾರವಾಗಿ ಬೆಳೆದಿದೆ. ಎಲ್ಲಿ ನೋಡಿದರೂ ಅಕ್ಕಿ, ರಾಗಿ, ಗೋದಿ ಕೊಡಿಸಿ ಎಂದು ಎಲ್ಲಾ ಕಡೆ ಬೇಡಿಕೆ ಇದೆ. ಇದಕ್ಕೆ ನಿಜವಾದ ಕಾರಣವೇನೆಂದರೆ, ಮಿಶ್ರಾಹಾರ ಜಾಸ್ತಿ ಉಪಯೋಗಿಸುತ್ತಾ ಇಲ್ಲ. ನಾವು ಬೆಳಿಗ್ಗೆ ರಾತ್ರಿ ಯಾವಾಗಲೂ ಊಟಕ್ಕೆ ಅಕ್ಕಿ, ರಾಗಿ, ಜೋಳ ಉಪಯೋಗಿಸುತ್ತೇವೆ. ಅದನ್ನು ಬಿಟ್ಟು ಬದಲಾವಣೆ ಮಾಡಿ, ನಮ್ಮ ಆಹಾರ ಪದಾರ್ಥಗಳಲ್ಲಿ ಸ್ವಲ್ಪ ಹಣ್ಣು ಹಂಪಲು ಉಪಯೋಗಿಸಿದರೆ ನಿಜವಾಗಿ ಆಹಾರ ಸಮಸ್ಯೆ ಕಡಿಮೆಯಾಗುತ್ತದೆ ಎಂದು ನನ್ನ ಅಭಿಪ್ರಾಯ. ನಮ್ಮ ಜಿಲ್ಲೆಯಲ್ಲಿ ಎಷ್ಟೇ ಜಾಗಾ ಇದ್ದರೂ ಕೂಡ ತರಕಾರಿ ಬೆಳೆಯಬೇಕು, ಹಣ್ಣು ಹಂಪಲು ತೋಟ ಬೆಳೆಸಬೇಕು ಎಂಬ ಅಭಿಪ್ರಾಯ ಜನಗಳಿಗೆ ಇಲ್ಲ. ಸಾಕಷ್ಟು ತಿಳುವಳಿಕೆ ಇಲ್ಲ. ಮಾನ್ಯ ಮಂತ್ರಿಗಳಲ್ಲಿ ಕೇಳಿ ಕೊಳ್ಳುತ್ತೇನೆ, ಪ್ರತಿಯೊಂದು ತಾಲ್ಲೂಕಿನಲ್ಲಿ ಕೂಡ ಸಿಡ್ ಫಾರ್ಮ್ಸ್ ತೋಟಗಾರಿಕೆ ವಿಷಯವಾಗಿ, ಹಣ್ಣು ಹಂಪಲು ಬೆಳೆಸುವವಿಷಯದಲ್ಲಿ ಫಾರಂನ್ನು ಏರ್ಪಾಡುಮಾಡಿ ರೈತರಿಗೆ ಟ್ರೈನಿಂಗ ಕೊಟ್ಟರೆ ಒಳ್ಳೆಯದು ಎಂದು ನನ್ನ ಅಭಿಪ್ರಾಯ. ಎಷ್ಟು ಜಾಗಾ ಇದ್ದರೂ ಬೀಳು ಬಿದ್ದಿರುತ್ತದೆ. ರಾಗಿ, ಜೋಳ, ಭತ್ತ ಎಲ್ಲಾ ಜಮೀನುಗಳಲ್ಲಿ ಬೆಳೆಯುವುದಿಲ್ಲ. ಅಂಥ ಬೀಳು ಬಿದ್ದಿರತಕ್ಕ ಜಮೀನಿನಲ್ಲಿ ಮಾವಿನ ತೋಟ, ಹಣ್ಣುಗಳ ತೋಪು ಎಬ್ಬಿಸಬಹುದು. ರೈತರಿಗೆ

ತೋಟಮಾಡಬೇಕು ಎನ್ನುವ ಅಭಿಪ್ರಾಯ ಬಂದಿಲ್ಲ. ಬರೀ ಭತ್ತ, ರಾಗಿ ಬೆಳೆಯ ಬೇಕು ಎನ್ನುವ ದೃಷ್ಟಿ ಇಟ್ಟುಕೊಂಡಿರುತ್ತಾರೆ. ಸರಕಾರದವರು ಪ್ರತಿಯೊಂದು ತಾಲ್ಲೂಕಿನಲ್ಲಿ ಸೀಡ್ ಫಾರ್ಮ್ಸ್ ಮಾಡಿ ತರಕಾರಿ ಹೇಗೆ ಬೆಳೆಯಬೇಕು. ಹೇಗೆ ಮಾಡ ಬೇಕು ಎಂಬುದನ್ನು ತೋರಿಸಿದರೆ ಒಳ್ಳೆಯದು ಎಂದು ನನ್ನ ಅಭಿಪ್ರಾಯ. ನಮ್ಮ ತಾಲ್ಲೂಕಿನಲ್ಲಿ ನಂಜನಗೂಡಿನ ರಸಬಾಳೆ ಎಂದರೆ ಬಹಳ ಹೆಸರುವಾಸಿಯಾದುದು. ಅದು ಇಂದು ಕನಸಾಗಿದೆ. ನಂಜನಗೂಡು ರಸಬಾಳೆ ಎಂದರೆ ಈಗ ಯಾವು ದನ್ನೋ ಕೊಡುತ್ತಾರೆ. ಆದರೂ ಕೂಡ ರಸಬಾಳೆಗೆ ಫಾರಿನ್ ಎಕ್ಸ್‌ಚೇಂಜ್ ಸಿಗು ತ್ತಿದೆ. ನಮ್ಮ ಸ್ನೇಹಿತರು ಹೇಳಿದರು, ೨೦ ಗುಂಟೆಯಲ್ಲಿ ಟೊಮೇಟೋಗೆ ೪೦೦೦ ರೂಪಾಯಿ ಸಿಕ್ಕಿತು ಎಂದು. ಇದನ್ನು ರೈತರಿಗೆ ಹೇಳಿದರೆ ನಗುತ್ತಾರೆ. ಇಷ್ಟೊಂದು ಉತ್ಪತ್ತಿ ಇದೆಯೇ ಎಂದು ನಗುತ್ತಾರೆ ಪ್ರತಿಯೊಂದು ತರಕಾರಿ ಬೆಳೆಯುವ ವಿಷಯದಲ್ಲಿ, ತೋಟಗಾರಿಕೆ ಮಾಡುವ ವಿಷಯದಲ್ಲಿ ಟ್ರೈನಿಂಗ ಕೊಟ್ಟು, ಪ್ರೋತ್ಸಾಹ ಕೊಡಬೇಕು. ಆದುದರಿಂದ ಇಷ್ಟು ಅಡಿ ದೂರದಲ್ಲಿ ಕಾಮನ್ ಸೀಡ್ಸ್ ಬೆಳೆಯಬಾರದು ಎನ್ನುವ ನಿಯಮ ಇದ್ದರೂ ಕೂಡ ನಾವು ಹೈಬ್ರಿಡ್ ಸೀಡ್ ಫಾರಂ ಮಾಡಬೇಕು. ನಮ್ಮ ಭಾಗದಲ್ಲಿ ಇದನ್ನು ಬೆಳೆಯುವುದನ್ನು ಅನೇಕಸಾರಿ ನೋಡಿದ್ದೇನೆ.

† ಶ್ರೀ ಕೆ. ಹೆಚ್. ಪಾಟೀಲ — ಸನ್ಮಾನ್ಯ ಉಪಸಭಾಪತಿಗಳೇ, ಇಲ್ಲಿಯ ವರೆಗೂ ಬಹಳಷ್ಟು ಜನ ಮಾತನಾಡಿದ್ದಾರೆ. ಈ ಬಿಲ್ಲು ಬಹಳ ಸಣ್ಣದಾದರೂ ಕೂಡ ಇದು ಅತ್ಯಂತ ಮಹತ್ವವಾದ ಬಿಲ್ಲು ಎಂದು ಏನು ಮಾತನಾಡಿದರೋ ಅವರೆಲ್ಲರ ಮಾತನ್ನೂ ಬಹಳ ಕೂಲಂಕೃಷವಾಗಿ ಕೇಳಿದ್ದೇನೆ ಮತ್ತು ಅವರು ಅನೇಕ ಉಪಯುಕ್ತ ವಾದ ಸಲಹೆಗಳನ್ನೂ ಕೂಡ ಮಾಡಿದ್ದಾರೆ. ಕೆಲವರು ಈ ಬಿಲ್ಲಿನಿಂದ ವ್ಯವಸಾಯಗಾರರಿಗೆ ಎಲ್ಲಿ ತೊಂದರೆಯಾಗುತ್ತದೋ ಎನ್ನುವ ಭಯವನ್ನು ವ್ಯಕ್ತ ಮಾಡಿದ್ದಾರೆ. ಅದೇ ರೀತಿ ಕೆಲವು ಮಾನ್ಯ ಸದಸ್ಯರು ಬೆಂಗಳೂರಿನಲ್ಲಿರುವ ನರ್ಸರಿ ಯವರಿಗೆ ಇದರಿಂದ ಏನಾದರೂ ಭಯ ಆದೀತು ಎನ್ನುವ ಮಾತನ್ನೂ ಸಹ ವ್ಯಕ್ತ ಮಾಡಿದ್ದಾರೆ. ಈ ಬಿಲ್ಲಿನ ಮೂಲ ಉದ್ದೇಶ ಏನೆಂದರೆ ವ್ಯವಸಾಯಗಾರರಿಗೆ ಹೆಚ್ಚು ಅನುಕೂಲತೆಯನ್ನು ಮಾಡಿಕೊಡಬೇಕು ಮತ್ತು ಹೆಚ್ಚು ಉಪಯುಕ್ತವಾದಂಥ ಉತ್ತಮ ತರಗತಿಯ ಬೀಜಗಳನ್ನು ಪುರವಟಿ ಮಾಡಿಕೊಡಬೇಕು ಎಂದು ಹೀಗೆ ಈ ಬೀಜಗಳನ್ನು ಪುರವಟಿ ಮಾಡುವಾಗ ಯಾವ ರೀತಿಯಲ್ಲಿ ಅದರ ಬೆಳವಣಿಗೆ ಅಭಿವೃದ್ಧಿ ಆಗಬೇಕು ಮತ್ತು ಅದರ ಬಗ್ಗೆ ಯಾವ ರೀತಿಯಲ್ಲಿ ತಾಂತ್ರಿಕ ಸಲಹೆಗಳು ಬರುತ್ತದೋ ಅದಕ್ಕನುಗುಣವಾದ ರೀತಿಯಲ್ಲಿ ಈ ಫಾರಂಗಳನ್ನು ಸ್ಥಾಪನೆ ಮಾಡ ಬೇಕು ಎನ್ನುವುದೇ ಇದರ ಉದ್ದೇಶ. ಮತ್ತು ಈ ಸದನವ ಮುಂದೆ ವ್ಯವಸಾಯ ಗಾರರ ಬಗ್ಗೆ ತಮಗೆ ಒಂದು ಆಶ್ವಾಸನೆಯನ್ನು ಕೊಡಲಿಚ್ಛಿಸುತ್ತೇನೆ. ಅದೇನೆಂದರೆ ರೈತರಿಗೆ ತೊಂದರೆಯಾಗುವಂಥ ರೀತಿಯಲ್ಲಿ ಈ ಬಿಲ್ಲನ್ನು ಯಾವ ರೀತಿಯಾಗಿಯೂ

ಸರಕಾರ ಉಪಯೋಗ ಮಾಡಿಕೊಳ್ಳುವುದಕ್ಕೆ ಸಾಧ್ಯವಿಲ್ಲ ಎಂದು. ಆದರೆ ತಮಗೆಲ್ಲಾ ಗೊತ್ತಿರುವ ಹಾಗೆ ನಮ್ಮ ಮೈಸೂರು ರಾಜ್ಯದಲ್ಲಿ ನೈಸರ್ಗಿಕ ಸಂಪತ್ತು ವಿಫಲವಾಗಿದ್ದರೂ ಕೂಡ ಅನೇಕ ಸಂದರ್ಭಗಳಲ್ಲಿ ಉಳಿಕೆ ರಾಜ್ಯಗಳನ್ನು ತುಲನ ಮಾಡಿ ನೋಡಿದರೆ ನಮ್ಮ ರಾಜ್ಯದಲ್ಲಿ ಪ್ರತಿಯೊಂದರಲ್ಲೂ ಕೂಡ ವ್ಯವಸಾಯಗಾರನ ಹುಟ್ಟುವಳಿ ಉಳಿಕೆ ರಾಜ್ಯಗಳ ಹುಟ್ಟುವಳಿಗಿಂತಲೂ ಪ್ರಗತಿ ಕಾಣಲಾಗಿದೆ. ಹೀಗಿದ್ದರೂ ಕೂಡ ನಾವು ಉತ್ತಮವಾದ ಬೀಜಕ್ಕೆ ನ್ಯಾಷನಲ್ ಸೀಡ್ ಕಾರ್ಪೋರೇಷನ್‌ನವರಿಗೆ ಕೈಒಡ್ಡುವ ಪರಿಸ್ಥಿತಿ ಬಂದಿದೆ. ಇದನ್ನು ನಿಲ್ಲಿಸಬೇಕೆಂದೂ ಮತ್ತು ಎಲ್ಲಾ ಕಡೆಯೂ ಈ ಬಗ್ಗೆ ಸೀಡ್ಸ್ ಫಾರಂಸ್‌ನ್ನು ಬೆಳೆಸಬೇಕೆಂತಲೂ ಈ ಬಿಲ್ಲಿನ ಮೂಲ ಉದ್ದೇಶ. ಆದರೂ ಸಹ ಕೆಲವು ಸದಸ್ಯರು ಕೇಳಿದರು. ಇದು ಹಾರ್ಟಿಕಲ್‌ಚರ್‌ಗೆ ಸಂಬಂಧಪಟ್ಟ ಬಿಲ್ ಆದರೂ ಸಹ ಇದು ವ್ಯವಸಾಯ ಖಾತೆಯಲ್ಲಿ ಏತಕ್ಕೆ ಬರಲಿಲ್ಲಾ ಎನ್ನುವ ಶಂಕೆಯನ್ನು ವ್ಯಕ್ತಮಾಡಿದ್ದಾರೆ. ಈ ಬಗ್ಗೆ ಹೇಳುವುದಾದರೆ ವ್ಯವಸಾಯ ಖಾತೆಯಲ್ಲಿ ಈಗಾಗಲೇ ಸೀಡ್ ಆಕ್ಟ್ ಅಮಲಿನಲ್ಲಿ ಇದೆ. ಮತ್ತು ಬೆಳೆಗಾರನ ಮೇಲೆ ಹಾಗೂ ರೈತರ ಮೇಲೆ ಇನ್ನೂ ಒಂದು ಹೆಚ್ಚಿನ ಹತೋಟಿ ಹಾಕಬೇಕು ಎನ್ನುವ ಉದ್ದೇಶದಿಂದ ಈ ಬಿಲ್ಲನ್ನು ತಂದಿದ್ದೇವೆ. ಅಗ್ರಿಕಲ್ಚರಲ್ ಫಾರಂ ಈಗಾಗಲೇ ಸಾಕಷ್ಟು ಬೆಳೆದಿವೆ. ಆದರೆ ಹಾರ್ಟಿಕಲ್‌ಚರಲ್‌ನಲ್ಲಿ ಕೇವಲ ಹಣ್ಣು ವ್ಯಾಪ್ತಿ ಮಾತ್ರ ಬೆಳೆದಿದೆಯೋ ಹೊರತು ಬೇರೆ ಯಾವುದೂ ಬೆಳೆದಿಲ್ಲ. ಆದುದರಿಂದ ಈ ಹಾರ್ಟಿಕಲ್‌ಚರಗೆ ಸಂಬಂಧಪಟ್ಟ ಸೀಡ್ಸ್‌ನ್ನು ತಯಾರು ಮಾಡುವುದಕ್ಕೆ ಯಾವ ಯಾವ ತಾಲ್ಲೂಕಿನಲ್ಲಿ ಅಗತ್ಯವಿದೆಯೋ ಅಲ್ಲಿ ಈ ಸೀಡ್ಸ್ ಫಾರಂನ್ನು ತೆಗೆಯುವುದಕ್ಕೆ ಈ ಬಿಲ್ಲಿನಿಂದ ಅನುಕೂಲವಾಗುತ್ತದೆ.

ಈಗ ಒಂದು ಉದಾಹರಣೆ ಹೇಳುವುದಾದರೆ ಪೊಟಿಟೋ ಸೀಡ್ಸ್‌ನ್ನು ಪರದೇಶದಿಂದ ತರಿಸಿ ಹಂಚುವ ವ್ಯವಸ್ಥೆಯಲ್ಲಿದ್ದೇವೆ. ಇವೆಲ್ಲಾ ಅರ್ಥಮಾಡಿಕೊಂಡು ಉತ್ತಮವಾದ ತರಗತಿ ಬೀಜವನ್ನು ಇಲ್ಲೇ ತಯಾರು ಮಾಡಬೇಕು ಎನ್ನುವ ಉದ್ದೇಶದಿಂದ ಇದನ್ನು ತಂದಿದ್ದೇವೆ. ಮಾನ್ಯ ಸದಸ್ಯರು ಈ ಸಂಗತಿಯನ್ನು ಹೆಚ್ಚು ಅರ್ಥಮಾಡಿಕೊಂಡಿದ್ದರೆ ಚೆನ್ನಾಗಿತ್ತು. ಈ ಬಗ್ಗೆ ಟೀಕೆ ಮಾಡುವುದಕ್ಕೆ ಹೋಗುತ್ತಿರಲಿಲ್ಲ. ಇನ್ನು ಕೆಲವರು ಇದನ್ನು ಆತುರಾತುರವಾಗಿ ತೀವ್ರಗತಿಯಿಂದ ಈ ಬಿಲ್ಲನ್ನು ತಂದಿದ್ದಾರೆ ಎಂದು ಹೇಳಿದರು. ಇದನ್ನು ಪೂರ್ವದೃಷ್ಟಿಯಿಂದ ಅವರು ಈ ರೀತಿ ವಾದ ಮಾಡಿರಬಹುದು. ಆದರೆ ಅವರು ಪೂರ್ವದೃಷ್ಟಿಯಿಂದವಾದ ಮಾಡಿದರೂ ಸಹ ಮತ್ತು ಅವರು ಈ ಬಗ್ಗೆ ಟೀಕೆ ಮಾಡಿದ್ದರೂ ಸಹ ಅವೆಲ್ಲವನ್ನೂ ಸ್ವಾಗತ ಮಾಡುತ್ತೇವೆ. ಏತಕ್ಕೆಂದರೆ ಟೀಕೆ ಇಲ್ಲದೆ ಯಾವ ಸುಧಾರಣೆಯೂ ಆಗುವುದಕ್ಕೆ ಸಾಧ್ಯವಿಲ್ಲಾ, ಎಂದು ನನ್ನ ಭಾವನೆ. ಮತ್ತು ಈ ಬಗ್ಗೆ ಸರಕಾರದ ಒಂದು ಅಮೆಂಡ್‌ಮೆಂಟ್ ತರುವುದು ಅವಶ್ಯಕ ಎಂದು ನನ್ನ ಭಾವನೆ. ಈ ತರಹ ಫಾರಂಗಳನ್ನು ತೆರೆಯುವುದಕ್ಕೆ ಕೇವಲ ಸರಕಾರ ತೆರೆಯುವುದೇ ಅಲ್ಲದೆ ವ್ಯಕ್ತಿಗತವಾಗಿಯೂ ಕೂಡ ತೆರೆಯುವುದಕ್ಕೆ ಅವಕಾಶ ಇರಬೇಕು ಎಂದು ಈ ವಿಷಯದಲ್ಲಿ ಮಾನ್ಯ

ಸದಸ್ಯರುಗಳು ಹೇಳಿದಂಥ ಉಪಯುಕ್ತವಾದ ಸಲಹೆಗಳನ್ನು ಗಮನಿಸಿ ಯಾರಿಗೂ ಅನ್ಯಾಯವಾಗದ ರೀತಿಯಲ್ಲಿ, ರೈತರಿಗೆ ಆಗಲಿ ಅಥವಾ ಬೆಳೆಗಾರರಿಗೇ ಆಗಲಿ ಅನ್ಯಾಯವಾಗದೇ ಇರುವ ದೃಷ್ಟಿಯಿಂದ ಈ ಬಿಲ್ಲನ್ನು ಜಾಗ್ರತೆ ತಪ್ಪದೆ ನಡೆಸುತ್ತೇವೆ ಎಂದು ಹೇಳುತ್ತೇನೆ. ತೆಂಗಿನ ಗಿಡಗಳಿಗೇ ಆಗಲಿ, ಅಡಿಕೆ ಗಿಡಗಳಿಗೇ ಆಗಲಿ ಯಾವುದಕ್ಕೆ ಕಾಯಿದೆ ಅವಶ್ಯಕತೆ ಇದೆಯೋ ಅದಕ್ಕೆ ಮಾಡೋಣ. ಈಗ ಪೊಟೋಟೋ ಫಾರಂನ್ನು ಹಾಸನದಲ್ಲಿ ಮಾಡಬೇಕು ಎಂದು ಬರೆದಿದ್ದಾರೆ. ಆ ಬಗ್ಗೆ ಹಾರ್ಟಿಕಲ್‌ಚರ್ ಡಿಪಾರ್ಟ್‌ಮೆಂಟ್‌ಗೆ ಹೇಳಿದ್ದೇವೆ. ಅಲ್ಲಿ ಒಂದು ಫಾರಂನ್ನು ಮಾಡುತ್ತಾರೆ. ಇವಕ್ಕೆಲ್ಲಾ ಅನ್ವಯವಾಗಿ ಇದನ್ನು ಕಾರ್ಯಗತ ಮಾಡುವುದ ಕ್ಕೋಸ್ಕರ ಈ ಒಂದು ಮಸೂದೆಯನ್ನು ತಂದಿದ್ದೇವೆ. ಆದುದರಿಂದ ಈ ಮಸೂದೆಗೆ ಎಲ್ಲರೂ ಬೆಂಬಲ ಕೊಡಬೇಕು ಎಂದು ಪ್ರಾರ್ಥನೆ ಮಾಡಿ ನನ್ನ ಮಾತನ್ನು ಮುಗಿ ಸುತ್ತೇನೆ.

ಇನ್ನು ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಈಗತಾನೇ ಇಲ್ಲಿ ಬಂದರು. ಅವರ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಸೆಕ್ಷನ್ ೩ಕ್ಕೆ ಈ ಒಂದು ಅಮೆಂಡ್ ಮೆಂಟನ್ನು ಸರಕಾರ ತಂದಿದೆ.

ಶ್ರೀ ಹೆಚ್. ಎಸ್. ಸಿದ್ದಪ್ಪ.— ಸ್ವಾರ್ಥ ಅಧಿಕಾರಿಗಳ ಬಗ್ಗೆ ಏನು ಮಾಡ್ತೀರಿ ಎಂದು ಏನೂ ಹೇಳಲಿಲ್ಲಾ.

ಶ್ರೀ ಕೆ. ಹೆಚ್. ಪಾಟೀಲ.— ಈ ಬಿಲ್ಲನ್ನು ಟೀಕೆ ಮಾಡುವಾಗ ಅಥವಾ ಸಲಹೆ ಕೊಡುವಾಗ ಈ ಬಿಲ್ಲಿನಲ್ಲಿರತಕ್ಕಂಥ ಕೆಲವು ನ್ಯೂನತೆಗಳನ್ನು ಮಾನ್ಯ ಸದಸ್ಯರುಗಳು ನನ್ನ ಗಮನಕ್ಕೆ ತಂದಿದ್ದಾರೆ. ಅದೇ ರೀತಿ ಶ್ರೀಮಾನ್ ಹೆಚ್. ಎಸ್. ಸಿದ್ದಪ್ಪನವರು ಮಾತನಾಡುವಾಗ ಈ ಬಗ್ಗೆ ಏನು ಉಗ್ರವಾದ ಟೀಕೆಗಳನ್ನು ಮಾಡಿದ್ದಾರೋ ಅದನ್ನೂ ಗಮನದಲ್ಲಿಟ್ಟುಕೊಂಡು ಮತ್ತು ಶ್ರೀಮಾನ್ ಕೆ. ಹೆಚ್. ಹನುಮೇಗೌಡರು ಅರಸೀಕೆರೆ ಫಾರಂ ಬಗ್ಗೆ ಏನು ಹೇಳಿದ್ದಾರೋ ಅದನ್ನೂ ಗಮನ ದಲ್ಲಿಟ್ಟುಕೊಂಡಿದ್ದೇನೆ. ಮತ್ತು ಆ ಬಗ್ಗೆ ಕೆಲವು ಮಾಹಿತಿಗಳನ್ನು ತರಿಸಿದ್ದೇನೆ, ಇನ್ನೂ ಕೆಲವು ಮಾಹಿತಿಗಳನ್ನು ತರಿಸುವುದಕ್ಕೆ ಹತ್ತಿದ್ದೇನೆ. ಈ ಬಗ್ಗೆ ಒಂದೇ ಮಾತಿನಲ್ಲಿ ಹೇಳುವುದಾದರೆ ನಿಮ್ಮ ಸಲಹಾ ಟೀಕೆಗಳೆಲ್ಲಾವನ್ನೂ ಗಮನಿಸಿ ಅದಕ್ಕೆ ಜಾಗ್ರತೆ ತಪ್ಪದೆ ತೀವ್ರಗತಿಯಿಂದ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ. ಅದಕ್ಕಾಗಿ ತಾವು ಈ ಬಿಲ್ಲನ್ನು ಸ್ವಾಗತ ಮಾಡಬೇಕು ಎಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

MR. DEPUTY SPEAKER.— The question is :

"That the Mysore Seed Farms Bill, 1973 be taken into consideration."

The motion was adopted.

Clause-2

Mr. DEPUTY SPEAKER.— The question is :

"That clause 2 do stand part of the Bill".

The motion was adopted.

Clause 2 was added to the Bill.

Clause 3

Mr. DEPUTY SPEAKER.— There is an amendment by the Hon. Minister for Agriculture for clause 3. He may move it.

Sri K. H. PATIL.— Sir, I beg to move:

"That in sub-clause (i) after the words 'in public interest to establish' the words 'either by the State Government or by any person authorised by the State Government' shall be inserted."

Mr. DEPUTY SPAKER.—Amendment moved :

"That in Sub-clause (i) after the words 'in public interest to establish' the words 'either by the State Government or by any person authorised by the State Government' shall be inserted".

ಶ್ರೀ ಕೆ. ಎಚ್. ಪಾಟೀಲ.—ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಈ ಬಗ್ಗೆ ಸಲಹೆ ಮಾಡಿದ್ದರ ಮೇಲೆ ಆದಕ್ಕನುಗುಣವಾಗಿಯೇ ಈ ಒಂದು ಅಮೆಂಡ್ ಮೆಂಟ್‌ನ್ನು ಸೆಕ್ಷನ್ ಇಕ್ಕೆ ತಂದಿದ್ದೇನೆ. ಆದುದರಿಂದ ಈ ಬಗ್ಗೆ ಅವರು ಹೆಚ್ಚು ವ್ಯಾಖ್ಯಾನ ಮಾಡದೇ ಈ ಅಮೆಂಡ್‌ಮೆಂಟ್‌ನ್ನು ಒಪ್ಪುತ್ತಾರೆಂದು ನಾನು ನಂಬಿದ್ದೇನೆ.

ಶ್ರೀ ಎಚ್. ಎಸ್. ಸಿದ್ದಪ್ಪ.— ಇದರಲ್ಲಿ 'any person authorised' ಅಂತ ಇದೆ. ಅದಕ್ಕೆ ಬದಲಾಗಿ 'any individual agriculturist' ಅಂತ ಸೇರಿಸಿ. ಏತಕ್ಕೆಂದರೆ ನಿಮ್ಮ ಹತ್ತಿರ ಲೈಸನ್ಸ್ ತೆಗೆದುಕೊಳ್ಳಬೇಕಾದರೆ ಲಂಚ ರುಷುವತ್ತಿಗೆ ಕಾರಣವಾಗುತ್ತದೆ.

ಶ್ರೀ ಕೆ. ಎಚ್. ಪಾಟೀಲ್ :— ಈಗ ತಂದಿರ ತಕ್ಕಂಥ ಅಮೆಂಡ್‌ಮೆಂಟ್ ಸರಿಯಾಗಿದೆ. "Any person authorised by State Government" ಇದೇ ಸರಿಯಾಗಿದೆ.

Mr. DEPUTY SPEAKER.— The question is :

"In sub-clause (i) after the words 'in public interest to establish' the words 'either by the State Government or by any person authorised by the State Government' shall be inserted."

The amendment was adopted.

Mr. DEPUTY SPEAKER : The question is :

'That clause 3, as amended, do stand part of the Bill"

The motion was adopted.

Clause 3, as amended, was added to the Bill.

Clause 4 to 11

Mr. DEPUTY SPEAKER.— The question is :

" That clauses 4 to 11 both inclusive do stand part of the Bill.; "

The motion was adopted.

Clauses 4 to 11 both inclusive were added to the Bill.

Clause I etc.

Mr. DEPUTY SPEAKER : The question is :

that Clause 1, The long Title Preamble and the Enacting Formula do stand part of the Bill.

The motion was adopted.

Clause 1, The Long Title, the Preamble and the Enacting Formula were added to the Bill.

Motion to pass.

Sri K. H. PATIL.— Sir, I beg to move :

That the Mysore Seed Farms Bill 1973 as amended be passed.

Mr. DEPUTY SPEAKER.— The question is :

that the Mysore Seed Farms Bill 1973 as amended be passed.

The Motion was adopted and the Bill, as amended was passed.

MYSORE PRIVATE EDUCATIONL INSTITUTIONS (DISCIPLINE AND CONTROL BILL 1973.)

Motion to consider

Mr. Deputy Speaker.— The next Bill is the Mysore Private Educational Institutions (Discipline and Control) Bill 1973.

"I have received the recommendation from the Governor under article 207 (3) of the Constitution that the Mysore Private Educational Institutions (discipline and Control) Bill 1973 be considered by the Legislative Assembly."

Sri. A. R Badarinarayan (Minister for Education).—

Sir, I beg to move:

"That the Mysore private Educational Institutions (Discipline and Control) Bill 1973 be taken into consideration,"

Mr .Deputy Speaker.— Motion moved:

"That the Mysore Private Educational Institutions (Discipline and Control) Bill 1973 be taken into consideration."

† ಶ್ರೀ ಎ. ಆರ್. ಬದರಿನಾರಾಯಣ— ಮಾನ್ಯ ಅಧ್ಯಕ್ಷರೇ, ಮೈಸೂರು ರಾಜ್ಯದ ಖಾಸಗಿ ವಿದ್ಯಾಸಂಸ್ಥೆಗಳ ಶಿಸ್ತು ಮತ್ತು ಹತೋಟಿ ಮಸೂದೆ ೧೯೭೩, ಈ ಮಸೂದೆಯನ್ನು ತಮ್ಮ ಅವಗಾಹನೆಗೆ ತಂದಿದ್ದೇನೆ ಮತ್ತು ಮಂಡಿಸಿದ್ದೇನೆ. ಮೈಸೂರು ರಾಜ್ಯದಲ್ಲಿ ಸುಮಾರು ನರ್ಸರಿ ಸ್ಕೂಲುಗಳನ್ನು ಖಾಸಗಿ ವಿದ್ಯಾಸಂಸ್ಥೆಗಳು ನಡೆಸತಕ್ಕಂಥಾದ್ದು ೬೮೩, ಪ್ರಾಥಮಿಕ ಶಾಲೆಗಳು ೧೩೪೮, ಪ್ರೌಢಶಾಲೆಗಳು ೧೩೬೧, ಜೂನಿಯರ್ ಕಾಲೇಜುಗಳು ೧೯೯, ಟೀಚರ್ಸ ಟ್ರೈನಿಂಗ್ ಇನ್ಸ್‌ಟ್ಯೂಟ್‌ಗಳು ೭೦ ಮತ್ತು ಬಿ ಇ. ಡಿ. ಕಾಲೇಜುಗಳು ೨೧ ಇವೆ. ಇಷ್ಟು ಖಾಸಗಿ ವಿದ್ಯಾಸಂಸ್ಥೆಗಳು ಮೈಸೂರು ರಾಜ್ಯದಲ್ಲಿ ಇವೆ. ಇಷ್ಟು ಖಾಸಗಿ ಸಂಸ್ಥೆಗಳು ನಡೆಯುತ್ತಿರಬೇಕಾದರೆ, ಈ ಖಾಸಗಿ ಸಂಸ್ಥೆಗಳ ಮ್ಯಾನೇಜ್‌ಮೆಂಟಿನವರು ಉಪಾಧ್ಯಾಯರ ಬಗ್ಗೆ ಯಾವ ನ್ಯಾಯ ನೀತಿಯಿಂದ ವರ್ತಿಸಬೇಕೋ ಹಾಗೆ ವರ್ತಿಸುತ್ತಿಲ್ಲ. ಅವರನ್ನು ಕೆಲಸದಿಂದ ನಿವೃತ್ತಿ ಮಾಡತಕ್ಕಂಥಾದ್ದು ಇಲ್‌ಲೀಗಲ್ ಆಗಿ ನಿವೃತ್ತಿಗೊಳಿಸತಕ್ಕಂಥಾದ್ದು ಮತ್ತೆ ಅವರು ಸರ್ಕಾರಕ್ಕೆ ಮತ್ತು ವಿಶ್ವವಿದ್ಯಾನಿಲಯಕ್ಕೆ ಹಾಗೂ ಡಿಪಾರ್ಟಮೆಂಟಿನ ಮುಖ್ಯವಾದಂತ ಅಧಿಕಾರಿಗಳಿಗೆ ಅರ್ಜಿಗಳನ್ನು ಹಾಕಿಕೊಂಡಿದ್ದು ಈ ಎಲ್ಲಾ ಅಧಿಕಾರಿಗಳಿಂದ ಮತ್ತು ವಿಶ್ವವಿದ್ಯಾನಿಲಯ ಮತ್ತು ಸರ್ಕಾರದಿಂದ ಅವರನ್ನು ಪುನಃ ಕೆಲಸಕ್ಕೆ

ತೆಗೆದುಕೊಳ್ಳಬೇಕೆಂದು ತೀರ್ಮಾನ ಕೊಟ್ಟರೂ ಕೂಡ ಅವರನ್ನು ಕೆಲಸಕ್ಕೆ ತೆಗೆದು ಕೊಳ್ಳದೆ ಸರ್ಕಾರ ಮತ್ತು ಸಂಸ್ಥೆಗಳು ಏನು ತೀರ್ಮಾನ ಕೊಟ್ಟರೂ ಧಿಕ್ಕಾರಮಾಡಿ ಅವರನ್ನು ಕೆಲಸಕ್ಕೆ ತೆಗೆದುಕೊಳ್ಳದೆ ಇರತಕ್ಕಂಥ ಪರಿಸ್ಥಿತಿಯನ್ನು ಅನೇಕ ಉಪಾಧ್ಯಾಯರುಗಳು ಸರ್ಕಾರದವರ ಗಮನಕ್ಕೆ ತಂದು ಸರ್ಕಾರವನ್ನು ಕೇಳಿದಾಗ ಮತ್ತು ನನ್ನ ಹಾಗೂ ಮಾನ್ಯ ಮುಖ್ಯಮಂತ್ರಿಗಳ ಮುಂದೆ ಈ ವಿಚಾರ ಬಂದಾಗ ಸರ್ಕಾರಕ್ಕೆ ಗ್ರಾಂಟ್ ಇನ್‌ಏಡ್ ಕೋಡ್, ರೂಲ್ಸ್ ಪ್ರಕಾರ ಎರಡು ಅಸ್ತ್ರಗಳು ಇದ್ದದ್ದು, ಒಂದು ಅಂಥ ಪ್ರೈವೇಟ್ ಮ್ಯಾನೇಜಮೆಂಟಗಳನ್ನು ಡೀ ರೆಕಗ್‌ನೈಸ್ ಮಾಡತಕ್ಕಂಥಾದ್ದು ಮತ್ತು ಗ್ರಾಂಟ್ ಕೊಡತಕ್ಕಂಥಾದ್ದನ್ನು ನಿಲ್ಲಿಸತಕ್ಕದ್ದು, ಈ ಎರಡು ಅಧಿಕಾರ ಮಾತ್ರ ಸರ್ಕಾರಕ್ಕೆ ಇರತಕ್ಕದ್ದು. ಈ ಎರಡು ಅಧಿಕಾರಗಳನ್ನು ಚಲಾಯಿಸಿದರೆ ಮ್ಯಾನೇಜಮೆಂಟ್‌ನವರಿಗೆ ಯಾವ ರೀತಿಯಿಂದಲೂ ಪರಿಣಾಮವಾಗುವುದಿಲ್ಲ ಅದರಿಂದ ಅಧ್ಯಾಪಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ ಎನ್ನುವ ದೃಷ್ಟಿಯಿಂದ ಮತ್ತು ಸರ್ಕಾರಕ್ಕೆ ಸಾಕಷ್ಟು ಅಧಿಕಾರ ಇಲ್ಲದೆ ಇರುವುದರಿಂದ ಈ ವಿಷಯವನ್ನು ಪರಿಶೀಲನೆಮಾಡುವುದಕ್ಕಾಗಿ ಸರ್ಕಾರ ಶ್ರೀ ಮಲ್ಲಾರಾಧ್ಯರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ನೇಮಕಮಾಡಿತು. ಸಮಿತಿಯ ಶಿಫಾರಸನ್ನು ವಿಮರ್ಶೆಮಾಡಿ ಅದು ಬಿಲ್ ರೂಪದಲ್ಲಿ ಬಂದು ಪಾಸ್ ಆಗುವವರೆಗೆ ಅನೇಕ ಅಧ್ಯಾಪಕರುಗಳಿಗೆ ತೊಂದರೆಯಾಗುವುದರಿಂದ ಆ ತೊಂದರೆಯನ್ನು ನಿವಾರಣೆ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ಹಾಗೂ ನಾನು ಸೇರಿ ಕೂಡಲೇ ಒಂದು ಸುಗ್ರೀವಾಜ್ಞೆಯನ್ನು ತಂದೆವು. ಅಧ್ಯಾಪಕರುಗಳನ್ನು ನಿವೃತ್ತಿ ಮಾಡದಂತೆ ಅವರಿಗೆ ರಕ್ಷಣೆ ಮತ್ತು ಪರಿಹಾರ ದೊರೆಯಬೇಕು, ನ್ಯಾಯ ದೊರಕಬೇಕು ಅನ್ನತಕ್ಕಂಥ ದೃಷ್ಟಿಯಿಂದ ಟ್ರಿಬ್ಯೂನಲ್ ನೇಮಕಮಾಡಿ ಅವರು ತೀರ್ಮಾನಮಾಡಬೇಕು. ಅವರ ತೀರ್ಮಾನದಂತೆ ನಡೆದುಕೊಳ್ಳದೆ ಮತ್ತು ನೇಮಕಮಾಡಿಕೊಳ್ಳದೆ ಒಂದುವೇಳೆ ಅದನ್ನು ಪಾಲಿಸದೆ ಹೋದರೆ ಒಂದುನೂರು ರೂಪಾಯಿ ಫೈನ್, ೩ ತಿಂಗಳ ಸಾದಾ ಸಜವನ್ನು ವಿಧಿಸಬೇಕೆಂದು ಸುಗ್ರಿವಾಜ್ಞೆಯಲ್ಲಿ ಇದೆ. ಆ ಸುಗ್ರೀವಾಜ್ಞೆ ಕಾನೂನಾಗಿ ಪರಿವರ್ತನೆ ಆಗಬೇಕೆಂದು ಈ ಒಂದು ಮಸೂದೆಯನ್ನು ಈ ಸಭೆಯ ಮುಂದೆ ತಂದಿದೆ. ಇದರಲ್ಲಿರುವ ಉದ್ದೇಶ ಏನು ಎಂದರೆ ಮ್ಯಾನೇಜ್‌ಮೆಂಟಗಳು ಹಾಗೂ ಖಾಸಗಿ ವಿದ್ಯಾಸಂಸ್ಥೆಗಳು ಒಳ್ಳೆಯ ಶಿಸ್ತಿನಿಂದ ನಡೆದುಕೊಳ್ಳಲು ಅವರಮೇಲೆ ಹತೋಟಿ ಇರಬೇಕು ಎನ್ನುವುದೇ ಆಗಿದೆ. ಇದರ ವ್ಯಾಪಕತ್ವ ಇಡೀ ಮೈಸೂರು ರಾಜ್ಯಕ್ಕೆ ಇದ್ದು ಇದು ಕೂಡಲೇ ಜಾರಿಗೆ ಬರತಕ್ಕಂಥದ್ದು ಇದೆ. ಇದಕ್ಕೆ ಡೆಫಿನಿಷನ್ಸ್ ಇವೆ. ಇದರಲ್ಲಿ ಬೋರ್ಡ ಆಫ್ ಮ್ಯಾನೇಜಮೆಂಟ್ ಎಂದರೆ ಮ್ಯಾನೇಜರ್, ಕ್ಲಾರ್ಕ್ ಎಂದು ಏನು ಇದೆ ಅದನ್ನೆಲ್ಲಾ ಈಗ ಇಲ್ಲಿ ಹೇಳಬೇಕಾಗಿಲ್ಲ. ಇದರಲ್ಲಿ ಮುಖ್ಯವಾದ ವಿಚಾರ ಎಂದರೆ ಈ ಕಾನೂನು ಪ್ರಕಾರ ಯಾವುದೇಖಾಸಗೀ ಸಂಸ್ಥೆ; ಆ ಸಂಸ್ಥೆಯಲ್ಲಿ ನೇಮಕಗಳನ್ನು ಮಾಡತಕ್ಕದ್ದು, ಅವರ ಒಂದು ಕ್ವಾಲಿಫಿಕೇಷನ್ ಏನು, ಅವರ ಸಂಬಳ ಏನು, ಎನ್ನತಕ್ಕ ವಿಚಾರದಲ್ಲಿ ಒಂದು ಷಡ್ಯೂಲ್‌ಅನ್ನು ತಯಾರು ಮಾಡತಕ್ಕದ್ದು ಈ ಮಸೂದೆಯಲ್ಲಿದೆ ಮತ್ತು ಅಧ್ಯಾಪಕರುಗಳಿಗೆ ಕೋಡ್ ಆಫ್ ಕಾಂಡಕ್ಟ, ಕಂಡೀಷನ್ಸ್ ಆಫ್ ಸರ್ವೀಸ್ ಬಗ್ಗೆ

ರೂಲ್ಸ ಮತ್ತು ರೆಗ್ಯುಲೇಷನ್ಸ್, ಮಾಡತಕ್ಕದ್ದು, ಈ ಒಂದು ಕಾನೂನು ಬಂದು ಮೂರು ತಿಂಗಳೊಳಗೆ ಷೆಡ್ಯೂಲ್ ಮತ್ತು ರೂಲ್ಸಗಳನ್ನು ಸಂಬಂಧಪಟ್ಟ ಇನ್ಸ್ಟಿಟ್ಯೂಷನ್, ಅವರು ಇಂಜನಿಯರಿಂಗ್ ಕಾಲೇಜು ಆದರೆ ಡೈರೆಕ್ಟರ್ ಆಫ್ ಟೆಕ್ನಿಕಲ್ ಎಜುಕೇಷನ್, ಜೂನಿಯರ್ ಕಾಲೇಜುಗಳು ಆದರೆ, ಡೈರೆಕ್ಟರ್ ಆಫ್ ಪಬ್ಲಿಕ್ ಇನ್ಸ್ಟ್ರಕ್ಷನ್‌ಗೆ ಕಳುಹಿಸತಕ್ಕದ್ದು ಎಂದು ಈ ಮಸೂದೆಯಲ್ಲಿ ನಮೂದು ಮಾಡಿದೆ. ಒಂದು ವೇಳೆ ನಿಬಂಧನೆಗಳನ್ನು ಬದಲಾಯಿಸುವುದಾದರೆ, ಆರು ತಿಂಗಳೊಳಗೆ ಅದನ್ನು ಸಂಬಂಧಪಟ್ಟವರಿಗೆ ತಿಳಿಸುವುದು ಎನ್ನುವುದು ಇದರಲ್ಲಿದೆ. ಮತ್ತು ಯಾರು ಯಾರು ಅಧ್ಯಾಪಕರುಗಳು ಇದ್ದಾರೆ, ಅವರಿಗೆ ಈ ರೂಲ್ಸ್‌ಗಳ ಒಂದು ಕಾಫಿಯನ್ನು ಕೊಡತಕ್ಕದ್ದು ಇದೆ. ಇಂಥ ಒಂದು ವಿಶೇಷವಾದಂಥ ಅವಕಾಶ ಈ ಮಸೂದೆಯಲ್ಲಿದೆ ಆಮೇಲೆ, ಇವರನ್ನು ಕೆಲಸದಿಂದ ನಿವೃತ್ತಿ ಮಾಡಬೇಕಾಗಿದ್ದರೆ, ಕೆಲವು ಸರ್ವೀಸ್ ಕಂಡೀಷನ್ಸ್‌ಗೆ ವಿರೋಧವಾಗಿ ಡಿಸ್‌ಮಿಸ್ ಮಾಡಿದ್ದೇ ಆಗಲೀ, ಕೆಲಸದಿಂದ ತೆಗೆದುಹಾಕಿದ್ದೇ ಆಗಲೀ, ಆದರೆ ಅದಕ್ಕೆ ವಿಚಾರಣೆಯಾಗಬೇಕು. ಅವರ ಮೇಲೆ ಏನು ಆರೋಪಣೆ ಇದೆ, ಅಧ್ಯಾಪಕರೇ ಆಗಲೀ ಬೇರೆಯವರೇ ಆಗಲೀ, ಅವರ ಮೇಲೆ ಒಂದು ಆರೋಪವನ್ನು ಹೊರಿಸಿದರೆ, ಅದನ್ನು ರುಜುವಾತು ಮಾಡಬೇಕಾದಂಥಾದ್ದು ಮೊದಲನೆಯದು. ರುಜುವಾತದ ಮೇಲೆ ಅವರಿಗೆ ಏನು ಶಿಕ್ಷೆ ಕೊಡಬೇಕು, ಸಸ್ಪೆನ್‌ಷನ್‌ನಲ್ಲಿ, ಇಡಬೇಕೇ, ಟರ್ಮಿನೇಷನ್ ಮಾಡಬೇಕೇ, ಇನ್‌ಕ್ರಿಮೆಂಟ್ಸ್ ನಿಲ್ಲಿಸಬೇಕೇ ಯಾವ ತರಹದ ಶಿಕ್ಷೆ ಕೊಡಬೇಕು ಮ್ಯಾನೇಜ್‌ಮೆಂಟಿನವರು ಏನು ಯೋಚನೆ ಮಾಡಿದ್ದಾರೆ, ಈ ವಿಚಾರದಲ್ಲಿ ತಪ್ಪಿತಸ್ಥರು ಹೇಳಿಕೆಯನ್ನು ಕೊಡುವುದಾದರೆ, ಅದನ್ನೂ ವಿಮರ್ಶೆ ಮಾಡಿ ಸರಿಯಾದಂಥ ತೀರ್ಮಾನಕ್ಕೆ ಬಂದಮೇಲೆ ಯಾವ ಶಿಕ್ಷೆಯನ್ನು ವಿಧಿಸಬೇಕು ಎನ್ನತಕ್ಕದ್ದು ಇದೆ. ಮತ್ತೆ ಇನ್ನೊಂದು ಯಾರು ಕ್ರಿಮಿನಲ್ ಕೇಸ್‌ಸ್‌ನಲ್ಲಿ ಇನ್‌ವಾಲ್ವ್ ಆಗಿದ್ದಾರೋ ಅಂಥವರನ್ನು ಎನ್‌ಕ್ವಯರಿ ಇಲ್ಲದೆ ಡಿಸ್‌ಮಿಸ್ ಮಾಡುವುದಕ್ಕೆ ಅವಕಾಶವಿದೆ. ಮ್ಯಾನೇಜ್‌ಮೆಂಟಿನವರು ಸಂಬಂಧಪಟ್ಟ ನೌಕರರಿಗೆ ಯಾವ ರೀತಿಯ ಆರ್ಡರ ಮಾಡಿದ್ದಾರೆ, ಆ ಆರ್ಡರ್‌ಅನ್ನು ಅವನಿಗೆ ತಿಳಿಸತಕ್ಕದ್ದು ಇದೆ. ಆ ಆರ್ಡರ್ ಮೇಲೆ ಅವನಿಗೆ ಅಪೀಲು ಮಾಡತಕ್ಕ ಒಂದು ಅವಕಾಶವನ್ನು ಇದರಲ್ಲಿ ಕಲ್ಪಿಸಲಾಗಿದೆ. ಅಪೀಲು ಮಾಡಿದ್ದರೆ, ಟ್ರಿಬ್ಯುನಲ್ ಯಾವುದು ಆಗಬೇಕು. ಪ್ರತ್ಯೇಕವಾದಂಥ ಟ್ರಿಬ್ಯುನಲ್ ಬೇಕೇ, ಪ್ರತ್ಯೇಕ ಟ್ರಿಬ್ಯುನಲ್ ಮಾಡಿದರೆ ಎಷ್ಟು ಅರ್ಜಿಗಳು ಬರುತ್ತವೆ. ಎಷ್ಟು ಜಡ್ಜಗಳನ್ನು ನೇಮಕ ಮಾಡಬೇಕು ಎನ್ನುವುದನ್ನು ಈಗಲೇ ಹೇಳಲಿಕ್ಕೆ ಸಾಧ್ಯವಿಲ್ಲದೆ ಇದ್ದುದರಿಂದ ಜಿಲ್ಲಾ ಜಡ್ಜಗಳಿಗಿಂತ ಕಡಿಮೆ ದರ್ಜೆಯಿಲ್ಲದ ಪ್ರತಿಯೊಂದು ಜಿಲ್ಲೆಯಲ್ಲಿರತಕ್ಕ ಜಿಲ್ಲಾ ಜಡ್ಜಗಳನ್ನು ಇದಕ್ಕೋಸ್ಕರ ನೇಮಕ ಮಾಡಲಾಗುತ್ತದೆ. ಅವರು ಅಲ್ಲಿ ಏನೇನು ತೊಂದರೆಗಳಾಗಿದೆ, ಎಂದು ಅವರ ಮುಂದೆ ಇದನ್ನೆಲ್ಲಾ ವಿಚಾರ ಮಾಡುವುದಕ್ಕೆ ಅವಕಾಶ ಕೊಡತಕ್ಕದ್ದು ಇದೆ. ಆದಾದ ಮೇಲೆ, ಅಪೀಲಿನ ಒಂದು ಮಟ್ಟವನ್ನು ನೋಡಿಕೊಂಡು ಪ್ರತ್ಯೇಕವಾದ

ಟ್ರಿಟ್ಯುನಲ್‌ಅನ್ನು ನೇಮಕ ಮಾಡತಕ್ಕದ್ದು ಇದೆ. ಆ ಟ್ರಿಬ್ಯುನಲ್‌ನಲ್ಲಿ ಡಿಸ್ಟ್ರಿಕ್ಟ್ ಜಡ್ಜ್ ಇದ್ದರೆ ಹೆಚ್ಚಿನ ಖರ್ಚು ಬರುವುದಿಲ್ಲ. ಒಂದು ವೇಳೆ ಪ್ರತ್ಯೇಕವಾದ ಟ್ರಿಬ್ಯುನಲ್ ಮಾಡಿದರೆ ಅದಕ್ಕೆ ನಮ್ಮ ಸರ್ಕಾರ ಕನ್‌ಸಾಲಿಡೇಟೆಡ್ -ಫಂಡಿನಿಂದ ಖರ್ಚನ್ನು ವಹಿಸಬೇಕಾಗುತ್ತದೆ. ಸಿವಿಲ್ ಪ್ರೊಸೀಜರ್ ಕೋಡ್‌ನಲ್ಲಿ ಇವರಿಗೆ ಯಾವ ಅಧಿಕಾರ ಇದೆಯೋ ಅದನ್ನು ಇಲ್ಲಿಯೂ ಇವರಿಗೆ ಕೊಡತಕ್ಕದ್ದು ಇದೆ. ಕೋರ್ಟಿನ ರೀತಿಯಲ್ಲಿ ಟ್ರಿಬ್ಯುನಲ್‌ಅನ್ನು ನೇಮಕ ಮಾಡಿದ್ದೇವೆ. ಅಲ್ಲದೆ ಮ್ಯಾನೇಜರ್, ಮ್ಯಾನೇಜ್‌ಮೆಂಟ್, ಅಂದರೆ ಏನು ಎನ್ನುವುದನ್ನು ಡಿಫೈನ್ ಮಾಡಿದ್ದೇವೆ. ಯಾರೇ ಶಪಿತಸ್ಥರಾಗಲಿ ಅವರಿಗೆ ಏನು ಪೆನಾಲ್ಟಿ ವಿಧಿಸಬೇಕು ಎನ್ನುವುದಕ್ಕೆ, ಮೂರು ತಿಂಗಳು ಸಾದಾ ಸಜ, ಅಥವಾ ನೂರು ರೂಪಾಯಿಗಳವರೆಗೆ ಫೈನ್ ಹಾಕತಕ್ಕದ್ದು ಇದೆ. ಅಥವಾ ಇವೆರಡನ್ನು ಹಾಕತಕ್ಕದ್ದೂ ಇದೆ. ಕಾನೂನು ತಪ್ಪಿ ಅಫೆನ್ಸ್ ಮಾಡಿದರೆ, ಅದು ಅಧಿಕಾರಿಗಳಿಗೆ ಕಂಪ್ಲೇಂಟ್ ಮೂಲಕ ಹೋಗಬೇಕು ಎನ್ನತಕ್ಕದ್ದು ಮಾಡಿದೆ. ಇದಕ್ಕೆ ಬೇಕಾಗಿರತಕ್ಕ ರೂಲ್ಸ್‌ಗಳನ್ನು ಮಾಡತಕ್ಕ ಅಧಿಕಾರವನ್ನು ಸರ್ಕಾರಕ್ಕೆ ಕೊಡತಕ್ಕದ್ದು, ಇಷ್ಟೆಲ್ಲಾ ಇರುವುದನ್ನು ಸಭೆಯ ಮುಂದೆ ತಮ್ಮ ಒಪ್ಪಿಗೆಗಾಗಿ ಬಂದಿರುವ ಈ ಮೈಸೂರು ರಾಜ್ಯದ ಖಾಸಗೀ ವಿದ್ಯಾಸಂಸ್ಥೆಗಳ ಮಸೂದೆಯ ಅಭಿಪ್ರಾಯ. ಇದರಲ್ಲಿ ಹೆಚ್ಚಿನ ವಿವಾದಾಸ್ಪದವಾದ ವಿಚಾರಗಳು ಏನೂ ಇಲ್ಲ. ಇದನ್ನು ತಾವೆಲ್ಲರೂ ಸ್ವಾಗತ ಮಾಡುತ್ತೀರಿ ಎಂದು ಹೇಳಿ, ಇದರ ಬಗ್ಗೆ ಆರ್ಡಿನನ್ಸ್ ಏನು ಹೊರಡಿಸಿದ್ದೇವೆ, ಅದು ಈ ಕಾನೂನು ಬಂದಮೇಲೆ ಸೂಪರ್‌ಸೀಡ್ ಆಗುತ್ತದೆ ಎಂದು ಹೇಳಿ, ಮತ್ತೊಂದು ಸಾರಿ ಇದನ್ನು ಒಳ್ಳೆಯ ದೃಷ್ಟಿಯಿಂದ ತಂದಿದ್ದೇವೆ, ತಾವು ಸ್ವಾಗತ ಮಾಡಿ ಇದಕ್ಕೆ ತಮ್ಮ ಒಪ್ಪಿಗೆಯನ್ನು ಕೊಡಬೇಕು ಎಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

†ಟಿ. ಆರ್. ಶಾಮಣ್ಣ (ಕೋಟೆ).— ಮಾನ್ಯ ಸಭಾಧ್ಯಕ್ಷರೇ, ವಿದ್ಯಾಭ್ಯಾಸದ ಬಗ್ಗೆ ಒಂದು ಮುಖ್ಯವಾದಂಥ ಮಸೂದೆ ಬಂದಿದೆ, ಅದನ್ನು ನಾನು ಸ್ವಾಗತಿಸುತ್ತಾ ಕೆಲವು ಸಲಹೆಗಳನ್ನು ಮತ್ತು ಕೆಲವು ಟೀಕೆಗಳನ್ನು ಈ ಸಂದರ್ಭದಲ್ಲಿ ಮಾಡಲು ಇಷ್ಟಪಡುತ್ತೇನೆ. ನನಗೆ ಇದರ ವಿಚಾರದಲ್ಲಿ ಮಾತನಾಡುವುದಕ್ಕೆ ಸ್ವಲ್ಪ ಅರ್ಹತೆ ಇದೆ ಎಂದು ತಿಳಿದುಕೊಂಡಿದ್ದೇನೆ ನಾನು ೩೬ ವರ್ಷಗಳ ಕಾಲ ಉಪಾಧ್ಯಾಯನಾಗಿ ಮತ್ತು ಅನೇಕ ಖಾಸಗಿ ಶಾಲೆಗಳಿಗೆ ಸಂಬಂಧಪಟ್ಟವನಾಗಿದ್ದೇನೆ. ಮತ್ತು ಒಂದು ಶಾಲೆಯನ್ನು ನಡೆಸಿಕೊಂಡು ಬಂದಿರುತ್ತೇನೆ. ಆದ್ದರಿಂದ ಇದರ ಬಗ್ಗೆ ನನಗೆ ಸ್ವಲ್ಪ ಅನುಭವ ಇದೆ ಎಂದು ತಿಳಿದುಕೊಂಡಿದ್ದೇನೆ. ಈಗ ನಮ್ಮ ಶಾಲೆಗಳಲ್ಲಿ, ಖಾಸಗೀ ಶಾಲೆಗಳ ಮಹತ್ವ ಎಷ್ಟು ಇದೆ ಎನ್ನುವುದರ ಬಗ್ಗೆ ಆಗಲೇ ಮಾನ್ಯ ಸಚಿವರು ಹೇಳಿರತಕ್ಕ ಅಂಕಿ ಅಂಶಗಳಿಂದ ಗೊತ್ತಾಗುತ್ತದೆ; ನಮ್ಮ ರಾಜ್ಯದಲ್ಲಿ ಒಟ್ಟು ವಿದ್ಯಾಸಂಸ್ಥೆಗಳ ಪೈಕಿ ಅರ್ಧಕ್ಕಿಂತ ಹೆಚ್ಚು ಭಾಗ ಶಾಲೆಗಳನ್ನು ಖಾಸಗೀ ಸಂಸ್ಥೆಗಳವರು ನಡೆಸುತ್ತಾರೆಂದು ಹೇಳಿದರೆ ತಪ್ಪಾಗಲಾರದು, ಎಂದು ನನ್ನ ಭಾವನೆ. ಈ ಖಾಸಗೀ

ಶಾಲೆಗಳನ್ನು ಮೂರು ಭಾಗಗಳನ್ನಾಗಿ ವಿಂಗಡಿಸಬಹುದು ಎಂದು ನಾನು ಲೆಕ್ಕ ಹಾಕಿದ್ದೇನೆ. ೧. ಸರಿಯಾದಂಥ ಆಡಳಿತ ವರ್ಗವನ್ನು ಗವರ್ನಿಂಗ್ ಕೌನ್ಸಿಲ್ ಅನ್ನು ಇಟ್ಟುಕೊಂಡು, ಒಂದು ನೀತಿ ನಿಯಮವನ್ನು ಇಟ್ಟುಕೊಂಡು ಶಾಲೆಗಳನ್ನು ನಡೆಸಿಕೊಂಡು ಹೋಗುವವರು ಒಂದನೆಯ ವರ್ಗಕ್ಕೆ ಸೇರುತ್ತಾರೆ ನ್ಯಾಷನಲ್ ಎಜ್ಯುಕೇಷನ್ ಸೊಸೈಟಿಯವರು, ಶಿವಮೊಗ್ಗದ ರಾಷ್ಟ್ರೀಯ ವಿದ್ಯಾಸಂಸ್ಥೆಯವರು, ಮತ್ತು ಉತ್ತರ ಕರ್ನಾಟಕದಲ್ಲಿ ಕೆಲವು ಶಾಲೆಗಳೂ ಒಳ್ಳೆಯ ರೀತಿಯಲ್ಲಿ ಆಡಳಿತವನ್ನು ನಡೆಸಿಕೊಂಡು ಹೋಗುತ್ತವೆಂದು ನಾನು ಕೇಳಿದ್ದೇನೆ, ಅವೆಲ್ಲಾ ಈ ಒಂದನೆಯ ವರ್ಗದಲ್ಲಿ ಸೇರುತ್ತವೆ. ೨. ಕೆಲವು ಶಾಲೆಗಳು ಲಾಭದ ದೃಷ್ಟಿಯಿಂದಲ್ಲ ಆದರೆ ಸರ್ವಾಧಿಕಾರಿಗಳ ಕೈಗೆ ಸಿಕ್ಕಿ ತಮ್ಮ ಇಷ್ಟದ ಪ್ರಕಾರ ಶಾಲೆಗಳನ್ನು ನಡೆಸಿಕೊಂಡು ಹೋಗುತ್ತಾರೆ. ಇವು ಎರಡನೆಯ ದರ್ಜೆಗೆ ಸೇರುತ್ತವೆ. ೩. ಕೆಲವು ಶಾಲೆಗಳು, ಬರೀ ವ್ಯಾಪಾರ ಸಂಸ್ಥೆಗಳಾಗಿ, ಒಂದು ಕಡೆ, ತಂದೆತಾಯಿಗಳನ್ನು ಮತ್ತೊಂದು ಕಡೆ ಸರ್ಕಾರಕ್ಕೆ ಮೋಸ ಮಾಡಿ; ಶೋಷಣೆ ಮಾಡತಕ್ಕಂಥವು ಮೂರನೆಯ ವರ್ಗಕ್ಕೆ ಸೇರುತ್ತವೆ. ಈ ರೀತಿ ಖಾಸಗೀ ಶಾಲೆಗಳನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು. ನಾನು ಅಸೆಂಬ್ಲಿ ಮೆಂಬರ್ ಆಗಿ ೧೯೫೭ ರಲ್ಲಿ ಬಂದಾಗ ವಿದ್ಯಾ ಖಾತೆಗೆ ಬಡ್ಜೆಟ್ ಕೇವಲ ೩೦ ಕೋಟಿ ರೂಪಾಯಿಗಳಷ್ಟು ಇತ್ತು. ಇವತ್ತಿನ ದಿವಸ ಇದು ೬೬ ಕೋಟಿ ರೂಪಾಯಿಗಳವರೆಗೆ ಏರಿದೆ ಬೇರೆ ಯಾವ ಖಾತೆಯೂ ಇಷ್ಟೊಂದು ದುಡ್ಡನ್ನು ಖರ್ಚು ಮಾಡುತ್ತಿಲ್ಲ. ಆದರೂ ನನಗೆ ಒಂದು ವ್ಯಥೆ ಏನೆಂದರೆ, ಇದರಲ್ಲಿ ಸಾಕಾದಷ್ಟು ಪರಿಣಾಮಕಾರಿಯಾದಂಥ ಒಂದು ಕೆಲಸ ಆಗಿಲ್ಲ, ವಿದ್ಯಾಭ್ಯಾಸ ಸಾಕಾದಷ್ಟು ಪ್ರಯೋಜನಕಾರಿಯಾಗಿಲ್ಲ ಎನ್ನುವುದು. ಕ್ವಾಂಟಿಟೇವ್ ಹಾಗೆ ಬೆಳೆ ಬೆಳೆಯುತ್ತಿದೆಯೋ ಹೊರತು, ಕ್ವಾಲಿಟೇವ್ ಆಗಿ ಬೆಳೆಯುತ್ತಾ ಇಲ್ಲ. ನಾನು ಉಪಾಧ್ಯಾಯರನ್ನು ಮೂರು ಭಾಗ ಮಾಡಲು ಇಷ್ಟಪಡುತ್ತೇನೆ. ಕೆಲವರು ಶ್ರದ್ಧೆಯಿಂದ ಪಾಠ-ಪ್ರವಚನ ಮಾಡಬೇಕೆಂದು ಮನಸಿಟ್ಟುಕೊಂಡು ಅದರಂತೆ ಶ್ರಮಿಸುವವರು ಒಂದನೆಯ ಪಂಗಡದವರು. ಎರಡನೆಯ ಪಂಗಡದವರು ಯಾರೆಂದರೆ ಒಬ್ಬ ಅಸೆಂಬ್ಲಿ ಮೆಂಬರನ್ನು ಅಥವಾ ಒಬ್ಬ ಅಧಿಕಾರಿಯನ್ನಿಟ್ಟುಕೊಂಡು ರಾಜಕೀಯ ವ್ಯಕ್ತಿಯಾಗಿ ವಿದ್ಯಾಭ್ಯಾಸದ ಕಡೆ ಹೆಚ್ಚು ಗಮನ ಕೊಡುವುದಿಲ್ಲ. ಮೂರನೆಯ ಪಂಗಡದವರು ತಾವು ಟೀಚರ್ ಬೈ ಛಾನ್ಸ್ ನಾಟ್ ಬೈ ಛಾಯ್ಸ್ ಎಂಬ ಭಾವನೆಯಿಂದ ತಮಗೆ ಅರ್ಹತೆಯಿರಲಿ, ಇಲ್ಲದಿರಲಿ, ಉಪಾಧ್ಯಾಯರಾಗಿರುವವರು. ಈ ಮೂರು ಬಗೆಯ ಉಪಾಧ್ಯಾಯರಿದ್ದಾರೆ. ಒಂದು ವಿಚಾರ ಗಮನಕ್ಕೆ ತರಬೇಕಾಗಿದೆ, ಮಂತ್ರಿಗಳಿಗೆ ಅನುಭವವಿದೆ. ಸರಿಯಾದ ರೀತಿಯಲ್ಲಿ ಉತ್ತಮವಾದ ವಿದ್ಯಾಭ್ಯಾಸ ನೀಡಬೇಕಾದರೆ ಬರೀ ಫೀಜಿನಿಂದ, ದಾನಧರ್ಮದಿಂದ ವಿದ್ಯಾ ಶಾಲೆ ನಡೆಸುವುದಕ್ಕಾಗುವುದಿಲ್ಲ, ಈಗ ದಾನಧರ್ಮ ಕಡಿಮೆಯಾಗಿದೆ. ಒಳ್ಳೆಯ ವಿದ್ಯಾಭ್ಯಾಸ ಕೊಡಬೇಕಾದರೆ ಉತ್ತಮವಾದ ಶಾಲೆಗಳಿಗೆ ಬಹಳ ಕಷ್ಟವಿದೆ. ಇದು ಮಾನ್ಯ ಮಂತ್ರಿಗಳಿಗೆ ಅರಿವಾಗಿರಬಹುದು. ಆದುದರಿಂದ ಈ ಸಂದರ್ಭದಲ್ಲಿ ಅರಿಕೆ ಮಾಡುವುದು ಬಹಳ ಉತ್ತಮವಾಗಿ ಕೆಲಸ ಮಾಡುವ ಶಾಲಾ ಕಾಲೇಜುಗಳಿದ್ದರೆ ಅವಕ್ಕೆ ಸಾಕಾದಷ್ಟು ಹಣ ಸರಕಾರ ಕೊಡ

ಬೇಕು, ಇಲ್ಲದಿದ್ದರೆ ಸರಿಯಾದ ರೀತಿಯಲ್ಲಿ ಲೆಕ್ಕಪತ್ರಗಳನ್ನಿಟ್ಟು ತಂದೆ ತಾಯಿಗಳಿಂದ ಹಣ ವಸೂಲು ಮಾಡುವುದಕ್ಕೆ ಅವಕಾಶ ಕೊಡಬೇಕು. ಕಟ್ಟಡದ ನಿಧಿಗೆ ಕೆಲವು ಕಡೆ ಸೇಕಡ ೭೫ ರಷ್ಟು ಮತ್ತೆ ಕೆಲವು ಕಡೆ ಸೇಕಡ ೫೦ ರಷ್ಟು ತೆಗೆದುಕೊಳ್ಳುವರು. ಅಲ್ಲದೆ ಆಫೀಸು ಖರ್ಚು ಬೇರೆ ಬರುವುದು. ಮಿಸ್ ಮ್ಯಾನೇಜಮೆಂಟ್ ಆಗುವುದಕ್ಕೆ ಇದೂ ಒಂದು ಕಾರಣ. ಇದರ ಬಗ್ಗೆ ಯೋಚನೆ ಮಾಡಬೇಕು ಎಜ್ಯುಕೇಷನಲ್ ಬಿಲ್ ಬರುತ್ತದೆಂದು ಹೇಳಿದ್ದಾರೆ. ಇದರ ಬಗ್ಗೆ ಗಮನ ಕೊಡುವರು ಎಂದು ನಂಬುತ್ತೇನೆ.

ಅನೇಕ ಖಾಸಗಿ ಸಂಸ್ಥೆಗಳ ವಿಚಾರ ಗಮನಕ್ಕೆ ಬಂದಿದೆ, ಆಗಲೇ ಹೇಳಿದ ಹಾಗೆ ಸರಕಾರದ ಕಣ್ಣಿಗೆ ಮಣ್ಣೆರಚಿ ಜನರನ್ನು ಶೋಷಣೆ ಮಾಡುತ್ತಿದ್ದಾರೆ. ಲೆಕ್ಕ ಪತ್ರ ಇಡುವಾಗ ಲೋಪದೋಷಗಳನ್ನು ಮಾಡುವರು. ಚೆಕ್ ಸಿಸ್ಟಂ ಜಾರಿಗೆ ತಂದ ತಕ್ಷಣ ಅನುಕೂಲ ಸೇಕಡ ೫೦ ಭಾಗದಷ್ಟಾದರೂ ಹೆಚ್ಚು ಹಣ ಕಸಿದುಕೊಳ್ಳುವ ಪದ್ಧತಿ ಹೋಗಿಲ್ಲ. ಇದರ ಬಗ್ಗೆ ಅನೇಕ ಕಡೆ ದೂರಿದೆ. ಅಕ್ವಿಟೆನ್ಸ್‌ನಲ್ಲಿ ಬರೆಸಿ ಕೊಳ್ಳುವುದೊಂದು, ಕೊಡುವುದೊಂದು, ಈ ರೀತಿಯಿದೆ. ಆದರೆ ಕೆಲಸ ಹೋಗುತ್ತ ದೆಂಬ ಭಯದಿಂದ ಅನೇಕರು ದೂರು ಕೊಡುವುದಿಲ್ಲ. ಅದರಲ್ಲೂ ಸಾಧಾರಣವಾಗಿ ಹೆಣ್ಣುಮಕ್ಕಳು ಉಪಾಧ್ಯಾಯನಿಯರಾಗಿ ಕೆಲಸ ಮಾಡುವ ಕಡೆ ಈ ದೂರು ಹೆಚ್ಚಾಗಿದೆ. ಚೆಕ್ ಸಿಸ್ಟಂ ಇದ್ದರೂ ಜಾಣತನದಿಂದ ಸರಕಾರಕ್ಕೂ ಉಪಾಧ್ಯಾಯರಿಗೂ ಮೋಸಮಾಡುತ್ತಿದ್ದಾರೆ ಎಂದು ಹೇಳಬೇಕಾಗಿದೆ.

ಶ್ರೀ ಎ. ಆರ್. ಬದರೀನಾರಾಯಣ — ಇದಕ್ಕೆ ನಿವಾರಣೆ ?

ಶ್ರೀ ಟಿ ಆರ್. ಶಾಮಣ್ಣ.— ಹೇಳುತ್ತೇನೆ. ಇದಕ್ಕೆ ಟ್ರಿಬ್ಯೂನಲ್ ಅಪಾಯಿಂಟ ಮಾಡಿದರೆ ಕೆಲಸ ಹೋಗುವುದಿಲ್ಲ, ಅಗತ್ಯವಾದ ರಕ್ಷಣೆ ಸಿಕ್ಕುತ್ತದೆ ಎಂಬ ಭರವಸೆ ಇರುವುದರಿಂದ ಟ್ರಿಬ್ಯೂನಲ್ ಮಾಡಿದಾಗ ಸ್ವಲ್ಪ ತೊಂದರೆ ಕಡಮೆಯಾಗಬಹುದು. ದೂರು ಕೊಡಲು ಆಗ ಅವಕಾಶ ದೊರೆಯುವುದು. ಸರಕಾರ ಟ್ರಿಬ್ಯುನಲ್ಲಿಗೆ ಸಂಬಂಧಪಟ್ಟ ಮಸೂದೆಯನ್ನು ಕಾರ್ಯಗತಮಾಡಿದರೆ ಆಗ ತೊಂದರೆ ಸ್ವಲ್ಪ ಕಡಮೆಯಾಗಬಹುದು. ಕೆಲವು ಕಡೆ ನಾನು ಕಂಡಹಾಗೆ ಸಾಕಾದಷ್ಟು ಉಪಾಧ್ಯಾಯರಿರುವುದಿಲ್ಲ. ಅವರು ಕಳ್ಳ ಅಕ್ವಿಟೆನ್ಸ್ ಹಾಕಿ ಹಣ ದುರುಪಯೋಗ ಮಾಡುವರು. ಆಮೇಲೆ ಕೆಲವು ಕಡೆಗಳಲ್ಲಿ ಒಂದು ತರಗತಿಗೆ ೩೫ ವಿದ್ಯಾರ್ಥಿಗಳಾದರೂ ಇರಬೇಕೆಂದಿರುವಾಗ ಫಿಕ್ಟಿಷಸ್ ಆದ ಹೆಸರುಗಳನ್ನು ಬರೆದು, ಕೆಲವರಿಗೆ ಪ್ರೆಸೆಂಟ್ ಮತ್ತೆ ಕೆಲವರಿಗೆ ಅಬ್ಸೆಂಟ ಮಾರ್ಕ್ ಮಾಡಿ ೩೫ ವಿದ್ಯಾರ್ಥಿಗಳಿರುವಂತೆ ತೋರಿಸುವ ಕೆಲವು ಶಾಲೆಗಳಿವೆ. ಉಪಾಧ್ಯಾಯರು ಮ್ಯಾನೇಜ್‌ಮೆಂಟಿನವರು ಹೇಳಿದಹಾಗೆ ಕೇಳಿದರೆ ಮಾತ್ರ ಅವರು ಉಳಿಯಲು ಸಾಧ್ಯ.

ಆಮೇಲೆ ಈ ಫೀಜು ಆ ಫೀಜು ಎಂದು ವಿಧಿಸಿ ಪೋಷಕ ವರ್ಗದವರನ್ನು ಶೋಷಣೆ ಮಾಡುವ ಅನೇಕ ಶಾಲೆಗಳಿವೆ. ಈಗ ಮುಖ್ಯವಾಗಿ ಸರಕಾರದ ಹಣ ದುರುಪಯೋಗ ಆಗಬಾರದು, ಮತ್ತೊಂದು ಕಡೆ ಪೋಷಕ ವರ್ಗದ ಶೋಷಣೆ

ಯಾಗಬಾರದು ಮತ್ತು ಉಪಾಧ್ಯಾಯರಿಗೇನು ಸ್ಥಾನಮಾನ ಸಿಕ್ಕಬೇಕು, ಏನು ಸಂಭಾವನೆ ಸಿಕ್ಕಬೇಕು ಮತ್ತು ಏನು ಮರ್ಯಾದೆ ದೊರೆಯಬೇಕು ಇದು ಸಿಕ್ಕುವ ಹಾಗೆ ಮಾಡಬೇಕಾದ್ದು ಅತ್ಯಾವಶ್ಯಕವಾಗಿದೆ ಈ ಸಂದರ್ಭದಲ್ಲಿ ನಾನು ಜವಾಬ್ದಾರಿಯುತವಾಗಿ ಮಾತನಾಡಬೇಕಾದರೆ ಉಪಾಧ್ಯಾಯರು ಕೂಡ ತಮ್ಮ ಹಕ್ಕು ಬಾಧ್ಯತೆಯ ಬಗ್ಗೆ....

ಶ್ರೀ ಎ. ಆರ್. ಬದರೀನಾರಾಯಣ.— ಇದರಲ್ಲಿ ಸಾರ್ವಜನಿಕ ಮುಖಂಡರ ಕರ್ತವ್ಯವೇನು ?

ಶ್ರೀ ಟಿ. ಆರ್. ಶಾಮಣ್ಣ.— ಸಾರ್ವಜನಿಕರ ಕರ್ತವ್ಯ ಅತಿ ಮುಖ್ಯವಾದುದು. ಅವರು ಪ್ರತಿಭಟಿಸಬೇಕು ಮತ್ತು ಒಳ್ಳೆಯ ಶಾಲೆ ನಡೆಯಲು ಅವಕಾಶ ಮಾಡಿಕೊಡಬೇಕು, ಸರ್ಕಾರ ಅದಕ್ಕೆ ಸಾಕಷ್ಟು ಸಹಾಯ ನೀಡಬೇಕು. ಹಾಗೆ ಮಾಡಿದರೆ ಲೋಪದೋಷಗಳನ್ನು ತಡೆಗಟ್ಟುವುದಕ್ಕೆ ಸಾಧ್ಯವಾಗುತ್ತದೆ. ಈಗ ದೊರೆಯುತ್ತಿರುವ ಗ್ರ್ಯಾಂಟು ಮತ್ತು ಫೀಜನಿಂದ, ಬರುವ ಉತ್ಪತ್ತಿಯಿಂದ ಶಾಲೆಗಳನ್ನು ಚೆನ್ನಾಗಿ ನಡೆಸುವುದಕ್ಕಾಗುವುದಿಲ್ಲ. ಈ ಜವಾಬ್ದಾರಿ ಪೂರ್ಣವಾಗಿ ಸರಕಾರದ ಮೇಲಿದೆ. ಖಾಸಗಿಯವರು ನಡೆಸುವ ಶಾಲೆಗಳನ್ನು ಚೆನ್ನಾಗಿ ನಡೆಸಲು ಅನುಕೂಲವಾಗುವಂತೆ ಅವರಿಗಿರುವ ಹಣದ ಕೊರತೆಯನ್ನು ನೀಗಿಸಲು ದಾರಿ ಹುಡುಕಬೇಕು, ಶೋಷಣೆಯೇನು ಈಗ ನಡೆಯುತ್ತಿದೆ. ಅದನ್ನು ತಪ್ಪಿಸಬೇಕು.

ಇನ್ನು ಉಪಾಧ್ಯಾಯರ ಬಗ್ಗೆ ಕೆಲವು ಮಾತುಗಳನ್ನು ಹೇಳುತ್ತೇನೆ. ಅದನ್ನು ಹೇಳುವಾಗ ಉಪಾಧ್ಯಾಯರ ವರ್ಗ ತಪ್ಪು ತಿಳಿದುಕೊಳ್ಳುವುದಿಲ್ಲವೆಂದು ಭಾವಿಸುತ್ತೇನೆ. ಹಿಂದಿದ್ದ ಗುರು-ಶಿಷ್ಯರ ಭಾವನೆ ದಿನೇ ದಿನೇ ಕಡಮೆಯಾಗುತ್ತಿದೆ. ಹಿಂದೆ ಒಳ್ಳೆಯ ಉಪಾಧ್ಯಾಯರಿದ್ದರು, ಅವರ ಕೈಕೆಳಗೆ ನಾನು ಓದಿದ್ದೇನೆ. ನನಗೆ ಅನೇಕ ಉಪಾಧ್ಯಾಯರ ಬಗ್ಗೆ ಬಹಳ ಪೂಜ್ಯ ಭಾವನೆಯಿದೆ, ಗೌರವವಿದೆ.

Mr. DEPUTY SPEAKER.— Mr. Shamanna, your speech must be within the scope of the subject.

Sri T. R. SHAMANNA.— When we except some right; we most also have a duty to follow. I have gone through the Bill and given amendments to every section that has been got here.

Mr. DEPUTY SPEAKER.— The hon. member. must read between the lines !

Sri T. R. SHAMANMA.— I will not take much time.

Mr. DEPUTY SPEAKER.— It is not a question of taking time. If you are within the scope I am bound to give time.

SRI T. R. SHAMANNA.— When a person claims a right, he has got responsibilities and duties also to perform. That is what I want to bring to the notice of the hon. House.

MR. DEPUTY SPEAKER.— It must come within the scope.

ಶ್ರೀ ಟಿ. ಆರ್. ಶಾಮಣ್ಣ.— ಈಗ ಉಪಾಧ್ಯಾಯರ ಬಗ್ಗೆ ಒಂದು ವಿಷಾದಕರವಾದ ವಿಚಾರವೇನೆಂದರೆ ಉಪಾಧ್ಯಾಯ ವರ್ಗದಲ್ಲಿ ಒಂದು ಟ್ರೇಡ್ ಯೂನಿಯನ್ ಮನೋಭಾವನೆ ಬೆಳೆಯುತ್ತಿದೆ, ಇದು ಶೋಚನೀಯವಾದ ವಿಚಾರ.

ಇದಕ್ಕೆ ಮುಖ್ಯ ಕಾರಣ ಶಾಲೆಯಲ್ಲಿ ನಡೆಯುತಕ್ಕ ಮಿಸ್‌ಮ್ಯಾನೇಜ್‌ಮೆಂಟ್ ಇರಬಹುದು, ಇಲ್ಲವೇ ನಮ್ಮ ರಾಜ್ಯದಲ್ಲಿ ಯಾವ ಒಂದು ಕೆಲಸವಾಗಲಿ ಅದರ ಬಗ್ಗೆ ಒಂದು ಅಜಿಟೇಷನ್ ನಡೆಸದೆ ಅದನ್ನು ಮಾಡುವುದಕ್ಕಾಗುವುದಿಲ್ಲ ಅನ್ನತಕ್ಕ ಕಾರಣ ಇರಬಹುದು ಇಲ್ಲವೇ ಈಗಿನ ಕಾಲದಲ್ಲಿ ಜೀವನ ನಡೆಸುವುದಕ್ಕಾಗುವುದಿಲ್ಲ ಅನ್ನುವುದು ಕಾರಣವಾಗಿರಬಹುದು. ಆದರೆ ಈ ಉಪಾಧ್ಯಾಯರುಗಳ ಹಕ್ಕುಬಾಧ್ಯತೆಗಳನ್ನು ಮತ್ತು ಅವರ ಹಿತರಕ್ಷಣೆ ಮಾಡುವುದು ಸಾರ್ವಜನಿಕರ ಹಾಗೂ ಸರ್ಕಾರದ ಕರ್ತವ್ಯ. ಅವರು ತಮ್ಮ ಹಕ್ಕನ್ನು ಕಾಪಾಡಿಕೊಳ್ಳತಕ್ಕ ಬಗ್ಗೆ ನಡೆಸತಕ್ಕ ಹೋರಾಟದ ಬಗ್ಗೆ ನಾನೇನೂ ಹೇಳುವುದಿಲ್ಲ. ಅದಕ್ಕೆ ಅಡ್ಡಿಯನ್ನು ಸಹ ಮಾಡುವುದಿಲ್ಲ. ಆದರೆ ಈ ಉಪಾಧ್ಯಾಯ ವೃತ್ತಿಯಲ್ಲಿರತಕ್ಕವರ ಬಗ್ಗೆ ಬೇರೆ ಅವರ ಕಸುಬಿನ ಬಗ್ಗೆ ಯಾವ ಆಪಾದನೆಗಳು ಬರುವುದಕ್ಕೆ ದಾರಿಕೊಡಬಾರದೆಂಬುದು ನನ್ನ ವಾದ. ನಾನು ಉದಾಹರಣೆಗಾಗಿ ಈ ಉಪಾಧ್ಯಾಯ ವೃತ್ತಿಯಲ್ಲಿರತಕ್ಕವರ ಬಗ್ಗೆ ಕೆಲವು ಆಪಾದನೆಗಳನ್ನು ಮಾಡುವುದಾದರೆ—ಅವರು ಕ್ಲಾಸಿಗೆ ಸಕಾಲಕ್ಕೆ ಸರಿಯಾಗಿ ಹೋಗದಿರುವುದು ಒಂದು; ಇನ್ನು ಕೆಲವರು ಕ್ಲಾಸಿನಲ್ಲಿ ಮಾಡತಕ್ಕ ಪಾಠಪ್ರವಚನಗಳ ಬಗ್ಗೆ ಮೊದಲೇ ಸರಿಯಾದ ನೋಟನ್ನು ತಯಾರಿಸಿಕೊಂಡು ಬಂದು ಕ್ರಮವಾಗಿ ಪಾಠಪ್ರವಚನಗಳನ್ನು ಮಾಡದಿರುವುದು ಇನ್ನು ಕೆಲವರು ಮಕ್ಕಳ ಶೀಲವನ್ನು ಉತ್ತಮಪಡಿಸತಕ್ಕ ವಿಚಾರಕ್ಕೆ ಗಮನಕೊಡದಿರುವುದು ಹೀಗೆ ಅವರಲ್ಲೂ ಕೆಲವು ನ್ಯೂನತೆಗಳಿವೆ. ಅದಕ್ಕೆ ಅವರು ಅವಕಾಶ ಕೊಡಬಾರದು. ಹೀಗಾಗಿ ಈಗಿನ ಕಾಲದಲ್ಲಿ ಹುಡುಗರಿಗೆ ಈ ಶೀಲ ಎಂದರೇನೆಂಬುದೇ ಗೊತ್ತಿಲ್ಲದಂತಾಗಿದೆ. ಇನ್ನು ಕೆಲವು ಶಾಲೆಗಳಲ್ಲಿ ಪರೀಕ್ಷೆಗಳನ್ನು ನಡೆಸಿದ ನಂತರ ಮಕ್ಕಳ ಪ್ರಶ್ನೆಪತ್ರಿಕೆಗಳನ್ನು ಕರೆಕ್ಟ್ ಮಾಡಿ ಅವುಗಳಲ್ಲಿರತಕ್ಕ ತಪ್ಪುನೆಪ್ಪುಗಳನ್ನು ಯಾವುದನ್ನೂ ನೋಡದೆ ಸುಮ್ಮನೆ ನಂಬರುಗಳನ್ನು ಹಾಕಿ ಆ ಪ್ರಶ್ನೋತ್ತರ ಪತ್ರಿಕೆಗಳ ಗಂಟನ್ನು ಎಲ್ಲಿಯೋ ಎಸೆದಿರತಕ್ಕ ನಿದರ್ಶನಗಳು ನನ್ನ ಗಮನಕ್ಕೆ ಬಂದಿವೆ. ಅಂಥವರಿಗೆ ತಕ್ಕ ಶಿಕ್ಷೆ ಕೂಡ ಆಗಿರತಕ್ಕ ನಿದರ್ಶನಗಳಿವೆ. ಇನ್ನು ಕೆಲವು ಶಾಲೆಗಳಲ್ಲಿ ಈ ದುರುಪಯೋಗ ಕೂಡ ಆಗಿದೆ, ಇದಾಗಬಾರದು. ಇನ್ನು ಕೆಲವು ಉಪಾಧ್ಯಾಯರುಗಳು ಈ ವೃತ್ತಿಯನ್ನು ತಮ್ಮ ಒಂದು ಹಾಬಿಯನ್ನಾಗಿಟ್ಟುಕೊಂಡು ಕೆಲಸ ಮಾಡುತ್ತಿದ್ದಾರೆ. ಪ್ರೈವೇಟ್ ಪಾಠ

ಮಾಡುವುದೇ ಅವರ ಒಂದು ಮುಖ್ಯ ಕಸುಬಾಗಿದೆ; ಅವರು ಶಾಲೆಗೆ .ಏನೋ ನೆಪ ಮಾತ್ರಕ್ಕೆ ಮಾತ್ರ ಬಂದು ಹೋಗುತ್ತಿದ್ದಾರೆ. ಇನ್ನು ಕೆಲವರು ಕೆಲವು ಶಾಸಕರ ಸ್ನೇಹ ಮಾಡಿಕೊಂಡು ಅವರು ರಾಜಕೀಯದಲ್ಲಿ ಕಾಲ ಕಳೆಯುತ್ತ ಶಾಲೆಗಳ ಅಭಿವೃದ್ಧಿಗೆ ಗಮನವನ್ನೇ ಕೊಡುತ್ತಿಲ್ಲ. ಆದರೆ ಇವೆಲ್ಲಕ್ಕಿಂತಲೂ ಉಪಾಧ್ಯಾಯರಿಗೆ ಅವರಲ್ಲಿ ಇರಬೇಕಾದ ಒಂದು ಮುಖ್ಯ ವಿಚಾರ ಅಂದರೆ ಅವರಲ್ಲಿ ಒಳ್ಳೆಯ ಕ್ಯಾರೆಕ್ಟರಿರಬೇಕು. ಇದು ಬಹಳ ಮುಖ್ಯವಾದದ್ದು. ಇವರು ಒಂದು ಶಾಲೆಗೆ ಮಾಡಲ್ ಕ್ಯಾರೆಕ್ಟರಾಗಿದ್ದರೆ ಅದರಂತೆ ಮಕ್ಕಳ ಕ್ಯಾರೆಕ್ಟರನ್ನೂ ಬೆಳೆಸುವುದಕ್ಕೆ ಸಾಧ್ಯವಾಗುತ್ತದೆ. ಈ ದಿವಸ ನಮ್ಮ ರಾಜ್ಯ ಹಾಗೂ ದೇಶ ಬಹಳ ಕಷ್ಟದೆಶೆಯಲ್ಲಿ ಮುಂದೆ ಸಾಗುತ್ತಿದೆ. ಇಂಥ ಸಂದರ್ಭದಲ್ಲಿ ಈ ಉಪಾಧ್ಯಾಯರ ಒಂದು ದೊಡ್ಡ ಜವಾಬದಾರಿ ಇದೆ. ನಮ್ಮ ಮಕ್ಕಳು ದೇಶಕ್ಕೆ ಒಳ್ಳೆಯ ಸತ್ಪ್ರಜೆಗಳಾಗಬೇಕಾದರೆ ಅವರಲ್ಲಿ ಬಾಲ್ಯದಿಂದಲೇ ಒಳ್ಳೆಯ ಶಿಸ್ತು ಸಂಯಮಗಳು ಬೆಳೆಯಬೇಕು. ಅವರಲ್ಲಿ ದಕ್ಷತೆ ಹೆಚ್ಚಬೇಕು. ಈ ಸದ್ಗುಣಗಳೆಲ್ಲಾ ಇಂದಿನ ಮಕ್ಕಳಲ್ಲಿ ಮೂಡುವಂತೆ ಮಾಡಬೇಕೆಂದು ನಾನು ಆ ಉಪಾಧ್ಯಾಯ ವರ್ಗದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಹಾಗಾಗದೆ ಇಂದಿನ ಪರಿಸ್ಥಿತಿಯೇ ಮುಂದುವರಿದಲ್ಲಿ ಮುಂದೆ ದೇಶ ಅನೇಕ ದುರಂತಗಳಿಗೆ ಅನಾಹುತಗಳಿಗೆ ಈಡಾಗಬೇಕಾಗುವದು. ಆದರೆ ನಾನು ಈ ಮಸೂದೆಯ ಒಂದೊಂದು ಸೆಕ್ಷನ್ನಿಗೂ ಒಂದೊಂದು ತಿದ್ದುಪಡಿಯನ್ನು ಕೊಟ್ಟಿರುವುದರಿಂದ ಆ ತಿದ್ದುಪಡಿಗಳು ಚರ್ಚೆಗೆ ಬಂದಕಾಲದಲ್ಲಿ ನಾನು ಬಾಕಿ ವಿವರಗಳನ್ನು ಹೇಳುತ್ತೇನೆ.

ನಾನು ಈ ವಿದ್ಯಾಭ್ಯಾಸದ ವಿಚಾರದಲ್ಲಿ ಮುಖ್ಯವಾಗಿ ಪ್ರಾರ್ಥಿಸಿಕೊಳ್ಳುವದಿಷ್ಟೇ, ಇದರಲ್ಲಿ ಯಾರಿಗೂ ಒಂದು ವ್ಯಾಪಾರೀ ಮನೋಭಾವನೆ ಇರಬಾರದು. ಹಾಗೆ ಇರುವುದನ್ನು ಕಂಡಾಗ ಸರ್ಕಾರದವರು ಅದನ್ನು ಕಡ್ಡಾಯವಾಗಿ ಶಿಕ್ಷೆಗೊಳಪಡಿಸಿ ಅದನ್ನು ತಪ್ಪಿಸಬೇಕು. ಈ ದಿವಸ ಏನೂ ಗತಿ ಇಲ್ಲದಿದ್ದವರು ಕೆಲವರು ಈ ಶಾಲೆಗಳನ್ನು ತೆರೆದು ಲಕ್ಷಾಧೀಶ್ವರರಾಗಿದ್ದಾರೆ. ಅದಕ್ಕಾಗಿ ನಾನು ಇದನ್ನೆಲ್ಲಾ ಹೇಳಬೇಕಾಯಿತು. ಇಂಥ ಖಾಸಗೀ ಶಾಲೆಗಳ ಬಗ್ಗೆ ಸರ್ಕಾರದವರು ಕಟ್ಟುನಿಟ್ಟಾದ ನಿಗಾ ಇಟ್ಟು ಅದನ್ನು ತಡೆಗಟ್ಟಬೇಕೆಂದು ಒತ್ತಾಯವಾಡಿ ಹೇಳುತ್ತೇನೆ. ಇಷ್ಟೆಲ್ಲಾ ನಾವು ಹೇಳಿದರೂ ಕೆಲವು ಶಾಲೆಗಳವರು ಸರ್ಕಾರೀ ಆಜ್ಞೆಯನ್ನೂ ಇಲಾಖೆಯವರು ಕೊಡತಕ್ಕ ಆಜ್ಞೆಯನ್ನೂ ಮತ್ತು ಹೈಕೋರ್ಟಿನವರು ಕೊಡತಕ್ಕ ಆಜ್ಞೆಯನ್ನು ಕೂಡ ಉಲ್ಲಂಘನೆ ಮಾಡಿ ಕೆಲಸ ಮಾಡುತ್ತಿದ್ದಾರೆ. ಅದನ್ನೆಲ್ಲ ಸರ್ಕಾರ ತಡೆಗಟ್ಟಬೇಕು. ಈ ಉಪಾಧ್ಯಾಯ ವೃತ್ತಿ ಬಹಳ ಶ್ರೇಷ್ಠವಾದ ವೃತ್ತಿ. ಅವರು ತಮ್ಮ ಕರ್ತವ್ಯವನ್ನು ಸರಿಯಾಗಿ ಪರಿಪಾಲನೆ ಮಾಡಿ ಮಕ್ಕಳನ್ನು ದೇಶದ ಸತ್ಪ್ರಜೆಗಳನ್ನಾಗಿ ಮಾಡುವುದಕ್ಕೆ ಅವರಲ್ಲಿ ಒಳ್ಳೆಯ ಕ್ಯಾರೆಕ್ಟರ್ ಬೆಳೆಯುವುದಕ್ಕೆ ಸೂಕ್ತ ರೀತಿಯಲ್ಲಿ ಶ್ರದ್ಧೆವಹಿಸಿ ಉಪಾಧ್ಯಾಯ ವರ್ಗದಲ್ಲಿರತಕ್ಕವರು ಸಹಕರಿಸಬೇಕೆಂದು ಪ್ರಾರ್ಥಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. DEPUTY SPEAKER.—I want to inform the House that the Industries Minister wants to make a statement on

the points raised by the Leader of the Opposition this morning regarding the M. I. S. L.

Statement by Minister for Industries—

Re: Dharana of Officers of the Mysore Iron and Steel Ltd.

Sri S. M. KRISHNA (Minister for Industries).—There are two Associations amongst Officers of the Mysore Iron and Steel Ltd., Bhadravathi. One is styled as the Officers Association and the other one is styled as the Officers Forum. The majority of the officers who are on the technical cadre are members of the Association and the ones who are on the Accounts, Administrative and personnel (non-technical) are the members of the Forum. The Officers Association enjoys the numerical majority. On 24-9-1973 some 100 officers belonging to the Asscciation gheraoed the General Manager in his office and then insisted that the memo issued promoting two officers in the non-technical cadre be stayed. The General Manager sought instructions from the Managing Director who was in Bangalore on official work. On hearing this, the Managing Director contacted me. I extended an invitation to the President and the Secretary of the Officers Association to go over to Bangalore to have discussions with me on the issue. I understand that they refused to come to Bangalore until all the orders of promotion w re withdrawn. In the meanwhile the officers forum in a statement issued have disowned the agitation. They have stated in a statement that all the officers are not involved in this agitation and they have condemened the illegal strike and behaviour of the officers.

It is not correct to say that certain juniors have been promoted. The fact is that there were two vacancies in the Administrative Group (non-technical). The Departmental Committee consisting of Vice-Cnairman, the General Manager Chief Administrative Officer and the Divisional Manager, Personnel went into the records of the officers eligible for promotion and selected Sl No. 3 and 4. Sl. Nos. 1 and 2 were overlooked as their records were not satisfactory. Therefore there has been no supersession in promot-

ing Sl. No. 3 and 4. In the face of these facts, it would not be fair to make unfounded allegations against the managements.

Though about 200 officers (Technical) have obstained from work, normal production in the factory has been maintained without interruption. In fact, the Managing Director has reported that both production and despatches on the date of their strike was more than the production and despatch of the previous day.

I am glad to inform the House that these officers have now agreed to report for duty at 3–00 P. M. today and will work upto 11 P. M. to put in their shift of 8 hours. From tomorrow normal work is expected in the factory.

Discipline is non negotiable in a large industrial complex like M. I. S. L. I am sure the House will agree that discipline shall have to be maintained at any cost. The Officers ought to have a greater sense of responsibility and should have shown greater sense of proportion.

5–00 P. M.

ಶ್ರೀ ಎಚ್. ಟಿ. ಕೃಷ್ಣಪ್ಪ (ನಾಗಮಂಗಲ).— ಅಧ್ಯಕ್ಷರೇ, ಕಳೆದ ತಿಂಗಳು ೧೭ನೇ ತಾರೀಖಿನಲ್ಲಿ ಮಾನ್ಯ ಕೈಗಾರಿಕೆಯ ಸಚಿವರು ಭದ್ರಾವತಿಗೆ ಹೋಗಿದ್ದಾಗ ಅಲ್ಲಿನ ಆಫೀಸರನ್ನೂ ಮತ್ತು ಅಲ್ಲಿನ ಪ್ರತಿನಿಧಿಗಳನ್ನು ಭೇಟಿಮಾಡಿ ಅಲ್ಲಿನ ಅಧಿಕಾರಿಗಳ ಸೇವಾ ಹಿರಿತನದ ಮೇಲೆ ಯಾವಾಗಲಾದರೂ ಬಡ್ತಿಯನ್ನು ಕೊಡುವ ಸಂದರ್ಭ ಒದಗಿದರೆ ಆಗ ಆಫೀಸರುಗಳನ್ನೂ ಮತ್ತು ಪ್ರತಿನಿಧಿಗಳನ್ನೂ ಕನ್‌ಸಲ್ಟ್‌ಮಾಡಿ ಬಹಿರಂಗವಾಗಿ ಮುಚ್ಚುಮರೆಯಿಲ್ಲದೆ ಈ ತರಹ ಪ್ರೋಮೋಷನ್ಸ್ ಕೊಡುವ ಒಂದು ಹೊಸ ನೀತಿಯನ್ನು ಅನುಸರಿಸುತ್ತೇನೆಂದು ಭರವಸೆಯನ್ನು ಕೊಟ್ಟಿದ್ದರೆಂದು ನನಗೆ ತಿಳಿದು ಬಂದಿದೆ ಕೊನೆಗೆ ಶಿಸ್ತನ್ನು ಕಾಪಾಡುವ ವಿಚಾರದಲ್ಲಿ ನಾವು ನಿಮ್ಮ ಆಡಳಿತಕ್ಕೆ ವಿರೋಧವಾಗಿ ಬರುವುದಿಲ್ಲ. ಶಿಸ್ತನ್ನು ಅಲ್ಲಿ ಕಾಪಾಡಬೇಕು, ಅದು ನಿಜ. ಆದರೆ ಶಿಸ್ತಿನ ಹೆಸರಿನಲ್ಲಿ ಕೆಲವು ಜನರು ನ್ಯಾಯವಾಗಿ, ಅರ್ಹತೆಯುಳ್ಳಂಥ ಜನರ ಹಕ್ಕುಗಳನ್ನು ಕಡೆಗಣಿಸಿ ನಿಮಗೆ ಬೇಕಾದಂಥ ಜನಗಳನ್ನು ಅಂದರೆ ನಿಮ್ಮ ಪಕ್ಷಕ್ಕೆ ಬೇಕಾದಂಥ ಜನಗಳಿಗೆ ಬಡ್ತಿ ಕೊಟ್ಟಿದ್ದಾಗಿದೆ. ನಾನು ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ, ಅಲ್ಲಿ ಮಾನ್ಯ ಶ್ರೀ ಸಣ್ಣತಿಮ್ಮಯ್ಯ ಎಂಬುವರಿಗೆ ಬಡ್ತಿ ಕೊಟ್ಟಿದ್ದಾರೆ. ಅವರು ಆಡಳಿತ ಪಕ್ಷದ ಅಧ್ಯಕ್ಷರಾಗಿರತಕ್ಕವರ ಸಂಬಂಧಿಕರು. ಮತ್ತು ಇನ್ನೊಬ್ಬರು ಮಾನ್ಯ ಶ್ರೀ ಚಿಕ್ಕರಸ್ ಎಂಬುವರು. ಇವರು ಮಾನ್ಯ ಮುಖ್ಯಮಂತ್ರಿಗಳ ಸಂಬಂಧಿ

ಕರೆಂಬುದಾಗಿ ನನಗೆ ಬಂದಿರುವ ವರ್ತಮಾನದ ಪ್ರಕಾರ ತಿಳಿದು ಬಂದಿದೆ. ಮಾನ್ಯ ಶ್ರೀ ಸಣ್ಣ ತಿಮ್ಮಯ್ಯನವರು ಇದೇ ಫ್ಯಾಕ್ಟರಿಯಲ್ಲಿ ಹಿಂದೆ ಅಪರಾಧಮಾಡಿ ಸಪೆನ್ಸ್ನನಿನಲ್ಲಿದ್ದವರು. ಅವರ ಶೀಲಾಚಾರಗಳನ್ನು ಗಣನೆಗೆ ತೆಗೆದುಕೊಳ್ಳದೆಯೇ ಅವರಿಗೆ ೩೦೦–೪೦೦ ರೂಪಾಯಿಗಳಿಂದ ೯೦೦ ರೂಪಾಯಿಗಳಿಗೆ ಏರಿಸಿರುವುದು ಸರಿಯೇ ಎಂದು ನಾನು ಪ್ರಶ್ನೆಮಾಡಬೇಕಾಗಿದೆ. ಈ ರೀತಿಯಾದಂಥ ಬಡ್ತಿಯನ್ನು ಕೊಟ್ಟಿರುವುದು ನಿಜವಾಗಿಯೂ ಸ್ವಾಭಾವಿಕವಾಗಿ ಸುಮಾರು ೧೦–೧೫ ವರ್ಷಗಳಿಂದಲೂ ನಿಷ್ಠೆಯಿಂದ ಆ ಸಂಸ್ಥೆಯಲ್ಲಿ ಹೆಚ್ಚಿಗೆ ದುಡಿದಂಥ ಜನಗಳಿಗೆ ಅವರ ಹೃದಯವನ್ನು ಹಿಂಡಿಕೊಳ್ಳುವ ವಿಚಾರವಾಗಿದೆ. ಅಲ್ಲಿ ಸುಮಾರು ೧೫೦ ಜನ ಹಿರಿಯ ಅಧಿಕಾರಿಗಳು ಇರುವ ಕಾಲದಲ್ಲಿ ಇವರನ್ನು ಅವರೆಲ್ಲರ ಮೇಲೆ ತಂದು ಕೂರಿಸುವುದು ನಿಜವಾಗಿ ಸಾಧುವಾದುದಲ್ಲ. ಆದ್ದರಿಂದ ಈಗಲಾದರೂ ಮಾನ್ಯ ಮಂತ್ರಿಗಳು ಅವರ ಒಂದು ತೀರ್ಮಾನವನ್ನು ಕೂಡಲೇ ಬದಲಾಯಿಸಿಕೊಳ್ಳುವುದು ಒಳ್ಳೆಯದು. ಈಗಾಗಲೇ ಅವರ ಬಗ್ಗೆ ಒಂದು ಅಪಾಯಿಂಟ್‌ಮೆಂಟ್ ಮೆಮೊ ಇಷ್ಯೂ ಮಾಡಿರುವುದನ್ನು ಕೂಡಲೇ ಹಿಂದಕ್ಕೆ ತೆಗೆದುಕೊಳ್ಳಬೇಕು. ಹಿಂದೆ ಇದೇ ತರಹ ಒಂದು ಘಟನೆ ಅಲ್ಲಿ ನಡೆಯಿತು. ಆಗ ಮಾನ್ಯ ಮಂತ್ರಿಗಳು ಅಧಿಕಾರದಲ್ಲಿದ್ದರೋ ಇಲ್ಲವೋ ಗೊತ್ತಿಲ್ಲ. ಅಧಿಕಾರಿಗಳು ಒಂದು ಕಾಲದಲ್ಲಿ ಯಾವುದೋ ಒಂದು ವಿಚಾರದ ಬಗ್ಗೆ ಆಕ್ಷೇಪಣೆ ಮಾಡಿದಾಗ ಮತ್ತು ತಮ್ಮ ನ್ಯಾಯವಾದಂಥ ಬೇಡಿಕೆಗಳನ್ನು ಆಡಳಿತ ಮಂಡಲಿ ಮುಂದೆ ಇಟ್ಟಾಗ ಅಧಿಕಾರಿಗಳನ್ನು ಪುನರ್ನೇಮಕಮಾಡುವಂಥ ಒಂದು ಮೆಮೊವನ್ನು ಹಿಂದಕ್ಕೆ ತೆಗೆದುಕೊಂಡಿದ್ದಾರೆ. ಇದು ಪ್ರತಿಷ್ಠೆಯ ಪ್ರಶ್ನೆಯೆಂದು ಮಾನ್ಯ ಮಂತ್ರಿಗಳು ತಿಳಿಯಬಾರದು. ಮಾನ್ಯ ಮಂತ್ರಿಗಳ ಒಂದು ದೊಡ್ಡತನವನ್ನು ಅವರು ಕೊಂಡಾಡುತ್ತಾರೆ. ಇವರ ಒಂದು ಈ ಕಾರ್ಯದಿಂದ ಅನೇಕ ಉಪಯುಕ್ತವಾದ ಕೆಲಸಕಾರ್ಯಗಳು ಅಲ್ಲಿ ಚೆನ್ನಾಗಿ ಆಗುತ್ತವೆ. ಆ ಸಂಸ್ಥೆಯೂ ಸಹ ಪ್ರಗತಿಪರವಾಗಿ ನಡೆಯುತ್ತದೆಂಬ ಆಶೋತ್ತರವನ್ನು ಮಾನ್ಯ ಮಂತ್ರಿಗಳು ಇಟ್ಟುಕೊಳ್ಳಬಹುದು. ಅಲ್ಲಿರತಕ್ಕ ಅಧಿಕಾರಿಗಳೇನೂ ಶಿಸ್ತನ್ನು ಉಲ್ಲಂಘನೆ ಮಾಡಿ ಹೋಗುವುದಿಲ್ಲ ಅಧಿಕಾರಿಗಳಿಗೆ ಅನ್ನವನ್ನು ಕೊಟ್ಟಂಥ ಆ ಒಂದು ಸಂಸ್ಥೆಗೆ ಯಾವ ರೀತಿಯಲ್ಲಿಯೂ ಅವರು ವಿರೋಧವಾಗಿ ಹೋಗುವುದಿಲ್ಲ. ಅಂತಹ ಮನಸ್ಸೂ ಕೂಡ ಅವರಿಗೆ ಇಲ್ಲ. ಆದ್ದರಿಂದ ಇದನ್ನು ಒಂದು ಪ್ರತಿಷ್ಠಾ ಪ್ರಶ್ನೆಯಾಗಿ ಮಾನ್ಯ ಮಂತ್ರಿಗಳು ತೆಗೆದುಕೊಳ್ಳಕೂಡದೆಂದು ನಾನು ಹೇಳುತ್ತೇನೆ. ಆದ್ದರಿಂದ ಈಗ ಆ ೧೫೦ ಜನ ಅಧಿಕಾರಿಗಳ ಕೂಗು ಏನಿದೆಯೋ ಅದರಲ್ಲಿ ಒಂದು ಅರ್ಥವಿದೆ, ನ್ಯಾಯವಿದೆ, ಅವರ ಒಂದು ಬೇಡಿಕೆಯಲ್ಲಿ ಧರ್ಮ ಅಡಕವಾಗಿದೆಯೆಂಬುದನ್ನು ಮಾನ್ಯ ಮಂತ್ರಿಗಳು ಗಣನೆಗೆ ತೆಗೆದುಕೊಂಡು ಅವರ ಒಂದು ತೀರ್ಮಾನವನ್ನು ಇದರ ಬಗ್ಗೆ ಬದಲಾಯಿಸಿಕೊಳ್ಳಬೇಕೆಂದು ನಾನು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

†Sri ABDUL KHUDDUS ANWAR (Bhadravati).— I differ from the views of the Hon. Leader of the Opposition. Sriyuths Sanna Thimmiah and Chikkaraj Urs do deserve the promotion because they are already in the grade of Rs. 450-600. Sri Sanna Thimmiah is already drawing Rs. 600. Sri Chikkaraj Urs is drawing a salary of Rs. 1200 and he is in the Divisional Manager's cadre. I request the Hon. Minister to see that all the grades of 150 officers including the Divisional Managers and Commercial Managers are revised as promised by him on the floor of this House sometime back. It is not correct to give promotion to only two officers and leave the rest. I request you kindly to withdraw that memo and see that all the 150 cases are treated alike. Or treat the present memo as acting basis or temporary. Our officers have not gone on strike. The management has created a situation whereby they have stopped them from going to the work. The officers after finishing their duties have gone to the management and protested against what they had done I request you to keep up your promise and see that all the officers are promoted. The officers who are recently promoted might be continued to do so on a temporary basis. They might be confirmed when all other officers are confirmed.

Sri M. S. KRISHNAN (Malleswarm).— You stated that Sl. Nos. 1 and 2 have not been discriminated against and Sl. Nos. 3 and 4 got the promotion because the past records of Sl. Nos. 1 and 2 were not proper. You might be aware that the confidential records of officers are prepared by some higher ups and quite often a lot of favouritism would be shown and they make good into bad and bad into good. All sorts of things have happened.

I heard also the particular allegation made by the hon. the leader of the opposition that because of influence these two officers have been promoted. I request the Hon. Minister to go into that aspect more deeply and to see that real justice is done to the officers and discontent is removed.

S i H. T. KRISHNAPPA.— I am given to understand that the Chairman has issued the appointment memo !

ಶ್ರೀ ಎಸ್. ಎಂ. ಕೃಷ್ಣ.—ಮಾನ್ಯ ವಿರೋಧ ಪಕ್ಷದ ನಾಯಕರು ಅನಾವಶ್ಯಕವಾಗಿ ಮುಖ್ಯ ಮಂತ್ರಿಗಳ ಹೆಸರನ್ನು ಈ ವಿವಾದಕ್ಕೆ ಎಳೆದಿದ್ದಾರೆ. ಚಿಕ್ಕೇ ಅರಸು ಎನ್ನುವವರಿಗೆ ಪ್ರಮೋಷನ್ ಕೊಟ್ಟಿಲ್ಲ. ಈಗ ಇಬ್ಬರಿಗೆ ಪ್ರಮೋಷನ್ ಕೊಟ್ಟಿರವುದರಲ್ಲಿ ಏನು ವಿವಾದ ಬಂದಿದೆ ಅದರಲ್ಲಿ ಚಿಕ್ಕೇ ಅರಸ್ ಅವರು ಇಲ್ಲ. ಅವರು ಡಿಪಾರ್ಟಮೆಂಟಿನಲ್ಲಿ ಪರ್ಸನಲ್ ಡಿಪಾರ್ಟಮೆಂಟಿಗೆ ಹೆಡ್ ಆಗಿರತಕ್ಕ ಸೀನಿಯರ್ ಆಫೀಸರು ಆದ್ದರಿಂದ ಮುಖ್ಯ ಮಂತ್ರಿಗಳ ಸಂಬಂಧೀಕರಿಗೆ ಪ್ರಮೋಷನ್ ಕೊಟ್ಟಿದ್ದಾರೆ ಎನ್ನುವ ಅಪಾದನೆ ಏನಿದೆ ಇದು ಸರಿಯಲ್ಲ. ಸೇವಾ ಹಿರಿತನದ ಬಗ್ಗೆ ಮಾನ್ಯ ವಿರೋಧಪಕ್ಷದ ನಾಯಕರು ಏನು ಹೇಳಿದರು ಆ ವಿಚಾರದಲ್ಲಿ ಹೇಳುವುದಾದರೆ ಸೇವಾ ಹಿರಿತನವೇ ಪ್ರಮೋಷನ್ನಿಗೆ ಆಧಾರವಲ್ಲ. ಸೇವಾಹಿರಿತನವನ್ನೇ ಆಧಾರವಾಗಿಟ್ಟುಕೊಂಡು ಇದನ್ನು ತೀರ್ಮಾನ ಮಾಡಿಲ್ಲ. ಕಾಂಪಿಟೆನ್ಸ್, ಸ್ಕಿಲ್, ಕ್ಯುಮಿಲಿಟೀವ್ ಎಫೆಕ್ಟ್ ಇವುಗಳನ್ನೆಲ್ಲಾ ಗಮನದಲ್ಲಿಟ್ಟುಕೊಂಡು ನಾವು ಪ್ರಮೋಷನ್ ಕೊಡುತ್ತೇವೆ.

ಎರಡನೆಯದು ಈ ಡಿಪಾರ್ಟಮೆಂಟಿನಲ್ಲಿ ಪ್ರಮೋಷನ್ ಕೊಡುವುದಕ್ಕೆ ಸಂಬಂಧಪಟ್ಟ ಕಮಿಟಿ ಏನಿದೆ ಆ ಕಮಿಟಿಯು ಮೀಟಿಂಗ್ ಮಾಡಿ ಅವರು ಮಾಡಿರತಕ್ಕ ಸಿಫಾರಸ್ಸು ಮತ್ತು ಹಲವಾರು ಆಫೀಸರು ಈ ಬಗ್ಗೆ ಸ್ಪಷ್ಟವಾಗಿ ತಿಳಿಸಿದ್ದಾರೆ.

ಭದ್ರಾವತಿ ಕಾರ್ಖಾನೆಯಲ್ಲಿರತಕ್ಕ ಗ್ರೂಪಿಂಗ್ಸ್ ಇವುಗಳನ್ನೆಲ್ಲಾ ಸರ್ಕಾರದವರೇ ನೇಮಿಸಿ ಎಂದು ಆರ್. ಸಿ ದತ್ ಕಮಿಟಿಯುವರು ಸಿಫಾರಸ್ಸು ಮಾಡಿದ್ದಾರೆ. ಭದ್ರಾವತಿ ಕಾರ್ಖಾನೆಯಲ್ಲಿ ಪ್ರಮೋಷನ್ ಯಾವ ಆಧಾರದ ಮೇಲೆ ಮಾಡಬೇಕು ಎಂಬುದನ್ನು ಶಾಸ್ತ್ರೀಯವಾಗಿ ಇವ್ಯಾಲ್ಯುಯೇಟ್ ಮಾಡುತ್ತಿದ್ದೇವೆ. ಕಳೆದ ಆಡಳಿತ ಮಂಡಲಿಯ ಸಭೆಯಲ್ಲಿ ಇವರ ಬಗ್ಗೆ ನಿರ್ಣಯವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ. ಆದ್ದರಿಂದ ಆಡಳಿತ ಮಂಡಲಿಯ ವಿಶೇಷ ಸಭೆಯನ್ನು ಕರೆದು ಆರ್. ಸಿ. ದತ್ ಕಮಿಟಿಯುವರು ಮಾಡಿರತಕ್ಕ ಸಿಫಾರಸ್ಸುಗಳನ್ನು ವಿಚಾರ ಮಾಡಿ ಅದರಮೇಲೆ ಒಂದು ತೀರ್ಮಾನ ತೆಗೆದುಕೊಳ್ಳುತ್ತೇವೆ. ಈಗ ಏನಾದರೂ ಅಲ್ಪ ಸ್ವಲ್ಪ ಅನಾಮಲೀಸ್ ಇದ್ದರೆ ಅವುಗಳನ್ನು ಸರಿ ಮಾಡುತ್ತೇವೆ ಎನ್ನುವ ಭರವಸೆಯನ್ನು ಇ ಸಾರಿ ಅಧಿಕಾರಿಗಳಿಗೆ ಕೊಟ್ಟಮೇಲೂ ಈ ರೀತಿ ಅವರು ಚಳುವಳಿಯ ಮಾರ್ಗವನ್ನು ಹಿಡಿದದ್ದು ನನಗೆ ಬಹಳ ದುಃಖವನ್ನುಂಟು ಮಾಡಿದೆ. ಅವರ ಮೇಲೆ ನನಗೆ ಆಕ್ಷೇಪಣೆ ಇಲ್ಲ. ಬಹಳ ಜನ ಯುವಕರು, ಮೇಧಾವಿಗಳು ಅಲ್ಲಿ ಇದ್ದಾರೆ. ತಾಂತ್ರಿಕ ವಿಶೇಷ ಜ್ಞಾನ ಪಡೆದಿರತಕ್ಕ ಇಂಜಿನಿಯರುಗಳು ಇದ್ದಾರೆ. ಅವರ ಮೇಲೆ ನನಗೆ ವಿಶೇಷವಾದ ಅಭಿಮಾನ ಇದೆ. ಅವರು ಮಾಡಿರತಕ್ಕ ಎಲ್ಲಾ ಕೆಲಸಕ್ಕೂ ಕೂಡಾ ಅವರನ್ನು ಅಭಿನಂದಿಸಬೇಕಾಗಿದೆ. ಇವರ ಬಗ್ಗೆ ಕಾರ್ಖಾನೆಯ ಆಡಳಿತ ಮಂಡಲಿ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತಾರೆ. ನಾನು ಈ ಸಮಯದಲ್ಲಿ ಮಾನ್ಯ ಸದಸ್ಯರಾದ ಶ್ರೀಮಾನ್ ಅನ್ವರ್ ಖುದ್ದೂಸ್ ಅವರು ಏನು ಹೇಳಿದರು ಆ ಬಗ್ಗೆ ಹೇಳುವುದಾದರೆ ಆ ಅಧಿಕಾರಿಗಳ ಲಿಜಿಟಿಮೇಟ್

ಗ್ರಿವೆನ್ಸಸ್ ಏನಿವೆ ಅದನ್ನು ಸರ್ಕಾರದವರು ಮತ್ತು ಆಡಳಿತ ಮಂಡಲಿಯವರು ಅವರಿಗೆ ನ್ಯಾಯವನ್ನು ದೊರಕಿಸಿ ಕೊಡುತ್ತಾರೆ ಎಂದು ನಾನು ಅವರಿಗೆ ಭರವಸೆಯನ್ನು ಕೊಡುತ್ತೇನೆ. ಯಾವ ಮೆಮೋ ಇಷ್ಯೂ ಮಾಡುವುದಿಲ್ಲ, ಯಾರಿಗೂ ಪ್ರಮೋಷನ್ ಕೊಡುವುದಿಲ್ಲ ಎಂದು ಹೇಳಲಿಲ್ಲ. ಒಟ್ಟಿನಲ್ಲಿ ಯಾವ ಅಧಿಕಾರಿಗೆ ಪ್ರಮೋಷನ್ ಕೊಡಬೇಕು, ಯಾವ ಅಧಿಕಾರಿಗೆ ಪ್ರಮೋಷನ್ ಕೊಡಬಾರದು ಎನ್ನುವ ನಿರ್ಣಯ ಮಾಡುವುದಕ್ಕೆ ಈ ಸಭೆಯಲ್ಲಿ ಫೋರಂ ಇಲ್ಲ. ಅದಕ್ಕೆ ಬೇರೆ ವಿಧಾನಗಳು ಇವೆ. ನಾನಾ ಘಟ್ಟದಲ್ಲಿ ಇವುಗಳು ನಡೆಯಬೇಕಾಗುತ್ತದೆ. ಆಶ್ವಾಸನೆಯನ್ನು ಕೊಟ್ಟ ಮೇಲೆ ಅಧಿಕಾರಿಗಳೆಲ್ಲರೂ ಕೂಡ ಕೆಲಸಕ್ಕೆ ವಾಪಸ್ಸು ಹೋಗಿರತಕ್ಕದ್ದು ಸಂತೋಷದ ವಿಚಾರ. ಅದಕ್ಕಾಗಿ ನಾನು ಪುನಃ ಅವರನ್ನು ಅಭಿನಂದಿಸುತ್ತೇನೆ. ಇನ್ನು ಮುಂದೆ ಇಂಥಾ ಘಟನೆಗಳು ನಡೆಯುವುದಕ್ಕೆ ಅವಕಾಶ ಕೊಡಬಾರದು. ಏನೇ ಜಿಜ್ಞಾಸೆ, ವಿವಾದಗಳು ಇದ್ದರೆ ಸಂಬಂಧಪಟ್ಟವರೊಡನೆ ಕಳಕಳಿಯಿಂದ ಮಾತನಾಡಬೇಕು, ಚರ್ಚೆ ಮಾಡಬೇಕು, ಆನಂತರ ತೀರ್ಮಾನವನ್ನು ತೆಗೆದುಕೊಳ್ಳಬೇಕಾಗುತ್ತದೆ. ಅಧಿಕಾರಿಗಳು ಚಳುವಳಿ ಮಾರ್ಗವನ್ನು ಹಿಡಿದದ್ದು ನನ್ನ ದೃಷ್ಟಿಯಲ್ಲಿ ಅಪರಾಧ ಎಂದು ಹೇಳದೆ ವಿಧಿಯಿಲ್ಲ.

Sri KAGODU THIMMAPPA.— Sir, I want one clarification from the Hon'ble Minister.

Sri H. T. KRISHNAPPA.— Sir, I request the Hon'ble Minister to withdraw the appointment memo.

Mr. DEPUTY SPEAKER.— We were in the midst of a Bill. Since the Hon'ble Minister had some other work and as he was anxious to make the statement, I gave consent, as a sp cial case, to the Hon'ble Minister to make the statement. After his statement, hon. members wanted certain clarifications, and sought huge clarifications. There cannot be a long controversy over the issue. We cannot go on deviating from the rules.

Sri M. S. KRISHNAN.— Sir, I want one small clarification.

Mr. DEPUTY SPEAKER.— I have not called upon the hon. member.

ಶ್ರೀ ಕೋಣಂದೂರು ಲಿಂಗಪ್ಪ.— ಮಾನ್ಯ ಮಂತ್ರಿಗಳು ಕಡೆಯಲ್ಲಿ ಅಪರಾಧ ಎಂಬ ಶಬ್ದವನ್ನು ಉಪಯೋಗಿಸಿದ್ದಾರೆ. ಅದರ ಪರಿಣಾಮ ಏನು ಎಂಬುದನ್ನು ಹೇಳಬೇಕು.

Mr. DEPUTY SPEAKER.— Does the hon. member want to help me?

Sri KONANDUR LINGAPPA.— Yes, Sir.

Mr. DEPUTY SPEAKER.—The hon. member may please

Sri H. T. KRISHNAPPA.— I appeal to the Hon. Minister through you, Sir, to withdraw the appointment memo.

Mr. DEPUTY SPEAKER.— That matter is closed.

The Mysore Private Educational Institutions (Discipline and Control Bill 1973 – Motion to ConsiderDebate (*Contd.*)

Mr. DEPUTY SPEAKER.— Hon. member Sri K. R. S. Nayudu may please commence his speech.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು (ಶಾಂತಿ ನಗರ) :— ಮಾನ್ಯ ಅಧ್ಯಕ್ಷರೇ, ಮಾನ್ಯ ವಿದ್ಯಾ ಸಚಿವರು ಈ ಸಭೆಯ ಮುಂದೆ ತಂದಿರತಕ್ಕ ೧೯೭೩ ನೇ ಇಸವಿಯ ಮೈಸೂರು ರಾಜ್ಯದ ಖಾಸಗೀ ಶಿಕ್ಷಣ ಸಂಸ್ಥೆಗಳ (ಶಿಸ್ತು ಹಾಗೂ ಹತೋಟಿ)ಗೆ ಸಂಬಂಧಿಸಿದ ವಿಧೇಯಕವನ್ನು ಸ್ವಾಗತಿಸುತ್ತಾ ಈ ಸಂದರ್ಭದಲ್ಲಿ ನಾನು ನಾಲ್ಕು ಮಾತುಗಳನ್ನು ಹೇಳಬೇಕೆಂದು ಇಷ್ಟಪಡುತ್ತೇನೆ. ಈ ಮಸೂದೆಯ ಮೂಲ ಉದ್ದೇಶವನ್ನು ಮಾನ್ಯ ಮಂತ್ರಿಗಳು ಈ ಸಭೆಯಲ್ಲಿ ಆಗಲೇ ಹೇಳಿದ್ದಾರೆ. ಆ ರೀತಿ ಅವರು ಹೇಳತಕ್ಕ ಕಾಲದಲ್ಲಿ "Most of the said Institutions have not maintained the Code of Conduct and the Conditions of Service of the employees. Complaints are made that the tenure and working conditions of the employees are insecure and uncertain." ಎಂದು ಸಹ ಹೇಳಿದ್ದಾರೆ. ಇದನ್ನೆಲ್ಲಾ ನೋಡಿದರೆ ಈ ಮಸೂದೆಯ ಅವಶ್ಯಕತೆ ಎಷ್ಟಿದೆ ಎಂಬುದು ಚೆನ್ನಾಗಿ ಅರ್ಥವಾಗುತ್ತದೆ. ಈ ಮಸೂದೆ ಯಾವಾಗಲೋ ಬರಬೇಕಾಗಿತ್ತು. ಏತಕ್ಕೋ ಏನೋ ಗೊತ್ತಿಲ್ಲ. ಇದು ಬಹಳ ನಿಧಾನವಾಗಿ ಬಂದಿದೆ ಎಂದು ನನಗೆ ಅನಿಸುತ್ತದೆ. ಈ ತರಹ ಒಂದು ಮಸೂದೆ ಬಂದಿರತಕ್ಕದ್ದು ನಮ್ಮ ದೇಶದಲ್ಲೇ ಮೊಟ್ಟ ಮೊದಲನೆಯದಾಗಿರಬಹುದು ಎಂದು ನಾನು ತಿಳಿದುಕೊಂಡಿದ್ದೇನೆ. ನಮ್ಮ ಸಂಸ್ಥಾನದಲ್ಲಿ ಈ ಮಸೂದೆಗೆ ಸಂಬಂಧಪಟ್ಟ ಹಾಗೆ ಮೊದಲು ಒಂದು ಸುಗ್ರೀವಾಜ್ಞೆಯನ್ನು ಹೊರಡಿಸಿ ಈಗ ಅದನ್ನು ಕ್ರಮಗೊಳಿಸಲು ಈ ಮಸೂದೆಯನ್ನು ತಂದಿರುವುದು ಬಹು ಸಂತೋಷದ ವಿಷಯ ನಮ್ಮ ದೇಶದಲ್ಲಿ ಈಗ ಎಷ್ಟು ಎಜುಕೇಷನಲ್ ಇನ್‌ಸ್ಟಿಟ್ಯೂಷನ್‌ಗಳು ಇವೆ ಎಂಬುದನ್ನು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಸ್ವಲ್ಪ ಹೆಚ್ಚು ಕಡಿಮೆ ಹೇಳುವುದಾದರೆ ನರ್ಸರಿ ಸ್ಕೂಲಿನಿಂದ ಹಿಡಿದು ಕಾಲೇಜುವರೆಗೆ ಸುಮಾರು ೫ ಸಾವಿರ ಎಜುಕೇಷನಲ್ ಇನ್‌ಸ್ಟಿಟ್ಯೂಷನ್‌ಗಳು ಇರಬಹುದು ಎಂದು ಅನಿಸುತ್ತದೆ. ಈ ಎಜುಕೇಷನ್‌ಲ್ ಇನ್‌ಸ್ಟಿಟೂಷನ್‌ಗಳು ಎರಡು ಕ್ಷೇತ್ರಗಳಲ್ಲಿ ಇವೆ ಒಂದು ಸರ್ಕಾರಿ ಕ್ಷೇತ್ರ, ಇನ್ನೊಂದು ಸಾರ್ವಜನಿಕ ಕ್ಷೇತ್ರ.

ಸರ್ಕಾರೀ ಕ್ಷೇತ್ರದಲ್ಲಿಯಾದರೆ ಕೇಡರ ಅಂಡ ರೆಕ್ರೂಟಮೆಂಟ್ ರೂಲ್ಸ, ಸಿವಿಲ್ ರೂಲ್ಸ ಮುಂತಾದವೆಲ್ಲಾ ಇರುತ್ತದೆ. ಆದರೆ ಖಾಸಗೀ ಕ್ಷೇತ್ರಗಳಲ್ಲಿ ಈ ಯಾವ ರೂಲ್ಸಗಳೂ ಇಲ್ಲ. ಆದಕ್ಕಾಗಿ ಮಾನ್ಯ ವಿದ್ಯಾಮಂತ್ರಿಗಳು ಖಾಸಗೀ ಕ್ಷೇತ್ರದ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಉಪಾಧ್ಯಾಯರುಗಳಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಈ ಕಾಂಪ್ರಹೆನ್ಸಿವ್ ಬಿಲ್‌ನ್ನು ತಂದಿದ್ದಾರೆ. ಈ ರೀತಿ ತಂದಿರುವ ಕಾಲದಲ್ಲಿ ಇದರ ಮುಖ್ಯವಾದ ಗುರಿ ಏನು, ಉದ್ದೇಶ ಏನು ಎಂಬುದನ್ನು ಯೋಜನೆ ಮಾಡಬೇಕಾಗಿದೆ ಕ್ಲಾಸ್ ೩ ರಲ್ಲಿ Schedule of appointments, Board of management, Code of Conduct, Qualifications, Grade, Conditions governing the Institution, ಬಗ್ಗೆ ಹೇಳಿದ್ದಾರೆ ಮತ್ತು ಇವೆಲ್ಲದರ ಬಗ್ಗೆ ವಿವರಗಳನ್ನು ಈ ಬಿಲ್ ಜಾರಿಗೆ ಬಂದ ೩ ತಿಂಗಳೊಳಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಕಳಿಸಿಕೊಡಬೇಕೆಂದು ಸಹ ಹೇಳಿದ್ದಾರೆ. ಯಾವ ಯಾವ ಮೇನೇಜಮೆಂಟಿನವರು ಯಾವ ಯಾವ ಅಧಿಕಾರಿಗಳಿಗೆ ಈ ವಿವರಗಳನ್ನು ಕಳಿಸಿಕೊಡಬೇಕೆಂಬ ಬಗ್ಗೆ ಸಹಾ ಇಲ್ಲಿ ವಿವರಗಳನ್ನು ಕೊಡಲಾಗಿದೆ "ವಿದ್ಯಾಭ್ಯಾಸದಿಂದ ವಿನಯ ಲಭಿಸುತ್ತದೆಂದು ಬಲ್ಲವರು ಹೇಳುತ್ತಾರೆ. ವಿದ್ಯಾಭ್ಯಾಸದಿಂದಲೇ ಒಳ್ಳೆಯ ಶಿಸ್ತು ವಿದ್ಯಾರ್ಥಿಗಳಲ್ಲಿ ಬರುವುದಕ್ಕೆ ಸಾಧ್ಯವೇ ಹೊರತು ಅದನ್ನು ಅಂಗಡಿಗಳಿಂದ ಕೊಂಡು ತರುವುದಕ್ಕೆ ಸಾಧ್ಯವಿಲ್ಲ. Education is not an end in itself, but it is only a means to an end. ಇದನ್ನು ಸಂಪಾದನೆ ಮಾಡುವುದಕ್ಕೆ ವಿದ್ಯಾಭ್ಯಾಸ ಅತಿ ಮುಖ್ಯ. ಕೆಲವು ಪ್ರೈವೇಟ ಇನ್ಸಟಿಟ್ಯೂಷನ್‌ಗಳು ಚೆನ್ನಾಗಿ ಕೆಲಸ ಮಾಡಿಕೊಂಡು ಬಂದಿವೆ. ನ್ಯಾಷನಲ್ ಕಾಲೇಜು, ಸೆಂಟ್ ಜೋಸೆಫ್ ಕಾಲೇಜು, ಬಿಷಪ್ ಕಾಟನ್ ಸ್ಕೂಲ, ಬಾಲ್ಡವಿನ್ ಸ್ಕೂಲ, ಎಂ. ಇ.ಎಸ್ ಎಜುಕೇಷನ ಸೊಸಾಯಿಟಿ, ಲಿಂಗಾಯತ ಎಜುಕೇಷನ್ ಸೊಸೈಟಿ, ಮುಂತಾದ ಸಂಸ್ಥೆಗಳು ಚೆನ್ನಾಗಿ ಕೆಲಸ ಮಾಡಿಕೊಂಡು ಬಂದಿವೆ ಈ ಶಾಲೆಗಳವರು ಹೆಚ್ಚು ಅಂಕಗಳನ್ನು ಪಡೆದಿರುವ ವಿದ್ಯಾರ್ಥಿಗಳನ್ನೇ ಸೇರಿಸಿಕೊಳ್ಳುವುದರಿಂದ ರಿಜಲ್ಟ ಕೂಡ ಚೆನ್ನಾಗಿ ಬರುತ್ತದೆಂದು ಕೆಲವರು ಹೇಳುತ್ತಾರೆ ಆದರೆ ಅದು ಒಂದೇ ಮುಖ್ಯವಾದ ಕಾರಣವಲ್ಲ. ಇಂದು ನಾವು ನಮ್ಮ ಬಜೆಟ್ಟಿನಲ್ಲಿ ವಿದ್ಯಾಭ್ಯಾಸಕ್ಕಾಗಿಯೇ ಸುಮಾರು ೬೭ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಇಂದು ಖಾಸಗೀ ಸಂಸ್ಥೆಗಳು ಏನು ಹಣವನ್ನು ಖರ್ಚು ಮಾಡುತ್ತಿವೆ, ಅದರಲ್ಲಿ ೮೦ ಪರ್ಸೆಂಟಿನಷ್ಟು ಹಣವನ್ನು ಸರ್ಕಾರದವರೇ ಕೊಡುತ್ತಿದ್ದಾರೆ. ಆದಕಾರಣ ಅವುಗಳ ಮೇಲ್ವಿಚಾರಣೆಯನ್ನು ಸರ್ಕಾರದವರು ನೋಡಿಕೊಳ್ಳುವುದು ಅತಿ ಮುಖ್ಯವಾಗಿದೆ ಈ ಬಿಲ್‌ನ್ನು ಕೂಲಂಕುಷವಾಗಿ ನೋಡಿದರೆ, ಇದು ಒನ್-ಸೈಡೆ ಇದ್ದಂತೆ ಕಾಣುತ್ತಿದೆ. ಮೇನೇಜಮೆಂಟಿಗೆ ಸಂಬಂಧಪಟ್ಟಂತೆ ಇಲ್ಲಿ ಹೇಳಿದ್ದಾರೆಯೇ ಹೊರತು The responsibilities of the teachers and employees ಬಗ್ಗೆ ಏನನ್ನೂ ಇಲ್ಲಿ ಹೇಳಿಲ್ಲ. ಇದನ್ನು ನಾವು ಇಲ್ಲಿ ಮುಖ್ಯವಾಗಿ ಗಮನಿಸಬೇಕಾಗುತ್ತದೆ. ಯಾವುದೇ ಮೇನೇಜಮೆಂಟಿನವರು ತಮ್ಮಲ್ಲಿ ಕೆಲಸ ಮಾಡುತ್ತಿರುವ ಉಪಾಧ್ಯಾಯರುಗಳಿಗೆ ತೊಂದರೆ

ಯನ್ನು ಏನಾದರು ಕೊಟ್ಟರೆ, ಅದನ್ನು ಸರ್ಕಾರದವರ ಗಮನಕ್ಕೆ ತರುವುದಕ್ಕಾಗಿ Mysore State Aided Schools Teachers Association, Government Aided Schools or College Teachers Association, ಎಂಬುದಾಗಿ ಮಾಡಿಕೊಂಡಿದ್ದಾರೆ. ಈ ರೀತಿ ಉಪಾಧ್ಯಾಯರುಗಳಿಗೆ ಆಗುತ್ತಿರುವ ತೊಂದರೆಗಳನ್ನು ತಪ್ಪಿಸುವುದಕ್ಕಾಗಿ ಈ ಬಿಲ್ಲನ್ನು ತರಲಾಗಿದೆ. ಈ ನೌಕರರಿಗೆ ಸ್ವಲ್ಪ ವಾದರೂ ಅನುಕೂಲ ಸಿಕ್ಕಬೇಕೆಂಬ ಮೂಲ ಉದ್ದೇಶದಿಂದ ಇದನ್ನು ತಂದಿದ್ದಾರೆ. ಈ ನೌಕರರಿಗೆ ಇರುವ ಕುಂದುಕೊರತೆಗಳ ಬಗ್ಗೆ ಸಹ ಇಲ್ಲಿ ಹೇಳಿದ್ದಾರೆ. ಸೆಕ್ಷನ್ ನಾಲ್ಕರಲ್ಲಿ.

> No employee shall be dismissed or removed or reduced in rank except after an inquiry in which he has been informed of the charges against him and given a reasonable opportunity of being heard in respect of these charges and where it is proposed after such inquiry to impose on him such penalty, until he has been given a reasonable opportunity of making representations on the penalty proposed, but only on the basis of the evidence addued during such inquiry.

ಎಂಬುದಾಗಿ ಹೇಳಿದ್ದಾರೆ. ಈ ರೀತಿ ತೊಂದರೆಗೆ ಒಳಗಾದವರು ತಮ್ಮ ತೊಂದರೆಯನ್ನು ಹೇಳಿಕೊಳ್ಳುವುದಕ್ಕೆ ಇಲ್ಲಿ ಕಾಲಾವಕಾಶವನ್ನು ಕೊಟ್ಟಿದ್ದಾರೆ. ಮತ್ತು ಅಪೀಲ್ ಹೋಗಬಹುದೆಂದು ಸಹ ಹೇಳಿದ್ದಾರೆ. ಇಲ್ಲಿಯವರಿಗೆ ಇವರನ್ನು ಕೇಳುವವರೇ ಇರಲಿಲ್ಲ. ಎಂದು ಮಾನ್ಯ ಶಾಮಣ್ಣನವರು ಹೇಳುತ್ತಿದ್ದರು. ಅವರು ಉಪಾಧ್ಯಾಯರಾಗಿ ಕೆಲಸ ಮಾಡಿದ ಅನುಭವದ ಮೇಲೆ ಈ ಖಾಸಗೀ ಸಂಸ್ಥೆಗಳು ಯಾವ ರೀತಿ ಕೆಲಸ ಮಾಡುತ್ತಿವೆ ಎಂಬುದನ್ನು ಹೇಳಿದರು. ಅವರು ಹೇಳಿದ್ದು ನಿಜ. ತಮಗೆಲ್ಲಾ ತಿಳಿದಿರುವಂತೆ ಇಂದು ಸಾರ್ವಜನಿಕ ಕ್ಷೇತ್ರದಲ್ಲಿರುವ ವಿದ್ಯಾ ಸಂಸ್ಥೆಗಳಲ್ಲಿ ಮತ್ತು ಸರ್ಕಾರೀ ವತಿಯಲ್ಲಿರುವ ವಿದ್ಯಾ ಸಂಸ್ಥೆಗಳಲ್ಲಿಯೂ ಸಹ ಶೋಷಣೆ ನಡೆಯುತ್ತಿದೆ. Most of these educational institutions have been commercialised ಎಂದು ಹೇಳಿದರೆ ತಪ್ಪಾಗಲಾರದು ಮಾನ್ಯ ಶಾಮಣ್ಣನವರು ಹೇಳಿದಂತೆ ಶಾಲೆಗಳೇ. ಇರುವುದಿಲ್ಲ. ಆದರೂ ಗ್ರಾಂಟ ಪಡೆಯುತ್ತಿರುತ್ತಾರೆ. ಅಕ್ವಿಟಿನ್ಸ್ ರೋಲ್‌ನಲ್ಲಿ ಅನೇಕರ ಹೆಸರುಗಳು ಇರುತ್ತವೆ. ಆದರೆ ಕೆಲಸ ಮಾಡುವವರು ಬೇರೆಯವರಾಗಿರುತ್ತಾರೆ. ನಾವು ವಿದ್ಯಾಭ್ಯಾಸಕ್ಕಾಗಿ ಖರ್ಚು ಮಾಡುತ್ತಿರುವ ೬೭ ಕೋಟಿ ರೂಪಾಯಿಗಳ ಪೈಕಿ ೩ ಕೋಟಿ ರೂಪಾಯಿಗಳಷ್ಟು ಮಾಮೂಲಿಗಾಗಿಯೇ ಹೋಗುತ್ತಿದೆ. ನರ್ಸರಿ, ಪ್ರೈಮರಿ ಮತ್ತು ಸೆಕೆಂಡರಿ ಶಾಲೆಗಳ ಹಂತದಲ್ಲಿ ಬಹಳ ಅಚಾತುರ್ಯಗಳು ನಡೆಯುತ್ತಿವೆ. ಮಕ್ಕಳು ಕಡಿಮೆ ಇದ್ದರೂ ಸಹ ಜಾಸ್ತಿ ತೋರಿಸುವದು ಉಪಾಧ್ಯಾಯರುಗಳ ಸಂಖ್ಯೆಯನ್ನು ಜಾಸ್ತಿ ತೋರಿಸುವದು ಮುಂತಾದ ಅನೇಕ ಅಚಾ

ತುರ್ಯಗಳು ಈ ಖಾಸಗೀ ಶಾಲೆಗಳಲ್ಲಿ ನಡೆಯುತ್ತಿವೆ. ಇಲ್ಲಿ ನಡೆಯುತ್ತಿರುವ ಅನ್ಯಾಯಗಳನ್ನು ಹೋಗಲಾಡಿಸುವ ಸಲುವಾಗಿ ಸರ್ಕಾರದವರು ಸಹ ಅನೇಕ ಕಾನೂನುಗಳನ್ನು ಮಾಡಿದ್ದಾರ. ಸಂಬಳ ಸಾರಿಗೆ ಕೊಡುವ ವಿಷಯದಲ್ಲಿ ಚೆಕ್ ಸಿಸ್ಟಮನ್ನು ಜಾರಿಗೆ ತಂದರು. ಆದರೆ ಇದೂ ಸಹ ಕಾರ್ಯಗತವಾಗದಂತೆ ಈ ಖಾಸಗಿ ಸಂಸ್ಥೆಯವರು ಮಾಡುತ್ತಿದ್ದಾರೆ.

ಈ ಖಾಸಗಿ ಸಂಸ್ಥೆಯವರು ಉಪಾಧ್ಯಾಯರುಗಳನ್ನು ಕೆಲಸಕ್ಕೆ ಸೇರಿಸಿಕೊಳ್ಳುವ ಮೊದಲೇ ರಾಜೀನಾಮೆ ಪತ್ರವನ್ನು ಅವರಿಂದ ಬರೆಸಿಕೊಂಡಿರುತ್ತಾರೆ. ಮುಂದೆ ಉಪಾಧ್ಯಾಯರು ಏನಾದರೂ ಗರ್–ಗುರ್ ಎಂದರೆ ಸಾಕು, ಅವರು ಮೊದಲೇ ಬರೆದುಕೊಟ್ಟಿರುವ ರಾಜೀನಾಮೆ ಪತ್ರದ ಆಧಾರದ ಮೇಲೆ ಅವರನ್ನು ಕೆಲಸದಿಂದ ತೆಗೆದುಬಿಡುತ್ತಾರೆ. ಇಂದು ಪ್ರೈಮರಿ ಶಾಲೆಯಲ್ಲಿ ಕೆಲಸ ಮಾಡುವ ಉಪಾಧ್ಯಾಯರಿಗೆ ಸರ್ಕಾರೀ ಸಂಬಳದ ಪ್ರಕಾರ ೨೫೦ ರೂಪಾಯಿಗಳು ಬರಬೇಕು. ಆದರೆ ಇವರು ಕೇವಲ ೧೫೦ ರೂಪಾಯಿಗಳನ್ನು ಕೊಟ್ಟು ಚೆಕ್ ಸಿಸ್ಟಮ್ ಕಾರ್ಯಗತವಾಗದಂತೆ ಮಾಡುತ್ತಿದ್ದಾರೆ ಈ ರೀತಿಯೆಲ್ಲಾ ಅನ್ಯಾಯವಾಗುವುದನ್ನು ತಡೆಗಟ್ಟುವ ಸಲುವಾಗಿಯೇ ಮಾನ್ಯ ಮಂತ್ರಿಗಳು ಈ ಒಂದು ಬಿಲ್ಲನ್ನು ತಂದಿದ್ದಾರೆ. ಸೆಕ್ಷನ್ ನಾಲ್ಕರಲ್ಲಿ Termination of service and procedure for imposing penalties ಬಗ್ಗೆ ಹೇಳಿದ್ದಾರೆ. ಇಲ್ಲಿ ಹೇಳಿರುವ ಪ್ರಕಾರ ಉಪಾಧ್ಯಾಯರುಗಳನ್ನು ಕೆಲಸದಿಂದ ತೆಗೆದುಬಿಟ್ಟರೆ ಅವರು ೩ ತಿಂಗಳೊಳಗೆ ಅಪೀಲ್ ಹೋಗುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಮತ್ತು ಇದನ್ನು ತೀರ್ಮಾನ ಮಾಡಲು ಜಿಲ್ಲಾಮಟ್ಟದಲ್ಲಿರುವ ಜಡ್ಜ್‌ಗೆ ಅಧಿಕಾರ ಕೊಟ್ಟಿದ್ದಾರೆ.

> "The Educational Appellate Tribunal shall consist of one person who is or has been a judicial officer not below the rank of a District Judge."

ಎಂದು ಇಲ್ಲಿ ಹೇಳಿರುವುದು ಬಹಳ ಸಂತೋಷದ ಸಂಗತಿ. ಇಲ್ಲಿಯವರೆಗೆ ಅನ್ಯಾಯಕ್ಕೆ ಒಳಗಾದ ಉಪಾಧ್ಯಾಯರುಗಳು ಉಪವಾಸ ಮುಷ್ಕರ ಮಾಡುತ್ತಿದ್ದರು. ಘೆರಾವೋ ಮಾಡುತ್ತಿದ್ದರು; ಯಾರಿಗೆ ತಮ್ಮ ಕಷ್ಟವನ್ನು ಹೇಳಿಕೊಳ್ಳಬೇಕೆಂಬ ಬಗ್ಗೆ ಅವರಿಗೆ ಗೊತ್ತಿರಲಿಲ್ಲ. ಆದರೆ ಈಗ ಇದಕ್ಕಾಗಿ ಟ್ರಿಬ್ಯುನಲ್‌ನ್ನು ಅಪಾಯಿಂಟ್ ಮಾಡಿರುವುದು ಸಂತೋಷಕರವಾದ ವಿಷಯ. ಇಲ್ಲಿ ಪೆನಾಲ್ಟೀಸ್ ಕ್ಲಾಸ್ ಬಗ್ಗೆ ಕೂಡ ಹೇಳಿದ್ದಾರೆ.

> " The Manager or any other person who contravenes any of the provisions of this Act or fails or Omits to carry out any order made by the Educational Appellate Tribunal shall be punished with imprisonment which may extend to three months, or with fine which may extend to one hundred rupees or with both."

ಎಂದು ಇಲ್ಲಿ ಹೇಳಿದ್ದಾರೆ. ಕೆಲವರು ಇಲ್ಲಿ ಹೇಳಿರುವ ೩ ತಿಂಗಳ ಇಂಪ್ರಿಜನ್‌ಮೆಂಟನ್ನು ಒಂದು ವರ್ಷಕ್ಕೂ, ನೂರು ರೂಪಾಯಿಗಳ ಫೈನನ್ನು ೫ ಸಾವಿರ ರೂಪಾಯಿಗಳಿಗೂ ಹೆಚ್ಚಿಸಬೇಕೆಂದು ಹೇಳಿದರು. ಈ ಖಾಸಗೀ ಸಂಸ್ಥೆಗಳು ಸಾರ್ವಜನಿಕ ಕ್ಷೇತ್ರದಲ್ಲಿ ಮತ್ತು ಸಹಕಾರಿ ಕ್ಷೇತ್ರದಲ್ಲಿ ನಡೆಯುತ್ತಿರುವುದರಿಂದ ಒಂದೇಸಲಕ್ಕೆ ಅವರು ತಪ್ಪು ಮಾಡಿದರು ಎಂದು ೫ ಸಾವಿರ ರೂಪಾಯಿಗಳ ದಂಡವನ್ನು ವಿಧಿಸಿದರೆ ಅವರಿಗೆ ಕೊಡುವುದಕ್ಕಾಗುವುದಿಲ್ಲ. ಆದ್ದರಿಂದ ಈಗ ಇಲ್ಲಿ ಹೇಳಿರುವುದೇ ಸರಿಯಾಗಿದೆ ಎಂದು ನಾನು ಒತ್ತಿ ಹೇಳುತ್ತೇನೆ. ಮಾನ್ಯ ಮಂತ್ರಿಗಳು ಕೊಟ್ಟ ಒಂದು ಅಂಕಿಅಂಶಗಳ ಪ್ರಕಾರ ಇಂದು ನಮ್ಮ ರಾಜ್ಯದಲ್ಲಿ ಈ ಖಾಸಗೀ ಸಂಸ್ಥೆಗಳು ೩ ಸಾವಿರದಿಂದ ನಾಲ್ಕು ಸಾವಿರದ ವರೆಗೆ ಇವೆ ಎಂದು ಅಂದಾಜು ಮಾಡಬಹುದು. ಈ ಸಂಸ್ಥೆಗಳಿಗೆ ನಮ್ಮ ಬಜೆಟ್ ಹಣದಿಂದ ಗ್ರಾಂಟ್-ಇನ್-ಯೇಡ್ ಪ್ರಕಾರ ೮೦ ಪರ್ಸೆಂಟ್ ವರೆಗೆ ಸಹಾಯಧನವನ್ನು ಕೊಡುತ್ತಿದ್ದೇವೆ. ಆದರೂ ಕೂಡ ಈ ಸಂಸ್ಥೆಗಳಲ್ಲಿ ಅಂದರೆ ಪ್ರೈಮರಿ ಸ್ಟೇಜಿನಿಂದ ಹಿಡಿದು ಕಾಲೇಜು ಮಟ್ಟದವರೆಗೆ ಅನೇಕ ಅನ್ಯಾಯಗಳು ನಡೆಯುತ್ತಿವೆ. ಈ ಎಲ್ಲ ಅನ್ಯಾಯಗಳನ್ನು ಹೋಗಲಾಡಿಸಲು ಮತ್ತು ಇಲ್ಲಿ ಕೆಲಸ ಮಾಡುತ್ತಿರುವ ಉಪಾಧ್ಯಾಯರಿಗೆ ಅನುಕೂಲ ಮಾಡಿಕೊಡಲು ಈ ಒಂದು ಬಿಲ್ಲನ್ನು ಮಾನ್ಯ ವಿದ್ಯಾಮಂತ್ರಿಗಳು ಏನು ತಂದಿದ್ದಾರೆ ಇದು ಸಮಯೋಚಿತವಾಗಿದೆ ಎಂದು ಹೇಳುತ್ತೇನೆ. ಇನ್ನು ಮುಂದೆ ಇಲ್ಲಿ ಕೆಲಸ ಮಾಡುವ ಎಲ್ಲ ಉಪಾಧ್ಯಾಯರುಗಳು ಸರ್ಕಾರೀ ಶಾಲೆಗಳ ಉಪಾಧ್ಯಾಯರಂತೆ ಪೂರ್ತಾ ಸಂಬಳವನ್ನು ತೆಗೆದುಕೊಳ್ಳುವುದಕ್ಕೆ ಇದರಿಂದ ಅವಕಾಶವಾಗುತ್ತದೆಂದು ಮತ್ತು ಶಾಶ್ವತವಾದಂಥ ಉದ್ಯೋಗ ದೊರಕುತ್ತದೆಂದು ನಾನು ತಿಳಿದಿದ್ದೇನೆ. ಮುಖ್ಯವಾಗಿ ಈ ಬಿಲ್ಲನ್ನು ಮಾನ್ಯ ವಿದ್ಯಾಮಂತ್ರಿಗಳು ತಂದಿರುವುದು ಎಲ್ಲ ರೀತಿಯಿಂದಲೂ ಸಮಯೋಚಿತವಾಗಿದೆ ಎಂದು ಮತ್ತೊಮ್ಮೆ ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

5-30 P.M.

†ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿದ್ಯಾಮಂತ್ರಿಗಳು ತಂದಿರುವ ಮಸೂದೆಯ ಉದ್ದೇಶ ಒಳ್ಳೆಯದು ಎಂಬುದರಲ್ಲಿ ನಾನೂ ಒಬ್ಬ. ಇದರ ಉದ್ದೇಶದ ಬಗ್ಗೆ ಮಾನ್ಯ ಮಂತ್ರಿಗಳು ಮಾತನಾಡುತ್ತಾ, ನಮ್ಮ ರಾಜ್ಯದಲ್ಲಿ ಎಷ್ಟು ಜನ ಉಪಾಧ್ಯಾಯರುಗಳು ಇದ್ದಾರೆ, ಎಷ್ಟು ಶಾಲೆಗಳಿವೆ, ಎಷ್ಟು ಜೂನಿಯರ ಕಾಲೇಜುಗಳಿವೆ ಎಂಬ ಬಗ್ಗೆ ವಿವರಣೆ ಕೊಟ್ಟರು. ಅವರ ವಿವರಣೆಯನ್ನು ನೋಡಿದರೆ ಇದು ಭಾರಿ ಅಗಾಧವಾದ ಪ್ರಶ್ನೆ, ಬೃಹತ್ ಸಮಸ್ಯೆ ಎಂಬುದನ್ನು ಮರೆಯುವಂತಿಲ್ಲ. ಆದರೆ ಒಂದೇ ಒಂದು ಸೀಮಿತವಾದ ವಿಷಯಕ್ಕೆ ಸಂಬಂಧಪಟ್ಟಂತೆ ಮಾತ್ರ ಈ ಹೊತ್ತು ಶಾಸನವನ್ನು ತೆಗೆದುಕೊಂಡು ಬಂದಿದ್ದಾರೆ. ಈ ಶಾಸನವನ್ನು ತೆಗೆದುಕೊಂಡು ಬಂದಿರುವುದನ್ನು ನೋಡಿದರೆ

ಈ ಸಮಸ್ಯೆ ಬೃಹತ್ ಸಮಸ್ಯೆ ಮಾತ್ರವಲ್ಲ, ಸರ್ಕಾರದ ವಿದ್ಯಾ ನೀತಿ ಏನಿದೆ ಅದು ಎಷ್ಟೊಂದು ಅಸಮರ್ಪಕವಾಗಿದೆ, ಎಷ್ಟೊಂದು ತೊಡಕಾಗಿದೆ, ಯಾರು ವಿದ್ಯೆಯನ್ನು ಕಲಿಸುತ್ತಾರೆ ಅಂಥವರಿಗೆ ಯಾವ ರೀತಿ ತೊಡಕುಂಟಾಗಿದೆ, ಆ ರೀತಿ ತೊಡಕುಂಟಾಗಿರುವುದರಿಂದ ಯಾರು ಕಲಿತುಕೊಳ್ಳುತ್ತಾರೆ ಅಂಥವರಿಗೆ ಯಾವ ರೀತಿ ತೊಡಕುಂಟಾಗಿದೆ ಎನ್ನುವುದು ಕೂಡ ಗಮನಿಸಬೇಕಾದ ವಿಷಯ.

ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟಂತೆ ಒಂದು ಸಮಗ್ರ ಮಸೂದೆಯನ್ನು ತರುವುದಾಗಿ ಮಾನ್ಯ ಮಂತ್ರಿಗಳು ಹೇಳಿದ್ದರು. ಆದರೆ ಅದಕ್ಕೆ ಮುಂಚೆ ಒಂದೇ ಒಂದು ವಿಷಯದ ಬಗ್ಗೆ ಮಾತ್ರ ಚರ್ಚೆ ಮಾಡುವುದಕ್ಕೆ ಹೊರಟಿದ್ದಾರೆ. ಅದೇನೆಂದರೆ ಉಪಾಧ್ಯಾಯರನ್ನು ಕೆಲಸದಿಂದ ಕಿತ್ತು ಹಾಕುವುದು, ವಜಾ ಮಾಡುವುದು ಅಥವಾ ಬೇರೆ ರೀತಿಯಿಂದ ತೊಂದರೆ ತಾಪತ್ರಯ ಕೊಡುವುದನ್ನು ಸ್ವಲ್ಪ ಮಟ್ಟಿಗೆ ಹತೋಟಿಯಲ್ಲಿಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಹಾಗೆ ಹತೋಟಿಯಲ್ಲಿಡಬೇಕಾದರೆ ಎಲ್ಲ ಅಂಶಗಳನ್ನೂ ಒಳಗೊಂಡಂತೆ ಮಸೂದೆಯನ್ನು ಈಗಲೇ ತೆಗೆದುಗೊಂಡು ಬಂದರೆ ಸಾಧ್ಯವೇ ಹೊರತು ಮುಂದೆ ನೋಡೋಣ ಎಂದರೆ ಸಾಧ್ಯವಿಲ್ಲ. ಈಗಾಗಲೇ ಬೇಕಾದಷ್ಟು ಅನಾಹುತವಾಗಿದೆ. ಶ್ರೀ ಮುಲ್ಲಾರಾಧ್ಯ ಕಮಿಟಿ ರಿಪೋರ್ಟ್ ಬಂದು, ಅದು ಚರ್ಚೆಯಾದ ಮೇಲೆ ಅದರಲ್ಲಿನ ಸಿಫಾರಸುಗಳನ್ನು ಒಪ್ಪಿಕೊಂಡು ಒಂದು ಶಾಸನವನ್ನು ಮಾಡುವ ಹೊತ್ತಿಗೆ ಎಷ್ಟು ಜನ ಉಪಾಧ್ಯಾಯರನ್ನು ಕಿತ್ತು ಹಾಕಿರುತ್ತಾರೆ, ಎಷ್ಟು ಜನಗಳಿಗೆ ತೊಂದರೆಯಾಗುತ್ತದೆ, ತಾಪತ್ರಯವಾಗುತ್ತದೆ ಎನ್ನುವುದನ್ನು ಯೋಚನೆ ಮಾಡಬೇಕು ಪ್ರಶ್ನೆ ಅಗಾಧವಾಗಿದೆ ಎನ್ನುವುದನ್ನು ಎಲ್ಲರೂ ಒಪ್ಪಿಕೊಳ್ಳುತ್ತೇವೆ. ಖಾಸಗಿ ವಿದ್ಯಾಸಂಸ್ಥೆಗಳೇನಿವೆ ಅವು ವಿದ್ಯಾ ಇಲಾಖೆಯವರ ಮಾತನ್ನು ಕೇಳುವುದಿಲ್ಲ; ಮಂತ್ರಿಗಳ ಮಾತಿಗೆ ಕೂಡ ಬೆಲೆ ಕೂಡದೆ ಇರತಕ್ಕ ಪರಿಸ್ಥಿತಿ ಇದೆ ಮಾನ್ಯಮಂತ್ರಿಗಳ ಹತ್ತಿರ ನಾನು ಹೋಗಿ ಮಾತನಾಡಿದ್ದೇನೆ, ಅವರೂ ಕೂಡ ಈ ಬಗ್ಗೆ ಒಪ್ಪಿಕೊಂಡಿದ್ದಾರೆ. ವಿದ್ಯಾಇಲಾಖೆ ದುಡ್ಡು ಕೊಡುತ್ತದೆ; ಲಕ್ಷಾಂತರ ಕೋಟ್ಯಂತರ ರೂಪಾಯಿ ಖಾಸಗಿ ಸಂಸ್ಥೆಗಳ ಮೇಲೆ ಖರ್ಚು ಮಾಡುತ್ತಿದೆ. ಹೀಗಿದ್ದರೂ ಸಹ ಇದುವರೆಗೂ ಅಲ್ಲಿ ಕೆಲಸ ಮಾಡುವಂಥ ಜನರಿಗೆ ಇರುವ ಸೆಕ್ಯೂರಿಟಿ ಆಫ್ ಸರ್ವಿಸ್ ಏನೂ ಇಲ್ಲ. ಅಂಥ ಖಾಸಗಿ ಸಂಸ್ಥೆಗಳು ಯಾವವು ಎಂಬುದಕ್ಕೆ ಬೇಕಾದಷ್ಟು ಹೆಸರುಗಳನ್ನು ನಾನು ಕೊಡಬಲ್ಲೆ ನಂದನವನ ಸ್ಕೂಲ, ಕಮಲಾ ನೆಹರೂ ಮಕ್ಕಳ ಮಂದಿರ, ಕಲ್ಬುರ್ಗಿ ಸ್ಕೂಲು ಇತ್ಯಾದಿ ಹಾಗೂ ವಿಶ್ವೇಶ್ವರ ಪುರದಲ್ಲಿನ ಒಂದು ಕಾಲೇಜಿನಲ್ಲಿ ಚಂಪಕಮಾಲಿನಿ ಎಂಬುವವರನ್ನು ಕೆಲಸದಿಂದ ಕಿತ್ತು ಹಾಕಿರುವುದು ಇಂಥ ನೂರಾರು ನಿದರ್ಶನಗಳನ್ನು, ಉದಾಹರಣೆಗಳನ್ನು ಕೊಡಬಹುದು. ಬಹಳ ಜನ ಉಪಾಧ್ಯಾಯರನ್ನು ಖಾಸಗೀ ವಿದ್ಯಾ ಸಂಸ್ಥೆಗಳಲ್ಲಿ ಕಿತ್ತು ಹಾಕಿದ್ದಾರೆ ಈ ಅವ್ಯವಹಾರಗಳ ಬಗ್ಗೆ ತನಿಖೆ ಮಾಡಿ ವರದಿ ಮಾಡಲು ಸರ್ಕಾರದವರು ನಾರಾಯಣಸ್ವಾಮಿ ಕಮಿಟಿಯನ್ನು ಮಾಡಿದರು. ಅವರಿಗೆ ಎಲ್ಲರೂ ಅರ್ಜಿ ಗಳನ್ನು ಬರೆದುಕೊಂಡರು. ಹಾಗೆ ಅರ್ಜಿ ಬರೆದುಕೊಂಡವರನ್ನೇ ಕಿತ್ತು

ಹಾಕಿದ್ದಾರೆ. ಆದರ ಬಗ್ಗೆ ಏನಾದರೂ ಈ ಬಿಲ್ಲಿನಲ್ಲಿ ಹೇಳಿದ್ದಾರೆಯೋ ? ಮಲ್ಲಾರಾಧ್ಯ ಕಮಿಟಿ ವರದಿ ಬರುವುದಕ್ಕೆ ಮುಂಚೆ ಒಳ್ಳೆಯದು ಮಾಡಬೇಕು ಎಂದು ಮುಂದೆ ಆಗುವುದರ ಬಗ್ಗೆ ಸ್ವಲ್ಪ ಮಟ್ಟಿಗೆ ಹಿಡೋಟ ಇಟ್ಟುಕೊಳ್ಳುವುದಕ್ಕೆ ಪ್ರಯತ್ನ ಪಟ್ಟಿದ್ದಾರೆಯೋ ಹೊರತು ಈ ಹಿಂದೆ ತೊಂದರೆ ಪಟ್ಟಿರುವವರಿಗೆ ಏನೂ ಮಾಡುವುದಕ್ಕೆ ಪ್ರಯತ್ನ ಪಟ್ಟಿಲ್ಲ.

ಶ್ರೀ ಎ ಆರ್. ಬದರೀನಾರಾಯಣ.—ರಿಟ್ರಾಸ್ಪೆಕ್ಟಿವ್ ಆಗಿ ಮಾಡುವುದು ಇಲ್ಲೀಗಲ್ ಆಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಸಚಿವರಿಗೆ ನನ್ನ ಅನುಭವವನ್ನು ನಾನು ಸ್ವಲ್ಪ ಹೇಳಿಕೊಳ್ಳುತ್ತೇನೆ. ಈ ಕಾನೂನನ್ನು ಮಾಡುವುದಕ್ಕೆ ಮೊದಲೇ ಇದುವರೆಗಾಗಲೇ ಅನೇಕ ಜನರನ್ನು ಕೆಲಸದಿಂದ ಕಿತ್ತು ಹಾಕಿದ್ದಾರೆ. ಅವರ ಬಗ್ಗೆ ಏನಾದರೂ ಯೋಚನೆ ಮಾಡುತ್ತಾರೆಯೋ ? ಈ ಮಸೂದೆಯಲ್ಲಿ ಅಂಥವರಿಗೆ ಏನಾದರೂ ಅವಕಾಶವಿದೆಯೋ ಹೇಗೆ ? ಎಜ್ಯುಕೇಷನಲ್ ಟ್ರಿಬ್ಯುನಲ್ ರಚನೆ ಮಾಡಬೇಕೆಂದಿರುತ್ತಾರೆ. ಅವರು ಮುಂದೆ ಅಪೀಲ್ ಹಾಕುವುದಕ್ಕೆ ಅವಕಾಶವಿದೆಯೇ ? ಈ ಮಸೂದೆ ಕಾನೂನಾದ ಮೇಲೆ ಮಾತ್ರ ತೆರಿಗೆಗೆ ಒಳಗಾಗುವವರು ಅಪೀಲು ಹೋಗುವದಕ್ಕೆ ಅವಕಾಶವಿದೆ.

ಇದುವರೆಗಾಗಲೇ ಟರ್ಮಿನೇಟ್ ಆದವರಿಗೆ ಟ್ರಿಬ್ಯುನಲ್ ಮುಂದೆ ಹೋಗುವುದಕ್ಕೆ ಅವಕಾಶವಿಲ್ಲ. ಅಂಥ ಅವಕಾಶವನ್ನು ಈ ಕಾನೂನು ಪ್ರಕಾರ ಕೊಡುವುದಕ್ಕೆ ಅವಕಾಶವಿಲ್ಲವೆಂದು ಹೇಳುತ್ತಾರೆ. ಆದರೆ ನಾನು ಅದನ್ನು ಒಪ್ಪಿಕೊಳ್ಳುವುದಿಲ್ಲ. ಮಾನ್ಯ ಮಂತ್ರಿಗಳಿಗೆ ಕಾನೂನು ತಜ್ಞರು ಅಂಥ ಅಭಿಪ್ರಾಯವನ್ನು ಕೊಟ್ಟಿರಬಹುದು. ತಮಗೆ ಗೊತ್ತಿರುವ ಹಾಗೆ ಇಂಡಸ್ಟ್ರಿಯಲ್ ಡಿಸ್ಪ್ಯೂಟ್ಸ್ ಆಕ್ಟ್ ಪ್ರಕಾರ ಏನಿತ್ತು ಎಂದರೆ ಯಾರಾದರೂ ಒಬ್ಬ ಕಾರ್ಮಿಕನನ್ನು ಕೆಲಸದಿಂದ ತೆಗೆದು ಹಾಕಿದರೆ ಅಂಥವನು ಯೂನಿಯನ್ ಮೂಲಕವೇ ಇದುವರೆಗೂ ಹೋಗಬೇಕಾಗಿತ್ತು. ಆದರೆ ಸಂಬಂಧಪಟ್ಟ ಕ್ಲಾಜಿಗೆ ಕೇಂದ್ರ ಸರ್ಕಾರದವರು ಒಂದು ತಿದ್ದುಪಡಿಯನ್ನು ತಂದು ಟರ್ಮಿನೇಟ್ ಆದವನು ನೇರವಾಗಿ ಅಪೀಲ್ ಹೋಗಬಹುದು ಎಂದು ಮಾಡಿದರು.

Sri A. R. BADARINARAYAN.— There was a previous Act existing. This is a fresh Act. For the first time the Act is coming into being. We have only grant in aid code rules.

Sri H. T. KRISHNAPPA.— As a matter of fact all these cases are pending before different forums.

ಶ್ರೀ ಎಂ. ಎಸ್. ಕೃಷ್ಣನ್.— ಒಂದು ಆಕ್ಟ್ ಇದ್ದು ಅದಕ್ಕೆ ತಿದ್ದುಪಡಿಯನ್ನು ರಿಟ್ರಾಸ್ಪೆಕ್ಟಿವ್ ಆಗಿ ತಂದಿರುವುದು ನಿಜ. ಈ ತಿದ್ದುಪಡಿಯನ್ನು ತಂದಾಗಲೂ ಕೂಡ ಆ ರೀತಿ ತರುವುದಕ್ಕೆ ಸಾಧ್ಯವಿಲ್ಲ. ತಂದರೆ ತೊಂದರೆಯಾಗುತ್ತದೆ, ಕಾನೂನಿಗೆ

ವಿರೋಧವಾಗುತ್ತದೆ ಎನ್ನುವ ವಾದವನ್ನು ನಮ್ಮ ದೇಶದ ಬಂಡವಾಳದಾರರು, ಮಾಲೀಕರು ಹೂಡಿದರು. ಇದು ಹುರುಳಿಲ್ಲದ ವಾದ ಎಂದು ತೀರ್ಮಾನವಾಗಿ ಈ ಹೊತ್ತು ಸ್ವಲ್ಪ ಮಟ್ಟಿಗೆ ಭದ್ರತೆ ಬಂದಿದೆ.

ಶ್ರೀ ಎ. ಆರ್ ಬದರೀನಾರಾಯಣ್.— ನಾವೇನಾದರೂ ಆ ರೀತಿ ಮಾಡಿದರೆ ಹೈಕೋರ್ಟಿನಲ್ಲಿ ರಿಟ್ ಹಾಕುತ್ತಾರೆ.

ಶ್ರೀ ಎಂ. ಎಸ್. ಕೃಷ್ಣನ್.— ರಿಟ್ ಅರ್ಜಿ ಹಾಕುತ್ತಾರೆಂದು ನಮ್ಮ ರಾಜ್ಯದ ಕಾನೂನು ತಜ್ಞರು ಹೇಳಿದ್ದರ ಆಧಾರದ ಮೇಲೆ ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಭೂ ಸುಧಾರಣಾ ಮಸೂದೆಗೆ ಸಂಬಂಧಪಟ್ಟಂತೆ ತಿದ್ದುಪಡಿಗಳನ್ನು ರಿಟ್ರಾಸ್ಪೆಕ್ಟಿವ್ ಆಗಿ ತಂದಿದ್ದಾರೆ. ಈ ಮಸೂದೆಯಲ್ಲಿ ಸಹ ರಿಟ್ರಾಸ್ಪೆಕ್ಟಿವ್ ಆಗಿ ತಂದರೆ ಏನೂ ತೊಂದರೆಯಾಗುವುದಿಲ್ಲ ಎನ್ನುವದು ನನ್ನ ಸ್ಪಷ್ಟವಾದ ಅಭಿಪ್ರಾಯ. ರಿಟ್ರಾಸ್ಪೆಕ್ಟಿವ್ ಆಗಿ ಜಾರಿಗೆ ತರಬೇಕು ಎಂದರೆ ಮೊದಲನೇ ಸಲ ಕಾನೂನು ಮಾಡುತ್ತಿರುವಾಗಲೇ ಆ ರೀತಿ ಮಾಡುವುದಕ್ಕಾಗುವುದಿಲ್ಲ ಎಂದು ಎಲ್ಲಿಯೂ ಹೇಳಿಲ್ಲ. ಆ ರೀತಿ ಮಾಡುವುದಕ್ಕೆ ಅವಕಾಶವಿದೆ. ಕೆಲವರು ನಾರಾಯಣಸ್ವಾಮಿ ಕಮಿಟಿ ಮುಂದೆ ಅರ್ಜಿ ಹಾಕಿಕೊಂಡಿದ್ದಾರೆ. ಅವರು ಅದರಲ್ಲಿ ಏನೇನು ಹೇಳಿದ್ದಾರೆಯೋ ಗೊತ್ತಿಲ್ಲ ಮತ್ತು ಕಮಿಟಿಯ ರಿಪೋರ್ಟಿನಲ್ಲಿ ಏನು ಹೇಳಿದ್ದಾರೆಯೋ ನಮಗೆ ಗೊತ್ತಿಲ್ಲ. ಆ ರಿಪೋರ್ಟನ್ನು ನಮಗೆ ಕೊಟ್ಟರೆ ಸಂತೋಷ. ಕಮಿಟಿಯ ರಿಪೋರ್ಟನ್ನು ಕೊಡುವುದಾಗಿ ಮಾನ್ಯ ಮಂತ್ರಿಗಳು ಹೇಳಿದ್ದರು. ಆದರೆ ಇದುವರೆಗೂ ಕೊಟ್ಟಿಲ್ಲ. ಆ ರಿಪೋರ್ಟನ್ನು ಕೊಟ್ಟರೆ ಅನೇಕ ವಿಷಯಗಳು ತಿಳಿದು ಬರುತ್ತವೆ. ಅದರಿಂದ ಮುಂದೆ ಬರುವ ಶಾಸನ ಯಾವ ರೀತಿ ಇರಬೇಕು ಎನ್ನುವುದಕ್ಕೆ ಅನುಕೂಲವಾಗುತ್ತದೆ. ಆ ದೃಷ್ಟಿಯಿಂದಲಾದರೂ ರಿಪೋರ್ಟನ್ನು ಕೊಡಬೇಕು ಎಂದು ಹೇಳುತ್ತೇನೆ.

ಹಿಂದಿನವರಿಗೆ ಈ ಮಸೂದೆಯಲ್ಲಿ ಅಪೀಲಿಗೆ ಅವಕಾಶ ಕೊಡುವುದಕ್ಕಾಗುವುದಿಲ್ಲವೆನ್ನುವುದು ಸರಿಯಾದುದಲ್ಲ. ಇದನ್ನು ಪುನರ್ವಿಮರ್ಶೆ ಮಾಡಬೇಕು ಮತ್ತು ಅಂಥವರಿಗೂ ಅನುಕೂಲವಾಗುವ ಹಾಗೆ ಮಾಡಬೇಕು ಎಂದು ಹೇಳುತ್ತೇನೆ.

Sri A. R. BADARINARAYANA.— The Government is very anxious to give maximum protection to the teachers in private institutions. We have to do things in a legal manner. We have to be guided by certain rules and regulations. The hon. member will please not think that we are guided or inspired by anybody and we want to prevent anything. We are very anxious but please show the way it can be done in a legal manner.

Mr. DEPUTY SPEAKAR.— If the hon. Member tries to show a way, it will be still more difficult right now.

Sri H. T. KRISHNAPPA.— I want to know whether legal opinion was sought or not. Hundreds of cases which were already dicided by the University or departmental authorities are pending execution. Such persons should be protected.

Sri B. V. KAKKILAYA.— We have passed number of Bills with retrospective effect.

Sri M. S. KRISHNAN.—The question is to give relief to those people who have been terminated prior to this enactment. The law may not sustain this. In my opinion, this is a matter which has to be gone into more deeply.

Sri A. R. BADARINARAYANA.—We have an open mind.

Sri M. S. KRISHNAN.— I am not suggesting for a movement that you are not anxious to give relief to teachers. I know fully well you are very anxious to do something for teachers. Otherwise this Bill will not have come before the House. We have been shouting on the floor of this House for the last several years regarding termination of services of teachers. ಈಗ ಆದರೂ ಆಶಾಕಿರಣ ಬಂದಿರುವದು ನೋಡಿದರೆ ನಿಮ್ಮ ಉದ್ದೇಶ ಒಳ್ಳೆಯದು ಎಂದು ಕಾಣುತ್ತದೆ. ಅದರ ಬಗ್ಗೆ ಹೇಳುವದಕ್ಕೆ ಹೋಗುವದಿಲ್ಲ. ಉದ್ದೇಶ ಮಾತ್ರ ಇದ್ದರೆ ಸಾಲದು, ಅದು ಸಫಲವಾಗಬೇಕಾದರೆ, ಯಾರಿಗೆ ಬಹಳ ಅನ್ಯಾಯವಾಗಿದೆ, ಅಂಥವರಿಗೆ ಅನುಕೂಲ ಮಾಡಬೇಕು. ಅವರು ಎಜುಕೇಷನಲ್ ಟ್ರಿಬ್ಯೂನಲ್‌ಗೆ ಹೋಗುವದಕ್ಕೆ ಅನುಕೂಲ ಮಾಡಿಕೊಡಬೇಕು. ಇದು ಬಹಳ ಮುಖ್ಯವಾದ ವಿಷಯ. ಟರ್ಮಿನೇಟ್ ಆಗಿ ಕೆಲಸದ ಮೇಲೆ ತೆಗೆದುಕೊಳ್ಳಬೇಕು ಎಂದು ಅನ್ಯಾಯವಾಗಿರುವವರು ಅಪ್ಲಿಕೇಷನ್ ಹಾಕಿ ವಿದ್ಯಾಧಿಕಾರಿಗಳ ಮುಂದೆ ಹೋಗಿ ತೀರ್ಮಾನ ಕೊಟ್ಟಿರುವದು ಉಂಟು. ಅಂಥವರು ಇದ್ದಾರೆ ಇನ್ನು ಕೆಲವರು ಹೋಗದೇ ಇರಬಹುದು. ಹೋಗದೇ ಇರುವವರ ವಿಷಯಕ್ಕೆ ಹೋಗುವುದಿಲ್ಲ. ಯಾರು ಯಾರು ಅಪ್ಲಿಕೇಷನ್ ಹಾಕಿ ಅದು ತೀರ್ಮಾನವಾದ ಮೇಲೆ ಕೆಲಸದ ಮೇಲೆ ತೆಗೆದುಕೊಳ್ಳಬೇಕೆಂದು ಹೇಳಿದ್ದೀರಿ ಅಂಥವರಿಗೂ ಅವಕಾಶ ಕಲ್ಪಿಸಿಕೊಡಬೇಕು. ತಾವು ಏನೇ ಕಾನೂನು ಮಾಡಿ, ನೀವು ಚಾಪೆ ಅಡಿಯಲ್ಲಿ ಹೋದರೆ ಅವರು ರಂಗೋಲಿ ಕೆಳಗೆ ನುಸುಳುತ್ತಾರೆ. ಎಂಥ ಆಕ್ಟ್ ಬಂದರೂ ಸುಪ್ರೀಂ ಕೋರ್ಟಿಗೆ ಹೋಗುವ ಪಟ್ಟಭದ್ರ ಹಿತಾಸಕ್ತಿಗಳು ಇದ್ದಾರೆ. ದೊಡ್ಡ ದೊಡ್ಡ ಎಜುಕೇಷನಲ್ ಇನ್‌ಸ್ಟಿಟ್ಯೂಷನ್ಸ್‌ನ್ನು ಬಂಡವಾಳದಾರರು ನಡೆಸುತ್ತಿದ್ದಾರೆ. ಇದು ಕಮರ್ಷಿಯಲ್ ಎಜುಕೇಶನ್ ಆಗಿದೆ. ಪಟ್ಟಭದ್ರ ಹಿತಾಸಕ್ತಿಗಳು ಅಲ್ಲೀ ಉಳಿದು

ಕೊಳ್ಳಲಿಕ್ಕೆ ಸುಪ್ರೀಮ ಕೋರ್ಟಿಗೆ ಹೋಗುತ್ತಾರೆ. ಆ ರೀತಿ ಮಾಡಿದರೆ ಏನು ಮಾಡುವದು ಎನ್ನುವ ಅಭಿಪ್ರಾಯ ಬಾರದೇ ಇರಲಿ.

ಶ್ರೀ ಎ. ಆರ್. ಬದರೀನಾರಾಯಣ.— ಕಕ್ಕಿಲಾಯರವರು ಹೇಳಿದ್ದಕ್ಕೆ ನಾನು ಹಾಗೆ ಹೇಳಿದೆ.

Mr. DEPUTY SPEAKER.— So many hon. Members are anxious to support your view. Why don't you help them ?

Sri M S. KRISHNAN.— I will conclude early. It is a very important Bill.

Sri A. R. BADARINARAYANA.—I want the hon. Member to suggest a feasible solution.

ಶ್ರೀ ಎಂ. ಎಸ್. ಕೃಷ್ಣನ್.— ಫೀಜಿಬಲ್ ಸೊಲ್ಯೂಷನ್‌ಗೆ ಒಂದು ಕ್ಲಾಜನ್ನು ಇಂಟ್ರಡ್ಯೂಜ್ ಮಾಡಬೇಕು. ಆದರ ಬಗ್ಗೆ ಅಮೆಂಡಮೆಂಟ ದುರಾದೃಷ್ಟವಶಾತ್ ಕಳುಹಿಸಲಿಲ್ಲ. ಪರ್ಟಿಕ್ಯುಲರ್ ಅಮೆಂಡಮೆಂಟನ್ನು ಆ ವಿಷಯದಲ್ಲಿ ಕಳುಹಿಸಲಿಲ್ಲ. ಬೇರೆ ವಿಷಯದಲ್ಲಿ ಕಳುಹಿಸಿದ್ದೇನೆ. ಶಾಮಣ್ಣನವರು ಕಳುಹಿದ್ದರೆ ಒಳ್ಳೆಯದು; ಆದಕ್ಕೆ ಸಪೋರ್ಟ ಮಾಡುತ್ತೇನೆ. ಮೂಲಭೂತ ತತ್ವಕ್ಕೆ ಒಪ್ಪಿಗೆಯನ್ನು ಕೊಟ್ಟರೆ ಕಾನೂನು ತಜ್ಞರನ್ನು ಕೇಳಿದರೆ ಹೇಳುತ್ತಾರೆ. ನೀವು ಹೇಗೆ ಹೇಳುತ್ತಿರೋ ಹಾಗೆ ಕಾನೂನು ಮಾಡುವ ಜನ ಮಾಡುತ್ತಾರೆ. ನಾನು ಹೇಳಿದಂತೆ ಸಲಹೆ ಕೊಡಬೇಕಾಗಿಲ್ಲ. ಅವರಿಗೆ ಗೊತ್ತಿದೆ. ಲಾ ಡಿಪಾರ್ಟಮೆಂಟಿಗೆ ವಿತ್ ರೆಟ್ರಾಸ್ಪೆಕ್ಟಿವ್ ಎಫೆಕ್ಟ್ ಒಂದು ಕ್ಲಾಜ ಇಂಟ್ರಡ್ಯೂಜ್ ಮಾಡಿ ಎಂದು ಹೇಳಿದರೆ ಮಾಡುತ್ತಾರೆ. ಹಿಂದೆ ಟರ್ಮಿನೇಟ್ ಆದವರಿಗೆ ಅನುಕೂಲವಾಗುವ ರೀತಿಯಲ್ಲಿ ಮಾಡಬೇಕು. ಆ ರೀತಿ ಇದನ್ನು ಮಾಡಬೇಕೆಂದು ಹೇಳುತ್ತೇನೆ.

ಇನ್ನೊಂದು ಬಹಳ ಮುಖ್ಯವಾದ ವಿಷಯ. ಶೆಡ್ಯೂಲ್ ಆಫ್ ಅಪಾಯಿಂಟ್‌ಮೆಂಟ್ಸ್ indicating the number of persons employed, their qualifications and grades of pay maintain ಮಾಡಬೇಕು ಎಂದು ಹೇಳಿದ್ದೀರಿ. ಕ್ವಾಲಿಫಿಕೇಷನ್ ಮತ್ತು ಗ್ರೇಡ್ ಆಫ್ ಪೇ ಮಾತ್ರ ಇದ್ದರೆ ಸಾಕಾಗದು ತಮಗೂ ಅನುಭವವಿದೆ. ಇವತ್ತಿನ ದಿವಸ ಅನೇಕ ನಿದರ್ಶನಗಳು ರಾಜ್ಯಾದ್ಯಂತ ಇವೆ. ಕ್ವಾಲಿಫಿಕೇಷನ್ ಮತ್ತು ಗ್ರೇಡ್ ಆಫ್ ಪೇ ಬರೆದು ಇರಬಹುದು. ಬರೆಯದೇ ಇರಬಹುದು. ಮುಖ್ಯವಾಗಿ ಏನು ಕೆಲಸ ಮಾಡುತ್ತಾರೆ ಎಂದು ಇರಬೇಕು. ಸಂಬಳ ತೆಗೆದುಕೊಳ್ಳುತ್ತಾ ಇರುತ್ತಾರೆ ಎಂದು ಇರಬಹುದು ಯಾವ ಕೆಲಸ ಮಾಡಿದ್ದಾರೆ ಎಂದು ಇರುವುದಿಲ್ಲ

Sri A. R. BADARINARAYANA.—It comes under the rules.

ಶ್ರೀ ಎಂ. ಎಸ್ ಕೃಷ್ಣನ್ — ಇದರೊಳಗೆ ೩ ನೇ ವಿಧಿಯಲ್ಲಿ ಏನು ಇದೆ, ಶೆಡ್ಯೂಲ್ ಆಫ್ ಅಪಾಯಿಂಟ್‌ಮೆಂಟ್ಸ ಮಾತ್ರ ಇಟ್ಟುಕೊಳ್ಳಬೇಕು, ಅವರ ಕ್ವಾಲಿಫಿಕೇಷನ್, ಏನು ಗ್ರೇಡ್ ಆಫ್ ಪೇ ಏನು ಇಂಬೇಕು ಎಂಬುದು ಅಷ್ಟು ಮಾತ್ರ ಸಾಲದು. ಅದರ ಜೊತೆಗೆ ಅವರ ಡೆಸಿಗ್ನೇಷನ್ ಬಹಳ ಮುಖ್ಯ. ಇದನ್ನು ಕಾನೂನಿನಲ್ಲಿ ಅಳವಡಿಸಿದ್ದರೆ ಮಾತ್ರ ಅವರು ಕಟ್ಟುಬಿದ್ದು ಮಾಡುತ್ತಾರೆ. ಇದು ಇಲ್ಲದೆ ರೂಲ್ಸ್‌ನಲ್ಲಿ ಇದ್ದರೆ ಅದಕ್ಕೆ ಅಷ್ಟು ಫೋರ್ಸ್ ಇರುವುದಿಲ್ಲ. ಕಾನೂನಿನಲ್ಲಿ ಯಾತಕ್ಕೆ ಇರಕೂಡದು ಎಂದು ಕೇಳುತ್ತೇನೆ. ಅದರಲ್ಲಿ ಇದ್ದರೆ ಮಾತ್ರ ಜಾರಿಗೆ ತರುವುದಕ್ಕೆ ಸಾಧ್ಯವಾಗುತ್ತದೆ. ಆಗ ಅನ್ಯಾಯವಾಗುವುದು ಸ್ವಲ್ಪಮಟ್ಟಿಗಾದರೂ ಕಡಿಮೆಯಾಗುತ್ತದೆ. Rules and Regulations relating to the code of conduct and conditions governing the employees ಎಂದು ಹೇಳಿದ್ದೀರಿ. I consider this as a clause which is not comprehensive, which is not correct, which is capable of doing greater harm than good to the teacher. ಏತಕ್ಕೆ ಎಂದರೆ ರೂಲ್ಸ್ ಮಾಡುವವರು ಯಾರು? ಪ್ರೈವೇಟ್ ಎಜ್ಯುಕೇಷನಲ್ ಇನ್‌ಸ್ಟಿಟ್ಯೂಷನ್ಸ್‌ರವರು. ಒಬ್ಬೊಬ್ಬರು ಒಂದೊಂದು ರೀತಿಯ ರೂಲ್ಸ್ ಮಾಡುವುದಕ್ಕೆ ಅವಕಾಶವಾಗುತ್ತದೆ. ಈ ರೀತಿ ಅವಕಾಶ ಕೊಟ್ಟರೆ ಟರ್ಮಿನೇಟ್ ಯಾವ ರೀತಿ ಮಾಡಬೇಕು, ಎನ್‌ಕ್ವೈರಿ ಯಾವ ರೀತಿ ಮಾಡಬೇಕು, ಪ್ರಿನ್ಸಿಪಲ್ ಆಫ್ ನ್ಯಾಚುರಲ್ ಜಸ್ಟೀಸ್ ಏನು ಎನ್ನುವುದರ ಬಗ್ಗೆ ಅವರವರಿಗೆ ತೋಚಿದಂತೆ ಇಂಟರ್‌ಪ್ರಿಟೇಷನ್ ಮಾಡುವುದಕ್ಕೆ ಅವಕಾಶವಾಗುತ್ತದೆ. ಅವರು ಇಷ್ಟಬಂದ ರೀತಿಯಲ್ಲಿ ಸ್ವೇಚ್ಛಾ ರೀತಿಯಲ್ಲಿ ವರ್ತನೆ ಮಾಡಿ ರಿಲೀಫ್ ಸಿಕ್ಕುವ ಹಾಗೆ ಅವಕಾಶ ಮಾಡುತ್ತಾರೆ. ತಾವು ಮಾಡಲ್ ರೂಲ್ಸ್ ಮಾಡಿ, ಆ ಮಾಡಲ್ ರೂಲ್ಸ್ ಎಲ್ಲರಿಗೂ ಅನ್ವಯಿಸಬೇಕು, ನನ್ನ ಅನುಭವದ ಮೇಲೆ ಹೇಳಬೇಕೆಂದರೆ, ಕಾರ್ಮಿಕರಿಗೆ ಇದೇ ತರಹ ಹಿಂದೆ ಇತ್ತು. ಅವರವರೇ ರೂಲ್ಸ್ ಮಾಡಿಕೊಳ್ಳುತ್ತಿದ್ದರು. ಈ ಪ್ರಶ್ನೆ ಬಂದು ಇಂಡಸ್ಟ್ರಿಯಲ್ ಎಂಪ್ಲಾಯ್‌ಮೆಂಟ್ ಸ್ಟ್ಯಾಂಡಿಗ್ ಆರ್ಡರ್ಸ್ ಆಕ್ಟ್ ಮಾಡಿ ಪ್ರತಿಯೊಬ್ಬರಿಗೂ ಅನ್ವಯಿಸುವ ಮಾಡಲ್ ಸ್ಟ್ಯಾಂಡಿಂಗ್ ಆರ್ಡರ್ ಮಾಡಿ ಇಟ್ಟುಬಿಟ್ಟಿದ್ದಾರೆ. ಆ ಮಾಡೆಲ್ ಸ್ಟಾಂಡಿಂಗ್ ಆರ್ಡರ್ ವಿರುದ್ಧವಾಗಿ ಹೋಗುವ ಹಾಗಿಲ್ಲ. ಅದಕ್ಕೆ ಅನುಗುಣವಾಗಿ ಹೋಗಬೇಕು. ಆ ರೀತಿ ಮಾಡಲ್ ರೂಲ್ಸ್ ತಾವು ಮಾಡಬೇಕು ಮಾಡದೆ ಹೋದರೆ ಸ್ವೇಚ್ಛಾಪ್ರವೃತ್ತಿಗೆ ಅನುಕೂಲವಾಗುತ್ತದೆ. ಅದರಿಂದ ಪ್ರಯೋಜನವಾಗುವುದಿಲ್ಲ ಎಂದು ಹೇಳಬೇಕಾಗಿದೆ. It must be in accordance with the model rules. It cannot be as they feel. Any modifications any alterations that he makes must be in accordaance with the model rules and not in accordance with what they feel. ಅದು ರೂಲ್ಸನಲ್ಲಿ ಸ್ಪಷ್ಟವಾಗಿ ಇರಬೇಕು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನೊಂದು ಮುಖ್ಯವಾದುದು ಏನೆಂದರೆ, ಕ್ಲಾಸ ೪ ಸ್ಕೋಪ್ ನೋಡಿದರೆ ಬರೀ ಕೆಲಸಗಾರರನ್ನು ಟರ್ಮಿನೇಷನ್ ಮಾಡುವ ವಿಷಯ ಮಾತ್ರ ಇದೆ. ಅದರಲ್ಲಿ "Termination of service and procedure for imposing penalties." ಎಂದು ಹಾಕಿದ್ದಾರೆ. ಮತ್ತು ಕ್ಲಾಸ ೪(೨) ರಲ್ಲಿ "Dismissed or removed or reduced in rank." ಈ ಮೂರೂ ಹಾಕಿದ್ದಾರೆ. ಆಮೇಲೆ ಎಜುಕೇಷನಲ್ ಟ್ರೈಬ್ಯುನಲ್ ಮಾಡಿದ್ದಾರೆ. ಬಹಳ ಸಂತೋಷ. ಕಡೆಗೆ ಪೆನಾಲ್ಟಿಸ್ ಬಗ್ಗೆ ತಾವು ಹಾಕಿರುವುದು ತೀರ ಕಡಿಮೆ. ೬೦ ಕೋಟಿ ರೂಪಾಯಿ ಈ ಖಾತೆಗೆ ಕೊಡುತ್ತೀರಿ. ೧೦೦ ರೂಪಾಯಿ ಫೈನ್ ಹಾಕಿದರೆ, ಅದನ್ನು ಕೊಟ್ಟು ಹೋಗುತ್ತಾರೆ. ಅದು ಲೆಕ್ಕಕ್ಕೆ ಇಲ್ಲ, ಜಮಾಕ್ಕೆ ಇಲ್ಲ.

ಶ್ರೀ ಎ. ಆರ್ ಬದರೀನಾರಾಯಣ.—ಫಿಸಿಕಲ್ ಪನಿಷ್‌ಮೆಂಟ ಕೂಡ ಇದೆ.

ಶ್ರೀ ಎಂ. ಎಸ್. ಕೃಷ್ಣನ್.—"Or fine or both" ಎಂದು ಇದೆ. ಲಂಚ ತೆಗೆದುಕೊಂಡು ಸರಿಮಾಡಿಕೊಂಡು ಬಿಡುತ್ತಾರೆ. ಶಿಕ್ಷೆ ಬಹಳ ಕಠಿಣವಾಗಿರಬೇಕು, ಉಗ್ರ ಶಿಕ್ಷೆ ಕೊಡಬೇಕು. ನನ್ನ ಅಭಿಪ್ರಾಯದೊಳಗೆ ಇದು ತೇಪೆ ಹಾಕುವ ವಿಷಯ. ಮೂಲಭೂತವಾಗಿ ಇವುಗಳ ಆಡಳಿತವನ್ನೆಲ್ಲಾ ಸರ್ಕಾರವೇ ವಹಿಸಿಕೊಂಡರೆ ಸರಿಹೋಗುತ್ತದೆ. Education cannot be left in the hands of a few people who are commercialising or making money out of it. Government must take it over completely. That is the real solution. ಇದು ಕಾಂಪ್ರಹೆನ್ಸೀವ್ ಬಿಲ್ ಅಲ್ಲ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಎಂ. ರುದ್ರಪ್ಪ (ಸಕಲೇಷಪುರ).—ಮಾನ್ಯ ಸಭಾಧ್ಯಕ್ಷರೆ, ಮಾನ್ಯ ವಿದ್ಯಾ ಸಚಿವರು ಮಂಡಿಸಿರತಕ್ಕ ಈ ಮಸೂದೆಯನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತ ಮಾಡುತ್ತೇನೆ. ಏಕೆಂದರೆ, ವಿದ್ಯಾಭ್ಯಾಸ ಬಹಳ ಪ್ರಾಮುಖ್ಯವಾದುದು. ಯಾವ ರಾಷ್ಟ್ರ ಅಥವಾ ದೇಶ ಮುಂದೆ ಬರಬೇಕಾದರೆ, ವಿದ್ಯಾಭ್ಯಾಸದ ಕ್ರಮ ಸರಿಯಾಗಿರಬೇಕು, ವ್ಯವಸ್ಥಿತವಾಗಿರಬೇಕು. ಈಗ ಮಾನ್ಯ ಸಚಿವರು ಕೊಟ್ಟಂಥ ಅಂಕಿ ಅಂಶಗಳನ್ನು ನಾವು ಗಮನಿಸಿದ್ದೇ ಆದರೆ ಖಾಸಗೀಯವರ ಕೈಯಲ್ಲಿ ಸುಮಾರು ೩೦೦೦ಕ್ಕೆ ಮೇಲ್ಪಟ್ಟು ವಿದ್ಯಾ ಸಂಸ್ಥೆಗಳಿವೆ. ಅಂದಮೇಲೆ ಸಂಖ್ಯೆ ಜಾಸ್ತಿ ಇದೆ ಎಂದ ಹಾಗಾಯ್ತು. ಒಂದು ವಿದ್ಯಾ ಸಂಸ್ಥೆಗೂ, ಇನ್ನೊಂದು ವಿದ್ಯಾ ಸಂಸ್ಥೆಗೂ ಈಗ ಯಾವ ಒಂದು ರೀತಿಯಲ್ಲಿ ಹೊಂದಾಣಿಕೆ ಇಲ್ಲ. ಅವು ಬೇರೆ ಬೇರೆ ರೀತಿಯಲ್ಲಿ ಭಿನ್ನ ರೀತಿಯಲ್ಲಿ ಕೆಲಸ ಮಾಡುತ್ತಾ ಇವೆ. ಅದೇ ರೀತಿ ಅವರು ನೇಮಿಸಿಕೊಳ್ಳತಕ್ಕಂಥ ಅಪಾಯಿಂಟಮೆಂಟಗಳು ಏನಿವೆ, ಅವು ಸಹ ಮನಸ್ಸೋ ಇಚ್ಛೆ ಮಾಡುತ್ತಾ ಇರತಕ್ಕ ಸಂದರ್ಭಗಳನ್ನು ಸಹಾ ನಾವು ನೋಡುತ್ತಿದ್ದೇವೆ. ಈಗಾಗಲೇ ಸರ್ಕಾರಕ್ಕೂ, ಎಲ್ಲರಿಗೂ ಗೊತ್ತಿರುವಂತೆ ಅನೇಕ ದೂರುಗಳು ಸಹ ಬಂದು ಇವನ್ನು ಹತೋಟಿಗೆ ತೆಗೆದುಕೊಳ್ಳಬೇಕು ಎಂದು ಸರ್ಕಾರ ಈ ಮಸೂದೆಯನ್ನು ತಂದಿದ್ದಾರೆ. ಇದಕ್ಕಿಂತ ಮುಂಚೆ

ಆರ್ಡಿನೆನ್ಸ ಸಹ ಹೊರಡಿಸಿದ್ದಾರೆ. ಆದರೆ ಅದನ್ನು ಒಂದು ವ್ಯಾಪಕವಾದ ಮಸೂದೆ ಎಂದು ಹೇಳುವುದಕ್ಕಾಗುವುದಿಲ್ಲ. ಮಾನ್ಯ ಸಚಿವರು ತಿಳಿಸಿದ ಹಾಗೆ ಶ್ರೀಮಾನ ಜೆ.ಬಿ. ಮಲ್ಲಾರಾಧ್ಯ ಕಮಿಷನ್‌ನ ರಿಪೋರ್ಟ ಬಂದಮೇಲೆ ಅದರ ಶಿಫಾರಸ್ಸುಗಳನ್ನು ಅಳವಡಿಸಿಕೊಂಡು ಇನ್ನೊಂದು ಮಸೂದೆ ತರಬೇಕಾಗಿದೆ. ಈಗ ಸದ್ಯಕ್ಕೆ ಕೆಲವು ಸಂಸ್ಥೆಗಳು ವ್ಯಾಪಾರ ಸಂಸ್ಥೆಗಳಾಗಿ ಅಧ್ಯಾಪಕರನ್ನು ಶೋಷಣೆ ಮಾಡುತ್ತಾ ಬಂದಿವೆ ಎಂಬ ದೂರು ಈಗ ಪ್ರಮುಖವಾಗಿದೆ. ಶೋಷಣೆ ಮಾಡದ ಹಾಗೆ ಸಂಬಳಗಾರರಿಗೆ ಸರಿಯಾಗಿ ಸಂದಾಯವಾಗುವ ರೀತಿಯಲ್ಲಿ ಮತ್ತು ಕಾನೂನಿಗೆ ವಿರುದ್ಧವಾಗಿ ನಡೆದರೆ ಅವರನ್ನು ಜೈಲಿಗೆ ಕಳಿಸುವಂಥ ರೀತಿಯಲ್ಲಿ ಈ ಬಿಲ್ಲು ಇದೆ. ಆದುದರಿಂದ ಈ ಮಸೂದೆಯನ್ನು ನಾವು ಸ್ವಾಗತಿಸಬೇಕು. ಮಾನ್ಯ ಸದಸ್ಯರಾದ ಕೃಷ್ಣನ್‌ರವರು ಹೇಳಿದರು, ಪೆನಾಲ್ಟಿ ಬಹಳ ಕಡಿಮೆ, ಹೆಚ್ಚಾಗಿರಬೇಕು ಎಂದು. ಸದ್ಯಕ್ಕೆ ಲಂಗು ಲಗಾಮು ಏನೂ ಇರಲಿಲ್ಲ. ಆದರೆ ಈಗ ಅವರಿಗೆ ಕಾನೂನಿನಲ್ಲಿ ಜೈಲುವಾಸ ಇದೆ; ಅಷ್ಟೇ ಸಾಕು. ವಿದ್ಯಾಸಂಸ್ಥೆಯನ್ನು ನಡೆಸತಕ್ಕಂಥಾವನು, ಯಾರಾದರೂ ಅಧ್ಯಾಪಕರಿಗೆ ತೊಂದರೆ ಕೊಟ್ಟು ಈ ಮಸೂದೆಗೆ ವಿರುದ್ಧವಾಗಿ ನಡೆದುಕೊಂಡರೆ, ಅವರನ್ನು ಜೈಲಿಗೆ ಹಾಕಬೇಕು ಎನ್ನುವ ಹೆದರಿಕೆ ಏನಿದೆ, ಅದರಿಂದ ಹೆಚ್ಚಿನ ಪರಿಣಾಮವಾಗುತ್ತದೆ. ಮಾರಲ ಟರ್ಪಿಟ್ಯೂಡ ಸಹ ಇರುತ್ತದೆ. ಸಮಾಜದಲ್ಲಿ ಅಂತಹವರಿಗೆ ಯಾವ ಮನ್ನಣೆಯೂ ಸಹ ಇರುವದಿಲ್ಲ.

೩ ತಿಂಗಳ ಶಿಕ್ಷೆಯಾದರೆ ಏನು, ೬ ತಿಂಗಳಾದರೆ ಏನು, ಮರ್ಯಾದಸ್ಥರಿಗೆ ಒಂದೇ ದಿವಸವಾದರೂ ಅದಕ್ಕೆ ರಿಗರಸ್ ಎಫೆಕ್ಟ್ ಇರುತ್ತದೆ. ೩ ತಿಂಗಳು ಸದ್ಯಕ್ಕೆ ಸಾಕು. ಫೈನನ್ನು ಬೇಕಾದರೆ ೧೦೦ ರೂಪಾಯಿಗೆ ಬದಲು ೫೦೦ ರೂಪಾಯಿಗೆ ಏರಿಸಬಹುದು. ೧೦೦ ರೂಪಾಯಿ ಬಹಳ ಕಡಿಮೆ. ಸಾಮಾನ್ಯವಾಗಿ 'ಅಂಡ್ ಫೈನ್' ಎಂದು ಇದ್ದರೆ, ಆಮಾತು ಬೇರೆ. ಈಗ ಆರ್ ಫೈನ್ ಇರುವುದರಿಂದ ೧೦೦ ರೂಪಾಯಿ ಬಹಳ ಕಡಿಮೆ. ಅದನ್ನು ೫೦೦ ಅಥವಾ ೧೦೦೦ಕ್ಕೆ ಏರಿಸಬಹುದು ಈಗ ಖಾಸಗಿಯವರು ನರ್ಸರಿ ಸ್ಕೂಲಿನಿಂದ ಹಿಡಿದು ಟೆಕ್ನಿಕಲ್ ಕಾಲೇಜು, ಮೆಡಿಕಲ್ ಕಾಲೇಜು, ಇಂಜನಿಯರಿಂಗ ಕಾಲೇಜ ಸಹ ನಡೆಸುತ್ತಿದ್ದಾರೆ. ಇಲ್ಲಿ ದೊಡ್ಡ ದೊಡ್ಡ ಸಂಸ್ಥೆಗಳು ಇದ್ದು, ಲಕ್ಷಾಂತರ ರೂಪಾಯಿ ವ್ಯವಹಾರದಲ್ಲಿ ನಡೆಯುತ್ತಿದೆ. ಅಂತಹ ಸಂಸ್ಥೆಗಳ ಮೇಲೆ ಹೆಚ್ಚಿನ ನಿಗಾ ಇಟ್ಟುಕೊಳ್ಳತಕ್ಕದ್ದು ಬಹಳ ಪ್ರಾಮುಖ್ಯವಾದುದು. ಏಕೆಂದರೆ ಕೆಲವು ಮೆಡಿಕಲ್ ಕಾಲೇಜಸ್‌ನಲ್ಲಿ ಕ್ಯಾಪಿಟೇಷನ್ ಫೀಸ್ ೫೦೦೦ ರೂಪಾಯಿ ತೆಗೆದುಕೊಳ್ಳಬೇಕು ಎಂದು ಇದ್ದರೂ ಸಹ, ಗೊತ್ತಿಲ್ಲದವರ ಹತ್ತಿರ ಹೆಚ್ಚಿನ ರೀತಿಯಲ್ಲಿ ೨೦,೦೦೦–೩೦,೦೦೦ ಕ್ಯಾಪಿಟೇಷನ್ ಫೀ ತೆಗೆದುಕೊಳ್ಳತಕ್ಕ ನಿದರ್ಶನಗಳಿವೆ. ಕೆಲವರು ವಿದ್ಯಾವಂತರಿಗೆ ನೌಕರಿ ಇರುವುದಿಲ್ಲ. ಅವರನ್ನು ಕೆಲಸಕ್ಕೆ ಸೇರಿಸಿಕೊಳ್ಳುವಾಗ, ಅವರು ನೀವು ಕೊಟ್ಟಷ್ಟು ಕೊಡಿ, ನಾನು ಕೆಲಸಕ್ಕೆ ಬರುತ್ತೇನೆ ಎಂದು ಹೇಳುತ್ತಾರೆ. ಆಮೇಲೆ ಅವರು ಹೇಳುವ ಕಂಡೀಷನ್ಸ್‌ಗೆ ಒಪ್ಪಿ

ಕೊಂಡು ಸೇರಿಕೊಂಡು ಬಿಡುತ್ತಾರೆ. ಸೇರಿಕೊಂಡ ಮೇಲೆ ೫೦೦ ರೂಪಾಯಿ ಸಂಬಳವಿದ್ದರೆ ೩೫೦ ರೂಪಾಯಿಗೆ ಅಂಡರ್‌ಸ್ಟ್ಯಾಂಡಿಗ ಮಾಡಿಕೊಂಡಿರುತ್ತಾರೆ. ಚೆಕ್ ಸಿಸ್ಟಂ ಇರಲಿ, ಅಥವಾ ಏನೇ ಇರಲಿ, ಕೊಡುವುದು ೩೫೦ ರೂಪಾಯಿ ವಿನಹ ೫೦೦ ರೂಪಾಯಿ ಕೊಡುವುದಿಲ್ಲ. ಇಂತಹ ಉದಾಹರಣೆಗಳು ಬೇಕಾದಷ್ಟಿವೆ. ಯಾವ ಕಾನೂನು ಮಾಡಿದರೂ ಇಂತಹ ಕೆಲಸಗಳು ನಡೆದೇ ನಡೆಯುತ್ತವೆ. ಇದಕ್ಕೆ ಅವಕಾಶ ಇಲ್ಲದಂತೆ ಮಾಡಬೇಕು. ಸರ್ಕಾರದವರು ಇನ್ನೊಂದು ಬಿಲ್ಲನ್ನು ತರುವವರಾಗಿರುವುದರಿಂದ, ಇದರಲ್ಲಿ ಲೂಪಹೋಲ್ಸ್ ಏನಿವೆ ಅವನ್ನು ಪ್ಲಗ್ ಮಾಡಬೇಕು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ವಿದ್ಯಾಸಂಸ್ಥೆಗಳನ್ನು ರಾಷ್ಟ್ರೀಕರಣ ಮಾಡಬೇಕೆಂದು ಕೆಲವು ಮಾನ್ಯ ಸದಸ್ಯರು ಸಲಹೆ ಮಾಡಿರುತ್ತಾರೆ. ವಿದ್ಯಾಸಂಸ್ಥೆಗಳನ್ನು ಸದ್ಯಕ್ಕೆ ರಾಷ್ಟ್ರೀಕರಣ ಮಾಡುವುದು ಸರಿಯಲ್ಲ ಎಂದು ನನ್ನ ಭಾವನೆ. ಏಕೆಂದರೆ ಅನೇಕ ಖಾಸಗೀ ಸಂಸ್ಥೆಯವರು ನಡೆಸಿರತಕ್ಕ ವಿದ್ಯಾಸಂಸ್ಥೆಗಳು ಬಹಳ ಚೆನ್ನಾಗಿ ಕೆಲಸಮಾಡುತ್ತಿವೆ. ನಿಜವಾಗಿ ಹೇಳಬೇಕು ಅಂದರೆ ಇಲ್ಲಿ ನ್ಯಾಷನಲ್ ಕಾಲೇಜು, ಉತ್ತರ ಕರ್ನಾಟಕದಲ್ಲಿ ಕರ್ನಾಟಕ ಲಿಬರಲ್ ಎಜ್ಯುಕೇಷನ್ ಸೊಸೈಟಿ ಇವು ಬಹಳ ಚೆನ್ನಾಗಿ ಕೆಲಸ ಮಾಡುತ್ತಿವೆ. ಅವುಗಳನ್ನು ಸರ್ಕಾರ ವಹಿಸಿಕೊಂಡು ಅಷ್ಟೇ ದಕ್ಷತೆಯಿಂದ ಕೆಲಸ ಮಾಡುವುದಕ್ಕೆ ಸರಕಾರಕ್ಕೆ ಸದ್ಯಕ್ಕೆ ಕಷ್ಟವಾಗಬಹುದು. ಪ್ರತಿಯೊಂದನ್ನೂ ರಾಷ್ಟ್ರೀಕರಣ ಮಾಡಿದರೆ ಜನರಲ್ಲಿ ಇರುವ ಇನ್‌ಸೆಂಟಿವ್ ಹೋಗುತ್ತದೆ. ಕೆಲವು ಸಣ್ಣಪುಟ್ಟ ಸಂಸ್ಥೆಗಳೂ ಸರ್ಕಾರಿ ಶಾಲೆಗಳಿಗಿಂತ ಅಚ್ಚುಕಟ್ಟಾಗಿ ಶಿಸ್ತಿನಿಂದ ಎಜ್ಯುಕೇಷನ್ ಕೊಡುತ್ತಿವೆ ಮತ್ತು ಅಲ್ಲಿ ಉತ್ತೀರ್ಣರಾಗತಕ್ಕ ವಿದ್ಯಾರ್ಥಿಗಳು ಹೆಚ್ಚಿನ ಅಂಕಗಳನ್ನು ಪಡೆದು ದೊಡ್ಡ ದೊಡ್ಡ ಕೆಲಸಗಳಿಗೆ ಹೋಗತಕ್ಕಂಥಾದ್ದನ್ನು ನಾವು ನೋಡುತ್ತೇವೆ. ಸರ್ಕಾರಿ ಶಾಲೆಗಳಿಗಿಂತ ಅನೇಕ ಖಾಸಗಿ ಶಾಲೆಗಳು ಉನ್ನತ ಮಟ್ಟದಲ್ಲಿ ಕೆಲಸ ಮಾಡುತ್ತಿರುವುದರಿಂದ ಸದ್ಯಕ್ಕೆ ರಾಷ್ಟ್ರೀಕರಣ ಮಾಡುವುದು ಒಳ್ಳೆಯದಲ್ಲ ಎಂದು ಸಲಹೆ ಮಾಡುತ್ತೇನೆ. ಕೆಲವು ವೇಳೆ ಕೆಲವರು ಅಧ್ಯಾಪಕರು ಹುಡುಗರ ಗುಂಪನ್ನು ಕಟ್ಟಿಕೊಂಡು ಸ್ಟ್ರೈಕ್ ಮಾಡತಕ್ಕದ್ದು ಮತ್ತು ಮ್ಯಾನೇಜ್‌ಮೆಂಟ್ ಸರಿಯಾಗಿ ಕೆಲಸ ನಿರ್ವಹಿಸುವುದಕ್ಕೆ ಅಡ್ಡಿ ಮಾಡುವ ಸಂದರ್ಭಗಳಿವೆ ಅಂತಹ ಸಂದರ್ಭದಲ್ಲಿ ಮ್ಯಾನೇಜ್‌ಮೆಂಟಿನ ರಕ್ಷಣೆಗೆ ಈ ಬಿಲ್‌ನಲ್ಲಿ ಯಾವುದೂ ಇಲ್ಲ. ಸರ್ಕಾರದವರು ಇದನ್ನು ಯೋಚನೆ ಮಾಡಿದರೆ ಸರಿಯಾಗಿತ್ತು ಎಂದು ಕಾಣುತ್ತದೆ,

6-00 P.M.

ಏತಕ್ಕೆಂದರೆ ಇದು ಒನ್ ಸೈಡೆಡ್ ಆಗಿದೆ. ಹೇಗೆಂದರೆ ಮ್ಯಾನೇಜ್‌ಮೆಂಟಿನವರು ಏನಾದರೂ ತಪ್ಪು ಮಾಡಿದರೆ ಅವರನ್ನು ಶಿಕ್ಷೆ ಮಾಡುವುದಕ್ಕೆ ಈ ಬಿಲ್‌ನಲ್ಲಿ ಅವಕಾಶ ಇದೆಯೇ ಹೊರತು, ಟೀಚರ್ಸ್ ಅಥವಾ ಸ್ಟಾಫ್ ಮೆಂಬರ್ ತಪ್ಪುಮಾಡಿ ಈ ವಿದ್ಯಾ ಸಂಸ್ಥೆಯನ್ನು ನಡೆಯದೇ ಇರುವ ಹಾಗೆ ಮಾಡಿದರೆ ಅವರಿಗೆ ಶಿಕ್ಷೆ ಮಾಡುವುದಕ್ಕೆ ಈ ಬಿಲ್‌ನಲ್ಲಿ ಯಾವ ಪ್ರಾವಿಸನ್ನು ಇಲ್ಲ. ಈ ರೀತಿ ಆಗುವಂಥಾದ್ದೂ ಇವೆ. ಆದುದರಿಂದ ಈ ಬಗ್ಗೆ ಟೀಚರ್ಸ್ ಸ್ಟಾಫ್ ಮೆಂಬರ್ಸ್ ತಪ್ಪುಮಾಡಿದರೂ ಕೂಡ

ಅವರಿಗೆ ಶಿಕ್ಷೆ ಕೊಡುವುದಕ್ಕೂ ಕೂಡ ಈ ಒಂದು ಕಾಲಂ ಸೇರಿಸಿದ್ದರೆ ಚೆನ್ನಾಗಿತ್ತು ಎಂದು ನನಗೆ ಕಾಣುತ್ತದೆ. ಮತ್ತು ನಿರ್ದಿಷ್ಟ ರೀತಿ ತರಬೇತಿಯನ್ನೂ ಪಡೆದು ಮತ್ತು ವಿದ್ಯಾರ್ಹತೆಯೂ ಇದ್ದರೆ ಇಂತಹವರನ್ನು ಅಪಾಯಿಂಟ್ ಮಾಡಬೇಕು ಎಂದು ಮಾಡಬೇಕು ಈ ಬಗ್ಗೆ ಸರ್ಕಾರ ಹೆಚ್ಚು ಗಮನ ಕೊಡಬೇಕು ಎಂದು ಹೇಳುತ್ತೇನೆ.

ಇನ್ನು ಟ್ರಿಬ್ಯೂನಲ್ ವಿಚಾರ ಹೇಳುವುದಾದರೆ ಶಿಕ್ಷಣ ವಿಷಯಗಳಿಗೆ ಸಂಬಂಧ ಪಟ್ಟಂತೆ ಪ್ರತ್ಯೇಕ ಟ್ರಿಬ್ಯೂನಲ್ ರಚಿಸುವುದಾದರೆ, ಹೀಗೆ ಪ್ರತಿಯೊಂದು ಜಿಲ್ಲೆಗೂ ಟ್ರಿಬ್ಯೂನಲ್ ರಚಿಸುವುದಾದರೆ ಈ ಬಗ್ಗೆ ಸರ್ಕಾರಕ್ಕೆ ಒಂದು ಹೆಚ್ಚಿನ ಖರ್ಚು ಬೀಳುತ್ತದೆ. ಆದುದರಿಂದ ನನ್ನ ಸಲಹೆ ಏನೆಂದರೆ ಈಗ ಅನೇಕ ಕಡೆಗಳಲ್ಲಿ ಅಂದರೆ ಹಾಸನ ಚಿಕ್ಕಮಗಳೂರು ಮಡಕೇರಿ ಇಂಥಾ ಚಿಕ್ಕ ಜಿಲ್ಲೆಗಳಲ್ಲಿರುವ ಡಿಸ್ಟ್ರಿಕ್ಟ್ ಜಡ್ಜ್ ಗಳಿಗೆ ಹೆಚ್ಚಿಗೆ ಏನೂ ಕೆಲಸವೇ ಇರುವುದಿಲ್ಲ. ಆದಕ್ಕೋಸ್ಕರ ಸರ್ಕಾರ ಅವರನ್ನು ಟ್ರಿಬ್ಯೂನಲ್ ಮಾಡಿದರೆ ಅದಕ್ಕೆ ಬೇರೆಯವರನ್ನು ನೇಮಿಸಿ ಅವರ ಸಂಬಳ ಸಾರಿಗೆಗೆ ಹೆಚ್ಚು ಖರ್ಚು ಮಾಡುವ ಬದಲು ಆ ಡಿಸ್ಟ್ರಿಕ್ಟಿನಲ್ಲಿರುವ ಜಡ್ಜ್‌ಗೇನೇ ಈ ಕೆಲಸ ವನ್ನೂ ಕೂಡ ನೇಮಿಸಿದರೆ ಸರ್ಕಾರಕ್ಕೆ ಇದರಿಂದ ಹೆಚ್ಚು ಖರ್ಚೂ ಸಹ ಬೀಳುವು ದಿಲ್ಲ. ಅವರು ಈ ಕೆಲಸವನ್ನು ನಿರ್ವಹಿಸಿಕೊಂಡು ಹೋಗುತ್ತಾರೆ. ಈ ರೀತಿ ಮಾಡಬೇಕೆಂದು ನಾನು ಸೂಚಿಸುತ್ತೇನೆ.

ಇನ್ನು ಗ್ರಾಂಟ್ ಇನ್ ಕೋಡ್‌ನಲ್ಲಿ ಡೀ ರಿಕಗ್ನಿಷನ್ ಮಾಡುವುದು ಆಗಲಿ ಅಥವಾ ಗ್ರಾಂಟ್ ರೆಡ್ಯೂಸ್ ಮಾಡುವುದಾಗಲಿ ಇದೆ. ಈ ಬಗ್ಗೆ ನನ್ನ ಸಲಹೆ ಏನೆಂದರೆ ಮ್ಯಾನೇಜ್‌ಮೆಂಟಿನವರು ಏನಾದರೂ ಒಂದು ಸಾರಿ ತಪ್ಪು ಮಾಡಿದರೆ ಅವರಿಗೆ ಒಂದೇ ಸಲ ಶಿಕ್ಷೆ ಕೊಡುವ ಬದಲಾಗಿ ಅವರಿಗೆ ಇನ್ನೊಂದು ಸಾರಿ ಅವಕಾಶ ಕೊಡಿ. ಹಾಗೇನಾದರೂ ಅವರು ಮತ್ತೊಂದು ಸಾರಿ ಏನಾದರೂ ಅವರ ದೋಷ ವನ್ನು ತಿದ್ದಿಕೊಳ್ಳದೇ ಹೋದರೆ ಆಮೇಲೆ ಪೀನಲ್ ಕ್ಲಾಸ್ ಕೋಡನ್ನು ಜಾರಿಗೆ ತರಬೇಕು ಎಂದು ನಾನು ಸೂಚನೆ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ಪ್ರೈವೇಟ್ ಸ್ಕೂಲ್‌ನವರು ಲಕ್ಷಾ ಧೀಶ್ವರರಾಗಿದ್ದಾರೆ.

ಶ್ರೀ ಕೆ. ಎಂ. ರುದ್ರಪ್ಪ.—ಅವರು ಬಹಳ ಕಷ್ಟಪಟ್ಟು ಈ ವಿದ್ಯಾ ಸಂಸ್ಥೆ ಗಳನ್ನು ಕಟ್ಟಿದ್ದಾರೆ. ಆದುದರಿಂದ ನಾನು ಹೇಳುವುದು ಏನೆಂದರೆ ಸರ್ಕಾರದವರು ಈಗ ತಂದಿರತಕ್ಕಂಥ ಮಸೂದೆಯನ್ನು ಸ್ವಾಗತಿಸುತ್ತಾ, ಈ ವಿದ್ಯಾ ಸಂಸ್ಥೆಗಳು ಇನ್ನೂ ಉತ್ತಮವಾದ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಈ ಬಿಲ್‌ನಿಂದ ಸಹಾಯ ವಾಗುತ್ತದೆ ಎಂದು ಹೇಳಿ ಅಧ್ಯಕ್ಷರು ನನಗೆ ಮಾತನಾಡಲು ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

BUSINESS OF THE HOUSE

MR. DEPUTY SPEAKER.—Mr. Konandur Lingappa will speak on the next day.

I have an announcement to make before adjourning.

The Business Advisory Committee at a sitting held today has decided that the House may take up the discussion of the motion relating to the food situation and rise in prices of essential commodities on 28th September and that Legislative Business may be taken up on 29th September.

The Committee has also decided that the House may sit from 12.00 Noon tomorrow.

The House will now adjourn and meet at 12-00 Noon tomorrow.

[The House adjourned at Five Minutes past Six of the Clock to meet at Twelve Noon on Friday, the 28th September 1973.]

ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Friday, 28th September, 1973/Ashvayuja 6, 1895 S. E

The House met in the Assembly Chamber, Vidhana Soudha, at Twelve of the Clock.

MADAM SPEAKER (SMT. K. S. NAGARATHNAMMA) in the Chair.

STARRED QUESTIONS

(to which oral Answers were given)

DIFFERENCE OF STOCK IN MANDYA SUGAR FACTORY

127 Sri. KAGODU THIMMAPPA (Sagar).–Will the minister for Industries be pleased to state.–

(a) the amount shown in the present ledger account of Mandya Sugar Factory;

(b) whether it has come to the notice of the Government that there is a difference between the amount so shown in the ledger account & the actual stock in the stores;

(c) if so, the difference of stock and its value and who is responsible for this?

Sri. S. M. KRISHNA (Minister for Industries).—

(a) As on 30th June 1973 there is a stock worth Rs. 88,26,437-27 in the stores of the Mandya Sugar Factory.

(b) The stock verification of all the goods in stock has not yet been completed. So far verification of stock worth Rs. 49,34 516–00 has been completed. Stock verification in respect of the remaining goods is to be completed. This work has already been taken up.

(c) In respect of stock verified so far a difference worth Rs. 3,50,289–67 has been found. The exact total amount of

the difference can be stated after the verification of all goods is completed. After this is done the responsibility for the difference will be fixed and enquiry conducted.

ಶ್ರೀ ಕಾಗೋಡು ತಿಮ್ಮಪ್ಪ.— ಸ್ವಾಮಿ ಇಲ್ಲಿ ಕೊಟ್ಟಿರತಕ್ಕ ಉತ್ತರದಲ್ಲಿ ಈ ವರೆಗೆ ೪೯, ೩೪, ೫೭೬–೦೦ ರೂಪಾಯಿಗಳ ಬೆಲೆ ಬಾಳುವ ದಾಸ್ತಾನುಗಳ ಎಣಿಕೆ ಪೂರೈಸಿರುತ್ತದೆ ಎಂದು ಹೇಳಲಾಗಿದೆ ಅಂದರೆ ಅಲ್ಲಿ ಪ್ರತಿ ವರ್ಷವೂ ಲೆಕ್ಕಪತ್ರಗಳು ಆಡಿಟ್ ಆಗುತ್ತಿರಲಿಲ್ಲವೇ ? ಮತ್ತು ಆ ಆಡಿಟ್ ಪ್ರಕಾರ ಸಾಮಾನುಗಳನ್ನು ಎಣಿಕೆ ಮಾಡಿ ನೋಡುತ್ತಿರಲಿಲ್ಲವೇ ?

†ಶ್ರೀ ಎಸ್. ಎಂ. ಕೃಷ್ಣ.— ಪ್ರತಿ ವರ್ಷವೂ ಆಡಿಟ್ಟಾಗುತ್ತಿದೆ. ಆ ಆಡಿಟೆಡ್ ಬ್ಯಾಲೆನ್ಸ್ ಷೀಟನ್ನು ಈ ಸದನದ ಮುಂದೆ ಮಂಡಿಸಲಾಗುತ್ತಿದೆ. ಇನ್ನು ಈ ಇನ್‌ವೆಂಟ್‌ರಿ ಮತ್ತು ಫಿಜಿಕಲ್ ವೆರಿಫಿಕೇಷನ್ನು ೧೯೭೨ರ ವರೆಗೂ ನಡದೇ ಇರಲಿಲ್ಲ. ನಾವು ಅಧಿಕಾರಕ್ಕೆ ಬಂದನಂತರ ಈ ಸ್ಟೋರ್ಸ್ ವಿಂಗನ್ನು ಆಮೂಲಾಗ್ರವಾಗಿ ರೀಆರ್ಗನೈಜ್ ಮಾಡುವುದಕ್ಕೆ ಪ್ರಯತ್ನ ಮಾಡಿದೆವು. ಈಗ ಆ ಇನ್‌ವೆಂಟರಿ ಮತ್ತು ಫಿಜಿಕಲ್ ವೆರಿಫಿಕೇಷನ್‌ಗಳು ನಡೆಯುತ್ತಿವೆ. ಇಲ್ಲಿಯ ವರೆಗೆ ನಡೆದಿರುವ ಎಣಿಕೆಯಲ್ಲಿ ನಾನು ಸೂಚಿಸಿರತಕ್ಕ ಅಂಕೆ ಬೆಳಕಿಗೆ ಬಂದಿದೆ.

ಶ್ರೀ ಕಾಗೋಡು ತಿಮ್ಮಪ್ಪ.— ಇಲ್ಲಿ ಉತ್ತರದಲ್ಲಿ ರೂ. ೩,೫೦,೭೪೯-೬೭ ವ್ಯತ್ಯಾಸ ಕಂಡುಬಂದಿದೆ ಎಂದು ತಿಳಿಸಲಾಗಿದೆ. ಈ ವ್ಯತ್ಯಾಸಕ್ಕೆ ಯಾರು ಜವಾಬ್ದಾರರು ಎಂಬುದನ್ನು ನಿಗದಿ ಮಾಡುವುದಕ್ಕೆ ಇಷ್ಟು ನಿಧಾನವಾಗುವುದಕ್ಕೆ ಕಾರಣವೇನು ?

ಶ್ರೀ ಎಸ್ ಎಂ. ಕೃಷ್ಣ.— ಇದನ್ನು ಕ್ರಮವಿಲ್ಲದ ರೀತಿಯಲ್ಲಿ ಮಾಡುವುದಕ್ಕಾಗುವುದಿಲ್ಲ. ಫೈನಲ್ ವೆರಿಫಿಕೇಷನ್ ಆದನಂತರ ಬುಕ್ ಬ್ಯಾಲೆನ್ಸಿಗೆ ಎಷ್ಟು ಖಚಿತವಾಗಿ ವ್ಯತ್ಯಾಸಬರುತ್ತದೆ ಎಂಬುದನ್ನು ನೋಡಿಕೊಂಡು ಅದಕ್ಕೆ ಯಾರು ಯಾರು ಜವಾಬ್ದಾರರು, ಅದರಲ್ಲಿ ಯಾರ ಯಾರ ಹೊಣೆಗಾರಿಕೆ ಎಷ್ಟೆಷ್ಟಿದೆ ಎಂಬುದನ್ನು ಖಚಿತವಾಗಿ ನಿಗದಿಮಾಡಬೇಕೆಂದು ಸರ್ಕಾರದವರು ಆಡಳಿತ ಮಂಡಲಿಯವರಿಗೆ ನಿರ್ದೇಶನ ಕೊಟ್ಟಿದ್ದಾರೆ. ವರದಿ ಬಂದ ಕೂಡಲೆ ಕ್ರಮ ಕೈಕೊಳ್ಳಲಾಗುತ್ತದೆ

ಶ್ರೀ ಕಾಗೋಡು ತಿಮ್ಮಪ್ಪ.— ಅಲ್ಲಿ ಒಂದು ಶುದ್ಧೀಕರಣ ಮಾಡತಕ್ಕ ಬಗ್ಗೆ ಮತ್ತು ಅಲ್ಲಿ ನಷ್ಟವಾದ ವಸ್ತುಗಳ ಬಗ್ಗೆ ಸಂಬಂಧಪಟ್ಟವರ ಬಗ್ಗೆ ಸೂಕ್ತ ಕಾರ್ಯಕ್ರಮ ಕೈಗೊಳ್ಳುವುದಕ್ಕೆ ಏನಾದರೂ ಒಂದು ಕಾಲ ನಿಗದಿ ಮಾಡುವುದು ಸೂಕ್ತವಲ್ಲವೇ ?

ಶ್ರೀ ಎಸ್. ಎಂ. ಕೃಷ್ಣ —ಇಂತಿಷ್ಟೇ ಕಾಲದಲ್ಲಿ ಈ ಫಿಜಿಕಲ್ ವೆರಿಫಿಕೇಷನ್

---

†Indicates that remarks or speeches have not been revised by the member concerned.

ಮಾಡಿ ಮುಗಿಸುತ್ತೇವೆಂದು ಹೇಳುವುದಕ್ಕಾಗುವುದಿಲ್ಲ; ಅದು ಬಹಳ ಕಷ್ಟ. ಅಕೌಂಟ್ಸ್‌ಗಳ ವೆರಿಫಿಕೇಷನ್ ಮುಗಿಯಬೇಕು. ಅದು ಮುಗಿದು ಅಂತಿಮವಾಗಿ ಅಲ್ಲಿ ಏನು ವ್ಯಕ್ತಪಡುತ್ತದೆಂಬುದನ್ನು ಈ ಸದನದ ಮುಂದೆ ಒಂದು ವರದಿಯನ್ನು ಮಂಡಿಸಲಾಗುತ್ತದೆ.

Sri N. G. HALAPPA.— So far there is a difference of Rs. 3,50, 289 in the stock. Are we to take that the difference of stock would stand at that figure or would it decrease or increase on further final v rification ?

Sri S. M. KRISHNA.— That all depends upon the further verification that is going on. It is a continuous process.

ಶ್ರೀ ಎಚ್. ಎಸ್. ಸಿದ್ದಪ್ಪ — ಈಗ ವ್ಯಕ್ತವಾಗಿರತಕ್ಕ ಪ್ರೈಮಾಫೇಸಿಯಾ ಕೇಸೇನಿದೆ ಇದರ ಪ್ರಕಾರ ಅಲ್ಲಿ ಯಾರಿಗಾದರೂ ಸಸ್‌ಪೆನ್‌ಷನ್ ಮಾಡಲಾಗಿದೆಯೇ ಅಥವಾ ಆ ಬಗ್ಗೆ ಯಾರಿಗಾದರೂ ನೋಟೀಸನ್ನು ಏನಾದರೂ ಕೊಡಲಾಗಿದೆಯೇ ?

ಶ್ರೀ ಎಸ್. ಎಂ. ಕೃಷ್ಣ.— ಹಾಲಿ ಕಂಡು ಬಂದಿರತಕ್ಕ ವ್ಯತ್ಯಾಸಕ್ಕೆ ಯಾರು ಜವಾಬ್ದಾರರು ಎಂಬುದನ್ನು ಈ ಸ್ಟೇಜಿನಲ್ಲಿ ನಿರ್ಧರಿಸುವುದು ಕಷ್ಟ. ಅಖೈರ ಎಣಿಕೆ ಮುಗಿದ ನಂತರ ಕಂಡುಬರತಕ್ಕ ವ್ಯತ್ಯಾಸದ ಬಗ್ಗೆ ಕೂಡಲೆ ವರದಿಯನ್ನು ಸರ್ಕಾರಕ್ಕೆ ಕಳುಹಿಸುವಂತೆ ಆಡಳಿತ ಮಂಡಲಿಗೆ ಆದೇಶ ನೀಡಲಾಗಿದೆ.

ಶ್ರೀ ಬಾಪೂಗೌಡ ರಾಘಪ್ಪ.— ಇದುವರೆಗೆ ಎಣಿಕೆ ಮಾಡಿರತಕ್ಕ ದಾಸ್ತಾನಿನ ಮೊತ್ತ ೪೯,೩೪,೫೧೬—೦೦ ರೂಪಾಯಿಗಳ ಬೆಲೆ ಇರುತ್ತೆಂದು ತಿಳಿಸಿದೆ ಇದರಲ್ಲಿ ಸ್ಕ್ರೇಪಿಗೆ ಹಾಕತಕ್ಕ ಸಾಮಾನುಗಳೇನಾದರೂ ಸೇರಿರುತ್ತವೆಯೇ ಎಂಬ ಅಂಶವೇನಾದರೂ ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಎಂ. ಕೃಷ್ಣ.— ಇದರ ವಾಸ್ತವಾಂಶಗಳನ್ನು ಈ ಮಾನ್ಯ ಸದನಕ್ಕೆ ತಿಳಿಸುವುದಾದರೆ ಇದು ಹಿಂದಿನಿಂದಲೂ ಬಹಳ ಅಸ್ತವ್ಯಸ್ತವಾದ ಸ್ಥಿತಿಯಲ್ಲಿತ್ತು. ಅಲ್ಲಿ ಈ ಸ್ಟಾಕಿನ ಪರಿಸ್ಥಿತಿ ಚೆನ್ನಾಗಿರಲಿಲ್ಲ. ನಾವು ಅಧಿಕಾರಕ್ಕೆ ಬಂದಮೇಲೆ ಈ ಸ್ಟೋರನ್ನು ಒಂದು ಸುವ್ಯವಸ್ಥೆಗೆ ತರಬೇಕೆಂದೂ ಮಾಡರನ್ ಕಾನ್‌ಸೆಪ್ಟ್ ಮತ್ತು ಮೆಥೆಡ್ ಪ್ರಕಾರ ರೀಆರ್ಗನೈಜೇಷನ್ ಮಾಡಬೇಕೆಂದು ಈಗಿರತಕ್ಕ ಅಧ್ಯಕ್ಷರು ಮತ್ತು ಮ್ಯಾನೇಜಿಂಗ್ ಡೈರೆಕ್ಟರು ಪ್ರಯತ್ನಪಟ್ಟಿದ್ದಾರೆ. ಅಲ್ಲಿ ಒಂದು ಹೊಸ ಸ್ಟೋರ್ ಕಟ್ಟಡ ರ್ಗೋಡನ್ನೇ ಮೊದಲ್ಲಿ ಕಟ್ಟಿ ಪೂರೈಸಲಾಗಿದೆ. ಅದರಲ್ಲಿ ಕಂಡುಬರತಕ್ಕ ಲೋಪದೋಷಗಳೇನಿವೆ ಅವುಗಳ ಬಗ್ಗೆ ಯಾರು ಹೊಣೆಗಾರರು ಎಂಬುದನ್ನು ನಿರ್ಧಾರಮಾಡಿ ಅವರ ಬಗ್ಗೆ ತೀವ್ರವಾದ ಕಾರ್ಯಕ್ರಮಗಳನ್ನು ಕೈಕೊಳ್ಳಲಾಗುತ್ತದೆ.

MADAM SPEAKER.— Question No. 228 by hon. member Sri T. M. Manjunath the Hon. Minister for Co-operation is

not in station. I will take up this question when he returns or tomorrow.

MARATHI PRIMARY SCHOOLS WITHOUT TEACHERS IN AURAD TALUK

235. Sri Bupu Rao Patil (Aurad).—Will the Minister for Education be pleased to state.—

(a) the name of the villages in Aurad Taluk of Bidar District where there are no Primary Schools;

(b) the schools where teachers who have not been educated and trained through Marathi medium have been postad as Marathi teachers being bilingual either permanently or on deputation;

(c) the number of Marathi primary schools without teachers or short of teachers when compared to the strength of students ;

(d) the number of untrained Marathi teachers in Aurad Taluk ;

(e) the number of teachers who have been recruited this year and allotted to Aurad Taluk ;

(f) their number according to the medium of instruction, *i. e.* Urdu, Marathi and Kannada ?

(g) the number of primary schools (Marathi Medium) in Aurad that have been demanding additional hands since the last two year ;

(h) the number of schools and their names which have not been supplied with additional hands ;

(i) the reasons for not meeting their requirements ?

Sri A. R. Badarinarayana (Minister for Education).—

(a) (1) Kashempur (Borgi)
(2) Lingadhalli
(3) Nandi Ijalgaon Tanda
(4) Melegoanwadi
(5) Ankapur and
(6) Shivapur.

(b) *Vide* Statement 'A' placed on the Table of the House.*

(c) (i) Two schools— (1) Lower Primary School, Harshikere, (2) Lower Primary School, Chintaki Tanda, were temporary arrangements are made.

(ii) List of schools where additional Marathi hands are required is 20 *Vide* Annexure—'B' placed on the Table of the House.*

(d) (i) Middle passed and untrained ... 20

(ii) S. S. L C. and untrained 2

22

(e) 17. (D.L.R.C. Candidates = 11 + P.S.C. Candidates = 6.)

(f)

	Urdu	Marathi	Knnada
D.L.R.C.	Nil	7	4
P.S.C.	Nil	2	4

(g)

Year	Additional hands proposed	Sanctioned
1971-72	8	2
1972-73	9	3
	17	5

(h) 6 as noted below :

1. L.P.S., Balkoni
2. L.P.S., Mudhol-K
3. L.P.S., Bhawarnibijalgaon
4. H.P.S., Kalgapur
5. H.P.S., Chiruegoan
6. L.P.S., Nandibigilgaon.

(i) Sanction of additional posts is under consideration.

*Copies placed on the Table of the House *Vide* Nos. 20/ Dated 28-9-73.

Sri Bapu Rao Patil. — In answer to a similar question on 27-2-1973, the same type of answer is given. May I know when exactly the requirements in regared to posting of additional Teachers would be met ?

†Sri A. R. Badarinarayana : The posting of Teachers will be done. The services of local candidates have been terminated and in their places we are posting somebody else.

ಅಧ್ಯಕ್ಷರು.—ಪ್ರಶ್ನೆ ಮತ್ತು ಉತ್ತರ ೨೭೨

(ಆಗ ಸಭೆಯಲ್ಲಿ ಪ್ರಶ್ನೆಗೆ ಉತ್ತರ ಕೊಡಲು ಸಂಬಂಧಪಟ್ಟ ಮಂತ್ರಿಗಳು ಹಾಜರಿರಲಿಲ್ಲ)

ಈ ಪ್ರಶ್ನೆಗೆ ಯಾರು ಉತ್ತರ ಕೊಡುತ್ತಾರೆ ? ನನಗೆ ಹೀಗೆ ಸಭೆಗೆ ಬರಲು ತೊಂದರೆ ಇದೆ ಎಂದು ಸಂಬಂಧಪಟ್ಟ ಸಚಿವರು ಬರೆಯುವುದೂ ಇಲ್ಲ. ಅಥವಾ ಅವರು ಯಾವಾಗ ಸಭೆಗೆ ಬರುತ್ತಾರೆಂಬುದನ್ನೂ ಕೂಡ ತಿಳಿಸುವುದಿಲ್ಲ. ಹೀಗಾಗುವುದರಿಂದ the presiding Officers will be put into embarrassment.

Sri H. M. Channabasappa (Minister for Public Works).- I quite appreciate the embarrassment to the Hon'ble Speaker. It is very likely that the Hon. Minister for Municipal Administration will be coming shortly. So this Question No. 272 may kindly be taken after the first round of questions are ovar.

Sri M. S. Krishnan.— If this were the first time we would have excused. This is not the first time. The House cannot excuse the Government.

REPAIRS TO N. T. M. S. GIRLS SCHOOL BUILDING AT HOSANAGAR

286. Sri S. M. Sheernaly Chandrasekhar (Hosanagar).- Will the Minister for Education be pleased to state:—

(a) whether the Government is aware that the school building (N. T. M. S. Girls) at Hosanagar is in a dilapidated condition and that it may collapse at any time;

(b) whether they have received any representation requesting to repair the said building;

(c) whether the Minister for Education during his visit to Hosanagar about the first half of 1972 had assured the public that the school building would be repaired immediately.

(d) the action the Government has taken on the representation referred in clause (b);

(e) the reason for the delay in taking up the repair work of the building?

Sri A. R. BADARINARAYANA (Minister for Education).—

(a) Yes.

(b) Yes.

(c) Yes.

(d) and (e) An estimate for Rs. 6,200 has been prepared and the same is under examination of Government vis-a-vis the Economy Ordars.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ —ಈ ಕಟ್ಟಡದ ದುರಸ್ತಿಗೆ ಬೇಕಾದ ಮೊತ್ತ ೬೨೦೦ ರೂಪಾಯಿಗಳೆಂದು ಅಂದಾಜುಮಾಡಿಯೂ ಕೂಡ, ಇನ್ನೂ ಅದರ ರಿಪೇರಿಯ ಬಗ್ಗೆ ಕಾಲವಿಳಂಬವಾಗುತ್ತಾ ಇರುವ ಕಾರಣವೇನು ?

†ಶ್ರೀ ಎ. ಆರ್. ಬದರೀನಾರಾಯಣ —ಕಾರಣ, ಇಕಾನಮಿ ಆರ್ಡರ್ಸ್ ಇದೆ. ಫೈನಾನ್ಸ್ ಕಡಿಮೆ ಇದೆ. This is a very huge problem. We have 34,000 primary schools where we have to construct buildings. I admit it is necessary to have it repaired. But let me assure the hon. Member that early steps will be taken in the matter.

ಶ್ರೀ ಎಸ್. ಎಂ ಶೀರನಾಳಿ ಚಂದ್ರಶೇಖರ —ಮಳೆಗಾಲದಲ್ಲಿ ಈ ಕಟ್ಟಡ ಮತ್ತಷ್ಟು ವಿರೂಪಗೊಳ್ಳತಕ್ಕ ಪರಿಸ್ಥಿತಿ ಬರುವುದರಿಂದ, ಈ ಕಟ್ಟಡದ ದುರಸ್ತಿ ಕಾಮಗಾರಿಯನ್ನು ಎಷ್ಟು ಜಾಗ್ರತೆ ಸಾಧ್ಯವೋ ಅಷ್ಟು ಜಾಗ್ರತೆಯಾಗಿ ದುರಸ್ತುಮಾಡುವುದಕ್ಕೆ ತಕ್ಕ ಕ್ರಮವನ್ನು ತೆಗೆದುಕೊಳ್ಳುತ್ತೀರಾ ? ಮಳೆಗಾಲದಲ್ಲಿ ಈ ಕಟ್ಟಡ ಮಕ್ಕಳ ತಲೆಯ ಮೇಲೆ ಬೀಳುವ ಪರಿಸ್ಥಿತಿ ಬೇರೆ ಇದೆ. ಇದರಿಂದೇನಾದರೂ ಅನಾಹುತವಾದರೆ ನಮಗೊಂದು ಕೆಟ್ಟ ಹೆಸರು ಬರುತ್ತದೆ. ಆದ್ದರಿಂದ ಕೂಡಲೇ ಈ ದುರಸ್ತಿ ಕಾಮಗಾರಿಯನ್ನು ಮಾಡುವುದಕ್ಕಾಗುತ್ತದೆಯೋ ?

Sri A. R. BADRINARAYAN.—This building was donated by Philontrophists and it is not in good condition. I shall personally look into the matter and see what best could be done.

ಶ್ರೀ ಎಚ್. ಎಸ್. ಸಿದ್ದಪ್ಪ.—ಈ ಕಟ್ಟಡ ಡಿಲಾಪಿಡೇಟೆಡ್ ಕಂಡೀಷನ್ಸ್‌ನಲ್ಲಿರುವುದರಿಂದ ಅಲ್ಲಿನ ಶಾಲಾ ಮಕ್ಕಳಿಗೆ ಅನಾಹುತವಾಗುವುದನ್ನು ತಪ್ಪಿಸುವ ಉದ್ದೇಶದಿಂದ ಷೆಡ್‌ಗಳನ್ನು ಹಾಕಿಸುತ್ತೇವೆಂದು ನೀವು ಚೇರ್‌ಮನ್‌ರಿಗೆ ಹೇಳಿದ್ದಿರಿ. ಅದೇ ರೀತಿಯಲ್ಲಿ ತಮ್ಮ ಕ್ಷೇತ್ರದಲ್ಲಿ ಷೆಡ್‌ಗಳನ್ನು ಹಾಕಿಸಿದ್ದೇನೆಂದು ಸಹ ಹೇಳಿದ್ದಿರಿ. ಆದ್ದರಿಂದ ಇಲ್ಲಿಯೂ ಷೆಡ್‌ಗಳನ್ನು ಹಾಕಿಸಿಕೊಡುತ್ತೀರಾ ?

ಶ್ರೀ ಎ. ಆರ್. ಬದರೀನಾರಾಯಣ.—ಅಲ್ಲಿಗೆ ಷೆಡ್ ಹಾಕಿಸುವ ಪರಿಸ್ಥಿತಿ ಏನೂ ಇಲ್ಲ. ಅದನ್ನು ರಿಪೇರಿ ಮಾಡುವ ಪರಿಸ್ಥಿತಿ ಮಾತ್ರ ಇದೆ. ಅಷ್ಟು ಅದು ಡಿಲಾಪಿಡೇಟೆಡ್ ಕಂಡೀಷನ್ನನಲ್ಲಿಲ್ಲ.

Sri N. G. HALAPPA.—In view of heavy rainfall there could you not expedite the matter inspite of economy orders ?

Sri A. R. BADRINARAYAN.—I am second to none to see that the matter is expedited. But the facts are there. We have to face the facts.

CONSTRUCTION OF KALIWALA TANK IN SAVANNUR TALUK

290. Sri V. V. WAI (Shirahatti).— Will the Minister for Public Works and Electricity be pleased to state:—

(a) the reason for not completing the construction work of Kaliwala Tank in Savannur Taluk though the work was started;

(b) when the construction work of the said tank will be completed ?

Sri H. M. CHANNABASAPPA (Minister for Public Works and Electricity).—

(a) The construction of the Tank is not yet started.

(b) The question does not arise in view of the reply to clause (a).

ಶ್ರೀ ವಿ. ವಿ. ವಾಯಿ.—ಈ ಕೆರೆಯ ನಿರ್ಮಾಣದ ಕೆಲಸ ಇನ್ನೂ ಪ್ರಾರಂಭವಾಗಿಲ್ಲವೆಂದು ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ಕೊಟ್ಟಿದೆ. ಈ ಕೆರೆಯು ಅವಶ್ಯಕತೆ ಆ ಗ್ರಾಮದ ಜನರಿಗೆ ಬಹಳ ಅವಶ್ಯವಾಗಿರುವುದರಿಂದ, ಇದನ್ನು ಶೀಘ್ರವಾಗಿ ಷುರು ಮಾಡಿಸುತ್ತೀರಾ.

† ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನು ಉತ್ತರದಲ್ಲಿ ಹೇಳಿರುವ ಪ್ರಕಾರ, ಅದಕ್ಕೆ ತಕ್ಕ ಜಮೀನು ಇನ್ನೂ ಒದಗದೇ ಇರುವ ಪ್ರಯುಕ್ತ, ಈ ಕೆರೆಯ ಕೆಲಸವನ್ನು ಪ್ರಾರಂಭ ಮಾಡುವುದು ಕಷ್ಟವಾಗಿದೆ.

ಶ್ರೀ ವಿ.ವಿ. ನಾಯಿ.—ಹಾಗಾದರೆ ಜಮೀನನ್ನು ಸರ್ಕಾರಕ್ಕೆ ಒದಗಿಸಿಕೊಟ್ಟರೆ ಅದನ್ನು ಶೀಘ್ರವಾಗಿ ಪ್ರಾರಂಭಮಾಡುತ್ತೀರಾ?

ಶ್ರೀ ಎಚ್ ಎಂ. ಚನ್ನಬಸಪ್ಪ.—ಅದು ನಮ್ಮ ಸುಪರ್ದಿಗೆ ಬಂದಮೇಲೆ ಇದಕ್ಕೆ ಏರ್ಪಾಡು ಮಾಡುತ್ತೇವೆ.

REPORT ON CONDITIONS OF WEAVERS OF BIJAPUR DISTRICT

313. Sri P. M. BANGI (Jamkhandi).—

Will the Minister for Industries be pleased to state:—

(a) whether it is a fact that Sri Rathod, Minister of State for Fisheries visited Weavers' Centres at (1) Chadachan (2) Banhatti (3) Jamkhandi (4) Ramapur (5) Rabakavi (6) Terdal (7) Hunagund (8) Irakali (9) Guledgud and (10) Sulebhavi in Bijapur to study the hardship and needs of suffering weavers in the drought affected areas of Bijapur District with concerned M. L. As. and the Joint Director of Industries at the instance of the Chief Minister on 4th, 5th and 6th April 1973.

(b) whether he has submitted the report this week proposing immediate reliefs to suffering weavers by supplying sufficient yarn and interest free loans to poor weavers;

(c) whether the report will be placed before this House?

Sri S. M. KRISHNA (Minister for Industries).—

(a) Yes.

(b) Yes.

(c) No–as the Report is of administrative nature.

ಶ್ರೀ ಪಿ. ಎಂ. ಬಾಂಗಿ.— (ಅ) ಪ್ರಶ್ನೆಗೆ ಉತ್ತರವಾಗಿ 'ಹೌದು' ಎಂಬುದಾಗಿ ಹೇಳಿದೆ. ಅಲ್ಲಿ ಎಷ್ಟೇ ಕಷ್ಟಪಟ್ಟರೂ ಅಲ್ಲಿನ ನೇಕಾರರಿಗೆ ಸಾಕಷ್ಟು ನೂಲು ಕೊಟ್ಟಿಲ್ಲ. ಮಾನ್ಯ ಶ್ರೀ ಕೆ. ಟಿ. ರಾಠೋಡ್ ಮಂತ್ರಿಗಳು ಇದರ ಬಗ್ಗೆ ಶಿಫಾರಸ್ಸನ್ನು

ಮಂಡಿಸಿದ್ದರೂ ಇನ್ನೂ ಇಲ್ಲಿಯವರೆಗೂ ಆ ನೇಕಾರರಿಗೆ ಇಂಟರೆಸ್ಟ್ ಫ್ರೀಲೋನನ್ನು ಕೊಟ್ಟಿಲ್ಲದೇ ಇರಲು ಕಾರಣವೇನು ?

† ಶ್ರೀ ಎಸ್. ಎಂ. ಕೃಷ್ಣ.— ಮಾನ್ಯ ಶ್ರೀ ಕೆ. ಟಿ. ರಾಠೋಡ್ ಮಂತ್ರಿಗಳು ಕೆಲವಾರು ಶಿಫಾರ್ಸುಗಳನ್ನು ಮಂಡಿಸಿದರು ಆ ಶಿಫಾರಸುಗಳು ಕಾರ್ಯಾಚರಣೆಯಾಗಬೇಕಾದರೆ, ಸುಮಾರು ೨೦ ಸಾವಿರ ನೇಕಾರರಿಗೆ ಬಿಜಾಪುರ ಜಿಲ್ಲೆಯೊಂದರಲ್ಲಿಯೇ ಪ್ರತಿಯೊಬ್ಬರಿಗೂ ೨೫೦ ರೂಪಾಯಿಗಳಂತೆ ಸಾಲ ಕೊಟ್ಟರೆ ಸುಮಾರು ೫೦ ಲಕ್ಷ ರೂಪಾಯಿಗಳನ್ನು ಸರ್ಕಾರ ಒದಗಿಸಿಕೊಡಬೇಕಾಗುತ್ತದೆ. ಇದು ಕೇವಲ ಬಿಜಾಪುರ ಜಿಲ್ಲೆಗೆ ಮಾತ್ರ ಸೀಮಿತವಾಗುವುದಿಲ್ಲ. ಬಿಜಾಪುರ, ಬೆಳಗಾಂ, ಧಾರವಾಡ ಮತ್ತು ಮಂಡ್ಯಾ ಜಿಲ್ಲೆಗಳಲ್ಲಿಯೂ ನೇಕಾರರು ಇದ್ದಾರೆ. ಸರ್ಕಾರ ಈ ಒಂದು ಜಿಲ್ಲೆಯಲ್ಲಿ ಒಂದು ಕಡೆಯೇ ಸುಮಾರು ೫೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಸಿದ್ಧವಾದರೆ ಮಿಕ್ಕ ಎಲ್ಲಾ ಜಿಲ್ಲೆಗಳಲ್ಲಿಯೂ ಈ ರೀತಿಯಾಗಿಯೇ ಖರ್ಚುಮಾಡಬೇಕಾದ ಪರಿಸ್ಥಿತಿ ಬರುತ್ತದೆ. ಅದೇನೋ ನ್ಯಾಯವಾದಂಥ ಬೇಡಿಕೆಯೇನೋ ಸರಿ. ಆದರೆ ರಾಜ್ಯ ಸರ್ಕಾರ ಈಗ ಎದುರಿಸುತ್ತಿರುವ ಆರ್ಥಿಕ ಬಿಕ್ಕಟ್ಟಿನ ಚೌಕಟ್ಟಿನಲ್ಲಿ ನಾವು ಸುಮಾರು ೫೦ ಲಕ್ಷ ರೂಪಾಯಿಗಳನ್ನು ಇಲ್ಲಿ ಒದಗಿಸುವುದಕ್ಕೆ ಸಾಧ್ಯವಾಗುವುದಿಲ್ಲವೆಂಬುದು ಒಂದು. ಆದರೆ ಇದಕ್ಕೆ ಬದಲಾಗಿ ನಾವು ಈಗಾಗಲೇ ೧೭ ರಿಲೀಫ಼ ಸೆಂಟರುಗಳನ್ನು ಪ್ರಾರಂಭಮಾಡಿದ್ದೇವೆ. ಅದಕ್ಕಾಗಿ ಸುಮಾರು ೭೭ ರಿಂದ ೮೦ ಲಕ್ಷ ರೂಪಾಯಿಗಳವರೆಗೂ ಈಗಾಗಲೇ ಖರ್ಚು ಮಾಡುತ್ತಿದ್ದೇವೆ. ಇದು ಮಾನ್ಯ ಸದಸ್ಯರಾದ ಶ್ರೀ ಬಾಂಗಿಯವರಿಗೂ ಗೊತ್ತಿದೆ ಆದರೆ ನಮಗೆ ಈಗ ಇರತಕ್ಕ ಆರ್ಥಿಕ ಬಿಕ್ಕಟ್ಟಿನ ಇತಿಮಿತಿಗಳನ್ನು ನೋಡಿಕೊಂಡು ನಾವು ಈ ವಿಚಾರದಲ್ಲಿ ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಪಿ. ಎಂ. ಬಾಂಗಿ.— ಮಾನ್ಯ ಶ್ರೀ ಕೆ. ಟಿ. ರಾಠೋಡ್ ಮಂತ್ರಿಗಳು ಮೀನುಗಾರಿಕೆಯವರಿಗೆ ಸುಮಾರು ೩೦ ಲಕ್ಷ ರೂಪಾಯಿಗಳನ್ನು ಪರಿಹಾರ ರೂಪವಾಗಿ ಕೊಟ್ಟರು. ಅದೇ ರೀತಿಯಾಗಿ ಕನಿಷ್ಟಪಕ್ಷ ತಾವು ನೇಕಾರರಿಗೆ ಪ್ರತಿಯೊಬ್ಬರಿಗೂ ಕೇವಲ ೫೦ ರೂಪಾಯಿಗಳನ್ನು ಇಂಟರೆಸ್ಟ್ ಫ್ರೀ ಲೋನಾಗಿ ಕೊಟ್ಟರೆ ಅದರಿಂದ ಅವರಿಗೆ ಬಹಳಮಟ್ಟಿಗೆ ಅನುಕೂಲವಾಗುತ್ತದೆ. ಆದ್ದರಿಂದ ಇದನ್ನು ಮಾನ್ಯ ಮಂತ್ರಿಗಳು ವಿಚಾರಮಾಡುತ್ತಾರೆಯೇ ?

ಶ್ರೀ ಎಸ್. ಎಂ. ಕೃಷ್ಣ.— ಈಗಾಗಲೇ ಬಿಜಾಪುರ ಜಿಲ್ಲೆಯಲ್ಲಿ ಕೋಆಪರೇಟಿವ್ ಬ್ಯಾಂಕ್ ವತಿಯಿಂದ ಒಂದಷ್ಟು ಹಣವನ್ನು ಅಲ್ಲಿನ ನೇಕಾರರಿಗೆ ಸಾಲದ ರೂಪದಲ್ಲಿ ಕೊಟ್ಟಿದ್ದಾರೆ. ಅದೂ ಅಲ್ಲದೆ ರಿಜರ್ವ ಬ್ಯಾಂಕಿನವರಿಗೆ ಇನ್ನೂ ಹೆಚ್ಚಿನ ಹಣವನ್ನು ಈ ಜಿಲ್ಲಾ ಕೋಆಪರೇಟಿವ್ ಬ್ಯಾಂಕಿಗೆ ಕೊಡಬೇಕೆಂದು ಸರ್ಕಾರದವರು ಶಿಫಾರಸುಮಾಡುತ್ತಾರೆ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.— ತಾವು ಉತ್ತರ ಕೊಡುವಾಗ ಇದು ಬಹಳ ಮಹತ್ವವಾದಂಥ ಬೃಹದಾಕಾರದ ಸಮಸ್ಯೆ ಎಂಬುದಾಗಿ ಹೇಳಿದಿರಿ.

ಬೆಂಗಳೂರಿನ ಕಬ್ಬನಪೇಟೆ ಮತ್ತು ಸಂಪಂಗಿರಾಮನಗರಗಳಲ್ಲಿಯೂ ನೇಕಾರರಿಗೆ ರಿಲೀಫ್ ಮೆಷರ್ಸನ್ನು ಯಾವರೀತಿಯಾಗಿ ಬಿಜಾಪುರ ಜಿಲ್ಲೆಯಲ್ಲಿ ಒದಗಿಸುತ್ತೀರೋ ಆ ರೀತಿಯಾಗಿ ಒದಗಿಸಿಕೊಡುತ್ತೀರಾ ?

ಅಧ್ಯಕ್ಷರು.— ಈಗ ಆ ಪ್ರಶ್ನೆ ಉದ್ಭವಿಸುವುದಿಲ್ಲ.

Sri MALLIKARJUN KHARGE.— The Government is kind enough to start collective weaving centres in drought affected areas. Will the Government continue this scheme atleast for one year ?

Sri S. M. KRISHNA.— This was part of the drought relief programme the State Government had taken up. Now the question of continuing these relief centres is engaging active consideration of Government.

ಶ್ರೀ ಪಿ. ಎಂ. ಬಾಂಗಿ.— ಬಿಜಾಪುರ ಜಿಲ್ಲೆಯಲ್ಲಿ ಕೇವಲ ೩ ರಿಲೀಫ್ ಸೆಂಟರುಗಳನ್ನು ತೆರೆದಿರುವುದರಿಂದ ಸ್ವಲ್ಪ ಜನರಿಗೆ ಅಂದರೆ ಕೇವಲ ೩೦೦ ಜನರಿಗೆ ಮಾತ್ರ ಅದರಿಂದ ಪ್ರಯೋಜನವಾಗಿದೆ. ಅಲ್ಲಿರತಕ್ಕವರು ೩೨ ಸಾವಿರ ಜನ ನೇಕಾರರು ಅಂದಮೇಲೆ ಉಳಿದ ನೇಕಾರರಿಗೆ ಇವತ್ತು ನೂಲನ್ನು ಕೊಟ್ಟಿಲ್ಲ. ಅವರು ನಿರ್ಗತಿಕರಾಗಿದ್ದಾರೆ. ಇದರ ಪರಿಣಾಮವಾಗಿ ಅನೇಕರು ಅಲ್ಲಿ ಉಪವಾಸ ಮಾಡುತ್ತಿದ್ದಾರೆ. ಆದ್ದರಿಂದ ಅವರ ಬಗ್ಗೆ ಸರ್ಕಾರ ಈಗಲಾದರೂ ಗಮನಿಸುತ್ತದೆಯೇ ?

ಶ್ರೀ ಎಸ್. ಎಂ. ಕೃಷ್ಣ.— ನೇಕಾರರಿಗೆ ಬಹಳ ಕಷ್ಟ ಪರಿಸ್ಥಿತಿ ಬಂದಿದೆ ಯೆಂಬುದು ಸರ್ಕಾರದವರಿಗೆ ಗೊತ್ತಿದೆ ಅದಕ್ಕಾಗಿ ಈಗಾಗಲೇ ಸರ್ಕಾರದವರು ಅವರಿಗೆ ನೂಲನ್ನು ವಿತರಣೆಮಾಡತಕ್ಕ ಜವಾಬ್ದಾರಿಯನ್ನು ಹೊತ್ತುಕೊಂಡಿದ್ದಾರೆ. ೪೦ ನಂಬರ್ ಕೌಂಟಿನ ನೂಲಿನವರೆಗೂ ಡಿ-ಕಂಟ್ರೋಲ್ ಮಾಡಿದ್ದೇವೆ. ಅದಕ್ಕೆ ಮೇಲ್ಪಟ್ಟ ನಂಬರ್ ಕೌಂಟಿನ ನೂಲನ್ನು ಹೆಚ್ಚಿಗೆ ಸ್ಟಾಕ್ ಮಾಡದೆ ಈಗ ಪ್ರತಿಯೊಂದು ಜಿಲ್ಲೆಯಲ್ಲಿಯೂ ಹಂಚಿದ್ದೇವೆ. ಅದಕ್ಕೆ ಸೂಕ್ತ ವ್ಯವಸ್ಥೆಯನ್ನು ಮಾಡಿದ್ದೇವೆ ದೇಶದಲ್ಲಿರತಕ್ಕ ನೂಲಿನ ಅಭಾವ ಪರಿಸ್ಥಿತಿಯನ್ನು ಸರ್ಕಾರ ಗಮನಿಸಿಕೊಂಡು ನಮ್ಮ ರಾಜ್ಯದಲ್ಲಿರತಕ್ಕ ಮಿಲ್ಲುಗಳು ಏನಿವೆಯೋ ಅವು ಎಲ್ಲ ನೂಲನ್ನೂ ನಮ್ಮ ರಾಜ್ಯದಲ್ಲಿಯೇ ಉಪಯೋಗಿಸಿಕೊಳ್ಳುವುದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡುತ್ತಿವೆ. ಆದ್ದರಿಂದ ಸರ್ಕಾರದವರು ನೇಕಾರರ ಒಳಿತಿಗೋಸ್ಕರ ಎಲ್ಲವನ್ನೂ ಮಾಡುವುದಕ್ಕೆ ಸಾಧ್ಯವಾಗದೇ ಹೋದರೂ ಕೂಡ ಸಾಕಾದಷ್ಟು ಕೆಲಸಕಾರ್ಯಗಳನ್ನು ಈಗಾಗಲೇ ಮಾಡಿದ್ದಾರೆಂದು ನನ್ನ ಅಭಿಪ್ರಾಯ.

GOVERNMENT OF INDIA SCHOLARSHIP TO POST-MATRIC S.C/S. T. STUDENTS

322 Sri MALLIKARJUN KHARGE (Gurmitkal).—

Will the Minister for Community Development and Social Welfare be pleased to state:—

(a) whether the power vested in the Deputy Director, Social Welfare, at Divisional Head-quarters to san tion the Government of India Scholarship to Post-matric students belonging to Scheduled Castes and Scheduled Tribes has been withdrawn;

(b) if so, the reasons for the same;

(c) the expenditure incurred on the establishment of Deputy Director of Social Welfare at Divisional Head-quarters?

Sri M. MALLIKARJUNASWAMY (Minister for Community Development and Social Welfare).

(a) Yes.

(b) This has been done for sanction of Government of India Scholarships to the eligible applicants more expeditiously.

(c) The expenditure is Rs. 2,76,283-32 paise per year in respect of four divisions.

Sri MALLIKARJUN KHARGE.—You have stated that the powers of the Deputy Director for Social Welfare regarding sanctioning of scholarship to post-metric students have been withdrawn. May I know the reasons for withdrawing these powers and whether it is not a harassment to the Scheduled caste students if the powers of the Deputy Director is withdrawn?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಈ ಅಧಿಕಾರವನ್ನು ಸಕಾರಣದಿಂದ ನಾವು ವಿತ್‌ಡ್ರಾ ಮಾಡಿಕೊಂಡಿದ್ದೇವೆ. ಸುಮಾರು ೭ ಕೋಟಿ ರೂಪಾಯಿಗಳನ್ನು ಈಗ ಇದಕ್ಕಾಗಿ ಸಮಾಜ ಕಲ್ಯಾಣ ಇಲಾಖೆ ಖರ್ಚುಮಾಡುತ್ತಿದೆ. ಕೆಲಸ ಬಹಳ ಜಾಸ್ತಿ ಇದೆ. ಸೂಪರವಿಷನ್ ವರ್ಕನ್ನು ಅವರು ಮಾಡುವುದಕ್ಕೆ ಹೋದುದರಿಂದ ಇತರ ಯಾವ್ಯಾವ ಸೌಲಭ್ಯಗಳು ಈ ಜನರಿಗೆ ದೊರಕಿಸಿಕೊಡಬೇಕಾಗಿತ್ತೋ ಅವನ್ನು ಸಕಾಲಕ್ಕೆ ದೊರಕಿಸಿಕೊಡಲು ತಕ್ಕ ಕೆಲಸಕಾರ್ಯಗಳನ್ನು ಮಾಡುವುದಕ್ಕೆ ಅವರಿಂದಾ

ಗಲಿಲ್ಲ, ಮತ್ತು ಕಳೆದ ೨-೩ ವರ್ಷಗಳಿಂದಲೂ ಕೇಂದ್ರ ಸರ್ಕಾರಕ್ಕೆ ಇದರ ಪ್ರೋಗ್ರೆಸ್ ರಿಪೋರ್ಟನ್ನು ಕಳುಹಿಸುವುದಕ್ಕಾಗಲಿಲ್ಲ.

ಡೆಪ್ಯೂಟಿ ಡೈರೆಕ್ಟರು ಡಿವಿಜನ್‌ನಲ್ಲಿ ೭ ತಿಂಗಳುಗಳ ಕಾಲ ಸ್ಕಾಲರ್‌ಷಿಪ್ ಮಂಜೂರು ಮಾಡುವ ಕೆಲಸ ಮಾಡಿಕೊಂಡು ಕುಳಿತುಕೊಂಡರೆ ಅವರಿಗೆ ಬೇರೆ ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಎಂದು ಇದನ್ನು ಸೆಂಟ್ರಲೈಜ್ ಮಾಡತಕ್ಕದ್ದು ಸೂಕ್ತ ಎಂದು ತೀರ್ಮಾನ ತೆಗೆದುಕೊಂಡು ಅದನ್ನು ಸರ್ಕಾರಕ್ಕೆ ತೆಗೆದುಕೊಂಡಿದ್ದೇವೆ.

Sri M. MALLIKARJUNA KARGE.—Has it come to the notice of the Government that the Deputy Directors of Social Welfare Department are not doing their jobs properly? When that being the case is it not necessary to abolish the posts of Deputy Directors and re-organise the entire Department under the circumstances?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅವರು ಆ ಕೆಲಸವನ್ನು ಮಾಡುವದಿಲ್ಲ ಎಂದು ಹೇಳಲಿಲ್ಲ. ಅವರಿಗೆ ಕೆಲಸ ಜಾಸ್ತಿಯಾಗಿದೆ. ಸೂಪರ್‌ವಿಜನ್ ಕೆಲಸ ಮಾಡುವುದಕ್ಕಾಗುವುದಿಲ್ಲ. ಅವರಿಗೆ ಸಿಬ್ಬಂದಿ ವರ್ಗದವರು ಎಷ್ಟು ಇರಬೇಕೋ ಅಷ್ಟು ಇಲ್ಲದೇ ಇರುವುದರಿಂದ ಈ ಸ್ಕಾಲರ್‌ಷಿಪ್ ಕೊಡುವ ವಿಷಯದಲ್ಲಿ ಡೈರೆಕ್ಟರವರಿಂದ ಪ್ರಪೋಜಲ್ಸ್ ಪಡೆದು, ಜಾಯಿಂಟ್ ಡೈರೆಕ್ಟರ ಸ್ಟೇಟಸ್ಸಿನ ಒಬ್ಬರು ಆಫೀಸರನ್ನು ಇಟ್ಟು, ಸ್ಕಾಲರ್‌ಷಿಪ್ ಬಗ್ಗೆ ಒಂದು ಕ್ಯಾಲೆಂಡರ್ ಹಾಕಿಕೊಂಡು ಮುಂದಿನ ವರ್ಷದಿಂದ ಸ್ಕಾಲರ್‌ಷಿಪ್ ಕೊಡುವುದನ್ನು ಅವರಿಗೆ ಕೊಡಬೇಕು ಎಂದು ಈಗಾಗಲೇ ನಾವು ತೀರ್ಮಾನ ತೆಗೆದುಕೊಂಡಿದ್ದೇವೆ. ಸೋಷಿಯಲ್ ವೆಲ್‌ಫೇರ್ ಡೈರೆಕ್ಟೋರೇಟ್ ರೀಆರ್ಗನೈಜ್ ಮಾಡತಕ್ಕ ಪ್ರಶ್ನೆ ಸರ್ಕಾರದ ಮುಂದೆ ಇದೆ.

Sri D. B. KALMANKAR.—May I know what other works these Deputy Directors do at the Divisional Head quarters?

Sri M. MALLKKARJUNASWAMY.—All the works pertaining to the Social Welfare Department.

ಶ್ರೀ ಎಂ. ಬಿ. ರಾಮಸ್ವಾಮಿ.—ಈ ಸ್ಕಾಲರ್‌ಷಿಪ್ ಕೊಡುವ ಕೆಲಸವನ್ನು ಸೆಂಟ್ರಲೈಜ್ ಮಾಡಿದ್ದೇವೆ ಎಂದು ತಾವು ಹೇಳಿದಿರಿ. ಈಗ ನಾಲ್ಕು ಡಿವಿಜನ್‌ಗಳಲ್ಲಿಯೂ ಡೆಪ್ಯುಟಿ ಡೈರೆಕ್ಟರವರಿಗೆ ಕೆಲಸ ಜಾಸ್ತಿ ಇರುವುದರಿಂದ ಸ್ಕಾಲರ್‌ಷಿಪ್ ಕೊಡುವುದು ನಿಧಾನವಾಗುತ್ತಿದೆ. ಆದ್ದರಿಂದ ತಾವು ದೊಡ್ಡ ಮನಸ್ಸು ಮಾಡಿ ಸರಿಯಾದಂತಹ ಸೂಪರ್‌ವಿಜನ್ ಹಾಕಿ ಆಯಾಯ ಡಿವಿಜನ್‌ನಲ್ಲಿಯೇ ಈ ಕೆಲಸ ಮಾಡಿಸಿ ತಕ್ಷಣ ವಿದ್ಯಾರ್ಥಿಗಳಿಗೆ ಸ್ಕಾಲರ್‌ಷಿಪ್ ಸಿಕ್ಕುವುದಕ್ಕೆ ಅವಕಾಶ ಮಾಡಿ ಕೊಡುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಈಗ ಇನ್ನೊಂದು ಹೊಸ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಆದ್ದರಿಂದ ಮುಂದಿನ ವರ್ಷ ಈ ಸ್ಕಾಲರ್‌ಷಿಪ್ ಕೊಡುವುದರಲ್ಲಿ ಯಾವ ತರಹದ ವಿಳಂಬವೂ ಆಗುವುದಿಲ್ಲ.

Sri N. C. HALAPPA.—On account of lack of interest on the part of the Officers, the Scholarships are not properly distributed. May I know the number of Scholarship applications recived on an average and the amount of Scholarship distributed every year?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—೧೯೭೭ನೇ ಇಸವಿಯಲ್ಲಿ ೧೨,೨೮೩ ಅಪ್ಲಿಕೇಷನ್‌ಗಳು ಬಂದಿದ್ದವು. ಆ ಬಗ್ಗೆ ೬೨,೯೮,೭೮೭ ರೂಪಾಯಿಗಳನ್ನು ಸ್ಕಾಲರ್‌ಷಿಪ್ಪಿಗಾಗಿ ಕೊಟ್ಟಿದೆ. ಈ ವರ್ಷ ಒಂದು ಕೋಟಿ ರೂಪಾಯಿಗಳಿಗಿಂತ ಜಾಸ್ತಿ ಸ್ಕಾಲರ್‌ಷಿಪ್ಪಿಗಳಿಗಾಗಿ ಕೊಡಬೇಕಾಗುತ್ತದೆ.

ಶ್ರೀ ಪಿ. ಪಿ. ಹೆಗರೆ.—ಡೆಪ್ಯುಟಿ ಡೈರೆಕ್ಟರು ಸ್ಕಾಲರ್‌ಷಿಪ್ ಕೊಡುವುದಕ್ಕೆ ಸಂಬಂಧಪಟ್ಟ ಕೆಲಸವನ್ನು ಮಾಡುತ್ತಾರೆ. ಎಸ್. ಎಸ್. ಎಲ್. ಸಿ. ಪಾಸಾದ ವಿದ್ಯಾರ್ಥಿಗಳಿಗೆ ಸರ್ಕಾರದಿಂದ ದೊರೆಯುವಂತಹ ಸೌಲಭ್ಯ ಸರಿಯಾಗಿ ಮುಟ್ಟುತ್ತಾ ಇಲ್ಲ. ಮತ್ತು ತಾಲ್ಲೂಕು ಬೋರ್ಡಿನವರು ಮತ್ತು ಪಂಚಾಯತಿಯವರು ತಮ್ಮ ಬಡ್ಜೆಟ್ಟಿನಲ್ಲಿ ೧೮ ಪರ್ಸೆಂಟ್ ಹಣವನ್ನು ಸರಿಯಾಗಿ ಖರ್ಚು ಮಾಡುತ್ತಿಲ್ಲ. ಆದ್ದರಿಂದ ಈ ವಿಷಯವನ್ನು ಡೆಪ್ಯುಟಿ ಡೈರೆಕ್ಟರಿಗೆ ತಿಳಿಸಿ ಆ ಕೆಲಸವನ್ನು ಮಾಡಲೇಬೇಕು. ಮತ್ತು ತಾಲ್ಲೂಕು ಬೋರ್ಡು ಮತ್ತು ಪಂಚಾಯತಿಯವರು ತಮ್ಮ ಬಡ್ಜೆಟ್ಟಿನಲ್ಲಿ ಹರಿಜನ ಗಿರಿಜನರ ಅಭಿವೃದ್ಧಿಯ ಬಗ್ಗೆ ೧೮ ಪರ್ಸೆಂಟ್ ಖರ್ಚು ಮಾಡಲೇಬೇಕು ಎಂದು ಆದೇಶ ಕೊಡುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅದನ್ನು ಅಭಿವೃದ್ಧಿ ಇಲಾಖೆಯ ಅಧಿಕಾರಿಗಳು ಆಸ್ಥೆವಹಿಸಿ ತಾಲ್ಲೂಕು ಬೋರ್ಡು ಮತ್ತು ಪಂಚಾಯತಿಯ ಬಡ್ಜೆಟ್ಟಿನಲ್ಲಿ ೧೮ ಪರ್ಸೆಂಟ್ ಹಣವನ್ನು ಹರಿಜನ ಗಿರಿಜನರ ಅಭಿವೃದ್ಧಿಗೆ ಖರ್ಚು ಮಾಡಿಸುತ್ತಿದ್ದಾರೆ.

Sri MALLIKARJUNA KARGE.—May I know when the Government is going to re-organise the entire Department and if so within what period this work would be taken up and completed?

Sri M. MALLIKARJUNASWAMY.—I have already told the Hon. member that it is under the active consideration of the Government.

SLUMS SITUATED ON PRIVATE LANDS IN BANGALORE CITY

327. Sri T. R. SHAMANNA (Fort).— Will the Minister for Municipal Administration be pleased to state :—

(a) the Number of slums existing in private lands in Bangalore City;

(b) whether th re is any proposal to acquire those lands for slum clearance and improvement as in the case of slums in the lands of Government, Corporation and City Improvement Trust Board;

(c) whether the Government intend to acquire and improve congested slums in Divisions No. 26 and 27 (Baba huts in Mysore Road and huts in Kalasipalyam)?

Sri B. BASAVALINGAPPA (Minister for Municipal Administration).—

(a) 73-List placed on the Table of th House*

(b) Yes-in 12 places.

(c) Yes.

ಶ್ರೀ ಟಿ. ಆರ್. ಶಾಮಣ್ಣ:— ಮಾನ್ಯ ಪೌರಾಡಳಿತ ಸಚಿವರು ಬೆಂಗಳೂರು ನಗರದಲ್ಲಿರತಕ್ಕ ಕೊಳಚೆ ಪ್ರದೇಶಗಳನ್ನು ಉತ್ತಮಪಡಿಸಬೇಕು ಎನ್ನುವ ಬಗ್ಗೆ ಆಸಕ್ತಿಯನ್ನು ವಹಿಸಿದ್ದಾರೆ. ಆದ್ದರಿಂದ ಬೆಂಗಳೂರು ನಗರದಲ್ಲಿರತಕ್ಕ ೭೩ ಖಾಸಗಿ ಜಮೀನಿನಲ್ಲಿರತಕ್ಕ ಸ್ಲಮ್‌ಗಳನ್ನು ತೆಗೆಯದಿದ್ದರೆ ಅವರ ಕಾರ್ಯ ಯಶಸ್ವಿಯಾಗುವುದಿಲ್ಲ. ಆದಕಾರಣ ಈ ಖಾಸಗೀ ಜಮೀನಿನಲ್ಲಿರತಕ್ಕ ಸ್ಲಮ್‌ಗಳನ್ನು ತೆಗೆಯಲು ಬೇಗ ಕ್ರಮ ತೆಗೆದುಕೊಳ್ಳುವುದಕ್ಕೆ ಮಾನ್ಯ ಮಂತ್ರಿಗಳು ಆಶ್ವಾಸನೆ ಕೊಡುತ್ತೀರಾ?

ಶ್ರೀ ಬಿ. ಬಸವಲಿಂಗಪ್ಪ:— ಮಾನ್ಯ ಸದಸ್ಯರು ಹೇಳತಕ್ಕಂಥಾ ವಿಚಾರವನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಆ ಬಗ್ಗೆ ನನಗೆ ಆಸಕ್ತಿ ಇದೆ. ಆದರೆ ನಮ್ಮಲ್ಲಿ ಅಸ್ತ್ರ ಇರಲಿಲ್ಲ. ಈಗ ಮೊನ್ನೆತಾನೆ ಈ ಸಭೆಯಲ್ಲಿ ಸ್ಲಮ್‌ಕ್ಲಿಯರೆನ್ಸ್ ಬಿಲ್ ಪಾಸು ಮಾಡಿದ್ದು ಆಗಿದೆ. ಈ ಬಿಲ್ಲನ್ನು ಮೇಲ್ಮನೆಯಲ್ಲಿ ಪಾಸು ಮಾಡಿಕೊಂಡು ಆದಷ್ಟು ಜಾಗ್ರತೆ ಅದನೆಲ್ಲಾ ತೆಗೆದುಕೊಳ್ಳುತ್ತೇವೆ.

ಶ್ರೀ ಟಿ. ಆರ್. ಶಾಮಣ್ಣ.— ಬೆಂಗಳೂರು ನಗರದಲ್ಲಿ ಹೊಸ ಸ್ಲಮ್ ಆಗದ ಹಾಗೆ ಸರಕಾರದವರು ಎಚ್ಚರಿಕೆ ತೆಗೆದುಕೊಳ್ಳುವುದಕ್ಕೆ ತಕ್ಕ ಗಮನಕೊಡುತ್ತೀರಾ?

---

*Copy placed in the Mysore Legislature Library *vide* No. 22 / dated 28-9-73.

ಶ್ರೀ ಬಿ. ಬಸವಲಿಂಗಪ್ಪ.— ಹೊಸದಾಗಿ ಯಾರೇ ಕಾರ್ಪೋರೇಷನ್ ಏರಿಯಾಕ್ಕೆ ಬಂದು ಆ ರೀತಿ ಸ್ಲಮ್ ಕ್ರಿಯೇಟ್ ಮಾಡುವುದಕ್ಕೆ ಬಂದರೆ ನಿರ್ಧಾಕ್ಷಿಣ್ಯವಾಗಿ ಕಾರ್ಪೋರೇಷನ್ನಿನವರು ಬಿಡುತ್ತಿಲ್ಲ. ಮೊನ್ನೆ ಬಾಗಲೂರು ಲೇ ಔಟನಲ್ಲಿ ಬೇರೆ ಪ್ರದೇಶದ ಜನ ಬಂದು ಗುಡಿಸಲು ಕಟ್ಟುವುದಕ್ಕೆ ಪ್ರಯತ್ನ ಮಾಡಿದರು ಆಗ ಯಾವ ದಾಕ್ಷಿಣ್ಯವೂ ಇಲ್ಲದೆ ಕಾರ್ಪೋರೇಷನ್ನಿನವರು ಅವರನ್ನು ಹೊರಗೆಹಾಕಿದಾರೆ. ಹೊಸದಾಗಿ ಮನೆ ಕಟ್ಟಿಸಲು ಪ್ರಯತ್ನಿಸಲಾಗುವುದನ್ನು ಬುಲ್ಡೋಜರ್ ಬಿಟ್ಟು ಅಡವಿಸಲಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.— ೨೨ನೇ ಡಿವಿಜನ್‌ನಲ್ಲಿ ೬ ಸ್ಲಮ್ ಏರಿಯಾಗಳು ಅನೇಕ ವರ್ಷಗಳಿಂದ ಇವೆ. ಇದನ್ನು ನಾನು ಸರ್ಕಾರದ ಗಮನಕ್ಕೆ ತಂದಿದ್ದೇನೆ. ಅದನ್ನು ಏತಕ್ಕೋಸ್ಕರ ಸ್ಲಮ್ ಡೆವಲಪ್‌ಮೆಂಟ್ ಸ್ಕೀಮಿನಲ್ಲಿ ಸೇರಿಸಲಿಲ್ಲ? ಈಗಲಾದರೂ ಅದನ್ನು ಸೇರಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಬಿ. ಬಸವಲಿಂಗಪ್ಪ.— ಕಾರ್ಪೋರೇಷನ್ ಮತ್ತು ಸರ್ಕಾರದ ಜಮೀನಿನಲ್ಲಿ ಕೊಳಚೆ ಪ್ರದೇಶಗಳ ನಿರ್ಮಾಣ ಆದರೆ ಇಂಪ್ರೂವಮೆಂಟ್ ಸ್ಕೀಮು ಜಾರಿಗೆ ಬರುತ್ತೇವೆ. ಬೇರೆ ಖಾಸಗಿ ಪ್ರದೇಶದಲ್ಲಿರತಕ್ಕ ಕೊಳಚೆ ಪ್ರದೇಶಗಳು ಏನಿವೆ ಅವುಗಳ ಬಗ್ಗೆ ಸ್ಲಮ್ ಕ್ಲಿಯರೆನ್ಸ್ ಆಕ್ಟ್ ಆದಮೇಲೆ ಕ್ರಮತೆಗೆದುಕೊಳ್ಳುತ್ತೇವೆ.

NON-STOP M.S.R.T.C. BUSES BETWEEN BANGALORE AND DAVANAGERE

372. Smt. NAGAMMA C. KESHAVA MURTHY (Davanagere). Will the Minister for Labour be pleased to state :—

(a) the number of buses running daily between Bangalore and Davanagere;

(b) out of them, the number of Non-stop services;

(c) whether the M.S.R.T.C. intend starting Non-stop services between Bangalore and Davangere;

(d) if so, when?

Sri AZEEZ SAIT (Minister for Labour)·—

(a) 14 buses each way.

(b) Nil.

(c) No.

(d) Does not arise.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ಸ್ವಾಮಿ ನನ್ನ ಪ್ರಶ್ನೆಗೆ ಉತ್ತರವಾಗಿ ಬೆಂಗಳೂರು ಹಾಗೂ ದಾವಣಗೆರೆ ನಡುವೆ 11 ಬಸ್ಸುಗಳು ಓಡುತ್ತಿವೆ ಎಂದು ಹೇಳಿದ್ದೀರಿ, ಈ ಬಸ್ಸುಗಳಲ್ಲಿ ಎಕ್ಸ್‌ಪ್ರೆಸ್ ಎಷ್ಟು, ಲಗ್ಜುರಿ ಬಸ್ಸುಗಳು ಎಷ್ಟು, ಮತ್ತು ಇತರ ಬಸ್ಸುಗಳು ಎಷ್ಟು ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಅಜೀಜ್ ಸೇಟ್.—ಆ ವಿವರ ಈಗ ನನ್ನ ಹತ್ತಿರ ಇಲ್ಲ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ—ಆನ್ ಕಂಟ್ರಾಕ್ಟ್ ಬಸ್ಸುಗಳು ನಾನ್ ಸ್ಟಾಪ್ ಬಸ್ಸುಗಳು ಬೆಂಗಳೂರಿನಿಂದ ದಾವಣಗೆರೆಗೆ ಎಷ್ಟು ಬಸ್ಸುಗಳು ಓಡುತ್ತಿವೆ ಎಂಬುದನ್ನು ಹೇಳುತ್ತೀರಾ ?

12–30 P. M.

Sri AZEEZ SAIT.—Bangalore–Harihar two trips a day; Bangalore-Davanagere-3 trips a day; Bangal re Hubli 2 trips; Bangalore Dharwar 1 trip; Bangalore-Gadag-one trip; Bangalore Hospet 2 trips; Bangalore Belgaum 1 trip; Bangalore Bijap r 1 trip; Bangalore Panjim one trip; all buses will be passing through Davanagere.

ಶ್ರೀಮತಿ ದಮಯಂತಿ ಬೋರೇಗೌಡ—ಒಂದು ಕಂಟ್ರಾಕ್ಟ್ ಬಸ್ಸನ್ನು ಓಡಿಸಲು ಪರ್ಮಿಟ್ ತೆಗೆದುಕೊಂಡು 3–4 ಬಸ್‌ಗಳನ್ನು ಖಾಸಗಿಯವರು ಓಡಿಸುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ? ಮತ್ತು ಪ್ರತಿ ಬಸ್‌ಸ್ಟಾಂಡ್‌ಗಳಲ್ಲಿ ಪ್ರಯಾಣಿಕರನ್ನು ಪಿಕಪ್ ಮಾಡಿಕೊಂಡು ಹೋಗುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಅಜೀಜ್ ಸೇಟ್.—ಎಂ.ಎಸ್ ಆರ್.ಟಿ.ಸಿ. ಬಸ್‌ಗಳ ವಿಚಾರ ಇಲ್ಲಿ ಇರುವುದು. ಕಾಂಟ್ರಾಕ್ಟ್ ಬಸ್‌ಗಳ ವಿಚಾರ ಈಗ ನಮ್ಮ ಮುಂದೆ ಇಲ್ಲ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ಈಗ ಆನ್–ಕಂಟ್ರಾಕ್ಟ್ ಬಸ್‌ಗಳು ಬೆಂಗಳೂರಿನಿಂದ ದಾವಣಗೆರೆಗೆ ಪ್ರತಿದಿವಸ ಎಷ್ಟು ಓಡಾಡುತ್ತಿವೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಅಜೀಜ್ ಸೇಟ್.—I have made it clear a number of times. ಆನ್–ಕಾಂಟ್ರಾಕ್ಟ್ ಬಸ್‌ಗಳು ಏನಿವೆ ಇವಕ್ಕೆ ದಿಕ್ಕು ಇಲ್ಲ, ದಿವಾಳಿ ಇಲ್ಲ, ಟೈಮಿಂಗ್ಸ್ ಇಲ್ಲ; ಯಾವ ಯಾವ ಬಸ್‌ಗಳು ಎಲ್ಲೆಲ್ಲಿಗೆ ಹೋಗಿ ಬರುತ್ತಿವೆ ಎಂಬುದಕ್ಕೆ ಲೆಕ್ಕವೇ ಇಲ್ಲ. ತಮ್ಮ ಮನಸ್ಸಿಗೆ ಬಂದ ಕಡೆಗಳಲ್ಲಿ ಈ ಬಸ್‌ಗಳನ್ನು ಓಡಿಸುತ್ತಿದ್ದಾರೆ.

If I had the power, I would have curbed them. This House has already passed the Motor Vehicles Bill and I am awaiting the approval of the House for that Bill. The moment I get the approval, I shall deal with them.

ಶ್ರೀ ಎಸ್. ಬಂಗಾರಪ್ಪ.—ಈ ಸರ್ಕಾರದಲ್ಲಿ ದಿಕ್ಕಿಲ್ಲದೆ, ದಿವಾಳಿ ಇಲ್ಲದೆ ಬಸ್‌ಗಳನ್ನು ಓಡಿಸುವುದಕ್ಕೆ ಅನುಮತಿ ಕೊಟ್ಟಿದ್ದಾರೆಂದು ಅರ್ಥವಾಯಿತು.

Sri AZEEZ SAIT. ನಾನು ಹೇಳಿದ್ದು ಹಾಗೆ ಅಲ್ಲ. That is not a corrent remark.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ಆನ್ ಕಂಟ್ರಾಕ್ಟ್ ಬಸ್‌ಗಳು ಬೆಂಗಳೂರಿನಿಂದ ದಾವಣಗೆರೆ ಭರ್ತಿಯಾಗಿ ಬರುತ್ತಿರುವುದು, ಸರ್ಕಾರದ ಲಕ್ಷುರಿ ಬಸ್‌ಗಳು ಖಾಲಿಯಾಗಿ ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಇದಕ್ಕೆ ಮುಖ್ಯ ಕಾರಣವೇನಂದರೆ, ಆನ್-ಕಂಟ್ರಾಕ್ಟ್ ಬಸ್‌ಗಳು ಕೇವಲ ನಾಲ್ಕು ಅಥವಾ ನಾಲ್ಕೂವರೆ ಗಂಟೆಗಳಲ್ಲಿ ಮಧ್ಯೆ ಎಲ್ಲಿಯೂ ನಿಲ್ಲಿಸದೆ ಬೆಂಗಳೂರಿನಿಂದ ದಾವಣಗೆರೆಗೆ ಬಂದು ಸೇರುತ್ತವೆ. ಆದೇ ಸರ್ಕಾರಿ ಬಸ್‌ಗಳು ಹೆಚ್ಚಿನ ಸಮಯ ತೆಗೆದುಕೊಳ್ಳುತ್ತವೆ ಈ ದೃಷ್ಟಿಯಿಂದಲಾದರೂ ಸಹ ಸರ್ಕಾರದವರು ಬೆಂಗಳೂರಿನಿಂದ ದಾವಣಗೆರೆಗೆ ಎರಡು ನಾನ್-ಸ್ಟಾಪ್ ಬಸ್‌ಗಳನ್ನು ಓಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

Sri AZEEZ SAIT.—That is the crux of the issue. The Hon. member wants a bus from Davanagere to Bangalore. I may inform the hon. member that I have already put a bus from Harihar to Bangalore. It is generally noticed that only 7–8 passengers are picked up at Harihar and more number of passengers get into the bus at Davanagere. The point that the lady member urging is that I should start a non-stop bus from Davanagere to Bangalore. A bus requires 6-10 hours to cover the distance between Davanagere and Bangalore. According to the Labour Welfare Act, I must make a halt for half hour at some place. I have already published a scheme for taking away the Bangalore–Chitradurga pockt. If we nationalise the Chitradurga Sector, there will be no difficulty for us to consider putting up of a bus from Davanagere to Bangalore.

ಶ್ರೀ ಎಸ್. ಬಂಗಾರಪ್ಪ.—ಮಧ್ಯೆ ಎಲ್ಲಿಯೂ ನಿಲ್ಲಿಸದೆ ೬ ಗಂಟೆಗಳವರೆಗೆ ಬಸ್ಸನ್ನು ಓಡಿಸುವುದಕ್ಕೆ ವೆಲ್‌ಫೇರ್ ಆಕ್ಟ್ ಪ್ರಕಾರ ಸಾಧ್ಯವಿಲ್ಲವೆಂದು ಮಾನ್ಯ ಸಚಿವರು ಹೇಳಿದರು ಆದೇ ಖಾಸಗಿಯವರು ೬ ಗಂಟೆಗಳು ಮಾತ್ರವಲ್ಲ, ಹತ್ತು ಗಂಟೆಗಳವರೆಗಾದರೂ ಸಹ ಮಧ್ಯೆ ನಿಲ್ಲಿಸದೆ ಓಡಿಸುವುದಕ್ಕೆ ತಯಾರಾಗಿರುವಾಗ ಸರ್ಕಾರಿ ಬಸ್‌ಗಳನ್ನು ಸಹ ಏತಕ್ಕೆ ಓಡಿಸಬಾರದು ? ಅದಕ್ಕೆ ಕಾನೂನು ಅಡ್ಡಿ ಬಂದರೆ ಅದನ್ನು ಬದಲಾವಣೆ ಮಾಡಿಯಾದರೂ ಸಹ ಓಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ?

Sri AZEEZ SAIT.—I am very sorry that the hon. member who is having a progressive outlook, wants to curtail the welfare measures of the bus workers. Since I am holding the portfolio of Labour also, I cannot curtail the privileges of the workers. Therefore the non-stop bus must have an half hour halt at some point.

ಶ್ರೀ ಎಸ್. ಎಸ್. ಗುರುಸಿದ್ದಪ್ಪ — ಈಗ ಪರ್ಮಿಟ್ ಇಲ್ಲದೆ ಓಡಿಸುತ್ತಿರುವ ಬಸ್ ಮಾಲೀಕರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಬದಲು, ಅದನ್ನು ಓಡಿಸುವುದಕ್ಕೆ ಅವಕಾಶ ಕೊಡುತ್ತಿರುವ ಪೋಲೀಸರ ಮೇಲೆ ಏತಕ್ಕೆ ಸರ್ಕಾರದವರು ಕ್ರಮ ತೆಗೆದು ಕೊಳ್ಳಬಾರದೆಂದು ನಾನು ಕೇಳುತ್ತೇನೆ?

Sri AZEEZ SAIT.— Probably the hon. member was not present in the House when I said that we have been so effective and active that only last year we have callected Rs. 13,00,000 fine. In order to curb their activities, I had introduced a Bill in this House and the same is awaiting the seal of the Upper House. The moment that House passes the Bill, I shall have powers even to cancel the permits and see that they do not pick up midway passengers.

BENEFIT EXTENDED TO TEACHERS AND CLERICAL STAFF WHO HAVE COMPLETED GRADUATION

382 Sri A. SHARANAPPA (Deodurg).— Will the Minister for Education be pleased to state:—

(a) Whether the teachers of Government primary school are permitted to complete the graduation on external basis;

(b) If so, whether there is any benfit to those who have completed graduation as external candidates;

(c) Whether it is a fact that the teachers are getting Rs. 12 extra benifit after the completion of graduation?

(d) Whether the Government has recieved any representation by the teachers about the non-payment of extra Rs. 12 for teaching staff; except clerical staff;

(e) If so, the reasons for discrimination shown as between the teaching and clerical staff in payment of extra amount of Rs. 12;

(f) Whether the Government intends to consider payment of extra benifit of Rs. 12 to all the teaching staff without making discrimination between the teaching and the clerical staff?

Sri A. R. BADARINARAYANA (Minister for Education).—

(a) Yes.

(b) Yes. 25 percent of the vacancies of Graduate Assistants-Grade II, is earmarked.

(c) No.

(d) Yes.

(e) No, in as much as trained teachers are in grade Rs. 100-220 while clerks and typists are in grade Rs. 90-200.

(f) No such proposal subsists for consideration.

ಶ್ರೀ ಎ. ಶರಣಪ್ಪ.— ''ಇ' ಪ್ರಶ್ನೆಗೆ ಉತ್ತರವಾಗಿ ನಿಜವಲ್ಲ ಎಂದು ಹೇಳಿದ್ದೀರಿ. ಒಂದೇ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಉಪಾಧ್ಯಾಯರಿಗೂ ಮತ್ತು ಗುಮಾಸ್ತರಿಗೂ ಈ ರೀತಿ ತಾರತಮ್ಯ ಮಾಡುತ್ತಿರುವುದಕ್ಕೆ ಕಾರಣವೇನು ?

†ಶ್ರೀ ಎ. ಆರ್. ಬದರೀನಾರಾಯಣ್.— ತಾರತಮ್ಯ ಏತಕ್ಕೆ ಎಂದರೆ, ಗುಮಾಸ್ತರು ಮತ್ತು ಬೆರಳಚ್ಚುಗಾರ ಸಂಬಳ ೯೦–೨೦೦ ರೂಪಾಯಿಗಳು ಇದ್ದರೆ, ಉಪಾಧ್ಯಾಯರ ಸಂಬಳ ೧೦೦–೨೨೦ ರೂಪಾಯಿಗಳು ಇದೆ. ಅದಕ್ಕೋಸ್ಕರ ವ್ಯತ್ಯಾಸವಿದೆ.

ಶ್ರೀ ಎ. ಶರಣಪ್ಪ.— ಗುಮಾಸ್ತರ ಕೆಲಸ ಮಾಡುವವರಿಗೆ ಈ ೧೨ ರೂಪಾಯಿಗಳ ಪ್ರಯೋಜನ ದೊರೆತಂತೆ ಟೀಚರ್ ಆಗಿ ಕೆಲಸ ಮಾಡುವವರಿಗೆ ಸಹ ಅದೇ ಪ್ರಯೋಜನವನ್ನು ಏತಕ್ಕೆ ದೊರಕಿಸಿ ಕೊಡಬಾರದು ?

ಶ್ರೀ ಎ. ಆರ್. ಬದರೀನಾರಾಯಣ್.— ಟೀಚರ್‌ಗಳಿಗೆ ಜಾಸ್ತಿ ಸಂಬಳ ಬರುತ್ತದೆ. ಗ್ರೇಡ್ ಜಾಸ್ತಿ ಇದೆ. ಆದರೆ ಗುಮಾಸ್ತರ ಗ್ರೇಡ್ ಕಡಿಮೆ ಇದೆ. ಆದ್ದರಿಂದ ವ್ಯತ್ಯಾಸ ಮಾಡಬೇಕಾಗುತ್ತದೆ.

ಶ್ರೀ ಎಂ. ಬಿ. ರಾಮಸ್ವಾಮಿ.— ಟೀಚರ್ ಆಗಿ ಮತ್ತು ಗುಮಾಸ್ತರಾಗಿ ಕೆಲಸ ಮಾಡುವಾಗ ಪದವೀ ಶಿಕ್ಷಣವನ್ನು ಪೂರೈಸಿದರೆ ಎರಡು ಮೂರು ಇಂಕ್ರಿಮೆಂಟ್ ಕೊಡಬೇಕೆಂದು ಸರ್ಕಾರದ ನಿಯಮವಿದೆ. ಆದರೆ ಟೀಚರ್ಸ್‌ಗೆ ಆ ಪ್ರಯೋಜನ

ದೊರಕುತ್ತಿಲ್ಲವೆಂದು ಇಲ್ಲಿ ಹೇಳಿದ್ದೀರಿ. ಇವರಿಗೂ ಸಹ ಆ ಒಂದು ಪ್ರಯೋಜನ ದೊರಕುವಂತೆ ಅವಕಾಶ ಮಾಡಿಕೊಡುತ್ತೀರಾ ?

ಶ್ರೀ ಎ ಆರ್. ಬದರೀನಾರಾಯಣ್ — ಅದನ್ನು ಎರಡು ಮೂರು ಸಲ ಪರಿಶೀಲನೆ ಮಾಡಿ ಕೊನೆಗೆ ಕೊಡಲು ಸಾಧ್ಯವಿಲ್ಲ ಎಂದು ತೀರ್ಮಾನವಾಗಿದೆ.

ಶ್ರೀ ಎ. ಶರಣಪ್ಪ.— ಒಬ್ಬ ಟೀಚರ್ ಕ್ಲಾರ್ಕ್ ಆಗಿ ಕೆಲಸ ಮಾಡುತ್ತಿರುವುದರಿಂದ ಈ ಪ್ರಯೋಜನ ದೊರಕಿದೆ. ಅದೇ ಬೇರೆ ಒಬ್ಬ ಟೀಚರ್ ಆಗಿಯೇ ಕೆಲಸ ಮಾಡುತ್ತಿರುವುದರಿಂದ ಈ ಪ್ರಯೋಜನ ದೊರಕಿಲ್ಲ. ಈ ರೀತಿ ವ್ಯತ್ಯಾಸ ಮಾಡಲು ಕಾರಣವೇನು ?

ಶ್ರೀ ಎ. ಆರ್. ಬದರೀನಾರಾಯಣ್.— ಟೀಚರ್ ಆದವರು ಕ್ಲಾರ್ಕ್ ಆಗಿ ಕೆಲಸ ಮಾಡಲು ಎಲ್ಲಿ ಸಾಧ್ಯವಿದೆ. ತಾವು ಹೇಳುತ್ತಿರುವುದು ಇಂಟರ್ನಲ್ ಅಡ್ಜಸ್ಟ್‌ಮೆಂಟ್ ಇರಬಹುದೆಂದು ಕಾಣುತ್ತದೆ.

M. S. R. T. C. GUEST HOUSE AT TUMKUR

(38) Sri K. ABDUL SUBHAN (Tumkur).— Will the Minister for Labour be pleased to state.—

(a) whether there is any proposal before Government for constructing a M. S. R. T. C., Guest House at Tumkur;

(b) if so, when;

(c) the place and the amount allotted for constitution of the M. S. R. T. C. Guest House ?

Sri AZEEZ SAIT (Minister for Labour).— (a) No.

(b) and (c) Does not arise in view of the reply to clause (a).

Sri K. ABDUL SUBHAN.— The Government has given a negative answer to my question. I may bring to the notice of the hon. Minister that most of the night services and Luxury services pass through Tumkur during mid-night or in the early hours of the mornings. In the absence of facilities to the passengers, and to the buses, the object of nationalisation would be defeated. In view of this, will the Governmet going to reconsider my request and see that a Guest House facility is provided to the passengers?

†Sri AZEEZ SAIT.— The Hon. member seems to be very anxious to have a Guest House. So far as breakages are concerned, there is a depot which will take care of the buses. However I may inform the hon. member that after acquiring the land, I shall consider about the bus-stand, guest house and all that. I am just looking after a land- a suitable land. After that is acquired, we will take care of other facilities.

Sri K. ABDUL SUBHAN.— Will it be finalised at least within 2 or 3 months?

Sri AZEEZ SAIT.— I cannot categorically say that now.

ALLOTMENT OF SITES TO M. L. As. M. L. Cs. AND MINISTERS BY C. I. T. B.

272. Sri K. SRIRAMULU (Gandhinagar).— Will the Minister for Municipal Administration be pleased to state.—

(a) whether the sites have been allotted to the Members of Legislative Assembly, Legislative Council and Ministers through the City Improvement Trust Board, Bangalore from 24-3-1972 to end of 31-7-1973;

(b) if so the names and addresses of the Members who have obtainel the sites together with their measurement and cost;

(c) whether the corner sites have been allotted in the said allotment;

(d) if so, the number of corner sites allotted and the communities to which the allotees belong to

Sri B. BASAVALINGAPPA (Minister for Municipal Administration).—

(a) Yes.

(b) Statement placed on the Table of the House.*

(c) No.

(d) No.

---

*Copy placed in the Mysore Legislature Library *Vide* No. 21/Dated 28-9-73

ಶ್ರೀ ಕೆ. ಶ್ರೀರಾಮುಲು.—ಸಭೆಯ ಮುಂದೆ ಇಟ್ಟಿರತಕ್ಕ ತಃಖ್ತೆಯಲ್ಲಿನ ಕೊನೇ ಪುಟದಲ್ಲಿ ಸೈಟ್ ನಂಬರ್ ಒಂದು ಮತ್ತು ನಾಲ್ಕು ಎರಡೂ ಒಂದೇ ಅಳತೆಯದಾಗಿದ್ದರೂ ಮೊದಲನೆಯ ಸೈಟಿಗೆ ೩೬ ಸಾವಿರ ರೂಪಾಯಿ ಮತ್ತು ಇನ್ನೊಂದಕ್ಕೆ ೪೫ ಸಾವಿರ ರೂಪಾಯಿ ಬೆಲೆ ತೆಗೆದುಕೊಂಡಿದ್ದಾರೆ. ಇದಕ್ಕೆ ಕಾರಣವೇನು ಎಂದು ಹೇಳುತ್ತಾರೆಯೇ ?

†ಶ್ರೀ ಬಿ. ಬಸವಲಿಂಗಪ್ಪ—ಅದರಲ್ಲಿ ಸ್ವಲ್ಪ ತಪ್ಪು ಆಗಿದೆ. ಮೊದಲನೆಯದು ತಪ್ಪು. ನಾಲ್ಕನೆಯ ಸೈಟಿಗೆ ಕೊಟ್ಟಿರುವುದು ಸರಿಯಾದ ಫಿಗರ್ಸ್ ಒಂದನೆಯ ಸೈಟಿಗೂ ಅಷ್ಟೇ ಹಣವನ್ನು ಪಾವತಿ ಮಾಡಿದ್ದಾರೆ.

ಶ್ರೀ ಕೆ. ಶ್ರೀರಾಮುಲು.—ಪಟ್ಟಿಯಲ್ಲಿ ಮಂತ್ರಿಗಳು, ಶಾಸಕರು, ಎಲ್ಲ ಪಕ್ಷದವರೂ ಇದ್ದಾರೆ. ಹೊಸಕೋಟೆ ಜಮೀನ್ದಾರರಿಗೆ ಕೂಡ ಒಂದು ಸೈಟ್ ಕೊಟ್ಟಿದ್ದಾರೆ. ಪಟ್ಟಣದಲ್ಲಿರತಕ್ಕ ಗುಡಿಸಲು ವಾಸಿಗಳಿಗೆ ಸೈಟುಗಳನ್ನು ಒದಗಿಸಬೇಕು ಎಂದು ಹೇಳುವಾಗ ಮುಕ್ಕಾಲು ಎಕರೆಯಷ್ಟು ಇರುವಂಥ ಸೈಟುಗಳನ್ನು ಹಂಚುವ ವ್ಯವಸ್ಥೆ ಮಾಡಿದರೆ ಬಡವರಿಗೆ ಸೈಟುಗಳನ್ನು ಹಂಚುವುದಕ್ಕೆ ಸಾಧ್ಯವೇ ?

ಶ್ರೀ ಬಿ. ಬಸವಲಿಂಗಪ್ಪ—ರಾಜಮಹಲ್ ಬಡಾವಣೆಯಲ್ಲಿ ಹಿಂದಿನ ಮಂತ್ರಿಮಂಡಲವಿದ್ದಾಗ ಸೈಟುಗಳನ್ನು ಕೊಡಲಾಗಿತ್ತು. ಯಾರಿಗೆ ಸೈಟುಗಳನ್ನು ಕೊಡಲಾಗತ್ತು ಆ ಸಂಬಂಧದಲ್ಲಿ ಹೈಕೋರ್ಟಿಗೆ ರಿಟ್ ಹೋಗಿದ್ದು, ನಂತರ 'ಸುಪ್ರೀಂ ಕೋರ್ಟಿಗೆ ಹೋಗಿದ್ದು ಅಲ್ಲಿ ತೀರ್ಮಾನವಾಗಿ ಪುನಃ ಬಂತು. ಅಲ್ಲಿಂದ ಒಂದ ಮೇಲೆ ಯಾರು ಯಾರು ಆ ಕಾಲಕ್ಕೆ ಅರ್ಜಿಗಳನ್ನು ಕೊಟ್ಟಿದ್ದರು ಮತ್ತು ಯಾರು ಯಾರಿಗೆ ಆ ಕಾಲದಲ್ಲಿ ಸೈಟುಗಳನ್ನು ಕೊಡಲಾಗಿತ್ತು ಅದನ್ನೆಲ್ಲ ಪರಿಶೀಲನೆ ಮಾಡಿ ಈಗ ಸೈಟುಗಳನ್ನು ಕೊಡಲಾಗಿದೆ. ಬೇರೆ ಊರಿನವರಿಗೆ ಸೈಟುಗಳನ್ನು ಕೊಡಬೇಕೇ ಬೇಡವೇ ಎನ್ನತಕ್ಕ ಬಗ್ಗೆ ಹೇಳುವುದಾದರೆ ಯಾರು ಬೆಂಗಳೂರು ನಗರದಲ್ಲಿ ಇರಲಿಕ್ಕೆ ಇಷ್ಟಪಡುತ್ತಾರೆ, ಆ ರೀತಿಯಾಗಿ ಒಂದು ಡಿಕ್ಲರೇಷನ್ ಯಾರು ಕೊಡುತ್ತಾರೆ ಅಂಥವರಿಗೆ ಸೈಟುಗಳನ್ನು ಕೊಡಬಹುದು ಎಂದು ನಿಯಮಾವಳಿಯಲ್ಲಿ ಅಳವಡಿಸಿದ್ದೇವೆ. ಆ ರೀತಿಯಾಗಿ ಕೊಟ್ಟಿದ್ದೇವೆ. ದೊಡ್ಡ ಸೈಟುಗಳನ್ನು ಮಾಡುವುದಕ್ಕೆ ಬದಲಾಗಿ ಸಣ್ಣ ಸೈಟುಗಳನ್ನು ಮಾಡಿ ಎಲ್ಲರಿಗೂ ಕೊಡಬೇಕಾಗಿತ್ತು ಎನ್ನುವ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೇಳಿದ್ದಾರೆ. ಅದು ಒಳ್ಳೆಯ ಪ್ರಶ್ನೆ. ನಾವು ದೊಡ್ಡ ಸೈಟುಗಳನ್ನೂ ಮಾಡುತ್ತೇವೆ, ಸಣ್ಣ ಸೈಟುಗಳನ್ನೂ ಮಾಡುತ್ತೇವೆ. ಸಣ್ಣ ಸೈಟುಗಳನ್ನು ಬಡವರಿಗೆ ಹಂಚುವ ವ್ಯವಸ್ಥೆ ಮಾಡಿ ಅದನ್ನು ಅರ್ಧ ಬೆಲೆಗೆ ಕೊಡಬೇಕೆಂದು ಮಾಡಿದ್ದೇವೆ. ಆ ರೀತಿಯಾಗಿ ಒಂಭತ್ತೂವರೆ ಸಾವಿರ ಸೈಟುಗಳನ್ನು ಹಂಚಿದ್ದೇವೆ. ದೊಡ್ಡ ಸೈಟುಗಳನ್ನು ಮಾಡಿ ಜಾಸ್ತಿ ಹಣವನ್ನು ಅಂತಹ ಸೈಟು ತೆಗೆದುಕೊಳ್ಳುವವರಿಂದ ವಸೂಲು ಮಾಡಿ ಬಡವರಿಗೆ ಸಬ್ಸಿಡೈಸ್ ಮಾಡತಕ್ಕ ವ್ಯವಸ್ಥೆಯನ್ನು ನಿಯಮಾವಳಿಯಲ್ಲಿ ಅಳವಡಿಸಿಕೊಂಡಿದ್ದೇವೆ. ಆದುದರಿಂದ ದೊಡ್ಡದು ಸಣ್ಣದು ಎನ್ನುವ ವ್ಯತ್ಯಾಸವಿರಲೇ ಬೇಕಾಗುತ್ತದೆ. ಯಾರು ಸ್ಥಿತಿವಂತರಾಗಿರುತ್ತಾರೆ

ಅವರು ಒಳ್ಳೆಯ ಮನೆಗಳನ್ನು ಕಟ್ಟಿ ಕತ್ತಲಲ್ಲಿ ಇಟ್ಟುಕೊಂಡಿರತಕ್ಕ ಹಣ ಬೆಳಕಿಗೆ ಬರುವದಕ್ಕೆ ಇದೂ ಒಂದು ದಾರಿ ಎನ್ನುವದು ಸರ್ಕಾರದ ಉದ್ದೇಶವಿದೆ. ಅಂಥವರ ಪರ್ಸೆಂಟೇಜ ಎಷ್ಟಾಗುತ್ತದೆ ಎಂದು ನೋಡಿದರೆ ಮೂರು ನಾಲ್ಕು ಪರ್ಸೆಂಟ್ ಇರ ಬಹುದು. ಐದು ಪರ್ಸೆಂಟಿಗಿಂತ ಹೆಚ್ಚು ಇರುವದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಹೊರಗಿನವರಿಗೆ ಕೂಡ ಸೈಟುಗಳನ್ನು ಕೊಡ ಬಹುದು ಎಂದು ನಿಯಮಾವಳಿಯಲ್ಲಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಇಲ್ಲಿ ಕೊಟ್ಟಿರುವ ಹೆಸರುಗಳನ್ನು ನೋಡಿದರೆ ಅವರೆಲ್ಲ ಬೆಂಗಳೂರು ನಗರದಲ್ಲಿ ಖಾಯಂ ಆಗಿ ಇರುವಂಥ ಜನರಲ್ಲ. ಇವರಿಗೆಲ್ಲ ಸೈಟುಗಳನ್ನು ಯಾವ ಆಧಾರದ ಮೇಲೆ ಕೊಟ್ಟಿರುತ್ತಾರೆ ಎನ್ನುವದನ್ನು ಹೇಳುತ್ತಾರೆಯೇ?

ಶ್ರೀ ಬಿ. ಬಸವಲಿಂಗಪ್ಪ.—ಸೈಟುಗಳನ್ನು ಕೊಡುವ ವಿಷಯದಲ್ಲಿ ನಾನಾಗಲೇ ಸ್ಪಷ್ಟೀಕರಣ ಮಾಡಿದ್ದೇನೆ. ಯಾರು ಯಾರು ಬೆಂಗಳೂರು ನಗರದಲ್ಲಿರುತ್ತೇವೆಂದು ತಮ್ಮ ಇಚ್ಛೆಯನ್ನು ವ್ಯಕ್ತಪಡಿಸಿರುತ್ತಾರೆ ಅಂಥವರಿಗೆ ಕೊಡಬಹುದು ಎಂದು ನಿಯಮಾವಳಿಯಲ್ಲಿ ಅಳವಡಿಸಲಾಗಿದೆ. ಆ ರೀತಿಯಾಗಿ ಕೊಡಲಾಗಿದೆ. ಮಾನ್ಯ ಸದಸ್ಯರಾದ ಪುಟ್ಟಸ್ವಾಮಯ್ಯನವರಿಗೂ ಒಂದು ಸೈಟನ್ನು ಕೊಡಲಾಗಿದೆ. ಅವರು ರಾಮನಗರದವರು. ಅವರು ತಮ್ಮ ಮುಪ್ಪಿನ ಕಾಲದಲ್ಲಿ ಇಲ್ಲಿ ಬಂದು ಇರುವದಕ್ಕೆ ಇಷ್ಟಪಡುತ್ತೇನೆಂದು ಹೇಳುತ್ತಾರೆ. ಆ ರೀತಿಯಾಗಿ ಇಚ್ಛೆಯನ್ನು ವ್ಯಕ್ತಪಡಿಸಿದ್ದರೆ ಕೊಡಬಹುದು ಎಂದು ಇರುವುದರಿಂದ ಕೊಟ್ಟಿದೆ.

ಶ್ರೀ ಎಂ. ಎಸ್. ಕೃಷ್ಣನ್.— ಬೇರೆ ಕಡೆ ಸೈಟು, ಮನೆ ಇದ್ದರೂ ಬೆಂಗ ಳೂರಿನಲ್ಲಿ ಸೈಟುಗಳನ್ನು ಕೊಡಬಹುದು ಎಂದು ಇದೆಯೋ? ಇದನ್ನು ದಯವಿಟ್ಟು ಎಗ್ಜಾಮಿನ್ ಮಾಡುತ್ತಾರೆಯೇ?

ಶ್ರೀ ಬಿ. ಬಸವಲಿಂಗಪ್ಪ.— ಬೆಂಗಳೂರು ನಗರದಲ್ಲಿ ಬೇರೆ ನಿವೇಶನ ಅಥವಾ ಮನೆ ಇರಬಾರದು ಎಂದು ನಿಯಮಾವಳಿಯಲ್ಲಿ ಇದೆ ಅದಕ್ಕೆ ಒಂದು ಅಫಿಡವಿಟ್ ತೆಗೆದುಕೊಳ್ಳುತ್ತಾರೆ ಮತ್ತು ಅದರ ಆಧಾರದ ಮೇಲೆ ಸೈಟುಗಳನ್ನು ಹಂಚಿಕೆ ಮಾಡುತ್ತಾರೆ.

ಶ್ರೀ ಎಚ್. ಎಸ್. ಸಿದ್ದಪ್ಪ.— ನಾವು ಎಷ್ಟು ಅರಣ್ಯರೋದನ ಮಾಡಿದರೂ ಸೈಟುಗಳನ್ನು ಈ ರೀತಿಯಾಗಿ ಕೊಡುವುದನ್ನು ನಿಲ್ಲಿಸುವುದಿಲ್ಲ. ಮಾನ್ಯ ಸದಸ್ಯರಾದ ಶ್ರೀ ರಾಮುಲು ಅವರು ಹೇಳಿದ ಹಾಗೆ ಮುಕ್ಕಾಲು ಎಕರೆ ಸೈಟುಗಳನ್ನು ಕೊಡುತ್ತಾರಲ್ಲ, ಅವರಿಗೆ ಹರಿಶ್ಚಂದ್ರ ಘಾಟನಲ್ಲಿ ಅವಕಾಶ ಕೊಡದಹಾಗೆ ಎಲ್ಲ ಅವರ ಸೈಟಿನಲ್ಲಿಯೇ ಮಾಡುವುದಕ್ಕೆ ಅವಕಾಶವನ್ನು ಕೊಟ್ಟರೆ ಬಡವರಿಗೆ ಇಲ್ಲಿ ಅವಕಾಶವಾಗುತ್ತದೆ. ಹಾಗೆ ಮಾಡುತ್ತಾರೆಯೇ?

(ಉತ್ತರವಿಲ್ಲ)

ಶ್ರೀ ಕೆ. ಶ್ರೀರಾಮುಲು.— ಅನೇಕ ಕಡೆ ಮಾನ್ಯ ಮಂತ್ರಿಗಳಿಗೆ ಗೊತ್ತಿರು

ವಂತೆ ಸ್ಪ್ರೇ ಸೈಟ್ಸ್ ಹಂಚಿದ್ದಾರೆ. ಸ್ಪ್ರೇ ಸೈಟ್ಸ್ ಎಂದರೆ ಸಾಮಾನ್ಯವಾಗಿ ೨೦ ಅಡಿ ಅಗಲಕ್ಕೆ ಒಳಪಟ್ಟಿರತಕ್ಕವು ಎಂದು ರೂಲ್ಸನಲ್ಲಿ ಅಳವಡಿಸಲಾಗಿದೆ. ಆದರೆ ೫೦ ಅಡಿ ಅಗಲ ಲ೦ ಅಡಿ ಉದ್ದ ಇರುವಂಥ ಸೈಟುಗಳನ್ನೆಲ್ಲ ಸ್ಪ್ರೇ ಸೈಟುಗಳೆಂದು ಕರೆದಿದ್ದಾರೆ. ಇದು ಸರಿಯೇ ?

ಶ್ರೀ ಬಿ. ಬಸವಲಿಂಗಪ್ಪ — ಸ್ಪ್ರೇ ಸೈಟ್ಸ್ ಎಂದರೆ ಮಾನ್ಯ ಸದಸ್ಯರು ಹೇಳಿದಂತೆ ಅಲ್ಲ. ಅದನ್ನು ನಿಯಮಾವಳಿಯಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. ಸೈಟು ಎಷ್ಟಾದರೂ ಇರಬಹುದು ಸೈಟುಗಳ ಹಂಚಿಕೆಯನ್ನು ನೋಟಿಫೈ ಮಾಡುತ್ತೇವೆ. ನೋಟಿಫೈ ಮಾಡಿದ ಮೇಲೆ ಸೈಟುಗಳನ್ನು ಹಂಚಿದ ಮೇಲೆ ಅಕಸ್ಮಾತ್ ಉಳಿದಿದ್ದರೆ, ಯಾವುದಾದರೂ ಸರೆಂಡರ್ ಆಗಿದ್ದರೆ, ಅಥವಾ ಸೈಟನ್ನು ಕೊಟ್ಟಿರುವವರಿಗೆ ಬೇರೆ ಕಡೆ ಸೈಟು ಅಥವಾ ಮನೆ ಇದ್ದರೆ ಅಂಥವು ಉಳಿಯುತ್ತವೆ. ಅವುಗಳನ್ನು ಸ್ಪ್ರೇ ಸೈಟ್ಸ್ ಎಂದು ಹೇಳಿದ್ದೇವೆ. ಅದರ ಪ್ರಕಾರ ಸೈಟಿನ ಅಳತೆ ಎಷ್ಟು ಬೇಕಾದರೂ ಇರಬಹುದು.

ಎಚ್. ಟಿ. ಕೃಷ್ಣಪ್ಪ — ಎಷ್ಟು ಜನ ಶಾಸಕರಿಗೆ ಇಲ್ಲಿಯವರೆಗೆ ತಾವು ಸೈಟುಗಳನ್ನು ಕೊಟ್ಟಿದ್ದೀರಿ ?

ಶ್ರೀ ಬಿ. ಬಸವಲಿಂಗಪ್ಪ.— ಇದರ ಪಟ್ಟಿ ತಯಾರಿಸಿದ್ದೇನೆ ಅದನ್ನು ಸಭೆಯ ಮುಂದೆ ಇಡುತ್ತೇನೆ. ತಾವು ಎಲ್ಲವನ್ನೂ ವಿವರವಾಗಿ ಅದರಲ್ಲಿ ಪರಿಶೀಲಿಸಬಹುದು.

SRI J P. SARWESH.— May I know the names of the M. L. As and M. L. Cs. who have been allotted site by the Board and those who have sold those sites ?

ಶ್ರೀ ಬಿ. ಬಸವಲಿಂಗಪ್ಪ.— ತಾವು ಬೇರೆ ಪ್ರಶ್ನೆ ಕೇಳಿದರೆ ಅದರ ಬಗ್ಗೆ ಎಲ್ಲ ವಿವರಗಳನ್ನೂ ಆಗ ಕೊಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ — ತಾವು ಇಲ್ಲಿ ಕೊಟ್ಟಿರುವ ಸೈಟುಗಳ ಪಟ್ಟಿಯಲ್ಲಿ ಒಬ್ಬೊಬ್ಬರಿಗೆ ಒಂದೊಂದು ರೀತಿಯಾಗಿ ಬೆಲೆಯನ್ನು ನಿಗದಿ ಮಾಡಿದ್ದೀರಿ. ಈ ರೀತಿಯಾದ ವ್ಯತ್ಯಾಸ ಬೆಲೆಯಲ್ಲಿ ಏಕೆ ಇರುತ್ತದೆ ?

ಶ್ರೀ ಬಿ. ಬಸವಲಿಂಗಪ್ಪ.— ಇದು ಒಂದೇ ರೀತಿಯಾದ ಅಳತೆಯಲ್ಲಿರುವುದಿಲ್ಲ ಮತ್ತು ಇದರ ನಿಯಮಾವಳಿಗಳಿರುತ್ತವೆ. ಅವರಂತೆ ನಿಗದಿ ಮಾಡಿ ಕೊಡಲಾಗುತ್ತದೆ.

ಶ್ರೀ ಟಿ. ಆರ್. ಶಾಮಣ್ಣ — ಸಿವಿಕ್ ಅಮೆನಿಟೀಸ್‌ಗಳು ಇಲ್ಲದೆ ಇರುವ ಕಡೆ ಖಾಸಗಿಯವರು ಸೈಟುಗಳನ್ನು ಮಾಡಿ ಮಾರುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ? ಇದನ್ನು ತಡೆಗಟ್ಟಲು ತಕ್ಕ ಕ್ರಮ ತೆಗೆದುಕೊಳ್ಳುತ್ತಾರೆಯೇ ?

ಶ್ರೀ ಬಿ. ಬಸವಲಿಂಗಪ್ಪ — ಇದು ಸರಕಾರದ ಗಮನಕ್ಕೆ ಬಂದಿದೆ. ಸಿವಿಕ್ ಅಮೆನಿಟೀಸ್‌ಗಳಿಲ್ಲದೆ ಇರುವ ಏರಿಯಾದಲ್ಲಿ ಸೈಟುಗಳನ್ನು ಮಾರಿರುವುದೂ ಗೊತ್ತಿದೆ ಇದನ್ನು ಮಾಡಕೂಡದು ಎಂದು ಮತ್ತು ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತಿದೆ,

ಇನ್ನು ಮುಂದೆ ಇಂತಹ ಯಾವ ಸೈಟುಗಳನ್ನೂ ಕೊಡಕೂಡದು ಎಂದು ನಾವು ಸ್ಟೇ ಆರ್ಡರು ಕೂಡ ಕೊಟ್ಟಿದ್ದೇವೆ, ಇಂತಹ ಸೈಟುಗಳನ್ನು ಸಾರ್ವಜನಿಕರು ಯಾರೂ ತೆಗೆದುಕೊಳ್ಳಬಾರದು ಎಂದು ಆದೇಶವನ್ನೂ ಕೊಡಲಾಗಿದೆ.

ಶ್ರೀ ಕೆ. ಶ್ರೀರಾಮುಲು — ಸ್ಪೇ ಸೈಟುಗಳ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಇಲ್ಲಿ ಹೇಳಿರುವ ಉತ್ತರವನ್ನು ನಾನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ೬೪ರಲ್ಲಿ ಆಗಿರುವ ಸೈಟು ಅಲಾಟುಮೆಂಟು ರೂಲ್ಸು ಪ್ರಕಾರ ಮಾಡಿದ್ದರೆ ಅದಕ್ಕೆ ನನ್ನ ಅಡ್ಡಿ ಇಲ್ಲ. ಆದರೆ ಈ ರೂಲ್ಸುಗಳಿಗೇನಾದರೂ ತಿದ್ದುಪಡಿಗಳಾಗಿದ್ದರೆ ಆಗ ಒಪ್ಪಬಹುದು. ಅದಕ್ಕಾಗಿ ಇದರ ಬಗ್ಗೆ ಪೂರ್ಣವಾಗಿ ಚರ್ಚೆ ಮಾಡಲು ತಾವು ಇಲ್ಲಿ ಅರ್ಧ ಗಂಟೆ ಕಾಲ ಚರ್ಚೆಗೆ ಅವಕಾಶ ಮಾಡಿಕೊಡುತ್ತೀರಾ ? ಇದಕ್ಕೆ ಕಾರಣ ಇಂದು ಭಾರಿ, ಭಾರಿ ಸೈಟುಗಳನ್ನು ಯಾರ ಯಾರದೋ ಹೆಸರಿನಲ್ಲಿ ಹಂಚುತ್ತಾರೆಂಬ ಶಂಕೆ ಬಂದಿದೆ. ಇದು ರೂಲ್ಸ್ ಪ್ರಕಾರ ಇದ್ದರೆ ಅದಕ್ಕೆ ನನ್ನ ಅಡ್ಡಿ ಇಲ್ಲ, ಇದಕ್ಕಾಗಿ ನಾನು ಇಲ್ಲಿ ತಮ್ಮನ್ನು ಕೇಳುತ್ತಿರುವುದು.

ಶ್ರೀ ಬಿ. ಬಸವಲಿಂಗಪ್ಪ.— ಮಾನ್ಯ ಸದಸ್ಯರ ಅಭಿಪ್ರಾಯ ತಪ್ಪು. ಹಿಂದೆ ಇದ್ದ ರೂಲ್ಸುಗಳನ್ನು ಬದಲಾಯಿಸಿ ಈಚೆಗೆ ನಿಯಮಾವಳಿಗಳನ್ನು ಮಾಡಲಾಗಿದೆ. ಆದುದರಿಂದ ತಾವು ಇಲ್ಲಿ ಹೇಳತಕ್ಕದ್ದು ಸರಿಯಲ್ಲ.

NON-AVAILABILITY OF FERTILIZERS

333. Sri H. G. Channappa (Magadi).— Will the Minister for Agriculture and Forests be pleased to state:—

(a) whether it is not the policy of the Government to grow more food crops in the State;

(b) whether it is not the policy of the Government to supply manures to the cultivators of all areas of the State in accordance with the above policy;

(c) if so, the reasons for non-availability of fertilizers in many parts of the State;

(d) whether it has come to notice of the Government that any quantity of manure is available at higher rates with the private manure dealers; if so, the reasons for the same;

(e) whether Government intend to issue an order and remove the control imposed on the distribution of feitilzers and to see that it is made available in the Societies and

the Licensed Dealers at a uniform rate fixed by Government;

(f) whether it has come to the notice of the Government that this manure is given by the Societies only to those who have taken loans from the Bank and not for others;

(g) if so, whether it is the intention of the Government that every person desiring to obtain the manure should necessarily be a borrower from the Banks ?

Sri K. H. PATIL (Minister for Agriculture and Forests)—

(a) Yes.

(b) Yes.

(c) As there is a general shortage of fertilizers in our country and all over the world it has become difficult to import the necessary quantity of the same. It has not been possible to supply the necessary quantity of fertilizers as the Government of India is supplying the same according to a fixed programme.

(d) No.

(e) No.

(f) No.

(g) Does not arise.

ಶ್ರೀ ಸಿ. ಬೈರೇಗೌಡ.— ಉತ್ತರದಲ್ಲಿ (ಈ) ಭಾಗಕ್ಕೆ ಇಲ್ಲ ಎಂದು ಇದೆ. ನಾನೇ ಸರಕಾರಕ್ಕೆ ನೇರವಾಗಿ ಇದರ ಬಗ್ಗೆ ಸರಕಾರದ ಗಮನವನ್ನು ಸೆಳೆದು ತಕ್ಕ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಲಾಗಿತ್ತು. ಆದರ ಬಗ್ಗೆ ಏನು ಕ್ರಮ ತೆಗೆದು ಕೊಂಡಿದ್ದೀರಿ ಎನ್ನುವುದನ್ನು ತಿಳಿಸುತ್ತೀರಾ?

ಶ್ರೀ ಕೆ. ಎಚ್. ಪಾಟೀಲ.— ಸರಕಾರದ ಗಮನಕ್ಕೆ ನಿರ್ದಿಷ್ಟವಾಗಿ ಇಂತಹ ಕಡೆ ಲೋಪಗಳಿವೆ ಎಂದು ತಿಳಿಸಿದರೆ ಅಂತಹವರ ಬಗ್ಗೆ ತೀವ್ರವಾದ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ. ಗೊಬ್ಬರ ಮಾರುವುದನ್ನು ಅವರಿಂದ ನಿಷೇಧಿಸುತ್ತೇವೆ ಮತ್ತು ಅವರ ಲೈಸನ್ಸ್ ಕೂಡ ತೆಗೆಯುತ್ತೇವೆ.

ಶ್ರೀ ಸಿ. ಬೈರೇಗೌಡ.— ನಾನು ಇದೇ ಸಭೆಯಲ್ಲಿ ಸಚಿವರ ಗಮನಕ್ಕೆ ತಂದಿದ್ದೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಾಯಿತು ?

ಶ್ರೀ ಕೆ. ಎಚ್. ಪಾಟೀಲ.— ತಾವೇನು ವಿಚಾರ ನನ್ನ ಗಮನಕ್ಕೆ ತಂದಿದ್ದಿರಿ ಅದರಬಗ್ಗೆ ಡಿ. ಸಿ. ಕಡೆಗೆ ಆದೇಶ ಕಳುಹಿಸಿ ಅವರ ಅಕೌಂಟುಗಳನ್ನು ಚೆಕ್ ಮಾಡಲು

ತಕ್ಕ ಅಧಿಕಾರಿಗಳನ್ನು ಕಳುಹಿಸಲಾಗಿತ್ತು ಮತ್ತು ಎಲ್ಲೆಲ್ಲಿ ಬ್ಲಾಕು ಮಾರ್ಕೆಟ್ಟು ರೇಟಿನಲ್ಲಿ ಮಾರುತ್ತಾರೆಂದು ತಿಳಿದು ಬರುತ್ತದೋ ಅವರ ಮೇಲೆ ಸ್ಟ್ರಿಕ್ಟ್ ಸೂಪರ್‌ವಿಷನ್ ಇಡಬೇಕೆಂದೂ ಅಲ್ಲಿನ ಡೆಪ್ಯುಟಿ ಡೈರೆಕ್ಟರ್‌ರವರಿಗೆ ಆರ್ಡರು ಕಳುಹಿಸಲಾಗಿದೆ.

ಶ್ರೀ ಎನ್. ಎಸ್. ಗುರುಸಿದ್ದಪ್ಪ.— ಗೊಬ್ಬರವನ್ನು ಹಂಚುವಾಗ ಗ್ರಾಮಸೇವಕರುಗಳ ಮೂಲಕ ಹಂಚಬೇಕು, ಅವರು ಎಲ್ಲ ಸರ್ವೆ ನಂಬರು ಇತ್ಯಾದಿಗಳನ್ನು ಕೊಡಬೇಕೆಂದು ಹೇಳುತ್ತಾರೆ ಆದರೆ ಗ್ರಾಮಸೇವಕರಿಗಿಂತ ವಿಲೇಜು ಅಕೌಂಟೆಂಟರುಗಳಿಗೆ ಸರ್ವೆ ನಂಬರು ಇತ್ಯಾದಿ ವಿವರಗಳು ಸಿಗುತ್ತವೆ ಅಲ್ಲವೇ? ಇದಕ್ಕಾಗಿ ಗೊಬ್ಬರದ ಹಂಚಿಕೆ ಮಾಡುವಾಗ ವಿಲೇಜು ಅಕೌಂಟರುಗಳ ಮೂಲಕ ಮಾಡುವುದು ಸರಿಯಲ್ಲವೇ?

ಶ್ರೀ ಕೆ. ಎಚ್. ಪಾಟೀಲ.— ಗ್ರಾಮಸೇವಕರು ಆಯಾ ಹಳ್ಳಿಗಳಲ್ಲಿರುವ ಜನರ ಬಳಿ ಕಲೆತು ಅವರಿಗೆ ಎಷ್ಟು ಬೀಜಗಳು ಬೇಕು, ಎಲ್ಲಿಗೆ ಬೇಕು ಇತ್ಯಾದಿ ವಿವರಗಳನ್ನು ತಿಳಿದಂತಹವರು ಇರಬೇಕು. ಅಂತಹ ವ್ಯವಹಾರ ತಿಳಿಯದೇ ಇದ್ದರೆ ಅವರು ಗ್ರಾಮಸೇವಕರಾಗಿ ಇರಲು ಸಾಧ್ಯವಿಲ್ಲ. ಯಾರಾದರೂ ಗ್ರಾಮಸೇವಕರು ಹಳ್ಳಿಯ ರೈತರ ಬಗ್ಗೆ ಸರಿಯಾಗಿ ವ್ಯವಹಾರ ಮಾಡುತ್ತಿಲ್ಲ ಎಂದರೆ ಅದು ಸರಿಯಲ್ಲ. ಅಂತಹವರ ಬಗ್ಗೆ ಸರಕಾರಕ್ಕೆ ತಿಳಿಸಿದರೆ ಅವರ ಮೇಲೆ ತಕ್ಕ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.— ರೈತರಿಗೆ ಗೊಬ್ಬರ ವಿತರಣೆ ಈಗ ಸರಿಯಾಗಿ ಆಗುತ್ತಿಲ್ಲ. ಗ್ರಾಮಸೇವಕರ ಮೂಲಕ ಇಲ್ಲವೆ ಎಕ್ಸ್‌ಟೆನ್‌ಷನ್ ಆಫೀಸರುಗಳ ಮೂಲಕ ಗೊಬ್ಬರ ಹಂಚುವುದು ಯಾವ ರೀತಿ ಆಗಿದೆ ಎಂದರೆ ಪಟ್ಟಣಗಳಲ್ಲಿರುವ ಅಧಿಕಾರಿಗಳು ಖಾಸಗಿಯವರ ಜೊತೆ ಕಲಿತುಕೊಂಡು ಪರ್ಮಿಟ್ಟುಗಳನ್ನು ಪಡೆದು ಬೇರೆಯವರಿಗೆ ಮಾರುತ್ತಿದ್ದಾರೆ. ಇದರಿಂದಾಗಿ ರಾಮನಗರದ ಪರ್ಮಿಟ್ಟು ಚೆನ್ನಪಟ್ಟಣಕ್ಕೆ ಹೋಗುತ್ತದೆ. ಚನ್ನಪಟ್ಟಣದ್ದು ಕನಕಪುರಕ್ಕೆ ಹೋಗುತ್ತೆ. ಇಂತಹ ಅವ್ಯವಸ್ಥೆಗಳನ್ನು ಸರಿಪಡಿಸಲಾಗುವುದಿಲ್ಲವೇ.

ಶ್ರೀ ಕೆ. ಎಚ್. ಪಾಟೀಲ.— ಮಾನ್ಯ ಸದಸ್ಯರು ಹೇಳುವಂತೆ ಕೆಲವು ಅಧಿಕಾರಿಗಳು ಪರ್ಮಿಟ್ಟುಗಳನ್ನು ಕೊಟ್ಟಿರುವ ಪ್ರಸಂಗಗಳು ನಮ್ಮ ಗಮನಕ್ಕೆ ಬಂದಿವೆ, ಆ ತರಹ ಮಾಡಬಾರದು. ಮಾನ್ಯ ಸದಸ್ಯರೂ ಇದರ ಬಗ್ಗೆ ಸಹಕಾರ ಕೊಟ್ಟು ಸರಕಾರಕ್ಕೆ ತಿಳಿಸಿದರೆ ಇದನ್ನು ಸರಿಪಡಿಸಬಹುದು.

ಶ್ರೀ ಕೆ. ಎಚ್. ಹನುಮೇಗೌಡ.— ಖಾಸಗಿ ವರ್ತಕರು ಗೊಬ್ಬರವನ್ನು ಬ್ಲಾಕ್ ಮಾರ್ಕೆಟ್ಟಿನಲ್ಲಿ ಮಾರುವುದನ್ನು ತಪ್ಪಿಸಲು ಇನ್ನು ಮುಂದೆ ಸಹಕಾರ ಸಂಘಗಳ ಮೂಲಕವೇ ಪರ್ಮಿಟ್ಟುಗಳನ್ನು ಕೊಟ್ಟು ಗೊಬ್ಬರ ಹಂಚಬೇಕೆಂದು ವ್ಯವಸ್ಥೆ ಮಾಡಿರಲಿಲ್ಲವೇ? ಇದರಂತೆ ಈಗಲೂ ಮಾಡಲು ಸಾಧ್ಯವಿಲ್ಲವೇ

ಶ್ರೀ ಕೆ. ಹೆಚ್. ಪಾಟೀಲ.— ಗೊಬ್ಬರವನ್ನು ಹೆಚ್ಚು ಬೆಲೆಗೆ ಮಾರಾಟ ಮಾಡುವುದು ಸರಕಾರದ ಗಮನಕ್ಕೆ ಬಂದರೆ ಅವರ ಲೈಸನ್ಸ್‌ನ್ನು ಕೂಡಲೇ ರದ್ದು

ಮಾಡಲಾಗುತ್ತದೆ ಮತ್ತು ಮುಂದೆ ಅವರಿಗೆ ಹಂಚುವಿಕೆ ಹಕ್ಕನ್ನು ತೆಗೆಯಲಾಗುತ್ತದೆ. ಆದರೆ ಇದರಲ್ಲಿ ಕಾಂಪ್ಲೆಕ್ಸ್ ಗೊಬ್ಬರ ಎಂದು ಕಂಪನಿಯವರು ಬೇರೆ ಕೊಡುತ್ತಾರೆ. ಇದರ ಮೇಲೆ ಸರಕಾರಕ್ಕೆ ಯಾವ ಹತೋಟಿಯೂ ಇಲ್ಲ.

ಶ್ರೀ ಎಚ್. ಎಸ್. ಸಿದ್ದಪ್ಪ — ಹಾಸನದಲ್ಲಿ ಗೊಬ್ಬರವನ್ನು ಸಬ್ ಸಿಡೈಸ್ಡ ರೇಟನಲ್ಲಿ ಕೊಡಬೇಕೆಂದು ಆರ್ಡರು ಮಾಡಿದ್ದಾರೆ. ಆದರೆ ನಿಮ್ಮ ಇಲಾಖೆಯವರು ಅಲ್ಲಿ ಅರ್ಧ ಚಾರ್ಜಿನಲ್ಲಿ ಮಾರುತ್ತಿದ್ದಾರೆ. ಇವರ ಬಗ್ಗೆ ತಕ್ಕ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಕೆ. ಎಚ್. ಪಾಟೀಲ.— ನನ್ನ ಗಮನಕ್ಕೆ ತಂದಿಲ್ಲ. ಈಗ ಹೇಳಿರುವುದರಿಂದ ಇದನ್ನು ಪರಿಶೀಲಿಸಿ ತಕ್ಕ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ — ನನ್ನ ಪ್ರಶ್ನೆ ಕೆಲವು ಖಾಸಗಿಯವರು ಗೊಬ್ಬರ ಮಾರಾಟ ಮಾಡುವ ಸ್ಥಳದಲ್ಲಿ ಗೊಬ್ಬರವೇ ಇರುವುದಿಲ್ಲ. ಅವರು ಹಳ್ಳಿಗಳಲ್ಲಿ ಬೇರೆಯವರ ಹತ್ತಿರ ಗೊಬ್ಬರವನ್ನು ಮುಚ್ಚಿಟ್ಟು ಹಳ್ಳಿಗಳಲ್ಲೇ ರೈತರಿಗೆ ಹಂಚುತ್ತೇವೆಂದು ಹೇಳಿ ಹೆಚ್ಚು ಬೆಲೆಯಲ್ಲಿ ಮಾರುತ್ತಿದ್ದಾರೆ, ಇಂತಹ ಅವ್ಯವಹಾರಗಳನ್ನು ಯಾವ ರೀತಿ ಸರಕಾರ ತಡೆಗಟ್ಟುತ್ತದೆ.

ಶ್ರೀ ಕೆ ಎಚ್. ಪಾಟೀಲ.— ಕೆಲವು ಖದೀಮ ವರ್ತಕರು ಈ ರೀತಿ ಮಾಡುತ್ತಿರಬಹುದು. ಅಂತಹ ಕೇಸುಗಳನ್ನು ಸರಕಾರದ ಗಮನಕ್ಕೆ ತಂದರೆ ಕ್ರಮ ತೆಗೆದುಕೊಳ್ಳಬಹುದು. ತಾವು ಅಂತಹ ವಿಚಾರಗಳನ್ನು ಇಲ್ಲಿ ಹೇಳದೆ ಖಾಸಗಿಯಾಗಿ ನನಗೆ ತಿಳಿಸಿದ್ದರೆ ಅದರ ಬಗ್ಗೆ ತುರ್ತು ಕ್ರಮ ತೆಗೆದುಕೊಳ್ಳಬಹುದಾಗಿತ್ತು. ಆದರೆ ಈಗ ಇಲ್ಲಿ ತಾವು ನನ್ನ ಗಮನಕ್ಕೆ ತರುತ್ತಿರುವುದರಿಂದ ನಾನು ಅವರ ಬಗ್ಗೆ ಕ್ರಮ ತೆಗೆದುಕೊಳ್ಳುವ ವೇಳೆಗೆ ಅಲ್ಲಿ ಯಾವ ಗೊಬ್ಬರದ ಸ್ಟಾಕೂ ಇಲ್ಲದಂತೆ ಮಾಡುತ್ತಾರೆ. ಆದ್ದರಿಂದ ಇಂತಹ ವಿಚಾರಗಳು ತಮ್ಮ ಗಮನಕ್ಕೆ ಬಂದಾಗ ಅದನ್ನು ನನಗೆ ಖಾಸಗಿಯಾಗಿ ತಿಳಿಸಿದರೆ ಕೂಡಲೇ ಕ್ರಮ ತೆಗೆದುಕೊಳ್ಳಬಹುದು.

ಅಧ್ಯಕ್ಷರು : ಪ್ರಶ್ನೋತ್ತರ ವೇಳೆಯಾಯಿತು.

Questions for Answers on the Day (but not taken up)

ADMINISTRATIVE SET UP OF SOUTH KANARA IN FIELD OF EDUCATION

296. Smt. ADDY SALDANHA (Mangalore).—

Will the Minister for Education be pleased to state.—

(a) the Administrative set up of South Kanara in the field of Education ;

(b) whether Government proposes to review the present administrative set up of South Kanara District in the field of Education;*

(c) if so, whether Government intend to appoint a Joint Director of Education in South Kanara District to manage the administrative affairs in the Department?

Sri A. R. BADARINARAYANA. (Minister for Education)—

(a) It is as under.—

South Kanara district is headed by Dy. Director of Public Instruction (Sr. Scale Class I).

He is assisted by three Education Officers (Class I Junior Scale). The strength of Educational Officers has been determined at the rate of one Education Officer for every 50 high schools.

There is an academic wing attached to the District Office consisting of 5 subject Inspectors one for English, one for Kannada, one for Physical Sciences and Mathematics, one for Biological Sciences and one for Social Studies, to provide guidance to subject Teachers.

There are 9 Assistant Educational Officers (Gazetted Class II) who function as Administrative Heads of range offices at the Taluka level.

There is also one Superintendent of Physical Education (Class II Gazetted) attached to the district office for effective supervision of physical education activities in schools.

(b) No.

(c) Does not arise in view of reply to Clause (b).

LOCAL BODY HIGH SCHOOLS TAKEN OVER BY GOVERNMENT

469 SRI B. S. VEERABHADRAPPA (Kudligi).—

Will the Minister for Education be pleased to state:—

(a) when the Local Body High Schools were actually taken over by Government in the State;

(b) reasons for not finalising the process of taking over even after a lapse of so many years;

(c) the difficulty in finalising the take over of these schools;

(d) whether the Government has issued instructions to finalise this work; if so, when and what stage is this matter;

(e) whether the Government intends to finalise the take over before July 1973?

SRI A. R. BADARINARAYANA (Minister for Education).—

(a) 369 Local Body High Schools in the first list and 69 High Schools in the Second List, in respect of which the Local Bodies have agreed to hand them over to Government unconditionally and on consent basis, have been ordered to be taken over with effect from Ist April 1971 and 1st April 1973 respectively.

(b) and (c) Details of moveable and immoveable properties, assets and liabilities and forms of option given by staff have to be verified and finalised before the prescribed agreement bonds in respect of each school are got executed by the Local Body concerned. This process takes time.

(d) Yes on 11th July 1972. The agreements connected with the take over of the schools are being got scrutinised and executed by the Local Bodies, District by District.

(e) The take over of the schools will be finalised as early as practicable in view of reply furnished to clauses (b), (c) and (d).

1=00 P.M.

CALLING ATTENTION TO MATTER OF URGENT PUBLIC IMPORTANCE

(i) Re: Non filling up of posts of teachers in High-Schools of Hassan District.

Sri K. H. HANUME GOWDA (Hassan).—I beg to call the attention of the hon. Minister for Education to the non-

filling up of posts of teachers in High Schools of Hassan District.

Sri A. R. BADARINARAYANA (Minister for Education).—I wish to state as follows :

No posts of teachers in Government High Schools in Hassan District are vacant. There is, therefore, no question of the education of the students suffering in these High Schools.

There are 19 posts of Teachers vacant in Local Body High Schools taken over to Government control. Out of there, 11 posts are vacant for the reason that teachers have been deputed for B. Ed. training. All these posts could not be filled up on account of Economy Orders imposing ban on filling up vacancies issued by Government in view of the difficult financial position. The question of relaxing the ban in respect of vacancies in the cadre of High School Teachers is under consideration of Government.

ಶ್ರೀ ಕೆ. ಎಚ್. ಹನುಮೇಗೌಡ.— ತಾಲ್ಲೂಕ್ ಬೋರ್ಡ್ ಹೈಸ್ಕೂಲ್‌ಗಳಲ್ಲಿ ೧೧ ಪೋಸ್ಟ್ ಖಾಲಿ ಇದೆ ಎಂದು ತಿಳಿಸಿದ್ದಿರಿ. ಇದರಿಂದ ಹೈಸ್ಕೂಲ್ ಓದುವ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ತೊಂದರೆ ಆಗುವುದಿಲ್ಲವೇ ? ಅನೇಕ ಪ್ರೈವೇಟ್ ಹೈಸ್ಕೂಲ್‌ಗಳು ಹಾಸನದಲ್ಲಿ ಇವೆ. ಅವುಗಳಲ್ಲಿ ಬೇಕಾದಷ್ಟು ಪೋಸ್ಟ್‌ಗಳು ವೇಕೆಂಟ್ ಇವೆ. ಅವುಗಳನ್ನು ಫಿಲ್‌ಅಪ್ ಮಾಡುತ್ತಿಲ್ಲ. ಕಾರಣ ಅವರಿಗೆ ಪರ್ಮಿಷನ್ ಕೊಡುತ್ತಿಲ್ಲ. ಪ್ರೈವೇಟ್ ಹೈಸ್ಕೂಲ್‌ನಲ್ಲಿ ಓದುವ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ತೊಂದರೆಯಾಗುವುದಿಲ್ಲವೇ ? ಎಷ್ಟು ಪ್ರೈವೇಟ್ ಹೈಸ್ಕೂಲ್‌ಗಳಲ್ಲಿ ವೆಕೆನ್ಸಿ ಇದೆ ಎಂದು ತಿಳಿಸುತ್ತಿರಾ ?

ಶ್ರೀ ಎ. ಆರ್. ಬದರೀನಾರಾಯಣ.— ಪ್ರೈವೇಟ್ ಹೈಸ್ಕೂಲ್‌ಗಳ ವಿಚಾರ ನಮಗೆ ಗೊತ್ತಾಗುವುದಿಲ್ಲ. ಅಲ್ಲಿ ವೆಕೆನ್ಸಿ ಆಗಿರತಕ್ಕದ್ದಕ್ಕೆ ಫಿಗರ್ಸ್ ತರಿಸಬೇಕಾಗುತ್ತದೆ. ಅವರು ಅಪಾಯಿಂಟ್‌ಮೆಂಟ್ ಮಾಡಿಕೊಳ್ಳಬೇಕು.

ಶ್ರೀ ಕೆ. ಎಚ್. ಹನುಮೇಗೌಡ.— ಅಪಾಯಿಂಟ್ ಮಾಡಿಕೊಳ್ಳುವುದಕ್ಕೆ ಪರ್ಮಿಷನ್ ಕೊಡುವುದಿಲ್ಲ. ರೂಲ್ಸ್ ಕೋಟ್ ಮಾಡಿಕೊಳ್ಳಕೂಡದು ಎಂದು ಹೇಳುತ್ತೀರಿ. ವರ್ಷದಲ್ಲಿ ೬ ತಿಂಗಳು ಕಳೆದು ಹೋಯಿತು. ಇನ್ನು ೩-೪ ತಿಂಗಳುಗಳು ಉಳಿದಿದೆ ಸಾವಿರಾರು ಹುಡುಗರು ಹಾಳಾಗಿ ಹೋಗುತ್ತಿದ್ದಾರೆ.

ಶ್ರೀ ಎ. ಆರ್. ಬದರೀನಾರಾಯಣ.— ಮಾನ್ಯ ಸದಸ್ಯರು ಹೇಳುವಷ್ಟು ತೊಂದರೆಯಿಲ್ಲ. ಒಂದೊಂದು ಸ್ಕೂಲ್‌ನಲ್ಲಿ ಒಂದೊಂದು ವೆಕೆನ್ಸಿ ಇದೆ. ೧೯

ಸ್ಕೂಲ್‌ನಲ್ಲಿ ೧೯ ವೆಕೆನ್ಸಿ ಇರತಕ್ಕದ್ದು. ಬೇರೆ ಮಾಸ್ಟರ್ ಇದ್ದಾರೆ. ಕೆಲಸ ಮಾಡುತ್ತಾರೆ. ಎಕಾನಮಿ ಆರ್ಡರ್ಸ್ ಬಂದು ಬಿಟ್ಟಿತು ಎಂದು ಈ ಕಾರಣದಿಂದ ಅಪಾಯಿಂಟ್ ಮಾಡಬಾರದು ಎಂದು ತೀರ್ಮಾನ ತೆಗೆದುಕೊಂಡಿದೆ. ಎಕಾನಮಿ ಆರ್ಡರ್ಸ್ ಎಜುಕೇಷನಲ್ ಇನ್‌ಸ್ಟಿಟ್ಯೂಷನ್‌ಗಳಿಗೆ ಅನ್ವಯಿಸಬಾರದು ಎನ್ನುವ ನೀತಿ ಇದೆ.

ಶ್ರೀ ಕೆ. ಎಚ್. ಹನುಮೇಗೌಡ.— ಪರೀಕ್ಷೆ ೩-೪ ತಿಂಗಳು ಇದೆ. ಎಕಾನಮಿ ಮೆಜರ್ಸ್‌ನಿಂದ ಪೋಸ್ಟ್‌ಗಳನ್ನು ಫಿಲ್‌ಅಪ್ ಮಾಡದೇ ಇರುವುದರಿಂದ ವಿದ್ಯಾಭ್ಯಾಸಕ್ಕೆ ತೊಂದರೆಯಾಗುತ್ತಿದೆ. ಎಷ್ಟು ದಿವಸದೊಳಗಾಗಿ ಆರ್ಡರ್ ರಿಲ್ಯಾಕ್ಸ್ ಮಾಡಿ ಪೋಸ್ಟ್ ಫಿಲ್‌ಅಪ್ ಮಾಡುವುದಕ್ಕೆ ಡೈರೆಕ್ಷನ್ ಕೊಡುತ್ತೀರಿ?

ಶ್ರೀ ಎ ಆರ್. ಬದರೀನಾರಾಯಣ.— ಪ್ರಶ್ನೆ ಏನು ಎಂದರೆ ಉದಯಪುರ, ಸಕಲೇಶಪುರಗಳಲ್ಲಿ ಒಂದೊಂದು ಸ್ಕೂಲ್‌ಗಳಲ್ಲಿ ಮಾಸ್ಟರ್ ಕಡಿಮೆ ಇದ್ದಾರೆ. ಅವರನ್ನು ಬಿ.ಎಡ್‌ಗೆ ಕಳುಹಿಸಿರುವುದರಿಂದ ವೇಕೆನ್ಸಿ ಅರೈಜ್ ಆಗಿದೆ ವೇಕೆನ್ಸಿ ಫಿಲ್‌ಅಪ್ ಮಾಡಬಾರದು ಎಂದು ಎಕಾನಮಿ ಆರ್ಡರ್ಸ್ ಇದೆ. ಎಕಾನಮಿ ಆರ್ಡರ್ಸ್ ಎಜ್ಯುಕೇಷನಲ್ ಇನ್‌ಸ್ಟಿಟ್ಯೂಷನ್ಸ್‌ಗೆ ಇರುವುದನ್ನು ಲಿಫ್ಟ್ ಮಾಡಬೇಕೆಂದು ಸರ್ಕಾರ ಆಲೋಚನೆ ಮಾಡುತ್ತಿದೆ.

ಶ್ರೀ ಕೆ. ಎಚ್. ಹನುಮೇಗೌಡ.—ಎಷ್ಟು ದಿವಸದೊಳಗೆ ಮಾಡುತ್ತೀರೆಂಬುದನ್ನು ದಯಮಾಡಿ ತಿಳಿಸಿ. ತಾವು ಹೇಳಿರುವ ಫಿಗರ್ಸ್ ಕರೆಕ್ಟ್ ಆಗಿಲ್ಲ. ಹತ್ತಾರು ಪೋಸ್ಟ್ಸ್ ಖಾಲಿ ಇವೆ. ಮುಂದಿನಸಾರಿ ಬಂದಾಗ ನಿಮ್ಮ ಗಮನಕ್ಕೆ ತರುತ್ತೇನೆ. ಪ್ರೈವೇಟ್ ಹೈಸ್ಕೂಲ್‌ಗಳಲ್ಲಿ ಖಾಲಿ ಇದೆ. ತಾಲ್ಲೂಕ್ ಬೋರ್ಡ್ ಹೈಸ್ಕೂಲ್‌ಗಳಲ್ಲಿ ಖಾಲಿ ಇದೆ. ಹೀಗಾದರೆ ಮಕ್ಕಳ ಗತಿ ಏನು? ಕಲಿಯದೇ ಇದ್ದರೆ ಅವರಿಗೆ ಪ್ರಮೋಷನ್ ಕೊಡುತ್ತೀರಾ? ಇಲ್ಲಿ ಪರಿಶೀಲನೆ ಮಾಡುತ್ತೇನೆಂದು ಹೇಳಿಬಿಟ್ಟು ಸುಮ್ಮನೇ ಇದ್ದರೆ ತಮ್ಮ ಜವಾಬ್ದಾರಿ ಮುಗಿಯಲಿಲ್ಲ. ಎಷ್ಟು ದಿವಸದೊಳಗೆ ಮಾಡುತ್ತೀರಿ? ಇದಕ್ಕೆ ಸರಕಾರ ಹೊಣೆ ಆಗಬೇಕಾಗಿ ಬರುತ್ತದೆ.

ಶ್ರೀ ಎ. ಆರ್. ಬದರೀನಾರಾಯಣ.— ಮಾನ್ಯ ಸದಸ್ಯರು ಹೇಳಿರತಕ್ಕ ರೀತಿಯನ್ನು ನೋಡಿದರೆ ಯಾವ ಸ್ಕೂಲ್‌ನಲ್ಲಿಯೂ ಮಾಸ್ಟರ್ ಇಲ್ಲವೇ ಇಲ್ಲ ಎಂದು ಹೇಳುತ್ತಿದ್ದಾರೆ. ಮೈಸೂರು ರಾಜ್ಯದಲ್ಲಿ ಎರಡು ಸಾವಿರದ ಐದು ನೂರಾ ಐದು (೨೫೦೫) ಹೈಸ್ಕೂಲ್‌ಗಳು ಇವೆ. ಪ್ರತಿಯೊಂದು ಕಡೆಯೂ ನೋಡಬೇಕಾಗುತ್ತದೆ. I see the inportance of posting the teachers but we have also the responsibility to see that economy measures have also to be looked into.

ಶ್ರೀ ಕೆ. ಎಚ್. ಹನುಮೇಗೌಡ.— ನೀವೇ ಮಾಡಿರುವುದು ಇದನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲವೇ? ಎಷ್ಟು ದಿವಸದೊಳಗಾಗಿ ಆರ್ಡರ್ ಮಾಡುತ್ತೀರಿ ಎಂಬುದನ್ನು ಹೇಳಬೇಕು.

ಅಧ್ಯಕ್ಷರು. — ಆ ರೀತಿ ಮಂತ್ರಿಗಳನ್ನು ಒತ್ತಾಯಪಡಿಸುವುವಕ್ಕೆ ಆಗುವುದಿಲ್ಲ

(ii) Re : Restriction imposed on the Distribution of fertilizers in Mandya District.

Sri D. HALAGE GOWDA (Pandavapura).— I beg to call the attention of the Hon. Minister for Agriculture and Forests to the restriction imposed on the distribution of Chemical fertilizers and consequent hardships caused to the sugarcane growers in Mandya District.

Sri K.H.PATIL (Minister for Agriculture and Forests).– I wish to state as follows:

ಆಹಾರೋತ್ಪನ್ನ ಹೆಚ್ಚುಗಳಿಸುವ ಅವಶ್ಯಕತೆ ಮತ್ತು ರಾಸಾಯನಿಕ ಗೊಬ್ಬರದ ಕಡಿಮೆ ಸರಬರಾಜು ಇರುವ ದೃಷ್ಟಿಯಿಂದ, ಪ್ರಮುಖ ಆಹಾರ ಬೆಳೆಯ ಕಾಲದಲ್ಲಿ ಗೊಬ್ಬರ ವಿತರಣೆ ಮಾಡುವಾಗ ಆಹಾರ ಧಾನ್ಯದ ಬೆಳೆಗೆ ಆದ್ಯಗಮನ ಕೊಡುವಂತೆಯೂ, ಆಹಾರೋತ್ಪನ್ನವಲ್ಲದ ಬೆಳೆಗೆ ಮಿತಿ ಸಂಬಂಧಿಸುವಂತೆಯೂ, ಮೈಸೂರು ವಿಭಾಗದ ಸಹ ನಿರ್ದೇಶಕ ವ್ಯವಸಾಯ ಅಧಿಕಾರಿಯವರು ಮಂಡ್ಯ ಜಿಲ್ಲಾ ವ್ಯವಸಾಯ ಅಧಿಕಾರಿಯವರಿಗೆ ಆಜ್ಞಾಪಿಸಿದ್ದಾರೆ. ಆಹಾರೋತ್ಪನ್ನವಲ್ಲದ ಬೆಳೆಗೆ ಸಂಪೂರ್ಣವಾಗಿ ರಾಸಾಯನಿಕ ಗೊಬ್ಬರದ ವಿತರಣೆಯನ್ನು ನಿಲ್ಲಿಸಬೇಕೆಂಬ ಉದ್ದೇಶವಿರಲಿಲ್ಲ. ಈ ವಿಷಯವನ್ನು ಸರಕಾರದ ಗಮನಕ್ಕೆ ತಂದಾಗ, ಸರ್ಕಾರದಿಂದಲೇ ನಿಗದಿ ಮಾಡಲ್ಪಟ್ಟ ಆದ್ಯತೆಯನ್ನು ಗಮನದಲ್ಲಿಟ್ಟುಕೊಂಡು ಕಬ್ಬಿನ ಬೆಳೆ ಸಹಿತ ಎಲ್ಲಾ ಬೆಳೆಗಳಿಗೂ ಗೊಬ್ಬರ ವಿತರಣೆ ಮಾಡಬೇಕೆಂದು ಅವರಿಗೆ ಸಲಹೆ ಮಾಡಲಾಗಿದೆ.

ಇದನ್ನು ವ್ಯವಸಾಯ ನಿರ್ದೇಶಕರ ಗಮನಕ್ಕೆ ತಂದ ತಕ್ಷಣ, ಕಬ್ಬಿನ ಬೆಳೆಗೂ ಸಹ ಗೊಬ್ಬರ ಕೊಡುವುದನ್ನು ನಿಲ್ಲಿಸಬಾರದೆಂದೂ, ಮಂಡ್ಯ ಜಿಲ್ಲಾ ವ್ಯವಸಾಯ ಅಧಿಕಾರಿಗಳಿಗೆ ಆಜ್ಞಾಪಿಸಲಾಗಿದೆ. ರಬಿ ಕಾಲದಲ್ಲಿ ೮,೦೦೦ ಟನ್ ಸಸಾರಜನಕ ಗೊಬ್ಬರವನ್ನು ಮಂಡ್ಯ ಜಿಲ್ಲೆಗೆ ಸರಬರಾಜು ಮಾಡುವ ಕಾರ್ಯಕ್ರಮವಿದೆ.

ಶ್ರೀ. ಡಿ. ಹಲಗೇಗೌಡ — ಮಂಡ್ಯ ಜಿಲ್ಲೆಯಲ್ಲಿ ಸುಮಾರು ೮೦ ಸಾವಿರ ಎಕರೆ ಪ್ರದೇಶದಲ್ಲಿ ಕಬ್ಬು ೧ ಲಕ್ಷ ೩೦ ಸಾವಿರ ಎಕರೆ ಪ್ರದೇಶದಲ್ಲಿ ಭತ್ತ ಇಷ್ಟು ಬೆಳೆಗಳು ಇವೆ. ಕಬ್ಬಿಗೆ ರಾಸಾಯನಿಕ ಗೊಬ್ಬರವನ್ನು ಒದಗಿಸಬಾರದೆಂದು ಮೈಸೂರು ಸರ್ಕಲ್ ಸಹ ನಿರ್ದೇಶಕರಿಗೆ ಆಜ್ಞೆಕೊಟ್ಟದ್ದೀರಿ. ಜೂನ ತಿಂಗಳ ವ್ಯವಸಾಯಕ್ಕೆ ಅಣಿ ಆಗಿರತಕ್ಕ ಕಬ್ಬಿನ ಬೆಳೆಗೆ ಗೊಬ್ಬರ ದೊರಕದೆ ಬಹಳ ತೊಂದರೆಯಾಗಿದೆ. ಆಹಾರಧಾನ್ಯ ಮತ್ತಿತರ ವಸ್ತುಗಳಿಗೆ ಕೊಡುವುದಕ್ಕೆ ಹೇಳಿದ್ದೀರಿ. ಕಬ್ಬು ಆಹಾರ ಗುಂಪಿಗೆ ಸೇರುವುದಿಲ್ಲವೇ? ಸಾಲದ್ದಕ್ಕೆ ಮಂಡ್ಯ ಜಿಲ್ಲೆಯಲ್ಲಿ ಎರಡು ಸಕ್ಕರೆ ಕಾರ್ಖಾನೆ ೧೨೦೦ ಕ್ರಷರ್ಸ ಇವೆ. ಇವಕ್ಕೆ ತೊಂದರೆಯಾಗುವದಿಲ್ಲವೇ? ನಿಂತಿರತಕ್ಕ ಬೆಳೆ

ಕೆಟ್ಟು ಹೋಗುವದಿಲ್ಲವೇ? ಸಮಾಜಕ್ಕೆ ಮತ್ತು ರೈತರಿಗೆ ಎಲ್ಲರಿಗೂ ಹಾನಿಯಾಗುವದಿಲ್ಲವೇ? ಭತ್ತದ ಬೆಳೆಗೆ ಎಷ್ಟು ಪ್ರಾಮುಖ್ಯತೆಯನ್ನು ಕೊಡುತ್ತೀರೋ ಅಷ್ಟೇ ಪ್ರಾಮುಖ್ಯತೆಯನ್ನು ಕಬ್ಬಿನ ಬೆಳೆಗೆ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಕೆ. ಎಚ್. ಪಾಟೀಲ.— ಕೊಡುವುದಕ್ಕೆ ಆಗುವದಿಲ್ಲ ಎಂದು ಹೇಳುವುದಿಲ್ಲ, ಕಬ್ಬಿಗೂ ಕೊಡುತ್ತೇವೆ, ಹುಲ್ಲಿಗೂ ಕೊಡುತ್ತೇವೆ. ಆದರೆ ಗೊಬ್ಬರದ ಅಭಾವ ಇರುವದರಿಂದ ಯಾವುದಕ್ಕೆ ಆದ್ಯತೆ ಕೊಡಬೇಕು ಎಂದರೆ, ಜನತೆಯ ಹೊಟ್ಟೆ ಕೂಳಿಗೆ ಮುಖ್ಯವಾದ ಬೆಳೆಗೆ ಆದ್ಯತೆ ಕೊಡಬೇಕು. ಮಂಡ್ಯ ಜಿಲ್ಲೆಯಲ್ಲಿ ಇಡೀ ರಾಜ್ಯಕ್ಕೆ ಬೇಕಾಗುವ ಗೊಬ್ಬರವನ್ನು ಕೊಟ್ಟರೂ ಸಾಲುವದಿಲ್ಲ. ಪರಿಸ್ಥಿತಿ ಈ ರೀತಿ ಇರುವಾಗ ಮಂಡ್ಯ ಜಿಲ್ಲೆಯಲ್ಲಿ ಕಬ್ಬು ಹೆಚ್ಚು ಇದೆ, ಫ್ಯಾಕ್ಟರಿ ಜಾಸ್ತಿ ಇದೆ. ಅವರೇ ಒಂದು ಕಾರ್ಖಾನೆಯನ್ನು ತಾವೇ ಹಾಕಿಕೊಂಡರೆ ಸರ್ಕಾರ ಪ್ರಯತ್ನ ಮಾಡಿ ಅವರಿಗೆ ಸಹಾಯ ಮಾಡುತ್ತದೆಂದು ಹೇಳುತ್ತೇನೆ.

ಶ್ರೀ ಡಿ. ಹಲಗೇಗೌಡ.— ರಬಿ ಬೆಳೆಗೆ ೮ ಸಾವಿರ ಟನ್ ಸಸಾರಜನಕವನ್ನು ಮಂಡ್ಯ ಜಿಲ್ಲೆಗೆ ಕೊಡುವ ಯೋಜನೆ ಮಾಡುವ ಕಾರ್ಯಕ್ರಮ ಇದೆ ಎಂದು ಹೇಳಿದ್ದೀರಿ ಮೇಲೆ ಹೇಳಿದ ಬೆಳೆಗೆ ಅಷ್ಟು ಕೊಟ್ಟರೆ ೧/೫ ಭಾಗ ಬೆಳೆಗೂ ಸಾಲುವುದಿಲ್ಲ. ಹೆಚ್ಚು ಬೆಳೆ ನಿರೀಕ್ಷಿಸುತ್ತಿದ್ದೀರಿ ಆಹಾರ ಬೆಳೆ ಸಿಗುತ್ತದೆ ಎನ್ನುವ ದೃಷ್ಟಿಯಿಂದ ಆದರ ಕಡೆಗೆ ಗಮನ ಕೊಡುತ್ತೀರಾ?

ಶ್ರೀ ಕೆ. ಎಚ್ ಪಾಟೀಲ.— ಪರರಾಷ್ಟ್ರದಿಂದ ಗೊಬ್ಬರ ತರಬೇಕಾಗುವದರಿಂದ, ಸಾಕಾಗುವಷ್ಟು ಗೊಬ್ಬರ ಸಿಕ್ಕದೇ ಇರುವದರಿಂದ, ಸಾಧ್ಯವಾದಷ್ಟು ರೈತರು ಹೊಲದ ದಂಡೆಗಳಲ್ಲಿ ಹಸಿರು ಗೊಬ್ಬರದ ಗಿಡಗಳನ್ನು ಹಚ್ಚಿ ತಮಗೆ ಬೇಕಾಗುವ ನೈಟ್ರೋಜನ್ ಗೊಬ್ಬರ ಮಾಡುವ ಕಾಲ ಬಂದಿದೆ. ಮಂಡ್ಯದ ಜನ ಬುದ್ಧಿವಂತಿಕೆ ಜನ. ಈ ರೀತಿ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

(iii) Re: Deputation of a Social Worker to the Pestalozzi childrens village, Trogen, Switzerland.

They should resort to fresh taxation. It is inevitable. That too, at a time, when we are thinking of a five year plan costing about 52,000 crores of rupees, resonting to taxation is going to become inevitable. The total deficit for 1973-74 is round about Rs. 200 crores. The net deficit is Rs. 200 crores. So, taxes should be levied to the extent of 200 crores of rupees. This will cover up the deficit to a considerable extent. Now, the Government have resorted to borrowing. The first borrowing is over and now, they have resorted to the second borrowing. This will be adequate to cover up the additional expenditure not contemplated in the current year's budget. The Pay Commission's recommendations, the Bonus Committee recommendations and the food subsidy, these items will cost 4 to 5 hundred crores. So, This 200 crores which they get by way of taxation and Rs. 300 crores which the Government are going to borrow will be just adequate to meet the deficit without resorting to bank credit. You have to step up the indigenous production by adopting short term plan, particularly, the agricultural production which is of primary importance. And, then the prices, wages and dividends should be frozen at the present level, because, this price rise is going to be a permanent feature in India, At a particular point, these things should be frozen. So, the present level of prices, wages and dividends should be frozen and

the payments regarding the commitments already made with regard to the recommendations of the Pay Commission should be post-poned. And, a permanent Commission should be appointed on prices, wages and tariff. This is one of the recommendations made by the Administrative Reforms Commission. Price Boards are in existence in America and Britan and such Price Boards are necessary here also. These are my suggestions.

Sri H. SHIDDAVEERAPPA.— These are arguments which the hon. Member can put forth in the Parliament. he my please tell us what the State should do. This is a Central policy and it must be done there.

Sri M. RAJASEKHARA MURTHY.— Now a days, the State Government are glorified Municipalities and decisions are taken by the Centre. Decisions on all policy matters are being taken by the Government of India. Even fixing the procurement prices is being dealt with by the Government of India. Whole-sale trade taking over is also being dealt with by them. Everything is being done by the Government of India. The Chief Minister has made a reference in his statement, to this aspect and so, I was making a reference in respect of that statement,

Sri M. S. KRISHNAN.— Every hon. Minister says that the price rise is an international phenomenon and so naturally Mr. Rajasekharamurthy is referring to that.

Sri RAJASEKHARA MURTHY.— The Hon. Minister will please refer to para 6-page 4 of the Statement given by the Hon. Chief Minister, were in he has referred to all these questions. He has raised the issue pertaining to the inflationary conditions in India and about the prices. I am giving this for your background so that, when you go to Delhi, you may press the Government of India to take these measures

Sri S. M. SEERNAHALLI CHNDRASEKHAR.— I would like to seek a clarification. ಮಾನ್ಯ ಸದಸ್ಯರು ಮಾತನಾಡುತ್ತಾ ಹೇಳಿದರು, ಇದು ಯಾರ ಅಭಿಪ್ರಾಯವೂ ಅಲ್ಲ, ನನ್ನ ಸ್ವಂತ ಅಭಿಪ್ರಾಯ ಎಂದು. ಆದರೆ ನಾನು ನೊನ್ನೆ ಚಿಕ್ಕಲಾಲ್‌ಬಾಗನಲ್ಲಿ ಮೊರಾರ್ಜಿ ದೇಸಾಯಿ ಅವರು ಮತ್ತು

ಎಸ್. ಕೆ. ಪಾಟೀಲ ಅವರು ಮಾತನಾಡಿದ್ದನ್ನು ಒಂದು ಮೂಲೆಯಲ್ಲಿ ನಿಂತು ಕೇಳಿದ್ದೇನೆ. ಅವರ ಮಾತುಗಳನ್ನು ಇಂದು ಮಾನ್ಯ ಸದಸ್ಯರು ಪುನರಾವರ್ತನೆ ಮಾಡಿದ್ದಾರೆ ಅಲ್ಲವೇ ಮತ್ತು ಅಷ್ಟನ್ನು ಮಾತ್ರ ಹೇಳಿದ್ದಾರೆ ಅಲ್ಲವೆ?

Sri M. RAJASEKHARA MURTHY.— Ttruth cannot be different; whether they say it or whether I say it, I think the position is the same.

ಶ್ರೀ ಕೋಣಂದೂರು ಲಿಂಗಪ್ಪ: ಈಗ ಮುಖ್ಯಮಂತ್ರಿಗಳು ಬಂದಿದ್ದಾರೆ. ಸೊಂಡೂರಿನ ಬಗ್ಗೆ ಅವರು ಒಂದು ಸ್ಟೇಟಮೆಂಟ್ ಮಾಡುತ್ತೇನೆಂದು ಹೇಳಿದ್ದರು. ಅದನ್ನು ಯಾವಾಗ ಮಾಡುತ್ತಾರೆಂದು ಕೇಳುವುದಕ್ಕೆ ಇಷ್ಟಪಡುತ್ತೇನೆ.

Sri D. DEVARAJ URS.— In the course of the day.

† ಶ್ರೀ ಪಿ. ಎಂ. ಭಂಗಿ (ಜಮಖಂಡಿ) – ಮಾನ್ಯ ಅಧ್ಯಕ್ಷಣಿಯವರೇ, ಮಾನ್ಯ ಶಾಸಕರಾದ ಶ್ರೀಮಾನ್ ರಾಜಶೇಖರ ಮೂರ್ತಿಯವರು ಇದುವರೆಗೆ ಪ್ರೊಕ್ಯೂರ್ ಮೆಂಟ್ ಬಫರ್ ಸ್ಟಾಕ್ ಮತ್ತು ಡಿಸ್ಟ್ರಿಬ್ಯೂಷನ್ ಬಗ್ಗೆ ಸಾಕಷ್ಟು ವಿವರವಾಗಿ ಹೇಳಿದ್ದಾರೆ ನಾನು ಇದೇ ವಿಷಯಗಳ ಬಗ್ಗೆ ಈಗ ಹೇಳುವುದಕ್ಕೆ ಹೋಗುವುದಿಲ್ಲ. ಇಂದಿನ ಆಹಾರದ ಹಂಚಿಕೆ ವಿಷಯದಲ್ಲಿ ಸಾಕಷ್ಟು ದೋಷಗಳು ಇವೆ. ಈ ದೋಷಗಳನ್ನು ಸರ್ಕಾರದವರು ತಿದ್ದಬೇಕೆಂದು ಈ ಸಮಯದಲ್ಲಿ ಸೂಚಿಸಬಯಸುತ್ತೇನೆ. ಇಂದು ಸರ್ಕಾರದವರು ಪಟ್ಟಣಗಳಲ್ಲಿ ಮತ್ತು ಹಳ್ಳಿಗಳಲ್ಲಿ ಆಹಾರವನ್ನು ವಿತರಣೆ ಮಾಡುವುದಕ್ಕಾಗಿ ರೇಷನ್ ಕಾರ್ಡುಗಳನ್ನು ಕೊಡುತ್ತಿದ್ದಾರೆ. ಈ ರೇಷನ್ ಕಾರ್ಡುಗಳಲ್ಲಿರುವ ಜನರ ಸಂಖ್ಯೆಗೂ ಸೆನ್ಸಸ್‌ನಲ್ಲಿರುವ ಜನರ ಸಂಖ್ಯೆಗೂ ಸಾಕಷ್ಟು ವ್ಯತ್ಯಾಸಗಳು ಕಂಡುಬರುತ್ತದೆ. ಉದಾಹರಣೆಗೆ ಹೇಳಬೇಕಾದರೆ ಜಮಖಂಡಿಯಲ್ಲಿ ಸೆನ್ಸಸ್ ಪ್ರಕಾರ ೩೦ ಸಾವಿರ ಜನಸಂಖ್ಯೆ ಇದ್ದರೆ, ರೇಷನ್ ಕಾರ್ಡಿನ ಲೆಕ್ಕದಲ್ಲಿ ೪೦ ಸಾವಿರವಾಗಿದೆ. ಅದೇ ಪ್ರಕಾರ ರಬಕವಿಯಲ್ಲಿ ಸೆನ್ಸಸ್ ಪ್ರಕಾರ ೪೦ ಸಾವಿರ ಜನಸಂಖ್ಯೆ ಇದ್ದರೆ ರೇಷನ್ ಕಾರ್ಡ ಪ್ರಕಾರ ೫೪ ಸಾವಿರ ಜನಸಂಖ್ಯೆಯಾಗುತ್ತದೆ. ಇದರ ಜೊತೆಗೆ ತಹಶೀಲದಾರರು ಪ್ರತಿದಿವಸವೂ ಐದಾರು ಹೊಸ ರೇಷನ್ ಕಾರ್ಡುಗಳನ್ನು ವಿತರಣೆ ಮಾಡುತ್ತಿದ್ದಾರೆ. ಅಂದರೆ ತಿಂಗಳಿಗೆ ಒಂದು ಸಾವಿರ ಯುನಿಟ್‌ಗಳಷ್ಟು ಹೆಚ್ಚಿಗೆ ಕೊಡಲಿಕ್ಕೆ ಪ್ರಯತ್ನ ಮಾಡಿದ್ದಾರೆ. ಈ ರೀತಿ ಬೋಗಸ್ ಕಾರ್ಡುಗಳನ್ನು ಕೊಡುತ್ತಿರುವುದರಿಂದ ನಿಜವಾದ ಕೂಲಿಗಾರರಿಗೆ ಇವೊತ್ತಿನ ದಿವಸ ಸಾಕಷ್ಟು ಆಹಾರಧಾನ್ಯಗಳು ಸಿಗುತ್ತಿಲ್ಲ. ಅಂತಹ ಒಂದು ಪರಿಸ್ಥಿತಿ ನಿರ್ಮಾಣವಾಗಿದೆ. ಈಗ ಷಹರುಗಳಲ್ಲಿ ವಿತರಣೆ ಮಾಡುವ ಕಾರ್ಡುಗಳಲ್ಲಿ ಮುನಸಿಪಾಲಿಟಿಯ ನಂಬರ್‌ಗಳನ್ನಾಗಲೀ ಅಥವಾ ಸಿಟಿ ಸರ್ವೆ ನಂಬರುಗಳನ್ನಾಗಲೀ ದಾಖಲು ಮಾಡುತ್ತಿಲ್ಲ. ಇದರಿಂದ ಬೋಗಸ್ ಕಾರ್ಡುಗಳನ್ನು ತಪಾಸಣೆ ಮಾಡುವುದು ಕಷ್ಟವಾಗಿದೆ. ಕಾಳಸಂತೆಕೋರರು ಈ ಬೋಗಸ್ ಕಾರ್ಡುಗಳ ಮೂಲಕ ಆಹಾರ ಧಾನ್ಯಗಳನ್ನು ಕಲಿಹಾಕಿ, ಧಾರಣಿವಾಸಿಗಳು ಹೆಚ್ಚುವಂತೆ ಮಾಡುತ್ತಿದ್ದಾರೆ. ಧಾರಣಿವಾಸಿಗಳು

ಹೆಚ್ಚುವುದಕ್ಕೆ ಇವರೇ ಕಾರಣರಾಗಿದ್ದಾರೆಂದು ಧಾರಾಳವಾಗಿ ಹೇಳಬಯಸುತ್ತೇನೆ. ಇದೇ ಪ್ರಕಾರವಾಗಿ ಕೃಷ್ಣಾನದಿಯ ದಡದಲ್ಲಿರುವ ಹಳ್ಳಿಗಳಲ್ಲಿ ಸಾಕಷ್ಟು ಜೋಳವನ್ನು ರೈತರು ಬೆಳೆಯುತ್ತಿದ್ದರೂ ಸಹ ಅದರ ಬಗ್ಗೆ ಯಾರೂ ಡಿಕ್ಲರೇಷನ್ ಕೊಡುವುದಿಲ್ಲ. ಮತ್ತು ತಮ್ಮಲ್ಲಿರುವಂಥ ಆಹಾರಧಾನ್ಯವನ್ನು ಏಜೆಂಟರ ಮೂಲಕ ಅಥಣಿ ಮಾರ್ಗವಾಗಿ ಮಹಾರಾಷ್ಟ್ರಕ್ಕೆ ಸಾಗಿಸುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಪ್ರತಿಯೊಂದು ಹಳ್ಳಿಯಲ್ಲಿಯೂ ಈ ಏಜೆಂಟರು ಇದ್ದಾರೆ. ಇವರು ಪ್ರತಿ ಕ್ವಿಂಟಾಲಿಗೆ ೫ ರೂಪಾಯಿ ನಂತೆ ಕಮಿಷನ್ ಪಡೆಯುವುದರ ಮೂಲಕ ಸಹಸ್ರಾರು ರೂಪಾಯಿಗಳನ್ನು ಗಳಿಸುತ್ತಿದ್ದಾರೆ ಈ ವಿಷಯವನ್ನು ಬಿಜಾಪುರದ ಜಿಲ್ಲಾಧಿಕಾರಿಯವರಿಗೂ ಮತ್ತು ಜಮಖಂಡಿಯ ತಹಶೀಲದಾರರಿಗೂ ತಿಳಿಸಲಾಗಿದ್ದರೂ ಸಹ ಏನೂ ಉಪಯೋಗವಾಗಿಲ್ಲ. ಇದೇ ಪ್ರಕಾರವಾಗಿ ಧಾರವಾಡ ಜಿಲ್ಲೆಯಲ್ಲಿ ಸಾಕಷ್ಟು ಆಹಾರಧಾನ್ಯವನ್ನು ಬೆಳೆಯುತ್ತಿದ್ದರೂ ಸಹ, ಬೆಳೆದ ಆಹಾರಧಾನ್ಯಗಳು ನಮ್ಮ ಜಮಖಂಡಿ ಮತ್ತು ಅಥಣಿ ಮಾರ್ಗವಾಗಿ ಮಹಾರಾಷ್ಟ್ರಕ್ಕೆ ಸಾಕಷ್ಟು ಪ್ರಮಾಣದಲ್ಲಿ ಹೋಗುವುದಕ್ಕೆ ಪ್ರಾರಂಭವಾಗಿದೆ.

ನಮ್ಮ ಮಹಾರಾಷ್ಟ್ರದ ಬಾರ್ಡರಿಗೆ ಕರ್ಣಾಟಕದ ಬಾರ್ಡರಿನಿಂದ ಕಳ್ಳಸಾಗಾಣಿಕೆ ಆಗುವುದನ್ನು ತಪ್ಪಿಸಲು ಸಾಕಷ್ಟು ಪೋಲೀಸು ಬಂದೋಬಸ್ತು ಮಾಡಿ ಆಹಾರ ಧಾನ್ಯ ಕಳ್ಳತನದಲ್ಲಿ ಸಾಗಾಣಿಕೆ ಮಾಡುವುದನ್ನು ತಪ್ಪಿಸಬೇಕು. ನಮ್ಮ ಕರ್ಣಾಟಕದಲ್ಲಿ ಆಹಾರಧಾನ್ಯ ಕಡಿಮೆ ಇರುವಾಗ ಮಾರಾಟಕ್ಕಾಗಿ ಬೇರೆ ರಾಷ್ಟ್ರಗಳಿಗೆ ಹೋಗುವುದನ್ನು ತಪ್ಪಿಸಬೇಕು. ನಮ್ಮ ಉತ್ತರ ಕರ್ಣಾಟಕದ ಜನರು ಆಹಾರ ಧಾನ್ಯದ ಕೊರತೆ ಇದ್ದರೂ ಸಹನಶೀಲರು ಮತ್ತು ಸರ್ಕಾರದವರನ್ನೇ ದವಸಕ್ಕಾಗಿ ನಂಬಿದ್ದಾರೆ, ಆದುದರಿಂದ ಮಹಾರಾಷ್ಟ್ರಕ್ಕೆ ಹೋಗುವ ಧಾನ್ಯವನ್ನು ತಪ್ಪಿಸಬೇಕೆಂದು ಇದಕ್ಕೆ ತಕ್ಕ ವ್ಯವಸ್ಥೆ ಮಾಡಬೇಕೆಂದೂ ಸರ್ಕಾರಕ್ಕೆ ಇಲ್ಲಿ ಸೂಚಿಸಬಯಸುತ್ತೇನೆ. ಇದೇ ಪ್ರಕಾರ ಭೂಮಿ ಇದ್ದು ಅದರಲ್ಲಿ ಯಾವ ಬೆಳೆಯೂ ಆಗದಿದ್ದವರಿಗೆ ಕೂಲಿ ಮಾಡುವ ಕೃಷಿ ಕೂಲಿಗಾರರಿಗೆ ಮತ್ತು ನೇಕಾರ ಕೂಲಿ ಮಾಡುವವರಿಗೆ ಸರಕಾರ ಆಹಾರಧಾನ್ಯ ಕೊಡುವ ವ್ಯವಸ್ಥೆ ಮಾಡಬೇಕು. ಈಗ ಒಬ್ಬರಿಗೆ ಎರಡು ಕೆ. ಜಿ. ಧಾನ್ಯ ಕೊಡುವುದು ಸಾಲದು. ಇದನ್ನು ಹೆಚ್ಚಿಸಬೇಕು, ಕನಿಷ್ಟಪಕ್ಷ ಒಕ್ಕಲುತನ ಮಾಡುವ ಕೂಲಿಗಾರರಿಗೆ, ನೇಕಾರ ಕೂಲಿಗಾರರಿಗೆ ಆರು ಕೆ. ಜಿ. ಗಳಷ್ಟು ಧಾನ್ಯ ಒದಗಿಸುವ ವ್ಯವಸ್ಥೆ ಮಾಡಬೇಕೆಂದು ಈ ಸಮಯದಲ್ಲಿ ಹೇಳಬಯಸುತ್ತೇನೆ ಇದೇ ರೀತಿ ಸರಕಾರ ಇತರ ಕಡೆಗಳಲ್ಲಿ ಗೋದಿ ಹಿಟ್ಟು, ಮೈದಾ ಇತ್ಯಾದಿಗಳನ್ನು ಕೊಡುತ್ತಿರುವಂತೆ ನಮ್ಮ ಭಾಗದ ಜನರಿಗೂ ಕೊಡಿಸಿ ಕೊಡಬೇಕು ಮತ್ತು ಎಣ್ಣೆಯನ್ನು ಕೂಡ ಸರಿಯಾಗಿ ವಿತರಣೆ ಮಾಡುವ ವ್ಯವಸ್ಥೆ ಮಾಡಬೇಕು, ನಮ್ಮ ಉತ್ತರ ಕರ್ಣಾಟಕದ ಜನರು ಬಹಳ ಸಹನಶೀಲರು, ಇದಕ್ಕಾಗಿ ಬೇರೆ ಕಡೆಗಳಲ್ಲಿರುವ ಸರ್‌ಪ್ಲಸ್ ಏರಿಯಾಗಳಂತೆ ಎಂದರೆ ಹಾಸನ, ಮಂಡ್ಯ ಹಾಗೂ ರಾಣೇಬೆನ್ನೂರು ಇಲ್ಲೆಲ್ಲಾ ಲೂಟಿಗಳಾದುವು. ನಮ್ಮ ಭಾಗದಲ್ಲಿ ಯಾವ ಲೂಟಿಗಳೂ

ಆಗಲಿಲ್ಲ, ಇದಕ್ಕಾಗಿ ಸರಕಾರ ಉತ್ತರ ಕರ್ನಾಟಕದ ಜನತೆಗೆ ಸಾಕಷ್ಟು ಆಹಾರ ಧಾನ್ಯ ವ್ಯವಸ್ಥೆ ಮಾಡಬೇಕೆಂದು ಕೇಳುತ್ತೇನೆ. ನಮ್ಮ ಜನಕ್ಕೆ ಸರಕಾರದ ಮೇಲೆ ಪೂರ್ಣ ವಿಶ್ವಾಸವಿದೆ. ಅವರಿಗೆ ಬೇಕಾಗುವ ಎಲ್ಲ ಆಹಾರಧಾನ್ಯವನ್ನೂ ಸರಿಯಾಗಿ ವಿತರಣೆ ಮಾಡಿಸಿಕೊಡಬೇಕೆಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಚ್. ಟಿ. ಕೃಷ್ಣಪ್ಪ (ನಾಗಮಂಗಲ).— ಮಾನ್ಯ ಅಧ್ಯಕ್ಷರೇ, ದಿನೇ ದಿನೇ ಬೃಹದಾಕಾರವಾಗಿ ಬೆಳೆಯುತ್ತಿರುವ ಆಹಾರ ಸಮಸ್ಯೆಯನ್ನು ಪರಿಹರಿಸುವುದರಲ್ಲಿ ಇಂದು ದೇಶದಲ್ಲಿರುವ ಸರಕಾರ ಪೂರ್ಣವಾಗಿ ವಿಫಲವಾಗಿದೆ. ಇದರಿಂದಾಗಿ ಇಂದು ಈ ಆಹಾರ ಸಮಸ್ಯೆ ಇಷ್ಟೊಂದು ಗಂಭೀರ ಸ್ವರೂಪವನ್ನು ತಾಳಬೇಕಾದರೆ ಇದಕ್ಕೆ ಕಾರಣ ಸರಕಾರದ ದೋಷಯುತವಾದ ನೀತಿ ಎಂದು ಇಲ್ಲಿ ನಾನು ಸ್ಪಷ್ಟವಾದ ಬಿಚ್ಚು ಮಾತುಗಳಲ್ಲಿ ಹೇಳಬೇಕಾಗಿದೆ.

ಮೊದಲನೇದಾಗಿ, ಲೇವಿ ಭತ್ತ ಸಂಗ್ರಹಣೆ ಸಕಾಲದಲ್ಲಿ ಮಾಡಿದ್ದರೆ ಇಷ್ಟು ಉಲ್ಬಣವಾಗುತ್ತಿರಲಿಲ್ಲ, ಇದಕ್ಕೆ ಸರಕಾರದಿಂದ ಸಮಂಜಸವಾದ ಉತ್ತರ ನಮಗೆ ದೊರಕುತ್ತಿಲ್ಲ; ಎನ್ನುವ ಒಂದು ವಿಚಾರ ನಮಗೆ ಸ್ಪಷ್ಟವಾಗಿ ಗೊತ್ತಾಗುತ್ತದೆ. ಲೇವಿ ಭತ್ತ ಸಂಗ್ರಹಣೆಯಲ್ಲಿ ಬಿಗಿಯಾದ ನೀತಿಯನ್ನು ಅನುಸರಿಸದೇ ಹೋದುದರಿಂದಾಗಿ ಸಾಕಷ್ಟು ಸಂಗ್ರಹಣೆ ಮಾಡಲು ಮತ್ತು ನಿಮ್ಮ ಗುರಿಮುಟ್ಟುವುದಕ್ಕೆ ಪ್ರತಿಬಂಧಕಗಳೂ ಹಾಗೂ ಅಡ್ಡಿಯಾದವು ಎಂದು ಹೇಳಬೇಕಾಗಿದೆ. ಲೇವಿ ಸಂಗ್ರಹಣೆ ಮಾಡುವಾಗ ಸಣ್ಣ ಪುಟ್ಟ ರೈತರಿಂದ ಯಾವ ರೀತಿ ಬಿಗಿಯಾಗಿ ವಸೂಲು ಮಾಡಿದರೋ ಅದೇ ಒಂದು ಕಟ್ಟು ನಿಟ್ಟಾದ ರೀತಿಯಲ್ಲಿ ದೊಡ್ಡ ದೊಡ್ಡ ಭೂಮಾಲೀಕರುಗಳಿಂದ ಸರಿಯಾಗಿ ವಸೂಲು ಮಾಡಲಿಲ್ಲ, ಇದಕ್ಕೆ ಕಾರಣ ದೊಡ್ಡ ದೊಡ್ಡ ಭೂಮಾಲಿಕರು ನಿಮ್ಮ ಪಕ್ಷದಲ್ಲೇ ಇದ್ದಾರೆ.

ಶ್ರೀ ಡಿ. ದೇವರಾಜ ಅರಸ್.— ನಿಮ್ಮ ಪಕ್ಷದಲ್ಲಿಲ್ಲವೇ ?

ಶ್ರೀ ಎಚ್.ಟಿ. ಕೃಷ್ಣಪ್ಪ.— ಕಾರಣವನ್ನು ಮುಂದೆ ಪ್ರಸ್ತಾಪಮಾಡುತ್ತೇನೆ. ಆಗಿನಿಂದ ನಾವು ಮನವಿ ಮಾಡುತ್ತಲೇ ಇದ್ದೇವೆ. ನಿಮ್ಮ ಪಕ್ಷದಲ್ಲಿರುವವರೇ ಯಾರಾದರೂ ಲೇವಿ ಕೊಡಬೇಕಾಗಿದ್ದರೆ ಅದನ್ನು ಕೊಟ್ಟುಬಿಡಿ ಎಂದು ಪದೇ ಪದೇ ನಿಮ್ಮ ಮುಂದೆ ಮನವಿ ಸಲ್ಲಿಸುತ್ತಲೇ ಇದ್ದರೂ ಅವರಿಂದೇನೂ ವಸೂಲಾಗಲಿಲ್ಲ. ನಿಮ್ಮಲ್ಲಿರುವ ಭೂ ಮಾಲೀಕರಿಂದಲೇ ಇದರ ಸತ್ಯ ಇಂದು ಹೊರಬರುತ್ತಿದೆ. ಆದುದರಿಂದ ಯಾರೂ ದೊಡ್ಡ ಭೂಮಾಲೀಕರು ಎಂದು ಸಮಾಜದಲ್ಲಿ ಇದ್ದಾರೋ ಅಂತಹವರಿಂದ ಲೇವಿ ವಸೂಲಿ ಮಾಡುವುದರಲ್ಲಿ ಸಡಿಲವಾಯಿತು. ಎಲ್ಲ ಜಿಲ್ಲೆಗಳಲ್ಲೂ ಸರಿಯಾಗಿ ಲೇವಿಯನ್ನು ವಸೂಲು ಮಾಡಲಾಗಲಿಲ್ಲ, ಇದಕ್ಕೆ ನೀವು ಅನುಸರಿಸುತ್ತಿರುವ ನೀತಿಯೇ ಕಾರಣ ಎಂದು ನಿಮ್ಮ ಮೇಲೆ ನಾನು ಆಪಾದನೆ ಮಾಡಬೇಕಾಗಿದೆ.

ಎರಡನೇದು ಜಿಲ್ಲೆಗಳಿಂದ ಜಿಲ್ಲೆಗೆ ಅಕ್ಕಿ ಹಾಗೂ ಭತ್ತವನ್ನು ಸಾಗಿಸಕೂಡದು ಎಂದು ನೀವು ಹಾಕಿರುವ ನಿರ್ಬಂಧ, ಇದಕ್ಕೆ ನೀವು ಕೊಡತಕ್ಕ ಕಾರಣ.......

ಶ್ರೀ ಡಿ. ದೇವರಾಜ ಅರಸ — ಇಂದು ಮಂಡ್ಯದಲ್ಲಿ ಅಕ್ಕಿ ಬೆಲೆ ಎಷ್ಟು ಜಾಸ್ತಿ ಇದೆ ?

ಶ್ರೀ ಎಚ್. ಟಿ ಕೃಷ್ಣಪ್ಪ.— ಇಂದು ಅಕ್ಕಿ ಮಂಡ್ಯದಲ್ಲಿ ಕೆ.ಜಿ ಗೆ ಎರಡುವರೆ ರೂಪಾಯಿಗಳಿಂದ ಮೂರು ರೂಪಾಯಿಗಳವರೆಗೆ ಇದೆ. ಇದರ ಬಗ್ಗೆ ಮುಂದೆ ಹೇಳುತ್ತೇನೆ. ಈಗ ಜಿಲ್ಲೆಗಳಿಂದ ಜಿಲ್ಲೆಗೆ ನಿರ್ಬಂಧ ಮಾಡಲು ಕಾರಣ ನೀವು ಹೇಳುವುದು ನಮ್ಮ ರಾಜ್ಯದಿಂದ ನೆರೆ ರಾಜ್ಯಗಳಿಗೆ ಕಳ್ಳಸಾಗಾಣಿಕೆ ಆಗುತ್ತದೆ. ಇದನ್ನು ತಪ್ಪಿಸಲು ಈ ರೀತಿ ಮಾಡಲಾಗಿದೆ ಎಂದರು. ಬೇರೆ ರಾಜ್ಯಗಳಿಗೆ ಕಳ್ಳ ಸಾಗಾಣಿಕೆಯಾದರೆ ನಿಮ್ಮ ಆಯಕಟ್ಟಿನಲ್ಲಿರುವ ಪ್ರದೇಶಗಳಲ್ಲಿ ಭದ್ರವಾಗಿ ಹಾಗೂ ಕಟ್ಟುನಿಟ್ಟಾಗಿ ಬಲ ಪಡಿಸಿದ್ದರೆ ಆಗ ಇದನ್ನು ತಪ್ಪಿಸಬಹುದಾಗಿತ್ತು, ಹಾಗೆ ಮಾಡದೆ ಈಗ ಜಿಲ್ಲೆಯಿಂದ ಜಿಲ್ಲೆಗೆ ಮಾಡಿರುವ ನಿರ್ಬಂಧದಿಂದ ಏನಾಗಿದೆ ಎಂದರೆ ಇಂದು ಬೆಲೆಗಳು ಏರಲಾರಂಭಿಸಿವೆ. ನಿರ್ಬಂಧವಿಲ್ಲದೆ ಇದ್ದ ಕಾಲದಲ್ಲಿ ಮಂಡ್ಯದಲ್ಲಿ ಒಂದು ಕೆ. ಜಿ. ಅಕ್ಕಿಗೆ ೧–೪೦ ಇಲ್ಲವೆ ೧–೫೦ ಇದ್ದದ್ದು ಈ ದಿವಸ ಮೂರು ರೂಪಾಯಿಗಳಾಗಲು ಕಾರಣವಾಯಿತು. ಇದಕ್ಕೆ ಕಾರಣವನ್ನು ಆ ಮೇಲೆ ಹೇಳು ತ್ತೇನೆ. ಈಗ ಬೆಂಗಳೂರಿನಲ್ಲಿ ಒಂದು ಲಾರಿ ಲೋಡಿಗೆ ಎಂದು ಪರ್ಮಿಟ್ಟು ಕೊಟ್ಟಿ ದ್ದಾರೆ ಅವರು ಮಂಡ್ಯದಿಂದ ತರುವಾಗ ಒಂದು ಲಾರಿ ಲೋಡು ತರುವುದಿಲ್ಲ. ಒಂದೇ ಪರ್ಮಿಟ್ಟಿನಲ್ಲಿ ನಾಲ್ಕು ಪರ್ಮಿಟ್ಟುಗಳಂತೆ ಮಾಡಿ ತರುತ್ತಾರೆ. ಒಂದೊಂದು ಸಾರಿಗೂ ಎರಡು ಸಾವಿರದಂತೆ ಲಾಭಪಡೆಯುತ್ತಿದ್ದಾರೆ. ಇದರಿಂದ ಮಂಡ್ಯದಲ್ಲಿ ಬೆಳೆದ ರೈತರಿಗೂ ಲಾಭವಾಗಲಿಲ್ಲ. ಬೆಂಗಳೂರಿನಲ್ಲಿ ಕೊಂಡು ತಿನ್ನುವವರಿಗೂ ಲಾಭವಾಗ ಲಿಲ್ಲ, ಮಧ್ಯವರ್ತಿಗಳು ಇದರಲ್ಲಿ ಲಾಭಪಡೆಯಲು ಅನುಕೂಲವಾಯಿತು. ಇದ ರಲ್ಲಿ ಪರ್ಮಿಟ್ಟು ಕೊಡುವವರು, ಪರ್ಮಿಟ್ಟು ತೆಗೆದುಕೊಳ್ಳುವವರು ಇವರ ಮಧ್ಯದಲ್ಲಿ ರುವ ಸಮಾಜ ಘಾತುಕರು ಇದರ ದುರ್ಲಾಭವನ್ನು ಪಡೆಯಲು ಸಹಾಯ ವಾಯಿತು ಮತ್ತು ಸಮಾಜದಲ್ಲಿ ಇಂತಹ ಲಾಭಕೋರರ ಶಕ್ತಿ ಬೆಳೆಯಲು ಅನು ಕೂಲವಾಯಿತು. ಮಾನ್ಯ ಮುಖ್ಯ ಮಂತ್ರಿಗಳಿಗೆ ನಾನು ಸ್ವತಃ ಒಂದು ಸಾರಿ ಮನವಿ ಕೂಡ ಮಾಡಿದ್ದೆ, ನಮ್ಮ ಊರಿನಲ್ಲಿದ್ದ ಒಬ್ಬ ಪೋಲೀಸು ಕಾನ್ಸ್‌ಟೇಬಲ್‌ನ್ನು ಮಳವಳ್ಳಿಯಲ್ಲಿರುವ ಚೆಕ್‌ಪೋಸ್ಟಿಗೆ ಎಂಟು ದಿವಸಗಳ ಕಾವಲಕ್ಕಾಗಿ ಅಲ್ಲಿಗೆ ಪೋಸ್ಟು ಮಾಡಿದ್ದರು.

ಅವರು ಎಂಟು ದಿನಗಳಾದ ನಂತರ ನಮ್ಮ ಊರಿಗೆ ಬಂದಾಗ ಅವರನ್ನು ನಾವು ವಿಚಾರಿಸಿದಾಗ ಅವರಿಗೆ ಎಷ್ಟು ಲಾಭ ಬಂತು ಎಂದರೆ ಸುಮಾರು ೨,೨೦೦ ರೂಪಾಯಿಗಳಷ್ಟು ಅವನ ಪಾಲಿಗೆ ಬಂತು ಎಂದರು. ಇಲ್ಲಿ ಇದ್ದವರು ಮೂರೇ ಜನ ಇಬ್ಬರು ಕಾನ್‌ಸ್ಟೆಬಲ್, ಒಬ್ಬರು ಸಬ್ ಇನ್ಸ್‌ಪೆಕ್ಟರವರು. ಇವರಿಗೆ ಬೇರೆ

ಬೇರೆ ರೀತಿಯಲ್ಲಿ ಪಾಲುಗಳು ಬೇರೆ ಬಂದಿವೆ. ಇದರಿಂದ ಯಾವ ರೀತಿ ಲೂಟಿಯಾಗುತ್ತಿದೆ ಎನ್ನುವದನ್ನು ತಾವು ಇದರಲ್ಲಿ ಅರ್ಥ ಮಾಡಿಕೊಳ್ಳಬೇಕು.

ನಮ್ಮ ರಾಜ್ಯವನ್ನು ಒಂದು ಮನೆ ಎಂದು ಭಾವಿಸುವದಾದರೆ ಆ ಮನೆಗೆ ಕಳ್ಳರು ಬೀಳದ ಹಾಗೆ ಕಾಪಾಡಬೇಕೇ ಹೊರತು ಕೋಣೆ ಕೋಣೆಗೂ ಪೋಲೀಸರನ್ನು ಏಕೆ ಹಾಕಬೇಕು? ಮನೆಯ ಸುತ್ತ ಕಾವಲು ಇಟ್ಟರೆ ಸಾಕು. ಕೋಣೆ ಕೋಣೆಗೂ ಪೋಲೀಸರನ್ನು ಹಾಕತಕ್ಕ ನೀತಿ ದುರುದ್ದೇಶ ಪೂರಿತವಾದದ್ದು, ಸದುದ್ದೇಶದಿಂದ ಕೂಡಿದ್ದಲ್ಲ. ಯಾರೋ ಅಧಿಕಾರಿಗಳು ನಿಮ್ಮ ಕಿವಿಯನ್ನು ಚಿವುಟ ಅವರು ದುರ್ಲಾಭ ಪಡೆಯುವಕ್ಕೆ ನಿಮ್ಮನ್ನು ಕೆಟ್ಟ ಮಾರ್ಗಕ್ಕೆ, ದುರ್ಮಾರ್ಗಕ್ಕೆ ಇಳಿಸಿದ್ದಾರೆಂದು ನೇರವಾಗಿ ಆಪಾದನೆ ಮಾಡುತ್ತಿದ್ದೇನೆ.

ಇಂಥಿಂಥ ಜಿಲ್ಲೆಗಳಲ್ಲಿ ಎಷ್ಟೆಷ್ಟು ಆಹಾರ ಉತ್ಪಾದನೆಯಾಗುತ್ತದೆ ಎನ್ನುವುದು ಅಂಕಿ ಅಂಶಗಳ ಆಧಾರದ ಮೇಲೆ ನಿಮಗೆ ಗೊತ್ತಿದೆ. ಸರ್ಕಾರದ ಲೆಕ್ಕಾಚಾರದ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆ ಸರ್ಪ್ಲಸ್ ಏರಿಯಾ ಎಂದನ್ನಿಸಿಕೊಳ್ಳದೇ ಇದ್ದರೂ ಸೆಲ್ಫ್ ಸಪೋರ್ಟೆಡ್ ಏರಿಯಾ ಎಂದು ಸುಲಭವಾಗಿ ನಾವು ಹೇಳಬಹುದು. ಅಂಥ ಕಡೆಯಲ್ಲಿ ಬೇರೆ ಎಲ್ಲ ಕಡೆಗಳಿಗಿಂತ ಧಾನ್ಯದ ಬೆಲೆ ಹೆಚ್ಚಿ ಸಿಕ್ಕುವದು ಕಷ್ಟವಾಗಬೇಕಾದರೆ ಅದಕ್ಕೆ ಕಾರಣ ಕಳ್ಳ ಸಾಗಾಣಿಕೆ ಕೇರಳ ರಾಜ್ಯಕ್ಕೆ ಹೆಚ್ಚು ಪ್ರಮಾಣದಲ್ಲಿ ನಡೆಯುತ್ತಿದೆ ಎನ್ನುವದೇ ಅಲ್ಲದೆ ಬೇರೇನೂ ಅಲ್ಲ. ಅಂಥ ಒಂದು ಪರಿಸ್ಥಿತಿಗೆ ಕಾರಣ ಕರ್ತರು ಯಾರು ಎನ್ನುವದನ್ನು ಪತ್ತೆ ಮಾಡಿ ಬಲಿ ಹಾಕುವುದನ್ನು ಬಿಟ್ಟರು. ಮಂಡ್ಯದಲ್ಲಿರುವ ರೈತರು ಹೆಚ್ಚಾಗಿ ಬೆಳೆಯುವವರು, ವರ್ಷಕ್ಕೆ ಆಗುವಷ್ಟು ಬೆಳೆದುಕೊಳ್ಳುತ್ತಾರೆ ಎನ್ನುವ ಭಾವನೆ ಇದ್ದರೆ ಅದನ್ನು ಮೊದಲು ತೆಗೆದು ಹಾಕಬೇಕು. ಒಂದೊಂದು ಹಳ್ಳಿಯಲ್ಲಿ ಮೂರು ನಾಲ್ಕು ಜನ ಮಾತ್ರ ಬಲಿಷ್ಠರಾಗಿದ್ದು ವರ್ಷಕ್ಕೆ ಆಗುವಷ್ಟು ಬೆಳೆದುಕೊಳ್ಳುತ್ತಾರೆ. ಉಳಿದವರು ವರ್ಷದಲ್ಲಿ ಆರು ತಿಂಗಳು ಸಹ ಜೀವನ ಮಾಡುವುದಕ್ಕೆ ಕಷ್ಟವಾದ ಪರಿಸ್ಥಿತಿಯಲ್ಲಿ ಇದ್ದು, ಆಹಾರವನ್ನು ಬೆಳೆದು ಬದುಕಿಕೊಳ್ಳುವ ರೈತರೇ ಹೆಚ್ಚಾಗಿದ್ದಾರೆ. ಅಂಥವರಿಗೆಲ್ಲ ಏನು ಸಹಾಯ ಮಾಡಿದ್ದಾರೆ? ಎರಡೂವರೆ ಲಕ್ಷ ಟನ್ನಿನಷ್ಟು ಅಕ್ಕಿಯನ್ನು, ನನಗೆ ಬಂದಿರುವ ಮಾಹಿತಿ ಪ್ರಕಾರ, ಮಂಗಳೂರಿಗೆ ಕಳುಹಿಸಿಕೊಡಲು ಪರ್ಮಿಟ್‌ಗಳನ್ನು ಕೊಡಲಾಯಿತು. ಪರ್ಮಿಟ್‌ಗಳನ್ನು ಕೊಟ್ಟಿರುವ ವಿಚಾರ ಬಹಳ ಮುಖ್ಯವಾದುದು. ಕೆಲವು ಶಾಸಕರು ಸಿಫಾರಸು ಮಾಡಿದವರಿಗೆ ಮಾತ್ರ ಪರ್ಮಿಟ್‌ಗಳನ್ನು ಕೊಟ್ಟಿದ್ದಾರೆ. ಪರ್ಮಿಟ್‌ಗಳನ್ನು ಪಡೆದಿರುವವರು ಯಾವತ್ತೂ ವ್ಯಾಪಾರದಲ್ಲಿ ನಿರತರಾಗಿರತಕ್ಕ ಜನಗಳಲ್ಲ. ಇದು ಒಂದು ಹೊಸ ಸೃಷ್ಟಿ. ಸರ್ಕಾರದ ಆಹಾರದ ನೀತಿಯಿಂದ ಸೃಷ್ಟಿಯಾದಂಥ ಹೊಸ ವರ್ಗ. ಅವರುಗಳು ತೆಗೆದುಕೊಂಡು ಹೋಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಕ್ಕಿಯನ್ನು ಮಾರಿದ್ದರೆ ಅಕ್ಕಿಯ ಬೆಲೆ ತಕ್ಷಣ ಬಹಳ ಕಡಿಮೆಯಾಗಬೇಕಾಗಿತ್ತು. ಆದರೆ ಯಾವ ಮಟ್ಟದಲ್ಲಿ ಹಿಂದೆ ಬೆಲೆಗಳಿದ್ದುವೋ ಅದೇ ಮಟ್ಟದಲ್ಲಿಯೇ ಇವೆ. ಈ ರಹಸ್ಯವನ್ನು ಬೇಧಿಸುವದಕ್ಕೆ ಕಷ್ಟವಾಗುವದಿಲ್ಲ. ಬೆಲೆಗಳು ಇಳಿಯದೆ ಹೋದರೆ ...

ಅದಕ್ಕೆ ಕಾರಣ ಈ ಅಕ್ಕಿಯೂ ಸಹ ಕಳ್ಳ ಸಾಗಾಣಿಕೆಯಲ್ಲಿ ಹೊರ ಪ್ರಾಂತ ಸೇರಿವೆ ಎನ್ನುವದನ್ನು ಸುಲಭವಾಗಿ ಅರ್ಥ ಮಾಡಿಕೊಳ್ಳಬಹುದು.

ಈ ಪರ್ಮಿಟ್‌ಗಳನ್ನು ಕೊಡುವಾಗ ಶಾಸಕರ ಸಿಫಾರಸಿನ ಮೇಲೆ ಕೊಟ್ಟಿದರ ಗುಟ್ಟು ಏನು ಎನ್ನುವದನ್ನು ದಯವಿಟ್ಟು ತಿಳಿಸಬೇಕು. ಈ ಪರ್ಮಿಟ್ ನೀಡಿಕೆಗೆ ಸಂಬಂಧಪಟ್ಟ ಕಾಗದ ಪತ್ರಗಳನ್ನು ಸಭೆಯ ಮುಂದೆ ಇಡುವದಾದರೆ ನಾನು ತೋರಿಸಿಕೊಡುತ್ತೇನೆ, ಶಾಸಕರ ಸಿಫಾರಸಿನ ಮೇಲೆ ಪರ್ಮಿಟ್‌ಗಳನ್ನು ಕೊಟ್ಟಿದೆ ಮತ್ತು ಶಾಸಕರ ಸಂಬಂಧಿಕರಿಗೆ ಆ ಪರ್ಮಿಟ್‌ಗಳು ಸಿಕ್ಕಿವೆ ಮತ್ತು ಒಂದೊಂದು ಪರ್ಮಿಟ್ ತೆಗೆದುಕೊಂಡಾಗಲೂ ಒಂದು ಕ್ವಿಂಟಾಲ್ ಅಕ್ಕಿಗೆ ಐದು ರೂಪಾಯಿಗಳಿಂದ ಹತ್ತು ರೂಪಾಯಿಗಳವರೆಗೆ ಪರ್ಮಿಟ್ ಕೊಡಿಸಿದವರಿಗೆ ದಕ್ಕಿದೆ.

ಶ್ರೀ ಬಿ. ವಿ. ಕಕ್ಕಿಲ್ಲಾಯ.— ಮಾನ್ಯ ಎದುರು ಪಕ್ಷದ ನಾಯಕರು ದಕ್ಷಿಣ ಕನ್ನಡ ಜಿಲ್ಲೆಯ ಶಾಸಕರು ಎಂದು ಹೇಳಿದರು. ನಾನೂ ಕೂಡ ಅಲ್ಲಿಂದಲೇ ಆರಿಸಿ ಬಂದಿದ್ದೇನೆ. ಯಾರ ಮೇಲಾದರೂ ಅಪಾದನೆ ಇದ್ದರೆ ಇಂಥವರ ಮೇಲೆ ಎಂದು ಸ್ಪಷ್ಟವಾಗಿ ಹೇಳಬೇಕು, ಇಲ್ಲದೆ ಹೋದರೆ ನಾನು ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ. ಈ ಬಗ್ಗೆ ಸ್ಪಷ್ಟೀಕರಣ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಎಚ್ ಟಿ. ಕೃಷ್ಣಪ್ಪ.— ನನಗೆ ಬಂದಿರುವ ವರ್ತಮಾನದ ಪ್ರಕಾರ ಆಡಳಿತ ಕಾಂಗ್ರೆಸ್ಸಿಗೆ ಸೇರಿದ ಕೆಲವು ಶಾಸಕರು, ಎಲ್ಲರೂ ಎಂದು ಹೇಳುವುದಿಲ್ಲ, ಈ ಪರಿಸ್ಥಿತಿಯ ದುರ್ಲಾಭವನ್ನು ಮಾಡಿಕೊಂಡಿದ್ದಾರೆ, ಅವರ ಸಿಫಾರಸಿನ ಮೇಲೆ ಪರ್ಮಿಟ್‌ಗಳು ದೊರಕಿವೆ ಮತ್ತು ಪರ್ಮಿಟ್ ಕೊಡಿಸುವಾಗಲೂ ಸಹ ಒಂದು ಕ್ವಿಂಟಾಲಿಗೆ ಇಷ್ಟು ಎಂದು ಹಣ ಸಂಗ್ರಹಿಸಿದ್ದಾರೆ. ಇದನ್ನು ನಾನು ರುಜುವಾತು ಮಾಡಿಕೊಡಬಲ್ಲೆ. ಸಂಬಂಧಪಟ್ಟ ಪತ್ರಗಳನ್ನು ಸಭೆಯ ಮುಂದೆ ಇಡಲಿ, ಯಾವ ಶಾಸಕರು ಮಾಡಿದ ಸಿಫಾರಸಿನ ಮೇಲೆ ಪರ್ಮಿಟ್‌ಗಳು ಸಿಕ್ಕಿವೆ ಎನ್ನುವುದು ಸಭೆಗೆ ಗೊತ್ತಾಗುತ್ತದೆ. ನಮ್ಮ ಕಡೆಯವರೇ ಆಗಲೀ, ನಿಮ್ಮ ಕಡೆಯವರೇ ಆಗಲೀ ಇಂಥ ದಾರುಣವಾದ ಪರಿಸ್ಥಿತಿಯಲ್ಲಿ ಬಡಬಗ್ಗರು ಅರಹೊಟ್ಟೆ ತಿಂದು ಬಾಳತಕ್ಕ ಸಂದರ್ಭದಲ್ಲಿ ಇಂಥ ಸಮಾಜ ಘಾತುಕ ಶಕ್ತಿಗಳನ್ನು ಪೋಷಿಸತಕ್ಕದ್ದು ಖಂಡನೀಯ.

ಅಂತರಜಿಲಾ ಸಾಗಾಣಿಕೆಯ ಪ್ರತಿಭಂಧಕವನ್ನು ಈಗಲಾದರೂ ತೆಗೆದು ಹಾಕಬೇಕು ಅದರಿಂದ ಯಾವ ವಿಧವಾದ ತೊಂದರೆಯೂ ಆಗುವುದಿಲ್ಲ. ಸರ್ಕಾರ ಇದನ್ನು ಪ್ರತಿಷ್ಠೆಯ ಪ್ರಶ್ನೆ ಎಂದು ತೆಗೆದುಕೊಳ್ಳಬಾರದು. ಯಾವ ಒಂದು ನೀತಿಯೇ ಆಗಲೀ ಒಳ್ಳೆಯದಕ್ಕಿಂತ ಕೆಟ್ಟದ್ದು ಎಂದು ಮನದಟ್ಟಾದಾಗಲೂ ಕೂಡ ಅಂಥ ನೀತಿಯನ್ನು ಬದಲಾವಣೆ ಮಾಡಿಕೊಂಡರೆ ತಮ್ಮ ತಪ್ಪನ್ನು ಒಪ್ಪಿಕೊಂಡ ಹಾಗೆ ಆಗುತ್ತದೆ ಎನ್ನುವ ತಪ್ಪು ಕಲ್ಪನೆಯನ್ನು ತೊರೆದು ಈಗಲಾದರೂ ಆ ನೀತಿಯನ್ನು ಬದಲಾವಣೆ ಮಾಡಿಕೊಳ್ಳಬೇಕು.

ಶ್ರೀ ಡಿ. ದೇವರಾಜ ಅರಸ್.— ಮಂಡ್ಯ ಜಿಲ್ಲೆಯಲ್ಲಿ ಸಾಕಷ್ಟು ಭತ್ತ ವಿದೆಯೋ ?

ಶ್ರೀ ಎಚ್. ಟಿ. ಕೃಷ್ಣಪ್ಪ.— ಇರಲಾರದು, ಕಾರಣ ದರಗಳು ಏರಿವೆ.

ರಾಜ್ಯದ ಒಂದು ಭಾಗದಲ್ಲಿ ಒಂದೂವರೆ ರೂಪಾಯಿಗೆ ಮಾರಾಟವಾಗುವಾಗ ಇನ್ನೊಂದು ಕಡೆ ಎರಡೂವರೆ ರೂಪಾಯಿಗೆ ಮಾರುವುದು ಸರಿಯಾದ ರೀತಿಯಲ್ಲ. ರಾಜ್ಯವನ್ನು ಒಂದು ಕುಟುಂಬವೆಂದು ಪರಿಗಣಿಸಬೇಕು. ಯಾವುದೋ ಒಂದು ಭಾಗಕ್ಕೆ ಸಹಾಯ ಮಾಡತಕ್ಕ ಪ್ರಯತ್ನ ಮಾಡುವುದು ಸರಿಯಲ್ಲ. ಆದುದರಿಂದ ಅಂತರಜಿಲ್ಲಾ ಸಾಗಾಣಿಕೆಯ ಪ್ರತಿಬಂಧಕವನ್ನು, ಆಹಾರ ಪರಿಸ್ಥಿತಿ ಸುಧಾರಿಸಬೇಕಾದರೆ, ತೆಗೆಯಬೇಕೆಂದು ನಾನು ಮಾನ್ಯ ಮುಖ್ಯ ಮಂತ್ರಿಯವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಯಾವತ್ತಿಗೂ ಸರ್ಕಾರ ಯಾವ ವಸ್ತುವಿನ ವಿಚಾರದಲ್ಲಿ ಒಂದು ನಿಯಂತ್ರಣ ಮಾಡುವುದಕ್ಕೆ ಹೊರಟರೆ, ಹತೋಟಿ ಮಾಡುವುದಕ್ಕೆ ಹೊರಟರೆ ಸ್ವಭಾವಿಕವಾಗಿ ಅಕ್ರಮ ದಾಸ್ತಾನು ಮಾಡತಕ್ಕ ಪ್ರವೃತ್ತಿ ಜನಗಳಲ್ಲಿ ಬೆಳೆಯುತ್ತದೆ. ಇದು ಮನುಷ್ಯ ಸ್ವಭಾವದ ಪ್ರಶ್ನೆ. ಬಹಳ ಕಷ್ಟವಾಗಿದೆ, ಬಹಳ ಕಷ್ಟವಾಗಿದೆ. ಆಹಾರ ಧಾನ್ಯಗಳು ಸಿಕ್ಕುವುದು ಕಷ್ಟ ಎಂದು ನೀವೇ ಹೇಳಿದ್ದು. ಮನಸ್ವೇಚ್ಛೆಯಾಗಿ ಮಾತನಾಡುವುದನ್ನು ಬಹಳ ಕಷ್ಟಪಟ್ಟು ತಡೆದುಕೊಳ್ಳಬೇಕು ಎಂದು ನಾನು ಹೇಳುತ್ತೇನೆ. ಎಷ್ಟೋ ಸಲ ಆಹಾರ ಧಾನ್ಯಗಳು ಸಿಕ್ಕುವದಿಲ್ಲ, ಮುಂದೆ ಕಷ್ಟವಾಗುತ್ತದೆ ಎಂದು ಹೇಳಿದ್ದೀರಿ. ಆಹಾರ ಧಾನ್ಯಗಳು ಸಿಕ್ಕುವುದಿಲ್ಲವೆಂದು ಸರ್ಕಾರದ ವತಿಯಿಂದಲೇ ಬಂದಾಗ ಹತ್ತು ಸೇರು ಇಟ್ಟುಕೊಳ್ಳುವವನು ಒಂದು ಕ್ವಿಂಟಾಲ್ ಅಕ್ಕಿಯನ್ನು ಇಟ್ಟುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾನೆ, ತಾನು ಬದುಕುವುದಕ್ಕೆ ಪ್ರಯತ್ನ ಮಾಡುತ್ತಾನೆ. ಬೇರೆಯವರು ಹೇಗಾದರೂ ಇರಲಿ, ತಾನು ಬದುಕಬೇಕು ಎನ್ನುವ ಪ್ರಯತ್ನ ಮಾಡುತ್ತಾನೆ. ಅಂಥ ಪ್ರವೃತ್ತಿ ಜನಗಳಲ್ಲಿ ಬೆಳೆಸತಕ್ಕ ಮಾತುಗಳನ್ನು ಸರ್ಕಾರದ ವತಿಯಿಂದ ಯಾರೂ ಆಡಬಾರದು ಮತ್ತು ಮುಂದೆ ಬರತಕ್ಕ ದಿವಸಗಳು ಬಹಳ ಕಷ್ಟ ದಿವಸಗಳು ಎಂದೂ ಹೇಳಬಾರದು. ಅಂಥ ಮಾತುಗಳನ್ನು ಆಡಬಾರದು ಇದರಿಂದ ಕೃತಕ ಅಭಾವ ಉಂಟಾಗುತ್ತದೆ. ಆ ರೀತಿ ಆಗುವುದಕ್ಕೆ ಅವಕಾಶವಾಗುವಂಥ ಮಾತುಗಳನ್ನು ಹೇಳಬಾರದು ಎಂದು ಪ್ರಾರ್ಥನೆ ಮಾಡಿಕೊಳ್ಳುತೇನೆ.

ತಾಲ್ಲೂಕ್ ಮಟ್ಟದಲ್ಲಿ ರಚನೆ ಮಾಡಿರತಕ್ಕ ಆಹಾರ ಸಮಿತಿಯಲ್ಲಿ ನಿಮ್ಮ ಪಕ್ಷದವರನ್ನೇ ಹಾಕಿದ್ದೀರಿ. ಹಿಂದೆ ಯಾವುದಾದರೂ ಸಮಿತಿಯನ್ನು ತಾಲ್ಲೂಕ್ ಮಟ್ಟದಲ್ಲಿ ಅಥವಾ ಜಿಲ್ಲಾ ಮಟ್ಟದಲ್ಲಿ ಆಗಲೀ ರಚನೆ ಮಾಡುವಾಗ ಒಂದು ಸಂಪ್ರದಾಯವನ್ನು ಅನುಸರಿಸುತ್ತಿದ್ದರು, ಅದೇನೆಂದರೆ ತಹಶೀಲ್ದಾರರು ಜಿಲ್ಲಾ ಅಧಿಕಾರಿಗಳು ಪಟ್ಟಿಯನ್ನು ತರಿಸಿಕೊಂಡು ಆ ಪಟ್ಟಿಯಲ್ಲಿ ನಮೂದು ಆಗಿರುವ ಸದಸ್ಯರನ್ನು ನೇಮಕ ಮಾಡುತ್ತಿದ್ದರು. ಒಂದು ವೇಳೆ ಒಂದೆರಡು ಬದಲಾವಣೆಗಳು ಆಗಬೇಕಾದರೂ ಸಹ ಆಯಾಯಾ ತಹಶೀಲ್ದಾರರು, ಜಿಲ್ಲಾಧಿಕಾರಿಗಳನ್ನೇ ಪುನಃ ಕೇಳಿ ಬದ

ಲಾವಣೆಗಳನ್ನು ಮಾಡುತ್ತಿದ್ದರು. ಈಗ ಏನಾಗಿದೆ ಒಂದೇ ಪಕ್ಷಕ್ಕೆ ಸೇರಿದ ಜನಗಳನ್ನು ಸಮಿತಿ ಸದಸ್ಯರನ್ನಾಗಿ ಮಾಡಿದ್ದಾರೆ. ಕೆಲವು ಜನಗಳು ಯೋಗ್ಯತೆಯನ್ನು ನಾವು ಅಳಿಯುವುದಾದರೆ ಒಂದೇ ವ್ಯತ್ಯಾಸ ಕಾಣತಕ್ಕಂಥವರು ಅವರು ಸಹ ಹೆಚ್ಚಾಗಿ ಊಟ ಮಾಡುತ್ತಾರೆ ಎನ್ನುವುದು ಬಿಟ್ಟರೆ, ಏನೂ ಸೂಕ್ಷ್ಮದರ್ಶಕ ಯಂತ್ರವನ್ನು ಹಾಕಿಕೊಂಡು ನೋಡಿದರೆ ಯಾವ ವಿಧವಾದ ವ್ಯತ್ಯಾಸವನ್ನು ಕಾಣುವುದಕ್ಕೆ ಸಾಧ್ಯವಿಲ್ಲ. ಇಂಥ ಸಮಿತಿಗಳಿಂದ ಆಯಾಯಾ ತಾಲೂಕುಗಳ ಜನಗಳ ಬವಣೆ ನೀಗುತ್ತದೆಂದು ಇಟ್ಟುಕೊಂಡಿದ್ದರೆ ಖಂಡಿತ ಅದು ತಪ್ಪು ಭಾವನೆ ಎಂದು ಸ್ಪಷ್ಟವಾಗಿ ಹೇಳಬಯಸುತ್ತೇನೆ

3–00 P. M.

ಇನ್ನು ಮುಖ್ಯಮಂತ್ರಿಗಳು ಆಹಾರದ ವಿಚಾರದಲ್ಲಿ ಹೇಳಿಕೆಯನ್ನು ಕೊಡುತ್ತಾ ಆಹಾರದ ವಸ್ತುಸ್ಥಿತಿ ಏನು ಎನ್ನುವ ಸ್ಪಷ್ಟವಾದ ಚಿತ್ರವನ್ನು ಕೊಟ್ಟಿಲ್ಲ. ಸಧ್ಯದಲ್ಲಿ ನಮಗೆ ಬೇಕಾಗಿರತಕ್ಕ ವಸ್ತುಗಳು ಎಷ್ಟು ನಮ್ಮಲ್ಲಿ ಎಷ್ಟು ಆಹಾರ ಇದೆ ಸಾಲದೇ ಇದ್ದರೆ ಎಷ್ಟು ಸಾಲದೇ ಬರುತ್ತದೆ, ಸಾಲದೇ ಬರುವ ಆಹಾರವನ್ನು ಪೂರೈಸುವಂಥ ಸಾಧನೆಗಳು ಏನು ಎನ್ನುವ ಬಗ್ಗೆ ಅವರು ನಮಗೆ ಪೂರ್ಣ ಮಾಹಿತಿಯನ್ನು ಕೊಟ್ಟಿಲ್ಲ ನಾವು ಕೇಳಿದಂಥ ಮುಖ್ಯ ಪ್ರಶ್ನೆ. ಅದು ಅದಕ್ಕೆ ನೇರವಾಗಿ ಉತ್ತರ ಅವರ ಹೇಳಿಕೆಯಲ್ಲಿ ದೊರೆಯುತ್ತಾ ಇಲ್ಲ. ಮಾನ್ಯ ಮುಖ್ಯಮಂತ್ರಿಗಳು ಒಂದು ಕಡೆ ಭಾಷಣ ಮಾಡುತ್ತಾ ಆಹಾರ ಧಾನ್ಯಗಳ ಬೆಲೆ ಏರಿಕೆಯನ್ನು ತಡೆಯುವುದಕ್ಕೆ ಒಂದು ಸಿಧ್ಧಾಂತದ ಹೇಳಿದ್ದಾರೆ ಏನಂದರೆ ಯಾವ ಪದಾರ್ಥದ ಬೆಲೆ ಹೆಚ್ಚಾಗಿದೆಯೋ ಆ ಪದಾರ್ಥವನ್ನು ಕೊಂಡುಕೊಳ್ಳಬೇಡಿ ಎಂದು. ಇದು ಬಹಳ ಉತ್ತಮವಾದ ಸಲಹೆ. ಆದರೆ ಔಷಧಿ ಬೇಕು ಅದನ್ನು ಕೊಂಡುಕೊಳ್ಳಬೇಡಿ ಎಂದರೆ ಇದು ಬಹಳ ವಿಚಿತ್ರವಾದ ವಾದ. ಪದಾರ್ಥಗಳು ಎಷ್ಟು ಅವಶ್ಯಕತೆ ಇದೆಯೋ ಅಷ್ಟು ಅವಶ್ಯಕತೆಯನ್ನು ಪೂರೈಸತಕ್ಕ ಒಂದು ಪರಿಸ್ಥಿತಿಯನ್ನು ಉಂಟುಮಾಡುವುದು ಸರ್ಕಾರದ ಕರ್ತವ್ಯ. ಚಿಕ್ಕಮಂಗಳೂರಿನಲ್ಲಿ ಭಾಷಣ ಮಾಡುತ್ತಾ ಬೆಲೆ ಏರಿದೆ ಆ ವಸ್ತುವನ್ನು ಕೊಂಡುಕೊಳ್ಳಬೇಡಿ ಎಂದು ಹೇಳಿದರು ಬಟ್ಟೆ ಬೆಲೆ ಏರಿದರೆ ಬಟ್ಟೆ ಕೊಂಡುಕೊಳ್ಳಬೇಡಿ ಎಂದು ಹೇಳುವುದು ಬಹಳ ಸುಲಭ. ೨೫ ವರ್ಷಗಳ ಕಾಲದಲ್ಲಿ ಯಾವ ಮುಖ್ಯಮಂತ್ರಿಗಳು ಈ ಸಿಧ್ಧಾಂತದವನ್ನು ಕೊಟ್ಟಿರಲಿಲ್ಲ. ತಾವು ಈ ರೀತಿ ಹೇಳುವುದರ ಬದಲು ಜೀವನಾವಶ್ಯಕ ವಸ್ತುಗಳ ಕನಿಷ್ಟ ಪ್ರಮಾಣದಲ್ಲಿ ಪ್ರತಿಯೊಬ್ಬರಿಗೂ ದೊರೆಯುವಂತೆ ಏರ್ಪಾಡು ಮಾಡಬೇಕು. ಅದು ನಿಮ್ಮ ಹೇಳಿಕೆಯಲ್ಲಿ ಇರತಕ್ಕ ಒಂದು ನ್ಯೂನ್ಯತೆ. ಏನು ಒಂದು ಕೊರತೆ ಇದೆ ಅದನ್ನು ನೀಗಿಸುವುದಕ್ಕೆ ಪ್ರಯತ್ನ ಮಾಡಿದ್ದೀರಾ ಎಂದು ದಯವಿಟ್ಟು ತಿಳಿಸಬೇಕು. ಇಷ್ಟು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಸ್. ಎಂ. ಶಿರನಾಳಿ ಚಂದ್ರಶೇಖರ್, (ಹೊಸನಗರ) — ಸನ್ಮಾನ್ಯ ಅಧ್ಯಕ್ಷರೇ, ನಾನು ಮಾತನಾಡುವುದಕ್ಕೆ ಮೊದಲು ನಮ್ಮ ಮುಖ್ಯಮಂತ್ರಿಗಳಾದ

ನೆಚ್ಚಿನ ನಾಯಕರಾದ ದೇವರಾಜ ಅರಸರವರು ಆಹಾರದ ಸಮಸ್ಯೆಯ ಹೇಳಿಕೆ ಕೊಟ್ಟಿರುವುದರ ಬಗ್ಗೆ ಅಭಿನಂದಿಸಿ ನನ್ನ ಮಾತನ್ನು ಮುಂದುವರಿಸುತ್ತೇನೆ. ಮಾನ್ಯ ರಾಜಶೇಖರ ಮೂರ್ತಿಯವರು ಮಾತನಾಡುವಾಗ ಕೆಲವು ವಿಚಾರಗಳನ್ನು ಈ ಸದನದ ಮುಂದೆ ಇಟ್ಟರು. ಅವರು ಮಾತನಾಡಿದ ನಂತರ ನಾನು ಅವರನ್ನು ಒಂದು ಪ್ರಶ್ನೆ ಕೇಳಿದೆ. ಅದಕ್ಕೆ ಅವರು ಸತ್ಯವನ್ನು ಯಾರು ಹೇಳಿದರೂ ಕೂಡ ಅದನ್ನು ತೆಗೆದುಕೊಳ್ಳಬೇಕು ಎಂದು ಹೇಳಿದರು ಅದಕ್ಕೆ ನನ್ನ ಅಭಿನಂದನೆ. ಶ್ರೀ ಮುರಾರ್ಜಿ ದೇಸಾಯಿ ಮತ್ತು ಎಸ್. ಕೆ. ಪಾಟೀಲ್‌ರವರ ಭಾಷಣವನ್ನು ನಾನು ಮೊದಲಿನಿಂದ ಕೊನೆಯವರೆಗೂ, ರಾತ್ರಿ ೧೦ ಗಂಟೆಯವರೆಗೂ ಕೇಳಿಕೊಂಡು ಬಂದಿದ್ದೇವೆ. ಆ ಅಭಿಪ್ರಾಯವನ್ನು ಇವತ್ತು ಅವರು ಸದನದ ಮುಂದೆ ಪ್ರತಿಬಿಂಬಿಸಿ ದ್ದಾರೆ. ಮಾನ್ಯ ರಾಜಶೇಖರ ಮೂರ್ತಿಯವರಿಗೆ ನನ್ನ ಅಭಿನಂದನೆ. ಆದರೆ ಇವತ್ತು ಅವರ ನಾಯಕರು ಮತ್ತು ಅವರ ಪಕ್ಷದವರು ಕೂಡ ಸ್ವತಂತ್ರ ಪಕ್ಷದ ರೀತಿಯಲ್ಲಿ ಮಾತನಾಡಲಿಕ್ಕೆ ಹೊರಟಿದ್ದಾರೆ ಅದಕ್ಕೆ ನನ್ನ ಸಹಭಾಗಿತ್ವ ಇದೆ. ಏನು ಕಾಂಗ್ರೆಸ್ ಶಬ್ದ ಇದೆ ಅದನ್ನು ಬಿಟ್ಟರೆ ವಾಸಿಯೇನೋ ಎಂದು ನನಗನ್ನಿಸುತ್ತದೆ. ಮಾನ್ಯ ರಾಜಶೇಖರ ಮೂರ್ತಿಯವರು, ನಮಗೆ ಜಪಾನ, ಜರ್ಮನಿ, ಆಸ್ಟ್ರೇಲಿಯಾ ಮೊದ ಲಾದ ಅನೇಕ ದೇಶಗಳನ್ನು ನಮಗೆ ವಿಹಂಗಮ ನೋಟವನ್ನು ತೋರಿಸಿ ಪ್ರಪಂಚ ಸುತ್ತಿಸಿ ಬಂದರು. ಆ ಚಿತ್ರವನ್ನು ಈ ಸದನದಲ್ಲಿ ಕೊಡುವಾಗ ಒಂದು ಚಿತ್ರ ಮರೆತರು ಎಂದು ಕಾಣುತ್ತದೆ. ಎರಡನೆಯ ಮಹಾಯುದ್ಧ ನಂತರ ಅಲೈಡ್ ನೇಷನ್ ಎಂದು ಏನು ಇದೆ ಫ್ರಾನ್ಸ್, ಇಂಗ್ಲೆಂಡ್ ಮತ್ತು ಅಮೇರಿಕಾ ಈ ದೇಶ ಗಳ ಜವಾಬ್ದಾರಿ ಪಶ್ಚಿಮ ಜರ್ಮನಿ ಮತ್ತು ಜಪಾನ ಆರ್ಥಿಕ ಅಭಿವೃದ್ಧಿ ಬಗ್ಗೆ ಅವರ ಸಂಪೂರ್ಣ ಜವಾಬ್ದಾರಿ ಇತ್ತು ಎನ್ನುವುದು ರಾಜಶೇಖರ ಮೂರ್ತಿಯವರು ಮರೆ ತರು ಎಂದು ಕಾಣುತ್ತದೆ. ಅವರಿಗೆ ಕೊಟ್ಟಂಥ ಆರ್ಥಿಕ ನೆರವು ಭಾರತಕ್ಕೆ ಸಿಕ್ಕಿರತಕ್ಕ ಆರ್ಥಿಕ ನೆರವನ್ನು ತುಲನೆ ಮಾಡಿ ನೋಡಿದರೆ ಎಷ್ಟು ಸಾಧನೆ ಮಾಡಿರುವುದು ಹೆಚ್ಚಿನದು ಎಂದು ರಾಜಶೇಖರ ಮೂರ್ತಿಯವರು ಒಪ್ಪುತ್ತಾರೆಂದು ನಾನು ತಿಳಿದು ಕೊಂಡಿದ್ದೇನೆ.

ಇವತ್ತು ನಮ್ಮ ರಾಜಕೀಯ ಸಿದ್ಧಾಂತವನ್ನಾಗಲೀ ಅಥವಾ ನಮ್ಮ ಸರ್ಕಾರ ಅಮೇರಿಕಾ ಮಾರ್ಕೆಟಿನಲ್ಲಿ ಹೋಗದೇ ಇರತಕ್ಕ ಬಗ್ಗೆಯಾಗಲೀ ರಾಜಶೇಖರ ಮೂರ್ತಿಯವರು ಹೇಳಿರುವ ಮಾತನ್ನು ಪುನರಾವರ್ತನೆ ಮಾಡಿ ಹೇಳಲಿಕ್ಕೆ ಬಯಸು ತ್ತೇನೆ. ಯಾವ ಕಾರಣಕ್ಕಾಗಿ ಅಮೇರಿಕಾ ಮಾರ್ಕೆಟ್‌ಗೆ ಹೋಗಲಿಲ್ಲ ಯಾತಕ್ಕೆ ತಗ್ಗಿ ಸಲಾಮ್ ಹಾಕಲಿಲ್ಲ ಎಂದು ರಾಜಶೇಖರ ಮೂರ್ತಿಯವರು ಅರ್ಥಮಾಡಿ ಕೊಳ್ಳಲಿಲ್ಲ. ಒಂದು ಹೊತ್ತು ಊಟ ಇಲ್ಲದಿದ್ದರೂ ಚಿಂತೆ ಇಲ್ಲ. ನಾವು ಮಾನ ಮರ್ಯಾದೆಯಿಂದ ಬಾಳಬೇಕು. ನಾವು ಅವರ ಹತ್ತಿರ ಬೆಗ್ಗಿಂಗ್ ಬಾಲ್ ಹಿಡಿದು ಕೊಂಡು ಹೋಗಲಿಲ್ಲ ಎನ್ನುವುದನ್ನು ಮರೆಯಬಾರದು. ಬಂಗಾಲ ದೇಶದ ಪ್ರಶ್ನೆ ಬಂದಾಗ ಅಮೇರಿಕಾದವರು ಹೇಳಿದ ರೀತಿಯನ್ನು ನಾವು ಅನುಸರಿಸಿಕೊಂಡು

ಹೋಗಿದ್ದರೆ, ಕೋಟಿಗಟ್ಟಲೆ ಡಾಲರ್ ಸಿಗುತ್ತಿತ್ತು ಆಹಾರ ಸಿಗುತ್ತಿತ್ತು ಹೋಗಲಿಲ್ಲ ಅವರ ಅಸೀತಿಯನ್ನು ಒಪ್ಪಲಿಲ್ಲ. ಒಪ್ಪದೇ ಇರುವ ಕಾರಣಕ್ಕಾಗಿ ಅಮೇರಿಕಾದಿಂದ ಏನು ಸಿಗಬೇಕಾಗಿತ್ತೋ ಆ ಸಹಾಯ ನಮಗೆ ಸಿಗಲಿಲ್ಲ ಎನ್ನುವ ಮಾತನ್ನು ರಾಜಶೇಖರ ಮೂರ್ತಿಯವರು ವರೆತಿದ್ದಾರೆ. ನಮ್ಮ ದೇಶ ಮಾನ ಮರ್ಯಾದೆಯನ್ನು ಮಾರಾಟ ಮಾಡಿಕೊಂಡು ಒಪ್ಪತ್ತು ಊಟ ಮಾಡಬೇಕೆಂದು ಸಂಸ್ಥಾ ಕಾಂಗ್ರೆಸ್ ಮಿತ್ರರು ಹೇಳುವುದಾದರೆ ನಾನು ಶಹಬಾಶ್‌ಗಿರಿ ಕೊಡುತ್ತೇನೆ ಅದಕ್ಕೆ ನಾನು ಏನೂ ಯೋಚನೆ ಮಾಡುವುದಿಲ್ಲ. ಇವತ್ತು ನಾವು ಸಂಸಾರವಲ್ಲಿ ಮರ್ಯಾದಸ್ಥರು ಹೇಳುವುದಾದರೆ ನಮಗೆ ಮಾನ ಮರ್ಯಾದೆ ಮುಖ್ಯ. ನಮ್ಮ ಪಕ್ಷದ ಮನೆಯಲ್ಲಿ ಶ್ರೀಮಂತರು ಇದ್ದರೆ ಅವರಿಗೆ ಬೂಟ್ ಪಾಲಿಶ್ ಮಾಡಿ ಊಟ ಮಾಡುವುದಕ್ಕೆ ಬಯಸುವುದಿಲ್ಲ.

ಒಬ್ಬ ಮರ್ಯಾದಸ್ಥ ಕುಟುಂಬದ ಬಡವನು ಹೇಳುತ್ತಾನೆ. ಗಂಜಿ ಕುಡಿದರೂ ಚಿಂತೆಯಿಲ್ಲ ಶ್ರೀಮಂತನ ಮನೆ ಬಾಗಿಲಿಗೆ ಹೋಗಿ ಬೂಟ್ ಪಾಲಿಶ್ ಮಾಡುವುದಕ್ಕೆ ಹೋಗುವುದಿಲ್ಲ ಎಂದು. ಅಂಥ ನೀತಿಯನ್ನು ನಮ್ಮ ಸರ್ಕಾರ ಅನುಸರಿಸುತ್ತಿದೆ ಎನ್ನುವ ಮಾತನ್ನು ರಾಜಶೇಖರ ಮೂರ್ತಿಯವರು ಜರೆತಿದ್ದಾರೆ. ಇನ್ನು ಮಾನ್ಯ ರಾಜಶೇಖರ ಮೂರ್ತಿಯವರು ಸೊಸೈಟಿಗಳ ವಿಚಾರದಲ್ಲಿ ಹೇಳಿದರು. ಸೊಸೈಟಿಗಳವರು ಏನು ಆಹಾರ ಪದಾರ್ಥಗಳನ್ನು ತೆಗೆದುಕೊಂಡು ಹೋಗುತ್ತಾರೆ ಅವನ್ನು ಹಂಚುವುದಿಲ್ಲ. ಅದನ್ನು ಪೂರಾ ಟೌನ್‌ನಲ್ಲಿರುವ ಹೋಟೆಲ್‌ಗಳಿಗೆ ಮಾರಾಟ ಮಾಡಿಕೊಂಡು ಹೋಗುತ್ತಾರೆ. ಸಾಮಾನ್ಯ ಮನುಷ್ಯನಿಗೆ ತಲುಪುವುದಿಲ್ಲ ಎಂದು. ಆದರೆ ಸೊಸೈಟಿ ಅಧಿಕಾರದಲ್ಲಿ ಇರುವ ಜನ ಯಾರು? ಎನ್ನುವುದಕ್ಕೆ ಉತ್ತರ ಕೊಡಬೇಕು. ನಿಮ್ಮ ಪಕ್ಷದವರೇ ಎಂದು ನನ್ನ ಅಭಿಪ್ರಾಯ ಸೊಸೈಟಿಯಲ್ಲಿ ಸಂಸ್ಥಾ ಕಾಂಗ್ರೆಸ್ಸಿನವರೇ ಅಧ್ಯಕ್ಷರು ಇರುವುದು ಸೊಸೈಟಿಯಲ್ಲಿ ಮಾಡುವ ದುರ್ವ್ಯವಹಾರವನ್ನು ಅವರೇ ಒಪ್ಪಿಕೊಂಡಿರುವುದಕ್ಕೆ ನಾನು ಶಹಭಾಶಗಿರಿ ಕೊಡುತ್ತೇನೆ. ವ್ಯಾಪಾರಸ್ಥರ ಬಗ್ಗೆ ಬಡವರನ್ನು ಶೋಷಣೆ ಮಾಡುವ ಬಗ್ಗೆ ಕೂಡ ಅವರು ಕೆಲವು ಮಾತನ್ನು ಹೇಳಿದರು. ಇವತ್ತು ದೇಶದಲ್ಲಿರತಕ್ಕ ವ್ಯಾಪಾರಸ್ಥರು ೧೦೦ಕ್ಕೆ ೭೦ ಭಾಗ ಸಂಸ್ಥಾ ಕಾಂಗ್ರೆಸ್, ೩೦ ಭಾಗ ಜನಸಂಘದವರು.

ಶ್ರೀ ಎಚ್. ಟಿ. ಕೃಷ್ಣಪ್ಪ.—ಮಾತನಾಡುತ್ತಾ ರೈಲು ಬಿಟ್ಟು ಹೋಗಬೇಡಿ.

ಶ್ರೀ ಟಿ. ಎಂ. ಮಂಜುನಾಥ.— ೭೦ ಭಾಗ ಸಂಸ್ಥಾ ಕಾಂಗ್ರೆಸ್‌ನವರೇ ವ್ಯಾಪಾರಸ್ಥರು ಇದ್ದಾರೆ ಎಂದು ಹೇಗೆ ಹೇಳುತ್ತೀರಿ. ಇಂಥ ವಿಷಯದ ಬಗ್ಗೆ ಮಾತನಾಡುವುದು ಸರಿಯಲ್ಲ.

ಶ್ರೀ ಶೀರಾನಾಳಿ ಚಂದ್ರಶೇಖರ್.— ಬಡವರನ್ನು ವ್ಯಾಪಾರಗಾರರು ಶೋಷಣೆ ಮಾಡುತ್ತಿದ್ದಾರೆ ಎನ್ನುವುದು ನಾನು ಹೇಳಿದ ಮಾತಿನ ಅರ್ಥ.

ಶ್ರೀ ಟಿ ಎಂ. ಮಂಜುನಾಥ.— ಬಾಯಿಗೆ ಬಂದ ಹಾಗೆ ಮಾತನಾಡಿದರೆ ಹೇಗೆ.? ಏನಾದರೂ ಆಧಾರವಿದ್ದರೆ ಹೇಳಲಿ.

ಶ್ರೀ ಡಿ. ದೇವರಾಜ್ ಅರಸ್.— ಸಾವಧಾನದಿಂದ ಕೂತುಕೊಂಡು ಕೇಳಿ.

ಶ್ರೀ ಟಿ. ಎಂ. ಮಂಜುನಾಥ.— ೭೦ ಭಾಗ ವ್ಯಾಪಾರಸ್ಥರು ಸಂಸ್ಥಾ ಕಾಂಗ್ರೆಸ್‌ನವರಿದ್ದಾರೆ, ಅವರಿಂದ ಅವ್ಯವಹಾರ ನಡೆಯುತ್ತದೆ ಎಂದು ಹೇಳಿದರು.

ಶ್ರೀ ಡಿ. ದೇವರಾಜ ಅರಸ.— ನಮ್ಮಲ್ಲಿ ಜಮೀನುದಾರರು ಇದ್ದಾರೆ ಎಂದು ಹೇಳಿದಾಗ ನಿಮ್ಮ ಕಿವಿಗೆ ಅದು ಬಹಳ ಚನ್ನಾಗಿ ಇತ್ತೋ? ಇದನ್ನೂ ಹಾಗೆಯೇ ಕೇಳಿ.

ಶ್ರೀ ಟಿ. ಎಂ. ಮಂಜುನಾಥ.— ನಮಗೆ ಸಂಬಂಧಪಟ್ಟವರಿಗೆ ಪರ್ಮಿಟ್ ಕೊಟ್ಟಿದ್ದಾರೆಂದು ಹೇಳಿದರು.

ಅಧ್ಯಕ್ಷರು.— ಮಾನ್ಯ ಸದಸ್ಯರು ಆ ರೀತಿ ನಡುವೆ ಎದ್ದು ಮಾತನಾಡಬಾರದು. ಅವರು ಮಾತನಾಡುವದನ್ನು ಕೇಳಿ, ತಾವು ಮಾತನಾಡುವಾಗ ಅದಕ್ಕೆ ಉತ್ತರ ಕೊಡಲು ಅವಕಾಶ ಇರುತ್ತದೆ.

ಶ್ರೀ ಡಿ ದೇವರಾಜ ಅರಸ.— ಮಾನ್ಯ ವಿರೋಧ ಪಕ್ಷದ ಸದಸ್ಯರು ಏನು ಹೇಳಿದರೂ ನಾವು ಶಾಂತಿಯಿಂದ ಕೇಳಿದ್ದೇವೆ ಅವರೂ ಅಷ್ಟೇ ಸೌಜನ್ಯವಿಟ್ಟುಕೊಂಡು ಗಂಭೀರವಾಗಿ ನಾವು ಹೇಳುವುದನ್ನು ಕೇಳಲಿ ಎಂದು ನನ್ನ ಪ್ರಾರ್ಥನೆ

ಶ್ರೀ ಶೀರನಾಳಿ ಚಂದ್ರಶೇಖರ.— ಇಂತಹ ಸೊಸೈಟಿಗಳ ಮತ್ತು ವ್ಯಾಪಾರಸ್ಥರ ಬಗ್ಗೆ ಅವರು ಏನು ಹೇಳಿದ್ದಾರೆ ಅದು ಅವರ ಪಕ್ಷದವಲ್ಲಿರತಕ್ಕ ಸೊಸೈಟಿ ಮತ್ತು ವ್ಯಾಪಾರಸ್ಥರು ಮಾಡಿರತಕ್ಕ ಅನ್ಯಾಯ ಮತ್ತು ಅನೀತಿಗಳ ಬಗ್ಗೆ ಅವರೇ ಹೇಳಿಕೊಂಡ ಹಾಗಾಯಿತು ಅದಕ್ಕೆ ನಾನು ಶಹಭಾಸಗಿರಿ ಕೊಡಲಿಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಎಚ್. ಟಿ. ಕೃಷ್ಣಪ್ಪ.— ಸರ್ಕಾರ ಏನು ಮಾಡುತ್ತಿದೆ? ಮಲಗಿತ್ತೋ?

ಶ್ರೀ ಶಿರನಾಳಿ ಚಂದ್ರಶೇಖರ.— ಮೊನ್ನೆತಾನೇ ಶಿವಮೊಗ್ಗದಲ್ಲಿ ಆಗಿರತಕ್ಕದ್ದನ್ನು ಹೇಳುತ್ತೇನೆ. ಮಂಡ್ಯದಲ್ಲಿ ಗಲಭೆ ಆದಾಗ ಶಿವಮೊಗ್ಗದಲ್ಲಿಯೂ ಅದೇ ರೀತಿ ಗಲಭೆ ನಡೆಯಬಹುದೆಂಬ ಗುಗುಡ ವ್ಯಾಪಾರಸ್ಥರಲ್ಲಿ ಶುರುವಾಯಿತು ಮತ್ತು ಅವರಿಗೆ ಗಾಬರಿ ಆಯಿತು. ಅವರು ಎಸ್. ಪಿ. ಮತ್ತು ಡಿ. ಸಿ. ಹತ್ತಿರ ಓಡಿ ಬಂದರು. ಎಸ್. ಪಿ. ಸಾಹೇಬರು ಮತ್ತು ಡೆಪ್ಯುಟಿ ಕಮಿಷನರರು, ಬುದ್ಧಿವಂತಿಕೆ ಉಪಯೋಗಿಸಿ ನಾವು ಗಲಭೆ ಆಗದಹಾಗೆ ನೋಡಿಕೊಳ್ಳುತ್ತೇವೆ, ನೀವು ಕೆ. ಜಿ. ಅಕ್ಕಿಗೆ ೫೦ ಪೈಸೆ ಇಳಿಸಿ ಎಂದರು. ವ್ಯಾಪಾರಸ್ಥರು ಹೆದರಿಕೆಯಿಂದ ೫೦ ಪೈಸೆ ಇಳಿಸಿದರು ವ್ಯಾಪಾರಸ್ಥರು ಏನಿದ್ದಾರೆ, ಅವರು ಏನು ಒಂದು ಅಭಾವವನ್ನು ನಿರ್ಮಾಣ ಮಾಡುತ್ತಾರೆ, ಅದು ಕೃತಕ ಸೃಷ್ಟಿಯೇ ಹೊರತು ನಿಜವಾದ ಅಭಾವವಲ್ಲ ಎನ್ನುವುದಕ್ಕೆ ನಿದರ್ಶನವನ್ನ ಹೇಳಲಿಕ್ಕೆ ಬಯಸುತ್ತೇನೆ. ನಮ್ಮಲ್ಲಿ ಒಂದು ಗಾದೆ

ಇದೆ. ಯಾರೋ ಒಬ್ಬರಿಗೆ ಗಡ್ಡಕ್ಕೆ ಬೆಂಕಿ ಹತ್ತಿಕೊಂಡಿತ್ತು ಅದನ್ನು ಆರಿಸಲಿಕ್ಕೆ ನೀರಿನ ಹತ್ತಿರ ಹೋಗುತ್ತಿದ್ದರು. ಆಗ ಪಕ್ಕದಲ್ಲಿದ್ದವನೊಬ್ಬ ಸ್ವಲ್ಪ ತಡೀರಿ, ಬೀಡಿ ಹಚ್ಚಿಕೊಳ್ಳುತ್ತೇನೆ ಎಂದು ಹೇಳಿದನಂತೆ ಇಂತಹ ವ್ಯಾಪಾರಸ್ಥರು ಎಲ್ಲಿಯುವರೆಗೆ ಇರುತ್ತಾರೋ, ದೇಶದಲ್ಲಿರತಕ್ಕ ಸ್ಥಿತಿಯನ್ನು ಪರಿಗಣಿಸದೆ, ತನ್ನ ಆಸೆ ಆಕಾಂಕ್ಷೆಗಳಿಗೆ ಬಲಿ ಬೀಳುವ ವ್ಯಾಪಾರಸ್ಥರು ಎಲ್ಲಿಯುವರೆಗೆ ಇರುತ್ತಾರೋ ಅಲ್ಲಿಯವರೆಗೆ ಯಾವ ಸರ್ಕಾರವೂ ಏನು ಮಾಡಲಿಕ್ಕೂ ಕಷ್ಟವಾಗುತ್ತದೆ. ಇನ್ನು ಏನು ನಿರಂಕುಶ ಪ್ರಭುತ್ವವಿದ್ದು, ಮಾತೆತ್ತಿದರೆ ಗುಂಡು ಹಾಕುವ ಸರ್ಕಾರ ಇದ್ದರೆ, ಆಗ ಸರಿಹೋಗುತ್ತದೆ. ಪ್ರಜಾಪ್ರಭುತ್ವ ರೀತಿಯಲ್ಲಿ ಹೋಗಬೇಕು ಎಂದರೆ ಕಷ್ಟವಾಗುತ್ತದೆ. ಮುಖ್ಯವಾದ ಕಾರಣ ನಾನು ಮೊದಲೇ ತಮಗೆ ಹೇಳಿದೆ ತಾತ್ವಿಕವಾಗಿ ನಮ್ಮ ಅಭಿಪ್ರಾಯಕ್ಕೆ ವಿರೋಧವಾಗಿರತಕ್ಕ ವ್ಯಾಪಾರಸ್ಥರು ನಮ್ಮ ದೇಶದಲ್ಲಿರುವದರಿಂದ ಸರ್ಕಾರ ಇಷ್ಟು ಕಷ್ಟಪಡಬೇಕಾಗಿದೆ ಈ ಪಕ್ಷ ಏನು ಸರ್ಕಾರ ನಡೆಸುತ್ತಿದೆ, ಈ ಪಕ್ಷದ ಮೇಲೆ ಕಿಂಚಿತ್ತೂ ಕೂಡ ಪ್ರೇಮವಿಲ್ಲದೆ ಇರತಕ್ಕ ಬಂಡವಾಳ ಶಾಹಿಗಳು, ವ್ಯಾಪಾರಸ್ಥರು, ದೇಶದಲ್ಲಿ ಅನೇಕ ಹಿಮಾಚಲ ಪರ್ಯಂತ ಇರುವ ಗ ಕಷ್ಟಪರಂಪರೆಗಳು ಬಂದೇಬರುತ್ತವೆ. ಇದಕ್ಕೆ ನನ್ನ ಪರಿಹಾರ ಇದೆ ಎ ಐ ಸಿ ಸಿ. ಅಧಿವೇಶನದಲ್ಲಿ ನಾನು ಹೇಳಿದೆ. ಹೋಲ್‌ಸೇಲ್ ಟ್ರೇಡ್ ಬಗ್ಗೆ ಏನು ಪಾಲಿಸಿ ಮ್ಯಾಟರ ನಾವು ಏನು ಹಾಕಿಕೊಳ್ಳುತ್ತಿದ್ದೇವೆ ಇದು ೫೦-೫೦ ಆಗಕೂಡದು; ರೀಟೇಲ್ ಟ್ರೇಡನ್ನೂ ಕೂಡ ಸರ್ಕಾರ ತೆಗೆದುಕೊಳ್ಳಬೇಕು ಎಂದು ಹೇಳಿದೆ. ಸಂಪೂರ್ಣವಾಗಿ ಸರ್ಕಾರದ ಹತೋಟಿಯಲ್ಲಿ ವ್ಯಾಪಾರ ಯಾವತ್ತು ಬರುತ್ತದೋ, ಅವತ್ತು ಏನಾದರೂ ಇದರ ಸಮಸ್ಯೆ ಪರಿಹಾರವಾದೀತೋ ಏನೋ ಎನ್ನುವ ಅಭಿಪ್ರಾಯ ನನ್ನದಾಗಿದೆ. ಇದಕ್ಕೆ ಕಾರಣವಿಷ್ಟೆ. ಇವತ್ತು ಮಾನ್ಯ ಮುಖ್ಯಮಂತ್ರಿಗಳು ೭೫ ರೂಪಾಯಿ ಲೆವಿ ಅನೌನ್ಸ ಮಾಡಿದ್ದಾರೆ ಎಂದು ಇಟ್ಟುಕೊಳ್ಳಿ. ಈ ೭೫ ರೂಪಾಯಿ ಲೇವಿ ಅನೌನ್ಸ ಮಾಡಿದ ಕೂಡಲೇ ವ್ಯಾಪಾರಸ್ಥರು ೮೫ ರೂಪಾಯಿ ಮಾಡಿಯೋ ಮಾಡುತ್ತಾರೆ. ೮೫ ರೂ ಮಾಡಿದರು ಎಂದರೆ ರೈತರಿಗೆ ನ್ಯಾಯವಾಗಿ ೧೦ ರೂ. ಜಾಸ್ತಿ ಸಿಗುತ್ತದೆ.

ತನ್ನ ಮಕ್ಕಳಿಗೆ ಉದರ ಪೋಷಣೆಗೆ ಅನುಕೂಲವಾದೀತು ಎನ್ನುವ ಆಸೆ ಅವರಿಗೆ ಇರುತ್ತದೆ. ಆಗ ೮೫ ರೂಪಾಯಿ ಸಿಗುತ್ತದೋ ಅಲ್ಲಿಯೇ ಕೊಡಬೇಕು ಎನ್ನುವ ಮನೋಭಾವ ಅವರಿಗೆ ಬರುವುದು ಸಹಜ. ನಾನು ಹೇಳುವುದಾದರೆ ಸರ್ಕಾರ ಸಂಪೂರ್ಣವಾಗಿ ಪ್ರೊಕ್ಯೂರ್ ಮಾಡತಕ್ಕ ಪದ್ಧತಿಯನ್ನು ಹಾಕಿಕೊಳ್ಳಬೇಕು. ಖಾಸಗಿ ವ್ಯಾಪಾರಕ್ಕೆ ಯಾವತ್ತೂ ಅವಕಾಶ ಕೊಡಕೂಡದು ಖಾಸಗಿ ವ್ಯಾಪಾರಕ್ಕೆ ಎಲ್ಲಿ ಅವಕಾಶ ಇದೆಯೋ ಅಲ್ಲಿ ಪುನಃ ಮೀರ್‌ಸಾದಿಕ್ ವೇಷದ ಆಂದೋಳನ ಶುರುವಾಗುತ್ತದೆ. ಆಗ ಕೃತಕ ಆಂದೋಳನ ಬಂದೇ ಬರುತ್ತದೆ ಎನ್ನುವ ವಾದವನ್ನು ನಾನು ಇಡಲಿಕ್ಕೆ ಬಯಸುತ್ತೇನೆ. ಪ್ರೊಕ್ಯೂರಮೆಂಟ್ ಮಾಡುವಾಗ ಕೂಡ ನವಂಬರ್ ತಿಂಗಳಿನಲ್ಲಿ ಪ್ರೊಕ್ಯೂರ್ ಮಾಡಬೇಕು. ಆಗ ಭತ್ತ ಬರತಕ್ಕ ಸೀಸನ್. ನವೆಂಬರ್ ತಿಂಗಳಲ್ಲಿ ಪ್ರೊಕ್ಯೂರ್ ಮಾಡುವುದು ಬಿಟ್ಟು

ಜನವರಿ, ಫೆಬ್ರವರಿ, ಮಾರ್ಚ ಮತ್ತು ಏಪ್ರಿಲ್‌ನಲ್ಲಿ ಪ್ರೊಕ್ಯೂರಮೆಂಟ್‌ಗೆ ಹೊರಡುವುದನ್ನು ದಿನನಿತ್ಯ ನೋಡುತ್ತೇವೆ ಈ ರೀತಿ ಪ್ರೊಕ್ಯೂರ್‌ಮೆಂಟ್‌ಗೆ ಹೊರಟರೆ ವ್ಯಾಪಾರಸ್ಥರು ಆಗಲೇ ಚೀಲ ಹಿಡಿದುಕೊಂಡು ಕೂತಿರುತ್ತಾರೆ. ಅವನಲ್ಲಿರತಕ್ಕ ಭತ್ತ ತೆಗೆದುಕೊಂಡು ಹೋಗಿರುತ್ತಾರೆ. ಏನೇನೂ ಉಳಿದಿರುವುದಿಲ್ಲ. ಸರ್ಕಾರ ಪ್ರೊಕ್ಯೂರ್‌ಮೆಂಟ್ ಜಾಸ್ತಿ ಮಾಡುವ ಬದಲು ಕಡ್ಡಾಯವಾಗಿ ಎಲ್ಲರೂ ಪ್ರೊಕ್ಯೂರ್‌ಮೆಂಟ್ ಭತ್ತ ಕೊಡಲೇಬೇಕು ಎನ್ನುವುದಾದರೆ ನಮ್ಮ ದೇಶದಲ್ಲಿ ಆಹಾರಾಭಾವ ಎಷ್ಟೋ ಸುಧಾರಿಸುತ್ತದೆ, ಇದು ನಿಸ್ಸಂಶಯವಾದ ಮಾತು. ಇವತ್ತು ನನ್ನ ಜಿಲ್ಲೆ ತೆಗೆದುಕೊಳ್ಳಬೇಕು ಎಂದರೆ ಸುಮಾರು ೭೦ ಭಾಗ ಜನ ಅಲ್ಲಿ ಭತ್ತ ಕೊಟ್ಟಿಲ್ಲ. ಆದರೂ ಕೂಡ ಬಹಳ ಭತ್ತ ವಸೂಲಾಗಿದೆ. ಅದಕ್ಕೆ ಕಾರಣ ಬೇರೆ. ಎಲ್ಲೋ ಸೌತ್ ಕೆನರಾಕ್ಕೆ ನಾರ್ತ್ ಕೆನರಾಕ್ಕೆ ಹೋಗುವ ಭತ್ತ ಹಿಡಿದು, ಡೆಪ್ಯುಟಿ ಕಮಿಷನರ್, ಎಸ್. ಪಿ. ಯವರು ಹೆಚ್ಚಿನ ಲೆವಿ ಕಲೆಕ್ಷನ್ ತೋರಿಸಿದ್ದಾರೆಯೇ ಹೊರತು ಲೆವಿ ಕೊಡದೇ ಇರತಕ್ಕ ಜನ ಸಾವಿರಗಟ್ಟಲೆ ನಮ್ಮಲ್ಲಿ ಇದ್ದೇ ಇದ್ದಾರೆ. ಭತ್ತ ಕಟಾವಿಗೆ ಬರುತ್ತದೆ, ಆಗ ಲೆವಿ ವಸೂಲು ಮಾಡದೇ ಇರುವುದೇ ಇದಕ್ಕೆ ಕಾರಣ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಾವು ಬ್ಯಾಂಕ್ ರಾಷ್ಟ್ರೀಕರಣ ಮಾಡಿದ್ದೇವೆ. ಭತ್ತ ಬೆಳೆಯುವವರು ಬ್ಯಾಂಕಿಗೆ ಸಾಲಕ್ಕೆ ಹೋಗುತ್ತಾರೆ. ಬ್ಯಾಂಕಿನಲ್ಲಿರತಕ್ಕ ಕೆಲವು ಕಾನೂನುಗಳ ಅಡಚಣೆಯಿಂದಾಗಿ ಅವರಿಗೆ ಸಮಯಕ್ಕೆ ಸರಿಯಾಗಿ ಸಾಲ ಸಿಕ್ಕುವುದಿಲ್ಲ. ಷೂರಿಟಿ ಕೇಳುತ್ತಾರೆ, ಆರ್. ಆರ್. ಫೆರನ್ ಕೇಳುತ್ತಾರೆ. . ಈ ರೀತಿ ೫೫ ರಿಕಾರ್ಡ್ಸ್ ಕೇಳುತ್ತಾರೆ. ಅವನ್ನು ಒದಗಿಸುವುದಕ್ಕೆ ಆಗುವುದಿಲ್ಲ. ಆದುದರಿಂದ ಸಮಯಕ್ಕೆ ಸರಿಯಾಗಿ ಸಾಲ ಸಿಕ್ಕುವುದಿಲ್ಲ. ಬಂಡವಾಳಶಾಹಿಗಳು, ವ್ಯಾಪಾರಸ್ಥರು ಕಾದು ಕೂತಿರುತ್ತಾರೆ. ಮನೆ ಮ್ಯುಟೇಷನ್ ಬೇಡ, ನಿಮ್ಮ ಯಾವ ರಿಕಾರ್ಡ್ ಬೇಡ, ಯಾವ ಷೂರಿಟಿ ಬೇಡ ಎಂದು ಹೇಳಿ ಸಾವಿರಗಟ್ಟಲೆ ದುಡ್ಡು ಕೊಡಲಿಕ್ಕೆ ತಯಾರು ಇರುತ್ತಾರೆ. ಇದರಿಂದಾಗಿ ರೈತ ಯಾವ ವ್ಯಾಪಾರಸ್ಥರಿಂದ ದುಡ್ಡು ತೆಗೆದುಕೊಂಡಿರುತ್ತಾನೋ ಅವರ ಹಂಗಿಗೆ ಭತ್ತ ಬೆಳೆದ ಕೂಡಲೇ ಅವನಿಗೆ ಕೊಡುತ್ತಾನೆ. ಸರ್ಕಾರಕ್ಕೆ ಕೊಡುವ ಇಚ್ಛೆ ಬರುವುದಿಲ್ಲ. ಕೊಡದೇ ಇದ್ದರೆ ಗತ್ಯಂತರವಿಲ್ಲ. ಕೊಟ್ಟ ಸಾಲದ ತೀರ್ಮಾನ ಮಾಡಬೇಕಾಗುತ್ತದೆ ಏಕೆಂದರೆ ಸಮಯಕ್ಕೆ ಕೊಟ್ಟಿರುತ್ತಾರೆ ಎನ್ನುವ ಕೃತಜ್ಞತೆ ಕೂಡ ಅವನಿಗೆ ಇರುತ್ತದೆ. ಇದಕ್ಕೆ ನನ್ನ ಸೂಚನೆ ಏನೆಂದರೆ. ಬ್ಯಾಂಕ್‌ನಿಂದ ಲೋನ್ ಕೊಡತಕ್ಕ ಪದ್ಧತಿ ಏನಿದೆ ಅದನ್ನು ಸ್ವಲ್ಪ ಸಲೀಸಾಗಿ ಸಿಗುವಂತೆ ಮಾಡಬೇಕು. ಎಲ್ಲರಿಗೂ ಸಲೀಸಾಗಿ ಸಾಲ ಸಿಗಬೇಕು. ಇದರಿಂದಾಗಿ ನನ್ನ ಜಿಲ್ಲೆಯಲ್ಲಿ ಹತ್ತಾರು, ನೂರಾರು ಎಕರೆ ಜಮೀನು ಪಾಳು ಬಿದ್ದಿದೆ. ಸಮಯಕ್ಕೆ ಸರಿಯಾಗಿ ದುಡ್ಡು ಸಿಕ್ಕದೇ ಇರುವುದರಿಂದ ಎಷ್ಟೋ ಜನ ನೆಟ್ಟಿ ಮಾಡದೆ ಹಾಗೇ ಜಮೀನನ್ನು ಪಾಳು ಕೆಡವಿದ್ದಾರೆ. ಇಂತಹ ನಿದರ್ಶನಗಳು ಬೇರೆ ಜಿಲ್ಲೆಯಲ್ಲೂ ಇರಬಹುದು ಸಾಲ ಸಿಗುವುದಾದರೆ ಮನೆತನದ ದೃಷ್ಟಿಯಿಂದ, ಜೀವನೋಪಾಯದ ದೃಷ್ಟಿಯಿಂದ ಕೆಲಸ ಮಾಡಿಯೇ ಮಾಡುತ್ತಾರೆ. ಆಹಾರದ ಬೆಳೆ ಕೂಡ ಜಾಸ್ತಿ ಆಗಿಯೇ ಆಗುತ್ತದೆ.

ಇನ್ನೊಂದು ಸಮಸ್ಯೆ ಇದರಲ್ಲಿ ಇದೆ. ಬೇರೆ ಜಿಲ್ಲೆಗಳ ಬಗ್ಗೆ ನನಗಂತೂ ಗೊತ್ತಿಲ್ಲ. ನಮ್ಮ ಜಿಲ್ಲೆಯಲ್ಲಿ ಮಾತ್ರ ಬೆಳೆ ಬಹಳ ಚೆನ್ನಾಗಿದೆ. ಆದರೆ ದುರದೃಷ್ಟ ವಶಾತ್ ಗೊಬ್ಬರ ಸಿಗುತ್ತಾ ಇಲ್ಲ ಈಗ ಹೈ ಯೀಲ್ಡಿಂಗ್ ವೆರೈಟಿ ವ್ಯವಸಾಯ ಮಾಡಬೇಕು ಎಂದು ಏನು ಹೇಳುತ್ತಿರೋ ಅದಕ್ಕೆ ತಾವು ಸಹಾಯ ಮಾಡದೇ ಹೋದರೆ ಎಕರೆಗೆ ೫ ಪಲ್ಲ ಕೂಡ ಬರುವುದಿಲ್ಲ. ಇದರಿಂದಾಗಿ ಮತ್ತೆ ಪುನ: ಆಹಾರದ ಸಮಸ್ಯೆ ಎಲ್ಲಿ ಪ್ರಾರಂಭವಾಗುತ್ತದೋ ಅನ್ನುವ ಹೆದರಿಕೆ ಭೀತಿ ನನಗಂತೂ ಉಂಟಾಗಿದೆ. ಮೊನ್ನೆತಾನೇ ಶಿವಮೊಗ್ಗಾದಲ್ಲಿ ಈ ಗೊಬ್ಬರದ ಬಗ್ಗೆ ಬಹಳ ಗಲಾಟೆ ಆಯಿತು. ಆದುದರಿಂದ ಇಂತಹ ಸಮಸ್ಯೆಗಳ ಬಗ್ಗೆ ತಾವು ಯಾವತ್ತೂ ಕೂಡ ಸದಾ ಎಚ್ಚರಿಕೆ ವಹಿಸಿದ್ದರೆ ಈ ಆಹಾರದ ಸಮಸ್ಯೆಯನ್ನು ಸಾಕಷ್ಟು ತೀರ್ಮಾನ ಮಾಡಲಿಕ್ಕೆ ಸಾಧ್ಯ ಎಂದು ನಾನು ತಿಳಿದುಕೊಂಡಿದ್ದೇನೆ.

ಇನ್ನು ಆಹಾರದ ಸಮಿತಿಗಳನ್ನು ಮಾಡಿದ್ದಾರೆ. ಈ ಆಹಾರದ ಸಮಿತಿಗಳನ್ನು ಮಾಡಿರುವ ಉದ್ದೇಶ ಈ ಸಮಿತಿಯವರು ಏನಾದರೂ ಮಾರ್ಗದರ್ಶನ ಕೊಟ್ಟರೆ ಅದನ್ನು ಕೇಳಬೇಕು ಎನ್ನುವ ಅಭಿಪ್ರಾಯವೂ ಕೂಡ ಈ ಅಧಿಕಾರಿಗಳಲ್ಲಿ ಇರಬೇಕು. ಈ ಸಮಿತಿಯವರು ಮಾಡಿದ ತೀರ್ಮಾನಕ್ಕೆ ಅಧಿಕಾರಿಗಳನ್ನು ಇನ್ನೊಂದು ರೀತಿಯಲ್ಲಿ ನಡೆದುಕೊಳ್ಳುವುದಾದರೆ ಈ ಆಹಾರದ ನೀತಿಯ ಉದ್ದೇಶವೇ ಸಫಲವಾಗುವುದಿಲ್ಲವೋ ಏನೋ ಎಂದು ನನಗೆ ಕಾಣುತ್ತದೆ. ಈ ಮಾತನ್ನು ನನ್ನ ಅನುಭವದಿಂದ ಹೇಳುತ್ತಿದ್ದೇನೆ. ಉದಾಹರಣೆಗೆ ಕೆಲವು ಕಡೆ ಕೋಟಾ ಕೊಟ್ಟಿರುತ್ತಾರೆ. ಅದು ಯಾವ ರೀತಿ ಎಂದರೆ ಇಂತಿಂಥ ಊರಿಗೆ ಇಷ್ಟಿಷ್ಟು ಆಹಾರವನ್ನು ಸಪ್ಲೈ ಮಾಡಬೇಕು ಎಂದು ಈ ಆಹಾರ ಸಮಿತಿಯವರ ಮೀಟಿಂಗ್ ನಡೆಯುವ ಮೊದಲೇ ಆಹಾರವನ್ನು ಸಪ್ಲೈ ಮಾಡಿಬಿಡುತ್ತಾರೆ. ಆಮೇಲೆ ಈ ಸಮಿತಿಯವರು ಮೀಟಿಂಗ್ ಇಟ್ಟು ಏನಾದರೂ ಈ ಬಗ್ಗೆ ಸಲಹೆಗಳು ಕೊಡಬೇಕಾದಲ್ಲಿ ಹೇಳಿದರೆ ಅದನ್ನು ಈಗಾಗಲೇ ಕಳುಹಿಸಿದ್ದೇನೆ ಎಂದು ಹೇಳುತ್ತಾರೆ. ಇದರಿಂದ ದ್ವಂದ್ವ ಅಭಿಪ್ರಾಯಗಳು ಬರುವುದೂ ಅಲ್ಲದೆ ಅನೇಕ ತೊಡಕುಗಳೂ ಕೂಡ ಉಂಟಾಗುತ್ತದೋ ಏನೋ ಎಂದು ಹೇಳಬಯಸುತ್ತೇನೆ.

ಇನ್ನು ಮಲೆನಾಡಿನಲ್ಲಿ ಒಂದು ವಿಚಿತ್ರವಾದ ಸಮಸ್ಯೆ ಇದೆ. ಅನೇಕ ಭೂರಹಿತ ಕಾರ್ಮಿಕರು ತೋಟ ಮತ್ತು ಗದ್ದೆಗಳಲ್ಲಿ ಕೆಲಸ ಮಾಡುತ್ತಾರೆ. ಅವರಿಗೆ ಮೊದಲಿನಿಂದಲೂ ಅನೂಚಾನವಾಗಿ ನಡೆದುಕೊಂಡು ಬಂದಿರತಕ್ಕಂಥ ಪದ್ಧತಿ ಯಾವ ರೀತಿ ಎಂದರೆ ಒಂದು ಸೇರು ಅಥವಾ ೨ ಸೇರು ಅಕ್ಕಿ ಮತ್ತು ಸಂಬಳ ಕೊಡುವ ಪದ್ಧತಿ ಇದೆ. ಈಗ ಸರ್ಕಾರ ಈ ಬಗ್ಗೆ ಲೆವಿ ಪದ್ಧತಿ ಇಟ್ಟಿರುವುದರಿಂದ ಅನೇಕ ಭೂಮಾಲೀಕರು ಲೆವಿ ಕೊಟ್ಟುಬಿಡುತ್ತಾರೆ ಆ ರೀತಿ ಅವರು ಲೆವಿ ಕೊಟ್ಟ ಮೇಲೆ ಕೂಲಿಗಾರರಿಗೆ ಅಕ್ಕಿಯನ್ನು ಕೊಡುವುದಕ್ಕೆ ಅವರಿಗೆ ಇರುವುದಿಲ್ಲ. ಆದುದರಿಂದ ಈವೊತ್ತಿನ ದಿವಸ ಅನೇಕ ಮಲೆನಾಡಿನ ತಾಲ್ಲೂಕುಗಳಲ್ಲಿ ಇದು ಒಂದು ದೊಡ್ಡ ಕಷ್ಟ ಉಂಟಾಗಿದೆ. ಅವರನ್ನು ಸೊಸೈಟಿಗಳಿಗೆ ಕಳುಹಿಸಿದರೆ ಆ ಸೊಸೈಟಿಗಳಲ್ಲಿ ಅಕ್ಕಿ ಇರುವು

ದಿಲ್ಲ. ಕಾರಣ ಏನೆಂದರೆ ಮಲೆನಾಡಿನ ಪ್ರಾಂತ್ಯ ಅಕ್ಕಿ ಬೆಳೆಯುವ ಪ್ರಾಂತ್ಯ ಎನ್ನುವ ದೃಷ್ಟಿಯಿಂದ ಯಾವ ಸೊಸೈಟಿಗೂ ಅಕ್ಕಿ ಕೊಡುತ್ತಾ ಇಲ್ಲ. ಇದರಿಂದ ಭೂಮಾಲೀಕರು ಕಾರ್ಮಿಕರಿಗೆ ಒಂದು ಸೇರು ಅಕ್ಕಿ ಕೊಡಬೇಕಾದರೆ ಅವರ ಹತ್ತಿರ ಅಕ್ಕಿ ಇರುವುದಿಲ್ಲ. ಆದರಿಂದಾಗಿ ಅಲ್ಲಿನ ಭೂರಹಿತ ಕಾರ್ಮಿಕರು ಅನೇಕ ಕಷ್ಟಗಳಿಗೆ ಈಡಾಗಿದ್ದಾರೆ. ಇಷ್ಟೇ ಅಲ್ಲದೆ ಕೊನೆಯದಾಗಿ ನಾನು ಒಂದು ಮಾತನ್ನು ಹೇಳಬಯಸುತ್ತೇನೆ. ಅದು ಏನೆಂದರೆ ೮-೯ ಪ್ರಾಂತಗಳಲ್ಲಿ ಮಳೆ ಹೋಗಿ ಒಂದು ವರ್ಷದಿಂದ ಈ ದಾರುಣ ಪರಿಸ್ಥಿತಿಯಲ್ಲಿ ಇದ್ದೇವೆ. ಇಂಥಾದ್ದರಲ್ಲಿ ನಮ್ಮ ಸರ್ಕಾರ ಈ ಆಹಾರ ಸಮಸ್ಯೆಯನ್ನು ಬಿಡಿಸಲು ಇಷ್ಟು ಶ್ರದ್ಧೆವಹಿಸಿ ಕೆಲಸ ಮಾಡುತ್ತಿರುವಾಗ ಎಲ್ಲರೂ ಸಹಕಾರವನ್ನು ಕೊಡುವುದು ಬಿಟ್ಟು ನಮ್ಮ ಮಿತ್ರರು ಮೊದಲು ಹೇಳಿದ ಗಾದೆಯಂತೆ ಮಾಡುವುದಾದರೆ ಅದು ದೇಶದ ಹಿತದೃಷ್ಟಿಯಿಂದ ಒಳ್ಳೆಯದಲ್ಲ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಬಂಗಾರಪ್ಪ (ಸೊರಬ).— ಮಾನ್ಯ ಅಧ್ಯಕ್ಷರೇ, ನಮ್ಮ ಮುಂದೆ ಇರತಕ್ಕಂಥ ವಿಷಯಗಳು ಎರಡು. (೧) ದಿನನಿತ್ಯದ ಅಗತ್ಯವಸ್ತುಗಳ ಬೆಲೆ ಏರಿಕೆ ವಿಷಯ (೨) ಆಹಾರದ ಸಮಸ್ಯೆ. ಈ ಎರಡೂ ವಿಷಯಗಳನ್ನು ಕುರಿತು ಮಾನ್ಯ ಮುಖ್ಯಮಂತ್ರಿಗಳು ಒಂದು ಹೇಳಿಕೆಯನ್ನು ಈ ಸದನದ ಮುಂದೆ ಇಟ್ಟಿದ್ದಾರೆ ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರೂ ಮತ್ತು ಶ್ರೀಮಾನ್ ಎಂ. ರಾಜಶೇಖರ ಮೂರ್ತಿಯವರು ಈ ಬಗ್ಗೆ ಒಂದು ನಿರ್ಣಯವನ್ನು ಈ ಸದನದ ಮುಂದೆ ಚರ್ಚೆಗಾಗಿ ಇಟ್ಟಿದ್ದಾರೆ. ಆದರೆ ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಯವರ ಹೇಳಿಕೆ ಅತಿ ಮುಖ್ಯವಾದುದು. ಏತಕ್ಕೆಂದರೆ ಸರಕಾರ ಈ ಎರಡು ವಿಷಯಗಳ ಬಗ್ಗೆ ಯಾವ ನಿಲುವನ್ನು ಮತ್ತು ಧ್ಯೇಯಧೋರಣೆಗಳನ್ನು ತಾಳಿದೆ ಮತ್ತು ಇದರಿಂದ ಯಾವ ರೀತಿ ಪರಿಣಾಮ ಉಂಟಾಗಿದೆ ಯಾವ ಪರಿಸ್ಥಿತಿಯಲ್ಲಿ ನಾವು ಇದ್ದೇವೆ ಎನ್ನುವ ಚಿತ್ರ ಸರಕಾರದವತಿಯಿಂದ ಬಂದದ್ದು ಅದು ಬಹಳ ಒಳ್ಳೆಯದು. ಈ ಬಗ್ಗೆ ನಾನು ಹೇಳುವುದಾದರೂ ಕೂಡ ಸಂಪೂರ್ಣವಾದ ಚಿತ್ರವನ್ನು ಮಾನ್ಯ ಮುಖ್ಯಮಂತ್ರಿಯವರು ಸರಕಾರದವತಿಯಿಂದ ಇಟ್ಟಿದ್ದಾರೆಯೇ ಎನ್ನುವುದನ್ನು ನಾನು ಭಾವನೆ ಮಾಡಿದ್ದೇನೆ. ಈ ಸಂದರ್ಭದಲ್ಲಿ ನಾನು ಹೇಳುವುದು ಏನೆಂದರೆ ಮಾನ್ಯ ಮುಖ್ಯಮಂತ್ರಿಯವರು ಇಟ್ಟಿರತಕ್ಕಂಥ ಹೇಳಿಕೆಯಲ್ಲಿ ಇದು ಬರೀ ಮೈಸೂರು ರಾಜ್ಯಕ್ಕೇನೇ ಸೀಮಿತವಾಗಿರತಕ್ಕಂಥ ವಿಷಯ ಅಲ್ಲ ಎನ್ನುವುದೂ ಕೂಡ ಅವರ ಹೇಳಿಕೆಯಲ್ಲಿ ಸ್ಪಷ್ಟಪಡಿಸಿದ್ದಾರೆ. ಈ ಸಮಸ್ಯೆ ಈ ರಾಜ್ಯ ಒಂದರಲ್ಲೇ ಅಲ್ಲ, ಈ ದೇಶ ಒಂದರಲ್ಲೇ ಅಲ್ಲ ಇದು ಪ್ರಪಂಚಾದ್ಯಂತ ಇರುವ ಒಂದು ಸಮಸ್ಯೆಯಾಗಿದೆ ಎಂದು ಹೇಳಿದ್ದಾರೆ. ಈ ಸಮಸ್ಯೆ ಬೆಲೆ ಏರಿಕೆಯಲ್ಲೂ ಹೌದು ಮತ್ತು ಆಹಾರದ ವಿಷಯದಲ್ಲೂ ಹೌದು ಆಗಿರುತ್ತೆ. ಈ ಎರಡೂ ಹೇಳಿಕೆಯನ್ನು ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆಯಲ್ಲಿ ಸ್ಪಷ್ಟಪಡಿಸಿದ್ದಾರೆ.

ಈ ಬಗ್ಗೆ ನಾನು ಮೊಟ್ಟಮೊದಲನೆಯದಾಗಿ ಆಹಾರದ ವಿಷಯದ ಬಗ್ಗೆ ಮಾತನಾಡಬೇಕಾಗಿದೆ. ಮಾನ್ಯಮುಖ್ಯಮಂತ್ರಿಯವರು ಈ ಬಗ್ಗೆ ಒಂದು ವಿಷಯವನ್ನು ಸ್ಪಷ್ಟಪಡಿಸಬೇಕಾಗಿತ್ತು ಎಂದು ನನ್ನ ಭಾವನೆ. ಅದು ಏನೆಂದರೆ ಎಲ್ಲರ ಸಹಕಾರವೂ ಇರತಕ್ಕಂಥಾದ್ದು ಈ ಬೃಹತ್ ಸಮಸ್ಯೆಯನ್ನು ಬಿಡಿಸತಕ್ಕಂಥಾ ವಿಷಯದಲ್ಲಿ ಬೇಕು ಎನ್ನುವುದನ್ನೂ ನಾನೂ ಸಹ ಒಪ್ಪುತ್ತೇನೆ. ಈ ಸಹಕಾರ ಸಾರ್ವಜನಿಕವಾಗಿಯೂ ಬೇಕು ಮತ್ತು ಈ ಸದನದ ವಿಷಯ ತೆಗೆದುಕೊಳ್ಳುವುದಾದರೆ ವಿರೋಧಪಕ್ಷದ ವತಿಯಿಂದಲೂ ಬೇಕು ಅನ್ನತಕ್ಕಂಥಾ ಮಾತನ್ನೂ ನಾನೂ ಸಹ ಹೇಳುತ್ತೇನೆ ಮತ್ತು ಆ ಮಾತನ್ನು ತಪ್ಪಿ ಎಂದೂ ಕೂಡ ವಿರೋಧ ಪಕ್ಷದವರು ನಡೆದಿಲ್ಲ. ಆದರೆ ಮಾನ್ಯ ಶ್ರೀಮಾನ್ ಶೀರನಾಳಿ ಚಂದ್ರಶೇಖರ್‌ರವರು ಈ ಬಗ್ಗೆ ಏನು ಒಂದು ಮಾತನ್ನು ಹೇಳಿದರು ಎಂದರೆ ವಿರೋಧ ಪಕ್ಷದವರು ಈ ಸಂದರ್ಭದಲ್ಲಿ ಸ್ಪಷ್ಟವಾಗಿ ಒಂದು ಸಂಪೂರ್ಣ ಬೆಂಬಲವನ್ನು ಸರಕಾರಕ್ಕೆ ನೀಡತಕ್ಕಂಥ ಮನಸ್ಸು ಮಾಡುವುದನ್ನು ಬಿಟ್ಟು ಅವರು ಬರೀ ಟೀಕೆ ಮಾಡುತ್ತಿದ್ದಾರೆ ಅನ್ನುವ ಅರ್ಥದಲ್ಲಿ ಅವರ ಭಾಷಣದ ವೋಗ ಇತ್ತು ಎಂದು ನನಗೆ ಅನಿಸುತ್ತದೆ. ನಿಜವಾಗಿಯೂ ವಿರೋಧ ಪಕ್ಷದವರನ್ನು ಸರಕಾರದ ವತಿಯಿಂದ ಅವರನ್ನು ಸಮರ್ಥನೆ ಮಾಡಬೇಕು. ನಿಜವಾಗಿಯೂ ಹಲವಾರ ದೇಶದ ರಾಜಕೀಯ ಚಿತ್ರವನ್ನು ನೋಡುವುದಾದರೆ ಇಂಥಾ ಒಂದು ಸಂದರ್ಭ ಬಂದಾಗ ಅವರು ಎಷ್ಟರ ಮಟ್ಟಿಗೆ ಹೋಗುತ್ತಾರೆ ಎಂಬುದನ್ನು ನೋಡಿದ್ದೇವೆ ಆ ಭಾವನೆ ತಮ್ಮಲ್ಲಿ ಇರುವದಾದರೆ ವಿರೋಧ ಪಕ್ಷದವರನ್ನು ಅಷ್ಟೇ ಅಲ್ಲ. ಇಡೀ ದೇಶದ ಜನತೆಯನ್ನೇ ಸರಕಾರ ಅಭಿನಂದಿಸಬೇಕಾಗುತ್ತದೆ. ಮತ್ತು ಹಲವಾರು ದೇಶದ ರಾಜಕೀಯ ಚರಿತ್ರೆಯನ್ನು ಅವಲೋಕನ ಮಾಡುವುದಾದರೆ ಈ ಬೃಹದಾಕಾರವಾದ ಸಮಸ್ಯೆ ಬಗ್ಗೆ ದೊಡ್ಡ ಕ್ರಾಂತಿಗಳು, ಅಂದೋಳನಗಳು ರಾಜಕೀಯ ಕ್ಷೇತ್ರದಲ್ಲಿ ಅಲ್ಲೋಲ ಕಲ್ಲೋಲವಾಗಿ ನಡೆದಿದೆ. ಆದರೆ ನಮ್ಮ ಭಾರತದೇಶದಲ್ಲಿ ರಾಜಕೀಯ ಪ್ರಶ್ನೆ ಅಷ್ಟೊಂದು ಬರದೇ ಇರುವುದರಿಂದ ಸರಕಾರದವರು ಬಚಾವ ಆಗಿದ್ದಾರೆ. ಇದನ್ನು ನಾನು ಸ್ಪಷ್ಟಪಡಿಸುತ್ತೇನೆ. ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು ಇಟ್ಟಿರತಕ್ಕಂಥ ಆಹಾರದ ಚಿತ್ರವನ್ನು ನೋಡಿದರೆ ಆಹಾರ ಇಲ್ಲ ಎನ್ನುವುದನ್ನು ನಾನೂ ಒಪ್ಪುತ್ತೇನೆ. ಮತ್ತು ಅದಕ್ಕೆ ಆಹಾರ ಹುಡುಕಬೇಕು ಎನ್ನುವುದನ್ನು ನಾನು ಒಪ್ಪುತ್ತೇನೆ. ಆದರೆ ಇದಕ್ಕೆ what is the remedy for that ಎಂದು ಕೇಳಿದ್ದಾರೆ ಇದಕ್ಕೆ ಯಾರೇ ಕಾರಣರೇ ಇರಲಿ ಆಹಾರವನ್ನು ಹುಡುಕಬೇಕು ಎನ್ನುವುದನ್ನು ಎಲ್ಲರೂ ಒಪ್ಪುತ್ತಾರೆ ಮತ್ತು ನಾನೂ ಸಹ ಒಪ್ಪುತ್ತೇನೆ. ಆದರೆ ಈ ಒಂದು ಸಮಸ್ಯೆಯನ್ನು ಬೃಹದಾಕಾರವಾಗಿ ಮಾಡುವುದಕ್ಕೆ ಯಾರು ಕಾರಣರು ಎನ್ನುವುದು ನಮ್ಮ ಮುಂದಿರುವ ಪ್ರಶ್ನೆಯಾಗಿದೆ. ಅಧ್ಯಕ್ಷರೇ, ಈ ಬಗ್ಗೆ ಹೇಳುವುದಾದರೆ ಮಾನ್ಯ ಮುಖ್ಯಮಂತ್ರಿಯವರ ಹೇಳಿಕೆಯಲ್ಲಿ ನೋಡಿದರೆ ಈ ಸಮಸ್ಯೆ ಇರುವುದು ನಮ್ಮ ದೇಶದಲ್ಲಿ ಒಂದರಲ್ಲೇ ಅಲ್ಲ, ಇಡೀ ರಾಜ್ಯದಲ್ಲಿ, ದೇಶದಲ್ಲಿ ಮತ್ತು

ಇದು ಅಂತರರಾಷ್ಟ್ರೀಯ ಸಮಸ್ಯೆಯಾಗಿದೆ. ಆದುದರಿಂದ ಇಂತಹ ಪರಿಣಾಮ ಕಾರಿಯಾದಂಥ ಸಮಸ್ಯೆಗೆ ಎಲ್ಲಿಂದ ಆಹಾರ ತರುವುದಕ್ಕೆ ಸಾಧ್ಯ ಎನ್ನುವ ಮಾತನ್ನು ಹೇಳಿ ಅವರ ಎರಡು ಕೈಯನ್ನೂ ಸೇರಿಸಿ ಈ ಒಂದು ಹೇಳಿಕೆ ಕೊಟ್ಟಿದ್ದಾರೆ ಎಂದು ನನಗೆ ಸ್ಪಷ್ಟವಾಗಿ ಕಾಣುತ್ತದೆ. ಆದರೆ ಸ್ವಾತಂತ್ರ್ಯ ನಂತರ ೨೫ ವರ್ಷದ ಆಡಳಿತದಲ್ಲಿ ಆವೊತ್ತು ಆಡಳಿತ ನಡೆಸತಕ್ಕಂಥಾವರು ಯಾರೇ ಇರಲಿ, ಈವೊತ್ತು ಆಡಳಿತ ನಡೆಸತಕ್ಕಂಥಾವರು ಯಾರೇ ಇರಲಿ, ಈ ಪ್ರಶ್ನೆ ಮುಖ್ಯವಲ್ಲ.

3-30 P.M.

(Deputy Speaker in the Chair) ಹಿಂದೆ ಯಾರು ಯಾರು ಆಡಳಿತವನ್ನು ನಡೆಸಿದ್ದಾರೆ ಅವರಿಗೆ ಎಲ್ಲರಿಗೂ ಇದು ಸಂಬಂಧಪಟ್ಟ ವಿಷಯವಾಗಿದೆ. ಈ ೨೫ ವರ್ಷದ ಆಡಳಿತದಲ್ಲಿ ಆಹಾರ ಉತ್ಪನ್ನವನ್ನು ಜಾಸ್ತಿ ಮಾಡುವುದಕ್ಕೆ ಯಾವ ಕಾರ್ಯಕ್ರಮ ಹಾಕಿಕೊಂಡಿದ್ದೀರಿ ಎಂದು ನೋಡಿದರೆ ಕೇವಲ ಭಾರಿಭಾರಿ ಯೋಜನೆಗಳು ಎಂದರೆ ತುಂಗಭದ್ರಾ ಆಣೆಕಟ್ಟು, ಇತ್ಯಾದಿ ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳನ್ನು ಕಟ್ಟಿದ್ದೇವೆ ಎಂದು ಹೇಳುತ್ತೀರಿ. ಇದಕ್ಕೆಲ್ಲಾ ಮಳೆ ನೀರು ಬಾರದಿದ್ದರೆ ನಿಮ್ಮ ಆಣೆಕಟ್ಟುಗಳು ತುಂಬದಿದ್ದರೆ ಏನು ಪ್ರಯೋಜನವಿದೆ ಕೇವಲ ಆ ಆಣೆಕಟ್ಟುಗಳು ಭರ್ತಿ ಆದರೆ ಮಾತ್ರ ಆಣೆಕಟ್ಟಿದ್ದಕ್ಕೆ ಪ್ರಯೋಜನವಾಗುತ್ತದೆ, ಇಲ್ಲವಾದರೆ ಆಣೆಕಟ್ಟು ಕಟ್ಟಿದರೂ ಏನು ಪ್ರಯೋಜನವಿಲ್ಲ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ನೀರಾವರಿ ಯೋಜನೆಗಳು ಏನು ಇವೆ ಅವುಗಳಿಂದ ೨೫ ವರ್ಷದಲ್ಲಿ ಏನೂ ಪ್ರಯೋಜನವಾಗಿಲ್ಲವೆನೋ ಎಂದು ನನಗನಿಸುತ್ತದೆ. ಇದು ವಿವೇಕಪೂರಿತ ಯೋಜನೆ ಅಲ್ಲವೆಂದು ಹೇಳಬೇಕಾಗುತ್ತದೆ. ನಾವು ಏನು ಮಾಡಬೇಕಾಗಿತ್ತು ಎಂದರೆ ಆಣೆಕಟ್ಟು ಕಟ್ಟಿದ್ದು ತಪ್ಪೇ ಎಂದು ಕೇಳಿದರೆ ಇದಕ್ಕೆ ಕೋಟ್ಯಾಂತರ ರೂಪಾಯಿ ಖರ್ಚು ಮಾಡಿದ್ದು ಒಳ್ಳೆಯದಾದರೂ ಅಷ್ಟು ಮುಂದಾಲೋಚನೆಯಿಂದ ನೋಡಿದರೆ ಆಣೆಕಟ್ಟುಗಳ ಈ ಸಂಖ್ಯೆಯನ್ನು ಕಡಿಮೆ ಮಾಡಿ ಎಲ್ಲಿ ಬೇಕೇ ಬೇಕು ಅಂತಹ ಕಡೆಗಳಲ್ಲಿ ಮಾಡಬೇಕಾಗಿತ್ತು ಮಳೆಗಾಲ ಸರಿಯಾಗಿ ನಡೆಸದೆ ಹೋದರೆ ಆಣೆಕಟ್ಟುಗಳ ಅಚ್ಚುಕಟ್ಟು ಅಥವಾ ಆಯಕಟ್ಟು ಪ್ರದೇಶಗಳಲ್ಲಿ ಏನೊಂದು ಪ್ರಯೋಜನವೂ ಆಗುವುದಿಲ್ಲ. ಮಳೆ ಆಗದೆ ಆಣೆಕಟ್ಟು ತುಂಬದೇ ಹೋದರೆ ಪವರ್ ಉತ್ಪಾದನೆ ಕಡಿಮೆಯಾಗುತ್ತದೆ ಎನ್ನುವುದು ನಿರ್ವಿವಾದ ವಿಷಯ. ಹೀಗಾಗಿ ಕೈಗಾರಿಕೆ ಉದ್ಯಮಗಳಿಗೆ ಪವರ್ ಸರಿಯಾಗಿ ಸರಬರಾಜು ಮಾಡದೆ ಹೋದರೆ, ಪವರ್ ಕಟ್ ಮಾಡಿದರೆ ಕೈಗಾರಿಕೆ ಕ್ಷೇತ್ರದಲ್ಲಿ ಉತ್ಪನ್ನ ಸಹಜವಾಗಿ ಕಡಿಮೆಯಾಗುತ್ತದೆ. ಆದ್ದರಿಂದ ಸಾರ್ವಜನಿಕರಿಗೆ ಈ ಆಣೆಕಟ್ಟು ಕಟ್ಟಿದ್ದು ಪ್ರಯೋಜನವಾಗುವುಲ್ಲ. ಆದ್ದರಿಂದ ಸಂಪೂರ್ಣವಾಗಿ ಈ ಯೋಜನೆ ಒಳ್ಳೆಯದಲ್ಲ ಎನ್ನುವುದು ಆಗುತ್ತದೆ. ಹಲವಾರು ವರ್ಷಗಳಿಂದ ನೋಡುತ್ತಿರುವ ಅನುಭವದಿಂದ ಇದು ಮನದಟ್ಟಾಗುತ್ತದೆ. ನನ್ನ ಪ್ರಕಾರ ಹೇಳುವುದಾದರೆ ಸಣ್ಣ ನೀರಾವರಿಗಳನ್ನು ಹೆಚ್ಚಿಗೆ ತೆಗೆದುಕೊಳ್ಳಬೇಕು.

ಅಂಡರ್‌ಗ್ರೌಂಡ್ ವಾಟರನ್ನು ಟ್ಯಾಪ್‌ಮಾಡಿ ಅದರಿಂದ ನಮ್ಮ ವಾಟರ್ ಉತ್ಪಾದನೆ ಮಾಡಿಕೊಂಡಿದ್ದರೆ ನಮಗೆ ಬಹಳ ಅನುಕೂಲವಾಗುತ್ತಿತ್ತು. ಉದಾಹರಣೆಗೆ ತೆಗೆದುಕೊಂಡರೆ ಅಮೇರಿಕಾ, ರಷ್ಯಾ ಮುಂತಾದ ಮುಂದುವರಿದ ದೇಶಗಳಲ್ಲಿ ಅವರು ಅಂಡರ್‌ಗ್ರೌಂಡ್ ವಾಟರ್ ಸೋರ್ಸ್‌ನಿಂದ ಅವರ ಉತ್ಪಾದನೆಯನ್ನು ಹೆಚ್ಚಿಸಿಕೊಳ್ಳುತ್ತಾರೆ. ಎಲ್ಲಿ ನೀರು ಸಮೃದ್ಧಿಯಾಗಿ ಸಿಕ್ಕುತ್ತದೆ ಅಲ್ಲಿ ಈ ಯೋಜನೆಗಳನ್ನು ಮಾಡಿದರೆ ಇದು ಯಶಸ್ವಿಯಾಗಿ ಆಗುವುದಕ್ಕೆ ಸಾಧ್ಯ. ಆದರೆ ಮಳೆ ಬಾರದೆ ಹೋದರೆ ನಿಮ್ಮ ಯೋಜನೆಗಳು ಯಾವರೀತಿಯಾದ ಫಲವನ್ನು ಕೊಡುವುದಿಲ್ಲ. ಪವರ್ ಉತ್ಪಾದನೆ ಕಡಿಮೆಯಾದರೆ ಕೈಗಾರಿಕೆ ಕ್ಷೇತ್ರದಲ್ಲಿಯೂ ಕೂಡ ಉತ್ಪಾದನೆ ಕಡಿಮೆಯಾಗುತ್ತದೆ. ನನ್ನ ಅಭಿಪ್ರಾಯದಲ್ಲಿ ಸಣ್ಣ ಸಣ್ಣ ನೀರಾವರಿ ಯೋಜನೆಗಳಿಗೆ ಸರ್ಕಾರ ಗಮನ ಕೊಟ್ಟಿದ್ದರೆ ಇಷ್ಟು ನಮಗೆ ಅಭಾವ ಬರುತ್ತಿರಲಿಲ್ಲ ಎಂದು ನನಗನಿಸುತ್ತದೆ. ಬೇರೆ ದೇಶಗಳವರ ಮೇಲೆ ನಾವು ಅವಲಂಬಿಸಬೇಕಾಗಿರಲಿಲ್ಲ. ಇವೊತ್ತು ನಮ್ಮ ಮೈಸೂರು ಸಂಸ್ಥಾನದಲ್ಲಿ ಹೆಚ್ಚು ಮಳೆ ಬೀಳುವ ಪ್ರದೇಶ ಎಂದರೆ ಮಲೆನಾಡು ಪ್ರದೇಶ. ಆ ಪ್ರದೇಶದಲ್ಲಿ ಸಂಪೂರ್ಣವಾದ ಬೆಳೆ ಸಿಕ್ಕುತ್ತಿಲ್ಲ. ಶಿವಮೊಗ್ಗಾ ಜಿಲ್ಲೆ ಕೆಲವು ಸಾರಿ ತೊಂದರೆಗೆ ಈಡಾಗಿರುತ್ತದೆ. ಸಂಪೂರ್ಣವಾಗಿ ಮಳೆ ಬೀಳದೆ ಹೋದರೆ ಆ ಪ್ರದೇಶದಲ್ಲಿ ಬೆಳೆ ಇಲ್ಲ ಎಂದು ಹೇಳಿದ ಮೇಲೆ ನೀವು ಯಾವರೀತಿ ಇಂಥಹ ದೊಡ್ಡ ದೊಡ್ಡ ಅಣೆಕಟ್ಟುಗಳನ್ನು ಕಟ್ಟಿ ಯಾವ ಪ್ರಯೋಜನ ಪಡೆಯುವುದಕ್ಕೆ ಸಾಧ್ಯ ಎಂದು ಕೇಳಬೇಕಾಗುತ್ತದೆ. ಇಂಥಹ ಮಲೆನಾಡು ಪ್ರದೇಶಗಳಲ್ಲಿ ಸಾಮಾನ್ಯವಾಗಿ ಹೇರಳವಾದ ಫಸಲು ಬರುತ್ತದೆ. ಅಂತಹ ಕಡೆಗಳಲ್ಲೇ ಹೀಗಾದರೆ ಇನ್ನು ಬೇರೆ ಎಲ್ಲಿ ಆಹಾರ ದೊರಕುತ್ತದೆ ? ಈ ಒಂದು ವರ್ಷದಲ್ಲಿ ೨ ರೂಪಾಯಿಗೆ ಒಂದು ವಸ್ತು ಸಿಕ್ಕುತ್ತ ಇದ್ದದ್ದು ಈಗ ಐದುರೂಪಾಯಿ ಚಿಲ್ಲರೆ ಆರು ರೂಪಾಯಿ ಆಗಿದೆ. ಒಂದಕ್ಕೆ ಮೂರರಷ್ಟು ಒಂದಕ್ಕೆ ಐದರಷ್ಟು ಜಾಸ್ತಿಯಾಗಿದೆ. ಆದರಲ್ಲಿ ಸಕ್ಕರೆ, ಅಕ್ಕಿ ಮುಂತಾದ ಹಲವಾರು ಪದಾರ್ಥಗಳು, ಮತ್ತು ಕಡಲೆಕಾಯಿ ಎಣ್ಣೆ ಒಂದು ಕೆ.ಜಿಗೆ ೧೦ ರೂಪಾಯಿ ಏರಿಹೋಗಿದೆ.

ಯಾವ ಯಾವ ದೇಶಗಳಲ್ಲಿ ಎಷ್ಟೆಷ್ಟು ಬೆಲೆ ಏರಿಕೆ ಆಗಿದೆಯೆಂದು ನನ್ನ ಹತ್ತಿರ ಅಂಕಿ ಅಂಶಗಳು ಇವೆ. ಬೇರೆ ದೇಶಗಳನ್ನು ತೆಗೆದ ಕೊಂಡರೆ ದಿನಬಳಕೆ ಪದಾರ್ಥಗಳ ಬೆಲೆಏರಿಕೆ ಕಳೆದ ೧೦ ವರ್ಷಗಳಲ್ಲಿ ಕೆನ್ಯಾ ೧೮.೬, ಶ್ರೀಲಂಕಾ ೨೯.೪, ಥೈಲಂಡ್ ೧೯.೧, ಇರಾನ್, ೧೭.೧, ಕೆನಡಾ ಮತ್ತು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಮತ್ತು ಆಸ್ಟ್ರೇಲಿಯಾದಲ್ಲಿ ಅವರೇಜ್ ೩೩ ಪರ್ಸೆಂಟ್ ಇದೆ. ಇಂಡಿಯಾದಲ್ಲಿ ನೇಕಡಾ ೯೦ ಪರ್ಸೆಂಟ್ ಜಾಸ್ತಿಯಾಗಿದೆ. ಇದಕ್ಕೆ ಏನು ಕಾರಣ ಎಂದರೆ ಹಲವಾರು ಕಾರಣಗಳನ್ನು ಕೊಡುತ್ತೇನೆ ಉತ್ಪನ್ನದಲ್ಲಿ ಕಡಿಮೆಯಾಗಿರುವುದು ಒಂದು ಕಾರಣ. ಬ್ಲಾಕ್‌ಮನಿ ಜಾಸ್ತಿಯಾಗಿರುವುದು ಎರಡನೆಯ ಕಾರಣ. ಇದರ ಬಗ್ಗೆ ಒಳ್ಳೆಯ ಆರ್ಥಿಕ ತಜ್ಞರು ಕೊಟ್ಟಿರುವ ಅಭಿಪ್ರಾಯ ಇದು. ಹಿಂದೆ ವಾಂಚು ಕಮಿಟಿ ರಿಪೋರ್ಟು ಬಂದಾಗ ೧೨ ಸಾವಿರ ಕೋಟಿ ರೂಪಾಯಿ ಕಪ್ಪು ಹಣ ಇದೆ

ಯೆಂದು ಗೊತ್ತಾಗಿತ್ತು. ಆದರೆ ಈಗ ರಿಸೆಂಟ್ ಆಗಿ ಆರ್ಥಿಕ ತಜ್ಞರುಗಳು ಹೇಳುವುದನ್ನು ನೋಡಿದರೆ ಸುಮಾರು ೧೫ ಸಾವಿರ ಕೋಟಿ ರೂಪಾಯಿ ಕಪ್ಪು ಹಣ ಇದೆಯೆಂದು ಅಂಕಿಸಂಖ್ಯೆಗಳನ್ನು ಕೊಟ್ಟಿದ್ದಾರೆ. ತಾವು ಈಗ ಹೋಲ್‌ಸೇಲ್ ಟ್ರೇಡ್ ತೆಗೆದುಕೊಳ್ಳಬೇಕು ಎಂದು ಹೊರಟಿದ್ದೀರಿ. ಆದರೆ ನೀವು ಸಂಪೂರ್ಣ ವಾಗಿ ಆಹಾರ ಧಾನ್ಯಗಳನ್ನು ಸಂಗ್ರಹಿಸುವುದಕ್ಕೆ ಹೊರಟರೆ ಆ ಕಪ್ಪು ಹಣ ಇಟ್ಟಿರು ವವರು ರೈತರಿಂದ ಧಾನ್ಯಗಳನ್ನು ತೆಗೆದುಕೊಳ್ಳುವುದಕ್ಕೆ ತಮ್ಮ ಕಪ್ಪು ಹಣವನ್ನು ಬಳಸಿಕೊಳ್ಳುತ್ತಾರೆ. ಇದರಿಂದ ತಾವು ಹೋಲ್ ಸೇಲ್ ಟ್ರೇಡ್ ವಹಿಸಿಕೊಳ್ಳು ವುದರಿಂದ ಯಾವರೀತಿಯಾದ ಪ್ರಯೋಜನವಾಗುವುದಿಲ್ಲ. ಕಪ್ಪುಹಣ ತನ್ನದೇ ಆದ ಕೆಲಸವನ್ನು ಮಾಡುತ್ತಿದೆ. ಅದರಿಂದ ಬಡವ ಕ್ರಾನಿಕ್ ಇನ್‌ಫ್ಲೇಷನ್‌ಗೆ ಸಿಕ್ಕಿ ಹಾಕಿಕೊಂಡಿದ್ದಾನೆ. ಬೆಲೆ ಏರಿಕೆ ವಿಷಯದಲ್ಲಿ ಕಪ್ಪು ಹಣದ ಛಾಯೆ ಸಂಪೂರ್ಣ ವಾಗಿ ಆವರಿಸಿ ಅದು ತನ್ನ ಶಕ್ತಿಯನ್ನು ಬೆಳೆಸಿಕೊಂಡು ನಿಂತಿದೆ. ಕಪ್ಪುಹಣ ಇದ್ದಿರುವವರು ಯಾವಾಗಲೂ ಯಾವ ವಸ್ತುಗಳ ಬೆಲೆ ಏರಿಕೆಯಾಗುತ್ತದೆ ಯಾವ ಪದಾರ್ಥಗಳ ಬೆಲೆ ಕಡಿಮೆ ಆಗುತ್ತದೆ ಎಂಬುದನ್ನು ನೋಡುತ್ತಾ ಆ ಸಂದರ್ಭವನ್ನು ಉಪಯೋಗಿಸಿಕೊಳ್ಳುವುದಕ್ಕೆ ಕಾದಿರುತ್ತಾನೆ. ನಾವು ಎಷ್ಟೇ ಭಾಷಣಗಳನ್ನು ಮಾಡಲಿ ಎಷ್ಟೇ ಅಂಕಿ ಸಂಖ್ಯೆಗಳನ್ನು ಕೊಡಲಿ ಅವನು ಅವನ ಕಪ್ಪು ಹಣದ ಶಕ್ತಿ ಯಿಂದ ಬಡ ಜನರನ್ನು ತನ್ನ ಬಲೆಗೆ ಸಿಕ್ಕಿ ಹಾಕಿಸಿಕೊಳ್ಳುತ್ತಾನೆ. ಈ ಬ್ಲಾಕ್ ಮಾರ್ಕೆಟೀಯರ್ಸ್ ಏನು ಇದ್ದಾರೆ ಇವರ ಬಗ್ಗೆ ಮಾನ್ಯ ಶ್ರೀ ಸದಸ್ಯರಾದ ಶೀರನಹಳ್ಳಿ ಚಂದ್ರಶೇಖರ್‌ರವರು ಸಾಕಷ್ಟು ಹೇಳಿದ್ದಾರೆ. ದಳ್ಳಾಳಿಗಳು, ಬ್ಲಾಕ್ ಮಾರ್ಕೆಟೀಯರ್ಸ ಈ ಸಮಯವನ್ನು ಯಾವ ರೀತಿ ಸಂಪೂರ್ಣವಾಗಿ ದುರುಪಯೋಗ ಮಾಡಿಕೊಳ್ಳು ತ್ತಾರೆ ಎಂದು ನಾವು ಹೇಳುವುದಕ್ಕೆ ಆಗುವುದಿಲ್ಲ. ಇವರ ಮೇಲೆ ಯಾವ ವಿರೋಧ ಪಕ್ಷಗಳ ಹತೋಟಿ ಇರುವುದಿಲ್ಲ. ಆದ್ದರಿಂದ ಅವರ ಮೇಲೆ ನೀವು ಹಿಡಿತ ಹಾಕಿ ನಿಮಗೆ ಹಿಡಿತ ಹಾಕಲು ಅವಕಾಶವಿದೆ. ನಮಗೆ ಯಾವರೀತಿಯಿಂದಲೂ ಅವರ ಮೇಲೆ ಹಿಡಿತವಿಲ್ಲ.

ಉಪಾಧ್ಯಕ್ಷರು.—ತಾವು ಎರಡು ನಿಮಿಷದಲ್ಲಿ ಭಾಷಣವನ್ನು ಮುಗಿಸಬೇಕು.

ಶ್ರೀ ಎಸ್. ಬಂಗಾರಪ್ಪ.— ನನಗೆ ನಿಗದಿ ಮಾಡಿದ ಟೈಂ ಜಾಸ್ತಿ ಎಂದು ಕಾಣುತ್ತದೆ.

ಉಪಾಧ್ಯಕ್ಷರು.— ಯಾರು ಹೇಳಿದ್ದು ತಮಗೆ ದಯವಿಟ್ಟು ಒಂದು ನಿಮಿಷ ದಲ್ಲಿ ತಮ್ಮ ಭಾಷಣವನ್ನು ಮುಗಿಸಿ.

ಶ್ರೀ ಎಸ್. ಬಂಗಾರಪ್ಪ.— ಎರಡು ನಿಮಿಷ, ಒಂದು ನಿಮಿಷ ಎಂದು ತಾವು ಕಂಡಿಷನ್ ಹಾಕಿದರೆ ನನಗೆ ಮೆಂಟಲ್ ಸ್ಟ್ರೇನ್ ಆಗುತ್ತದೆ.

ಮಾನ್ಯ ಅಧ್ಯಕ್ಷರೇ, ಚುನಾವಣೆಯ ಕಾಲದಲ್ಲಿ ಇವರು ತಮಗೆ ಅಧಿಕಾರ ಕೊಟ್ಟರೆ ಕಾಳಸಂತೆ ಕೋರರನ್ನು ಬಗ್ಗು ಬಡಿಯುತ್ತೇವೆ, ನಿಜವಾದ ಸಮಾಜವಾದ

ವನ್ನು ನಾವು ತರುತ್ತೇವೆಂದು ಹೇಳಿದ್ದರು. ಆದರೆ ಇವತ್ತು ಏನಾಗಿದೆ ಎಂದರೆ, ಜನತೆಯನ್ನು ಇವರು ಒಪ್ಪಿಸಿ, ವಂಚನೆ ಮಾಡಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಅಧಿಕಾರದಲ್ಲಿರತಕ್ಕ ಇವರು ಇದಕ್ಕಾಗಿ ಯಾವ ರೀತಿಯ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ಯಾವ ರೀತಿ ಕಪ್ಪು ಹಣವನ್ನು ತೆಗೆಯುವುದಕ್ಕೆ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ ಎನ್ನುವ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಇವರಿಂದ ಕೇಳಬೇಕಾಗಿದೆ. ನಾವು ಗರೀಬಿ ಹಟಾವ ಮಾಡುತ್ತೇವೆ, ಬಡತನವನ್ನು ತೊಲಗಿಸುತ್ತೇವೆ ಎಂದು ಇವರು ಹೇಳಿದರೂ, ಇವತ್ತು ದೇಶದಲ್ಲಿ ನೂರಕ್ಕೆ ೯೦ ಜನ ಬಡವರು ಇದ್ದಾರೆ. ಈ ವರ್ಷ ಮಾಡುತ್ತೇವೆ, ಮುಂದಿನ ವರ್ಷ ಮಾಡುತ್ತೇವೆಂದು ಮಿಸ್ ಲೀಡಿಂಗ್ ಸ್ಲೋಗನ್ಸ್ ಹೇಳುವಂಥ ಬುದ್ಧಿವಂತಿಕೆಯನ್ನು ಹೊಂದಿದ್ದಾರೆ ಎಂದು ನಾನು ಸ್ಪಷ್ಟಪಡಿಸುತ್ತೇನೆ.

ಸಾಮಾನುಗಳ ಬೆಲೆ ಏರಿಕೆಯ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಬೆಲೆ ಏರಿಕೆಯನ್ನು ಇಳಿಸುವುದಕ್ಕೆ ಸ್ಪಷ್ಟವಾದಂಥ ಕಾರ್ಯಕ್ರಮವನ್ನು ಏನು ಹಾಕಿದ್ದೇವೆಂದು ಹೇಳುವುದರ ಜೊತೆಗೆ ತಮಿಳುನಾಡಿನಿಂದ ಮೂರು ಸಾವಿರ ಟನ್ ಕ್ವಿಂಟಲ್ ಅಕ್ಕಿಯನ್ನು ಇನ್ನೊಂದು ಸಾವಿರ ಟನ್ ಬ್ರೋಕನ್ ರೈಸ್ ತರಿಸುತ್ತೇವೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆಯನ್ನು ಕೊಟ್ಟಿದ್ದಾರೆ. ಈ ಮೂರು ಸಾವಿರ ಟನ್ ಬೆಂಗಳೂರು ನಗರಕ್ಕೆ ಅಥವಾ ಮೈಸೂರು ರಾಜ್ಯಕ್ಕೆ ೨೦ ದಿವಸಗಳಿಗೆ ಸಾಲದು ಎನ್ನುವ ಮಾತನ್ನು ನಾನು ಕೇಳಿದ್ದೇನೆ. ಒರಿಸ್ಸಾದಲ್ಲಿ, ಮಾನ್ಯ ಜತ್ತಿಯವರನ್ನು ಇದಕ್ಕಾಗಿ ಕೇಳಿದ್ದಾರೆಂದು ನನಗೆ ಗೊತ್ತಾಗಿದೆ ಅವರಿಂದ ಏನು ಉತ್ತರ ಬಂದಿದೆ ಎನ್ನುವುದಕ್ಕೆ ಸ್ಪಷ್ಟವಾದ ಉತ್ತರ ಇವರಿಂದ ಬೇಕು ಎಂದು ನಾನು ಕೇಳುತ್ತೇನೆ.

ಇನ್ನು ಲೆವಿ ಬಗ್ಗೆ ಒಂದೆರಡು ಮಾತುಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ತಮ್ಮ ಪ್ರಕಾರ ಲೆವಿಯ ಬೆಲೆ, ಸುಮಾರು ೭೦–೭೫ ರೂಪಾಯಿಗಳು ಕೋರ್ಸ್ ವರೈಟಿಗೆ ಒಂದು ಕ್ವಿಂಟಾಲ್‌ಗೆ ಎನ್ನುವ ಮಾತನ್ನು ತಾವು ಹೇಳಿದ್ದೀರಿ. ಇನ್ನೆರಡು ಮೂರು ದಿವಸದಲ್ಲಿ ಇದರ ಬಗ್ಗೆ ಸ್ಪಷ್ಟವಾದ ಹೇಳಿಕೆಯನ್ನು ಕೊಡುತ್ತೇವೆಂದು ಹೇಳಿದ್ದಾರೆ. ಆದರೆ ಭತ್ತದ ಬೆಲೆಯನ್ನು ನಿಗಧಿಮಾಡಬೇಕಾದರೆ, ಅಗತ್ಯ ವಸ್ತುಗಳ ಬೆಲೆಯನ್ನು ನೋಡಿ ಅದನ್ನು ನಿಗಧಿ ಮಾಡಬೇಕಾಗುತ್ತದೆ. ಇವತ್ತು ಸಕ್ಕರೆಯ ಬೆಲೆ ಜಾಸ್ತಿಯಾಗಿದೆ. ಅಕ್ಕಿಯ ಬೆಲೆ ಜಾಸ್ತಿಯಾಗಿದೆ; ಲೆವಿ ಬೆಲೆ ೭೦–೭೫ ರೂಪಾಯಿ ಎಂದು ತಾವು ಹೇಳಿದರೆ, ಲೆವಿ ಕೊಡುವ ಜನರ ಪರಿಸ್ಥಿತಿ ಏನಾಗಬಹುದು ಯೋಚನೆ ಮಾಡಿ. ಈ ಒಂದು ಆಧಾರದ ಮೇಲೆ ತಮ್ಮ ಅಭಿಪ್ರಾಯವನ್ನು ನಾವು ವಿರೋಧ ಮಾಡಬೇಕಾಗಿದೆ. ಜನರು ಲೆವಿ ಕೊಡುವುದಿಲ್ಲ ಎಂದು ಹೇಳುತ್ತಾರೆ. ಅಗತ್ಯ ವಸ್ತುಗಳ ಬೆಲೆಯನ್ನು ತಹಬಂದಿಗೆ ತರದೆ ಲೆವಿ ಕೊಡುವುದಿಲ್ಲ ಎಂದು ಜನರು ಹೇಳುತ್ತಾರೆ ಎಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಎಂ. ರುದ್ರಪ್ಪ (ಸಕಲೇಶಪುರ) —ಸನ್ಮಾನ್ಯ ಸಭಾಧ್ಯಕ್ಷರೇ, ಆಹಾರ ಸಮಸ್ಯೆ. ಇದು ಬಹಳ ದೊಡ್ಡ ಸಮಸ್ಯೆ. ಆದರೆ ವಿರೋಧ ಪಕ್ಷದ ಪತಿಯಿಂದ ಮಾತ

ನಾಡಿದ ಸದಸ್ಯರು ಸರ್ಕಾರ ಇದರ ಬಗ್ಗೆ ಬಹಳ ಗುರುತರವಾದ ತಪ್ಪನ್ನು ಮಾಡಿದೆ, ಆದ್ದರಿಂದ ಇದು ಬೃಹದಾಕಾರವಾಗಿ ಬೆಳೆದಿದೆ. ಮತ್ತು ಜನಗಳಿಗೆ ಕಷ್ಟವನ್ನುಂಟು ಮಾಡಿದೆ ಎಂಬುದಾಗಿ ಹೇಳಿದಂಥ ಮಾತನ್ನು ಕೇಳಿ ನನಗೆ ವ್ಯಥೆಯಾಯಿತು. ಏಕೆಂದರೆ, ಈ ಸಮಸ್ಯೆಯನ್ನು ನಮ್ಮ ಮೈಸೂರು ರಾಜ್ಯದ ದೃಷ್ಟಿಯಿಂದ ನೋಡಿದರೆ ಸಾಲದು, ಇಡೀ ಭಾರತದ ಮತ್ತು ಅಂತರ ರಾಷ್ಟ್ರೀಯ ದೃಷ್ಟಿಯಿಂದ ಇದನ್ನು ಇವರು ನೋಡಿದರೆ ಚೆನ್ನಾಗಿತ್ತು ಎಂಬುದಾಗಿ ನಾನು ತಿಳಿದುಕೊಂಡಿದ್ದೇನೆ. ಕಾರಣ ಇಷ್ಟೆ, ೧೯೭೧ರಿಂದ ನಮ್ಮ ದೇಶದಲ್ಲಿ ಅನೇಕ ಸಮಸ್ಯೆಗಳು ಬೃಹದಾಕಾರವಾಗಿ ಬಂದಿವೆ. ನಮ್ಮ ದೇಶವನ್ನು ಆಕ್ರಮಣಕಾರರಿಂದ ತಡೆಗಟ್ಟಬೇಕಾಯಿತು ಬಾಂಗ್ಲಾ ದೇಶದಿಂದ ಸುಮಾರು ಒಂದು ಕೋಟಿ ಜನ ನಿರಾಶ್ರಿತರಿಗೆ ೧೦ ತಿಂಗಳು ನಾವು ಅವರಿಗೆ ಅನ್ನ ಕೊಡಬೇಕಾಯಿತು. ಇದಕ್ಕಿಂತ ಮಿಗಿಲಾಗಿ, ನಮ್ಮ ದೇಶದಲ್ಲಿ ಭೀಕರ ಬರಗಾಲ ಬಂದಿತ್ತು. ಇದೆಲ್ಲಾ ಕಾರಣಗಳಿಂದ ಈ ಸಮಸ್ಯೆ ಉದ್ಭವಿಸಿತು. ನಮ್ಮ ರಾಜ್ಯದ ಪರಿಸ್ಥಿತಿಯನ್ನು ತೆಗೆದುಕೊಂಡರೆ, ಹೋದವರ್ಷ, ನಮ್ಮ ರಾಜ್ಯದಲ್ಲಿ ಉತ್ತರ ಕರ್ನಾಟಕದ ನಾಲ್ಕೈದು ಜಿಲ್ಲೆಗಳಲ್ಲಿ ಭೀಕರ ಬರಗಾಲ ಬಂತು. ಅದರ ಪರಿಣಾಮವಾಗಿ ಅಲ್ಲಿ ಏನು ಆಹಾರ ಪದಾರ್ಥಗಳು ಬೆಳೆಯುತ್ತಿದ್ದವೋ ಅವು ಕಡಿಮೆಯಾದವು. ಹಿಂದೆ ಬೆಳೆಯುತ್ತಿದ್ದರಲ್ಲಿ ಸುಮಾರು ೧೩ ಲಕ್ಷ ಟನ್ ಖೋತಾ ಆಯಿತು. ಹೋದ ವರ್ಷ ೫೦ ಲಕ್ಷ ಟನ್ ಆಹಾರ ಉತ್ಪತ್ತಿಯಾಗಿತ್ತು, ಆದರೆ ೭೧-೭೨ರಲ್ಲಿ ಸುಮಾರು ೬೩ ಲಕ್ಷ ಟನ್ ಆಹಾರ ಉತ್ಪತ್ತಿಯಾಗಿತ್ತು. ಅಂದಮೇಲೆ ಒಂದುಕಡೆ ಬರಗಾಲ, ಮತ್ತು ಒಂದು ಕಡೆ ಆಹಾರ ಧಾನ್ಯ ಕಡಿಮೆಯಾದದ್ದು, ಈ ಎರಡು ಕಾರಣದಿಂದಾಗಿ ಕೆಲವು ಕಡೆ ಆಹಾಕಾರ ಉಂಟಾಯಿತು. ಇದು ನಿಜ. ಆದರೆ ಸರ್ಕಾರ ಇದಕ್ಕೆ ಕಾರಣವಲ್ಲ. ಸರ್ಕಾರ ಈ ಸಮಸ್ಯೆಯನ್ನು ತನ್ನ ಕೈಲಾದ ರೀತಿಯಲ್ಲಿ ದಿಟ್ಟತನದಿಂದ ಎದುರಿಸಿದೆ. ಒಂದು ವಿಚಾರವನ್ನು ಇಲ್ಲಿ ನಾನು ಹೇಳಬೇಕಾಗಿದೆ. ಏನೆಂದರೆ, ಇಷ್ಟೆಲ್ಲಾ ಕಷ್ಟ ಇದ್ದರೂ ಸಹ ನಮ್ಮ ದೇಶದಲ್ಲಿ ಯಾರೂ ಅನ್ನವಿಲ್ಲದೆ ಸತ್ತಿಲ್ಲ ಎಂಬುದನ್ನು ನಾವು ಜ್ಞಾಪಕಕ್ಕೆ ತೆಗೆದುಕೊಂಡರೆ ನಮ್ಮ ಸರ್ಕಾರ ಈ ಸಮಸ್ಯೆಯನ್ನು ಎಷ್ಟರ ಮಟ್ಟಿಗೆ ಎದುರಿಸಿದೆ ಎನ್ನುವುದು ಗೊತ್ತಾಗುತ್ತದೆ. ಇದಕ್ಕಾಗಿ ವಿರೋಧ ಪಕ್ಷದವರು ಸರ್ಕಾರವನ್ನು ಅಭಿನಂದಿಸಬೇಕಾಗಿತ್ತು. ಅಂಥ ದೊಡ್ಡ ಗುಣ ಅವರಲ್ಲಿ ಕಂಡುಬರಲಿಲ್ಲ. ಅದಕ್ಕೂ ಪ್ರತಿಯಾಗಿ, ಸರ್ಕಾರ ಏನು ಮಾಡಿದೆ, ಹಾಗೆ ಮಾಡಿದೆ, ಹೀಗೆ ಮಾಡಿದೆ ಎಂದು ಹೇಳುತ್ತಿದ್ದಾರೆ. ದೇಶದ ಪರಿಸ್ಥಿತಿಯನ್ನು ಅವರು ತಮ್ಮ ಗಮನಕ್ಕೆ ತೆಗೆದುಕೊಂಡಿಲ್ಲ. ಈ ಸಮಸ್ಯೆಯನ್ನು ಬಿಡಿಸಬೇಕಾದರೆ, ಪ್ರಾಮುಖ್ಯವಾಗಿ ಮೂರು ಅಂಶಗಳನ್ನು ನಾವು ಗಮನಿಸಬೇಕಾಗಿದೆ. ಉತ್ಪನ್ನ ಸಂಗ್ರಹಣೆ, ಮತ್ತು ವಿತರಣೆ. ಉತ್ಪನ್ನ ಜಾಸ್ತಿಯಾಗಬೇಕಾದರೆ, ನೀರಾವರಿ ಸೌಕರ್ಯ ಜಾಸ್ತಿಯಾಗಬೇಕು. ಮತ್ತು ರಾಸಾಯನಿಕ ಗೊಬ್ಬರವನ್ನು ಜಮೀನಿಗೆ ಹಾಕಬೇಕು. ಈ ರೀತಿ ಮಾಡಿದರೆ ಉತ್ಪನ್ನ ಜಾಸ್ತಿಯಾಗುತ್ತದೆ. ಅಲ್ಲದೆ ಜನಗಳೂ ಸಹ ಕಷ್ಟಪಟ್ಟು ದುಡಿಯಬೇಕು. ಏಕೆಂದರೆ ನಮ್ಮ ದೇಶದಲ್ಲಿ ಶೇಕಡಾ ೭೦ರಷ್ಟು ಜನ ವ್ಯವಸಾಯದಲ್ಲಿ ತೊಡಗಿದ್ದಾರೆ. ಅದೇ

ಆಸ್ಟ್ರೇಲಿಯಾದಲ್ಲಿ, ಸೇಕಡ, ೧೦, ಬ್ರಿಟನ್‌ನಲ್ಲಿ ೪ರಷ್ಟು, ಅಮೆರಿಕಾದಲ್ಲಿ, ೬ರಷ್ಟು ಜನ ವ್ಯವಸಾಯದಲ್ಲಿ ತೊಡಗಿದ್ದಾರೆ.

ನಮ್ಮ ದೇಶದಲ್ಲಿ ಇಷ್ಟೊಂದು ಪ್ರಮಾಣದಲ್ಲಿ ಜನ ವ್ಯವಸಾಯದಲ್ಲಿ ತೊಡಗಿದ್ದರೂ ಉತ್ಪನ್ನ ಬೇರೆ ದೇಶಗಳಿಗಿಂತ ಕಡಿಮೆಯಾಗಿದೆ. ನಮ್ಮ ದೇಶದಲ್ಲಿ ಜನ ಕಷ್ಟಪಟ್ಟು ಕೆಲಸ ಮಾಡಬೇಕು. ನಾನೂ ರೈತ ಕುಟುಂಬದಿಂದ ಬಂದವನು. ನಮ್ಮ ರೈತರು ಏನು ಮಾಡುತ್ತಾರೆ ಎನ್ನುವುದು ನನಗೂ ಗೊತ್ತಿದೆ. ಪ್ರತಿಯೊಂದಕ್ಕೂ ಅವರು ಸರ್ಕಾರವನ್ನೇ ಅವಲಂಬನೆ ಮಾಡಿಕೊಂಡಿರುತ್ತಾರೆ. ಅವರು ದೇಶದ ಪರಿಸ್ಥಿತಿಯನ್ನು ಅರಿತುಕೊಂಡು ಕಷ್ಟಪಟ್ಟು ಕೆಲಸ ಮಾಡಿ ದೇಶದ ಉತ್ಪನ್ನವನ್ನು ಜಾಸ್ತಿ ಮಾಡಬೇಕು. ಉತ್ಪನ್ನ ಆಗಿದ್ದನ್ನು ಸರಿಯಾದ ರೀತಿಯಲ್ಲಿ ಸಂಗ್ರಹಣೆ ಮಾಡಬೇಕು. ನಮ್ಮ ದೇಶದಲ್ಲಿ ಸೆಂಟ್ರಲ್ ಫುಡ್ ಕಾರ್ಪೋರೇಶನ್ ಎಂದು ಒಂದು ಸಂಸ್ಥೆ ಇದೆ. ಇದು ದೊಡ್ಡ ಕಾರ್ಪೋರೇಷನ್. ಈ ಕಾರ್ಪೋರೇಷನ್ ಜನರ ಬೇಡಿಕೆಯನ್ನು ಪೂರೈಸುವುದಕ್ಕೆ ಸಾಕಾದಷ್ಟು ಶಕ್ತಿಯನ್ನು ಇದು ಹೊಂದಿಲ್ಲ. ಏಕೆಂದರೆ, ದೇಶ ಬಹಳ ದೊಡ್ಡದು, ೫೬ ಕೋಟಿ ಜನಸಂಖ್ಯೆಯಿರತಕ್ಕ ದೇಶಕ್ಕೆ ಒಂದೇ ಕಾರ್ಪೋರೇಷನ್ ಆದರೆ ಸಾಲದು. ಒಂದು ರಾಜ್ಯಕ್ಕೆ ಒಂದರಂತೆ ಆಗಬೇಕು. ಒಂದು ರಾಜ್ಯಕ್ಕೆ ಎರಡು ಆದರೂ ತಪ್ಪಿಲ್ಲ. ಉದಾಹರಣೆಗೆ ಯುಗೋಸ್ಲಾವಿಯಾ ಒಂದು ಚಿಕ್ಕ ರಾಷ್ಟ್ರ. ಅಲ್ಲಿ ಸಾವಿರ ಫುಡ್ ಕಾರ್ಪೋರೇಷನ್ಸ್ ಇವೆಯೆಂದು ನಾನು ಕೇಳಿದ್ದೇನೆ. ಅಂದಮೇಲೆ, ನಮ್ಮ ದೇಶದಲ್ಲಿ ಒಂದು ಫುಡ್ ಕಾರ್ಪೋರೇಷನ್ ಆದರೆ ಸಾಲದು, ಆದ್ದರಿಂದ ನಮ್ಮ ಮುಖ್ಯ ಮಂತ್ರಿಗಳು, ಇದನ್ನು ಮನಗಂಡು, ನಮ್ಮ ರಾಜ್ಯಕ್ಕೆ ಕರ್ನಾಟಕ ಫುಡ್ ಕಾರ್ಪೋರೇಷನ ಒಂದನ್ನು ರಚನೆ ಮಾಡಿದ್ದಾರೆ. ಆ ಸಮಿತಿಯಲ್ಲಿ ಒಳ್ಳೆಯ ದಕ್ಷರನ್ನು ಹಾಕಿದ್ದಾರೆ. ಇದು ನಾನಾ ರೀತಿಯಲ್ಲಿ ಆಹಾರ ಧಾನ್ಯಗಳನ್ನು ಸಂಗ್ರಹಣೆ ಮಾಡುತ್ತದೆ ಎಂದು ನಾವು ನಂಬಬಹುದು. ಪ್ರಾಮುಖ್ಯವಾಗಿ ನಮಗೆ ಬೇಕಾಗಿರತಕ್ಕದ್ದು ಅಕ್ಕಿ. ಸುಮಾರು ಎರಡೂವರೆ ಲಕ್ಷ ಟನ್ ಭತ್ತವನ್ನು ಸಂಗ್ರಹಣೆ ಮಾಡಬೇಕು ಎಂದು ಹೇಳಿ ಒಂದು ಕಾರ್ಯಕ್ರಮವನ್ನು ನಮ್ಮ ಸರ್ಕಾರದವರು ಇಟ್ಟುಕೊಂಡಿದ್ದಾರೆ. ಹೋದ ವರ್ಷ ೬೬ ಸಾವಿರ ಕ್ವಿಂಟಾಲ್ ಭತ್ತ ಸಂಗ್ರಹಣೆಯಾಗಿತ್ತು. ಆದರೂ ಸಹ ಫುಡ್ ಕಾರ್ಪೋರೇಷನ್‌ನಿಂದ ಸರಿಯಾದ ವಿತರಣೆಯಾಗಿಲ್ಲ. ಈ ಸಾರಿ ಜೋಳ ಮತ್ತು ರಾಗಿಯನ್ನು ಸಹ ಸಂಗ್ರಹಣೆ ಮಾಡಬೇಕು ಎಂದು ಹೇಳಿ ಒಂದು ಕಾರ್ಯಕ್ರಮವನ್ನು ಸರ್ಕಾರದವರು ಇಟ್ಟುಕೊಂಡಿದ್ದಾರೆ. ಮುಖ್ಯವಾಗಿ ಇದರಲ್ಲಿ ಅಧಿಕಾರಿಗಳು ಬಹಳ ಪ್ರಾಮಾಣಿಕರಾಗಿರಬೇಕು, ಅಕ್ಕಿ ದಾಸ್ತಾನು ಮಾಡಲು ಸರಿಯಾದ ಉಗ್ರಾಣಗಳಿರಬೇಕು. ಇದಕ್ಕೆ ಸಂಬಂಧಪಟ್ಟಂತೆ Mysore State Ware Housing Corporation ಇದೆ ಅದು ದಾಸ್ತಾನು ಮಾಡುವುದು. ಕೊನೆಯ ಪಕ್ಷ ಪ್ರತಿಯೊಂದು ತಾಲ್ಲೂಕಿಗೂ ಕೂಡ ಒಂದು ಮಳಿಗೆ ಬೇಕು. ಇಲ್ಲದಿದ್ದರೆ ಧಾನ್ಯ ಸಂಗ್ರಹಿಸಲು ಕಷ್ಟವಾಗುತ್ತದೆ.

ಇನ್ನು ಅಕ್ಕಿಯ ವಿತರಣೆ ಬಹಳ ಮುಖ್ಯವಾದುದು. ಆಹಾರವನ್ನು ಏನು

ಸಂಗ್ರಹಿಸುತ್ತೇವೆ. ಅದು ಸರಿಯಾಗಿ ವಿತರಣೆಯಾಗಬೇಕು. ಈಗ ಇವಕ್ಕೆ ಇರುವ ಏಜೆನ್ಸಿ ಕೋ ಆಪರೇಟಿವ್ ಸೊಸೈಟಿಗಳು ಮತ್ತು ಫೇರ್ ಪ್ರೈಜ್ ಷಾಪ್ಸ್. ನಮ್ಮ ಮೈಸೂರು ರಾಜ್ಯದಲ್ಲಿ ಸುಮಾರು ೪ ಸಾವಿರ ಫೇರ್ ಪ್ರೈಜ್ ಷಾಪ್ಸ್ ಇವೆ. ಸಹಕಾರ ಸಂಘಗಳು ಚೆನ್ನಾಗಿ ಕೆಲಸ ಮಾಡುತ್ತಿಲ್ಲವೆಂದು ಈಗ ಕೆಲವು ಮಾನ್ಯ ಮಿತ್ರರು ಹೇಳಿದರು. ಕೆಲವು ಕಡೆ ವಿತರಣೆ ಸರಿಯಾಗಿ ಮಾಡದೆ ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿದ್ದಾರೆ ಎಂದೂ ಹೇಳಿದರು. ಕೆಲವು ಸೊಸೈಟಿಗಳು ಸರಿಯಾಗಿ ಕೆಲಸ ಮಾಡದಿರಬಹುದು. ಎಲ್ಲ ಸೊಸೈಟಿಗಳೂ ಆ ರೀತಿ ಮಾಡುತ್ತಿಲ್ಲ. ಒಟ್ಟಿನಲ್ಲಿ ಹೇಳುವುದಾದರೆ ಇದಕ್ಕಿಂತ ಉತ್ತಮವಾದ ಏಜೆನ್ಸಿ ಹಂಚಿಕೆಗೆ ಬೇರೆ ಇಲ್ಲ. ಸೊಸೈಟಿಗಳ ಜೊತೆಗೆ ವರ್ತಕರು; ಮಿಲ್ ಮಾಲೀಕರು ಮತ್ತು ಫೇರ್ ಪ್ರೈಜ್ ಷಾಪುಗಳವರು ಇವರ ಸಹಕಾರ ಪಡೆಯಬೇಕು. ಇವರೆಲ್ಲರೂ ಕೂಡ ಪ್ರಾಮಾಣಿಕವಾಗಿ ಕೆಲಸ ಮಾಡಬೇಕು. ರೇಷನ್ ಕಾರ್ಡುಗಳನ್ನು ಸರಿಯಾದ ರೀತಿಯಲ್ಲಿ ಹಂಚಿ ತನಿಖೆಮಾಡಿ ಆ ಸಂಬಂಧದಲ್ಲಿ ಲೋಪದೋಷಗಳಿಲ್ಲದಂತೆ ನೋಡಿಕೊಳ್ಳಬೇಕು. ಇದಕ್ಕಿಂತ ಉತ್ತಮ ರೀತಿಯಲ್ಲಿ ಹೇಗೆ ಮಾಡಬೇಕೆಂಬುದನ್ನು ಮಾನ್ಯ ಸದಸ್ಯರು ಹೇಳಲಿ, ಪರಿಹಾರ ಮಾರ್ಗವಿದ್ದರೆ ಸೂಚಿಸಲಿ. ಲೆವಿ ಸಿಸ್ಟಂ ಇರಲೇಬೇಕು, ಅದನ್ನು ವ್ಯವಸ್ಥಿತವಾದ ರೀತಿಯಲ್ಲಿ ಜಾರಿಗೆ ತರಬೇಕು. ಪ್ರಾಮಾಣಿಕತೆಯಿಂದ ಈ ಸಂಬಂಧದಲ್ಲಿ ಕೆಲಸ ಮಾಡಬೇಕು. ವಿತರಣೆ ಮಾಡುವಾಗ ಸಾಮಾನ್ಯವಾಗಿ ಹಳ್ಳಿಗಳವರಿಗೆ ಆಹಾರ ಪದಾರ್ಥಗಳು ದೊರೆಯುವುದಿಲ್ಲ, ಅವರು ಓಪನ್ ಮಾರ್ಕೆಟಿನಲ್ಲಿ ಕೊಳ್ಳಬೇಕಾಗಿದೆ.

ಹಾಗೆ ಮಾಡುವಾಗ ಅವರು ಹೆಚ್ಚು ಬೆಲೆ ಕೊಡಬೇಕಾಗುತ್ತದೆ. ಪಟ್ಟಣದವರಾದರೆ ಬುದ್ಧಿವಂತರು. ಅಲ್ಲಿರುವ ಅಧಿಕಾರಿಗಳು ನೌಕರರು, ಪತ್ರಿಕಾ ಕರ್ತರು ಮುಂತಾದವರು ಗಲಾಟೆಮಾಡಿ ತಮಗೆ ಬೇಕಾದ್ದು ದೊರೆಯುವಂತೆ ಮಾಡಿಕೊಳ್ಳಲು ಪ್ರಯತ್ನ ಮಾಡುವರು. ಅದೇ ಹಳ್ಳಿಯವರಿಗೆ ಅಂಥ ಅವಕಾಶವಿಲ್ಲ. ಆದುದರಿಂದ ಹಳ್ಳಿಗಳಿಗೂ ಧಾನ್ಯ ದೊರೆಯುವಂತೆ ವ್ಯವಸ್ಥೆಮಾಡಬೇಕು. ಅಲ್ಲಿ ಕೂಲಿಕಾರರು, ಅಗ್ರಿಕಲ್ಚರಲ್ ಲೇಬರ್ಸ್ ಮುಂತಾದವರೂ ಇರುವರು. ಎಲ್ಲರೂ ಬೆಳೆಯುವುದಿಲ್ಲ. ಅವರುಗಳಿಗೆ ಆಹಾರ ಪದಾರ್ಥಗಳು ಸರಿಯಾಗಿ ವಿತರಣೆ ಮಾಡಬೇಕು, ಇದಕ್ಕೆ ಎಲ್ಲರೂ ಸಹಕರಿಸಬೇಕು ವರ್ತಕರಲ್ಲಿ ಕಾಳಸಂತೆ ಮಾಡುವವರಿರಬಹುದು. ಆದರೆ ಅವರಲ್ಲೂ ಸಹ ಪ್ರಾಮಾಣಿಕರಾಗಿದ್ದಾರೆ. ಮಿಲ್ ಮಾಲೀಕರು ಸಾಮಾನ್ಯವಾಗಿ ಒಳ್ಳೆಯವರು. ಅವರು ಹಿಂದೆ ಲೇವಿ ಭತ್ತವನ್ನು ಶೇಖರಿಸಿ ಅದನ್ನು ಅಕ್ಕಿಮಾಡಿ ಸರಕಾರಕ್ಕೆ ಸಲ್ಲಿಸುತ್ತಿದ್ದರು. ಸರಕಾರ ಅದನ್ನು ತೆಗೆದುಕೊಳ್ಳುತ್ತಿತ್ತು. ಈಗಲೂ ಕೂಡ ಆ ಏರ್ಪಾಡು ಮಾಡಬಹುದು. ಮಿಲ್ಲುಗಳವರಿಗೆ ಗೋಡೌನ ಇರುವುದರಿಂದ ಹಾಗೆ ಮಾಡಿದರೆ ಅನುಕೂಲವಾಗುವುದು. ಮಿಲ್ಲಿನವರ ಮತ್ತು ವರ್ತಕರ ಸಹಾಯ ತೆಗೆದುಕೊಳ್ಳಬೇಕು. ಉತ್ಪತ್ತಿ ಮತ್ತು ವಿತರಣೆಗೆ ಹೆಚ್ಚು ಗಮನ ಕೊಡಬೇಕು.

ನಮ್ಮ ದೇಶದಲ್ಲಿ ಬೆಳೆಯುವವರು ಜಾಸ್ತಿ ಇದ್ದಾರೆ. ಹಿಂದೆ ಹಳೆಯ ಮೈಸೂರಿನಲ್ಲಿ ರಾಗಿ ಉಪಯೋಗ ಮಾಡುತ್ತಿದ್ದರು. ಈಗ ರಾಗಿಯನ್ನು ಹೆಚ್ಚಾಗಿ ಉಪಯೋಗ ಮಾಡುವುದಿಲ್ಲ. ಅದಕ್ಕೆ ಬದಲಾಗಿ ಅಕ್ಕಿ ಉಪಯೋಗಿಸುವರು. ಅದರ ಜೊತೆಗೆ ಗೋದಿಯನ್ನೂ ಉಪಯೋಗ ಮಾಡಿದರೆ ಒಳ್ಳೆಯದು. ರಾಗಿಯು ರುಚಿಯಾಗಿರುವುದು, ಸತ್ವವಾದ ಆಹಾರ. ಅಕ್ಕಿಯ ಜೊತೆಗೆ ರಾಗಿ, ದ್ವಿದಳ ಧಾನ್ಯಗಳು, ತರಕಾರಿ ಮುಂತಾದುವನ್ನು ಹೆಚ್ಚಾಗಿ ಉಪಯೋಗ ಮಾಡಿ ಅಕ್ಕಿ ಉಪಯೋಗಿಸುವುದನ್ನು ಕಡಿಮೆ ಮಾಡಿದರೆ ಆಹಾರದ ಸಮಸ್ಯೆ ಬಗೆಹರಿಯುವುದು.

ಇನ್ನೊಂದು ಮುಖ್ಯವಾದ ಸಮಸ್ಯೆಯಿದೆ. ಇತರ ರಾಜ್ಯಗಳಿಗೆ ನಮ್ಮ ದೇಶದ ಅಕ್ಕಿ ಸಾಗಾಣಿಕೆಯಾಗುತ್ತಿದೆ ಎಂದು ಹೇಳುತ್ತಿದ್ದಾರೆ ಇದರಲ್ಲಿ ಸ್ವಲ್ಪ ನಿಜಾಂಶ ಇದೆ. ಕೆಲವರು ಪರ್ಮಿಟ ಪಡೆದು ದಕ್ಷಿಣ ಕನಡಾಕ್ಕೆ ತೆಗೆದುಕೊಂಡು ಹೋಗಿ ಅಲ್ಲಿಂದ ಕೇರಳಕ್ಕೆ ಸಾಗಿಸುತ್ತಿದ್ದಾರೆಂದು ಕೇಳಿದ್ದೇವೆ. ಇದನ್ನು ಒಪ್ಪಬೇಕು. ಇದಕ್ಕೆ ಅವಕಾಶವಿಲ್ಲದಂತೆ ಸರಕಾರ ತಕ್ಕ ಬಂದೋಬಸ್ತ ಮಾಡಬೇಕು. ಅದೇ ರೀತಿಯಲ್ಲಿ ಬೆಳಗಾಂನಿಂದ ಮಹಾರಾಷ್ಟ್ರಕ್ಕೆ ಅಕ್ಕಿ ಸಾಗುತ್ತಿದೆ. ಜಿಲ್ಲೆಯಿಂದ ಜಿಲ್ಲೆಗೆ ಸಾಗಿಸಲು ನಿರ್ಬಂಧವಿರಬಾರದು ಎಂದು ಕೆಲವರು ಹೇಳುತ್ತಿದ್ದಾರೆ. ಆದರೆ ಆ ನಿರ್ಬಂಧವನ್ನು ತೆಗೆದುಹಾಕಿದ್ದರೆ ಕೇರಳ ಮಹಾರಾಷ್ಟ್ರ ಮುಂತಾದ ಕಡೆಗಳಿಗೆ ಅಕ್ಕಿ ಸಾಗಿಹೋಗುವುದು. ಆದುದರಿಂದ ಈ ನಿರ್ಬಂಧವಿರಲೇಬೇಕು. ಮತ್ತು ಲೆವಿ ಪದ್ಧತಿಯೂ ಇರಲೇಬೇಕು. ಇದನ್ನು ಸರಕಾರದವರು ಸರಿಯಾಗಿ ನಿರ್ವಹಿಸಬೇಕು. ವಿರೋಧ ಪಕ್ಷದವರು ಸರಕಾರದೊಡನೆ ಸಹಕರಿಸಬೇಕು ಎಂದು ಇಷ್ಟು ಹೇಳಿ ಮಾತನಾಡಲು ಅವಕಾಶವಿತ್ತ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೇ, ಈ ಒಂದು ಪ್ರಶ್ನೆಯ ಚರ್ಚೆ ಪ್ರಾರಂಭಿಸಿದ ನಮ್ಮ ಸ್ನೇಹಿತರು ನಾವು ಸರಕಾರಕ್ಕೆ ಸೂಕ್ತವಾದ ಸಲಹೆ ಕೊಡಬೇಕಾಗಿದ್ದ ಈ ಸಮಯದಲ್ಲಿ ಹೊಸ ಆರ್ಥಿಕ ವ್ಯಾಖ್ಯಾನ ಮಾಡಿದರು. ಅವರಿಗೆ ಸತ್ಯ ಈಗ ಗೊತ್ತಾಯಿತು. ಈ ಮಾತನ್ನು ಹಿಂದೆ ನಾವು ಹೇಳಿದಾಗ ಹಾಸ್ಯ ಮಾಡುತ್ತಿದ್ದರು. ಅದರಲ್ಲಿಯೂ ಕೂಡ ಖೋತ ಆಯವ್ಯಯ ಈ ದೇಶದಲ್ಲಿ ಯೋಜನೆಗಳು ಪ್ರಾರಂಭವಾದಾಗಲೇ ಪ್ರಾರಂಭವಾಗಿದೆ. ಇದರಿಂದ ದೇಶವನ್ನು ಕಷ್ಟದ ಸ್ಥಿತಿಗೆ ದೂಡುತ್ತೀರಿ ಎಂದು ಸೋಷಿಯಲಿಸ್ಟ್ ಪಕ್ಷದವರು ಹೇಳಿದ ಮೇಲೆ ಖರ್ಚಿನ ಮೇಲೆ ಮಿತಿ ಹಾಕಬೇಕೆಂದು ದಿವಂಗತ ಡಾ ಲೋಹಿಯರವರು ಅದನ್ನು ಲೋಕಸಭೆಯಲ್ಲಿ ಶ್ರೀ ಮುರಾರ್ಜಿಯವರಿಗೆ ಹೇಳಿದರು. ಈಗ ಅದು ಸತ್ಯವಾಗಿ ಕಾಣುತ್ತಿದೆ. ನಿಮ್ಮ ಯೋಜನೆಗಳೆಲ್ಲಾ ಪೂರ್ಣವಾದ ಮೇಲೆ ಅದರ ಪ್ರತಿಫಲವೇನೆಂದರೆ ಬೆಲೆ ಏರಿಕೆ, ನಿರುದ್ಯೋಗ ಮತ್ತು ಬಡತನ ಜಾಸ್ತಿಯಾಗುತ್ತಿರುವುದು ಕಂಡುಬರುತ್ತಿದೆ. ಅದರಲ್ಲೂ ಕಳೆದ ಎರಡು ವರ್ಷಗಳ ಪರಿಸ್ಥಿತಿಯನ್ನು ನೋಡಿದರೆ ಸಾಮಾನ್ಯ ಜನರು ಜೀವನ ನಡೆಸುವುದು ಕಷ್ಟದಾಯಕವಾಗಿದೆ. ಬಹುಶಃ

ಬೇರೆ ದೇಶದಲ್ಲಿ ಈ ಪರಿಸ್ಥಿತಿ ಬಂದಿದ್ದರೆ ಅದಕ್ಕೆ ಕಾರಣರಾದವರ ತಲೆ ಹೋಗಾಗುತ್ತಿತ್ತು; ಬೀದಿ ಬೀದಿಯಲ್ಲಿ ರಕ್ತ ಹರಿಯುತ್ತಿತ್ತು. ಆದರೆ ಈ ದೇಶದಲ್ಲಿ ಹಾಗಾದವರೆ ಜನ ಇದುವರೆಗೆ ಹೇಗೋ ಸಹಿಸಿಕೊಂಡಿದ್ದಾರೆ. ಆದರೆ ಇದೇ ರೀತಿಯಲ್ಲಿ ಮುಂದೆಯೂ ಇರುವುದಿಲ್ಲ, ನಿಮ್ಮ ತಲೆ ಶಾಶ್ವತವಾಗಿ ಉಳಿಯುವುದಿಲ್ಲ. ಹೇಗಿದ್ದರೂ ನಮ್ಮ ತಲೆ ಶಾಶ್ವತವಾಗಿ ಉಳಿಯುತ್ತದೆಂದು ನಂಬಿಕೊಂಡಿದ್ದರೆ ಅದನ್ನು ದೂರ ಮಾಡಬೇಕಾದ ಕಾಲ ದೂರವಿಲ್ಲ. ಇನ್ನಾದರೂ ಕಣ್ಣು ತೆರೆದು ನೋಡಬೇಕು. ಹಣದ ಉಬ್ಬರ ಜಾಸ್ತಿಯಾಗಿದೆಯೆಂದು ಹಿಂದೆ ಮುಖ್ಯ ಮಂತ್ರಿಗಳು ಹೇಳಿದ್ದರು. ಅವನ್ನು ಎಲ್ಲರೂ ಒಪ್ಪಿದ್ದಾರೆ. ಅದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಹಿಂದೆ ಶ್ರೀ ರಾಜಶೇಖರಮೂರ್ತಿಯವರು ಮಂತ್ರಿಗಳಾಗಿದ್ದರು, ಅವರ ಮಿತ್ರರೊಂದಿಗೆ ಅವರು ಸರಕಾರ ನಡೆಸಿದ್ದಾರೆ. ಉತ್ಪತ್ತಿಯ ಕ್ಷೇತ್ರದಲ್ಲಿ ಬಂಡವಾಳ ಹಾಕಿರುವುದಾಗಿ ಹೇಳಿದರು. ಆದರೆ ಉತ್ಪತ್ತಿರಹಿತ ಕ್ಷೇತ್ರದಲ್ಲಿ ಅಸಂಖ್ಯಾತವಾದ ಹಣ ಹಾಕಿರುವುದು ಕಂಡುಬರುತ್ತದೆ. ಅಂದಿನಿಂದ ಯಾವ ಯಾವ ಉದ್ಯಮದ, ಯೋಜನೆ ಮುಂತಾದುವುಗಳ ಮೇಲೆ ಹಣ ಹಾಕಲಾಗಿದೆಯೋ ಅದರಿಂದ ಸಾಕಷ್ಟು ಪ್ರತಿಫಲ ಸಿಕ್ಕದೆ ಇಂದು ಹಣದ ಪ್ರಸಾರ ಜಾಸ್ತಿಯಾಗಿ ಉತ್ಪತ್ತಿ ಕಡಿಮೆಯಾಗಿದೆ, ಬೆಲೆ ಜಾಸ್ತಿಯಾಗಿದೆ.

ನಾವು ಬೆಲೆ ನೀತಿಯನ್ನು ಅನುಸರಿಸಿ ಎಂದು ಹಿಂದಿನಿಂದಲೂ ಹೇಳುತ್ತಲೇ ಬಂದಿದ್ದರೂ ಸರ್ಕಾರದವರು ಅದನ್ನು ಮಾಡುತ್ತಿಲ್ಲ. ಅದಕ್ಕೆ ಬದಲು ಎಲ್ಲಾದರೂ ಜನರು ಆಹಾರ ಇಲ್ಲ ಎಂದು ಕೂಗೆಬ್ಬಿಸಿದರೆ ಅಲ್ಲಿಗೆ ಒಂದಿಷ್ಟು ಕಾಳನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಆದರೆ ಇದು ಸರಿಯಾದ ನೀತಿಯಲ್ಲ. ಸರ್ಕಾರದವರು ಈ ದಿವಸ ರೈತನ ಹತ್ತಿರಹೋಗಿ ಹೆದರಿಸಿ ಕಾಳನ್ನು ತಂದಂತೆ ಇವರು ಆ ಬಿರ್ಲಾ ಹತ್ತಿರ ಹೋಗಿ ಅವನಿಂದ ಬಡವರಿಗೆ ೨ ಲಕ್ಷ ಗಜ ಬಟ್ಟೆ ಬೇಕೆಂದು ಹೇಳಿ ತರಲಿ ನೋಡುತ್ತೇನೆ. ಅದು ಇವರಿಂದ ಖಂಡಿತಾ ಸಾಧ್ಯವಿಲ್ಲ. ಹಾಗೇ ಇವರಿಗೆ ಆ ವೆಸ್ಟ್ ಕೋಸ್ಟ್ ಪೇಪರ ಮಿಲ್ಲಿಗೆ ಹೋಗಿ ಕಾಗದ ತರುವುದಕ್ಕೆ ಸಾಧ್ಯವೇ? ಸಾಧ್ಯವಿಲ್ಲ. ಆದುದರಿಂದ ನಾವು ಹೇಳುತ್ತಿರುವುದು ಸರ್ಕಾರ ದೇಶದಲ್ಲಿ ಈ ಜನರ ನಿತ್ಯಅಗತ್ಯ ವಸ್ತುಗಳ ಬಗ್ಗೆ ಒಂದು ಬೆಲೆ ನೀತಿಯನ್ನು ಅನುಸರಿಸುತ್ತಿಲ್ಲ ಎಂದು ಆಕ್ಷೇಪಣೆ ಮಾಡುತ್ತಿದ್ದೇವೆ. ಈ ಬೆಲೆಗಳನ್ನು ನಿಗದಿ ಮಾಡತಕ್ಕ ಕಾಲದಲ್ಲಿ ರೈತರು ಉತ್ಪಾದನೆ ಮಾಡತಕ್ಕ ವಸ್ತುಗಳಿಗೂ ಮತ್ತು ಕೈಗಾರಿಕಾ ಕ್ಷೇತ್ರಗಳಲ್ಲಿ ಉತ್ಪತ್ತಿಯಾಗತಕ್ಕ ವಸ್ತುಗಳಿಗೂ ಬೆಲೆಯಲ್ಲಿ ಒಂದು ಸಾಮ್ಯವಿರಬೇಕು. ನಾವು ಇದನ್ನೇ ಹಿಂದಿನಿಂದಲೂ ಒತ್ತಾಯ ಮಾಡುತ್ತ ಬಂದಿದ್ದೇವೆ. ಆದರೆ ಇತ್ತೀಚಿಗೆ ಆಡಳಿತ ವರ್ಗದಲ್ಲೂ ಇದನ್ನು ಮಾಡಬೇಕೆಂಬ ಸೂಚನೆಗಳು ಕಂಡುಬರುತ್ತಿರುವುದು ಒಂದು ಶುಭಸೂಚನೆ ಎನ್ನಬೇಕು. ಈ ದಿವಸ ಸರ್ಕಾರದವರು ಭತ್ತಕ್ಕೆ ಹೇಗೆ ಒಂದು ಬೆಲೆಯನ್ನು ನಿರ್ಧಾರ ಮಾಡುತ್ತಾರೋ ಅದರ ದಾಮಾಷದಲ್ಲಿ ರೈತರಿಗೆ ಅಗತ್ಯವಾಗಿ ಬೇಕಾಗತಕ್ಕ ಸಿಮೆಂಟ ಆಗಲಿ ಬಟ್ಟೆಯಾಗಲೀ ಸೀಮೆ ಎಣ್ಣೆಯಾಗಲೀ ಅಥವಾ

ಇನ್ನು ಇತರೇ ಯಾವುದೇ ದಿನಬಳಕೆಗೆ ಅವಶ್ಯಕವಾಗಿ ಬೇಕಾಗುವ ವಸ್ತುಗಳ ಬೆಲೆ ಯನ್ನೂ ಕೂಡ ನಿಗದಿ ಮಾಡಬೇಕೆಂದು ಹೇಳುತ್ತೇನೆ. ಆದರೆ ಹೀಗೆ ನಿಗದಿ ಮಾಡತಕ್ಕ ಬೆಲೆಯಲ್ಲಿ ಒಂದು ವಸ್ತುವಿನ ಬೆಲೆಗೂ ಇನ್ನೊಂದು ವಸ್ತುವಿನ ಬೆಲೆಗೂ ಒಂದು ಸಾಮಾನ್ಯ ರೀತಿಯ ಸಾಮ್ಯ ಇರಬೇಕೆಂದು ಹೇಳುತ್ತಿದ್ದೇನೆ. ಆದರೆ ಇಲ್ಲಿಯತನಕ ಇಂಥ ಒಂದು ಪ್ರಯತ್ನವನ್ನು ಸರ್ಕಾರದವರು ಮಾಡಿಲ್ಲ ಇದರ ಬದಲು ಇವರು ಯಾವತ್ತೂ ಮರ ಹತ್ತಿ ಅದರ ಬುಡವನ್ನು ಕಡಿಯತಕ್ಕ ಕೆಲಸವನ್ನೇ ಮಾಡುತ್ತಿದ್ದಾರೆ. ಇದರಿಂದ ಇವರಿಗೆ ಅನೇಕ ತೊಂದರೆಗಳಾಗುತ್ತವೆ. ಈ ದಿವಸ ದೇಶದಲ್ಲಿ ಉತ್ಪನ್ನ ಆಗತಕ್ಕ ಸಕ್ಕರೆಯಲ್ಲಿ ಶೇಕಡ ೭೦ರಷ್ಟು ಸಕ್ಕರೆಯನ್ನು ಸರ್ಕಾರದವರು ಹಂಚತಕ್ಕ ಬಗ್ಗೆ ತಮ್ಮ ಕಡೆಗೆ ತೆಗೆದುಕೊಂಡು ಕೆ. ಜಿ ಒಂದಕ್ಕೆ ೩.೧೫ ರೂ. ಗಳ ದರವನ್ನು ನಿಗದಿ ಮಾಡಿದ್ದಾರೆ. ಇದರೆ ನಾನು ಕೇಳಿ ತಿಳಿದಿದ್ದರಲ್ಲಿ ಇಷ್ಟು ಅಧಿಕವಾದ ಬೆಲೆಯನ್ನು ಇವರು ಸಕ್ಕರೆಗೆ ನಿಗದಿ ಮಾಡಿದ್ದು ಅನ್ಯಾಯ ಎಂದು ಹೇಳಬೇಕಾಗಿದೆ ಏಕೆಂದರೆ ಕಬ್ಬನ್ನು ಬೆಳೆಯತಕ್ಕ ವೆಚ್ಚ ಅದಕ್ಕೆ ಹಾಕಿದತಕ್ಕ ಬಂಡವಾಳ ಮತ್ತು ಅದಕ್ಕೆ ತೆಗೆಯಬೇಕಾದ ಲಾಭ ಎರಡನ್ನೂ ಗಣನೆಗೆ ತೆಗೆದು ಕೊಂಡರೂ ಕೆ. ಜಿ. ಸಕ್ಕರೆಗೆ ಒಂದು ರೂಪಾಯಿ ೮೦ ಪೈಸೆಗೆ ಜಾಸ್ತಿಯಾಗುವುದಿಲ್ಲ ವೆಂದು ವ್ಯಕ್ತಪಟ್ಟಿದೆ. ಅಂದರೆ ಒಂದು ರೂಪಾಯಿ ೮೦ ಪೈಸೆಗೆ ಮಾರಬೇಕಾಗಿದ್ದ ಸಕ್ಕರೆಯನ್ನು ಸರ್ಕಾರದವರು ಈ ದಿವಸ ಕೆ.ಜಿ. ಒಂದಕ್ಕೆ ಎರಡು ರೂಪಾಯಿ ೧೫ ಪೈಸೆಗೆ ಮಾರಾಟ ಮಾಡುತ್ತಿರುವುದರಿಂದ ಸರ್ಕಾರಕ್ಕೆ ಹೇರಳವಾದ ಲಾಭ ಇದರಿಂದ ದೊರೆಯುತ್ತಿದೆ ಎಂಬುದರಲ್ಲಿ ಸಂದೇಹವೇ ಇಲ್ಲ. ಈ ದಿವಸ ಈ ಸಕ್ಕರೆಗೆ ಬೆಲೆ ಯನ್ನು ಸರ್ಕಾರದವರು ನಿಗದಿ ಮಾಡಿದಂತೆ ಬೇರೆ ವಸ್ತುಗಳಿಗೂ ಏಕೆ ನಿಗದಿ ಮಾಡ ಲಿಲ್ಲ? ಈಗಲಾದರೂ ಸರ್ಕಾರದವರು ಈ ಬೆಲೆಗಳನ್ನು ನಿಗದಿ ಮಾಡುವುದಕ್ಕೆ ಪ್ರಯತ್ನ ಮಾಡಿ ಎಂದು ಹೇಳುತ್ತೇನೆ. ನಾನು ಹೇಳುತ್ತಿರುವ ಸಾಮಾನುಗಳ ಬೆಲೆ ಎಂದರೆ ಸಾಮಾನ್ಯ ಜನರಿಗೆ ದಿನವಹಿ ಬಳಕೆಗೆ ಅತ್ಯವಶ್ಯಕವಾಗಿ ಬೇಕಾಗು ವಂಥ ಅಗತ್ಯ ವಸ್ತುಗಳ ಬೆಲೆಯನ್ನು ನಿಗದಿ ಮಾಡಿ ಎಂದು ಒತ್ತಾಯ ಮಾಡುತ್ತಿ ದ್ದೇನೆ.

ಈ ದಿವಸ ಭತ್ತವನ್ನು ಲೆವಿ ಸಿಸ್ಟಂ ಪ್ರಕಾರ ವಸೂಲ್ಮಾಡುತ್ತಿದ್ದಾರೆ. ನಮ್ಮ ರಾಜ್ಯದಲ್ಲಿ ಇರತಕ್ಕ ಒಟ್ಟು ಜನಸಂಖ್ಯೆ ಮೂರು ಕೋಟಿ. ಇದರಲ್ಲಿ ಸುಮಾರು ೭೦—೭೫ ಲಕ್ಷ ಜನರು ಪಟ್ಟಣಗಳಲ್ಲಿ ವಾಸಮಾಡಿಕೊಂಡಿದ್ದಾರೆ ಇನ್ನುಳಿದ ಜನರು ಗ್ರಾಮಾಂತರ ಪ್ರದೇಶಗಳಲ್ಲಿದ್ದಾರೆ ನಾನು ಕೇಳುತ್ತಿರುವುದು ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಒಬ್ಬನಿಗೆ ಒಂದು ತಿಂಗಳಿಗೆ ೧೫ ಕೆ.ಜಿ ದವಸವನ್ನು ಅಂದರೆ ಅದು ಅಕ್ಕಿಯಾಗಬಹುದು, ಜೋಳವಾಗಬಹುದು ಅಥವಾ ಗೋದಿಯಾಗಬಹುದು ಅದರಂತೆ ನಗರಗಳಲ್ಲಿ ದೊಡ್ಡ ದೊಡ್ಡ ಪಟ್ಟಣಗಳಲ್ಲಿರತಕ್ಕವರಿಗೆ ತಿಂಗಳಿಗೆ ಹಾಲಿ ಕೊಡತಕ್ಕ ದರದಂತೆ ತಿಂಗಳಿಗೆ ೮ ಕೆ.ಜಿ. ಕೊಟ್ಟರೆ ಸಾಕೆಂದು ಹೇಳುತ್ತೇನೆ. ಇವರು ಕಡಿಯುತಕ್ಕ ಕೆಲಸ ಅಷ್ಟರಲ್ಲೇ ಇದೆ. ಈ ಲೆಕ್ಕದ ಪ್ರಕಾರ ಗ್ರಾಮಾಂತರ ಪ್ರದೇಶ

ದಲ್ಲಿರತಕ್ಕ ಸುಮಾರು ಎರಡು ಕಾಲು ಕೋಟಿ ಜನಕ್ಕೆ ಬೇಕಾದ್ದು ಒಟ್ಟು ಆಹಾರದ ಪ್ರಮಾಣ ೪೦ ಲಕ್ಷ ಟನ್ ಬೇಕಾಗುತ್ತದೆ. ಇನ್ನು ನಗರವಾಸಿಗಳಿಗೆ ಬೇಕಾದ್ದು ೮—೧೦ ಟನ್ ಲಕ್ಷ ಟನ್ನುಗಳು; ಅಂದರೆ ನಮ್ಮ ರಾಜ್ಯಕ್ಕೆ ಒಟ್ಟು ಮೂರು ಕೋಟಿ ಜನಕ್ಕೂ ಬೇಕಾದ ಆಹಾರದ ಪ್ರಮಾಣ ಎಷ್ಟೆಂದರೆ ೫೦ ಲಕ್ಷ ಟನ್ನಾದರೆ ಸಾಕೆಂದು ನಾನು ಅಭಿಪ್ರಾಯಪಡುತ್ತೇನೆ. ಇಷ್ಟನ್ನು ನಾವು ಬೆಳೆದರೆ ಇಲ್ಲಿ ಆಹಾರ ಧಾನ್ಯಗಳ ಹಂಚಿಕೆಯನ್ನು ವ್ಯವಸ್ಥಿತವಾಗಿ ವಿತರಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ಕಾಣುತ್ತದೆ ಆದರೆ ನಮ್ಮ ಸರ್ಕಾರದವರು ಕೊಟ್ಟಿರತಕ್ಕ ಅಂಕಿ ಅಂಶಗಳ ಪ್ರಕಾರ ನಮ್ಮ ರಾಜ್ಯದಲ್ಲಿ ಕಳೆದ ವರ್ಷದಲ್ಲಿ ಉತ್ಪತ್ತಿಯಾದದ್ದು ೫೦ ಲಕ್ಷ ಟನ್ ಆಹಾರ ಧಾನ್ಯ ಎಂದು ಹೇಳಿ, ಆದರೆ ಹಿಂದಿನ ವರ್ಷದ ಹಿಂದೆ ಎರಡು ವರ್ಷಗಳಲ್ಲಿ ದೇಶದಲ್ಲಿ ಕ್ಷಾಮವುಂಟಾಗಿ ಬೆಳೆಗಳು ಸರಿಯಾಗಿ ಆಗದೆ ಇದ್ದ ಕಾರಣ ಆ ಅಂದಾಜಿನಲ್ಲಿ ಒಂದೆರಡು ಲಕ್ಷ ಟನ್ ಕಡಿಮೆ ಆಗಿರಬೇಕೆಂದು ಲೆಕ್ಕ ಹಿಡಿದರೂ ನಮಗೆ ಅಗತ್ಯವಾದ ಆಹಾರ ಧಾನ್ಯಗಳು ನಮ್ಮಲ್ಲಿದ್ದವೆಂದೇ ಗೊತ್ತಾಗುತ್ತದೆ. ಆದಾಗ್ಯೂ ಹಂಚಿಕೆಯಲ್ಲಿ ಒಂದು ವ್ಯವಸ್ಥೆ ಇಲ್ಲದ ಕಾರಣ ದೇಶದಲ್ಲಿ ಇಂದು ಕೊರತೆ ಎದ್ದು ಕಾಣುವುದಕ್ಕೆ ಅವಕಾಶವಾಗಿದೆ ಎಂದು ಹೇಳಬಹುದು. ಇನ್ನು ಬರಲಿರುವ ವರ್ಷದಲ್ಲಿ ನಮ್ಮ ರಾಜ್ಯದಲ್ಲಿ ನಾವು ನಿರೀಕ್ಷಿಸಿರುವ ಪ್ರಕಾರ ಬೆಳೆಯಾದರೆ ೬೫ರಿಂದ ೭೦ ಲಕ್ಷ ಟನ್ ಆಹಾರ ಉತ್ಪತ್ತಿಯಾಗುತ್ತದೆ. ನಮ್ಮಲ್ಲಿ ಖರ್ಚಾಗುವುದು ೫೦ ಲಕ್ಷ ಟನ್ನುಗಳು ಮಾತ್ರ. ಆದರೆ ನಾವು ಬೆಳೆಯುವುದು ೬೫—೭೦ ಲಕ್ಷ ಟನ್ನುಗಳಾಗಿದ್ದರೂ ನಮ್ಮಲ್ಲಿ ಬೇಕಾದ್ದು ೫೦ ಲಕ್ಷ ಟನ್ನುಗಳೆಂದು ಗೊತ್ತಾಗಿದ್ದರೂ ದೇಶದಲ್ಲಿ ಏಕೆ ಈ ಆಹಾರದ ಕೊರತೆ ಕಾಣುತ್ತಿದೆ? ಕಾರಣ ಇದರ ವಿತರಣೆಯಲ್ಲಿ ಸರಿಯಾಗಿಲ್ಲ ಅನ್ನುವುದೇ ಆಗಿದೆ. ಇಲ್ಲಿ ಏನೋ ಅವ್ಯವಹಾರಗಳು ಇದರ ಹಂಚಿಕೆಯಲ್ಲಿ ಆಗುತ್ತಿದೆ ಎನ್ನದೆ ವಿಧಿಯಿಲ್ಲ ಈ ದಿವಸ ವ್ಯವಸಾಯಗಾರರನ್ನು ಲೆವಿ ಕೇಳಿದರೆ ಆತ ಎಂದಿಗೂ ಕೊಡುವುದಿಲ್ಲ ಎಂದು ಹೇಳುವುದಿಲ್ಲ. ಆದರೆ ಆತನಿಗೆ ಬೇಕಾದ ವಸ್ತುಗಳು ಆತನಿಗೆ ನಿಗದಿಯಾದ ಬೆಲೆಯಲ್ಲಿ ಸಿಕ್ಕುತ್ತೆಂಬ ಭರವಸೆ ಕೊಟ್ಟರೆ ಆತ ಕೊಟ್ಟೇ ಕೊಡುತ್ತಾನೆ. ಅದನ್ನು ಮಾಡದೆ ನಗರಗಳಲ್ಲಿ ಇರತಕ್ಕ ನೌಕರರ ಹಾಗೂ ಕಾರ್ಮಿಕ ವರ್ಗದವರ ಒತ್ತಡಕ್ಕೆ ಸಿಕ್ಕಿ ಹಳ್ಳಿ ಜನರಿಂದ ಧಾನ್ಯವನ್ನು ಸುಲಿಯುವುದಕ್ಕೆ ಹೊರಟಿದ್ದೀರಿ. ಹಳ್ಳೀ ಜನರಿಗೆ ಅತ್ತ ನಗರಗಳಲ್ಲಿರತಕ್ಕ ಜನರಿಗೆ ಒಂದಂತೆ ಸಂಬಳವೂ ಬರುವುದಿಲ್ಲ; ಇತ್ತ ಅವರಿಗೆ ಅವರಿಗೆ ಬೇಕಾದ ಆಹಾರ ವಸ್ತುಗಳೂ ಸಿಕ್ಕುವುದಿಲ್ಲ. ಅಲ್ಲಿಯೂ ಕೂಲಿಗಾರರಿದ್ದಾರೆ, ಬಡವರಿದ್ದಾರೆ. ಅವರು ಸತ್ತರೂ ಕೂಡ ಸರ್ಕಾರ ಅತ್ತ ಕಡೆಗೆ ತಮ್ಮ ಕಿವಿಯನ್ನೂ ಸಹಾ ತಿರುಗಿಸುವುದಿಲ್ಲ. ಇದು ಆಗಬಾರದು. ದೇಶದಲ್ಲಿರತಕ್ಕ ಎಲ್ಲಾ ಜನರಿಗೂ ಒಂದೇ ರೀತಿಯಲ್ಲಿ ಆಹಾರ ಧಾನ್ಯಗಳು ವಿತರಣೆಯಾಗಬೇಕು. ಈಗಲಾದರೂ ಸರಿ ಸರ್ಕಾರದವರು ರೈತನಿಗೆ ಬೇಕಾಗುವಷ್ಟು ಬಿತ್ತನೆಗೆ ಮತ್ತು ಅವನಿಗೆ ವರ್ಷಕ್ಕೆ ಖರ್ಚಿಗೆ ಆಗುವಷ್ಟು ಧಾನ್ಯವನ್ನು ಬಿಟ್ಟು ಇನ್ನು ಆತನಿಗೆ ದಿನವಹಿ ಬೇಕಾಗತಕ್ಕ ಅಗತ್ಯ ವಸ್ತುಗಳನ್ನು ಅಂದರೆ,

ನಾನು ಸಿಗರೇಟ ಇತ್ಯಾದಿ ವಸ್ತುಗಳನ್ನು ಕೇಳುತ್ತಿಲ್ಲ, ಎಣ್ಣೆ, ಬಟ್ಟೆ ಇತ್ಯಾದಿ ವಸ್ತುಗಳು ಒಂದು ನಿಖರವಾದ ಬೆಲೆಗೆ ದೊರೆಯುವಂತೆ ಮಾಡಿದರೆ ಸರ್ಕಾರಕ್ಕೆ ಬೇಕಾದ ಧಾನ್ಯಗಳು ತಾನಾಗಿ ದೊರೆಯುತ್ತವೆ.

ಆದ್ದರಿಂದ ಇದನ್ನು ತಾವು ಆಲೋಚನೆ ಮಾಡಬೇಕು. ಲೆವಿಯನ್ನು ವಿರೋಧ ಮಾಡುವವರು ನಾವಲ್ಲ. ಅದನ್ನು ಹಾಗೆಯೇ ಉಳಿಸಿಕೊಂಡಿರುವವರು ಜಮೀನ್ದಾರರು. ಸೋಷಿಯಲಿಸ್ಟ್ ಪಾರ್ಟಿಯವರದು ಈ ಕೆಲಸವಲ್ಲ. ಲೇವಿ ಬಗ್ಗೆ ಚಳುವಳಿ ಮಾಡುತ್ತೇವೆಂದು ಹೇಳುವುದು ನಮ್ಮ ರೈತರ ಕೆಲಸವಲ್ಲ. ಅನೇಕರು ಎರಡು ಕ್ವಿಂಟಾಲ್ ಮೂರು ಕ್ವಿಂಟಾಲ್ ಕೊಡುವದನ್ನು ಉಳಿಸಿಕೊಂಡು ಲಾಭ ಮಾಡಿಕೊಂಡಿದ್ದಾರೆ. ಈಗ ನೀವು ಬಟ್ಟೆಯನ್ನು ಕೊಡುತ್ತಿದ್ದೀರಿ. ಬಹಳ ಚೆನ್ನಾಗಿದೆ ನಾನೂ ಸಹ ನೋಡಿದ್ದೇನೆ. ಬಹಳ ಕಡಿಮೆ ಬೆಲೆಯಲ್ಲಿ ಕೊಡುತ್ತಿದ್ದೀರಿ. ೧–೬೦ ಪೈಸೆಯಂತೆ ಕೊಡುತ್ತಿದ್ದೀರಿ. ಆದರೆ ಇವತ್ತು ಅಂತಹ ಬಟ್ಟೆ ಸಾಕಷ್ಟು ಪ್ರಮಾಣದಲ್ಲಿ ಸಿಗುತ್ತಾ ಇಲ್ಲ. ಅದು ಸಾಕಷ್ಟು ರೀತಿಯಲ್ಲಿ ಸಿಗುವ ಹಾಗೆ ವ್ಯವಸ್ಥೆ ಮಾಡಬೇಕು. ಇದೇ ರೀತಿಯಲ್ಲಿ ೧–೬೦ ರಂತೆ ಕೊಡುವದಾದರೆ ನಮ್ಮ ರೈತರಿಗೆ ಬಹಳ ಮಟ್ಟಿಗೆ ಅನುಕೂಲವಾಗುತ್ತದೆ. ಸಾಕಾದಷ್ಟು ಪ್ರಮಾಣದಲ್ಲಿ ಆ ಬಟ್ಟೆ ಸಿಗದಿರುವದೇ ಒಂದು ಕೊರತೆಯಾಗಿದೆ. ಇವತ್ತು ತಾವು ಮಿಲಗಳಲ್ಲಿ ಕೋರಾ ಬಟ್ಟೆಗಳನ್ನು ಅಂದರೆ ದಪ್ಪ ಬಟ್ಟೆಗಳನ್ನು ತಯಾರುಮಾಡಿ ಕೊಡಬೇಕೆಂದು ಹೇಳಿದ್ದೀರಿ. ಆದರೂ ಸಹ ಅನೇಕ ಮಿಲ್‌ಗಳಲ್ಲಿ ಅಂತಹ ಬಟ್ಟೆಗಳನ್ನು ತಯಾರು ಮಾಡುವದನ್ನೇ ಬಿಟ್ಟು ಬಿಟ್ಟಿದ್ದಾರೆ. ಅದರ ಬಗ್ಗೆ ಸರ್ಕಾರದವರು ಗಮನ ಕೊಟ್ಟು ಅಂತಹ ಬಟ್ಟೆಗಳು ಯಾವಾಗಲೂ ರೈತರಿಗೆ ಸಿಗುವ ಹಾಗೆ ವ್ಯವಸ್ಥೆ ಮಾಡಬೇಕು ಈಗ ಲೇವಿ ಮುಖಾಂತರ ಬತ್ತವನ್ನು ಸಂಗ್ರಹಣೆ ಮಾಡುತ್ತಿದ್ದೀರಿ ಆದರೆ ರೈತರಿಗೆ ಬೇಕಾದಷ್ಟು ಅಗತ್ಯ ವಸ್ತುಗಳು ಗೊತ್ತಾದ ಕಾಲದಲ್ಲಿ ಸಿಗುವಂತೆ. ಅವನ್ನು ಪೂರೈಸಲು ತಕ್ಕ ವಿತರಣಾ ಕಾರ್ಯವನ್ನೂ ಸಹ ಸರ್ಕಾರದವರು ಮಾಡಬೇಕು ನಾನು ಈ ಸಂದರ್ಭದಲ್ಲಿ ಸರ್ಕಾರದವರಿಗೆ ಒಂದು ಸೂಚನೆಯನ್ನು ಕೊಡುತ್ತೇನೆ. ಈಗ ಆಹಾರ ವಿತರಣೆಯ ವ್ಯವಹಾರವನ್ನು ಪ್ರಾಮಾಣಿಕವಾಗಿ ಮಾಡಬೇಕು. ಇಲ್ಲದಿದ್ದರೆ ನೀವು ಕೊಡುವ ಜೋಳ, ಅಕ್ಕಿ ನಿಜವಾಗಿ ಹಾಳಾಗಿ ಹೋಗುತ್ತದೆ ನಾನು ಬೇಕಾದರೆ ಅಧ್ಯಕ್ಷರನ್ನು ಕರೆದುಕೊಂಡು ಹೋಗಿ ಗೊಡೌನುಗಳನು ತೋರಿಸುತ್ತೇನೆ ಎಲ್ಲಾ ಗೋಡೌನುಗಳನ್ನು ಬೇಕಾದರೆ ನೋಡೋಣ, ಬನ್ನಿ. ಹಲ ಸಾವಿರ ಟನ್ನುಗಳಷ್ಟು ಆಹಾರವನ್ನು ಜಮಾ ಮಾಡುವದಕ್ಕೆ ಮಾತ್ರ ವ್ಯವಸ್ಥೆಯಾಗಿದೆ. ಅದನ್ನು ವಿತರಣೆ ಮಾಡಲು ಕಾರ್ಪೋರೇಷನ್ನಿಗೆ ಈಗಾಗಲೇ ಹಳೆಯ ರಿಟೈರ್ಡ ಆಫೀಸರುಗಳನ್ನು ನೇಮಕ ಮಾಡುತ್ತಿದ್ದಾರೆ. ಆ ಹಳೆಯ ಹೆಗ್ಗಣಗಳನ್ನು ಅಲ್ಲಿ ಹಾಕಿದರೆ ನಿಜವಾಗಿಯೂ ಆ ಕಾರ್ಪೋರೇಷನ್‌ನ್ನು ಮುಳುಗಿಸಿ ಬಿಡುತ್ತಾರೆ. ಬಡವರಿಗೆ ಅಕ್ಕಿ, ಜೋಳವನ್ನು ನಿಜವಾಗಿ ಹಂಚುವದಕ್ಕಾಗುವದಿಲ್ಲ. ಆಹಾರ ವಿತರಣೆಯಲ್ಲಿ ವ್ಯವಹಾರಿಕವಾಗಿ ಮಾಡಲಿ ಕಾರ್ಪೋರೇಷನ್ನಿಗೂ ಬೇಕಾದಷ್ಟು ಹಣ ಮಾಡಿಕೊಡಿ.

ಯಾರೂ ಬೇಡವೆನ್ನುವದಿಲ್ಲ. ಏಕೆ ಹೋಲ್‌ಸೇಲ್ ಟ್ರೇಡನ್ನು ಸಂಪೂರ್ಣವಾಗಿ ಕೈ ಬಿಟ್ಟರೋ ನನಗೆ ಗೊತ್ತಾಗಲಿಲ್ಲ. ಅರ್ಧಂಬರ್ಧ ಕೆಲಸ ಮಾಡಿ ನೀವು ಮೋಸ ಹೋಗುತ್ತಿದ್ದೀರಿ. ಆದ್ದರಿಂದ ಸಂಪೂರ್ಣವಾಗಿ ಈ ಒಂದು ಆಹಾರ ವಿತರಣೆ ವ್ಯವಹಾರವನ್ನು ಸರ್ಕಾರವೇ ಕೈಗೆ ತೆಗೆದುಕೊಳ್ಳುವದು ಬಹಳ ಒಳ್ಳೆಯದು. ಕಾರ್ಪೊರೇಷನ್ನಿಗೆ ಬಿಡುವುದು ಸರಿಯಲ್ಲ. ಏಕೋ ಇನ್ನೂ ನೀವು ಮನಸ್ಸು ಮಾಡಲಿಲ್ಲ. ಪ್ರಾಮಾಣಿಕವಾಗಿ ಈ ಒಂದು ಲೇವಿ ಪದ್ಧತಿಯನ್ನು ಬಗೆಹರಿಸುತ್ತೇವೆಂದು ನೀವು ಹೇಳುವದರಲ್ಲಿ ನನಗೆ ಅನುಮಾನವಾಗಿದೆ. ಒಟ್ಟನಲ್ಲಿ ನಾನು ಹೇಳುವದೇನೆಂದರೆ ಇದನ್ನು ಒಂದು ವ್ಯವಹಾರಿಕ ದೃಷ್ಟಿಯಿಂದ ಮಾಡಿ ಈಗ ಈ ದೇಶದಲ್ಲಿ ಇರತಕ್ಕ ಈ ಒಂದು ಆಹಾರ ಸಮಸ್ಯೆಯನ್ನು ಕೂಡಲೇ ಬಗೆಹರಿಸಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಂ. ಬಿ. ರಾಮಸ್ವಾಮಿ (ಆನೇಕಲ್).—ಸನ್ಮಾನ್ಯ ಸಭಾಪತಿಗಳೇ, ಈ ದಿವಸ ಅನೇಕ ನನ್ನ ಸನ್ಮಾನ್ಯ ಮಿತ್ರರು ಅದರಲ್ಲಿಯೂ ವಿರೋಧ ಪಕ್ಷದವರು ಅನೇಕ ಟೀಕೆಗಳನ್ನು ಈ ಸಭೆಯಲ್ಲಿ ಮಾಡಿದ್ದಾರೆ ಬಹುಶಃ ನಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ದುರಾದೃಷ್ಟದಿಂದ ನಾವು ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗಿ ಬಂತು. ಕಾರಣ ಬರಗಾಲ ಪರಿಸ್ಥಿತಿ ಹಾಗೂ ಓವರಡ್ರಾಫ್ಟ್. ಇವನ್ನು ಹಿಂದಿದ್ದಂಥವರು ನಮಗೆ ಬಿಟ್ಟು ಹೋದರು. ಆದರಿಂದಾಗಿ ನಮಗೆ ಬಹಳ ಕಷ್ಟ ಒದಗಿತು. ಅದನ್ನೇ ನನ್ನ ಹಲವು ಸ್ನೇಹಿತರು ಇಲ್ಲಿ ಒಂದು ದೊಡ್ಡದಾಗಿ ಆರೋಪಣೆಯನ್ನು ಹೂಡಿ ಈ ಒಂದು ಆಹಾರ ಪರಿಸ್ಥಿತಿಯನ್ನು ಅತ್ಯಂತ ವಿಕೋಪಕ್ಕೆ ತಂದಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ಈ ದಿವಸ ಆಹಾರ ಪರಿಸ್ಥಿತಿ ಅದರಲ್ಲಿಯೂ ಅಗತ್ಯ ವಸ್ತುಗಳ ಬೆಲೆ ಹೆಚ್ಚಿಗೆ ಏಕೆ ಆಗಿದೆ ಎಂಬುದರ ಬಗ್ಗೆ ನಾನು ಕೆಲವಾರು ಸಲಹೆಗಳನ್ನು ಕೊಡಬಯಸುತ್ತೇನೆ. ಬಹುಶ: ಕಳೆದ ಸರ್ಕಾರಕ್ಕಿಂತ ನಮ್ಮ ಸರ್ಕಾರ ನಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂದಮೇಲೆ ಅನೇಕ ಕೆಲಸ ಕಾರ್ಯಗಳನ್ನು ಮಾಡಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ಕಾರಣ ನಮಗೆ ಬರತಕ್ಕಂಥ ಲೆವಿ ಏನಿದೆಯೋ ಅದನ್ನು ನಿಷ್ಪಕ್ಷಪಾತವಾಗಿ ಹಾಗೂ ಸುಲಭವಾಗಿ ಸಂಗ್ರಹಣೆ ಮಾಡಿದ್ದಾರೆ. ಬಹುಶ: ಆಹಾರ ವಿತರಣೆಯು ಬಗ್ಗೆ ಸ್ವಲ್ಪ ಮಟ್ಟಿಗೆ ಲೋಪ ಇರಬಹುದು. ಅದರ ಬಗ್ಗೆ ನನ್ನ ವಾದವಿಲ್ಲ. ಈ ಆಹಾರ ವಿತರಣೆಯಲ್ಲಿ ಹಿಂದಿನ ಸರ್ಕಾರಗಳಿಗಿಂತ ಈ ಸರ್ಕಾರ ಅಸ್ತಿತ್ವಕ್ಕೆ ಬಂದಮೇಲೆ ಸ್ವಲ್ಪಮಟ್ಟಿಗೆ ಆಡಳಿತ ಚನ್ನಾಗಿ ನಡೆದಿದೆಯೆಂದು ಹೇಳಿದರೆ ತಪ್ಪಾಗಲಾರದು. ಅದರಲ್ಲಿಯೂ ಕೆಲವರಿಂದ ಇದರ ಬಗ್ಗೆ ನಮ್ಮ ಸರ್ಕಾರಕ್ಕೆ ಆರೋಪಣೆಗಳು ಬಂದಮೇಲೆ, ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ ಹಾಗೆ ಹಿಂದಿನ ಸರ್ಕಾರದಲ್ಲಿ ಸುಮಾರು ೭-೮ ಸಾವಿರ ಕೇಸುಗಳನ್ನು ಹಾಕಿದ್ದಾರೆ. ಅವನ್ನೆಲ್ಲಾ ಹತೋಟಿಗೆ ತರಲು ಪ್ರಯತ್ನ ಮಾಡಿದಾಗ ಈ ಅಂಶ ಸ್ಪಷ್ಟವಾಗಿ ತಿಳಿಯಿತು. ಇಂತಹ ಕೇಸುಗಳನ್ನು ಆಗ ಎಷ್ಟೊ ಹಾಕಿದ್ದರು. ಈಗ ನಮ್ಮಲ್ಲಿಯಾವ ಒಂದು ಸ್ವಜನ ಪಕ್ಷಪಾತವಿಲ್ಲದೆ, ನಿರ್ದಾಕ್ಷಿಣ್ಯವಾಗಿ ಎಲ್ಲಿ

ಯಾವ ಒಂದು ಲಂಚಗುಳಿತನ, ಕಳ್ಳಸಾಗಾಣಿಕೆ ಮತ್ತು ಬ್ಲ್ಯಾಕ ಮಾರ್ಕೆಟಗಳು ಇವೆಯೋ ಅವನ್ನು ಕಂಡುಹಿಡಿದು ತಪ್ಪಿತಸ್ಥರನ್ನು ಶಿಕ್ಷೆಮಾಡಿ ಅವರ ಮೇಲೆ ಉಗ್ರ ವಾದ ಕ್ರಮವನ್ನು ನಮ್ಮ ಸರ್ಕಾರ ತೆಗೆದುಕೊಂಡಿದೆ. ಈ ಒಂದು ಪರಿಸ್ಥಿತಿಯಲ್ಲಿ ನಮಗೆ ಬಂದಿರತಕ್ಕ ಬಹುಭಾಗದ ಹಣವನ್ನು ಅಭಾವ ಪೀಡಿತ ಪ್ರದೇಶಗಳಿಗೆ ಕೊಡಬೇಕಾಗಿ ಬಂತು. ಇಂತಹ ಅನೇಕ ತೊಂದರೆಗಳಿಗೀಡಾದ ನಮ್ಮ ಸರ್ಕಾರದ ಮೇಲೆ ಕೆಲವರು ದೊಡ್ಡ ದೊಡ್ಡ ಆರೋಪಣೆಗಳನ್ನು ತೆಗೆದುಕೊಂಡು ಬಂದು ಇಂದಿರಾ ಗಾಂಧಿ ಸರ್ಕಾರ ಬಂದಿದ್ದರಿಂದ ನಮಗೆ ಆಗಬಾರದ್ದೆಲ್ಲಾ ಆಗಿಹೋಯಿ ತೆಂದು ಒಂದು ಅಪಪ್ರಚಾರವನ್ನು ಹೊರಡಿಸುತ್ತಾ ಇದ್ದಾರೆ ಇಲ್ಲಿ ನಾನು ಮೂಲ ಭೂತವಾಗಿ ಹೇಳುವದಾದರೆ. ನಮಗೆ ನಿನ್ನೆ ಮಾನ್ಯ ಮುಖ್ಯ ಮಂತ್ರಿಗಳು ಅಂಕಿ ಅಂಶಗಳನ್ನು ಕೊಟ್ಟಮೇಲೆ ನಾವು ಈ ವರ್ಷ ಹಿಂದಿನ ಸರ್ಕಾರಗಳಿಗಿಂತ ಹೆಚ್ಚಿಗೆ ಅನೇಕ ಕೆಲಸ ಕಾರ್ಯಗಳನ್ನು ಸಾಧಿಸಿದ್ದೇವೆ. ಬಹುಶ: ಅನೇಕ ಕಡೆಗಳಲ್ಲಿ ಕೆಲವೇ ಜನ ಮುಖಂಡರ ಪ್ರಭಾವದಿಂದಲೇ ಈ ಒಂದು ಆಹಾರ ಪರಿಸ್ಥಿತಿ ಇಷ್ಟು ವಿಕೋಪಕ್ಕೆ ಹೋಗಿದೆಯೆಂದು ಹೇಳಿದರೆ ನಿಜವಾಗಿ ತಪ್ಪಾಗಲಾರದು. ಆದಷ್ಟು ಇನ್ನೆರಡು ತಿಂಗಳಲ್ಲಿ ಈ ಒಂದು ಆಹಾರದ ಪರಿಸ್ಥಿತಿ ಇಷ್ಟು ಕೆಡಲಾರದೆಂದು ನಾನು ಅಂದು ಕೊಂಡಿದ್ದೇನೆ. ಏಕೆಂದರೆ, ಅನೇಕ ಕಡೆಗಳಲ್ಲಿ ಎರಡು ಮೂರು ಲಕ್ಷ ಟನ್‌ಗಳಷ್ಟು ಜೋಳ, ಗೋದಿ ಇತ್ಯಾದಿಗಳನ್ನು ಈಗಾಗಲೇ ಸಂಗ್ರಹಣೆ ಮಾಡಿದ್ದಾರೆಂದು ನನಗೆ ಗೊತ್ತಿದೆ. ಆದರೂ ಗ್ರಾಮಾಂತರ ಪ್ರದೇಶಗಳಲ್ಲಿ ಅನೇಕರಿಗೆ ತೊಂದರೆಯಾಗಿದೆ, ಅವರ ಆಹಾರ ಪರಿಸ್ಥಿತಿ ಬಹಳ ಕುಂಠಿತವಾಗಿದೆ ಆದ್ದರಿಂದ ಸರ್ಕಾರದವರು ಹೆಚ್ಚಿಗೆ ಬಡವರ ಬಗ್ಗೆ ನಿಗಾ ಕೊಟ್ಟು ನಂತರ ನಮ್ಮ ಸರ್ಕಾರದವರು ನಮ್ಮ ರಾಜ್ಯದಿಂದ ಬೇರೆ ರಾಜ್ಯಗಳಿಗೆ ಆಹಾರಪದಾರ್ಥಗಳನ್ನು ರವಾನೆ ಮಾಡಬೇಕಾಗಿದೆ. ಕೆಲವರು ನಮ್ಮ ರಾಜ್ಯದ ಜನಗಳ ಹಿತಚಿಂತನೆಯನ್ನು ಮರೆತು, ರಾಜ್ಯ ಸರ್ಕಾರದವರು ಬೇರೆ ರಾಜ್ಯಗಳಗೆ ಆಹಾರ ಪದಾರ್ಥಗಳನ್ನು ರವಾನೆಮಾಡುತ್ತಿದ್ದಾರೆಂದು ಹೇಳಿದರು. ಅದು ಇರಬಹುದು. ಅಂಥಾದ್ದಕ್ಕೆ ನಮ್ಮ ಸರ್ಕಾರದವರು ಅವಕಾಶ ಕೊಡುವುದಿಲ್ಲ ವೆಂದು ನಾನು ಹೇಳುತ್ತೇನೆ. ಮತ್ತೆ ಕೆಲವರು ತಮಿಳುನಾಡಿಲ್ಲಿ ಅಕ್ಕಿ ಸುಲಭರೀತಿ ಯಲ್ಲಿ ಕಡಿಮೆ ದರದಲ್ಲಿ ಸಿಗುತ್ತದೆ ಮತ್ತು ದಿನನಿತ್ಯ ಪದಾರ್ಥಗಳು ಸುಲಭವಾಗಿ ಕಡಿಮೆ ದರದಲ್ಲಿ ಸಿಗುತ್ತವೆಂದು ಹೇಳಿದರು. ಅದು ನಿಜ. ನಮ್ಮಲ್ಲಿ ಉತ್ಪಾದನೆ ಕಡಿಮೆಯಾಗಿದೆ ಆದರೆ ನಮ್ಮಲ್ಲಿ ಬಳಕೆದಾರರು ಜಾಸ್ತಿಯಾಗುತ್ತಾ ಇದ್ದಾರೆ. ಅವರಲ್ಲಿ ಶ್ರೀಮಂತ ವರ್ಗ ಬೇರೆ ಇವೆ. ಈಗ ಅನೇಕ ಆಹಾರ ಪದಾರ್ಥಗಳನ್ನು ಬ್ಲಾಕಮಾರ್ಕೆಟಿಯರ್ಸ ಬಚ್ಚಿಟ್ಟಿದ್ದಾರೆ.

ಅವರು ಅವುಗಳ ಬಗ್ಗೆ ಸರಿಯಾದ ರೀತಿಯಲ್ಲಿ ಬಹುಶಃ ಮಾಹಿತಿ ಕೊಡ ದೆಯೂ ಮತ್ತು ವಿತರಣೆ ಮಾಡದೆಯೂ ಇರುವದರಿಂದ ಅಂತಹವರ ಬಗ್ಗೆ ಉಗ್ರ ವಾದ ಕ್ರಮವನ್ನು ಈಗಾಗಲೇ ಸರ್ಕಾರದವರು ತೆಗೆದುಕೊಂಡಿದ್ದಾರೆ. ಬೆಂಗಳೂರಿನ ಮಂಡಿ ಪೇಟೆಯಲ್ಲಿರತಕ್ಕ ವರ್ತಕರಲ್ಲಿ ಅನೇಕರು ಖದೀಮರು ಇದ್ದಾರೆ. ಅಂತಹವ

ದಿಲ್ಲ. ಕಾರಣ ಏನೆಂದರೆ ಮಲೆನಾಡಿನ ಪ್ರಾಂತ್ಯ ಅಕ್ಕಿ ಬೆಳೆಯುವ ಪ್ರಾಂತ್ಯ ಎನ್ನುವ ದೃಷ್ಟಿಯಿಂದ ಯಾವ ಸೊಸೈಟಿಗೂ ಅಕ್ಕಿ ಕೊಡುತ್ತಾ ಇಲ್ಲ. ಇದರಿಂದ ಭೂಮಾಲೀಕರು ಕಾರ್ಮಿಕರಿಗೆ ಒಂದು ಸೇರು ಅಕ್ಕಿ ಕೊಡಬೇಕಾದರೆ ಅವರ ಹತ್ತಿರ ಅಕ್ಕಿ ಇರುವುದಿಲ್ಲ. ಆದರಿಂದಾಗಿ ಅಲ್ಲಿನ ಭೂರಹಿತ ಕಾರ್ಮಿಕರು ಅನೇಕ ಕಷ್ಟಗಳಿಗೆ ಈಡಾಗಿದ್ದಾರೆ. ಇಷ್ಟೇ ಅಲ್ಲದೆ ಕೊನೆಯದಾಗಿ ನಾನು ಒಂದು ಮಾತನ್ನು ಹೇಳಲುಬಯಸುತ್ತೇನೆ. ಅದು ಏನೆಂದರೆ ಆ ಪ್ರಾಂತಗಳಲ್ಲಿ ಮಳೆ ಹೋಗಿ ಒಂದು ವರ್ಷದಿಂದ ಈ ದಾರುಣ ಪರಿಸ್ಥಿತಿಯಲ್ಲಿ ಇದ್ದೇವೆ. ಇಂಥಾದ್ದರಲ್ಲಿ ನಮ್ಮ ಸರ್ಕಾರ ಈ ಆಹಾರ ಸಮಸ್ಯೆಯನ್ನು ಬಿಡಿಸಲು ಇಷ್ಟು ಶ್ರದ್ಧೆವಹಿಸಿ ಕೆಲಸ ಮಾಡುತ್ತಿರುವಾಗ ಎಲ್ಲರೂ ಸಹಕಾರವನ್ನು ಕೊಡುವುದು ಬಿಟ್ಟು ನಮ್ಮ ಮಿತ್ರರು ಮೊದಲು ಹೇಳಿದ ಗಾದೆಯಂತೆ ಮಾಡುವುದಾದರೆ ಅದು ದೇಶದ ಹಿತದೃಷ್ಟಿಯಿಂದ ಒಳ್ಳೆಯದಲ್ಲ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಬಂಗಾರಪ್ಪ (ಸೊರಬ).— ಮಾನ್ಯ ಅಧ್ಯಕ್ಷರೇ, ನಮ್ಮ ಮುಂದೆ ಇರತಕ್ಕಂಥ ವಿಷಯಗಳು ಎರಡು. (೧) ದಿನನಿತ್ಯದ ಅಗತ್ಯವಸ್ತುಗಳ ಬೆಲೆ ಏರಿಕೆ ವಿಷಯ (೨) ಆಹಾರದ ಸಮಸ್ಯೆ. ಈ ಎರಡೂ ವಿಷಯಗಳನ್ನು ಕುರಿತು ಮಾನ್ಯ ಮುಖ್ಯಮಂತ್ರಿಗಳು ಒಂದು ಹೇಳಿಕೆಯನ್ನು ಈ ಸದನದ ಮುಂದೆ ಇಟ್ಟಿದ್ದಾರೆ ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರೂ ಮತ್ತು ಶ್ರೀಮಾನ್ ಎಂ. ರಾಜಶೇಖರ ಮೂರ್ತಿಯವರು ಈ ಬಗ್ಗೆ ಒಂದು ನಿರ್ಣಯವನ್ನು ಈ ಸದನದ ಮುಂದೆ ಚರ್ಚೆಗಾಗಿ ಇಟ್ಟಿದ್ದಾರೆ. ಆದರೆ ಈ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಯವರ ಹೇಳಿಕೆ ಅತಿ ಮುಖ್ಯವಾದುದು. ಏತಕ್ಕೆಂದರೆ ಸರಕಾರ ಈ ಎರಡು ವಿಷಯಗಳ ಬಗ್ಗೆ ಯಾವ ನಿಲುವನ್ನು ಮತ್ತು ಧ್ಯೇಯಧೋರಣೆಗಳನ್ನು ತಾಳಿದೆ ಮತ್ತು ಇದರಿಂದ ಯಾವ ರೀತಿ ಪರಿಣಾಮ ಉಂಟಾಗಿದೆ ಯಾವ ಪರಿಸ್ಥಿತಿಯಲ್ಲಿ ನಾವು ಇದ್ದೇವೆ ಎನ್ನುವ ಚಿತ್ರ ಸರಕಾರದವತಿಯಿಂದ ಬಂದದ್ದು ಅದು ಬಹಳ ಒಳ್ಳೇಯದು. ಈ ಬಗ್ಗೆ ನಾನು ಹೇಳುವುದಾದರೂ ಕೂಡ ಸಂಪೂರ್ಣವಾದ ಚಿತ್ರವನ್ನು ಮಾನ್ಯ ಮುಖ್ಯಮಂತ್ರಿಯವರು ಸರಕಾರದವತಿಯಿಂದ ಇಟ್ಟಿದ್ದಾರೆಯೇ ಎನ್ನುವುದನ್ನು ನಾನು ಭಾವನೆ ಮಾಡಿದ್ದೇನೆ. ಈ ಸಂದರ್ಭದಲ್ಲಿ ನಾನು ಹೇಳುವುದು ಏನೆಂದರೆ ಮಾನ್ಯ ಮುಖ್ಯಮಂತ್ರಿಯವರು ಇಟ್ಟಿರತಕ್ಕಂಥ ಹೇಳಿಕೆಯಲ್ಲಿ ಇದು ಬರೀ ಮೈಸೂರು ರಾಜ್ಯಕ್ಕೇನೇ ಸೀಮಿತವಾಗಿರತಕ್ಕಂಥ ವಿಷಯ ಅಲ್ಲ ಎನ್ನುವುದೂ ಕೂಡ ಅವರ ಹೇಳಿಕೆಯಲ್ಲಿ ಸ್ಪಷ್ಟಪಡಿಸಿದ್ದಾರೆ. ಈ ಸಮಸ್ಯೆ ಈ ರಾಜ್ಯ ಒಂದರಲ್ಲೇ ಅಲ್ಲ, ಈ ದೇಶ ಒಂದರಲ್ಲೇ ಅಲ್ಲ ಇದು ಪ್ರಪಂಚಾದ್ಯಂತ ಇರುವ ಒಂದು ಸಮಸ್ಯೆಯಾಗಿದೆ ಎಂದು ಹೇಳಿದ್ದಾರೆ. ಈ ಸಮಸ್ಯೆ ಬೆಲೆ ಏರಿಕೆಯಲ್ಲೂ ಹೌದು ಮತ್ತು ಆಹಾರದ ವಿಷಯದಲ್ಲೂ ಹೌದು ಆಗಿರುತ್ತೆ. ಈ ಎರಡೂ ಹೇಳಿಕೆಯನ್ನು ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆಯಲ್ಲಿ ಸ್ಪಷ್ಟಪಡಿಸಿದ್ದಾರೆ.

ಈ ಬಗ್ಗೆ ನಾನು ಮೊಟ್ಟಮೊದಲನೆಯದಾಗಿ ಆಹಾರದ ವಿಷಯದ ಬಗ್ಗೆ
ಮಾತನಾಡಬೇಕಾಗಿದೆ. ಮಾನ್ಯಮುಖ್ಯಮಂತ್ರಿಯವರು ಈ ಬಗ್ಗೆ ಒಂದು ವಿಷಯವನ್ನು
ಸ್ಪಷ್ಟಪಡಿಸಬೇಕಾಗಿತ್ತು ಎಂದು ನನ್ನ ಭಾವನೆ. ಅದು ಏನೆಂದರೆ ಎಲ್ಲರ ಸಹಕಾರವೂ
ಇರತಕ್ಕಂಥಾದ್ದು ಈ ಬೃಹತ್ ಸಮಸ್ಯೆಯನ್ನು ಬಿಡಿಸತಕ್ಕಂಥಾ ವಿಷಯದಲ್ಲಿ ಬೇಕು
ಎನ್ನುವುದನ್ನೂ ನಾನೂ ಸಹ ಒಪ್ಪುತ್ತೇನೆ. ಈ ಸಹಕಾರ ಸಾರ್ವಜನಿಕವಾಗಿಯೂ
ಬೇಕು ಮತ್ತು ಈ ಸದನದ ವಿಷಯ ತೆಗೆದುಕೊಳ್ಳುವುದಾದರೆ ವಿರೋಧಪಕ್ಷದ
ವತಿಯಿಂದಲೂ ಬೇಕು ಅನ್ನತಕ್ಕಂಥಾ ಮಾತನ್ನೂ ನಾನೂ ಸಹ ಹೇಳುತ್ತೇನೆ ಮತ್ತು
ಆ ಮಾತನ್ನು ತಪ್ಪಿ ಎಂದೂ ಕೂಡ ವಿರೋಧ ಪಕ್ಷದವರು ನಡೆದಿಲ್ಲ. ಆದರೆ ಮಾನ್ಯ
ಶ್ರೀಮಾನ್ ಶೀರನಾಳಿ ಚಂದ್ರಶೇಖರ್‌ರವರು ಈ ಬಗ್ಗೆ ಏನು ಒಂದು ಮಾತನ್ನು
ಹೇಳಿದರು ಎಂದರೆ ವಿರೋಧ ಪಕ್ಷದವರು ಈ ಸಂದರ್ಭದಲ್ಲಿ ಸ್ಪಷ್ಟವಾಗಿ ಒಂದು
ಸಂಪೂರ್ಣ ಬೆಂಬಲವನ್ನು ಸರಕಾರಕ್ಕೆ ನೀಡತಕ್ಕಂಥ ಮನಸ್ಸು ಮಾಡುವುದನ್ನು
ಬಿಟ್ಟು ಅವರು ಬರೀ ಟೀಕೆ ಮಾಡುತ್ತಿದ್ದಾರೆ ಅನ್ನುವ ಅರ್ಥದಲ್ಲಿ ಅವರ ಭಾಷಣದ
ವೇಗ ಇತ್ತು ಎಂದು ನನಗೆ ಅನಿಸುತ್ತದೆ. ನಿಜವಾಗಿಯೂ ವಿರೋಧ ಪಕ್ಷದವ
ರನ್ನು ಸರಕಾರದ ವತಿಯಿಂದ ಅವರನ್ನು ಸಮರ್ಥನೆ ಮಾಡಬೇಕು. ನಿಜವಾಗಿಯೂ
ಹಲವಾರ ದೇಶದ ರಾಜಕೀಯ ಚಿತ್ರವನ್ನು ನೋಡುವುದಾದರೆ ಇಂಥಾ ಒಂದು
ಸಂದರ್ಭ ಬಂದಾಗ ಅವರು ಎಷ್ಟರ ಮಟ್ಟಿಗೆ ಹೋಗುತ್ತಾರೆ ಎಂಬುದನ್ನು
ನೋಡಿದ್ದೇವೆ ಆ ಭಾವನೆ ತಮ್ಮಲ್ಲಿ ಇರುವದಾದರೆ ವಿರೋಧ ಪಕ್ಷ
ದವರನ್ನು ಅಷ್ಟೇ ಅಲ್ಲ. ಇಡೀ ದೇಶದ ಜನತೆಯನ್ನೇ ಸರಕಾರ ಅಭಿನಂದಿಸ
ಬೇಕಾಗುತ್ತದೆ. ಮತ್ತು ಹಲವಾರು ದೇಶದ ರಾಜಕೀಯ ಚರಿತ್ರೆಯನ್ನು ಅವ
ಲೋಕನ ಮಾಡುವುದಾದರೆ ಈ ಬೃಹದಾಕಾರವಾದ ಸಮಸ್ಯೆ ಬಗ್ಗೆ ದೊಡ್ಡ ಕ್ರಾಂತಿ
ಗಳು, ಆಂದೋಳನಗಳು ರಾಜಕೀಯ ಕ್ಷೇತ್ರದಲ್ಲಿ ಅಲ್ಲೋಲ ಕಲ್ಲೋಲವಾಗಿ ನಡೆ
ದಿದೆ. ಆದರೆ ನಮ್ಮ ಭಾರತದೇಶದಲ್ಲಿ ರಾಜಕೀಯ ಪ್ರಶ್ನೆ ಅಷ್ಟೊಂದು ಬರದೇ
ಇರುವುದರಿಂದ ಸರಕಾರದವರು ಬಚಾವ ಆಗಿದ್ದಾರೆ. ಇದನ್ನು ನಾನು ಸ್ಪಷ್ಟಪಡಿ
ಸುತ್ತೇನೆ. ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು ಇಟ್ಟಿರತಕ್ಕಂಥ
ಆಹಾರದ ಚಿತ್ರವನ್ನು ನೋಡಿದರೆ ಆಹಾರ ಇಲ್ಲ ಎನ್ನುವುದನ್ನು ನಾನೂ ಒಪ್ಪು
ತ್ತೇನೆ. ಮತ್ತು ಅದಕ್ಕೆ ಆಹಾರ ಹುಡುಕಬೇಕು ಎನ್ನುವುದನ್ನು ನಾನು ಒಪ್ಪು
ತ್ತೇನೆ. ಆದರೆ ಇದಕ್ಕೆ what is the remedy for that ಎಂದು ಕೇಳಿ
ದ್ದಾರೆ ಇದಕ್ಕೆ ಯಾರೇ ಕಾರಣರೇ ಇರಲಿ ಆಹಾರವನ್ನು ಹುಡುಕಬೇಕು ಎನ್ನು
ವುದನ್ನು ಎಲ್ಲರೂ ಒಪ್ಪುತ್ತಾರೆ ಮತ್ತು ನಾನೂ ಸಹ ಒಪ್ಪುತ್ತೇನೆ. ಆದರೆ ಈ
ಒಂದು ಸಮಸ್ಯೆಯನ್ನು ಬೃಹದಾಕಾರವಾಗಿ ಮಾಡುವುದಕ್ಕೆ ಯಾರು ಕಾರಣರು
ಎನ್ನುವುದು ನಮ್ಮ ಮುಂದಿರುವ ಪ್ರಶ್ನೆಯಾಗಿದೆ. ಅಧ್ಯಕ್ಷರೇ, ಈ ಬಗ್ಗೆ ಹೇಳುವು
ದಾದರೆ ಮಾನ್ಯ ಮುಖ್ಯಮಂತ್ರಿಯವರ ಹೇಳಿಕೆಯಲ್ಲಿ ನೋಡಿದರೆ ಈ ಸಮಸ್ಯೆ ಇರು
ವುದು ನಮ್ಮ ದೇಶದಲ್ಲಿ ಒಂದರಲ್ಲೇ ಅಲ್ಲ, ಇಡೀ ರಾಜ್ಯದಲ್ಲಿ, ದೇಶದಲ್ಲಿ ಮತ್ತು

ಇದು ಅಂತರರಾಷ್ಟ್ರೀಯ ಸಮಸ್ಯೆಯಾಗಿದೆ. ಆದುದರಿಂದ ಇಂತಹ ಪರಿಣಾಮ ಕಾರಿಯಾದಂಥ ಸಮಸ್ಯೆಗೆ ಎಲ್ಲಿಂದ ಆಹಾರ ತರುವುದಕ್ಕೆ ಸಾಧ್ಯ ಎನ್ನುವ ಮಾತನ್ನು ಹೇಳಿ ಅವರ ಎರಡು ಕೈಯನ್ನೂ ಸೇರಿಸಿ ಈ ಒಂದು ಹೇಳಿಕೆ ಕೊಟ್ಟಿದ್ದಾರೆ ಎಂದು ನನಗೆ ಸ್ಪಷ್ಟವಾಗಿ ಕಾಣುತ್ತದೆ. ಆದರೆ ಸ್ವಾತಂತ್ರ್ಯ ನಂತರ ೨೫ ವರ್ಷದ ಆಡಳಿತದಲ್ಲಿ ಅವೊತ್ತು ಆಡಳಿತ ನಡೆಸತಕ್ಕಂಥಾವರು ಯಾರೇ ಇರಲಿ, ಈವೊತ್ತು ಆಡಳಿತ ನಡೆಸತಕ್ಕಂಥಾವರು ಯಾರೇ ಇರಲಿ, ಈ ಪ್ರಶ್ನೆ ಮುಖ್ಯವಲ್ಲ.

3-30 P.M.

(Deputy Speaker in the Chair) ಹಿಂದೆ ಯಾರು ಯಾರು ಆಡಳಿತವನ್ನು ನಡೆಸಿದ್ದಾರೆ ಅವರಿಗೆ ಎಲ್ಲರಿಗೂ ಇದು ಸಂಬಂಧಪಟ್ಟ ವಿಷಯವಾಗಿದೆ. ಈ ೨೫ ವರ್ಷದ ಆಡಳಿತದಲ್ಲಿ ಆಹಾರ ಉತ್ಪನ್ನವನ್ನು ಜಾಸ್ತಿ ಮಾಡುವುದಕ್ಕೆ ಯಾವ ಕಾರ್ಯಕ್ರಮ ಹಾಕಿಕೊಂಡಿದ್ದೀರಿ ಎಂದು ನೋಡಿದರೆ ಕೇವಲ ಭಾರಿಭಾರಿ ಯೋಜನೆಗಳು ಎಂದರೆ ತುಂಗಭದ್ರಾ ಆಣೆಕಟ್ಟು, ಇತ್ಯಾದಿ ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳನ್ನು ಕಟ್ಟಿದ್ದೇವೆ ಎಂದು ಹೇಳುತ್ತೀರಿ. ಇದಕ್ಕೆಲ್ಲಾ ಮಳೆ ನೀರು ಬಾರದಿದ್ದರೆ ನಿಮ್ಮ ಆಣೆಕಟ್ಟುಗಳು ತುಂಬದಿದ್ದರೆ ಏನು ಪ್ರಯೋಜನವಿದೆ. ಕೇವಲ ಆ ಆಣೆಕಟ್ಟುಗಳು ಭರ್ತಿ ಆದರೆ ಮಾತ್ರ ಆಣೆಕಟ್ಟಿದ್ದಕ್ಕೆ ಪ್ರಯೋಜನವಾಗುತ್ತದೆ, ಇಲ್ಲವಾದರೆ ಆಣೆಕಟ್ಟು ಕಟ್ಟಿದರೂ ಏನು ಪ್ರಯೋಜನವಿಲ್ಲ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ನೀರಾವರಿ ಯೋಜನೆಗಳು ಏನು ಇವೆ ಅವುಗಳಿಂದ ೨೫ ವರ್ಷದಲ್ಲಿ ಏನೂ ಪ್ರಯೋಜನವಾಗಿಲ್ಲವೆನೋ ಎಂದು ನನಗನಿಸುತ್ತದೆ. ಇದು ವಿವೇಕಪೂರಿತ ಯೋಜನೆ ಅಲ್ಲವೆಂದು ಹೇಳಬೇಕಾಗುತ್ತದೆ. ನಾವು ಏನು ಮಾಡಬೇಕಾಗಿತ್ತು ಎಂದರೆ ಆಣೆಕಟ್ಟುಕಟ್ಟಿದ್ದು ತಪ್ಪೇ ಎಂದು ಕೇಳಿದರೆ ಇದಕ್ಕೆ ಕೋಟ್ಯಾಂತರ ರೂಪಾಯಿ ಖರ್ಚು ಮಾಡಿದ್ದು ಒಳ್ಳೆಯದಾದರೂ ಅಷ್ಟು ಮುಂದಾಲೋಚನೆಯಿಂದ ನೋಡಿದರೆ ಆಣೆಕಟ್ಟುಗಳ ಈ ಸಂಖ್ಯೆಯನ್ನು ಕಡಿಮೆ ಮಾಡಿ ಎಲ್ಲಿ ಬೇಕೇ ಬೇಕು ಅಂತಹ ಕಡೆಗಳಲ್ಲಿ ಮಾಡಬೇಕಾಗಿತ್ತು ಮಳೆಗಾಲ ಸರಿಯಾಗಿ ನಡೆಸದೆ ಹೋದರೆ ಆಣೆಕಟ್ಟುಗಳ ಅಚ್ಚುಕಟ್ಟು ಅಥವಾ ಆಯಕಟ್ಟು ಪ್ರದೇಶಗಳಲ್ಲಿ ಏನೊಂದು ಪ್ರಯೋಜನವೂ ಆಗುವುದಿಲ್ಲ. ಮಳೆ ಆಗದೆ ಆಣೆಕಟ್ಟು ತುಂಬದೇ ಹೋದರೆ ಪವರ್ ಉತ್ಪಾದನೆ ಕಡಿಮೆಯಾಗುತ್ತದೆ ಎನ್ನುವುದು ನಿರ್ವಿವಾದ ವಿಷಯ. ಹೀಗಾಗಿ ಕೈಗಾರಿಕೆ ಉದ್ಯಮಗಳಿಗೆ ಪವರ್ ಸರಿಯಾಗಿ ಸರಬರಾಜು ಮಾಡದೆ ಹೋದರೆ, ಪವರ್ ಕಟ್ ಮಾಡಿದರೆ ಕೈಗಾರಿಕೆ ಕ್ಷೇತ್ರದಲ್ಲಿ ಉತ್ಪನ್ನ ಸಹಜವಾಗಿ ಕಡಿಮೆಯಾಗುತ್ತದೆ. ಆದ್ದರಿಂದ ಸಾರ್ವಜನಿಕರಿಗೆ ಈ ಆಣೆಕಟ್ಟು ಕಟ್ಟಿದ್ದು ಪ್ರಯೋಜನವಾಗುವುಲ್ಲ. ಆದ್ದರಿಂದ ಸಂಪೂರ್ಣವಾಗಿ ಈ ಯೋಜನೆ ಒಳ್ಳೆಯದಲ್ಲ ಎನ್ನುವುದು ಆಗುತ್ತದೆ. ಹಲವಾರು ವರ್ಷಗಳಿಂದ ನೋಡುತ್ತಿರುವ ಅನುಭವದಿಂದ ಇದು ಮನದಟ್ಟಾಗುತ್ತದೆ. ನನ್ನ ಪ್ರಕಾರ ಹೇಳುವುದಾದರೆ ಸಣ್ಣ ನೀರಾವರಿಗಳನ್ನು ಹೆಚ್ಚಿಗೆ ತೆಗೆದುಕೊಳ್ಳಬೇಕು.

ಅಂಡರ್‌ಗ್ರೌಂಡ್ ವಾಟರನ್ನು ಟ್ಯಾಪ್‌ಮಾಡಿ ಅದರಿಂದ ನಮ್ಮ ವಾಟರ್ ಉತ್ಪಾದನೆ ಮಾಡಿಕೊಂಡಿದ್ದರೆ ನಮಗೆ ಬಹಳ ಅನುಕೂಲವಾಗುತ್ತಿತ್ತು. ಉದಾಹರಣೆಗೆ ತೆಗೆದುಕೊಂಡರೆ ಅಮೇರಿಕಾ, ರಷ್ಯಾ ಮುಂತಾದ ಮುಂದುವರಿದ ದೇಶಗಳಲ್ಲಿ ಅವರು ಅಂಡರ್‌ಗ್ರೌಂಡ್ ವಾಟರ್ ಸೋರ್ಸನಿಂದ ಅವರ ಉತ್ಪಾದನೆಯಯನ್ನು ಹೆಚ್ಚಿಸಿಕೊಳ್ಳುತ್ತಾರೆ. ಎಲ್ಲಿ ನೀರು ಸಮೃದ್ಧಿಯಾಗಿ ಸಿಕ್ಕುತ್ತದೆ ಅಲ್ಲಿ ಈ ಯೋಜನೆಗಳನ್ನು ಮಾಡಿದರೆ ಇದು ಯಶಸ್ವಿಯಾಗಿ ಆಗುವುದಕ್ಕೆ ಸಾಧ್ಯ. ಆದರೆ ಮಳೆ ಬಾರದೆ ಹೋದರೆ ನಿಮ್ಮ ಯೋಜನೆಗಳು ಯಾವರೀತಿಯಾದ ಫಲವನ್ನು ಕೊಡುವುದಿಲ್ಲ. ಪವರ್ ಉತ್ಪಾದನೆ ಕಡಿಮೆಯಾದರೆ ಕೈಗಾರಿಕೆ ಕ್ಷೇತ್ರದಲ್ಲಿಯೂ ಕೂಡ ಉತ್ಪಾದನೆ ಕಡಿಮೆಯಾಗುತ್ತದೆ. ನನ್ನ ಅಭಿಪ್ರಾಯದಲ್ಲಿ ಸಣ್ಣ ಸಣ್ಣ ನೀರಾವರಿ ಯೋಜನೆಗಳಿಗೆ ಸರ್ಕಾರ ಗಮನ ಕೊಟ್ಟಿದ್ದರೆ ಇಷ್ಟು ನಮಗೆ ಅಭಾವ ಬರುತ್ತಿರಲಿಲ್ಲ ಎಂದು ನನಗನಿಸುತ್ತದೆ. ಬೇರೆ ದೇಶಗಳವರ ಮೇಲೆ ನಾವು ಅವಲಂಬಿಸಬೇಕಾಗಿರಲಿಲ್ಲ. ಇವೊತ್ತು ನಮ್ಮ ಮೈಸೂರು ಸಂಸ್ಥಾನದಲ್ಲಿ ಹೆಚ್ಚು ಮಳೆ ಬೀಳುವ ಪ್ರದೇಶ ಎಂದರೆ ಮಲೆನಾಡು ಪ್ರದೇಶ. ಆ ಪ್ರದೇಶದಲ್ಲಿ ಸಂಪೂರ್ಣವಾದ ಬೆಳೆ ಸಿಕ್ಕುತ್ತಿಲ್ಲ. ಶಿವಮೊಗ್ಗಾ ಜಿಲ್ಲೆ ಕೆಲವು ಸಾರಿ ತೊಂದರೆಗೆ ಈಡಾಗಿರುತ್ತದೆ. ಸಂಪೂರ್ಣವಾಗಿ ಮಳೆ ಬೀಳದೆ ಹೋದರೆ ಆ ಪ್ರದೇಶದಲ್ಲಿ ಬೆಳೆ ಇಲ್ಲ ಎಂದು ಹೇಳಿದ ಮೇಲೆ ನೀವು ಯಾವರೀತಿ ಇಂಥಹ ದೊಡ್ಡ ದೊಡ್ಡ ಅಣೆಕಟ್ಟುಗಳನ್ನು ಕಟ್ಟಿ ಯಾವ ಪ್ರಯೋಜನ ಪಡೆಯುವುದಕ್ಕೆ ಸಾಧ್ಯ ಎಂದು ಕೇಳಬೇಕಾಗುತ್ತದೆ. ಇಂಥಹ ಮಲೆನಾಡು ಪ್ರದೇಶಗಳಲ್ಲಿ ಸಾಮಾನ್ಯವಾಗಿ ಹೇರಳವಾದ ಫಸಲು ಬರುತ್ತದೆ. ಅಂತಹ ಕಡೆಗಳಲ್ಲೇ ಹೀಗಾದರೆ ಇನ್ನು ಬೇರೆ ಎಲ್ಲಿ ಆಹಾರ ದೊರಕುತ್ತದೆ ? ಈ ಒಂದು ವರ್ಷದಲ್ಲಿ ೨ ರೂಪಾಯಿಗೆ ಒಂದು ವಸ್ತು ಸಿಕ್ಕುತ್ತ ಇದ್ದದ್ದು ಈಗ ಐದುರೂಪಾಯಿ ಚಿಲ್ಲರೆ ಆರು ರೂಪಾಯಿ ಆಗಿದೆ. ಒಂದಕ್ಕೆ ಮೂರರಷ್ಟು ಒಂದಕ್ಕೆ ಐದರಷ್ಟು ಜಾಸ್ತಿಯಾಗಿದೆ. ಆದರಲ್ಲಿ ಸಕ್ಕರೆ, ಅಕ್ಕಿ ಮುಂತಾದ ಹಲವಾರು ಪದಾರ್ಥಗಳು, ಮತ್ತು ಕಡಲೆಕಾಯಿ ಎಣ್ಣೆ ಒಂದು ಕೆ.ಜಿಗೆ ೧೦ ರೂಪಾಯಿ ಏರಿಹೋಗಿದೆ.

ಯಾವ ಯಾವ ದೇಶಗಳಲ್ಲಿ ಎಷ್ಟೆಷ್ಟು ಬೆಲೆ ಏರಿಕೆ ಆಗಿದೆಯೆಂದು ನನ್ನ ಹತ್ತಿರ ಅಂಕಿ ಅಂಶಗಳು ಇವೆ. ಬೇರೆ ದೇಶಗಳನ್ನು ತೆಗೆದ ಕೊಂಡರೆ ದಿನಬಳಕೆ ಪದಾರ್ಥಗಳ ಬೆಲೆಏರಿಕೆ ಕಳೆದ ೧೦ ವರ್ಷಗಳಲ್ಲಿ ಕೆನ್ಯಾ ೧೮.೬, ಶ್ರೀಲಂಕಾ ೨೯.೪, ಥೈಲಂಡ್ ೧೯.೧, ಇರಾನ್, ೧೭.೧, ಕೆನಡಾ ಮತ್ತು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಮತ್ತು ಆಸ್ಟ್ರೇಲಿಯಾದಲ್ಲಿ ಅವರೇಜ್ ೩೩ ಪರ್ಸೆಂಟ್ ಇದೆ. ಇಂಡಿಯಾದಲ್ಲಿ ಸೇಕಡಾ ೯೦ ಪರ್ಸೆಂಟ್ ಜಾಸ್ತಿಯಾಗಿದೆ. ಇದಕ್ಕೆ ಏನು ಕಾರಣ ಎಂದರೆ ಹಲವಾರು ಕಾರಣಗಳನ್ನು ಕೊಡುತ್ತೇನೆ ಉತ್ಪನ್ನದಲ್ಲಿ ಕಡಿಮೆಯಾಗಿರುವುದು ಒಂದು ಕಾರಣ. ಬ್ಲಾಕ್‌ಮನಿ ಜಾಸ್ತಿಯಾಗಿರುವುದು ಎರಡನೆಯ ಕಾರಣ. ಇದರ ಬಗ್ಗೆ ಒಳ್ಳೆಯ ಆರ್ಥಿಕ ತಜ್ಞರು ಕೊಟ್ಟಿರುವ ಅಭಿಪ್ರಾಯ ಇದು. ಹಿಂದೆ ವಾಂಚು ಕಮಿಟಿ ರಿಪೋರ್ಟು ಬಂದಾಗ ೧೨ ಸಾವಿರ ಕೋಟಿ ರೂಪಾಯಿ ಕಪ್ಪು ಹಣ ಇದೆ

ಯೆಂದು ಗೊತ್ತಾಗಿತ್ತು. ಆದರೆ ಈಗ ರಿಸೆಂಟ್ ಆಗಿ ಆರ್ಥಿಕ ತಜ್ಞರುಗಳು ಹೇಳುವುದನ್ನು ನೋಡಿದರೆ ಸುಮಾರು ೧೫ ಸಾವಿರ ಕೋಟಿ ರೂಪಾಯಿ ಕಪ್ಪು ಹಣ ಇದೆಯೆಂದು ಅಂಕಿಸಂಖ್ಯೆಗಳನ್ನು ಕೊಟ್ಟಿದ್ದಾರೆ. ತಾವು ಈಗ ಹೋಲ್‌ಸೇಲ್ ಟ್ರೇಡ್, ತೆಗೆದುಕೊಳ್ಳಬೇಕು ಎಂದು ಹೊರಟಿದ್ದೀರಿ. ಆದರೆ ನೀವು ಸಂಪೂರ್ಣ ವಾಗಿ ಆಹಾರ ಧಾನ್ಯಗಳನ್ನು ಸಂಗ್ರಹಿಸುವುದಕ್ಕೆ ಹೊರಟರೆ ಆ ಕಪ್ಪು ಹಣ ಇಟ್ಟಿರು ವವರು ರೈತರಿಂದ ಧಾನ್ಯಗಳನ್ನು ತೆಗೆದುಕೊಳ್ಳುವುದಕ್ಕೆ ತಮ್ಮ ಕಪ್ಪು ಹಣವನ್ನು ಬಳಸಿಕೊಳ್ಳುತ್ತಾರೆ. ಇದರಿಂದ ತಾವು ಹೋಲ್ ಸೇಲ್ ಟ್ರೇಡ್ ವಹಿಸಿಕೊಳ್ಳು ವುದರಿಂದ ಯಾವರೀತಿಯಾದ ಪ್ರಯೋಜನವಾಗುವುದಿಲ್ಲ. ಕಪ್ಪುಹಣ ತನ್ನದೇ ಆದ ಕೆಲಸವನ್ನು ಮಾಡುತ್ತಿದೆ. ಅದರಿಂದ ಬಡವ ಕ್ರಾನಿಕ್ ಇನ್‌ಫ್ಲೇಷನ್‌ಗೆ ಸಿಕ್ಕಿ ಹಾಕಿಕೊಂಡಿದ್ದಾನೆ. ಬೆಲೆ ಏರಿಕೆ ವಿಷಯದಲ್ಲಿ ಕಪ್ಪು ಹಣದ ಛಾಯೆ ಸಂಪೂರ್ಣ ವಾಗಿ ಆವರಿಸಿ ಅದು ತನ್ನ ಶಕ್ತಿಯನ್ನು ಬೆಳೆಸಿಕೊಂಡು ನಿಂತಿದೆ. ಕಪ್ಪುಹಣ ಇದ್ದಿರುವವರು ಯಾವಾಗಲೂ ಯಾವ ವಸ್ತುಗಳ ಬೆಲೆ ಏರಿಕೆಯಾಗುತ್ತದೆ ಯಾವ ಪದಾರ್ಥಗಳ ಬೆಲೆ ಕಡಿಮೆ ಆಗುತ್ತದೆ ಎಂಬುದನ್ನು ನೋಡುತ್ತಾ ಆ ಸಂದರ್ಭವನ್ನು ಉಪಯೋಗಿಸಿಕೊಳ್ಳುವುದಕ್ಕೆ ಕಾದಿರುತ್ತಾನೆ. ನಾವು ಎಷ್ಟೇ ಭಾಷಣಗಳನ್ನು ಮಾಡಲಿ ಎಷ್ಟೇ ಅಂಕಿ ಸಂಖ್ಯೆಗಳನ್ನು ಕೊಡಲಿ ಅವನು ಅವನ ಕಪ್ಪು ಹಣದ ಶಕ್ತಿ ಯಿಂದ ಬಡ ಜನರನ್ನು ತನ್ನ ಬಲೆಗೆ ಸಿಕ್ಕಿ ಹಾಕಿಸಿಕೊಳ್ಳುತ್ತಾನೆ. ಈ ಬ್ಲಾಕ್ ಮಾರ್ಕೆಟೀಯರ್ಸ್ ಏನು ಇದ್ದಾರೆ ಇವರ ಬಗ್ಗೆ ಮಾನ್ಯ ಶ್ರೀ ಸದಸ್ಯರಾದ ಶೀರನಹಳ್ಳಿ ಚಂದ್ರಶೇಖರ್‌ರವರು ಸಾಕಷ್ಟು ಹೇಳಿದ್ದಾರೆ. ದಳ್ಳಾಳಿಗಳು, ಬ್ಲಾಕ್ ಮಾರ್ಕೆಟೀಯರ್ಸ್ ಈ ಸಮಯವನ್ನು ಯಾವ ರೀತಿ ಸಂಪೂರ್ಣವಾಗಿ ದುರುಪಯೋಗ ಮಾಡಿಕೊಳ್ಳು ತ್ತಾರೆ ಎಂದು ನಾವು ಹೇಳುವುದಕ್ಕೆ ಆಗುವುದಿಲ್ಲ. ಇವರ ಮೇಲೆ ಯಾವ ವಿರೋಧ ಪಕ್ಷಗಳ ಹತೋಟಿ ಇರುವುದಿಲ್ಲ. ಆದ್ದರಿಂದ ಅವರ ಮೇಲೆ ನೀವು ಹಿಡಿತ ಹಾಕಿ ನಿಮಗೆ ಹಿಡಿತ ಹಾಕಲು ಅವಕಾಶವಿದೆ. ನಮಗೆ ಯಾವರೀತಿಯಿಂದಲೂ ಅವರ ಮೇಲೆ ಹಿಡಿತವಿಲ್ಲ.

ಉಪಾಧ್ಯಕ್ಷರು.— ತಾವು ಎರಡು ನಿಮಿಷದಲ್ಲಿ ಭಾಷಣವನ್ನು ಮುಗಿಸಬೇಕು.

ಶ್ರೀ ಎಸ್. ಬಂಗಾರಪ್ಪ.— ನನಗೆ ನಿಗದಿ ಮಾಡಿದ ಟೈಂ ಜಾಸ್ತಿ ಎಂದು ಕಾಣುತ್ತದೆ.

ಉಪಾಧ್ಯಕ್ಷರು.— ಯಾರು ಹೇಳಿದ್ದು ತಮಗೆ ದಯವಿಟ್ಟು ಒಂದು ನಿಮಿಷ ದಲ್ಲಿ ತಮ್ಮ ಭಾಷಣವನ್ನು ಮುಗಿಸಿ.

ಶ್ರೀ ಎಸ್. ಬಂಗಾರಪ್ಪ.— ಎರಡು ನಿಮಿಷ, ಒಂದು ನಿಮಿಷ ಎಂದು ತಾವು ಕಂಡಿಷನ್ ಹಾಕಿದರೆ ನನಗೆ ಮೆಂಟಲ್ ಸ್ಟ್ರೇನ್ ಆಗುತ್ತದೆ.

ಮಾನ್ಯ ಅಧ್ಯಕ್ಷರೇ, ಚುನಾವಣೆಯ ಕಾಲದಲ್ಲಿ ಇವರು ತಮಗೆ ಅಧಿಕಾರ ಕೊಟ್ಟರೆ ಕಾಳಸಂತೆ ಕೋರರನ್ನು ಬಗ್ಗು ಬಡಿಯುತ್ತೇವೆ, ನಿಜವಾದ ಸಮಾಜವಾದ

ವನ್ನು ನಾವು ತರುತ್ತೇವೆಂದು ಹೇಳಿದ್ದರು. ಆದರೆ ಇವತ್ತು ಏನಾಗಿದೆ ಎಂದರೆ, ಜನತೆಯನ್ನು ಇವರು ಒಪ್ಪಿಸಿ, ವಂಚನೆ ಮಾಡಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಅಧಿಕಾರದಲ್ಲಿರತಕ್ಕ ಇವರು ಇದಕ್ಕಾಗಿ ಯಾವ ರೀತಿಯ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ, ಯಾವ ರೀತಿ ಕಪ್ಪು ಹಣವನ್ನು ತೆಗೆಯುವುದಕ್ಕೆ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ ಎನ್ನುವ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಇವರಿಂದ ಕೇಳಬೇಕಾಗಿದೆ. ನಾವು ಗರೀಬಿ ಹಟಾವ ಮಾಡುತ್ತೇವೆ, ಬಡತನವನ್ನು ತೊಲಗಿಸುತ್ತೇವೆ ಎಂದು ಇವರು ಹೇಳಿದರೂ, ಇವತ್ತು ದೇಶದಲ್ಲಿ ನೂರಕ್ಕೆ ೯೦ ಜನ ಬಡವರು ಇದ್ದಾರೆ. ಈ ವರ್ಷ ಮಾಡುತ್ತೇವೆ, ಮುಂದಿನ ವರ್ಷ ಮಾಡುತ್ತೇವೆಂದು ಮಿಸ್ ಲೀಡಿಂಗ್ ಸ್ಲೋಗನ್ಸ್ ಹೇಳುವಂಥ ಬುದ್ಧಿವಂತಿಕೆಯನ್ನು ಹೊಂದಿದ್ದಾರೆ ಎಂದು ನಾನು ಸ್ಪಷ್ಟಪಡಿಸುತ್ತೇನೆ.

ಸಾಮಾನುಗಳ ಬೆಲೆ ಏರಿಕೆಯ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಬೆಲೆ ಏರಿಕೆಯನ್ನು ಇಳಿಸುವುದಕ್ಕೆ ಸ್ಪಷ್ಟವಾದಂಥ ಕಾರ್ಯಕ್ರಮವನ್ನು ಏನು ಹಾಕಿದ್ದೇವೆಂದು ಹೇಳುವುದರ ಜೊತೆಗೆ ತಮಿಳುನಾಡಿನಿಂದ ಮೂರು ಸಾವಿರ ಟನ್ ಕ್ವಿಂಟಲ್ ಅಕ್ಕಿಯನ್ನು ಇನ್ನೊಂದು ಸಾವಿರ ಟನ್ ಬ್ರೋಕನ್ ರೈಸ್ ತರಿಸುತ್ತೇವೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆಯನ್ನು ಕೊಟ್ಟಿದ್ದಾರೆ. ಈ ಮೂರು ಸಾವಿರ ಟನ್ ಬೆಂಗಳೂರು ನಗರಕ್ಕೆ ಅಥವಾ ಮೈಸೂರು ರಾಜ್ಯಕ್ಕೆ ೨೦ ದಿವಸಗಳಿಗೆ ಸಾಲದು ಎನ್ನುವ ಮಾತನ್ನು ನಾನು ಕೇಳಿದ್ದೇನೆ. ಓರಿಸ್ಸಾದಲ್ಲಿ, ಮಾನ್ಯ ಜತ್ತಿಯವರನ್ನು ಇದಕ್ಕಾಗಿ ಕೇಳಿದ್ದಾರೆಂದು ನನಗೆ ಗೊತ್ತಾಗಿದೆ ಅವರಿಂದ ಏನು ಉತ್ತರ ಬಂದಿದೆ ಎನ್ನುವುದಕ್ಕೆ ಸ್ಪಷ್ಟವಾದ ಉತ್ತರ ಇವರಿಂದ ಬೇಕು ಎಂದು ನಾನು ಕೇಳುತ್ತೇನೆ.

ಇನ್ನು ಲೆವಿ ಬಗ್ಗೆ ಒಂದೆರಡು ಮಾತುಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ತಮ್ಮ ಪ್ರಕಾರ ಲೆವಿಯ ಬೆಲೆ, ಸುಮಾರು ೭೦–೭೫ ರೂಪಾಯಿಗಳು ಕೋರ್ಸ್ ವರೈಟಿಗೆ ಒಂದು ಕ್ವಿಂಟಾಲ್‌ಗೆ ಎನ್ನುವ ಮಾತನ್ನು ತಾವು ಹೇಳಿದ್ದೀರಿ. ಇನ್ನೆರಡು ಮೂರು ದಿವಸದಲ್ಲಿ ಇದರ ಬಗ್ಗೆ ಸ್ಪಷ್ಟವಾದ ಹೇಳಿಕೆಯನ್ನು ಕೊಡುತ್ತೇವೆಂದು ಹೇಳಿದ್ದಾರೆ. ಆದರೆ ಭತ್ತದ ಬೆಲೆಯನ್ನು ನಿಗಧಿಮಾಡಬೇಕಾದರೆ, ಅಗತ್ಯ ವಸ್ತುಗಳ ಬೆಲೆಯನ್ನು ನೋಡಿ ಅದನ್ನು ನಿಗಧಿ ಮಾಡಬೇಕಾಗುತ್ತದೆ. ಇವತ್ತು ಸಕ್ಕರೆಯ ಬೆಲೆ ಜಾಸ್ತಿಯಾಗಿದೆ. ಅಕ್ಕಿಯ ಬೆಲೆ ಜಾಸ್ತಿಯಾಗಿದೆ; ಲೆವಿ ಬೆಲೆ ೭೦–೭೫ ರೂಪಾಯಿ ಎಂದು ತಾವು ಹೇಳಿದರೆ, ಲೆವಿ ಕೊಡುವ ಜನರ ಪರಿಸ್ಥಿತಿ ಏನಾಗಬಹುದು ಯೋಚನೆ ಮಾಡಿ. ಈ ಒಂದು ಆಧಾರದ ಮೇಲೆ ತಮ್ಮ ಅಭಿಪ್ರಾಯವನ್ನು ನಾವು ವಿರೋಧ ಮಾಡಬೇಕಾಗಿದೆ. ಜನರು ಲೆವಿ ಕೊಡುವುದಿಲ್ಲ ಎಂದು ಹೇಳುತ್ತಾರೆ. ಅಗತ್ಯ ವಸ್ತುಗಳ ಬೆಲೆಯನ್ನು ತಹಬಂದಿಗೆ ತರದೆ ಲೆವಿ ಕೊಡುವುದಿಲ್ಲ ಎಂದು ಜನರು ಹೇಳುತ್ತಾರೆ ಎಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಎಂ. ರುದ್ರಪ್ಪ (ಸಕಲೇಶಪುರ)—ಸನ್ಮಾನ್ಯ ಸಭಾಧ್ಯಕ್ಷರೇ, ಆಹಾರ ಸಮಸ್ಯೆ, ಇದು ಬಹಳ ದೊಡ್ಡ ಸಮಸ್ಯೆ. ಆದರೆ ವಿರೋಧ ಪಕ್ಷದ ವತಿಯಿಂದ ಮಾತ

ನಾಡಿದ ಸದಸ್ಯರು ಸರ್ಕಾರ ಇದರ ಬಗ್ಗೆ ಬಹಳ ಗುರುತರವಾದ ತಪ್ಪನ್ನು ಮಾಡಿದೆ, ಆದ್ದರಿಂದ ಇದು ಬೃಹದಾಕಾರವಾಗಿ ಬೆಳೆದಿದೆ. ಮತ್ತು ಜನಗಳಿಗೆ ಕಷ್ಟವನ್ನುಂಟು ಮಾಡಿದೆ ಎಂಬುದಾಗಿ ಹೇಳಿದಂಥ ಮಾತನ್ನು ಕೇಳಿ ನನಗೆ ವ್ಯಥೆಯಾಯಿತು. ಏಕೆಂದರೆ, ಈ ಸಮಸ್ಯೆಯನ್ನು ನಮ್ಮ ಮೈಸೂರು ರಾಜ್ಯದ ದೃಷ್ಟಿಯಿಂದ ನೋಡಿದರೆ ಸಾಲದು, ಇಡೀ ಭಾರತದ ಮತ್ತು ಅಂತರ ರಾಷ್ಟ್ರೀಯ ದೃಷ್ಟಿಯಿಂದ ಇದನ್ನು ಇವರು ನೋಡಿದರೆ ಚೆನ್ನಾಗಿತ್ತು ಎಂಬುದಾಗಿ ನಾನು ತಿಳಿದುಕೊಂಡಿದ್ದೇನೆ. ಕಾರಣ ಇಷ್ಟೆ, ೧೯೭೧ರಿಂದ ನಮ್ಮ ದೇಶದಲ್ಲಿ ಅನೇಕ ಸಮಸ್ಯೆಗಳು ಬೃಹದಾಕಾರವಾಗಿ ಬಂದಿವೆ. ನಮ್ಮ ದೇಶವನ್ನು ಆಕ್ರಮಣಕಾರರಿಂದ ತಡೆಗಟ್ಟಬೇಕಾಯಿತು ಬಾಂಗ್ಲಾ ದೇಶದಿಂದ ಸುಮಾರು ಒಂದು ಕೋಟಿ ಜನ ನಿರಾಶ್ರಿತರಿಗೆ ೧೦ ತಿಂಗಳು ನಾವು ಅವರಿಗೆ ಅನ್ನ ಕೊಡಬೇಕಾಯಿತು. ಇದಕ್ಕಿಂತ ಮಿಗಿಲಾಗಿ, ನಮ್ಮ ದೇಶದಲ್ಲಿ ಭೀಕರ ಬರಗಾಲ ಬಂದಿತ್ತು. ಇದೆಲ್ಲಾ ಕಾರಣಗಳಿಂದ ಈ ಸಮಸ್ಯೆ ಉದ್ಭವಿಸಿತು. ನಮ್ಮ ರಾಜ್ಯದ ಪರಿಸ್ಥಿತಿಯನ್ನು ತೆಗೆದುಕೊಂಡರೆ, ಹೋದವರ್ಷ, ನಮ್ಮ ರಾಜ್ಯದಲ್ಲಿ ಉತ್ತರ ಕರ್ನಾಟಕದ ನಾಲ್ಕೈದು ಜಿಲ್ಲೆಗಳಲ್ಲಿ ಭೀಕರ ಬರಗಾಲ ಬಂತು. ಅದರ ಪರಿಣಾಮ ವಾಗಿ ಅಲ್ಲಿ ಏನು ಆಹಾರ ಪದಾರ್ಥಗಳು ಬೆಳೆಯುತ್ತಿದ್ದವೋ ಅವು ಕಡಿಮೆಯಾದವು. ಹಿಂದೆ ಬೆಳೆಯುತ್ತಿದ್ದರಲ್ಲಿ ಸುಮಾರು ೧೩ ಲಕ್ಷ ಟನ್ ಖೋತಾ ಆಯಿತು. ಹೋದ ವರ್ಷ ೫೦ ಲಕ್ಷ ಟನ್ ಆಹಾರ ಉತ್ಪತ್ತಿಯಾಗಿತ್ತು, ಆದರೆ ೭೧–೭೨ರಲ್ಲಿ ಸುಮಾರು ೬೨ ಲಕ್ಷ ಟನ್ ಆಹಾರ ಉತ್ಪತ್ತಿಯಾಗಿತ್ತು. ಅಂದಮೇಲೆ ಒಂದುಕಡೆ ಬರಗಾಲ, ಮತ್ತು ಒಂದು ಕಡೆ ಆಹಾರ ಧಾನ್ಯ ಕಡಿಮೆಯಾದದ್ದು, ಈ ಎರಡು ಕಾರಣದಿಂದಾಗಿ ಕೆಲವು ಕಡೆ ಆಹಾಕಾರ ಉಂಟಾಯಿತು. ಇದು ನಿಜ. ಆದರೆ ಸರ್ಕಾರ ಇದಕ್ಕೆ ಕಾರಣವಲ್ಲ. ಸರ್ಕಾರ ಈ ಸಮಸ್ಯೆಯನ್ನು ತನ್ನ ಕೈಲಾದ ರೀತಿಯಲ್ಲಿ ದಿಟ್ಟತನದಿಂದ ಎದುರಿಸಿದೆ. ಒಂದು ವಿಚಾರವನ್ನು ಇಲ್ಲಿ ನಾನು ಹೇಳಬೇಕಾಗಿದೆ. ಏನೆಂದರೆ, ಇಷ್ಟೆಲ್ಲಾ ಕಷ್ಟ ಇದ್ದರೂ ಸಹ ನಮ್ಮ ದೇಶದಲ್ಲಿ ಯಾರೂ ಅನ್ನವಿಲ್ಲದೆ ಸತ್ತಿಲ್ಲ ಎಂಬುದನ್ನು ನಾವು ಜ್ಞಾಪಕಕ್ಕೆ ತೆಗೆದುಕೊಂಡರೆ ನಮ್ಮ ಸರ್ಕಾರ ಈ ಸಮಸ್ಯೆಯನ್ನು ಎಷ್ಟರ ಮಟ್ಟಿಗೆ ಎದುರಿಸಿದೆ ಎನ್ನುವುದು ಗೊತ್ತಾಗುತ್ತದೆ. ಇದಕ್ಕಾಗಿ ವಿರೋಧ ಪಕ್ಷದವರು ಸರ್ಕಾರವನ್ನು ಅಭಿನಂದಿಸಬೇಕಾಗಿತ್ತು ಅಂಥ ದೊಡ್ಡ ಗುಣ ಅವರಲ್ಲಿ ಕಂಡುಬರ ಲಿಲ್ಲ. ಅದಕ್ಕೂ ಪ್ರತಿಯಾಗಿ, ಸರ್ಕಾರ ಏನು ಮಾಡಿದೆ, ಹಾಗೆ ಮಾಡಿದೆ, ಹೀಗೆ ಮಾಡಿದೆ ಎಂದು ಹೇಳುತ್ತಿದ್ದಾರೆ. ದೇಶದ ಪರಿಸ್ಥಿತಿಯನ್ನು ಅವರು ತಮ್ಮ ಗಮನಕ್ಕೆ ತೆಗೆದುಕೊಂಡಿಲ್ಲ. ಈ ಸಮಸ್ಯೆಯನ್ನು ಬಿಡಿಸಬೇಕಾದರೆ, ಪ್ರಾಮುಖ್ಯವಾಗಿ ಮೂರು ಅಂಶಗಳನ್ನು ನಾವು ಗಮನಿಸಬೇಕಾಗಿದೆ. ಉತ್ಪನ್ನ ಸಂಗ್ರಹಣೆ, ಮತ್ತು ವಿತರಣೆ. ಉತ್ಪನ್ನ ಜಾಸ್ತಿಯಾಗಬೇಕಾದರೆ, ನೀರಾವರಿ ಸೌಕರ್ಯ ಜಾಸ್ತಿಯಾಗಬೇಕು. ಮತ್ತು ರಾಸಾಯನಿಕ ಗೊಬ್ಬರವನ್ನು ಜಮೀನಿಗೆ ಹಾಕಬೇಕು. ಈ ರೀತಿ ಮಾಡಿದರೆ ಉತ್ಪನ್ನ ಜಾಸ್ತಿಯಾಗುತ್ತದೆ. ಅಲ್ಲದೆ ಜನಗಳೂ ಸಹ ಕಷ್ಟಪಟ್ಟು ದುಡಿಯಬೇಕು. ಏಕೆಂದರೆ ನಮ್ಮ ದೇಶದಲ್ಲಿ ಶೇಕಡಾ ೭೦ರಷ್ಟು ಜನ ವ್ಯವಸಾಯದಲ್ಲಿ ತೊಡಗಿದ್ದಾರೆ. ಅದೇ

ಆಸ್ಟ್ರೇಲಿಯಾದಲ್ಲಿ, ಸೇಕಡ, ೧೮, ಬ್ರಿಟನ್‌ನಲ್ಲಿ ೪ರಷ್ಟು, ಅಮೆರಿಕಾದಲ್ಲಿ, ೭ರಷ್ಟು ಜನ ವ್ಯವಸಾಯದಲ್ಲಿ ತೊಡಗಿದ್ದಾರೆ.

ನಮ್ಮ ದೇಶದಲ್ಲಿ ಇಷ್ಟೊಂದು ಪ್ರಮಾಣದಲ್ಲಿ ಜನ ವ್ಯವಸಾಯದಲ್ಲಿ ತೊಡಗಿದ್ದರೂ ಉತ್ಪನ್ನ ಬೇರೆ ದೇಶಗಳಿಗಿಂತ ಕಡಿಮೆಯಾಗಿದೆ. ನಮ್ಮ ದೇಶದಲ್ಲಿ ಜನ ಕಷ್ಟಪಟ್ಟು ಕೆಲಸ ಮಾಡಬೇಕು. ನಾನೂ ರೈತ ಕುಟುಂಬದಿಂದ ಬಂದವನು. ನಮ್ಮ ರೈತರು ಏನು ಮಾಡುತ್ತಾರೆ ಎನ್ನುವುದು ನನಗೂ ಗೊತ್ತಿದೆ. ಪ್ರತಿಯೊಂದಕ್ಕೂ ಅವರು ಸರ್ಕಾರವನ್ನೇ ಅವಲಂಬನೆ ಮಾಡಿಕೊಂಡಿರುತ್ತಾರೆ. ಅವರು ದೇಶದ ಪರಿಸ್ಥಿತಿಯನ್ನು ಅರಿತುಕೊಂಡು ಕಷ್ಟಪಟ್ಟು ಕೆಲಸ ಮಾಡಿ ದೇಶದ ಉತ್ಪನ್ನವನ್ನು ಜಾಸ್ತಿ ಮಾಡಬೇಕು. ಉತ್ಪನ್ನ ಆಗಿದ್ದನ್ನು ಸರಿಯಾದ ರೀತಿಯಲ್ಲಿ ಸಂಗ್ರಹಣೆ ಮಾಡಬೇಕು. ನಮ್ಮ ದೇಶದಲ್ಲಿ ಸೆಂಟ್ರಲ್ ಫುಡ್ ಕಾರ್ಪೋರೇಷನ್ ಎಂದು ಒಂದು ಸಂಸ್ಥೆ ಇದೆ. ಇದು ದೊಡ್ಡ ಕಾರ್ಪೋರೇಷನ್. ಈ ಕಾರ್ಪೋರೇಷನ್ ಜನರ ಬೇಡಿಕೆಯನ್ನು ಪೂರೈಸುವುದಕ್ಕೆ ಸಾಕಾದಷ್ಟು ಶಕ್ತಿಯನ್ನು ಇದು ಹೊಂದಿಲ್ಲ. ಏಕೆಂದರೆ, ದೇಶ ಬಹಳ ದೊಡ್ಡದು, ೫೭ ಕೋಟಿ ಜನಸಂಖ್ಯೆಯಿರತಕ್ಕ ದೇಶಕ್ಕೆ ಒಂದೇ ಕಾರ್ಪೋರೇಷನ್ ಆದರೆ ಸಾಲದು. ಒಂದು ರಾಜ್ಯಕ್ಕೆ ಒಂದರಂತೆ ಆಗಬೇಕು. ಒಂದು ರಾಜ್ಯಕ್ಕೆ ಎರಡು ಆದರೂ ತಪ್ಪಿಲ್ಲ. ಉದಾಹರಣೆಗೆ ಯುಗೋಸ್ಲಾವಿಯಾ ಒಂದು ಚಿಕ್ಕ ರಾಷ್ಟ್ರ. ಅಲ್ಲಿ ಸಾವಿರ ಫುಡ್ ಕಾರ್ಪೋರೇಷನ್ಸ್ ಇವೆಯೆಂದು ನಾನು ಕೇಳಿದ್ದೇನೆ. ಅಂದಮೇಲೆ, ನಮ್ಮ ದೇಶದಲ್ಲಿ ಒಂದು ಫುಡ್ ಕಾರ್ಪೋರೇಷನ್ ಆದರೆ ಸಾಲದು, ಆದ್ದರಿಂದ ನಮ್ಮ ಮುಖ್ಯ ಮಂತ್ರಿಗಳು, ಇದನ್ನು ಮನಗಂಡು, ನಮ್ಮ ರಾಜ್ಯಕ್ಕೆ ಕರ್ನಾಟಕ ಫುಡ್ ಕಾರ್ಪೋರೇಷನ ಒಂದನ್ನು ರಚನೆ ಮಾಡಿದ್ದಾರೆ. ಆ ಸಮಿತಿಯಲ್ಲಿ ಒಳ್ಳೆಯ ದಕ್ಷರನ್ನು ಹಾಕಿದ್ದಾರೆ. ಇದು ನಾನಾ ರೀತಿಯಲ್ಲಿ ಆಹಾರ ಧಾನ್ಯಗಳನ್ನು ಸಂಗ್ರಹಣೆ ಮಾಡುತ್ತದೆ ಎಂದು ನಾವು ನಂಬಬಹುದು. ಪ್ರಾಮುಖ್ಯವಾಗಿ ನಮಗೆ ಬೇಕಾಗಿರತಕ್ಕದ್ದು ಅಕ್ಕಿ. ಸುಮಾರು ಎರಡೂವರೆ ಲಕ್ಷ ಟನ್ ಭತ್ತವನ್ನು ಸಂಗ್ರಹಣೆ ಮಾಡಬೇಕು ಎಂದು ಹೇಳಿ ಒಂದು ಕಾರ್ಯಕ್ರಮವನ್ನು ನಮ್ಮ ಸರ್ಕಾರದವರು ಇಟ್ಟುಕೊಂಡಿದ್ದಾರೆ. ಹೋದ ವರ್ಷ ೭೭ ಸಾವಿರ ಕ್ವಿಂಟಾಲ್ ಭತ್ತ ಸಂಗ್ರಹಣೆಯಾಗಿತ್ತು. ಆದರೂ ಸಹ ಫುಡ್ ಕಾರ್ಪೋರೇಷನ್‌ನಿಂದ ಸರಿಯಾದ ವಿತರಣೆಯಾಗಿಲ್ಲ. ಈ ಸಾರಿ ಜೋಳ ಮತ್ತು ರಾಗಿಯನ್ನು ಸಹ ಸಂಗ್ರಹಣೆ ಮಾಡಬೇಕು ಎಂದು ಹೇಳಿ ಒಂದು ಕಾರ್ಯಕ್ರಮವನ್ನು ಸರ್ಕಾರದವರು ಇಟ್ಟುಕೊಂಡಿದ್ದಾರೆ. ಮುಖ್ಯವಾಗಿ ಇದರಲ್ಲಿ ಅಧಿಕಾರಿಗಳು ಬಹಳ ಪ್ರಾಮಾಣಿಕರಾಗಿರಬೇಕು, ಅಕ್ಕಿ ದಾಸ್ತಾನು ಮಾಡಲು ಸರಿಯಾದ ಉಗ್ರಾಣಗಳಿರಬೇಕು. ಇದಕ್ಕೆ ಸಂಬಂಧಪಟ್ಟಂತೆ Mysore State Ware Housing Corporation ಇದೆ ಅದು ದಾಸ್ತಾನು ಮಾಡುವುದು. ಕೊನೆಯ ಪಕ್ಷ ಪ್ರತಿಯೊಂದು ತಾಲ್ಲೂಕಿಗೂ ಕೂಡ ಒಂದು ಮಳಿಗೆ ಬೇಕು. ಇಲ್ಲದಿದ್ದರೆ ಧಾನ್ಯ ಸಂಗ್ರಹಿಸಲು ಕಷ್ಟವಾಗುತ್ತದೆ.

ಇನ್ನು ಅಕ್ಕಿಯ ವಿತರಣೆ ಬಹಳ ಮುಖ್ಯವಾದುದು. ಆಹಾರವನ್ನು ಏನು

ನಮ್ಮ ಸರಕಾರ ಅಭಾವದ ಕಾರ್ಯಗಳಿಗಾಗಿ ಸುಮಾರು ೪೫ ಕೋಟಿ ರೂಪಾಯಿಗಳ ವರೆಗೆ ಖರ್ಚು ಮಾಡಿದೆ. ಇದಕ್ಕಾಗಿ ಯಾರು ಬ್ಲಾಕು ಮಾರ್ಕೆಟ್ಟನಲ್ಲಿ ದುಡ್ಡು ಸಂಪಾದನೆ ಮಾಡಿರುತ್ತಾರೋ ಅವರ ಮೇಲೆ ಮತ್ತು ಯಾರು ಸಿನಿಮಾಗಳಿಗೆ ಹೋಗುತ್ತಾರೋ ಅವರ ಮೇಲೆ ಮತ್ತು ಜೂಜಾಟಕ್ಕೆ ಹೋಗುತ್ತಾರೋ ಅವರ ಮೇಲೆ ಹೆಚ್ಚಿನ ತೆರಿಗೆ ಹಾಕಿ ಅದರಿಂದ ಬರುವ ದುಡ್ಡನ್ನು ಬೇಕಾದರೆ ರೈತರಿಗೆ ಕೊಟ್ಟು ಸಹಾಯ ಮಾಡಬಹುದು ಮತ್ತು ಬೆಲೆಗಳೂ ಏರದಂತೆ ಮಾಡಬಹುದು ಎಂದು ಈ ಸಂದರ್ಭದಲ್ಲಿ ಹೇಳಲು ಇಷ್ಟಪಡುತ್ತೇನೆ.

ಸರ್ಕಾರದವರು ಲಂಚಗುಳಿತನವನ್ನು ತಪ್ಪಿಸಿದ್ದರೆ ಬೆಲೆಗಳು ಹೆಚ್ಚುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಸರ್ಕಾರದವರು ಲಂಚದ ಹಾವಳಿಯನ್ನು ತಪ್ಪಿಸುವುದರಲ್ಲಿ ಸಾಕಾದಷ್ಟು ಪ್ರಯತ್ನವನ್ನು ಮಾಡಿಲ್ಲ. ಎಲ್ಲಿಯವರೆಗೂ ಲಂಚವಿರುತ್ತದೆ ಅಲ್ಲಿಯವರೆಗೂ ಬೆಲೆಗಳನ್ನು ಇಳಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಸರ್ಕಾರದವರು ಮಾಡದೆ ಇದ್ದ ಕೆಲಸಗಳ ಬಗ್ಗೆ ಘೋಷಣೆಗಳನ್ನು ಮಾಡುವುದನ್ನು ಬಿಡಬೇಕು. ಬತ್ತದ ಸಗಟು ವ್ಯಾಪಾರವನ್ನು ವಹಿಸಿಕೊಳ್ಳುವುದಾಗಿ ಹೇಳುವುದಕ್ಕೆ ಪ್ರಾರಂಭ ಮಾಡಿದ ಕೂಡಲೇ ಬೆಲೆಗಳು ಏರಿದವು. ಬತ್ತದ ಸಗಟು ವ್ಯಾಪಾರವನ್ನು ತೆಗೆದು ಕೊಳ್ಳಲಿಲ್ಲ, ಅದನ್ನು ಮುಂದೆ ಮುಂದೆ ಹಾಕುತ್ತಿದ್ದಾರೆ. ಯಾವುದಾದರೂ ಕೆಲಸವನ್ನು ಮಾಡಬೇಕಾದರೆ ಅದಕ್ಕೆ ಬೇಕಾದ ಸಿದ್ಧತೆಗಳನ್ನೆಲ್ಲ ಮಾಡಿಕೊಂಡು ಘೋಷಣೆಗಳನ್ನು ಮಾಡಬೇಕು. ಇಲ್ಲದೆ ಹೋದರೆ ಅದರಿಂದ ದುಷ್ಪರಿಣಾಮಗಳಾಗುತ್ತವೆ.

ಲೆವಿ ಪದ್ಧತಿಯಿಂದ ಪಟ್ಟಣವಾಸಿಗಳಿಗೆ ಅನುಕೂಲ ಮಾಡಿಕೊಡುತ್ತಿದ್ದಾರೆ. ಅದಕ್ಕೆ ನಾವು ಗ್ರಾಮಾಂತರ ಜನತೆಗೆ ಕೃತಜ್ಞರಾಗಿದ್ದೇವೆ. ಸರ್ಕಾರದವರು ಕೊಡತಕ್ಕ ಒಂದು ಕೆ. ಜಿ. ಅಕ್ಕಿಯಿಂದ ಜೀವನ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಮಾಡುವ ಹಾಗೆ ಇದ್ದರೆ ಪೂರ್ತಿಯಾಗಿ ಶಾಸನಬದ್ಧ ಪಡಿತರವನ್ನು ಜಾರಿಗೆ ತೆಗೆದುಕೊಂಡು ಬರಬೇಕು. ಹಾಗೆ ಮಾಡದೆ ರಾವಣಾಸುರನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ ಎನ್ನುವಂತೆ ಕೊಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ ಮತ್ತು ಜನಗಳಿಗೆ ತೊಂದರೆಯಾಗುತ್ತದೆ ಇವರ ಜೊತೆಗೆ ಅಂತರಜಿಲ್ಲಾ ಸಾಗಾಣಿಕೆಯ ಮೇಲೆ ಇರುವ ನಿರ್ಬಂಧವನ್ನು ತೆಗೆದು ಹಾಕಬೇಕೆಂದು ಹೇಳುವವರಲ್ಲಿ ನಾನೂ ಒಬ್ಬ. ಜಿಲ್ಲೆಯಿಂದ ಜಿಲ್ಲೆಗೆ ಆಹಾರ ಧಾನ್ಯಗಳು ಹೋಗಬಾರದು ಎಂದು ಇರುವ ನಿರ್ಭಂಧವನ್ನು ತೆಗೆದು ಹಾಕಿ ರಾಜ್ಯದ ಗಡಿಗಳಲ್ಲಿ ಬಿಗಿ ಮಾಡಿದರೆ ಅನುಕೂಲವಾಗುತ್ತದೆ.

ರಾಜ್ಯದಲ್ಲಿಯು ಉತ್ಪನ್ನವನ್ನು ಹೆಚ್ಚು ಮಾಡುವುದಕ್ಕೆ ವಿಫಲರಾಗಿದ್ದಾರೆ. ಅದರ ಜೊತೆಗೆ ಜನಸಂಖ್ಯೆ ಏರುವುದನ್ನೂ ತಡೆಗಟ್ಟುವುದರಲ್ಲಿ ವಿಫಲರಾಗಿದ್ದಾರೆ. ಕುಟುಂಬ ನಿಯಂತ್ರಣ ಮಾಡಲು ಖರ್ಚು ಮಾಡುತ್ತಿರುವ ಹಣವನ್ನು ಆ ಕೆಲಸಕ್ಕೆ

ಬದಲು ನೀರಾವರಿ ಯೋಜನೆಗಳ ಮೇಲೆ ಅಥವಾ ರೈತನಿಗೆ ಉಪಯೋಗವಾಗುವ ಕೆಲಸಗಳಿಗೆ ಹಾಕಿದ್ದರೆ ಉತ್ಪನ್ನವಾದರೂ ಹೆಚ್ಚಾಗಬಹುದಾಗಿತ್ತು ಎನ್ನುವುದು ನನ್ನ ವಾದ.

ಸರ್ಕಾರದವರು ತಮ್ಮ ಮೇಲೆ ಇರುವ ತಪ್ಪನ್ನು ಮುಚ್ಚಿಕೊಳ್ಳುವುದಕ್ಕೆ ಬೇರೆಯವರ ಮೇಲೆ ಗೂಬೆ ಕೂರಿಸುವ ಪ್ರಯತ್ನ ಮಾಡುತ್ತಿದ್ದಾರೆ. ಹಣದ ಉಬ್ಬರ, ಹೆಚ್ಚು ತೆರಿಗೆಗಳನ್ನು ಹಾಕುವುದು ಮತ್ತು ಲಂಚ ಹೆಚ್ಚಿರುವುದಕ್ಕೆ ಸರ್ಕಾರದವರೇ ಜವಾಬದಾರರು ಇದನ್ನು ತಡೆಗಟ್ಟದೆ ಬೇರೆಯವರ ಮೇಲೆ ತಪ್ಪನ್ನು ಹೊರಿಸುವ ಪ್ರಯತ್ನ ಮಾಡುತ್ತಿದ್ದಾರೆ. ಮಾಡತಕ್ಕ ಕೆಲಸವನ್ನು ನಿಷ್ಠೆಯಿಂದ ಮಾಡಬೇಕು ಮತ್ತು ಸಾಮಾನ್ಯ ಜನರ ಹಾಗೆ ಜೀವನ ಮಾಡಬೇಕು. ಆವಾಗ ಕಷ್ಟವೇನಿದೆ ಎನ್ನುವುದು ಗೊತ್ತಾಗುತ್ತದೆ. ಚೀಲ ಹಿಡಿದುಕೊಂಡು ಪೇಟೆಗೆ ಹೋದರೆ ಸಾಮಾನ್ಯ ಜನರ ಕಷ್ಟವೇನು ಎನ್ನುವುದು ಗೊತ್ತಾಗುತ್ತದೆ. ಸಾಮಾನ್ಯ ಜನಗಳ ಹಾಗೆ ಎಲ್ಲಿಯವರೆಗೆ ಜೀವನ ಮಾಡುವುದಕ್ಕೆ ಪ್ರಯತ್ನ ಮಾಡುವುದಿಲ್ಲ ಅಲ್ಲಿಯವರೆಗೆ ಈ ಸಮಸ್ಯೆ ಖಂಡಿತವಾಗಿ ಬಗೆಹರಿಸುವುದಕ್ಕೆ ಆಗುವುದಿಲ್ಲ. ಯಾವುದೋ ರೀತಿಯಲ್ಲಿ ಇವರಿಗೆ ಅನುಕೂಲವಾಗಿ ಸಿಕ್ಕುತ್ತದೆ. ಆದರೆ ಜನತಾ ಬಜಾರಿನಲ್ಲಿ ಕ್ಯೂನಲ್ಲಿ ನಿಂತುಕೊಂಡರೆ, ಅಂಥ ಸಂದರ್ಭ ಬಂದರೆ ಜನಗಳ ಕಷ್ಟ ಅರಿವಾಗುತ್ತದೆ.

ಸರ್ಕಾರದವರು ಸ್ವಲ್ಪ ಫ್ರೀ ಟ್ರೇಡ್‌ಗೆ ಕೂಡ ಅವಕಾಶ ಕೊಡಬೇಕು. ಸರ್ಕಾರದವರು ತಿಂಗಳಿಗೆ ಕೊಡತಕ್ಕ ಒಂದು ಕೆ. ಜಿ. ಅಕ್ಕಿಯಲ್ಲಿ ಹೇಗೆ ಜೀವನ ಮಾಡಬೇಕು? ಆದ್ದರಿಂದ ಸರ್ಕಾರದವರು ನಿಗದಿ ಮಾಡುವ ಬೆಲೆಯಲ್ಲಿ ಆಹಾರ ಧಾನ್ಯಗಳನ್ನು ಮಾರಬೇಕೆಂದೂ ಹೆಚ್ಚಿನ ಬೆಲೆಗೆ ಮಾರಿದ ಪಕ್ಷದಲ್ಲಿ ಅಂಥವರಿಗೆ ಶಿಕ್ಷೆಯನ್ನು ವಿಧಿಸಬೇಕು. ಇಲ್ಲದೇ ಹೋದರೆ ಪೂರ್ತಿಯಾಗಿ ಶಾಸನಬದ್ಧ ಪಡಿತರ ವ್ಯವಸ್ಥೆಯನ್ನು ಜಾರಿಗೆ ತಂದು ಆಹಾರಧಾನ್ಯಗಳನ್ನು ಒದಗಿಸಬೇಕು. ಒಂದು ಕಡೆ ಕೊಡತಕ್ಕಷ್ಟು ಸಾಲದು ಮತ್ತು ಪೇಟೆಯಲ್ಲಿ ಕೊಂಡುಕೊಳ್ಳುವುದಕ್ಕೆ ಶಕ್ತಿ ಇಲ್ಲದೆ ಇರುವಂಥ ರೀತಿಯಲ್ಲಿ ಮಾಡಿದರೆ ಜನಗಳಿಗೆ ಎಷ್ಟು ಕಷ್ಟವಾಗುತ್ತದೆ ಎನ್ನುವುದನ್ನು ಯೋಚನೆ ಮಾಡಬೇಕಾಗಿದೆ.

ಕರ್ನಾಟಕ ಫುಡ್ ಕಾರ್ಪೊರೇಷನ್ ಮಾಡುತ್ತಿದ್ದಾರೆ. ಈಗ ಕೊಡುತ್ತಿರುವ ಅಕ್ಕಿಯಲ್ಲಿ ಬತ್ತ, ಕಲ್ಲು ಇರುತ್ತದೆ. ಇನ್ನುಮುಂದೆ ಕೊಡುವ ಅಕ್ಕಿಯನ್ನಾದರೂ ಸರಿಯಾಗಿ ಕೊಡುವ ವ್ಯವಸ್ಥೆ ಮಾಡಬೇಕು. ಒಳ್ಳೆಯ ಮತ್ತು ಸ್ವಚ್ಛವಾಗಿರುವ ಅಕ್ಕಿಯನ್ನು ಸರಬರಾಜು ಮಾಡಿ ಐದು ಅಥವಾ ಹತ್ತು ಪೈಸೆ ಜಾಸ್ತಿ ತೆಗೆದುಕೊಂಡರೂ ಚಿಂತೆ ಇಲ್ಲ. ಇದರ ಬಗ್ಗೆ ಸರ್ಕಾರ ಗಮನಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಬೆಲೆಗಳ ಏರಿಕೆಗೆ ಕೇಂದ್ರ ಸರ್ಕಾರದ ಪೂರ್ತಿ ಜವಾಬ್ದಾರಿ ಇದೆ ಎನ್ನುವುದು ಗೊತ್ತಿದೆ. ಕೇಂದ್ರ ಮತ್ತು ರಾಜ್ಯದಲ್ಲಿ ಒಂದೇ ಪಕ್ಷ ಆಡಳಿತ ನಡೆಸುತ್ತಿರುವುದರಿಂದ ಅದರಲ್ಲಿ ನಮ್ಮ ಸರ್ಕಾರವನ್ನು ನಡೆಸುವವರೂ ಭಾಗಿಗಳಾಗಬೇಕಾಗುತ್ತದೆ, ಅದರ ಬಗ್ಗೆ ಸರಿಯಾದ ಯೋಜನೆಗಳನ್ನು ಮಾಡಬೇಕಾದ್ದು ಅವಶ್ಯಕ.

ಕಳ್ಳ ವ್ಯಾಪಾರ ಮಾಡುವವರಿಗೆ, ಕಾಳಸಂತೆ ಮಾಡುವ ಜನರಿಗೆ ಉಗ್ರವಾದ ಶಿಕ್ಷೆಯನ್ನು ಕೊಡುವುದರಲ್ಲಿ ನಿರ್ದಾಕ್ಷಿಣ್ಯವಾಗಿ ವರ್ತಿಸುತ್ತೇವೆಂದು ಹೇಳುತ್ತಿದ್ದರೂ ಆ ರೀತಿಯಾಗಿ ಆಗುತ್ತಿಲ್ಲ. ಜನಸಾಮಾನ್ಯರ ಕಷ್ಟವನ್ನು ಕೇಳುವವರಿಲ್ಲ. ಜನ ಸಾಮಾನ್ಯರ ಜೊತೆಯಲ್ಲಿ ಓಡಾಡಿದರೆ ಅವರ ಕಷ್ಟ ಗೊತ್ತಾಗುತ್ತದೆ ಎಂದು ಆಗಲೇ ಹೇಳಿದೆ. ಹಿಂದೆ ಫುಡ್ ಡೈರೆಕ್ಟರಾಗಿದ್ದ ಶ್ರೀನಿವಾಸನ್ ಅವರು ಅವರ ಮನೆಯಲ್ಲಿ ನಡೆದ ಮದುವೆಯಲ್ಲಿ ಸಕ್ಕರೆ ಸಿಕ್ಕುವುದು ಕಷ್ಟವಾಗಿದ್ದುದರಿಂದ ಎಲ್ಲ ಪದಾರ್ಥಗಳನ್ನೂ ಬೆಲ್ಲದಲ್ಲಿಯೇ ಮಾಡಿಸಿದರು. ಹಾಗೆಯೇ ಮಂತ್ರಿಗಳೂ ಜನಸಾಮಾನ್ಯರು ಜೀವನ ಮಾಡುವ ಹಾಗೆ ಮಾಡಿದರೆ ಕಷ್ಟದ ಅರಿವಾಗುತ್ತದೆ ಇಲ್ಲದೇ ಹೋದರೆ ಆಗುವದಿಲ್ಲ. ನಾವು ಕೂಡ ಜನಸಾಮಾನ್ಯರ ಹಾಗೆ ಜೀವನ ಮಾಡುತ್ತೇವೆ ಎನ್ನುವ ಪ್ರತಿಜ್ಞೆಯನ್ನು ಮಾನ್ಯ ಮಂತ್ರಿಗಳೆಲ್ಲ ತೆಗೆದುಕೊಂಡು ತಾವು ಇತರರಿಗೆ ಮಾದರಿಯಾಗಿ ನಡೆದರೆ ಕಷ್ಟವನ್ನು ನಿವಾರಣೆ ಮಾಡುವುದಕ್ಕೆ ಸ್ವಲ್ಪಮಟ್ಟಿಗಾದರೂ ಅನುಕೂಲವಾಗುತ್ತದೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ಶ್ರೀರಾಮುಲು (ಗಾಂಧಿನಗರ).—ಮಾನ್ಯ ಅಧ್ಯಕ್ಷರೇ, ಸಾಕಾದಷ್ಟು ಸದಸ್ಯರು ಆಹಾರದ ವಿಷಯದಲ್ಲಿ ಮಾತನಾಡಿದ್ದಾರೆ ಎಲ್ಲರೂ ಕೂಡ ಸರ್ಕಾರದ್ದೇ ಜವಾಬ್ದಾರಿ ಎನ್ನುವ ಅರ್ಥದಲ್ಲಿ ಮಾತನಾಡಿದ್ದಾರೆ. ನಾನಾದರೂ ಕೂಡ ಆ ಅಭಿಪ್ರಾಯಕ್ಕೆ ಬರುವುದಕ್ಕೆ ಮೊದಲು ಕಳೆದ ೨೫ ವರ್ಷಗಳಿಂದ ಈ ರೈತರ ಬಗ್ಗೆ ಅಥವಾ ನಮ್ಮ ದೇಶದಲ್ಲಿ ಎಷ್ಟು ಆಹಾರವನ್ನು ಬೆಳೆಯಬಹುದಾಗಿತ್ತೋ ಅಷ್ಟನ್ನು ಬೆಳೆಸುವದಕ್ಕೆ ಹಿಂದೆ ಆಡಳಿತ ನಡೆಸಿದವರು ಮಾಡಿದಂಥ ಪುಣ್ಯ ಕೆಲಸವೇನು ಎನ್ನುವದನ್ನು ಸ್ವಲ್ಪ ಪರಿಶೀಲನೆ ಮಾಡುವುದು ಒಳ್ಳೆಯದು. ನಾನು ತಿಳಿದುಕೊಂಡಿರುವ ಪ್ರಕಾರ ತಮ್ಮದೇ ಆದ ಆಸ್ತಿಪಾಸ್ತಿಗಳನ್ನು ಮಾಡಿಕೊಂಡು, ಸಿನಿಮಾ ಮಂದಿರಗಳಲ್ಲಿ ಪಾಲುದಾರರಾಗಿದ್ದುಕೊಂಡು ಈ ಹೊತ್ತು ವಿಧಾನಸಭೆಯಲ್ಲಿ ಮಾತನಾಡುತ್ತಿದ್ದಾರೆ. ಮತ್ತು ೧೮ ತಿಂಗಳು ಆಡಳಿತ ನಡೆಸಿದ ಸರ್ಕಾರದ ಮೇಲೆ ಆರೋಪವನ್ನು ಹೊರಿಸುತ್ತ ಈ ಸರ್ಕಾರದಿಂದಲೇ ಇಷ್ಟೆಲ್ಲ ಆಯಿತು ಎಂದು ಹೇಳುವುದರಿಂದ ಮುಂದಿನ ಪೀಳಿಗೆಯ ಮೇಲೆ ಏನು ಪರಿಣಾಮವಾದೀತು ಎನ್ನುವದನ್ನು ಯೋಚನೆ ಮಾಡಬೇಕಾಗಿದೆ. ಯಾವುದೇ ವಿಷಯವನ್ನು ಹೇಳಬೇಕಾದರೂ ನಿಚ್ಚಳವಾದ ಮತ್ತು ಪ್ರಮಾಣಪೂರ್ವಕವಾದ ವಿಷಯಗಳನ್ನು ಹೇಳಬೇಕಾಗುತ್ತದೆ. ೧೮ ತಿಂಗಳ ಕಾಲದಲ್ಲಿ ಆದಂಥ ಲೋಪಗಳಿಂದಲೇ ಆಹಾರದ ಬೆಲೆ ಇಷ್ಟು ಜಾಸ್ತಿಯಾಯಿತು ಎನ್ನುವ ವಿಚಾರವನ್ನು ಹೃದಯಾಂತರಾಳದಿಂದ ಹೇಳಬೇಕಾಗುತ್ತದೆ. ಹಾಗಿಲ್ಲದೆ ಇದ್ದರೆ ರಾಜಕೀಯ ದೃಷ್ಟಿಯಿಂದ ಹೇಳಬೇಕಾಗುತ್ತದೆ. ಅಥವಾ ಏನೋ ಕಾರಣದಿಂದ ಸರ್ಕಾರದ ಮೇಲೆ ಅಪಾದನೆಯನ್ನು ಹೊರಿಸಬೇಕು, ಸರ್ಕಾರವನ್ನು ಕಿತ್ತೊಗೆಯಬೇಕು. ಎನ್ನುವ ದೃಷ್ಟಿಯಿಂದ ಹೇಳುವದಾದರೆ ಬಹುಶಃ ಅವರ ಅಭಿಪ್ರಾಯಕ್ಕೆ ಬೆಂಬಲ ಸಿಕ್ಕಿ ಅವರು ಅಧಿಕಾರಕ್ಕೆ ಬಂದಾಗ ಆಹಾರ ವಿಷಯವನ್ನು ಎಷ್ಟು ದಿವಸದಲ್ಲಿ ಸರಿಪಡಿಸುತ್ತಾರೆ

ಎನ್ನುವದನ್ನು ಹೇಳ ತ್ತಾರೆಯೇ? ೩೫ ವರ್ಷಗಳಿಂದ ಆಗಿರುವದನ್ನು ೧೮ ತಿಂಗಳಲ್ಲಿ ಸರಿಪಡಿಸುವುದಕ್ಕೆ ಸಾಧ್ಯವೇ? ರಾಜಕೀಯ ದೃಷ್ಟಿಯಿಂದ ಯಾರೂ ಟೀಕೆ ಮಾಡುವದು ಬೇಡ.

ಮಾನ್ಯ ಮುಖ್ಯಮಂತ್ರಿಗಳು ದಪ್ಪ ಬತ್ತದ ಬೆಲೆ ೭೦-೭೫ ರೂಪಾಯಿ ಇರುತ್ತದೆ ಎಂದು ಹೇಳಿದ್ದು ಸಂತೋಷದ ವಿಷಯ. ಆದರ ಬಗ್ಗೆ ಕೂಡ ಟೀಕೆಗಳಿವೆ. ಹಾಗೆ ಟೀಕೆ ಮಾಡುವದಕ್ಕೆ ಮೊದಲು ನಮ್ಮ ಪಕ್ಕದ ರಾಜ್ಯಗಳಲ್ಲಿರುವ ವಿಷಯಗಳನ್ನು ತಿಳಿದುಕೊಳ್ಳಬೇಕು. ಪಕ್ಕದ ರಾಜ್ಯವಾದ ಮದ್ರಾಸಿನಲ್ಲಿ ದಪ್ಪ ಬತ್ತದ ಬೆಲೆ ೬೩ ರೂಪಾಯಿ, ಮಧ್ಯಮ ದರ್ಜೆಯ ಬತ್ತದ ಬೆಲೆ ೬೬ ರೂಪಾಯಿ ಮತ್ತು ಉತ್ತಮ ಸಣ್ಣ ಭತ್ತದ ಬೆಲೆ ೬೮ ರೂಪಾಯಿ ಇದೆ. ಅಲ್ಲಿನ ರೈತರಿಗೆ ಕೊಡತಕ್ಕ ಗೊಬ್ಬರದ ಬೆಲೆಯಲ್ಲಿ ಕಡಮೆ ಇಲ್ಲ. ನಾವು ಕೊಡತಕ್ಕ ಬೆಲೆಯನ್ನೇ ಅಲ್ಲಿಯೂ ಕೊಡುತ್ತಿದ್ದಾರೆ ಅಲ್ಲಿ ಏಕೆ ಹೆಚ್ಚು ಬೆಳೆಯುತ್ತಾರೆ ಇಲ್ಲಿ ಏಕೆ ಹೆಚ್ಚು ಬೆಳೆಯುವುದಕ್ಕೆ ಪ್ರಯತ್ನ ಮಾಡುತ್ತಿಲ್ಲ ಎನ್ನುವ ವಿಷಯವನ್ನು ಪರಿಶೀಲನೆ ಮಾಡಬೇಕಾಗಿದೆ.

ನಾನು ಹೇಳುವುದಾದರೆ ಅಂಕಿಅಂಶಗಳ ಪ್ರಕಾರ, ಕಾರ್ಖಾನೆಯಲ್ಲಿ ಕೆಲಸ ಮಾಡುವ ಕಾರ್ಮಿಕರು ೮ ಗಂಟೆ ಕೆಲಸ ಮಾಡದಿದ್ದರೆ ಡಿಸ್‌ಮಿಸ್ ಮಾಡುತ್ತಾರೆ ಹಳ್ಳಿಯಲ್ಲಿ ಕೆಲಸ ಮಾಡುವ ರೈತರು ಎಷ್ಟರಮಟ್ಟಿಗೆ ಒಂದು ಇಂಚು ಭೂಮಿಯನ್ನು ಬಿಡದೆ ದುಡಿಯುತ್ತಾರೆಂದು ನೋಡಬೇಕಾಗಿದೆ. ಹಾಗೆ ಚಿತ್ರವನ್ನು ಪರಿಶೀಲನೆ ಮಾಡಿದ್ದೇ ಆದರೆ....

5-00 P. M.

ಶ್ರೀ ಕೋಣಂದೂರು ಲಿಂಗಪ್ಪ.—ದುಡಿಮೆ ಮಾಡುವುದಕ್ಕೆ ಅವಕಾಶ ಕಲ್ಪಿಸುವವರು ಯಾರು? ಶೇಕಡ ೨೦ ಜನರ ಬಗ್ಗೆ ಮಾತನಾಡುವುದಿಲ್ಲ ೮೦ ಪರಸೆಂಟ್ ಇರುವವರ ಬಗ್ಗೆ ಮಾತನಾಡಿ.

ಶ್ರೀ ಕೆ. ಶ್ರೀರಾಮುಲು.—ಮಾನ್ಯ ಸದಸ್ಯರಲ್ಲಿ ತಾಳ್ಮೆ ಇದ್ದರೆ, ಒಳ್ಳೆಯದು ಏನು ಬೇಕಾದರೂ ಹೇಳಿ ಕೇಳುತ್ತೇನೆ. ಒಳ್ಳೆಯ ಸಲಹೆಯನ್ನು ಶಿರಸಾವಹಿಸಿ ನಡೆಸುವುದಕ್ಕೆ ಸಿದ್ಧವಾಗಿದ್ದೇವೆ. ನಿಮ್ಮಲ್ಲಿ ಅಷ್ಟು ತಾಳ್ಮೆ ಇಲ್ಲವಲ್ಲ ಎಂದು ಪಶ್ಚಾತ್ತಾಪ. ಮದ್ರಾಸ್ ರಾಜ್ಯದ ರೈತರು ೧೫ ರಿಂದ ೩೦ ಕ್ವಿಂಟಾಲ್ ಒಂದು ಎಕರೆಯಲ್ಲಿ ಬೆಳೆ ತೆಗೆಯುತ್ತಾರೆ ಬೇಕಾದರೆ ಪರೀಕ್ಷೆ ಮಾಡಿ. ಸ್ಟೇಟ್‌ಮೆಂಟಿನಲ್ಲಿ ಏನಾದರೂ ತಪ್ಪಿದ್ದರೆ ಪಾರ್ಟಿ ಸದಸ್ಯತ್ವಕ್ಕೆ ರಾಜೀನಾಮೆ ಕೊಡಿ ಎಂದು ನಮ್ಮ ಅಧ್ಯಕ್ಷರು ಹೇಳಿದರೆ ರಾಜೀನಾಮೆ ಕೊಡುವುದಕ್ಕೆ ತಯಾರು ಇದ್ದೇನೆ. ಅಂದರೆ ಚಾಲೆಂಜ್ ಮಾಡುವವರು ಯಾರಾದರೂ ಇದ್ದರೆ ಮುಂದೆ ಬನ್ನಿ. ದಪ್ಪ ಭತ್ತ ೬೩ ಮತ್ತು ಸಣ್ಣ ಭತ್ತಕ್ಕೆ ೬೮ಕ್ಕೆ ಕೊಟ್ಟರೂ ಅಲ್ಲಿ ರೈತರು ಮರು ಮಾತು ಇಲ್ಲದೆ ಹೆಚ್ಚಿನ ಉತ್ಪತ್ತಿ ಮಾಡಿ ಸಹಾಯ ಮಾಡುತ್ತಿದ್ದಾರೆ. ಮಾನ್ಯ ಸದಸ್ಯರು ಆಳುವ ಪಕ್ಷಕ್ಕೆ ಸೇರಿದವರು ಅಲ್ಲದೇ ಇದ್ದರೂ ಇವತ್ತು ಕ್ರಿಟಿಸೈಜ್ ಮಾಡುವ ಅವಕಾಶ ಇದ್ದರೂ ಅದನ್ನು ಹೇಳುತ್ತಾ ಇಲ್ಲ. ಹೇಳಬೇಕಾದ ವಿಷಯಗಳನ್ನು ಹೇಳದಿದ್ದರೆ ನಾಳೆ ನೀವು ಅಧಿಕಾರಕ್ಕೆ ಬಂದರೆ ತೊಂದರೆ ಅನುಭವಿಸಬೇಕಾಗಿ ಬರುತ್ತದೆ ಹೆಚ್ಚಿನ ಉತ್ಪತ್ತಿ ಮಾಡಿ ಎಂದು ಸಮಾಜ

ದಲ್ಲಿರತಕ್ಕ ಜನಕ್ಕೆ ಹೇಳಬೇಕು. ಅದನ್ನು ಬಿಟ್ಟು ರೈತರಿಗೆ ಹೇಳಿಬಿಟ್ಟು ಹೆಚ್ಚಿನ ಲೆವಿ ಕೊಡಿಸುವುದಿಲ್ಲ, ಹೆಚ್ಚಾಗಿ ಬೆಳೆಸುವುದಕ್ಕೆ ಬಿಡುವುದಿಲ್ಲ ಎನ್ನುವ ಮಟ್ಟಕ್ಕೆ ಹೋಗುವುದಾದರೆ, ನೀವು ಏನು ದೇಶಕ್ಕೆ ಸೇವೆ ಮಾಡುತ್ತೇವೆಂದು ಪ್ರಮಾಣ ಮಾಡಿ ಇಲ್ಲಿಗೆ ಬಂದಿದ್ದೀರಿ ಅದಕ್ಕೆ ವಿರುದ್ಧವಾಗಿ ಹೋಗುವ ಪ್ರಶ್ನೆ ಉದ್ಭವವಾಗುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ — ಬೆಳೆಯುವುದಕ್ಕೆ ಭೂಮಿ ಕೊಡಿ ಎಂದರೆ ಭೂಮಿ ಕೊಡುವುದಿಲ್ಲ.

ಶ್ರೀ ಕೆ. ಶ್ರೀರಾಮುಲು.—ನಮ್ಮ ಸರ್ಕಾರವನ್ನು ತಲೆಯಮೇಲಿಟ್ಟುಕೊಂಡು ಹೋಗಬೇಕು ಎನ್ನುವ ಅಭಿಪ್ರಾಯ ನನಗೆ ಇಲ್ಲ. ನಮ್ಮ ಸರ್ಕಾರ ಲೋಪ ಮಾಡಿದ್ದರೂ ಅದನ್ನು ಸರಿಪಡಿಸಿಕೊಂಡು ಹೋಗಬೇಕು. ಹಾಗೆ ಮಾಡಿದರೆ ಬಹುಕಾಲ ಇರುತ್ತದೆ ಎನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ, ನಿಮ್ಮ ದೃಷ್ಟಿ ಆ ತರಹ ಇಲ್ಲ. ನಿಮ್ಮ ದೃಷ್ಟಿ ಸತ್ಯವನ್ನು ಹೇಳದೆ ಸರ್ಕಾರವನ್ನು ಕೆಳಮಟ್ಟಕ್ಕೆ ಇಳಿಸಬೇಕು ಎಂದು ಇದೆ; ಆದರೆ ಸರ್ಕಾರವನ್ನು ಅಲ್ಲ ಸಮಾಜವನ್ನೇ ಕೆಳಮಟ್ಟಕ್ಕೆ ಇಳಸುತ್ತೀರಿ ಎನ್ನುವ ಅಪಾದನೆ ಮಾಡುತ್ತೇನೆ. ಸಮಾಜದಲ್ಲಿರತಕ್ಕ ಜನಕ್ಕೆ ತಪ್ಪು ತಿಳುವಳಿಕೆ ಕೊಡುತ್ತಿದ್ದೀರಿ ಎಂದು ಪಶ್ಚಾತ್ತಾಪದಿಂದ ಹೇಳಬೇಕಾಗಿದೆ. ೧೮ ತಿಂಗಳಿಂದ ನೋಡುತ್ತಿದ್ದೀರಿ. ನಿಮ್ಮ ಕಡೆಯಿಂದ ಮಾಡದೇ ಇರತಕ್ಕಂಥ ಕೆಲಸಗಳನ್ನು ನಮ್ಮ ಸರ್ಕಾರ ಮಾಡಿ ತೋರಿಸಿದ್ದೇವೆ. ಇಂಥ ಕಡೆ ಇಷ್ಟು ಲೋಪ ಮಾಡಿದ್ದೀರಿ ಹಾಗೆ ಮಾಡಿದ್ದರೆ ಎಷ್ಟು ಉಪಯೋಗ ಆಗುತ್ತಿತ್ತು ಎಂದು ಯಾತಕ್ಕೆ ಹೇಳತ್ತಿಲ್ಲ ? ಇದನ್ನು ಹೇಳದೆ ಬೇರೆ ಬೇರೆ ಕಾರ್ಯಗಳನ್ನು ಯೋಚಿಸಿ ಸಮಾಜವನ್ನು ತಪ್ಪು ದಾರಿಗೆ ಎಳೆಯುವುದಾದರೆ ಮುಂದಿನ ಪೀಳಿಗೆ ನಿಮ್ಮನ್ನು ನಮ್ಮನ್ನು ಶಪಿಸುವುದಕ್ಕೆ ಅವಕಾಶವಾಗುತ್ತದೆನ್ನುವ ದೃಷ್ಟಿಯಿಂದ ನಾನು ಒಳ್ಳೆಯ ಹೃದಯದಿಂದ ಹೇಳಿದ್ದೇನೆ. ನನಗೇನೂ ರೈತರ ಬಗ್ಗೆ ಅಸೂಯೆ ಇಲ್ಲ. ಮದ್ರಾಸ್ ರಾಜ್ಯದವರು ನಮ್ಮ ಕಡೆಯಿಂದ ವಿದ್ಯುಚ್ಛಕ್ತಿಯನ್ನು ನೀರನ್ನು ತೆಗೆದುಕೊಂಡು ಅಕ್ಕಿ ಕೊಡುತ್ತಿದ್ದಾರೆ. ನೀವು ಯಾತಕ್ಕೆ ಏನೂ ಕೊಡುವುದಕ್ಕೆ ಆಗುತ್ತಿಲ್ಲ? ಆದುದರಿಂದ ಹೆಚ್ಚಿಗೆ ಉತ್ಪತ್ತಿ ಮಾಡುವ ಕಡೆಗೆ ಹೆಚ್ಚಿಗೆ ಗಮನ ಕೊಟ್ಟುಕೊಂಡು ಹೋಗಬೇಕೆಂದು ಹೇಳಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಜಿ. ಎಲ್. ಕಜಾಡಿ (ಬಳ್ಳೊಳ್ಳಿ) ಮಾನ್ಯ ಉಪಾಧ್ಯಕ್ಷರೇ, ಇವತ್ತಿನ ಸಂದಿಗ್ಧ ಪರಿಸ್ಥಿತಿಯಲ್ಲಿ ಮಾಡಬೇಕಾದ ಭಾಷಣ ನಿಜವಾಗಿ ಅಗತ್ಯ ಇಲ್ಲದಿದ್ದರೂ ಹೇಳಬೇಕಾದ ಪ್ರಸಂಗ ಬಂದಿದೆ. ಶ್ರೀ ಶ್ರೀರಾಮುಲುರವರು ವಿರೋಧ ಪಕ್ಷದವರು ಬರೀ ವಿರೋಧ ಮಾಡಬೇಕೆನ್ನುವ ದೃಷ್ಟಿಯಿಂದ ಮಾತನಾಡುತ್ತಿದ್ದಾರೆಯೇ ಹೊರತು ಸೂಕ್ತ ಸಲಹೆಗಳನ್ನು ಸರಕಾರಕ್ಕೆ ಕೊಡಬೇಕೆಂದು ಮಾತನಾಡುತ್ತಿಲ್ಲ ಎಂದು ಹೇಳಿದರು ಎಂದು ನಾನು ಭಾವಿಸುತ್ತೇನೆ. ಶ್ರೀರಾಮುಲುರವರು ಒಂದು ಮಾತು ಹೇಳಿದರು. ಒಂದು ಎಕರೆಯಲ್ಲಿ ೧೫–೨೦ ಕ್ವಿಂಟಾಲ್ ಭತ್ತ ಉತ್ಪತ್ತಿ ಮಾಡಿ ಎಂದು ಹೇಳಿದ್ದಾರೆ. ಲೇವಿ ಕೊಡಬೇಕು ಎನ್ನುವ ಮಾತನ್ನು ಹೇಳಿದ್ದಾರೆ.

ಅದು ಸರಿಯಲ್ಲ ಶ್ರೀರಾಮುಲುವರು ಹೇಳಿದರು ಕಾರ್ಮಿಕರು ೮ ಗಂಟೆಯ ವರೆಗೆ ಕೆಲಸ ಮಾಡಿ ಅವರು ಪಡೆಯತಕ್ಕ ಏನು ಒಂದು ಸಂಬಳವಿದೆ. ಅವರು ಪಡೆಯ ತಕ್ಕ ಕೂಲಿ ಏನು ಇದೆ ಅದರ ಬಗ್ಗೆ ಗಮನ ಹರಿಸಬೇಕೆಂದು ಹೇಳುತ್ತೇನೆ. ನಿಮ್ಮ ಪಾರ್ಟಿಯವರು, ಎಂ. ಪಿ ಸಿ. ಸಿ. ಸದಸ್ಯರು ಆದ ಜಿ. ಎ ಅಂಜನಪ್ಪನವರು ಸರಕಾರಕ್ಕೆ ಏನು ಭ್ರಷ್ಟಾಚಾರ ಆಗುತ್ತಿದೆ ಅದನ್ನೆಲ್ಲಾ ನೋಡಿಕೊಂಡು, ದೇಶದಲ್ಲಿ ಆಗತಕ್ಕ ಅನಾಹುತಗಳನ್ನು ವಿವರಿಸಿ ಹೇಳಿದ್ದಾರೆ. ನಮ್ಮ ಪಾರ್ಟಿಗೆ ರಾಜೀನಾಮೆ ಕೊಡುತ್ತೇನೆಂದು ಹೇಳಿದ್ದಾರೆ. ಅವರು ಈ ರೀತಿ ಹೇಳಿದ್ದಾರೆ. ತಾವು ಇಲ್ಲಿ ಕೂತಿದ್ದೀರಿ. ಮನೆಬಿಚ್ಚಿ, ಆತ್ಮಸಾಕ್ಷಿಯಾಗಿ ನೋಡಿ ದೇಶದಲ್ಲಿ ಏನು ನಡೆಯುತ್ತಿದೆ ದೇಶದಲ್ಲಿ ಆಗತಕ್ಕ ಅನಾಹುತನೋಡಿ.

" ನೈತಿಕ ಅವನತಿಯ ಸಂಧಿಗ್ಧ ಪರಿಸ್ಥಿತಿ ಜನಸಾಮಾನ್ಯರಲ್ಲಿ ಬಹುಕಡಿಮೆ. ಅನೇಕ ಮಂತ್ರಿಗಳು, ಶಾಸಕರು ಸೇರಿ ನಾಯಕರೆಂದು ಹೇಳಿಕೊಳ್ಳುತ್ತಿರುವವರಲ್ಲಿ ಬಹುಮಂದಿ ಠಕ್ಕರು ಮತ್ತು ಗುಂಡಾಗಳಿಗಿಂತ ಉತ್ತಮರೇನೂ ಅಲ್ಲ. ಅವರು ಹೇಳುತ್ತಿರುವ ಕಪಟ ಸಮಾಜವಾದದಿಂದ ಶೋಷಿತರು, ದೀನ–ದಲಿತರಿಗೆ ಯಾವ ಉಪಯೋಗವೂ ಇಲ್ಲ" ಎಂದು ಅವರು ಹೇಳಿದ್ದರೆ. ಅವರ ಪಕ್ಷದ ಪ್ರಧಾನ ಕಾರ್ಯ ದರ್ಶಿ, ಎಂ. ಪಿ. ಸಿ ಸಿ. ಸದಸ್ಯರಿಗೆ "ಬಡವರ ಬಗ್ಗೆ ಈ ಜನಕ್ಕೆ ಕಾಳಜಿ ಇಲ್ಲ. ತಮ್ಮ ಅಧಿಕಾರ ವೈಭವವನ್ನು ಪ್ರದರ್ಶಿಸುತ್ತಾ ಇವರು ಓಡಾಡುತ್ತಿದ್ದಾರೆ ಕಾಂಗ್ರೆಸ್ ಪಕ್ಷ ಮತ್ತು ತಮ್ಮ ಬಗ್ಗೆ ಜನ ಎಷ್ಟು ಅಸಹ್ಯ ಪಟ್ಟುಕೊಳ್ಳುತ್ತಿದ್ದಾರೆಂಬುದು ಇವರ ಅರಿವಿಗೆ ಬರುತ್ತಿಲ್ಲ" ಎಂಬ ಮಾತನ್ನು ಶ್ರೀ ಅಂಜನಪ್ಪನವರು ಸ್ಪಷ್ಟವಾಗಿ ಹೇಳಿದ್ದಾರೆ.

ಉಪಾಧ್ಯಕ್ಷರು.— ತಾವು ಅದನ್ನು ಎಲ್ಲಿಂದ ಓದಿದ್ದು ?

ಶ್ರೀ ಜಿ. ಎಲ್. ಕಬಾಡಿ.— ಅವರ ಪಕ್ಷದಲ್ಲಿ ಆಡತಕ್ಕ ಮಾತುಗಳನ್ನು ಕೇಳಿ ನಾನು ತಿಳಿದು ಕೊಂಡಿರುತ್ತೇನೆ.

Mr. DEPUTY SPEAKER.— There is no use of making such a statement. Is it signed by the person to whom the hon. member is attributing the statement? If the hon. member wants to make a statement, he must take the responsibility to prove that it is true, he must aver tha it is true.

ಶ್ರೀ ವಾಟಾಳ ನಾಗರಾಜ.— ಅದು ನಿಜ.

An Hon. Member.— It requires to be expunged.

Mr. DEPUTY SPEAKAR.— Sri G. N. Anjanappa is not here to defend himself. Simply because it is reported in the the newspaper that "Sri Anjanappa said like this", it is not proper to attribute that statement to him

ಶ್ರೀ ಜಿ. ಎಲ್. ಕಬಾಡಿ.— ಒಂದು ವೇಳೆ ಇಂಥ ಸ್ಟೇಟಮೆಂಟನ್ನು ಅವರು ಡಿನೈ ಮಾಡಿದರೆ ನಾನು ಕ್ಷಮೆ ಕೇಳಲಿಕ್ಕೆ ತಯಾರು ಇದ್ದೇನೆ.

Mr. DEPUTY SPEAKAR.— That is different.

ಶ್ರೀ ಜೆ. ಎಲ್. ಕಬಾಡಿ.—ಈಗ ಮಾನ್ಯ ಸದಸ್ಯರಾದಂಥ ಬಂಗಿಯವರು ಕೆಲವು ದೋಷಗಳನ್ನು ಹೇಳಿದ್ದಾರೆ. ದೊಡ್ಡ ದೊಡ್ಡ ಶಹರಿನಲ್ಲಿ ಮಾಡಿರತಕ್ಕ ರೇಷನ್ ಕಾರ್ಡಗಳ ಹಂಚಿಕೆ ಏನಿದೆ ಅದನ್ನು ಕಾಳಾಬಜಾರ ಮಾರ್ಕೆಟ ಮಾಡತಕ್ಕ ಜನರು ಉಪಯೋಗಿಸಿಕೊಂಡು ಧಾನ್ಯಗಳನ್ನು ಕಾಳಾಬಜಾರು ಮಾಡಿ ಶ್ರೀಮಂತರಾಗಿದ್ದಾರೆ ಎಂದು ಹೇಳಿದರು. ನನಗೆ ಸಂತೋಷ ಎನಿಸಿತು. ಮಾನ್ಯ ಸದಸ್ಯರಾದಂಥ ಶ್ರೀಮಾನ ಬಂಗಿಯವರು, ಹಿರಿಯರು, ಅನುಭವಿಕರು, ತಜ್ಞ ವಕೀಲರು ಅವರು ಅರಿವು ತಿಳಿದು ಮಾತನಾಡಿದಂಥ ವ್ಯಕ್ತಿಗಳು ಎಂದು ಹೇಳುತ್ತೇನೆ. ಬಂಗಿಯವರು ಮಾಡಿರತಕ್ಕ ಒಂದು ಸವಾಲು ಏನಿದೆ, ಆಡಳಿತ ಪಕ್ಷದಿಂದ ದೋಷಪೂರಿತವಾದ ಸರ್ಕಾರ ನಡೆಯುತ್ತಿದೆ ಎಂದು ಆಕ್ಷೇಪಣೆ ಏನು ಮಾಡಿದ್ದಾರೆ ಅದನ್ನು ನಾನು ಸ್ವಾಗತಿಸುತ್ತೇನೆ. ಅವರ ಪಕ್ಷದ ಎಷ್ಟೋ ಜನ ಬ್ಲಾಕಮಾರ್ಕೆಟ ಮಾಡಿದವರನ್ನು ನಾನೇ ಖುದ್ದಾಗಿ ಹೋಗಿ ಮಾನ್ಯ ಮುಖ್ಯ ಮಂತ್ರಿಗಳಿಗೆ ಹೇಳಿದ್ದೇನೆ. ೮ ಚಕ್ಕಡಿ ಗಾಡಿಗಳ ಮೇಲೆ ಹೊರಗೆ ಹೋದ ಜೋಳವನ್ನು ಹಿಡಿದು ಕೊಟ್ಟರೂ, ಯಾವ ಅಧಿಕಾರಿಯ ಮೇಲೂ ಇದುವರೆಗೆ ಕ್ರಮ ತೆಗೆದುಕೊಂಡಿಲ್ಲ. ಅವರಿಗೆ ತೆಗೆದುಕೊಳ್ಳುವ ಮನಸ್ಸೂ ಇಲ್ಲ ಎಂದು ಕಾಣುತ್ತೆ. ಮಹಾರಾಷ್ಟ್ರಕ್ಕೆ ಕಳಿಸತಕ್ಕ ಒಂದು ಕರಪ್ಷನ ಏನು ನಡೆಯಿತು ಅದರ ಸಂಬಂಧದಲ್ಲಿ ಸಂಬಂಧಪಟ್ಟ ಅಧಿಕಾರಿ ಮೇಲೆ ಆಕ್ಷನ್ ತೆಗೆದುಕೊಂಡಿಲ್ಲ ಎನ್ನುವ ಮಾತನ್ನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಆಹಾರ ಮಂತ್ರಿಗಳಾದ ಶ್ರೀಮತಿ ಇವಾ ವಾಜ ಅವರು ಒರಿಸ್ಸಾದಿಂದ ಮತ್ತು ತಮಿಳುನಾಡಿನಿಂದ ಅಕ್ಕಿ ತರಿಸುತ್ತೇವೆ, ಪೂರೈಸುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಶ್ರೀಮಾನ ಜತ್ತಿಯವರು ನಮ್ಮ ಜಿಲ್ಲೆಯವರು, ನಮ್ಮ ರಾಜ್ಯಕ್ಕೆ ಸಂಬಂಧಪಟ್ಟವರು ನಾನು ಕೇಂದ್ರ ಸರ್ಕಾರವನ್ನು ವಿಚಾರಿಸಿ ಕೊಡಲು ಶಕ್ಯವಿದ್ದರೆ ಕೊಡುತ್ತೇನೆ ಎಂದು ಹೇಳಿದರು. ಕಳ್ಳರನ್ನು ನಂಬಿದರೂ ಕುಳ್ಳರನ್ನು ನಂಬಬಾರದು ಎನ್ನುವ ಗಾದೆ ಇದೆ.

Sri D. DEVARAJ URS.—I do not like the hon. Member making such remarks. After all, we, the Govt. of Mysore have no right over Orissa Government nor are they obliged to give Mysore State any rice. If they give, well and good. If they do not give, we cannot make any criticism. I am very sorry to say that the hon. Member is making uncalled for remarks about the Governor.

Mr. DEPUTY SPEAKER.—It is exrtemely uncharitable on the part of the hon. Member to make those remarks. It is better that he withdraws those remarks.

ಶ್ರೀ ಜೆ. ಎಲ್. ಕಬಾಡಿ.—I withdraw those remarks. ಭೂಮಿ ಇದ್ದವರಿಗೆ ಕಾಳು ಕೊಡಬಾರದು, ಇಲ್ಲವವರಿಗೆ ಕಾಳು ಹಂಚಿಕೆಯಾಗಬೇಕು ಎಂದು ಹೇಳಿದರು. ನಮ್ಮ ಕಡೆ ಪರಿಸ್ಥಿತಿ ಏನಾಗಿದೆಯೆಂದರೆ, ಭೂಮಿ ಇದ್ದವರು ಇಲ್ಲದವರು ಎಲ್ಲರೂ ಒಂದೇ ಆಗಿದೆ. ಇವತ್ತು ಮಳೆ ಚೆನ್ನಾಗಿ ಬಿದ್ದಿದ್ದರೂ ಸಹ, ಬೆಳೆ ಚೆನ್ನಾಗಿ ಬೆಳೆಯಬಹುದಿದ್ದರೂ ಸಹ ಬೀಜ ಏನು ಬೇಕಾಗಿತ್ತು ಅದು ಸರಿಯಾಗಿ ವಿತರಣೆಯಾಗಿಲ್ಲ, ಮಾತ್ರವಲ್ಲ ಸೀಡ್ ಕೊಟ್ಟಿರುವ ಕಡೆ ಸರಿಯಾದ ಫೌಂಡೇಷನ್ ಸೀಡ್ ಕೊಡದೇ ಇರುವದರಿಂದ ಮುಂಗಾರು ಬಿತ್ತನೆ ಅತಿ ಕಡಿಮೆ ಆಯಿತು ಎಂದು ಹೇಳುವದಕ್ಕೆ ಇಷ್ಟಪಡುತ್ತೇನೆ. ನನಗೆ ಮಾತನಾಡಲು ಇಷ್ಟು ಸಮಯ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ದಾಮೋದರ ಮುಲ್ಕಿ (ಮೂಡಬಿದ್ರಿ).—ಸನ್ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದ ಆಹಾರ ಪರಿಸ್ಥಿತಿಯನ್ನು ದಕ್ಷತೆಯಿಂದ ನಿವಾರಿಸಿದ ನಮ್ಮ ಮುಖ್ಯ ಮಂತ್ರಿಗಳನ್ನು ನಾನು ಈ ಸಂದರ್ಭದಲ್ಲಿ ಅಭಿನಂದಿಸಬೇಕಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಳೆದ ಎರಡು ತಿಂಗಳಿಂದ ಕಷ್ಟಪರಿಸ್ಥಿತಿ ಇತ್ತು. ಬಹುಶಃ ಸರ್ಕಾರ ಕ್ಲಿಪ್ತ ಸಮಯದಲ್ಲಿ ಕಾರ್ಯಕ್ರಮ ಕೈಗೊಳ್ಳದೇ ಹೋಗಿದ್ದರೆ ಮಂಡ್ಯದಲ್ಲಿ ಆದಂಥ ಘಟನೆಗಳು ಅಲ್ಲಿಯೂ ಜರುಗುವ ಸನ್ನಿವೇಶವಿತ್ತು. ಆ ಸನ್ನಿವೇಶವನ್ನು ಅವರು ನಿವಾರಿಸಿದ್ದಾರೆ. ಈ ಸಮಯದಲ್ಲಿ ವಿರೋಧ ಪಕ್ಷದ ನಾಯಕರು ದಕ್ಷಿಣ ಕನ್ನಡ ಜಿಲ್ಲೆಯನ್ನು ಕುರಿತು ಕೆಲವು ಶಾಸಕರ ಮೇಲೆ ಗುರುತರವಾದ ಅಪಾದನೆಗಳನ್ನು ಮಾಡಿದ್ದಾರೆ. ನಮ್ಮ ಜಿಲ್ಲೆ ಸ್ವಯಂಪೂರ್ಣ ಎಂದು ಹೇಳಿದ್ದಾರೆ. ಅದು ಸತ್ಯಕ್ಕೆ ದೂರವಾದ ಮಾತು. ೪ಲಕ್ಷ ೫ಲಕ್ಷ ಕ್ವಿಂಟಾಲ ಅಕ್ಕಿ ಕೊರತೆ ಇರುವ ಜಿಲ್ಲೆ ನಮ್ಮ ಜಿಲ್ಲೆ. ಅಕ್ಟೋಬರ ತಿಂಗಳಲ್ಲಿ ಹಾರ್ವೆಸ್ಟ ಪ್ರಾರಂಭವಾಗುತ್ತದೆ. ಡಿಸೆಂಬರ ತಿಂಗಳ ವರೆಗೆ ಭತ್ತ ಮೈಸೂರಿನ ಇತರ ಜಾಗಗಳಿಗೆ ಪ್ರತಿ ವರ್ಷ ಹೋಗುತ್ತದೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ದೋಣಿಯಲ್ಲಿ ತಗೆದುಕೊಂಡು ಹೋಗಿ ಮಾರುತ್ತಾ ಇರುತ್ತಾರೆ

ಶ್ರೀ ದಾಮೋದರ ಮುಲ್ಕಿ.—ನಮ್ಮಲ್ಲಿ ಈ ಸಲ ಕೊರತೆ ಉಂಟಾದಾಗ ಸುಮಾರು ೨ಲಕ್ಷ ಕ್ವಿಂಟಾಲ ಅಕ್ಕಿಯನ್ನು ಕಳೆದ ಎರಡುವರೆ ತಿಂಗಳಿಂದ ಕಳಿಸಿದ್ದಾರೆ. ಅದಕ್ಕೆ ಬೇಕಾದ ಪರ್ಮಿಟ ಕೊಟ್ಟವರು ಆಹಾರ ಇಲಾಖೆಯ ಡೈರೆಕ್ಟರ ಅದಕ್ಕೆ ಬೇಕಾದ ಹೆಸರು ಸೂಚಿಸಿದವರು ನಮ್ಮ ಜಿಲ್ಲೆಯ ಡಿ.ಸಿ ಅಲ್ಲಿ ಶಾಸಕರ ಮುಖಾಂತರ ಅವರ ಸಂಬಂಧಿಗರಿಗೆ, ಅವರಿಗೆ ಬೇಕಾದವರಿಗೆ ಕೊಟ್ಟಿದ್ದಾರೆಂದು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ. ಇದು ಬಹುಶಃ ಅವರ ಕಲ್ಪನೆಯ ಒಂದು ಮಾತು ಎಂದು ನಾನು ಹೇಳಬೇಕಾಗಿದೆ. ಇದು ಸತ್ಯಕ್ಕೆ ದೂರವಾದುದು. ಮಂಡ್ಯ ಜಿಲ್ಲೆಯಿಂದ ೨ಲಕ್ಷ ಕ್ವಿಂಟಾಲ ಅಕ್ಕಿಯನ್ನು ದಕ್ಷಿಣ ಕನ್ನಡ ಜಿಲ್ಲೆಗೆ ಕೊಂಡೊಯ್ದಿದ್ದಾರೆ ಎಂದು ಹೇಳಿದರು. ನಮ್ಮ ಜಿಲ್ಲೆಗೆ ಜುಲೈನಲ್ಲಿ ಒಟ್ಟಿಗೆ ಕೊಟ್ಟಿರುವ ೫೦ ಸಾವಿರ ಕ್ವಿಂಟಾಲ ಭತ್ತ, ೩೧ ಸಾವಿರ ಕ್ವಿಂಟಾಲ ಅಕ್ಕಿ, ಅಗಸ್ಟ ತಿಂಗಳಲ್ಲಿ ಸುಮಾರು ೫೦

ಸಾವಿರ ಕ್ವಿಂಟಾಲ ಅಕ್ಕಿಗೆ ಪರ್ಮಿಟ ಕೊಟ್ಟಿದ್ದಾರೆ. ೬ನೇ ತಾರೀಖಿನಿಂದ ಅಕ್ಕಿ ದಕ್ಷಿಣ ಕನ್ನಡ ಜಿಲ್ಲೆಗೆ ಹೋಗಿಲ್ಲ.

ಮಂಡ್ಯ ಜಿಲ್ಲೆಯಿಂದ ನಾವು ಸಾಧಾರಣವಾಗಿ ಕೊಂಡು ಹೋದ ಒಟ್ಟು ಭತ್ತ ಅಕ್ಕಿ ೧೦೭೩೪ ಕ್ವಿಂಟಾಲ್ ಮತ್ತು ಸುಮಾರು ೪೦೦೦ ಕ್ವಿಂಟಲ್ ಅಕ್ಕಿ ಮಾತ್ರ ಈ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಏನು ಹೇಳಿದರು ಎಂದರೆ ಶಾಸಕರ ಸಂಬಂಧಿಕರಿಗೆ, ಶಾಸಕರ ಹಿತಚಿಂತಕರಿಗೆ, ಪಕ್ಷದ ಜನರಿಗೆ ಬೇಕಾದ ಪರ್ಮಿಟ್‌ನ್ನು ಕೊಟ್ಟಿದ್ದಾರೆ ಅಲ್ಲದೆ ಪ್ರತಿಯೊಬ್ಬ ಶಾಸಕರಿಗೂ ಪಕ್ಷಪಾತ ತೋರಿಸಿದ್ದಾರೆ ಎಂದು.

ಶ್ರೀ ಹೆಚ್. ಟಿ. ಕೃಷ್ಣಪ್ಪ.— ನಾನು ಹೇಳಿದ್ದು ಕೆಲವು ಶಾಸಕರು ಅಂತ. ಎಲ್ಲರಿಗೂ ಅಂತ ಹೇಳಿಲ್ಲಾ.

ಶ್ರೀ ದಾಮೋದರ ಮುಲ್ಕಿ — ಅವರು ಈ ಗುರುತರವಾದ ಮಾತನ್ನು ಏನು ಆಡಿದ್ದಾರೆ ಈ ಬಗ್ಗೆ ಅವರಿಗೆ ರುಜುವಾತು ಇದ್ದ ಪಕ್ಷದಲ್ಲಿ ಅದನ್ನು ಕೊಂಡೊಯ್ದು ರುಜುವಾತು ಮಾಡಬೇಕು. ಆ ರೀತಿ ಏನಾದರೂ ರುಜುವಾತು ಮಾಡದಿದ್ದಲ್ಲಿ ಅವರು ತಮ್ಮ ಸ್ಥಾನವನ್ನು ತ್ಯಜಿಸಬೇಕು. ಆ ರುಜುವಾತನ್ನು ಸಿದ್ಧಪಡಿಸಿದಲ್ಲಿ ನಾವು ದಕ್ಷಿಣ ಕನ್ನಡ ಜಿಲ್ಲೆಯಿಂದ ಬಂದಿರತಕ್ಕಂಥಾ ೧೪ ಜನ ಸದಸ್ಯರುಗಳೂ ಕೂಡ ನಮ್ಮ ಸ್ಥಾನವನ್ನು ತ್ಯಜಿಸಲಿಕ್ಕೆ ಸಿದ್ಧರಿದ್ದೇವೆ ಎನ್ನುವ ಮಾತನ್ನು ಹೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ — ಕಳಿಸಿದ ದಾಸ್ತಾನು ಮಂಗಳೂರಿಗೆ ಹೋಗದೆ ಗೋವಾಕ್ಕೆ ಏತಕ್ಕೆ ಹೋಯಿತು ಸ್ವಾಮಿ ?

ಶ್ರೀ ಹೆಚ್. ಎಸ್. ಸಿದ್ದಪ್ಪ.— ಕಳಿಸಿದ ದಾಸ್ತಾನು ಮಂಗಳೂರಿನಿಂದ ಕೇರಳಕ್ಕೆ ಏತಕ್ಕೆ ಹೋಯಿತು ಸ್ವಾಮಿ ?

ಶ್ರೀ ದಾಮೋದರ ಮುಲ್ಕಿ.— ಈ ತರಹದ ಅಪಾದನೆ ಏನಾದರೂ ಇದ್ದರೆ ಅವರ ಹೆಸರನ್ನು ಹೇಳಿ ಅವರು ಅದನ್ನು ರುಜುವಾತು ಮಾಡಬೇಕು ಎಂದು ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಹೆಚ್. ಜಿ. ಚೆನ್ನಪ್ಪ (ಮಾಗಡಿ).— ಮಾನ್ಯ ಉಪಸಭಾಪತಿಗಳೇ, ಈ ದಿವಸ ಆಹಾರದ ಒಂದು ಸಮಸ್ಯೆ ಮೇಲೆ ಏನು ಚರ್ಚೆ ನಡೆಯುತ್ತಾ ಇದೆಯೋ ಆ ವಿಷಯದಲ್ಲಿ ಸಾಕಷ್ಟು ನಾನು ಮಾತನಾಡಬೇಕೆಂದಿದ್ದರೂ ಕೂಡ ಕಾಲಾವಕಾಶ ಕಡಿಮೆ ಇರುವುದರಿಂದ ಈ ಬಗ್ಗೆ ಏನು ಮಾತನಾಡಬೇಕು, ಏನು ಬಿಡಬೇಕು ಎನ್ನುವುದು ನನ್ನ ಮನಸ್ಸಿನಲ್ಲಿ ಉದ್ಭವಿಸಿದೆ ಆದರೂ ಕೂಡ ಈ ವಿಷಯದಲ್ಲಿ ಒಂದೆರಡು ಮಾತುಗಳನ್ನಾಡಲು ಇಚ್ಛಿಸುತ್ತೇನೆ. ಈವೊತ್ತು ನಮ್ಮ ಎದುರಿಗೆ ಇರತಕ್ಕಂಥ ಸಮಸ್ಯೆ ಆಹಾರದ ಬೆಲೆ ಏರಿಕೆ ಒಂದೇ ಅಲ್ಲ ಇತರ ಆಹಾರಪದಾರ್ಥಗಳ ಬೆಲೆ ಏರಿಕೆಯೂ ಕೂಡ ಆಗಿದೆ. ಮನುಷ್ಯನ ದಿನನಿತ್ಯದ ಬಳಕೆಯ ಎಲ್ಲಾ ವಸ್ತುಗಳ

ಬೆಲೆಯೂ ಕೂಡ ಗಗನಕ್ಕೆ ಮುಟ್ಟಿದೆ. ಈ ಎಲ್ಲ ವಸ್ತುಗಳ ಬೆಲೆಯೂ ಯಥೇಚ್ಛವಾಗಿ ಏರಿದೆ ಎಂದು ಹೇಳಿದರೆ ತಪ್ಪಾಗಲಾರದು. ಆದರೆ ರೈತನಿಗೆ ಆಹಾರದ ವಿಷಯದಲ್ಲಿ ಒಂದು ಮುಟ್ಟಗೋಲು ಹಾಕಬೇಕು. ಅದನ್ನು ತಾವು ತಿಳಿದು ಕೊಳ್ಳಬೇಕು. ಈ ವಿಷಯದಲ್ಲಿ ಅನೇಕ ಮಿತ್ರರು ಸಲಹೆ ಕೊಟ್ಟಿದ್ದಾರೆ. ಈವೊತ್ತಿನ ದಿವಸ ರೈತ ಎಂತಹ ಕಷ್ಟ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾನೆ ಎನ್ನುವುದನ್ನು ನಾವು ಮನವರಿಕೆ ಮಾಡಿಕೊಳ್ಳಬೇಕು. ಇದನ್ನು ನಾವು ಸರಿಯಾಗಿ ಅರ್ಥಮಾಡಿಕೊಂಡಿಲ್ಲ. ಅದಕ್ಕಾಗಿ ವಿಷಾದ ಪಡಬೇಕಾಗಿದೆ. ರೈತನಿಗೆ ನಿಜವಾಗಿಯೂ ಸರಿಯಾದ ಬೆಲೆಯನ್ನು ಕೊಟ್ಟರೆ ಅವನು ಬೆಳೆಯುವುಕ್ಕೆ ಹಿಂತೆಗೆಯುವುದಿಲ್ಲ ಎಂದು ಹೇಳುತ್ತೇನೆ. ಈ ಬಗ್ಗೆ ಒಂದು ಉದಾಹರಣೆ ಹೇಳುವುದಾದರೆ ಕಳೆದ ೫–೬ ವರ್ಷದಲ್ಲಿ ಈ ಒಂದು ಆಹಾರದ ಪರಿಸ್ಥಿತಿ ನಮ್ಮ ದೇಶದಲ್ಲಿ ಉದ್ಭವಿಸಿದಾಗ ಮುಸುಕಿನ ಜೋಳವನ್ನು ಯಥೇಚ್ಛವಾಗಿ ಬೆಳೆದು ಒಂದು ಕ್ವಿಂಟಾಲಿಗೆ ೧೦೦ ರೂಪಾಯಂತೆ ದೊರಕಿಸಿಕೊಂಡರು. ಈ ರೀತಿಯಾಗಿ ನಮ್ಮ ದೇಶದ ಆಹಾರದ ಕೊರತೆಯನ್ನು ನೀಗಿದಂಥ ಉದಾಹರಣೆ ನಾವು ನೋಡಿದ್ದೇವೆ. ಈ ರೀತಿಯಾದಂಥ ಬೆಲೆ ರೈತನಿಗೆ ಪ್ರಚೋದಕಾರಿಯಾಗಿದ್ದರೆ ಅವನು ಬೇಕಾದಷ್ಟು ಆಹಾರಧಾನ್ಯವನ್ನು ಬೆಳೆಯುತ್ತಾನೆ. ಅದಕ್ಕಾಗಿ ನಾನು ಒಂದು ಸಲಹೆ ಮಾಡುವುದು ಏನಂದರೆ ಈ ಬಗ್ಗೆ ಒಂದು ತಜ್ಞರ ಸಮಿತಿಯನ್ನು ನೇಮಕ ಮಾಡಿ. ರೈತನು ಬೆಳೆಯತಕ್ಕಂಥ ಬೆಳೆಗಳಿಗೆ ಬೆಲೆ ಕಡಿಮೆ ಮಾಡಿದರೆ ಅದೇ ಮಟ್ಟದಲ್ಲಿ ಅವನಿಗೆ ಸಹಾಯಕವಾಗತಕ್ಕಂಥ ಇತರ ಬೆಲೆಗಳನ್ನೂ ಕಡಿಮೆ ಮಾಡಿ. ಇವೆರಡನ್ನೂ ಸರಿದೂಗಿಸುವುದಾದರೆ ರೈತ ಇನ್ನೂ ಹೆಚ್ಚಿನ ಮಟ್ಟದಲ್ಲಿ ರೈತ ಯಥೇಚ್ಛವಾಗಿ ಆಹಾರಧಾನ್ಯ ಬೆಳೆದು ಈ ಆಹಾರದ ಕೊರತೆ ಮುಂದೆ ಆಗದಂತೆ ಇರುವಂಥ ಒಂದು ಪರಿಸ್ಥಿತಿ ಬರುತ್ತದೆ. ಎನ್ನುವ ಭರವಸೆಯನ್ನು ಕೊಡುವುದಕ್ಕೆ ನಾನು ಇಷ್ಟಪಡುತ್ತೇನೆ. ಆವಾಗ ನಾವು ಯಾವ ರಾಷ್ಟ್ರಕ್ಕೂ ಹೋಗುವ ಪರಿಸ್ಥಿತಿ ಬರುವುದಿಲ್ಲ. ಇದು ಬಿಟ್ಟು ರೈತನಿಗೆ ಬೆಳೆದಂಥ ಬೆಳೆಗೆ ಸರಿಯಾದ ಬೆಲೆ ಕೊಡದೇ ಹೋದರೆ ಅವನ ಮನಸ್ಸಿಗೆ ಬೇಸರವಾಗಿ ತನ್ನ ಕಸಬನ್ನೇ ಮೂಲೆಗೆ ಒತ್ತಿಡಬೇಕಾದ ಪರಿಸ್ಥಿತಿ ಬರುತ್ತದೆ. ಈ ಬಗ್ಗೆ ಒಂದು ಉದಾಹರಣೆ ಹೇಳುವುದಾದರೆ ಹಿಂದೆ ಅಂದರೆ ಈಗ್ಗೆ ೨ ವರ್ಷದ ಹಿಂದೆ ಎರಡು ರೂಪಾಯಿಗೆ ಒಂದು ಸಿಗುತ್ತಿದ್ದ ಗುದ್ದಲಿ ಈವೊತ್ತಿನ ದಿವಸ ೧೪ ರೂಪಾಯಿ ಆಗಿದೆ. ಈ ರೀತಿ ಆದರೆ ರೈತನಿಗೆ ಎಷ್ಟರಮಟ್ಟಿಗೆ ಸಹಾಯವಾಗುತ್ತದೆ. ಅನ್ನುವುದನ್ನು ನೋಡಿ

ಏತಕ್ಕೆ ಈ ಮಾತು ಹೇಳುತ್ತಿದ್ದೇನೆ ಎಂದರೆ ರೈತನು ತನ್ನ ವ್ಯವಸಾಯಕ್ಕೆ ಬೇಕಾದಂಥ ಸಾಮಗ್ರಿಗಳನ್ನು ಕೊಂಡುಕೊಳ್ಳುವುದಕ್ಕೆ ಒಂದು ಕಂಟ್ರೋಲ್ ಮಾಡುವುದಾದರೆ ಅದೇ ರೀತಿ ಅವನು ಬೆಳೆಯತಕ್ಕಂಥ ಬೆಳೆಗಳಿಗೂ ಒಂದು ರೇಟನ್ನು ನಿಗದಿ ಮಾಡಬೇಕು ಎಂದು. ಅದೇ ರೀತಿ ರೈತನು ಕೊಂಡುಕೊಳ್ಳತಕ್ಕಂಥ ಪ್ರತಿಯೊಂದು ವಸ್ತುಗಳಿಗೂ ಒಂದು ರೇಟನ್ನು ನಿಗದಿ ಮಾಡಬೇಕು. ಈಗ ಇರತಕ್ಕಂಥ ಪರಿಸ್ಥಿತಿ ನೋಡಿದರೆ ಸಾಹುಕಾರ ಇನ್ನೂ ಸಾಹುಕಾರನಾಗುತ್ತಾನೆ, ಬಡವ ಇನ್ನೂ

ಬಡವನಾಗುತ್ತಾನೆ, ಈ ರೀತಿ ಆಗುವುದಕ್ಕೆ ಈವೊತ್ತಿನ ದಿವಸ ಅವಕಾಶವಾಗಿದೆ. ಆದುದರಿಂದ ರೈತನಿಗೆ ಒಳ್ಳೆಯ ಬೆಲೆ ಸಿಗುವಂತೆ ಮಾಡಿದರೆ ಅದೇರೀತಿ ಇತರ ವಸ್ತುಗಳಿಗೂ ಒಳ್ಳೆಯ ಬೆಲೆ ಸಿಗುವಂತೆ ವ್ಯವಸ್ಥೆಮಾಡಬೇಕು. ಆರೀತಿ ಮಾಡುವುದಾದರೆ ಎಲ್ಲಾ ವಸ್ತುಗಳಿಗೂ ಕಂಟ್ರೋಲ್ ತೆಗೆದುಕೊಂಡು ಬರಬೇಕು. ಎಲ್ಲವನ್ನೂ ಕಂಟ್ರೋಲ್ ರೂಪದಲ್ಲಿ ಒದಗಿಸತಕ್ಕಂಥ ವ್ಯವಸ್ಥೆ ಮಾಡಬೇಕು. ಈರೀತಿ ಮಾಡದೆ ಒಂದು ವಸ್ತುವಿಗೆ ಕಂಟ್ರೋಲ್ ಇದ್ದು ಇನ್ನೊಂದು ವಸ್ತುವಿಗೆ ಕಂಟ್ರೋಲ್ ಇರದೇ ಹೋದರೆ ಆವಾಗ ಬೆಲೆಗಳು ಏರುಪೇರು ಆಗುವುದಕ್ಕೆ ಸಂದೇಹವೇ ಇಲ್ಲ. ಆದುದರಿಂದ ಈವೊತ್ತಿನ ದಿವಸ ಲೆವಿ ಎತ್ತುವ ಒಂದು ನಿಯಮಾವಳಿ ಏನು ಇದೆ, ಒಂದು ಎಕರೆಗೆ ಒಂದು ಕ್ವಿಂಟಾಲ್ ಭತ್ತವನ್ನು ವಸೂಲ್ಮಾಡುವ ಲೆವಿ ಪದ್ಧತಿ ಏನು ಇದೆ ಇದರಿಂದ ಆಹಾರಧಾನ್ಯಗಳು ಒಂದೇ ಕಡೆ ಸ್ಟೋರ್ ಆಗಿ ಬೆಲೆಗಳು ಏರಿಳಿತವಾಗುತ್ತದೆ. ಆದುದರಿಂದ ನಾನು ಹೇಳುವುದು ಈ ರೀತಿ ಆಗದೇ ಇರುವುದಕ್ಕೆ ಏನು ಮಾಡಬೇಕು ಎಂದರೆ ರೈತನ ಹತ್ತಿರ ಇರುವ ಸರಪ್ಲಸ್ ಧಾನ್ಯಕ್ಕೆ ಒಂದು ಬೆಲೆ ನಿಗದಿ ಮಾಡಿ ಅದನ್ನು ಕೊಂಡುಕೊಂಡು ಯಾವ ಪ್ರದೇಶದಲ್ಲಿ ಧಾನ್ಯ ಸಿಕ್ಕುವುದಿಲ್ಲವೋ, ಯಾವ ಪ್ರದೇಶದಲ್ಲಿ ಆಹಾರ ಧಾನ್ಯ ಕೊರತೆ ಇದೆಯೋ ಅಲ್ಲಿ ಈ ಆಹಾರ ಧಾನ್ಯವನ್ನು ಸಿಗುವಂಥ ಒಂದು ವ್ಯವಸ್ಥೆ ಮಾಡಬೇಕು. ಹಾಗಾದರೆ ಆಹಾರದ ಕೊರತೆ ಬರುವದಿಲ್ಲ. ಮತ್ತು ವರ್ತಕರು ಈಗ ಏನು ಮಾರಾಟ ಮಾಡುತ್ತಿದ್ದಾರೊ ಅದನು ತಪ್ಪಿಸಿ ಸೊಸೈಟಿಗಳ ಮುಖಾಂತರ ಮಾರಾಟ ಮಾಡುವ ವ್ಯವಸ್ಥೆ ಮಾಡಬೇಕು. ಸಹಕಾರ ಸೊಸೈಟಿಗಳಿಗೆ ಸರ್ಕಾರದವರು ಏನು ಕೊಡುತ್ತಾರೋ ಅದನ್ನು ಮಾತ್ರ ಮಾರಾಟ ಮಾಡಬೇಕು ಇತರ ವಸ್ತುಗಳನ್ನು ಮಾರಾಟ ಮಾಡಕೂಡದು ಎನ್ನುವ ಒಂದು ವ್ಯವಸ್ಥೆ ಮಾಡಬೇಕು. ಹಾಗಾದರೆ ಬೇರೆಯವರು ಇದನ್ನು ಮಾರಾಟ ಮಾಡುವುದಕ್ಕೆ ಅವಕಾಶವಾಗುವುದಿಲ್ಲ. ಈ ಬಗ್ಗೆ ಇನ್ನೂ ಹೇಳಬೇಕೆಂಬ ಅಪೇಕ್ಷೆ ಇದ್ದರೂ ಕೂಡ ಈಗ ಕೊಟ್ಟಿರತಕ್ಕಂಥ ವೇಳೆ ಕಡಿಮೆಯಾಗಿರುವುದರಿಂದ ಇಷ್ಟು ಹೇಳಿ, ಇನ್ನು ಮುಂದೆಯಾದರೂ ನಾನು ಮಾತನಾಡುವಾಗ ಕಡಿಮೆ ಕಾಲಾವಕಾಶ ಕೊಡದೆ ಹೆಚ್ಚಿನ ಕಾಲಾವಕಾಶ ಕೊಡಬೇಕೆಂದು ಹೇಳಿ ಅಧ್ಯಕ್ಷರು ನನಗೆ ಇಷ್ಟು ಮಾತನಾಡಲು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

5-30 P. M.

†ಶ್ರೀ ಬೆಟ್ಟಸ್ವಾಮಿಗೌಡ (ಕುದೂರು)—ಮಾನ್ಯ ಅಧ್ಯಕ್ಷರೇ, ನನ್ನ ಹಿರಿಯ ಸ್ನೇಹಿತರಾದ ಶ್ರೀಮಾನ್ ರಾಜಶೇಖರಮೂರ್ತಿಯವರು ಮತ್ತು ಶ್ರೀಮಾನ್ ಎಚ್. ಟಿ. ಕೃಷ್ಣಪ್ಪನವರು ಆಹಾರದ ಸಮಸ್ಯೆಯ ಬಗ್ಗೆ ಒಂದು ನಿರ್ಣಯವನ್ನು ತಂದಿದ್ದಾರೆ. ಇದರ ಬಗ್ಗೆ ಮಾತನಾಡುತ್ತಾ ಈಗ ಏನು ಒಂದು ಬೆಲೆ ಏರಿದೆ ಅದರ ಬಗ್ಗೆ ಹಿರಿಯ ಸದಸ್ಯರೆಲ್ಲರೂ ಮಾತನಾಡಿದ್ದಾರೆ. ಬೆಲೆಗಳು ಏರಿರುವುದು ಎಂದರೆ ಸ್ವಲ್ಪವಾದರೂ ತಾರತಮ್ಯವಿಲ್ಲದ ರೀತಿಯಲ್ಲಿ ಏರಿದೆಯೆಂದು ಹೇಳಿದರೆ ತಪ್ಪಾಗ

ಲಾರದು ಒಂದು ಕಡೆ ಎರಡೂವರೆ ರೂಪಾಯಿ ಮತ್ತೊಂದು ಕಡೆ ಮೂರು ರೂಪಾಯಿ ಕೆಜಿಗೆ ಆಹಾರಧಾನ್ಯಗಳ ಬೆಲೆ ಏರಿರುವದನ್ನು ನೋಡಿದರೆ ನಿಜವಾಗಿ ಕೂಡ ಹೇಳಬೇಕಾದರೆ ಈ ವ್ಯವಸ್ಥೆಗೆ ಸರ್ಕಾರವೇ ಹೊಣೆ ಎಂದು ಹೇಳಿದರೆ ಸರ್ಕಾರ ಒಪ್ಪಿಕೊಳ್ಳಬೇಕಾಗುತ್ತದೆ. ಇಂಥ ಒಂದು ತಾತ್ಕಾಲಿಕವಾಗಿ ಈ ರೀತಿ ಬೆಲೆಗಳು ಏರಲು ಕಾರಣವಾದರೂ ಇಷ್ಟೇ. ನಮ್ಮ ಸರ್ಕಾರದವರು ಅಂತರ ಜಿಲ್ಲಾ ಆಹಾರ ಧಾನ್ಯಗಳ ಸಾಗಾಣಿಕೆಯ ನಿರ್ಭಂದ ಮಾಡಿದ್ದಾರೆ ಆ ಒಂದು ನಿರ್ಭಂದದಿಂದ ಬೆಲೆಗಳು ತಕ್ಷಣ ಏರುವುದಕ್ಕೆ ಅವಕಾಶವಾಯಿತು. ಈ ಅಂತರಜಿಲ್ಲಾ ನಿರ್ಭಂದದ ಬದಲಿಗೆ ಆಹಾರ ಧಾನ್ಯಗಳು ಮೈಸೂರಿನ ಗಡಿಯಿಂದ ಹೊರಗೆ ಹೋಗದಂತೆ ನಿರ್ಭಂದವನ್ನು ಮಾಡಿದರೆ ಏನೂ ತೊಂದರೆಯಾಗುತ್ತಾ ಇರಲಿಲ್ಲ. ಬೇಕಾದಷ್ಟು ಆಹಾರಧಾನ್ಯವು ಬೇರೆ ಹೊರ ರಾಜ್ಯಕ್ಕೆ ಹೋಗುತ್ತಾ ಇವೆ ಎಂದು ಹೇಳುತ್ತೇವೆ ಅಂತಜಿಲ್ಲಾ ನಿರ್ಭಂದವನ್ನು ತೆಗೆದು ಹಾಕಿದರೆ ಬೆಲೆ ಸಾಕಷ್ಟು ಮಟ್ಟಿಗೆ ಕಡಿಮೆಯಾಗುವುದಕ್ಕೆ ಅವಕಾಶವಾಗುತ್ತದೆ ನಮ್ಮ ತಾಲ್ಲೋಕಿನಲ್ಲಿ ಮತ್ತು ಮಾಗಡಿಯಲ್ಲಿ ಆಹಾರದ ಸಮಸ್ಯೆ ವಿಪರೀತವಾಗಿ ಜನಗಳಲ್ಲಿ ಕಳವಳಕ್ಕೆ ಎಡೆಕೊಟ್ಟಿದೆ. ಮಾಗಡಿಯಲ್ಲಿ ಲೂಟಿ ಮುಂತಾದ ದುಷ್ಕೃತ್ಯಗಳು ನಡೆಯುವ ಸಂದರ್ಭದಲ್ಲಿ ಲಾಠಿಚಾರ್ಜ ನಡೆಯುವ ಸಂದರ್ಭದಲ್ಲಿ ಮಾನ್ಯ ಚನ್ನಪ್ಪನವರು, ನಾನು ಇನ್ನು ಇತರ ಪುರ ಪ್ರಮುಖರು ಸೇರಿ ಡೆಪ್ಯುಟಿ ಕಮಿಷನರ್‌ವರ ಅಧ್ಯಕ್ಷತೆಯಲ್ಲಿ ಒಂದು ಶಾಂತಿ ಸಮಿತಿಯನ್ನು ಎಲ್ಲರ ಸಹಕಾರದಿಂದ ಮಾಡಿದೆವು. ಇದೇ ರೀತಿ ಕುದೂರಿನಲ್ಲಿ ಕೂಡ ಗಲಾಟೆ ಆಗುವುದಕ್ಕೆ ಅವಕಾಶ ಒದಗಿದಾಗ ನಾವು ಎಲ್ಲರೂ ಸೇರಿ ವರ್ತಕರ ಸಹಕಾರದಿಂದ ಕಡಿಮೆ ಬೆಲೆಗೆ ಅಕ್ಕಿಯನ್ನು ಮಾರಾಟ ಮಾಡಿಸಿದ್ದೇವೆ ಸರ್ಕಾರದವರು ನಮ್ಮ ತಾಲೂಕಿಗೆ ೨೦ ಕ್ವಿಂಟಾಲ್ ಅಕ್ಕಿ ಕೊಡುತ್ತಾ ಇದ್ದಾರೆ. ಇದು ನಿಜವಾಗಿ ಕೂಡ ಯಾವರೀತಿಯಲ್ಲೂ ಹಂಚುವುದಕ್ಕೆ ಸಾಲುತ್ತಾ ಇಲ್ಲ. ಇಡೀ ತಾಲೂಕಿಗೆ ೨೦ ಕ್ವಿಂಟಾಲ್ ಅಕ್ಕಿಯನ್ನು ನಮ್ಮ ಸರ್ಕಾರದವರು ಕೊಟ್ಟರೆ ಹಂಚುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಹೇಳಿ ಆದಷ್ಟು ಇನ್ನು ಜಾಸ್ತಿ ಅಕ್ಕಿಯನ್ನು ಕೂಡಲೇ ಕಳುಹಿಸಿಕೊಡಬೇಕೆಂದು ಹೇಳಲು ಇಚ್ಛೆಪಡುತ್ತೇನೆ. ಮಾಗಡಿ ತಾಲೂಕಿನಲ್ಲಿ ಆಹಾರ ಸಮಿತಿಗಳಲ್ಲಿ ಬಹಳ ತಾರತಮ್ಯ ನಡೆಯುತ್ತಿದೆ. ಈ ಸಮಿತಿಯಲ್ಲಿ ಕೇವಲ ಎಂ.ಎಲ್.ಎ. ಆಗಿರುವವರನ್ನು ಬಿಟ್ಟರೆ ಬೇರೆ ಯಾರನ್ನು ಹಾಕಿಲ್ಲ. ಆದರಲ್ಲಿ ಆಡಳಿತ ಕಾಂಗ್ರೆಸ್ಸಿಗೆ ಸೇರಿದವರನ್ನೆ ಹಾಕಿದ್ದಾರೆ. ಇನ್ನು ಒಂದು ವಿಚಿತ್ರವಾದ ವಿಷಯ ಹೇಳಬೇಕೆಂದರೆ ೧೯೬೫-೬೬ ನೇ ಇಸವಿಯಲ್ಲಿ ಆಹಾರ ಸಮಸ್ಯೆ ಬಂದಾಗ ಬ್ಲಾಕ್‌ಮಾರ್ಕೆಟ್ ಮಾಡುತ್ತಿದ್ದಂತಹವರನ್ನು ಈ ಸಮಿತಿಯಲ್ಲಿ ಹಾಕಿದ್ದಾರೆ. ಇಂಥ ಒಂದು ಕಮಿಟಿಯಿಂದ ಯಾವ ರೀತಿ ಅನೀತಿ ಮತ್ತು ಅನ್ಯಾಯಗಳು ನಡೆಯುತ್ತವೆಂದು ಹೇಳುವುದಕ್ಕೆ ಸಾಧ್ಯವಿಲ್ಲ.

ಇಂಥ ಜನಗಳನ್ನು ಈ ಕಮಿಟಿಗಳಲ್ಲಿ ಹಾಕಿದರೆ ಸಮಿತಿ ಯಾವ ಮಟ್ಟದಲ್ಲಿ ಕೆಲಸ ಮಾಡುತ್ತದೆ ಎಂದು ತಾವು ಎಲ್ಲರೂ ಕೂಡ ತಿಳಿದುಕೊಳ್ಳಬಹುದು

ಮತ್ತೆ ಮಾಗಡಿ ತಾಲ್ಲೂಕಿನಲ್ಲಿ ಕಣ್ವಾ ಜಲಾಶಯ ಇದ್ದರೂ ಅದು ರಾಮನಗರಕ್ಕೆ ಅನುಕೂಲವಾಗಿದೆ ನೀರಾವರಿ ಸೌಲಭ್ಯವೂ ಕೂಡ ಅಲ್ಲಿಗೆ ದೊರಕಿದೆ. ಇನ್ನು ಮಂಚನಬೆಲೆ ನೀರಾವರಿಯಿಂದ ರಾಮನಗರ, ಚೆನ್ನಪಟ್ಟಣ ಮತ್ತು ಕನಕಪುರ ತಾಲ್ಲೋಕುಗಳಿಗೆ ನೀರಾವರಿ ಸೌಲಭ್ಯ ಸಿಕ್ಕುತ್ತದೆಯೇ ವಿನಃ ಮಾಗಡಿ ತಾಲ್ಲೋಕಿಗೆ ಯಾವ ಸೌಲಭ್ಯವೂ ಸಿಕ್ಕುತ್ತಿಲ್ಲ. ನಮ್ಮ ತಾಲ್ಲೂಕಿನಲ್ಲಿ ಮೂರು ಜಲಾಶಯಗಳು ಇದ್ದರೂ ಕೂಡ ನಮ್ಮ ತಾಲ್ಲೋಕಿಗೆ ಒಂದು ಎಕರೆ ಜಮೀನಿಗೆ ನೀರಾವರಿ ಸೌಲಭ್ಯ ಸಿಕ್ಕುತ್ತಿಲ್ಲ. ಇಲ್ಲಿಯವರೆಗೆ ನಮ್ಮ ತಾಲ್ಲೋಕಿನ ಬಗ್ಗೆ ಸರ್ಕಾರ ಗಮನ ಹರಿಸಿಲ್ಲ ಎಂದು ಹೇಳಿ ಇದರ ಬಗ್ಗೆ ಹೆಚ್ಚಿನ ಗಮನಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇಷ್ಟು ಹೇಳಿ ಒಂದೆರಡು ಮಾತುಗಳನ್ನು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ —ನನಗೆ ಕೇವಲ ಒಂದು ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಡಿ.

ಉಪಾಧ್ಯಕ್ಷರು —ದಯಮಾಡಿ ಕುಳಿತುಕೊಳ್ಳಿ. ಒಂದು ನಿಮಿಷದಲ್ಲಿ ತಾವು ಏನೂ ಮಾತನಾಡುವುದಕ್ಕೆ ಬರುವುದಿಲ್ಲ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್.—ಇಲ್ಲ ಒಂದು ನಿಮಿಷದಲ್ಲಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಈಗ ನಾನು ಭಾಷಣ ಮಾಡುವುದನ್ನು ಪೂರ್ಣ ಬದಲಾಯಿಸಿ ಕೊಂಡಿದ್ದೇನೆ ಕೇವಲ ಒಂದೇ ಒಂದು ನಿಮಿಷ ಕೊಡಿ ಮುಗಿಸುತ್ತೇನೆ.

ಉಪಾಧ್ಯಕ್ಷರು.—ದಯಮಾಡಿ ಒಂದು ನಿಮಿಷದಲ್ಲಿ ಮುಗಿಸಬೇಕು ನಾನು ಬೆಲ್ಲು ಮಾಡಿದ ತಕ್ಷಣ ಕುಳಿತುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೇ, ಸರ್ಕಾರದ ಆಡಳಿತ ನೀತಿಗೆ ಧಿಕ್ಕಾರ, ಅನ್ನ ಕೊಡಿ ಎಂದು ಅನ್ನ ಕೇಳಿದ ಜನರ ಮೇಲೆ ಗೋಳಿಬಾರ ಮಾಡುವ ಸರ್ಕಾರಕ್ಕೆ ಧಿಕ್ಕಾರ, ಆಹಾರಧಾನ್ಯದ ಸಗಟು ವ್ಯಾಪಾರವನ್ನು ವಹಿಸಿ ಕೊಳ್ಳತಕ್ಕಂಥ ನೀತಿಗೆ ಧಿಕ್ಕಾರ ***

Mr. DDPUTY SPEAKER.—Dont record.

(The Hon. Member Sri Vatal Nagaraj sat in Aisle).

Mr. DDPUTY SPEAKER.—I want the Hon. Member to help me. He may please go and sitis his seat.

ಶ್ರೀ ವಾಟಾಳ್ ನಾಗರಾಜ್ —ನಾವು ಏನು ಮಾಡೋಣ ಇಲ್ಲಿ ಹೇಳಿ ಸ್ವಾಮಿ ನಾವು ಏತಕ್ಕೋಸ್ಕರ ಇಲ್ಲಿ ಬಂದಿದ್ದೇವೆ ನಾವು ದನಕಾಯುವುದಕ್ಕೆ ಬಂದಿದ್ದೆವೆಯೇ? ಇಡೀ ದೇಶದಲ್ಲಿ ಆಹಾರ ಸಮಸ್ಯೆ ಬೃಹದಾಕಾರವಾಗಿರುವ ಪರಿಸ್ಥಿತಿ ಇರುವಾಗ

***Not recorded as ordered by the chair.

ಕೇವಲ ಐದು ನಿಮಿಷ ಮಾತನಾಡುವುದಕ್ಕೆ ಅವಕಾಶ ಇಲ್ಲ ಎಂದರೆ ಹೇಗೆ? (ಮಾನ್ಯ ಸದಸ್ಯರು ಹೊರಗೆ ಹೋದರು).

Mr. DEPUTY SPEAKER.—Under the Rules of Procedure, I would like to inform the hon. members that there is no provision for shouting 'Dhikkara'. The Rules of procedure are something which I am bound to observe and adhere to very strictly. There is no way out.

I was about to tell the hon. member to please avoid the slogan and I was inclined to extend time even though I had given him one minute. I would have given him some more time If the hon. member cannot understand the goodwill extended to him, I can only say that I am only sorry for him and nothing further.

ಶ್ರೀ ಕಾಗೋಡು ತಿಮ್ಮಪ್ಪ—ಅಧ್ಯಕ್ಷರೇ, ಒಂದು ರೀತಿಯಲ್ಲಿ ಅವರು ತಮ್ಮ ಭಾಷಣವನ್ನು ಮಾಡಿದ್ದಾರೆ. ಏನಂದರೆ ಅವರು ಬಳಸಿದಂಥ ಪದಗಳನ್ನು ಒಂದು ಭಾಷಣ ರೂಪದಲ್ಲಿ ಇಟ್ಟಿದ್ದಾರೆ.

ಉಪಾಧ್ಯಕ್ಷರು—ಅದು 'ಧಿಕ್ಕಾರ' ಎನ್ನುವ ರೀತಿಯಲ್ಲಿ ಇರಬಾರದು.

ಶ್ರೀ ಕಾಗೋಡು ತಿಮ್ಮಪ್ಪ—ಎಲ್ಲಿ ಆ ರೀತಿ ಇದೆ?

Mr. DEPUTY SPEAKAR.—I told him with utmost forbearance. I have understood what he had said. The Rules of Procedure are something which are to be interpreted, understood and followed.

ಶ್ರೀ ಕಾಗೋಡು ತಿಮ್ಮಪ್ಪ—ಅದನ್ನು. ಎಲ್ಲರೂ ಒಪ್ಪಿಕೊಳ್ಳಬೇಕು, ರೂಲ್ಸ್ ಮತ್ತು ಪ್ರೊಸೀಜರ್ ಅನ್ನು ಬಿಟ್ಟು ಯಾರೂ ಹೋಗುವ ಹಾಗಿಲ್ಲ. ಅದಕ್ಕೆ ಸಂಪೂರ್ಣವಾಗಿ ಎಲ್ಲರೂ ಬದ್ಧರಾಗಿದ್ದೇವೆ ಆದರೆ ಆಹಾರ ನೀತಿಗೆ ಧಿಕ್ಕಾರ ಎನ್ನುವ ಪದಗಳನ್ನು ಅವರು ಉಪಯೋಗಿಸಿದರು............

ಶ್ರೀ ಡಿ. ದೇವರಾಜ ಅರಸ— ಅವರ ಬಗ್ಗೆ ಲಾಯರ್‌ಗಿರಿ ಯಾಕೆ ಬಿಡಿ.

Mr. DEPUTY SPEAKER.— It is not fair on his part to continue his speech despite my telling him. I wanted to extend my goodwill to him. He himself pleaded for one minute but I was prepared to give him 3-4 minutes.

ಶ್ರೀ ಕೋಣಂದೂರು ಲಿಂಗಪ್ಪ— ನಾನು ಬೆಲೆ ಏರಿಕೆಯ ಬಗ್ಗೆ, ಮತ್ತು ಲೆವಿಯ ಬಗ್ಗೆ ಎರಡೆ ಎರಡು ವಾಕ್ಯಗಳನ್ನು ಹೇಳುತ್ತೇನೆ. ದಯವಿಟ್ಟು ಮೂರು ನಿಮಿಷ ಅವಕಾಶವನ್ನು ನನಗೆ ಕೊಡಿ.

Mr. DEPUTY SPEAKER.— Your colleague has already spoken.

ಶ್ರೀ ಕೋಣಂದೂರು ಲಿಂಗಪ್ಪ— ನಮ್ಮ ವೇದನೆಯನ್ನೂ ಹೇಳಬೇಕಾಗುತ್ತದೆ. ಶಿವಮೊಗ್ಗ ಜಿಲ್ಲೆಯಲ್ಲಿ ತೀರ್ಥಹಳ್ಳಿ ಕ್ಷೇತ್ರ ಎಂದು ಒಂದು ಇದೆ. ಅಲ್ಲಿಂದ ನಾನು ಬಂದಿದ್ದೇನೆ. ಕರ್ನಾಟಕದಲ್ಲಿ ಭತ್ತದ ಕಣಜ ಶಿವಮೊಗ್ಗ ಜಿಲ್ಲೆ. ಅಲ್ಲಿನ ರೈತರ ಸ್ಥಿತಿಗತಿ ಏನು, ತಮ್ಮ ಲೆವಿ ಬೆಲೆ ಅವರಿಗೆ ಸಾಕೆ ಎಂದು ಎರಡು ಮಾತನ್ನು ಹೇಳಬೇಕಾಗಿದೆ.

Mr. DEPUTY SPEAKER.- Please resume your seat. Five other members who had sent their names had to be refused permission to speak. Three other members from the Opposition side had sent in their names, but I returned their slips. Sri Siddappa who is never tired of raising his finger was also refused. In this way I had to disappoint to so many hon. members. I seek your cooperation and good will in carrying on the business of the House. This is not the way of asserting. Let us have a sense of proportion, a sense of understanding and let us continue our work with a spirit of goodwill and understanding.

ಶ್ರೀ ಕೋಣಂದೂರು ಲಿಂಗಪ್ಪ—ಇಷ್ಟು ಹೊತ್ತಿಗೆ ನಾನು ನನ್ನ ಭಾಷಣವನ್ನು ಮುಗಿಸಿಬಿಡುತ್ತಿದ್ದೆ.

Mr. DEPUTY SPEAKER.— If I permit you to speak, others will, make an allegation. Even the Leader of the Opposition who had sent a slip mentioning 3 names was disappointed.

†ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ) — ಮಾನ್ಯ ಅಧ್ಯಕ್ಷರೇ, ನಾನು ಆಹಾರದ ಬೆಲೆ ಏರಿಕೆಯ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಮಂಡಿಸಿದಂಥ ಹೇಳಿಕೆಯನ್ನು ಪ್ರಸ್ತಾಪಿಸಿ ಎರಡು ಮಾತುಗಳನ್ನು ಹೇಳುವದಕ್ಕೆ ಇಷ್ಟಪಡುತ್ತೇನೆ. ಮುಖ್ಯವಾಗಿ ಸರ್ಕಾರದವರು ಭತ್ತದ ಲೆವಿ ದರವನ್ನು ಏನು ನಿಗದಿಮಾಡಿದ್ದಾರೆ ಅದರ ಬಗ್ಗೆ ಪ್ರಸ್ತಾಪಿಸಲಿಕ್ಕೆ ಅಪೇಕ್ಷೆ ಪಡುತ್ತೇನೆ. ಈಗ ಇದಕ್ಕೆ ೭೦–೭೫ ರೂ.ಗಳು ಎಂದು ಒಂದು ಕಡೆ ನಿಗದಿ ಮಾಡುತ್ತೇವೆಂದು ಹೇಳುತ್ತಿದ್ದೀರಿ, ಅದೇ ಬೆಲೆಯನ್ನು ಮೂರು ವರ್ಷಗಳ ಕಾಲ ಸ್ಥಿಮಿತವಾಗಿಡುತ್ತೇವೆಂದು ಹೇಳುತ್ತಿದ್ದೀರಿ. ಇದು ರೈತರಿಗೆ ಬಹಳ ಅನ್ಯಾಯವಾದಂಥ ದರ. ಕಾರಣ ಇಷ್ಟೇ, ಒಂದು ಎಕರೆಯಲ್ಲಿ ಭತ್ತವನ್ನು ಬೆಳೆಯಬೇಕಾದರೆ, ಒಬ್ಬ ರೈತನಿಗೆ ೩೪೫ ರೂಪಾಯಿ ಅದರ ಮೇಲೆ ಖರ್ಚಾಗುತ್ತದೆ. ನಮ್ಮಲ್ಲಿ ಒಂದು ಎಕರೆಗೆ ಆರು ಕ್ವಿಂಟಾಲ್ ಭತ್ತವನ್ನು ಬೆಳೆಯುತ್ತಾರೆ. ತಮ್ಮ ಬೆಲೆಯ ಪ್ರಕಾರ ಅವರಿಗೆ ಒಂದು ಎಕರೆಗೆ ೪೫೦ ರೂಪಾಯಿ

ಸಿಕ್ಕುತ್ತದೆ. ೩೪೫ ರೂಪಾಯಿಗಳನ್ನು ಖರ್ಚುಮಾಡಿ ೪೫೦ ರೂಪಾಯಿಗಳನ್ನು ತೆಗೆದು ಕೊಂಡರೆ ಅವನಿಗೆ ಉಳಿಯತಕ್ಕದ್ದು ೧೦೦ ರೂಪಾಯಿಗಳು ಮಾತ್ರ. ಈ ನೂರು ರೂಪಾಯಿಯಲ್ಲಿ ಅವನಿಗೆ ಬಟ್ಟೆ ಬರೆ, ಮನೆ ಮಠ, ಮಕ್ಕಳಿಗೆ ವಿದ್ಯಾಭ್ಯಾಸ ಇತ್ಯಾದಿ ಗಳನ್ನು ಹೇಗೆ ನಡೆಸಬೇಕು ? ಆದ್ದರಿಂದ ಸರ್ಕಾರದವರು ಈ ಬಗ್ಗೆ ಬೆಲೆಯ ನೀತಿ ಯನ್ನು ಪುನರ್ವಿಮರ್ಶೆ ಮಾಡಬೇಕು. ತಾವು ಕೊಡತಕ್ಕ ಬೆಲೆ ಮೂರು ವರ್ಷ ಗಳ ಕಾಲ ಸ್ಥಿಮಿತವಾಗಿದ್ದರೆ, ಅದೂ ಕೂಡ ರೈತರಿಗೆ ಅಪಾಯಕಾರಿಯಾಗಿರುತ್ತದೆ. ಮೂರು ವರ್ಷಗಳಿಂದ ಗೊಬ್ಬರದ ಬೆಲೆ ಕೂಲಿ ವಗೈರೆ ಎಲ್ಲಾ ಏರುತ್ತಾ ಹೋಗ ಬಹುದು. ಆದ್ದರಿಂದ ಬೆಲೆಯನ್ನು ಪುನರ್ವಿಮರ್ಶೆ ಮಾಡಬೇಕು. ಕನಿಷ್ಟಪಕ್ಷ ಒಂದು ಕ್ವಿಂಟಾಲ್ ಭತ್ತಕ್ಕೆ ಒಂದು ನೂರು ರೂಪಾಯಿಯಂತಾದರೂ ಕೊಡಬೇಕು. ಇದು ಅತ್ಯಾವಶ್ಯಕ ಲೆವಿ ವಸಲಿ ಬಗ್ಗೆ ಎರಡು ಮಾತುಗಳನ್ನು ಹೇಳಬೇಕಾಗಿದೆ.

ಶ್ರೀ ಎ. ವಿ. ಮುನಿಸ್ವಾಮಿ.—ಇದು ನಿಮ್ಮ ಸಮಾಜವಾದವೇ?

ಶ್ರೀ ಕೋಣಂದೂರು ಲಿಂಗಪ್ಪ.—ರೈತರ ಹಿತವನ್ನು ರಕ್ಷಣೆ ಮಾಡುವದು ಸಮಾಜವಾದವಲ್ಲವೇ ? ಕನಿಷ್ಟಪಕ್ಷ, ಮೂರು ಎಕರೆಗಿಂತ ಕಡಿಮೆ ಇರತಕ್ಕಂಥ ಭೂಮಿಯವರಿಗೆ ಲೆವಿಯನ್ನು ರದ್ದುಮಾಡಬೇಕು.

ಶ್ರೀ ಡಿ. ದೇವರಾಜ ಅರಸ್.—ಎಲ್ಲಾ ಡಿಸ್ಟ್ರಿಕ್‌ನ ಭೂಮಿಗೂ ಬಿಡಬೇಕೇ ? ಏನು ಮಾಡಬೇಕು ಹೇಳಿ ?

ಶ್ರೀ ಕೋಣಂದೂರು ಲಿಂಗಪ್ಪ.—ಜಿಲ್ಲೆ ಜಿಲ್ಲೆಗೆ ಸಾಗಾಣಿಕೆ ಮಾಡುವದಕ್ಕೆ ಅವಕಾಶ ಕೊಡುವದರಿಂದ ಕಳ್ಳ ವ್ಯಾಪಾರಸ್ಥರಿಗೆ ಹೆಚ್ಚು ಅನುಕೂಲವಾಗುತ್ತದೆ. ಸರ್ಕಾರದ ಅಧಿಕಾರಿಗಳು ಸೇರಿಕೊಂಡು ಭತ್ತವನ್ನು ಕೊಚ್ಚಿನ್ ಇಂದ ಬೇರೆ ಕಡೆಗೆ ಸಾಗಿಸುತ್ತಿದ್ದಾರೆ ಎನ್ನುವ ಮಾತನ್ನು ಕೇಳಿದ್ದೇನೆ. ರೆಸ್ಟ್ರಿಕ್ಷನ್ ತೆಗೆದರೆ ಭತ್ತ ಸಮುದ್ರದ ಆಚೆಗೆ ಹೋಗುತ್ತದೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಡಿ. ದೇವರಾಜ ಅರಸ್ (ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಈಗ ಆಹಾರದ ವಿಚಾರದ ಬಗ್ಗೆ ಅನೇಕರು ಪ್ರಸ್ತಾಪ ಮಾಡಿರುವದರಲ್ಲಿ ಒಂದು ವಿಷಯ ಹೊರಗೆ ಬಿದ್ದ ಹಾಗಾಯಿತು. ಅದು ಏನೆಂದರೆ, ನಾನು ಹೇಳಿರತಕ್ಕ ಹೇಳಿಕೆ ಮತ್ತು ಮುಂದಿನ ಆಹಾರ ನೀತಿ ಏನು ಎನ್ನುವವನ್ನು ಸಾಮಾನ್ಯವಾಗಿ ಎಲ್ಲರೂ ಒಪ್ಪುತ್ತಾರೆ ಎನ್ನುವದು ಸ್ಪಷ್ಟವಾಯಿತು. ಲೆವಿ ಹಾಕತಕ್ಕ ವಿಚಾರದಲ್ಲಿ ಎಲ್ಲರೂ ಒಪ್ಪುತ್ತಾರೆ, ಮತ್ತೆ ಸರ್ಕಾರ ಇದರ ಬಗ್ಗೆ ಹತೋಟಿ ಇಟ್ಟುಕೊಳ್ಳಬೇಕು ಎನ್ನುವದನ್ನು ಒಪ್ಪುತ್ತಾರೆ. ಮತ್ತೆ ಬೆಲೆ ನೀತಿಯನ್ನು ಒಂದು ರೀತಿಯಲ್ಲಿ ಸ್ವಲ್ಪ ಹೆಚ್ಚಬೇಕು ಎಂದು ಹೇಳಿದರೂ ಸಹ ಇಂದಿನ ಬೆಲೆಗಿಂತ ಹೆಚ್ಚು ಬೆಲೆಯನ್ನು ಕೊಡ ಬೇಕು ಎನ್ನುವದನ್ನೂ ಅವರು ಒಪ್ಪುತ್ತಿದ್ದಾರೆ. ಮತ್ತು ಎಲ್ಲರೂ ಒಂದು ಮಾತು ಹೇಳುತ್ತಿದ್ದಾರೆ, ಸರಕಾರ ಎಲ್ಲರಿಗೂ ಆಹಾರ ಒದಗಿಸಬೇಕು ಎಂದು, ರೈತರ ವಿಚಾರ ಬಂದರೆ ಲೆವಿ ತೆಗೆದುಕೊಳ್ಳದೆ ವ್ಯವಸ್ಥೆ ಮಾಡಬೇಕು ಎಂದು ಹೇಳುತ್ತಿದ್ದಾರೆ.

ಶ್ರೀ ಕೋಣಂದೂರ ಲಿಂಗಪ್ಪ.— ದರ ಕಡಿಮೆ ಕೊಟ್ಟರೆ ರೈತರಿಗೆ ಕೊಡ ಬೇಕು.

ಶ್ರೀ ಡಿ. ದೇವರಾಜ ಅರಸ — ಕಷ್ಟ ಬಂದಾಗ ದೇವರನ್ನು ಹಿಂದೆ ಬಯ್ಯುತ್ತಿದ್ದರು, ಈಗ ದೇವರು ಹೋಯಿತು, ಸರಕಾರವನ್ನು ಬಯ್ಯುತ್ತಿದ್ದಾರೆ. ಇದು ಬರೀ ಸರಕಾರದ ಒಂದೇ ಜವಾಬ್ದಾರಿಯಲ್ಲ, ಬೇರೆಯವರೂ ಸರಕಾರದ ಜೊತೆ ಸೇರಿ ಮಾಡಬೇಕಾದ್ದು ರೈತರು ಮತ್ತು ಕಾರ್ಮಿಕರಿಗೂ ಈ ಜವಾಬ್ದಾರಿ ಸೇರಿದೆ ಎಲ್ಲ ಕ್ಷೇತ್ರದಲ್ಲಿರುವವರಿಗೂ ಜವಾಬ್ದಾರಿಯಿದೆ. ಸಂಬಂಧವಿಲ್ಲದಿರುವುದನ್ನು ಮಾತನಾಡುವುದು ಬೇಡ. ಸಮಾಜದಲ್ಲಿ ಎಲ್ಲರೂ ಅವರವರ ಜವಾಬ್ದಾರಿ ಹೊತ್ತರೆ ಎಲ್ಲವೂ ಸರಿಯಾಗುವದು. ರೈತರೂ ಸಹಕರಿಸಬೇಕು, ಸೊಸೈಟಿಗಳು ಜವಾಬ್ದಾರಿಯಿಂದ ಕೆಲಸ ಮಾಡಬೇಕು, ಹೀಗೆ ಎಲ್ಲರಿಗೂ ಜವಾಬ್ದಾರಿಯಿದೆ ಎಂದು ಸ್ಪಷ್ಟವಾಗಿ ತಿಳಿಸುತ್ತೇನೆ. ಒಟ್ಟಿನಲ್ಲಿ ಸಾಮಾನ್ಯವಾಗಿ ಒಂದು ನೀತಿಯನ್ನು ನಿರೂಪಣೆ ಮಾಡಿದ್ದೇವೆ. ಆ ನೀತಿಯನ್ನು ಒಪ್ಪುತ್ತಾ ಇದ್ದೀರಿ ಎಂಬುದೇ ಸಂತೋಷದ ವಿಚಾರ. ನಮ್ಮ ಕಮ್ಯುನಿಸ್ಟ್ ಪಕ್ಷದ ಸದಸ್ಯರು ಒಂದು ವಿಚಾರ ಹೇಳಿದರು. ಸರಕಾರ ಹೋಲ್‌ಸೇಲ್ ಟ್ರೇಡ್ ತೆಗೆದುಕೊಳ್ಳಬೇಕಾಗಿತ್ತು, ತೆಗೆದುಕೊಳ್ಳದಿರುವುದು ಸರಿಯಲ್ಲ ಎಂದು ಹೇಳಿದರು. ಇವತ್ತಿನ ನಮ್ಮ ಆರ್ಥಿಕ ಪರಿಸ್ಥಿತಿಯಲ್ಲಿ ಸರಕಾರಕ್ಕೆ ಹೆಚ್ಚು ಹೆಚ್ಚು ಹತೋಟಿ ಇರುವುದು ಅನಿವಾರ್ಯವಾಗಿದೆ ನನ್ನ ಅಭಿಪ್ರಾಯದಲ್ಲಿ ಶ್ರೀಮಾನ್ ರಾಜಶೇಖರಮೂರ್ತಿಯವರು ಮತ್ತು ಅವರ ಪಕ್ಷದಲ್ಲಿರುವವರು ಏನೋ ಹೇಳಿದರು, ಅವರ ಧೋರಣೆ ಮೊದಲಿಂದ ಗೊತ್ತಿದೆ ಮೊನ್ನೆತಾನೆ ಅವರ ವರ್ಕಿಂಗ್ ಕಮಿಟಿಯಲ್ಲಿ ಮಾಡಿದ ಬಹಿರಂಗ ಭಾಷಣ ಕೂಡ ಪತ್ರಿಕೆಯಲ್ಲಿ ಬಂದಿದೆ. ಅದು ೧೯೫೦–೧೯೬೦ ರಿಂದ ಹಿಂದಕ್ಕೆ ಹೋಗಬೇಕಾದ ಧೋರಣೆ, ಹಳೆಯ ಕಾಲದ ಮಾತು. ಈ ದಿವಸ ಪ್ರಪಂಚ, ಇವತ್ತಿನ ಆರ್ಥಿಕ ಚೌಕಟ್ಟು ಹೇಗಿದೆ, ಸಮಾಜದ ಮೇಲೆ ಅದು ಯಾವ ರೀತಿ ವಿಘಾತವನ್ನುಂಟು ಮಾಡುತ್ತದೆ ಎಂಬುದನ್ನು ನೋಡದೆ ಯಾವುದೋ ೧೯ನೆಯ ಶತಮಾನದ ವಿಷಯ ತೆಗೆದುಕೊಂಡು ಶ್ರೀ ರಾಜಶೇಖರಮೂರ್ತಿಯವರು ಮಾತನಾಡುತ್ತಿದ್ದಾರೆ. ಅವರು ಕಾಲೇಜಿನ ಪ್ರೊಫೆಸರು ಹುಡುಗರಿಗೆ ಪಾಠ ಹೇಳುವ ಹಾಗೆ ಹೇಳಿದರು; ನಿಜ. ಅವರು ಹೇಳಿದ ವಿಚಾರ ಈ ದಿವಸದ ಪರಿಸ್ಥಿತಿಗನುಗುಣವಾಗಿಲ್ಲ ಹಿಂದಿನ ಶತಮಾನದ ವಿಚಾರ ಇದು. ಪೊಲ್ಟಿಕಲ್ ಸ್ಟ್ರಕ್ಚರ್ ಈ ದಿವಸ ಸರಿಯಾಗಿಲ್ಲ ಎಂದು ಹೇಳಿದರು ಹಾಗಾದರೆ ಇನ್ನಾವ ಸ್ಟ್ರಕ್ಚರ್ ಅವರಿಗೆ ಬೇಕು? ಬೇರೆ ಸ್ಟ್ರಕ್ಚರ್ ಯಾವುದು ಎಂಬುದನ್ನು ಅವರು ಹೇಳಬೇಕು. ಕಂಪ್ಲೀಟ್ ಫ್ರೀ ಎಕಾನಮಿ ಎಂದು ಹೇಳುತ್ತಿದ್ದಾರೆ, ಅದು ಎಕನಾಮಿಕ್ ಸ್ಟ್ರಕ್ಚರ್ ಆಯಿತು ಈ ದಿವಸ ಇರುವುದು ಡೆಮಾಕ್ರಾಟಿಕ್ ಸ್ಟ್ರಕ್ಚರ್, ಇಂದು ಪಾರ್ಲಿಮೆಂಟರಿ ಸಿಸ್ಟಂ ಆಫ್ ಡೆಮಾಕ್ರಸಿ ಇದೆ ನಮ್ಮಲ್ಲಿ.

ಶ್ರೀ ಎಂ. ರಾಜಶೇಖರಮೂರ್ತಿ.—ನಿಮ್ಮಕಡೆಯುವರು ಡಿಕ್ಟೇಟರಶಿಪ್ ಬೇಕು ಎಂದು ಹೇಳುತ್ತಿದ್ದಾರೆ.

ಶ್ರೀ ಡಿ. ದೇವರಾಜ ಅರಸ.— ನೀವು ಹೇಳಿದ್ದಕ್ಕೆ ಉತ್ತರ ಹೇಳುತ್ತಿದ್ದಾರೆ. ಟೀಕೆ ಮಾಡಬೇಕು ಎಂಬ ದಾಟಿಯಲ್ಲಿ ಅವರು ಹೇಳಿರಬಹುದು ಎಂದು ಭಾವಿಸುತ್ತೇನೆ. ಅವರಿಗೆ ಇರುವ ವಿಚಾರ ಸರಿಯಾಗಿ ಗೊತ್ತಾಗಿಲ್ಲ ಎಂದು ಭಾವಿಸುತ್ತೇನೆ.

Sri H. T. KRISHNAPPA.—Further he said that the State Government is a glorified municipality !

ಶ್ರೀ ಡಿ. ದೇವರಾಜ ಅರಸ್.— ಮುನಿಸಿಪಾಲಿಟಿಯಲ್ಲಿ ಅವರು ಇನ್‌ಸ್ಪೆಕ್ಟರಾಗಿದ್ದರಲ್ಲಾ ಆಗ ನೀವು ಜೊತೆಯಲ್ಲಿರಲಿಲ್ಲವೇ ? ಈಗ ಸರ್ವಸ್ವತಂತ್ರರಾಗಿ ಹೇಳುತ್ತಿದ್ದೀರಿ. ನೀವು ಮುನಿಸಿಪಾಲಿಟಿ ವಿಚಾರ ಹೇಳುವುದಾದರೆ ನೀವು ಸಣ್ಣ ಪುಟ್ಟ ನೌಕರಿಯಲ್ಲಿದ್ದೀರಿ ಎನ್ನುವುದನ್ನು ಹೇಳಬೇಕಾಗುತ್ತದೆ, ನೀವು ಇನ್‌ಸ್ಪೆಕ್ಟರು ಸಬ್-ಇನಸ್ಪೆಕ್ಟರು ಆಗಿದ್ದಿರಿ. ಇದು ಹಿಂದಿನ ಮಾತು, ಇದೊಂದೂ ನನಗೆ ಗೊತ್ತಿಲ್ಲ. ಶ್ರೀ ರಾಜಶೇಖರ ಮೂರ್ತಿಯವರಿಗೆ ಒಂದೂವರೆ ವರ್ಷದಿಂದ ಎಲ್ಲಾ ಗೊತ್ತಿದೆಯೆಂದು ಹೇಳುವುದಾದರೆ ವ್ಯಾಖ್ಯಾನ ಹೆಚ್ಚು ಮಾಡುವುದಿಲ್ಲ ಅನೇಕರು ಇದಕ್ಕೆ ಉತ್ತರ ಹೇಳಿದ್ದಾರೆ. ಮಳೆ ಬೆಳೆ ಚೆನ್ನಾಗಿಲ್ಲದಿದ್ದರೆ ನಿಮ್ಮಿಂದ ಹೀಗಾಯಿತು ಎಂದರೆ ನಾವು ಒಪ್ಪಬೇಕಾಗಿಲ್ಲ. ಪಾಕಿಸ್ತಾನದ ಯುದ್ಧ ಮಾನವ ನಿರ್ಮಿತ, ಬಾಂಗ್ಲಾ ದೇಶದ ತೊಂದರೆ ಮಾನವ ನಿರ್ಮಿತ, ಕ್ಷಾಮ ಬಂದಿರುವುದು ಮಾನವ ನಿರ್ಮಿತ ಎಂದು ಹೇಳುವುದಾದರೆ ಏನು ಹೇಳಬೇಕು ? ಅದು ದೈವ ನಿರ್ಮಿತವೇ ಮಾನವ ನಿರ್ಮಿತವೇ ಎಂಬುದನ್ನು ಯೋಚನೆಮಾಡಬೇಕು. ವಿರೋಧ ಪಕ್ಷದ ನಾಯಕರು ಮತ್ತು ಅವರ ಪಕ್ಷದಲ್ಲಿರುವ ಶ್ರೀ ರಾಜಶೇಖರಮೂರ್ತಿಯವರು ಇದೆಲ್ಲಾ ದೈವ ನಿರ್ಮಿತವಲ್ಲ, ಎರಡು ವರ್ಷದಲ್ಲಿ ಹೊಸ ಸರಕಾರ ಬಂದಮೇಲೆ ಆಗಿರುವುದು ಎಂದು ಹೇಳುವುದಾದರೆ ನಾನು ಕೇಳುತ್ತೇನೆ, ಅವರಿದ್ದಾಗ ಚಿನ್ನದ ಮಳೆ ಹುಯ್ಯುವಂತೆ ಮಾಡುತ್ತಿದ್ದರೇ ಎಂದು.

ಶ್ರೀ ಎಂ. ರಾಜಶೇಖರಮೂರ್ತಿ.— ರಿಸರ್ವ ಬ್ಯಾಂಕಿನ ವರದಿ ನೋಡಿ.

ಶ್ರೀ ಡಿ. ದೇವರಾಜ ಅರಸ್.— ಅದನ್ನೆಲ್ಲಾ ಹೇಳುವುದಕ್ಕೆ ಕಾಲಾವಕಾಶವಿಲ್ಲ. ಈ ದಿವಸ ಅವರ ಭಾಷಣವಿದೆ, ಅದಕ್ಕಾಗಿ ಇಲ್ಲಿಯವರೆಗೆ ಕುಳಿತಿದ್ದಾರೆ, ಅವರು ಕುಳಿತಿರುವುದೇ ಹೆಚ್ಚು. ಅವರು ಸೂಚನೆ ಮಂಡಿಸಿದ್ದಾರೆ, ಅದಕ್ಕೆ ಜವಾಬು ಕೊಡಬೇಕು, ಅದಕ್ಕಾಗಿ ಕುಳಿತಿದ್ದಾರೆ ಇಲ್ಲದಿದ್ದರೆ ಇದುವರೆಗೆ ಹೊರಟು ಹೋಗುತ್ತಿದ್ದರು. ಇದರ ಬಗ್ಗೆ ಹೆಚ್ಚು ಮಾತನಾಡಬೇಕೆಂದರೆ ಅಭ್ಯಂತರವಿಲ್ಲ. ಅವರಿನ್ನೂ ಪೂರ್ಣವಾಗಿ ಕಲಿತಿಲ್ಲ ಇನ್ನೂ ಕಲಿಯುತ್ತಿದ್ದಾರೆ. ಅರ್ಧಂಬರ್ಧ ಕಲಿತು ಹೇಳುತ್ತಿದ್ದಾರೆ. ೧೯೭೪ರಲ್ಲಿ ರಾಜ್ಯ ಸಭೆಯಲ್ಲಿ ಕೆಲವು ಸ್ಥಾನಗಳು ಖಾಲಿಯಾಗುವುವು, ನಾವೆಲ್ಲಾ ಸೇರಿ ಅಲ್ಲಿಗೆ ಅವರನ್ನು ಕಳಿಸೋಣ, ಕಳಿಸುವುದಕ್ಕೆ ನಾನಂತೂ ಒಪ್ಪುತ್ತೇನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.— ಇದು ಅಂತರ್ಗತವಾದ ವ್ಯಾಮೋಹ

ಶ್ರೀ ಡಿ. ದೇವರಾಜ ಅರಸ್.— ಅವರು ಈ ಭಾಷಣ ಅಲ್ಲಿ ಮಾಡಲಿ. ಇಲ್ಲಿ ಮಂತ್ರಿ ಆಗಿದ್ದಾಗ ಮಾಡಲು ಅವಕಾಶವಿರಲಿಲ್ಲ ಈಗ ಮಾಡಿದರೆ ಪ್ರಯೋಜನ ವಿಲ್ಲ. ಕೇಂದ್ರ ಸರಕಾರದ ಮಟ್ಟದಲ್ಲಿ ಅವರು ತಮ್ಮ ಸರ್ವಶಕ್ತಿಯನ್ನೂ ತೋರಿಸಲಿ, ಅಲ್ಲಿಗೆ ಅವರು ಹೋಗಿ ಬದಲಾವಣೆ ಮಾಡಲು ಪಾರ್ಲಿಮೆಂಟ್ ಮಟ್ಟದಲ್ಲಿ ಪ್ರಯತ್ನಿಸಲಿ.

6-00 P.M.

ಮತ್ತೆ ಅವರು ಹೋಗುವದಾದರೆ ಕೇಳೋಣ. ಈ ಎಲ್ಲಾ ವಿಷಯಗಳನ್ನೂ ನಾನು ನನ್ನ ಹಿಂದಿನ ಭಾಷಣದಲ್ಲೇ ತಿಳಿಸಿದ್ದೇನೆ. ಈ ಬೆಲೆಗಳು ಜಾಸ್ತಿ ಆದುದಕ್ಕೆ ಅನೇಕ ಕಾರಣಗಳಿವೆ ಎಂದು ಹೇಳಿದ್ದೇನೆ ಪಾಕೀಸ್ಥಾನದೊಡನೆ ಯುದ್ಧವಾದುದು ಸುಳ್ಳೇ? ಬಾಂಗ್ಲಾ ದೇಶದ ಸುಮಾರು ಒಂದು ಲಕ್ಷ ಜನ ನಿರಾಶ್ರಿತರನ್ನು ನಾವು ಫೀಡ್ ಮಾಡಿದ್ದು ಸುಳ್ಳೇ? ರಾಜ್ಯದಲ್ಲಿ ಎಂದೂ ಕಾಣದಿದ್ದಂಥ ದೊಡ್ಡ ಪ್ರಮಾಣದ ಕ್ಷಾಮಡಾಮರಗಳು ಬಂದುದು ಸುಳ್ಳೇ? ಕಳೆದ ವರ್ಷಕ್ಕೆ ಹಿಂದಿನ ಎರಡು ವರ್ಷಗಳಲ್ಲಿ ರಾಜ್ಯದಲ್ಲಿ ಮಳೆ ಬೆಳೆಗಳೆಲ್ಲಾ ಕಡಿಮೆ ಆದುದು ಸುಳ್ಳೇ? ಇವುಗಳನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಮಾನ್ಯ ಸದಸ್ಯರು ಹೇಳುವದೇನಿದೆ ಅದನ್ನು ಹೇಳಬೇಕೆಂದು ನಾನು ತಿಳಿಸುತ್ತಿದ್ದೇನೆ ದೇಶದಲ್ಲಿ ಪ್ರೊಡಕ್ಷನ್ ಕಡಿಮೆಯಾಗಿದೆಎಂದು ತಾವುಗಳು ಹೇಳುತ್ತಿರುವದು ಸರಿಯಲ್ಲ—ಅದು ಸುಳ್ಳು ಎಂದು ನಾನೇನೂ ಹೇಳುತ್ತಿಲ್ಲ ಆದರೆ ಮಾನ್ಯ ವಿರೋಧ ಪಕ್ಷದ ಸದಸ್ಯರುಗಳು ಕಣ್ಣಿಗೆ ಕಾಣತಕ್ಕದ್ದನ್ನು ಕೂಡ ಕಾಣಿಸುವದಿಲ್ಲ ಎಂದರೆ ಅವರ ಅಂಧಕಾರತ್ವಕ್ಕೆ ನಾನು ಬೇರೇನೂ ಹೇಳುವದಕ್ಕಾಗುವದಿಲ್ಲ. ಆದರೆ ಇತ್ತೀಚೆಗೆ ನಮ್ಮಲ್ಲಿ ಈ ಅಗ್ರಿಕಲ್ಚರಲ್ ಸೆಕ್ಟಾರಿನಲ್ಲಿ ವರ್ಷಂಪ್ರತಿ ಪ್ರೊಡಕ್ಷನ್ ಶೇಕಡ ೪ ರಂತೆ ಜಾಸ್ತಿಯಾಗುತ್ತಿದೆ. ಆದರೆ ಈ ಪ್ರೊಡಕ್ಷನ್ ಕಡಿಮೆಯಾಗಿರುವದು ಕೇವಲ ನಮ್ಮ ದೇಶವೊಂದೇ ಅಲ್ಲ ಇಡೀ ಪ್ರಪಂಚದಲ್ಲೇ ಇದು ಉದ್ಭವಿಸಿದೆ. ವ್ಯವಸಾಯ ಕ್ಷೇತ್ರದಲ್ಲಿ ಇಡೀ ಜಗತ್ತಿಗೇ ಮೇಲ್ಗೈ ಎನಿಸಿದ ಅಮೇರಿಕಾಕ್ಕೂ ಮುಂದೆ ಬಂದಿರತಕ್ಕ ಆ ಜಪಾನ ದೇಶದಲ್ಲಿ ಕೂಡ ೪ ೬ ವರ್ಷಗಳ ಅವರೇಜನ್ನು ತೆಗೆದುಕೊಂಡರೆ ಅಲ್ಲಿಯೂ ಶೇಕಡ ೪ಕ್ಕೆ ಜಾಸ್ತಿ ಉತ್ಪತ್ತಿ ಹೆಚ್ಚಿಲ್ಲ. ಇಡೀ ಪ್ರಪಂಚದಲ್ಲೇ ಅತ್ಯಂತ ಮುಂದುವರಿದ ರಾಷ್ಟ್ರವೆನಿಸಿದ ಜಪಾನಿನಷ್ಟೇ ಮಟ್ಟದಲ್ಲಿ ನಮ್ಮ ಭಾರತ ದೇಶ ಕೂಡ ಈ ವ್ಯವಸಾಯ ಕ್ಷೇತ್ರದಲ್ಲಿ ಮುಂದುವರಿದಿದೆ ಆದರೆ ಇಷ್ಟು ದೊಡ್ಡ ಪ್ರಮಾಣದಲ್ಲಿ ಭಾರತದಲ್ಲಿ ಹಿಂದೆ ಎಂದೂ ಪ್ರೊಡಕ್ಷನ್ ಜಾಸ್ತಿಯಾಗಿರಲಿಲ್ಲ.

ಇನ್ನು ಫರ್ಟಿಲೈಜರ್ಸ್ ವಿಚಾರಕ್ಕೆ ಬಂದರೆ ಅದರ ಪ್ರೊಡಕ್ಷನ್ನೂ ಕೂಡ ಕಡಿಮೆ ಆಗಿದೆ. ನಮ್ಮ ರಾಷ್ಟ್ರದಲ್ಲಿ ತಾವು ಹೋದ ವರ್ಷ ಬಳಸಿದ್ದ ಗೊಬ್ಬರದ ಪ್ರಮಾಣವನ್ನೂ ಈ ವರ್ಷದ ಪ್ರಮಾಣವನ್ನೂ ಹೋಲಿಸಿ ನೋಡುವದಾದರೆ ಈ ವರ್ಷ ಗೊಬ್ಬರದ ಬಳಕೆಯಲ್ಲಿ ದ್ವಿಗುಣವಾಗಿದೆ ಎಂಬುದು ಕಾಣುತ್ತದೆ. ದೇಶದಲ್ಲಿ ಈ

ದಿವಸ ಹೆಚ್ಚು ಹೆಚ್ಚು ಜನರು ಗೊಬ್ಬರವನ್ನು ಬಳಸುವದಕ್ಕೆ ಮುಂದೆ ಬರುತ್ತಿದ್ದಾರೆ. ಇದರಿಂದ ರಾಜ್ಯದಲ್ಲಿ ಗೊಬ್ಬರದ ಅಭಾವ ಎದ್ದು ಕಾಣುತ್ತಿದೆ. ಈ ವಿಚಾರಗಳ ನ್ನೆಲ್ಲಾ ಗಮನದಲ್ಲಿಟ್ಟುಕೊಂಡು ತಾವು ಇದನ್ನು ವಿಚಾರ ಮಾಡಿ ಎಂದು ಹೇಳು ತ್ತಿದ್ದೇನೆ. ಆದರೆ ನಮ್ಮ ವಿರೋಧ ಪಕ್ಷದಲ್ಲಿ ಅದರಲ್ಲೂ ಕೆಲವರು ಮಾತ್ರ ಕಂಟ್ರೋಲೇ ಬೇಡ ಎಂದು ಹೇಳುತ್ತಿದ್ದಾರೆ. ಶ್ರೀ ಎಸ್. ಕೆ. ಪಾಟೀಲರು ಅವರು ಹಿಂದೆ ಮಂತ್ರಿಗಳಾಗಿದ್ದಾಗ ೧೯೬೩-೬೪ ರಲ್ಲಿ ಈ ಕಂಟ್ರೋಲನ್ನು ಹಾಕದೆ ಕೈಬಿಟ್ಟಿದ್ದ ರಿಂದ ದೇಶಕ್ಕೆ ಒಳ್ಳೆಯದಾಯಿತೆಂದು ಅವರು ನಿನ್ನೆ ತಮ್ಮ ಒಂದು ಭಾಷಣದಲ್ಲಿ ಹೇಳಿರುವದನ್ನು ನೋಡಿದೆ. ಆದರೆ ಶ್ರೀ ಮುರಾರ್ಜಿ ದೇಸಾಯಿ ಅವರು ಅಧ್ಯಾಟಿ ಯಲ್ಲಿ ಹೇಳದೆ ಅದನ್ನೇ ಸ್ವಲ್ಪ ಬದಲಾಯಿಸಿ ಹೇಳಿದ್ದಾರೆ. ಅವರ ಭಾಷಣದ ಸಾರಾಂಶವನ್ನೂ ಸಹಾ ನಾನು ಹಿಂದೂ ಪತ್ರಿಕೆಯಲ್ಲಿ ಓದಿದ್ದೇನೆ. ಶ್ರೀ ಮುರಾರ್ಜಿ ದೇಸಾಯಿ ಅವರು ಡಿಫಿಸಿಟ್ ಫೈನಾನ್ಸ್ ಇರಲೇಬಾರದೆಂದೇನೂ ಹೇಳಿಲ್ಲ ಅವರೇ ಇದರ ಸೃಷ್ಟಿಕರ್ತರು. ಆದುದರಿಂದ ಇದು ಮೊದಲೂ ಇತ್ತು, ಈಗಲೂ ಇದೆ. ಆದರೆ ಶ್ರೀ ರಾಜಶೇಖರ ಮೂರ್ತಿಯವರಿಗೆ ಈ ವಿಚಾರದಲ್ಲಿ ಮಾತನಾಡುವುದಕ್ಕೆ ಹಕ್ಕೇ ಇಲ್ಲ ಕಾರಣ ಇವರು ಯಾವ ಒಂದು ಪಾರ್ಟಿಯಲ್ಲಿದ್ದಾರೋ ಆ ಪಾರ್ಟಿಯ ಮುಖಂಡರಾದ ಶ್ರೀ ಮುರಾರ್ಜಿಯವರೇ ಇದರ ಸೃಷ್ಟಿಕರ್ತರು. ಇದನ್ನು ಮಾನ್ಯ ರಾಜಶೇಖರ ಮೂರ್ತಿಯವರು ಮರೆತಿದ್ದಾರೆ I am not speaking in defence of non-deficit financial system. Every developing country will be forced to have deficit financial system. I am not apologetic about it. I think you also agree there. ಶ್ರೀಮಾನ್ ರಾಜಶೇಖರ ಮೂರ್ತಿಯವರದು ಏನು ವಾದ ಎಂಬುದೇ ಗೊತ್ತಾಗುವ ದಿಲ್ಲ. ಅದೇನು ಕೋಲ್ಡೋ ವಾರಮ್ಮೋ ಗೊತ್ತಾಗುತ್ತಿಲ್ಲ He is belowing both hot and cold together.

ಶ್ರೀ ಎಚ್. ಎಸ್. ಸಿದ್ದಪ್ಪ.—ಅದು ಲೂಕ್‌ವಾರಂ ಆದದ್ದು.

ಶ್ರೀ ಡಿ. ದೇವರಾಜ ಅರಸು.— ಆಯಿತು ಹಾಗೇ ತಿಳಿದುಕೊಳ್ಳೋಣ. ಈ ಡಿಫಿಸಿಟ್ ಬಡ್ಜೆಟ್ ಇರಲೇಬಾರದೆಂದು ಯಾರು ಎಲ್ಲಿ ಎಂದು ಹೇಳಿದ್ದಾರೆ ಶ್ರೀ ಮುರಾರ್ಜಿ ಅವರಿದ್ದಾಗ ೩೫೦ ಕೋಟಿ ರೂಪಾಯಿ ಡಿಫಿಸಿಟ್ ಇತ್ತು ಈಗ ನಮ್ಮ ಕಾಲದಲ್ಲಿ ಒಂದು ಸಾವಿರ ಕೋಟಿಗೇರಿದೆ ಎಂದು ಅವರು ಒಂದು ಸೆನ್ಸ್ ಆಫ್ ಪ್ರಮೋಷನ್ ಹೇಳುವದಕ್ಕೆ ಹೊರಟಿದ್ದಾರೆ. ಅವರಿಗೆ ಇನ್ನೂ ವಿಚಾರಗಳು ಅಷ್ಟಾಗಿ ಗೊತ್ತಾಗಿಲ್ಲ. ಆದುದರಿಂದ ಮಾನ್ಯ ಸದಸ್ಯರಿಗೆ ಈ ಪ್ರೈಜ್‌ರೈಜ್ ವಿಚಾರದಲ್ಲಿ ಅವರಿಗೆ ಇದರ ಗಂಧವೇ ಗೊತ್ತಿಲ್ಲವೆಂದು ಕಾಣುತ್ತದೆ. ಅವರು ಈಗ ಈ ಬೆಲೆಗಳು ಬಹಳ ಜಾಸ್ತಿಯಾಗಿವೆ ಎಂದು ಹೇಳುವದಕ್ಕೆ ಹೊರಟಿದ್ದಾರೆ. ಈ ಸಂಬಂಧದಲ್ಲಿ ನಾನು ಒಂದು ಅಂಶವನ್ನು ಅಮೇರಿಕನ್ weekly ಮ್ಯಾಗ್ಜೈನಿನಿಂದ ಓದುವುದಕ್ಕೆ ಇಷ್ಟ ಪಡುತ್ತೇನೆ.

(Smt. Winnifred F. Fernandes in the Chair)

The heading of this article is "Prices soar while production increases." This is the bane of your capitalistic system which you are trying your best to advocate here.

Sri M. RAJASHEKARA MURTHY: What is the growth rate and what is the percentage of increased price ?

Sri D. DEVARAJ URS: If you have no idea of economy I can tell you. You are an economist and that is why you are making so many mistakes.

Sri M. S. KRISHNAN: There was also United Nations statistics which say that production increase while prices soar in the capitalist world and when prices are increasing production is coming down in the socialistic countries.

Sri D. DEVARAJ URS: I am coming to that.

ಮಾನ್ಯ ಸದಸ್ಯರು ಅಮೇರಿಕಾದಲ್ಲಿರತಕ್ಕ ರೀಟೇಲರ್ಸ್ ವಿಚಾರವಾಗಿ ಏನೂ ಮಾತನಾಡುತ್ತಾ ಇಲ್ಲ. ಅನೇಕರು ಹೊಟ್ಟೆಗಿಲ್ಲದೆಯೂ ಅಲ್ಲಿದ್ದಾರೆ. ಮನೆಗಳು ಇಲ್ಲದೇ ಇರುವವರೂ ಅಲ್ಲಿ ಇದ್ದಾರೆ. ಎಷ್ಟೋ ಜನ ಹೊಟ್ಟೆಗಿಲ್ಲದೆಯೇ ಸಾಯುತ್ತಾ ಇದ್ದಾರೆ. There are lakhs and lakhs of people without bread. Have you any idea ? If you do not know, I will give you some books. America is the richest country in the world but there are as many poor people there as we have in India.

ಏನೋ ಅವರು ಪರ್‌ಕ್ಯಾಪಿಟಾ ಇನ್‌ಕಂ ಯಾವುದೋ ಇಟ್ಟುಕೊಂಡು ಮಾತನಾಡುತ್ತಿದ್ದಾರೆ ಈಗಿನ ಪರ್‌ಕ್ಯಾಪಿಟಾ ಇನ್‌ಕಂ ತೆಗೆದುಕೊಂಡು ಮಾತನಾಡಲಿ ನಮ್ಮ ಈಗಿನ ಆರ್ಥಿಕ ನೋಟದ ದೃಷ್ಟಿ ದಾರಿ ಬಿಟ್ಟುಹೋಗಿದ್ದಕ್ಕೆ ಹಿಂದಿನ ೨೫ ವರ್ಷಗಳ ಆಡಳಿತದ ಕ್ರಮವೇ ಕಾರಣವೆಂದು ಹೇಳಬಹುದು ಅದರಿಂದಲೇ ಇಷ್ಟು ಈಗ ಅನಾಹುತವಾಗಿದೆ. ಆದರೆ ದೇವರಾಜ ಅರಸ್ ಆಡಳಿತಕ್ಕೆ ಬಂದುದು ಕಾರಣವಲ್ಲ. ಏನೋ ಒಂದು ಇಲ್ಲಿ ಅದನ್ನು ಚರ್ಚೆಮಾಡಬೇಕೆಂದು ನಾನು ಇಲ್ಲಿ ಹೇಳುತ್ತಾ ಇಲ್ಲ ಇದು ಒಂದು ದೊಡ್ಡ ಸರೋವರ, ಸುಮ್ಮನೆ ಹೆಚ್ಚಿಗೆ ಇದರ ಬಗ್ಗೆ ಮಾತನಾಡುವುದು ಬೇಡ. ನನ್ನ ದೃಷ್ಟಿಯಲ್ಲಿ ಸುಮಾರು ೨೫ ವರ್ಷಗಳಿಂದ ದಾರಿ ತಪ್ಪಿಹೋಗಿದೆ. ನಾನು ನೇರವಾಗಿ ಈ ಮಾತನ್ನು ಒಪ್ಪುತ್ತಿದ್ದೇನೆ. ಮಾನ್ಯ ಸದಸ್ಯರು ನೇರವಾಗಿ ಯಾವುದೋ ಅಮೇರಿಕನ್ ಇಕನಾಮಿಸ್ಟ್ಸ್ ಅವರ ಅಡ್ವೈಜ್ ತೆಗೆದುಕೊಂಡು ಈ ರೀತಿಯಾಗಿ ಮಾತನಾಡುತ್ತಿದ್ದಾರೆ. ನಾನು ಮಾನ್ಯ ಸದಸ್ಯರು ಆ ರೀತಿ ಮಾತನಾಡಿದ್ದಾರೆಂದು ಅವರನ್ನು ಅಕ್ಯೂಜ್ ಮಾಡಬೇಕೆಂದು ಇಲ್ಲಿ ಹೇಳುತ್ತಾ

ಇಲ್ಲ. ಅಮೇರಿಕಾದಲ್ಲಿ ಗೋದಿ ಇದೆ. ಒಂದು ಕ್ವಿಂಟಾಲಿಗೆ ೧೩೫-೧೪೦ ರೂ. ಇದೆ. ಅಮೇರಿಕಾ ದೇಶವೇ ಹಿಂದೆ ಒಂದು ಸಾರಿ ರಷ್ಯಾ ದೇಶಕ್ಕೆ ೧೨ ಮಿಲಿಯನ್ ಟನ್ನು ಗಳಷ್ಟು ಗೋದಿಯನ್ನು ಕಳ ಹಿಸಿಕೊಟ್ಟಿತು. ಅಂತಹ ದೇಶದಲ್ಲಿಯೇ ಇವತ್ತು ಅದರ ಬೆಲೆ ವಿಪರೀತವಾಗಿ ಏರುತ್ತಾ ಇದೆ. ಅಲ್ಲಿಯೂ ೧೩೫-೧೪೦ ರೂಪಾಯಿಗಳಷ್ಟು ಒಂದು ಕ್ವಿಂಟಾಲಿಗೆ ಬೆಲೆ ಇದೆಯೆಂದು ಹೇಳದರೆ, ಅದು ಇಂಡಿಯಾ ದೇಶದಲ್ಲಿರುವ ಬೆಲೆಯೇ ಆಯಿತು. ನಾವು ಇರತಕ್ಕ ದೇಶ ಡಿಫಿಸಿಟ್ ಬೆಳೆ ಇರತಕ್ಕಂಥಾದ್ದರಿಂದ, ಸ್ವಲ್ಪಮಟ್ಟಿಗೆ ಈಗ ಅದರ ಬೆಲೆ ಜಾಸ್ತಿಯಾಗುತ್ತಿದೆ. ಸರ್ಪ್ಲಸ್ ಬೆಳೆ ಇರುವಂಥ ಅಮೇರಿಕಾ ದೇಶದಲ್ಲಿ ಈಗ ಏತಕ್ಕೆ ಬೆಲೆ ಜಾಸ್ತಿಯಾಯಿತು ? ಅದಕ್ಕೆ ಮಾನ್ಯ ಸದಸ್ಯರು ಉತ್ತರ ಹೇಳುತ್ತಾರೆಯೇ ?

Sri H. T. KRISHNAPPA.—They can afford to pay that price.

Sri D. DEVARAJ URS.—You too can afford.

Sri M. RAJASHEKHARA MURTHY.— America is surplus with regard to wheat production. Russia and China entered the market and purchased it.

Sri D. DEVARAJ URS.—Why did they go ?

Sri M. RAJASHEKHARA MURTHY.—Socialist countries are going to Capitalist countries for purchasing.

ಶ್ರೀ ಡಿ ದೇವರಾಜ್ ಅರಸ್.—ಮಾನ್ಯ ಸದಸ್ಯರು ಯಾವ ಒಂದು ಆಧಾರದ ಮೇಲೆ ಆ ರೀತಿ ಮಾತನಾಡುವುದಕ್ಕೆ ಹೊರಟಿದ್ದಾರೋ ನನಗೆ ಗೊತ್ತಾಗಲಿಲ್ಲ. ನೀವೂ ಕೂಡ ಇಂಟರ್ ನ್ಯಾಷನಲ್ ಕಂಟ್ರೀಸ್‌ಗೆ ಹೋಗಿ ತಿರುಗಿ ಬಂದಿದ್ದೀರಿ.

ಶ್ರೀ ಎಚ್. ಎಸ್. ಸಿದ್ದಪ್ಪ.—ನಮ್ಮ ಲೀಡರ್ ಇನ್ನೂ ಅಲ್ಲಿಂದ ಬಂದಿಲ್ಲ. ಇನ್ನೂ ತಿರುಗುತ್ತಾ ಇದ್ದಾರೆ

ಶ್ರೀ ಡಿ. ದೇವರಾಜ್ ಅರಸ್.—ನಮ್ಮನ್ನು ಅಮೇರಿಕಾ ದೇಶದವರ ಹಾಗೂ ಇಂಟರ್ ನ್ಯಾಷನಲ್ ಕಂಟ್ರೀಸ್ ಅವರ ಜೊತೆಯಲ್ಲಿ ಹೋಲಿಸುತ್ತಿದ್ದಾರೆ. ನಾನು ಅನೇಕ ದೇಶಗಳನ್ನು ನೋಡಿದ್ದೇನೆ. Because they know capitalists have mopped up and hoarded Russians were wise enough to buy the whole thing from them. If your economy was such, you should not have allowed Russia to buy so much. ಹಿಂದೇ ಏನು ಮಾಡಿದ್ದೀರಿ ಎಂದರೆ, You sent the goods not to help small farmers but to help the big hoarders there.

ಶ್ರೀ ಎಚ್. ಟಿ. ಕೃಷ್ಣಪ್ಪ —ದಯವಿಟ್ಟು ನಮ್ಮ ಮೈಸೂರು ದೇಶದ ವಿಷಯ ವಾಗಿ ಹೇಳಿ.

ಶ್ರೀ ಎಂ. ರಾಜಶೇಖರಮೂರ್ತಿ.—ನನಗೂ ರೈಟ್ ಆಫ್ ರಿಪ್ಲೈ ಇದ್ದಿದ್ದರೆ, ನಾನು ಹೇಳುತ್ತಿದ್ದೆ. Shall I prove it ? If you want, I am going to speak on that.

ಶ್ರೀ ಡಿ. ದೇವರಾಜ್ ಅರಸ.—ಅದಕ್ಕೇನೂ ಬೇಜಾರು ಇಲ್ಲ. ನೀವು ಹೇಳುವದನ್ನೆಲ್ಲಾ ನಾನು ಕೇಳಿದ್ದೇನೆ. ನಿಮ್ಮ ಜೊತೆಯಲ್ಲಿ ಯಾರನ್ನಾದರೂ ಕರೆದುಕೊಂಡು ಬಂದು ನನಗೆ ಹೇಳಿ. ಅದಕ್ಕೇನೂ ಚಿಂತೆಯಿಲ್ಲ ನಿಮಗೆ ಎಲ್ಲಿಯವರೆಗೆ ಇದರ ಬಗ್ಗೆ ವಿಚಾರ ವಿನಿಮಯ ಸರಿಯಾಗಿ ಗೊತ್ತಾಗುವುದಿಲ್ಲವೋ ಅಲ್ಲಿಯ ವರೆಗೂ ನೀವು ಎಷ್ಟು ಜನ ಮಾತನಾಡಿದರೂ ಪ್ರಯೋಜನವಿಲ್ಲ. ಕಮ್ಯುನಿಸ್ಟ ಪಾರ್ಟಿಯವರು ಒಂದು ಮಾತನ್ನು ಹೇಳಿದರು. ಅದಕ್ಕೆ ಕೆಲವು ಸೂತ್ರಗಳು ಬೇಕು. ಯಾವದೇ ವಿಚಾರವನ್ನೇ ಆಗಲಿ ಯಾವ ಸೂತ್ರವೂ ಇಲ್ಲದೆ ಗೊಂಬೆಯಾಡಿಸುವ ಜನ ಅವರು. ಅವರೇ ಒಂದು ಮಾತನ್ನು ಹೇಳಿದರೆ, ಅದನ್ನು ಕೇಳಿ ನನಗೆ ಬಹಳ ಆಶ್ಚರ್ಯವಾಗುತ್ತದೆ. ಸೋಸಿಯಾಲಿಸ್ಟಿಪಾಲಿಸಿಗೂ ಮತ್ತು ಕಂಟ್ರೋಲಿಗೂ ವಿರೋಧವಂತೆ ಎಂಬ ಮಾತನ್ನು ಹೇಳಿದರು. ನಾನು ಇದುವರೆಗೆ ಯಾರ ಬಾಯಲ್ಲಿಯೂ ಆ ಮಾತನ್ನು ಕೇಳಲಿಲ್ಲ. It is a contradiction in terms.

Sri M. S. KRISHNA.- You must permit Sri Rajashekhara Murthy to speak.

ಶ್ರೀ ಡಿ. ದೇವರಾಜ್ ಅರಸ.—ಆ ಒಂದು ವಿಚಾರದಲ್ಲಿ ಬೇಕಾದರೆ ಮಾನ್ಯ ಶ್ರೀ ರಾಜಶೇಖರ ಮೂರ್ತಿಯವರು ಒಂದು ಥೀಸಿಸ್ ಬರೆಯಲಿ.

ಶ್ರೀ ಟಿ. ಆರ್. ಶಾಮಣ್ಣ.—ಮಾನ್ಯ ಮುಖ್ಯಮಂತ್ರಿಗಳಲ್ಲಿ ಒಂದು ವಿನಂತಿ. ನಮ್ಮ ಕಷ್ಟ ಬಗೆಹರಿಸಲಿಕ್ಕೆ ಏನು ಮಾಡುತ್ತೀರಿ ಎಂಬುದನ್ನು ಹೇಳಿ.

ಶ್ರೀ ಡಿ. ದೇವರಾಜ್ ಅರಸ.—ನಿಮ್ಮ ಕಷ್ಟ ಪರಿಹರಿಸಲಿಕ್ಕೆ ತಿಳಿವಳಿಕೆ ಸರಿ ಇಲ್ಲದೆ ಹೋದರೆ ಆಗುತ್ತದೆಯೋ ತಿಳಿವಳಿಕೆ ಇಲ್ಲದೆ ಪರಿಹಾರ ಎಲ್ಲಿ ಬರುತ್ತದೆ? ಆದ್ದರಿಂದ ಮಾನ್ಯ ಸದಸ್ಯರು ಆ ರೀತಿಯಾದಂಥ ಅಭಿಪ್ರಾಯ ಇಟ್ಟುಕೊಂಡಿದ್ದರೆ ಅದು ಸರಿಯಲ್ಲ. ಇನ್ನು ಸೋಷಿಯಾಲಿಸ್ಟ ಕಂಟ್ರಿಗಳಲ್ಲಿ ಅವರು ಸಮಾಜವಾದವನ್ನು ತರುವದಕ್ಕೆ ಇಷ್ಟವಿಲ್ಲವೆಂದು ಹೇಳಿದರೆ ಆ ಮಾತು ಬೇರೆ. ಆದರೆ ಸಮಾಜವಾದವನ್ನು ಸ್ಥಾಪನೆ ಮಾಡಬೇಕಾದರೆ ಕಂಟ್ರೋಲಗಳು ಅಗತ್ಯ. ಇನ್ನೂ ಕೆಲವು ವಿಚಾರಗಳಲ್ಲಿ ಹೆಚ್ಚು ಹೆಚ್ಚಾಗಿ ಕಂಟ್ರೋಲಗಳನ್ನು ಜಾರಿಗೆ ತರಬೇಕಾಗುತ್ತದೆ. ಒಂದು ವೇಳೆ ಈ ಕಂಟ್ರೋಲಗಳನ್ನು ಜಾರಿಗೆ ತರುವಾಗ ನಾವು ಏನಾದರೂ ತಪ್ಪು ಮಾಡಿದ್ದರೆ, ಅದು ಆ ರೀತಿಯಾಗಿ ತಪ್ಪಾಗಲಿಕ್ಕೆ ಕಂಟ್ರೋಲಗಳಿಂದ ಎಂದಲ್ಲ, ನಮ್ಮ ಮೆಷಿನರಿ ಫೇಲ ಆಗಿರಬಹುದು. ಮೆಷಿನರಿ ಫೇಲ ಆದರೆ ಅದಕ್ಕೇನು ಮಾಡಬೇಕೆಂಬುದನ್ನು ನಾವು ಯೋಚನೆ ಮಾಡಬೇಕು. ಆ ತತ್ವವನ್ನೇ ಬಿಟ್ಟು ಅವರು ಈಗ ಏನು ಹೇಳುತ್ತಾರೋ ಅದು ಸರಿಯಾದ ಮಾರ್ಗವಾಗುವುದಿಲ್ಲ.

It would not be a correct approach. ಇದನ್ನು ವಿಚಾರ ಮಾಡುವಾಗ ಅದರಲ್ಲಿಯೂ ಕೆಲವು ವಿಚಾರಗಳಲ್ಲಿ ಕಂಟ್ರೋಲನ್ನು ಅನುಷ್ಠಾನಕ್ಕೆ ತರುವಾಗ ತೊಂದರೆ ಏನಾದರೂ ಆದರೆ, ಅದನ್ನು ಬಿಡಬೇಕೆಂದು ಹೇಳಿದರೆ ಅದರಿಂದೇನೂ ಫಲ ಸಿಗುವದಿಲ್ಲ. ಕಂಟ್ರೋಲನ್ನು ತೆಗೆದುಹಾಕುವುದು ಒಂದೇ ಅಲ್ಲ. ಮೆಷನರಿ ಬಗ್ಗೆಯೂ ಚೆನ್ನಾಗಿ ನೋಡಬೇಕು. ಮೊನ್ನೆ ಸುಮಾರು ೩ ದಿವಸಗಳ ಹಿಂದೆ ಹುಬ್ಬಳ್ಳಿಯಲ್ಲಿ ಚೆಂಬರ ಆಫ್ ಕಾಮರ್ಸನಲ್ಲಿ ವರ್ತಕರು ಸೇರಿ ಯಾರೂ ಹೋಲ್‌ಸೇಲ್ ಟ್ರೇಡ್ ಮಾಡಬೇಡಿ, ಡಿಸ್ಟ್ರಿಕ್ಟ್ ಬ್ಯಾನ್ ತೆಗೆಯಿರಿ, ಲೇವಿ ಹಾಕಬೇಡಿ ಎಂಬುದಾಗಿ ನಿರ್ಣಯ ಮಾಡಿದ್ದಾರಂತೆ. ಇಂದು ಅವರ ಪರವಾಗಿ ಇವರು ಇಲ್ಲಿ ಹೇಳುವುದಕ್ಕೆ ಬಂದಿದ್ದಾರೋ ಏನೋ ಎಂದು ಅನ್ನಿಸಿತು. ಬೆಂಗಳೂರಿನಲ್ಲಿಯೂ ಎಲ್ಲಾ ವರ್ತಕರು ಪ್ರೊಸೆಷನ್ನಿನಲ್ಲಿ ಬಂದು ಇದೇ ರೀತಿಯಲ್ಲಿ ಹೇಳಿದರೆಂದು ಕೆಲವರು ಹೇಳಿದರು. ಆ ಪ್ರೊಸೆಷನ್ನಿಗೆ ಮಾನ್ಯ ಶ್ರೀ ಶಾಮಣ್ಣನವರೂ ಸಹ ಸೇರಿದ್ದರು. ಇವರು ಸಮಯ ಹೇಗೆ ಬಂದರೆ ಹಾಗೆ ಹೋಗುತ್ತಾರೆ. ಅತ್ತಕಡೆಗೂ ಸೇರುತ್ತಾರೆ. ಇತ್ತಕಡೆಗೂ ಸೇರಿಬಿಡುತ್ತಾರೆ.

ಶ್ರೀ ಟಿ. ಆರ್. ಶಾಮಣ್ಣ.—ಈ ಪುರಾಣ ಬೇಕಿಲ್ಲ. ಮೊದಲು ನೀವು ಜನಗಳ ಕಷ್ಟವನ್ನು ಪರಿಹರಿಸಿ.

ಶ್ರೀ ಡಿ. ದೇವರಾಜ್ ಅರಸ.—ನೀವು ಹೇಳುವ ಪುರಾಣವನ್ನು ಕೇಳಿದಮೇಲೆ ನಾನು ಹೇಳುವ ಪುರಾಣವನ್ನು ನೀವೂ ಕೇಳಿ. ಮಾನ್ಯ ಶ್ರೀ ಶಾಮಣ್ಣನವರು ಹೇಳುವುದು ಹೇಗೆಂದರೆ, ಅದನ್ನು ಇಂಗ್ಲಿಷನಲ್ಲಿಹೇಳಿದರೆ ಅವರ ವಾದ ಈ ರೀತಿ ಇರುತ್ತದೆ. Running with the hare and hunting with the hound.

ಮೊದಲಿನಿಂದಲೂ ಮಾನ್ಯ ಶ್ರೀ ಶಾಮಣ್ಣನವರ ವಾದವನ್ನು ನಾನು ಕೇಳುತ್ತಿದ್ದೇನೆ. ಆಯಾ ಸಂದರ್ಭಕ್ಕನುಸಾರವಾಗಿ ಹೇಳುವುದು ಅವರ ಸ್ವಭಾವ. ಸರ್ಕಾರದವರು ಮರ್ಚೆಂಟ್ಸ್‌ಗೆ ಅವಮಾನ ಮಾಡುತ್ತಿದ್ದಾರೆಂದು ಒಂದು ಕಡೆ ಹೇಳುವುದು ಇನ್ನೊಂದು ಕಡೆ ಇವತ್ತು ಆಹಾರ ಕೊರತೆಯಾಗಿದೆಯೆಂದು ಹೇಳುವದು. ಆಹಾರ ಪದಾರ್ಥಗಳ ಬೆಲೆಯನ್ನು ಕೆಳಗೆ ಇಳಿಸದೇ ಹೋದರೆ ಬಹಳ ಕಷ್ಟವೆಂದು ಮತ್ತೊಂದು ಕಡೆ ಹೇಳುವದು. ಇಲ್ಲಿ ರೊಟ್ಟಿ ತಿನ್ನುತ್ತಾ ಇರಬೇಕು. ಅಕ್ಕಿ ಮನೆಯಲ್ಲಿ ಇದ್ದೇ ಇರಬೇಕೆಂದರೆ ಅದು ಆಗುವದಿಲ್ಲ. ನಮಗೆ ಸರಿಯಾದ ಆಹಾರ ಬೇಕೆಂದರೆ, ನಿಜವಾಗಿ ನಮಗೆ ಇನ್ನೊಬ್ಬರ ಮೇಲೆ ಕಂಟ್ರೋಲ ಬೇಕು. ಕಂಟ್ರೋಲ ಹೆಚ್ಚು ಹೆಚ್ಚಾಗಿ ಇಡಲೇಬೇಕು. ಆದರೆ ಮೆಷಿನರಿ ಸರಿಯಾಗಿ ಎಕ್ವಿಪ್ ಆಗಲಿಲ್ಲ, ಅದರಲ್ಲಿ ಲೋಪದೋಷಗಳಿವೆಯೆಂಬುದಾಗಿ ಹೇಳಿದರೆ ಅದನ್ನು ನಾನು ಸ್ವಾಗತ ಮಾಡುತ್ತೇನೆ.

ಶ್ರೀ ಎಚ್. ಎಸ್. ಸಿದ್ದಪ್ಪ —ಮಾನ್ಯ ಶ್ರೀ ಶಾಮಣ್ಣನವರಿಗೆ ಹಲ್ಲು ಬಿದ್ದು ಹೋಗಿದೆ. ಅವರಿಗೆ ರೊಟ್ಟಿ ತಿನ್ನುವದಕ್ಕಾಗುವದಿಲ್ಲ.

ಶ್ರೀ ಡಿ. ದೇವರಾಜ ಅರಸ.— ಅದು ಬೇಡ, ಅನ್ನ ತಿನ್ನಲಿ.

ಆದರೆ ಒಟ್ಟಿನಲ್ಲಿ ನಾನು ಹೇಳುವದಾದರೆ, ಕಂಟ್ರೋಲನ್ನು ನಾವು ಇಡಲೇ ಬೇಕು. ಎಲ್ಲಾ ಜನಗಳಿಗೆ ಸರ್ಕಾರ ಹೇಳುವದು ಒಂದೇ ಮಾತು. ಇದು ಸಿಂಪಲ್ ಲಾಜಿಕ್ ಸರ್ಕಾರ ಈ ಜವಾಬ್ದಾರಿಯನ್ನು ಹೊರಬೇಕೆಂದು ಹೇಳಿದರೆ ನಾನು ಅದನ್ನು ಒಪ್ಪುತ್ತೇನೆ. I can understand one thing. Let it adjust itself. ಇದೆಲ್ಲಾ ಬಿಟ್ಟು ಬಿಡಿ ಎಂದು ಹೇಳಿದರೆ ಹೇಗೆ ? I can understand that is one way of approach. It may be an honest approach. I may differ but you have honest conviction about it. ಜವಾಬ್ದಾರಿ ಇದರ ಬಗ್ಗೆ ನಿಮ್ಮದು ಎಂಬುದಾಗಿ ಹೇಳಿದರೆ ಅದನ್ನು ಒಪ್ಪೋಣ.

ಅವರು ಅದನ್ನು ಒಪ್ಪುವುದಿಲ್ಲ, ಇದನ್ನೂ ಒಪ್ಪುವುದಿಲ್ಲ ಒಂದು ಕಡೆ ಕಂಟ್ರೋಲ್ ಇರಬಾರದು ಎಂದು ಹೇಳುತ್ತಾರೆ. ಇನ್ನೊಂದು ಕಡೆ ಸರ್ಕಾರ ಜವಾಬ್ದಾರಿ ತೆಗೆದುಕೊಳ್ಳಬೇಕು ಎಂದು ಹೇಳುತ್ತಾರೆ ಇದು ಹೇಗೆ ? ಈ ಜಾದು ಮಾಡುವುದು ಹೇಗೆ ?

SRI M. RAJASEKHARA MURTHY.— Control is not the correct solution to the economic problem and the emphasis should be more on production than on controls.

SRI D. DEVARAJ URS.— That is why I quoted from a monthly journal where it is stated that prices soar while production increases. It is not production alone that is the answer. That is the old theory of the capitalistic world; that is not applicable to the conditions of today. Not that I am against production. No man says that there should be no production. So, there should be production and then the question arises how it should be distributed. Should it be left to the private men, to the capitalistic class or should Government think of doing something in the matter ? ಅಮೇರಿಕಾ ದೇಶದಲ್ಲಿ ಹೆಚ್ಚಿಗೆ ಆದಂತಹ ಆಹಾರದ ಉತ್ಪಾದನೆಯನ್ನು ಬೇರೆಯವರಿಗೆ ಹಂಚುತ್ತಾರೆ. ಇಲ್ಲದಿದ್ದರೆ ಅದನ್ನು ತೆಗೆದುಕೊಂಡು ಹೋಗಿ ಸುಟ್ಟು ಹಾಕುತ್ತಾರೆ. ಲಕ್ಷಾಂತರ ಜನ ಹೊಟ್ಟೆಗಿಲ್ಲದೆ ಕಷ್ಟಪಡುತ್ತಿದ್ದಾರೆ. ಇದು ಎಂತಹ ಎಕಾನಮಿ ? ಇದನ್ನು ನೋಡಿಕೊಂಡು ಅವರು ಮಾತನಾಡುತ್ತಿದ್ದಾರೆ. ಅವರು ಇನ್ನೂ ಬಹಳ ವಿಚಾರಗಳನ್ನು ಹೇಳಿದ್ದಾರೆ. ಅದಕ್ಕೆಲ್ಲಾ ಈಗ ಉತ್ತರ ಹೇಳುವ ಸಂದರ್ಭ ಇದು ಅಲ್ಲ. ಪ್ರೊಡಕ್ಷನ್ ಬಗ್ಗೆ ಕೆಲವು ಅಂಕಿ ಅಂಶಗಳನ್ನು ನಾನು ತಮಗೆ ಹೇಳುತ್ತೇನೆ. ಕೆಲವು ಸ್ವಲ್ಪ ಜಾಸ್ತಿಯಾಗಿವೆ. ಕೆಲವು

ಸ್ವಲ್ಪ ಕಡಿಮೆಯಾಗಿವೆ. ಪ್ರೊಡಕ್ಷನ್ ೧೯೭೧–೭೨ ರಲ್ಲಿ ಜಾಸ್ತಿಯಾಗಿದೆ ಹೋದ ವರ್ಷ ಇಂಡಸ್ಟ್ರೀಯಲ್ ಪ್ರೊಡಕ್ಷನ್ ಕೂಡ ೫ ಪರ್ಸೆಂಟ್ ೬ ಪರ್ಸೆಂಟ ಜಾಸ್ತಿಯಾಗಿದೆ. ಇದು ಬರೀ ಪ್ರೈಸೂರಿನ ಅಂಕಿ ಅಂಶಗಳೇ ಅಲ್ಲ. ಆಲ್ ಇಂಡಿಯಾ ಫಿಗರ್ಸ್‌ನಲ್ಲಿ ೭೦ನೇ ಸಾಲಿನದು ತೆಗೆದುಕೊಂಡರೆ ೫೩ ಪರ್ಸೆಂಟ್ ಪ್ರೊಡಕ್ಷನ್ ಜಾಸ್ತಿಯಾಗಿದೆ. ಫರ್ಟಿಲೈಜರ್ಸ್, ಸಿಮೆಂಟ್, ಎಲೆಕ್ಟ್ರಿಸಿಟಿ ಯಾವುದೇ ತೆಗೆದುಕೊಳ್ಳಿ.

The hon. Member is trying to blame this Government or the Central Government. Unfortunately, what has happened is that these very men— I am not talking of poor Rajasekahra Murthy but of the top men who are here and under whose leadership these people are getting inspiration– were responsible for this state of affairs. If the growth is only 5 per cent in the production of electricity, are they not responsible ? Were tney not the planners for nearly two decades ? What were they doing all that time ? Why did they not plan for more power production ?

Sri M. RAJASEKHARA MURTHY.— The hon. Chief Minister was also with them.

ಶ್ರೀ ಡಿ. ದೇವರಾಜ ಅರಸ್.— ನೀವು ಇದ್ದೀರಿ. ನಿಮಗೆ ಯಾವ ರೈಟ್ ಇತ್ತು ಇದು ತಮಗೂ ಗೊತ್ತಿದೆ. ಇಡೀ ಸಭೆಗೂ ಗೊತ್ತಿದೆ.

ಶ್ರೀ ಕೋಣಂದೂರು ಲಿಂಗಪ್ಪ.— ಇಬ್ಬರೂ ಸೇರಿ ಈ ದೇಶವನ್ನು ಈ ಸ್ಥಿತಿಗೆ ತಂದಿಟ್ಟಿದ್ದೀರಿ.

SRI M. S. KRISHNAN.— From the latest available date of industrial production given in the Reserve Bank Bulletin if will be seen that production is increasing; despite that prices are increasing.

Sri D. DEVARAJ URS.– The hon. Member did not quote that because it did not suit him. He has quoted the 1972 figures, according to which the annual growth rate target is 9 percent.

Sri M. RAJASEKHARA MURTHY.— Taking into consideration the production during the 4 years, the annual growth rate is 4.8% and the growth rate in the current year is staggering viz. 0.6% in the first three months.

Sri D. DEVARAJ URS.— Let him wait for some time. He cannot assess the worth of a Government in so short a

period as two years. There was shortfall in the production of electricity everywhere. ಎಲೆಕ್ಟ್ರಿಸಿಟಿ, ಸಿಮೆಂಟ್, ಅಲ್ಯೂಮಿನಿಯಂ ಪ್ರೊಡಕ್ಷನ್ ಕಡಿಮೆ ಆಯಿತು. ಇಂಥಾದ್ದು ಆದರೂ ಕೂಡ ಈಗ ಇಷ್ಟು ಗ್ರೋತ್ ಬಹಳ ಹೆಚ್ಚಾಗಿದೆ. ಎಂದು ನಾನು ಮಾತನಾಡುತ್ತಿಲ್ಲ. ಗ್ರೋತ್ ರೇಟ್ ಇನ್ನೂ ಜಾಸ್ತಿ ಆಗಬೇಕು. ಆದರೆ ಇದಕ್ಕೆ ಈ ಸರ್ಕಾರವೇ ಕಾರಣವಾಗಿದೆ ನಾವು ಜವಾಬ್ದಾರರಲ್ಲ ಎಂದು ಹೇಳಿದರೆ ಗಾಜಿನ ಮನೆಯಲ್ಲಿ ಕುಳಿತುಕೊಂಡು ಕಲ್ಲು ಎಸೆಯುವ ದಕ್ಕೆ ಹೋಗಬೇಡಿ ಎಂದು ನಾನು ಹೇಳುತ್ತೇನೆ.

ಇನ್ನು ನಮ್ಮಲ್ಲಿ ೧೯೭೧, ೧೯೭೨ ನೇ ಸಾಲಿನಲ್ಲಿ ಏನು ಆಹಾರ ಉತ್ಪಾದನೆ ಯಾಗಿದೆ, ೧೯೭೩ ನೇ ಸಾಲಿನಲ್ಲಿ ಎಷ್ಟು ಆಹಾರ ಉತ್ಪಾದನೆ ಆಗಿದೆ ಎನ್ನುವುದನ್ನು ತಾವೆಲ್ಲಾ ನೋಡಿದ್ದೀರಿ. ನಮ್ಮ ರಾಜ್ಯದಲ್ಲಿರತಕ್ಕ ೩ ಕೋಟಿ ಜನಗಳಿಗೆ ನನ್ನ ಲೆಕ್ಕದಲ್ಲಿ ಸುಮಾರು ೨ ಕ್ವಿಂಟಲ್ ಯಾವುದೇ ಆಹಾರಧಾನ್ಯ ಒಬ್ಬ ಮನುಷ್ಯನಿಗೆ ಒಂದು ವರ್ಷಕ್ಕೆ ಬೇಕು ಎಂದು ಎವರೇಜ್ ಲೆಕ್ಕವನ್ನು ಇಟ್ಟುಕೊಂಡರೆ ಈ ಮೂರು ಕೋಟಿ ಜನಗಳಿಗೂ ಒಂದು ವರ್ಷಕ್ಕೆ ೬ ಕೋಟಿ ಕ್ವಿಂಟಲ್ ಆಹಾರಧಾನ್ಯ ಬೇಕಾಗುತ್ತದೆ. ೬ ಕೋಟಿ ಕ್ವಿಂಟಲ್ ಆಹಾರಧಾನ್ಯ ಎಂದರೆ ೬೦ ಲಕ್ಷ ಟನ್ ಆಗುತ್ತದೆ. ೬೦ ಲಕ್ಷ ಟನ್ ಆಹಾರಧಾನ್ಯ ನಮಗೆ ೧೯೭೧–೭೨ ನೇ ಇಸವಿಯಲ್ಲಿ ಬೆಳೆ ಆಗಿತ್ತು. ಇಷ್ಟೊಂದು ಪ್ರಮಾಣದಲ್ಲಿ ಆದಂತಹ ಆಹಾರಧಾನ್ಯಗಳ ಉತ್ಪಾದನೆ ಈ ಸಾಲಿಗೆ ಸಾಕಷ್ಟು ಆಗುತ್ತದೆ ಎನ್ನುವ ತರಹ ಇತ್ತು.

6–30 P. M.

ಈಗ ತಾವು ೧೯೭೨—೭೩ ನೇ ಸಾಲಿನ ಅಂಕಿಅಂಶಗಳನ್ನು ನೋಡಿದ್ದೀರಿ. ೪೯ ಲಕ್ಷ ಟನ್‌ವರೆಗೆ ಉತ್ಪಾದನೆಯಾಗಿದೆ, ಅಂದರೆ ಹಿಂದಿನ ವರ್ಷಕ್ಕೆ ಹೋಲಿಕೆ ಮಾಡಿದರೆ ೧೧ ಲಕ್ಷ ಟನ್ ಕಡಿಮೆಯಾಯಿತು. ಈ ರೀತಿ ಕಡಿಮೆಯಾದ್ದರಿಂದ ಒಬ್ಬರಿಗೆ ೨ ಕ್ವಿಂಟಲ್ ಪ್ರಕಾರ ಕೂಡ ಹಂಚುವುದಕ್ಕಾಗುವುದಿಲ್ಲ. ಈ ರೀತಿ ಉತ್ಪಾದನೆಯೇ ಕಡಿಮೆಯಾಗಿರುವುದರಿಂದ, ಸರ್ಕಾರ ಒದಗಿಸಲಿಲ್ಲ, ಸರ್ಕಾರ ಒದಗಿಸಲಿಲ್ಲ ಎಂದರೆ ಅದು ನನಗೆ ಅರ್ಥವಾಗುವುದಿಲ್ಲ. ನಾವಾದರೂ ಸಹ ಎಲ್ಲಿಂದ ಒದಗಿಸಬೇಕು, ಯಾವ ರೀತಿ ಒದಗಿಸಬೇಕು ಎಂಬ ಬಗ್ಗೆ ಯಾರೂ ಸಹ ಸಲಹೆ ಮಾಡಲಿಲ್ಲ. ನಾವು ನೀವೂ ಸೇರಿಕೊಂಡು ಪ್ರೊಡಕ್ಷನ್ ಜಾಸ್ತಿಯಾಗುವುದಕ್ಕೆ ವ್ಯವಸ್ಥೆ ಮಾಡೋಣ. ಪ್ರೊಡಕ್ಷನ್ ಜಾಸ್ತಿಯಾಯಿತು ಎಂದರೆ, ಈ ತೊಂದರೆಗಳೇ ಇರುವುದಿಲ್ಲ.

ಶ್ರೀ ಎಚ್. ಟಿ. ಕೃಷ್ಣಪ್ಪ.— ಆಹಾರದ ಕೊರತೆ ಇರುವ ಕಾರಣ ಹೊರ ದೇಶಗಳಿಂದ ಆಮದು ಮಾಡಿಕೊಳ್ಳಬೇಕಾಗಿತ್ತು.

ಶ್ರೀ ಡಿ. ದೇವರಾಜ ಅರಸ.— ಇಗಿನ ಟೈಮಿನಲ್ಲಿ ಹೊರಗಡೆಯಿಂದ ತರಿಸಿಕೊಳ್ಳುವುದಕ್ಕೆ ಬೇರೆ ಬೇರೆ ಕಾರಣಗಳಿಂದ ಆಗಲಿಲ್ಲ. ತದನಂತರ ತರಿಸಬೇಕೆಂದು

ಕೇಂದ್ರಸರ್ಕಾರದವರು ಹೇಳುತ್ತಿದ್ದಾರೆ. ಆದರೆ ಅದು ಇದ್ದೂ ಬಂದಿಲ್ಲ. ೨ ಮಿಲಿಯನ್ ಟನ್ ಆಹಾರವನ್ನು ತರಿಸಬೇಕೆಂದು ತೀರ್ಮಾನ ತೆಗೆದುಕೊಂಡಿದ್ದಾರೆ. ಆದರೆ ಅದು ಇನ್ನೂ ಬರುವುದಕ್ಕೆ ಸಾಧ್ಯವಾಗಿಲ್ಲ. ಮುಖ್ಯವಾಗಿ ಕೇಂದ್ರಸರ್ಕಾರದ ನೀತಿಯನ್ನು ನಿರೂಪಣೆ ಮಾಡುವವರು ನಾವಲ್ಲ. ವೈಯಕ್ತಿಕವಾಗಿ ಹೇಳುವುದಾದರೆ ಹೊರ ದೇಶದಿಂದ ಆಹಾರ ಬರುವುದೇ ಬೇಡ. ಏಕೆಂದರೆ ಈ ವರ್ಷದ ಸಾಲಿನಲ್ಲಿ ನಮ್ಮ ದೇಶದಲ್ಲಿಯೇ ಸಾಕಷ್ಟು ಬೆಳೆ ಬರುತ್ತದೆಂಬ ನಿರೀಕ್ಷೆ ಇದೆ. ಈ ಒಂದು ನಿರೀಕ್ಷೆ ನಮ್ಮ ರಾಜ್ಯದಲ್ಲಿಯೂ ಇದೆ ಮತ್ತು ಇಡೀ ಭಾರತ ದೇಶಕ್ಕೇ ಇದೆ. ೬೦ ಲಕ್ಷ ಟನ್ ಆಹಾರವನ್ನು ಈ ವರ್ಷ ರೈತರು ಬೆಳೆದೇ ಬೆಳೆಯುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ.— ಇನ್ನೂ ಜಾಸ್ತಿಯಾಗಬಹುದು.

ಶ್ರೀ ಡಿ. ದೇವರಾಜ ಅರಸ.— ೬೫ ಲಕ್ಷ ಟನ್ ಆದರೂ ಆಗಬಹುದು. ಮಾನ್ಯ ಸದಸ್ಯರು ಹೇಳಿದಂತೆ ಅದಷ್ಟು ಹೆಚ್ಚು ದಾಸ್ತಾನು ಇಟ್ಟುಕೊಳ್ಳುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ ನಾನಾದರೂ ಸಹ ಒಬ್ಬ ರೈತನ ಪರವಾಗಿ ಹೇಳುವುದಾದರೆ, ಇದೇ ಪ್ರೈಸ್ ಪಾಲಿಸಿ ಬಗ್ಗೆಯೇ ಹೇಳುತ್ತೇನೆ; ಹಿಂದಿನ ಸರ್ಕಾರದವರು ಬತ್ತಕ್ಕೆ ಕ್ವಿಂಟಲ್ ಒಂದಕ್ಕೆ ೫೦—೫೨ ರಂತೆ ಸುಮಾರು ೫ ವರ್ಷಗಳ ಕಾಲ ಕೊಟ್ಟುಕೊಂಡು ಬಂದರು. ಆಮೇಲೆ ೫೪ ರೂಪಾಯಿಗಳಿಗೆ ಹೆಚ್ಚಿಸಿದರು. ಆದೇ ನಾವು ಹೋದವರ್ಷ ಇದನ್ನು ೫೮ ಕ್ಕೆ ಹೆಚ್ಚಿಸಿದ್ದೇವೆ ಆದರೆ ಹಿಂದಿನ ಸರ್ಕಾರದವರು ೨ ರೂಪಾಯಿ ಹೆಚ್ಚಿಸಬೇಕಾದರೆ ರೈತರು ಭಗೀರಥ ಪ್ರಯತ್ನ ಮಾಡಬೇಕಾಯಿತು. ಆದ್ದರಿಂದ ಈ ವಿಷಯದಲ್ಲಿ ನಿಮಗೆ ಮಾತನಾಡುವುದಕ್ಕೆ ಅಧಿಕಾರವಿಲ್ಲ ಎಂದು ಹೇಳುತ್ತೇನೆ.

ಶ್ರೀ ಕೆ. ಎಚ್. ಹನುಮೇಗೌಡ.— ಇತರೇ ಪದಾರ್ಥಗಳ ಬೆಲೆಗಳು ಸಹ ಎಷ್ಟು ಹೆಚ್ಚಿವೆ ಎಂಬುದನ್ನು ಹೋಲಿಕೆ ಮಾಡಿ ತಾವು ನೋಡಿದ್ದೀರಾ ?

ಶ್ರೀ ಡಿ. ದೇವರಾಜ ಅರಸ.— ನಿಮಗೆ ಹಿಂದಿನ ಕಥೆ ಗೊತ್ತಿಲ್ಲ, ಮುಂದಿನ ದಾರಿ ಗೊತ್ತಿಲ್ಲ. ಸುಮ್ಮನೆ ತಾವು ಮಾತನಾಡುತ್ತೀರಿ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಇಲ್ಲಿಯವರೆಗೆ ನಿಮ್ಮ ಭಾಷಣವನ್ನು ಕೇಳಿ ನನಗೆ ತೃಪ್ತಿಯಾಯಿತು. ಅದಕ್ಕಾಗಿ ನಿಮಗೆ ಶುಭಾಶಯಗಳನ್ನು ಅರ್ಪಿಸುತ್ತೇನೆ

ನೀನು ರಾಜ, ದೇವರಾಜ, ರಾಜಾಧಿರಾಜ, ರಾಜ ಮಾರ್ತಾಂಡ ತೇಜ,
ನೀ ದೇವರಾಜ. ರಾಜ್ಯದ ಜನತೆಗೆ ನ್ಯಾಯ ಬೆಲೆಯಲ್ಲಿ ಅನ್ನ
ಕೊಡದೆ ಸೋತೆಯಲ್ಲೋ ನೀ ಭೋಜರಾಜ, ನೀನು ದೇವರಾಜ;

ಶ್ರೀ ಡಿ ದೇವರಾಜ ಅರಸ್ — ಅನ್ನ ಕೊಡುತ್ತೇನೆ, ಕುಳಿತುಕೊಳ್ಳಿ. ಆದ್ದರಿಂದ ನಾನು ಹೇಳುವುದೇನೆಂದರೆ, ಈ ಬೆಲೆ ಏರಿಕೆ ವಿಚಾರದಲ್ಲಿ ಮಾತನಾಡುವುದಕ್ಕೆ ಶ್ರೀಮಾನ್ ರಾಜಶೇಖರ ಮೂರ್ತಿಯವರಿಗೆ ಆಗಲಿ, ಅವರ ಪಕ್ಷದವರಿಗೇ ಆಗಲೀ ಅಥವಾ ಎದುರುಪಕ್ಷದ ನಾಯಕರಿಗೇ ಆಗಲಿ, ಯಾವ ಅಧಿಕಾರವೂ ಇಲ್ಲ

ಎಂದು ಹೇಳುತ್ತೇನೆ. ಪ್ರೈಸ್ ಪಾಲಿಸಿ ಬದಲಾವಣೆಯಾಗಬೇಕೆಂದು ಕೆಲವರು ಹೇಳಿದರು. ಇದರಲ್ಲಿ ಫೇಲ್ ಆಗಿರುವವರು ನಾವಲ್ಲ. ಆ ಒಂದು ಪಾಪವನ್ನು ನೀವು ಹೊತ್ತುಕೊಳ್ಳಬೇಕೆಂದು ನಾನು ಹೇಳುವುದಿಲ್ಲ ಈ ಒಂದು ಆಹಾರದ ಇಲಾಖೆಯನ್ನು ಹಿಂದಿನಿಂದ ನೋಡಿಕೊಂಡು ಬಂದಿರುವವರು ಯಾರಿದ್ದಾರೆ. ಅವರೆಲ್ಲರೂ ಈ ಎಲ್ಲ ಪಾಪವನ್ನು ಹೊತ್ತುಕೊಳ್ಳಬೇಕಾಗುತ್ತದೆ. ಈ ಮಾತನ್ನು ನಿಮಗೆ ನಾನು ಹೇಳುತ್ತಿಲ್ಲ; ನಿಮ್ಮ ಪಕ್ಷದ ಪರವಾಗಿ ನೀವು ಮಾತನಾಡಿದ್ದರಿಂದ ....

ಶ್ರೀ ಎಂ. ರಾಜಶೇಖರ ಮೂರ್ತಿ.— ನಾನು ಜನತೆಯ ಪರವಾಗಿ ಮಾತನಾಡಿದ್ದು.

ಶ್ರೀ ಡಿ. ದೇವರಾಜ ಅರಸ್.— ನೀವು ನಿಮ್ಮ ಪಕ್ಷದ ಪರವಾಗಿ ಮಾತನಾಡುತ್ತಿದ್ದೀರಿ. ಅದಕ್ಕಾಗಿ ನಾನು ಈ ಮಾತನ್ನು ಹೇಳಿದ್ದು. ನಿಮ್ಮಂತಹ ಪಾಪಿಗಳು ಇಲ್ಲವೇ ಇಲ್ಲ ಎಂದು.

ಶ್ರೀ ಎಂ. ರಾಜಶೇಖರ ಮೂರ್ತಿ.— ಹಾಗಿದ್ದರೆ ನೀವು ಮಹಾ ಪಾಪಿಗಳು.

ಶ್ರೀ ಎಚ್. ಟಿ. ಕೃಷ್ಣಪ್ಪ.— ಆ ರೀತಿ ತಾವು ಹೇಳುವುದರಿಂದ ಸಮಸ್ಯೆ ಬಗೆಹರಿಯುವುದಿಲ್ಲ. ಇದು ಪಾಪದ ಪ್ರಶ್ನೆಯಲ್ಲ ತಾವು ಮೆರಿಟ್ಸ್ ಮೇಲೆ ಮಾತನಾಡಬೇಕು. ಇಲ್ಲದಿದ್ದರೆ ನೀವೂ ಸಹ ಪಾಪಿಗಳೇ ಎಂದು-ನಾವು ಹೇಳುತ್ತೇವೆ.

ಶ್ರೀ ಡಿ ದೇವರಾಜ ಅರಸ್.— ಈಗಿರುವ ಪ್ರಾಬ್ಲಮ್‌ನ್ನು ಸಾಲ್ವ್ ಮಾಡುವುದಕ್ಕೆ ನಾವು ಹೊರಟದ್ದೇವೆ. ಈ ಒಂದು ಪ್ರಾಬ್ಲಮನ್ನು ಸಾಲ್ವ್ ಮಾಡುತ್ತೇವೆಂಬ ನಂಬಿಕೆ ನಮ್ಮ ಪಕ್ಷಕ್ಕೂ ಇದೆ ಮತ್ತು ಸರ್ಕಾರಕ್ಕೂ ಇದೆ. ಈ ಒಂದು ಎತಕ್ಕೆ ಹೇಳಬೇಕಾಯಿತು ಎಂದರೆ, ಇದೇ ನಮ್ಮ ರಾಜ್ಯದಲ್ಲಿ ಒಂದು ಕ್ವಿಂಟಲ್ ಬತ್ತದ ಬೆಲೆ ೫೨-೫೪ ಇದ್ದಾಗ ಬೇರೆ ರಾಜ್ಯಗಳಲ್ಲಿ ಇದಕ್ಕೂ ಜಾಸ್ತಿ ಕೊಟ್ಟಿದ್ದರು. ಆ ಸಮಯದಲ್ಲಿ ನಮ್ಮ ರಾಜ್ಯದ ರೈತರಿಗೂ ಜಾಸ್ತಿ ಬೆಲೆ ಕೊಡಿ ಎಂದು ತಾವುಗಳು ಎತಕ್ಕೆ ಹೋರಾಟ ಮಾಡಲಿಲ್ಲ ಎಂದು ಕೇಳುತ್ತೇನೆ. ಕೊಡುವುದಕ್ಕೆ ಸಾಧ್ಯವಿರವಿರಲಿಲ್ಲ ಎಂದು ಹೇಳಿದರೆ, ಅದನ್ನು ನಾನು ಒಪ್ಪುವುದಕ್ಕೆ ತಯಾರಿಲ್ಲ. ಬೆಳೆಯುವವರಿಗೆ ಜಾಸ್ತಿ ಬೆಲೆ ಕೊಡುವುದರಲ್ಲಿ ತಪ್ಪೇನೂ ಇಲ್ಲ. ಇಲ್ಲಿಯವರೆಗೆ ಜಾಸ್ತಿ ಬೆಲೆಯನ್ನು ರೈತರಿಗೆ ಕೊಟ್ಟುಕೊಂಡು ಬಂದಿದ್ದರೆ ರೈತರು ಜಾಸ್ತಿ ಬೆಳೆ ಬೆಳೆಯುವುದಕ್ಕೆ ಸಹಾಯಕವಾಗುತ್ತಿತ್ತು. ಮತ್ತು ಅಮೇರಿಕಾ ದೇಶದ ರೈತರಿಗೆ ಒಂದು ಕ್ವಿಂಟಲ್‌ಗೆ ೧೬೦ ರೂಪಾಯಿಯಂತೆ ಕೊಟ್ಟು ಕೊಂಡುಕೊಳ್ಳುವುದು ತಪ್ಪುತ್ತಿತ್ತು. ವೈಯಕ್ತಿಕವಾಗಿ ಹೇಳುವುದಾದರೆ, ಹೊರ ದೇಶಗಳಿಂದ ಆಹಾರವನ್ನು ತರಿಸುವುದಕ್ಕೆ ನನಗೆ ಇಷ್ಟವಿಲ್ಲ. ಅದೇ ದುಡ್ಡನ್ನು ನಮ್ಮ ರೈತರಿಗೇ ಕೊಡೋಣ. ಬೇರೆ ದೇಶದ ರೈತರಿಗೆ ಎತಕ್ಕೆ ಹೆಚ್ಚಿನ ಹಣ ಕೊಡಬೇಕು. ನಮ್ಮ ರೈತರಿಗೆ ಹೆಚ್ಚು ಹಣ ಕೊಟ್ಟು ನಮ್ಮ ಆಹಾರದ ಕೊರತೆಯನ್ನು ನಾವೇ ಬಗೆಹರಿಸಿಕೊಳ್ಳೋಣ. ಬೆಳೆಗಿರುವ ಅಕ್ಕಿಯನ್ನೇ

ಸರಕಾರದವರು ಕೊಡಬೇಕೆಂದು ಬಳಕೆದಾರರನ್ನು ಪ್ರಚೋದನೆ ಮಾಡುವದು ಸರಿಯಿಲ್ಲ. ಷಾರ್ಟ್ ಸೈಟೆಡ್ ಪಾಲಿಸಿ ಅನುಸರಿಸುವದು ಬೇಡ ಮತ್ತು ಪ್ರಚಾರಕ್ಕಾಗಿ ಪ್ರೆಸ್ ಗ್ಯಾಲರಿ ಕಡೆ ನೋಡಿಕೊಂಡು ಮಾತನಾಡುವದು ಬೇಡ. ಅದರಿಂದಲೇ ಈ ಪರಿಸ್ಥಿತಿ ಬಂದಿರುವದು. ಮಾತೆತ್ತಿದರೆ ಇವರು ಕನ್ಸ್ಯೂಮರ್ ವಿಚಾರ ಹೇಳುತ್ತಾರೆ. ಆದರೆ ರೈತರ ವಿಚಾರ ಹೇಳುವದಿಲ್ಲ. ರೈತರಿಗೆ ಮೊದಲಿನಿಂದಲೇ ಹೆಚ್ಚು ಬೆಲೆಯನ್ನು ಕೊಟ್ಟುಕೊಂಡು ಬಂದಿದ್ದರೆ ಅಗ್ರಿಕಲ್ಚರಲ್ ಪ್ರೊಡಕ್ಷನ್ ಜಾಸ್ತಿಯಾಗುತ್ತಿತ್ತು. ಆದರೆ ರೈತರಿಗೆ ಕಡಿಮೆ ಬೆಲೆ ಕೊಟ್ಟುಕೊಂಡು ಬಂದು, ಇವೊತ್ತಿನ ದಿವಸ ಹೆಚ್ಚು ಬೆಳೆ ಬೆಳೆಯಲಿಲ್ಲ, ಪ್ರೊಡಕ್ಷನ್ ಜಾಸ್ತಿಯಾಗಲಿಲ್ಲ ಎಂದು ಹೇಳುವದು ಸರಿಯೋ ಎಂದು ಕೇಳುತ್ತೇನೆ. ನಾವು ಒಂದೂವರೆ ವರ್ಷದಿಂದ ಏನೂ ಮಾಡಲಿಲ್ಲ ಎಂದು ತಾವು ಮಾತನಾಡುವದು ಉಚಿತವಲ್ಲ. ನಾನು ನಮ್ರತೆಯಿಂದ ತಮಗೆ ಹೇಳುತ್ತಿದ್ದೇನೆ, ಏನೆಂದರೆ ಕೇವಲ ಒಂದೂವರೆ ವರ್ಷದಲ್ಲಿ ನಾವು ಹೆಚ್ಚು ಪ್ರಗತಿ ತೋರಿಸುವದಕ್ಕಾಗುವದಿಲ್ಲ, ಇನ್ನೂ ಕೆಲವು ವರ್ಷಗಳಕಾಲ ಬೇಕಾಗುತ್ತದೆ. ಈ ವರ್ಷ ಮಳೆ ಚೆನ್ನಾಗಿ ಆಗಿರುವದರಿಂದ ಮುಂದಿನ ವರ್ಷ ಒಳ್ಳೆಯ ಬೆಳೆ ಸಿಗುತ್ತದೆ. ನಮ್ಮ ರಾಜ್ಯದಲ್ಲಿ ಮಾತ್ರವಲ್ಲ, ಇಡೀ ಭಾರತದೇಶದಲ್ಲಿಯೇ ಮಳೆ ಚೆನ್ನಾಗಿ ಆಗಿರುವದರಿಂದ ಬೆಳೆಯೂ ಚೆನ್ನಾಗಿ ಆಗುತ್ತದೆ. ಆದರೆ ಮುಂದೆ ದೈವ ಪ್ರಕೃತಿ ಯಾವ ರೀತಿ ಇರುತ್ತದೋ ಗೊತ್ತಿಲ್ಲ. ಮಾನ್ಯ ಸದಸ್ಯರು ಕೊಟ್ಟ ಸಲಹೆ ಪ್ರಕಾರ ನಾವು ಸ್ವಲ್ಪಮಟ್ಟಿಗೆ ಹೆಚ್ಚಿನ ಆಹಾರ ಧಾನ್ಯಗಳನ್ನು ದಾಸ್ತಾನು ಮಾಡಲೇ ಬೇಕಾಗಿದೆ. ಕೇಂದ್ರಸರಕಾರದವರು ಮಾಡಬೇಕಾಗುತ್ತದೆ ಮತ್ತು ನಾವೂ ಸಹ ಮಾಡಬೇಕಾಗುತ್ತದೆ. ಲೇವಿ ಜಾಸ್ತಿ ತೆಗೆದುಕೊಳ್ಳುವದಕ್ಕೆ ತಾವು ಪ್ರೋತ್ಸಾಹ ಕೊಡಬೇಕು. ಮಾನ್ಯ ಲಿಂಗಪ್ಪನವರು ತಾವು ರೈತರ ಪರವಾಗಿ ಇದ್ದೇವೆಂದು ಹೇಳಿದರು. ಬಳಕೆದಾರರಿಗೆ ಹೆಚ್ಚು ಆಹಾರವನ್ನು ಒದಗಿಸಬೇಕೆಂದು ಒಂದು ಕಡೆ ಹೇಳುವಾಗ, ಮತ್ತೊಂದು ಕಡೆ ಲೇವಿ ಕೊಡುವದಿಲ್ಲ ಎಂದು ಹೇಳುವದು ಸರಿಯಲ್ಲ.

ಶ್ರೀ ಕೋಣಂದೂರು ಲಿಂಗಪ್ಪ — ೩ ಎಕರೆಗಿಂತ ಕಡಿಮೆ ಜಮೀನು ಇರುವವರ ಹತ್ತಿರ ಲೇವಿ ತೆಗೆದುಕೊಳ್ಳಬೇಡಿ ಎಂದು ನಾನು ಹೇಳಿದ್ದು.

ಶ್ರೀ ಡಿ. ದೇವರಾಜ ಅರಸ್.— ಒಂದು ಎಕರೆ ೩೯ ಗುಂಟೆ ಜಮೀನು ಇರುವವರ ಹತ್ತಿರ ನಾವು ಲೇವಿ ತೆಗೆದುಕೊಳ್ಳುವದಿಲ್ಲ. ಎರಡು ಎಕರೆ ಜಮೀನು ಅದು ಮಳೆನೀರಿನಿಂದ ಸಾಗುವಳಿಯಾಗುತ್ತಿದ್ದರೆ ಒಂದು ಕ್ವಿಂಟಲ್ ಲೇವಿ ಕೊಡಿ ಎಂದು ನಾವು ಕೇಳುತ್ತಿರುವದು. ಅದು ಕೂಡ ಸಾಧ್ಯವಿಲ್ಲ ಎಂದರೆ ಯಾವ ನ್ಯಾಯ ?

ನಾನು ಎಷ್ಟು ಇಲ್ಲಿ ಕೇಳುತ್ತಿರುವದು ಒಂದೇ ಒಂದು ಕ್ವಿಂಟಾಲಿನಷ್ಟು, ಇಷ್ಟನ್ನು ಕೊಡುವುದಕ್ಕಾಗುವುದಿಲ್ಲವೇ ? ನಾವು ಅಂತಹ ದೊಡ್ಡದಾಗಿ ಲೇವಿ ಹಾಕಿರುವುದು ಏನು ಎನ್ನುವುದನ್ನು ನೀವು ಸರಿಯಾಗಿ ವಿಚಾರ ಮಾಡಿದರೆ ಇದರಿಂದ ಯಾರಿಗೂ ಅನ್ಯಾಯವಾಗುವುದಿಲ್ಲ. ನಮ್ಮ ರಾಜ್ಯದಲ್ಲಿ ಹನ್ನೊಂದು ಎಕರೆಗಿಂತ ಮೇಲ್ಪಟ್ಟು

ತರೀ ಜಮೀನು ಉಳ್ಳವರು ಎಂದರೆ: Irrigated land, Rain-fed land, Well-Irrigation, schedule irrigated they are not more than 8-10 thousand people.

ಶ್ರೀ ಎಚ್. ಎಸ್. ಸಿದ್ದಪ್ಪ.—ಇದು ಲ್ಯಾಂಡು ರಿಫಾರಂಸ್ ಪ್ರಕಾರ ಮಾಡಿರುವ ಲೆಕ್ಕಗಳು.

ಶ್ರೀ ಡಿ. ದೇವರಾಜ್ ಅರಸ್.—ಈಗಾಗಲೇ ನೀವು ಎಲ್ಲ ಜಮೀನುಗಳನ್ನು ಹಂಚಿಕೊಂಡು ಬಿಟ್ಟಿದ್ದೀರಿ, ಹೀಗಿರುವಾಗ ಸುಮ್ಮನೆ ಏತಕ್ಕಾಗಿ ಇಲ್ಲಿ ಕೂಗಾಟ ಮಾಡುತ್ತೀರಿ? ಇದರಲ್ಲಿ ಲೆಕ್ಕ ನೋಡಿದರೆ ಸುಮಾರು ಎಂಟು ಇಲ್ಲವೆ ಒಂಬತ್ತು ಸಾವಿರ ಜನ ಬರಬಹುದು. ಇದರಿಂದ ನಾವು ಮಾಡುತ್ತಿರುವುದು ಎಲ್ಲವೂ ಸರಿಯಾಗಿಯೇ ಇದೆ. ಇದರ ಬಗ್ಗೆ ಸ್ವಲ್ಪ ವಿವೇಚನೆ ಮಾಡಬೇಕು, ಇದೊಂದು ನ್ಯಾಷನಲ್ ಪಾಲಿಸಿ ಎನ್ನುವುದನ್ನು ಎಲ್ಲರೂ ಹೇಳಿದರು. ಇಲ್ಲಿ ಒಂದು ಮಾತನ್ನು ಸ್ಪಷ್ಟವಾಗಿ ಹೇಳಬೇಕಾಗಿದೆ.

Let us have a proper understanding all of us. We must not only store for the future; but also we must have enough foodgrains for distribution, in which event we should not come in the way of procuring properly.

For my purpose I have taken only 15 quintals for 150 acres, levy will be 82 or 83 quintals. Let Sri Rajashekhara-murthy tell me if I am wrong, I will stand corrected.

ಹತ್ತು ಎಕರೆಗಳಿಗೆ ಮೇಲ್ಪಟ್ಟು ಇರುವವರಲ್ಲಿ ಮಾತ್ರ ಏಳು ಪಲ್ಲದಷ್ಟು ಲೆವಿ ಕೊಡಬೇಕೆಂದು ನಾವು ಕೇಳುತ್ತಿರುವುದು. ೧೫ ಕ್ವಿಂಟಾಲ್‌ಗಳಷ್ಟು ಬರುತ್ತದೆ. ಸುಮಾರು ೧೫೦ ಎಕರೆಗಳಿರುವವರಿಂದ ೨೨೫ ಕ್ವಿಂಟಾಲ್‌ಗಳಷ್ಟು ಬರಬಹುದು.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಇದರಲ್ಲಿ ಕಾಸ್ಟ್ ಆಫ್ ಕಲ್ಟಿವೇಷನ್ ತಗೆದುಕೊಂಡು ಲೆಕ್ಕ ಹೇಳುತ್ತಿದ್ದೀರಾ?

ಶ್ರೀ ಡಿ. ದೇವರಾಜ್ ಅರಸ್.—ಎಲ್ಲ ಲೆಕ್ಕವನ್ನು ತೆಗೆದುಕೊಂಡೇ ತಮಗೆ ಲೆಕ್ಕ ಕೊಡುತ್ತಿರುವುದು, ಬೆಳೆಯುವವರಿಗೆ ಖರ್ಚು ಸುಮಾರು ೯೦೦ ರೂಪಾಯಿಗಳಷ್ಟು ಬರುತ್ತದೆ

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಇದರ ಖರ್ಚು ಇನ್ನೂ ಜಾಸ್ತಿಯಾಗುತ್ತದೆ.

ಶ್ರೀ ಡಿ. ದೇವರಾಜ್ ಅರಸ್.—ನಾನು ಕೂಡ ೯೦೦ ರೂಪಾಯಿನಂತೆ ಲೆಕ್ಕ ತೆಗೆದುಕೊಂಡೇ ಇಲ್ಲಿ ಹೇಳುತ್ತಿರುವುದು, ಇಷ್ಟು ಖರ್ಚು ಮಾಡಿ ೧೫ ಕ್ವಿಂಟಾಲಿನಷ್ಟು ಬೆಳೆ ತೆಗೆಯದೇ ಇದ್ದರೆ ಅವನು ದಡ್ಡ ರೈತ ಎಂದು ಹೇಳಬೇಕು ಮತ್ತು ಅವನಿಗೆ ವ್ಯವಸಾಯ ಮಾಡಲೂ ಬರುವುದಿಲ್ಲ ಎಂದು ಹೇಳಬೇಕಾಗುತ್ತದೆ. ಸುಮಾರು ಇಪ್ಪತ್ತು ಕ್ವಿಂಟಾಲಿಗಿಂತ ಮೇಲ್ಪಟ್ಟು ಬೆಳೆಯುತ್ತಾರೆ. ಇದಕ್ಕೆ ನಾನು ಉದಾಹರಣೆ

ಯಾಗಿ ಹೇಳುತ್ತಿರುವುದು ೧೫೦ ಎಕರೆಗಳು ಎಂದು ಇಟ್ಟುಕೊಳ್ಳೋಣ, ಎಂದರೆ ಇದರಲ್ಲಿ ಒಟ್ಟು ಬೆಳೆಯ ಆಧಾರದ ಮೇಲೆ ನಾವು ಲೆವಿ ಕೇಳುತ್ತಿರುವುದು ನೋಡಿದರೆ ಸುಮಾರು ೮೨-೮೩ ಕ್ವಿಂಟಾಲ್‍ಗಳಷ್ಟು ಮಾತ್ರ. ಇದರಿಂದ ಯಾರಿಗೂ ತೊಂದರೆ ಯಾಗುವುದಿಲ್ಲ, ಇಲ್ಲಿ ಮಾತ್ರ ಎಲ್ಲರೂ ರೈತನಿಗೆ ಹೆಚ್ಚು ಹೋಗಬೇಕು ಎಂದು ಸುಮ್ಮನೆ ಹೇಳುತ್ತಾರೆಯೇ ವಿನಾ ಇದನ್ನು ಯಾವ ರೀತಿ ಮಾಡಬೇಕು ಎನ್ನುವುದರ ಬಗ್ಗೆ ಯಾರೂ ಇಲ್ಲಿ ಮಾತನಾಡುತ್ತಿಲ್ಲ.

If at all anybody is talking on behalf of the ryots, he is talking on behalf of the ryots who have 10 acres and more and not on behalf of lakhs of people who have less than 10 acres. Therefore, the policy that we have adopted is justifiable and reasonable, and every farmer can easily pay.

Sri H. T. KRISHNAPPA.—Please judge by the results.

Sri D. DEVARAJ URS.—My capacity lies in judging things.

ಮತ್ತೆ ಪ್ರೈಸೆಸ್ ಬಗ್ಗೆ ನಾನು ಹಿಂದೆ ಕೂಡ ಇಲ್ಲಿ ಹೇಳುವಾಗ ರೈತರಿಗೆ ಕೊಡುವ ಪ್ರೈಸ್‍ನ್ನು ಹೆಚ್ಚು ಮಾಡಬೇಕೆಂದು ಹೇಳಿದ್ದುದು ಉಂಟು, ಇದನ್ನು ಕೇಂದ್ರ ಸರಕಾರ ಮೊದಲು ಒಪ್ಪದಿದ್ದರೂ ಅವರ ಮೇಲೆ ನಾವು ಒತ್ತಾಯ ತಂದು ಏರಿಸಲೇ ಬೇಕು ಎಂದು ಪದೇ ಪದೇ ಹೇಳುತ್ತ ಬರುತ್ತಿದ್ದೇವೆ, ಆದರೆ ಇನ್ನೂ ಕೇಂದ್ರ ಸರಕಾರದ ಒಪ್ಪಿಗೆ ನಮಗೆ ಸಿಕ್ಕಿಲ್ಲ, ಅದರಿಂದಾಗಿ ಇದುವರೆಗೂ ನಾವು ೫೮ ರೂಪಾಯಿ ಗಳಿಗಿಂತ ಹೆಚ್ಚಾಗಿ ಕೊಡಲಾಗಲಿಲ್ಲ. ಇಲ್ಲಿ ಇದರ ಬಗ್ಗೆ ಒಂದು ಮಾತನ್ನು ಇಲ್ಲಿ ಹೇಳಿದರೆ ಬಹುಶ. ಇದನ್ನು ಎಲ್ಲರೂ ಒಪ್ಪುತ್ತಾರೆಂದು ಭಾವಿಸಿದ್ದೇನೆ. ನಾವು ಮೊದಲಿನಿಂದಲೂ ಹೆಚ್ಚು ಬೆಲೆ ಕೊಡಬೇಕೆಂದು ಒತ್ತಾಯ ಮಾಡುತ್ತ ಬರುತ್ತಿದ್ದರೂ ಇದುವರೆಗೆ ಕೇಂದ್ರ ಸರಕಾರವೂ ಒಪ್ಪಲಿಲ್ಲ ಮತ್ತು ನಮ್ಮ ವಿರೋಧ ಪಕ್ಷದವರೂ ಕೂಡ ಇದಕ್ಕೆ ಅಡ್ಡಿ ಮಾಡುತ್ತಿದ್ದರು ಮತ್ತು ಇದರ ಬಗ್ಗೆ ರೆಸಲ್ಯೂಷನ್‍ಗಳನ್ನು ಬೇರೆ ಮಾಡಿ ಕಳುಹಿಸುತ್ತಾರೆ, ಆದರೆ ನಾವು ರೈತರಿಗೆ ಹೆಚ್ಚು ಬೆಲೆ ಕೊಡಬೇಕೆಂದು ಹೇಳುತ್ತಿರುವುದು, ಸುಮಾರು ೭೦ ರೂಪಾಯಿಗಳ ವರೆಗೆ ಕೊಡಬೇಕೆಂದು ಇದರ ಬಗ್ಗೆ ಇಲ್ಲಿಯವರೆಗೆ ಬೇರೆ ಯಾವ ಸರಕಾರವೂ ಕೇಂದ್ರದ ಮುಂದೆ ಹೇಳಲಿಲ್ಲ, ನಮ್ಮ ಸರಕಾರ ಒಂದೇ ಅವರ ಮುಂದೆ ಇಷ್ಟು ಬೆಲೆ ಕೊಡಲೇಬೇಕೆಂದು ಒತ್ತಾಯ ಮಾಡುತ್ತಿರುವುದು, ಇದುವರೆಗೆ ಕೇಂದ್ರದವರು ಇಷ್ಟು ಸಪೋರ್ಟ್ ಪ್ರೈಸು ಕೊಡಲು ಒಪ್ಪಿರಲಿಲ್ಲ. ನಾವು ೭೦ ರಿಂದ ೭೫ರ ವರೆಗೆ ಕೊಡಬೇಕಾಗುತ್ತದೆ ಎಂದು ಹೇಳು ತ್ತಲೇ ಬರುತ್ತಿದ್ದೆವು. ಇದಕ್ಕಾಗಿ ಸುಮಾರು ಒಂದು ವರ್ಷದಿಂದ ನಾವು ಒಂದು ರೀತಿಯಾದ ಹೋರಾಟವನ್ನೇ ನಡೆಸಬೇಕಾಗಿ ಬಂತು. ರೈತರಿಗೆ ನಮ್ಮ ಮೈಸೂರು ದೇಶದಲ್ಲಿ ಹೆಚ್ಚು ಬೆಳೆ ಬೆಳೆಯುವ ರೈತರಿಗೆ ಸಪೋರ್ಟ್ ಪ್ರೈಸನ್ನು ಜಾಸ್ತಿ ಕೊಡದೇ ಹೋದರೆ ಅವರು ಹೆಚ್ಚು ಬೆಳೆ ಬೆಳೆಯಲು ಆಗುವುದಿಲ್ಲ ಎಂದು ಹೇಳಿದೆವು. ಮೊದ

ಮೊದಲು ಕೇಂದ್ರದವರು ಇದಕ್ಕೆ ಒಪ್ಪಲಿಲ್ಲ. ಈಚೆಗೆ ದೊಡ್ಡ ಮನಸ್ಸು ಮಾಡಿ ನಮ್ಮ ಸರಕಾರ ಪುನಃ ಒತ್ತಾಯ ಮಾಡಿದಾಗ ಅವರೂ ಇಷ್ಟು ಹೆಚ್ಚು ಬೆಲೆಯನ್ನು ಕೊಡಬಹುದು ಇದಕ್ಕೆ ಅಡ್ಡಿ ಇಲ್ಲ ಎಂದು ತಿಳಿಸಿದ್ದಾರೆ. ಇನ್ನೂ ಅಂತಿಮವಾಗಿ ಯಾವುದೂ ತೀರ್ಮಾನವಾಗಿಲ್ಲ, ಇದರ ಬಗ್ಗೆ ಎಲ್ಲ ರಾಜ್ಯಗಳೊಡನೆಯೂ ಕಲೆತು ಮಾತನಾಡೋಣ ಎಂದು ಹೇಳಿದ್ದಾರೆ, ನನಗೆ ತಿಳಿದಿರುವಂತೆ ಪ್ರಾಯಶಃ ೭೦ರಿಂದ ೭೫ ರೂಪಾಯಿಗಳಿಗಿಂತ ಕಡಿಮೆ ಮಾಡಲಾರರು ಎಂದು ತೋರುತ್ತೆ. ನಾವು ಇದೇ ರೀತಿ ಪ್ರೈಸ್‌ಗಳನ್ನು ಹೆಚ್ಚು ಮಾಡಬೇಕೆಂದು ೧೯೭೧ನೇ ಇಸವಿಯಿಂದಲೂ ಹೇಳುತ್ತಲೇ ಬರುತ್ತಿದ್ದೇವೆ

ಶ್ರೀ ಹೆಚ್. ಟಿ. ಕೃಷ್ಣಪ್ಪ.— ಈ ವಿಚಾರಗಳನ್ನೆಲ್ಲಾ ನಾವು ೧೯೭೭ ರಲ್ಲಿ ಮಾತನಾಡೋಣ ಇಲ್ಲವೆ ೧೯೮೨ ರಲ್ಲಿ ಚುನಾವಣೆ ಬಂದಾಗ ಮಾತನಾಡೋಣ

ಶ್ರೀ ದೇವರಾಜ ಅರಸ.— ನಾನೇನೂ ಇದಕ್ಕೆ ಹೆದರಬೇಕಾಗಿಲ್ಲ ೧೯೭೧ರಲ್ಲಿ ಕೂಡ ಹೇಳುತ್ತ ಬರುತ್ತಿದ್ದೇನೆ. ನಿಮಗೆ ಬೇಕಾದರೆ ಮುಂದೆ ೧೯೭೭ ರಲ್ಲೂ ತೋರಿಸಿಕೊಡುತ್ತೇವೆ. ೧೯೮೨ರಲ್ಲೂ ತೋರಿಸುತ್ತೇವೆ. ನನ್ನ ಮುಂದೆ ಅದರ ಬಗ್ಗೆ ಇಲ್ಲಿ ಹಾಗೆ ಹೇಳಬೇಡಿ. ನಾವು ಏನು ಮಾಡುತ್ತಿದ್ದೇವೆ ಎನ್ನುವುದನ್ನು ತಾವು ಸರಿಯಾಗಿ ತಿಳಿದುಕೊಳ್ಳಿ. ತಾವು ಇಲ್ಲಿ ಪ್ರೈಸಸ್ ಬಗ್ಗೆ ರೂಲ್ಸಗಳನ್ನು ಸ್ವಲ್ಪ ಲಿಬರಲೈಸು ಮಾಡಬೇಕೆಂದು ಹೇಳುವುದು ಕಷ್ಟ. ಪ್ರೈಸಸ್ ಹೆಚ್ಚಾಗಿರುವುದು ನಮ್ಮ ದೇಶದ ಒಂದೇ ಭಾಗದಲ್ಲಿ ಅಲ್ಲ. ಇದರ ಬಗ್ಗೆ ಸಾಮಾನ್ಯ ಜನರಿಗೆ ತಿಳಿಯುವಂತೆ ಹೇಳಬೇಕಾಗಿದೆ. ಇದಕ್ಕಾಗಿ ಮಾನ್ಯ ಅಧ್ಯಕ್ಷರೇ ಸ್ವಲ್ಪ ಹೆಚ್ಚು ವೇಳೆ ತೆಗೆದುಕೊಂಡು ಹೇಳಬೇಕಾಗಿ ಬಂತು. ಈಗಾಗಲೇ ಕೇಂದ್ರ ಸರಕಾರದವರು ಹೆಚ್ಚು ಬೆಲೆಯನ್ನು ರೈತರಿಗೆ ಕೊಡಬೇಕೆಂದು ಇದ್ದಾರೆ. The Union Minister has already stated that it is going to be between Rs. 70/- a d. 75/-; somewhere Rs. 72/- or 73/-... It does not matter. ಇದಕ್ಕಾಗಿ ನಾನು ಹೇಳುವುದು ಇಂತಹ ಪ್ರೈಸಸ್‌ಗಳನ್ನು ಹೆಚ್ಚು ಮಾಡುವುದರಿಂದ ಸ್ವಲ್ಪ ಮಟ್ಟಿಗಾದರೂ ರೈತರ ಆರ್ಥಿಕ ಸ್ಥಿತಿ ಅನುಕೂಲವಾಗಬಹುದು ನಮ್ಮಲ್ಲಿ ಒಂದು ಅಭ್ಯಾಸ ಬಂದು ಬಿಟ್ಟಿದೆ ಅನು ಯಾವಾಗಲೂ ಕನ್‌ಸ್ಯೂಮರುಗಳು ಬೆಲೆ ಜಾಸ್ತಿ ಎಂದು ಹೇಳುತ್ತಿದ್ದಾರೆ ಎಂದು. ಈ ಕನ್‌ಸ್ಯೂಮರುಗಳು ನೆಪದಲ್ಲಿ ಬೆಲೆ ಕಡಿಮೆ ಮಾಡಲು ಹೋದರೆ ರೈತರು ಅವರ ದವಸಗಳನ್ನು ಮಾರುಕಟ್ಟೆಗೆ ತಂದು ಮಾರುವುದಿಲ್ಲ. ಅವರ ಬೆಲೆ ಎಂದು ಹೆಚ್ಚಾಗುತ್ತದೆ ಎಂದು ಕಾಯುತ್ತಾರೆ, ರೈತರಿಗೆ ಒಂದಲ್ಲ ಒಂದು ರೀತಿಯಾದ ಹೊಡೆತ ಇದರಲ್ಲಿ ಬೀಳುತ್ತದೆ. ಇವೆಲ್ಲವನ್ನೂ ಪ್ರತಿ ವರ್ಷವೂ ಸ್ಟಡಿ ಮಾಡಿ ತಿಳಿದುಕೊಳ್ಳಬೇಕು. ನಾವು ಮಾರ್ಕೆಟ್ಟಿನಲ್ಲಿ ಯಾವ ರೀತಿ ಬೆಲೆ ಇರುತ್ತದೆ ಎನ್ನುವುದನ್ನು ಯಾರೂ ಬಾರಾಮೀಟರು ಇಟ್ಟುಕೊಂಡು ಅಳತೆ ಮಾಡುವುದಕ್ಕಾಗುವುದಿಲ್ಲ. ನಾನು ಇದನ್ನು ಸುಮಾರು ೧೯೬೩ ರಿಂದಲೂ

ನೋಡುತ್ತಲೇ ಬರುತ್ತಿದ್ದೇನೆ. ಆಗ ಇದ್ದ ಸರಕಾರದ ಧೋರಣೆ ಸುಮಾರು ೫೦ ರಿಂದ ೫೨ರ ವರೆಗೆ ರೇಟು ಕೊಡಬೇಕೆಂದು ಆಯಿತು, ೧೯೬೭ರಲ್ಲಿ ಕೂಡ ಇದೇ ರೇಟು ಮುಂದುವರಿಯಿತು. ಆಗ ನಾನೂ ಮಂತ್ರಿಯಾಗಿದ್ದೆ. ಸರಕಾರದ ನೀತಿ ಏನು ಎನ್ನುವುದು ನನಗೂ ಗೊತ್ತಿತ್ತು. ಆಗ ನನ್ನ ಬಳಿಗೆ ಕೆಲವರು ರೈತರು ಮಂಡ್ಯ ಹಾಗೂ ಮೈಸೂರುಗಳಿಂದ ಬಂದು ಒಂದು ಅರ್ಜಿ ಕೊಟ್ಟು ಭತ್ತಕ್ಕೆ ೫೨ರಂತೆ ಒಪ್ಪಬೇಕೆಂದು ಮತ್ತು ಸರಕಾರವೇ ಎಲ್ಲವನ್ನೂ ಕೊಂಡುಕೊಳ್ಳಬೇಕೆಂದು ಹೇಳಿದರು. ಇದಕ್ಕೆ ಕಾರಣವೇನು ಎಂದರೆ ರೆಗ್ಯುಲೇಟೆಡ್ ಮಾರ್ಕೆಟ್ಟಿಗೆ ರೈತರು ಬೆಳೆದ ಭತ್ತಕ್ಕೆ ೪೫ಕ್ಕೆ ಮೇಲೆ ಕೊಡುತ್ತಿರಲಿಲ್ಲ. ಇದರಿಂದಾಗಿ ರೈತರಿಗೆ ಕಷ್ಟವಾಗಿದೆ. ಸರಕಾರ ಇದನ್ನು ಕೊಂಡುಕೊಳ್ಳಬೇಕೆಂದು ಕೇಳಿದರು. ಇವನ್ನೆಲ್ಲಾ ನಾವು ಚೆನ್ನಾಗಿ ವಿಚಾರ ಮಾಡಿ ಸರಕಾರದವರು ಸರಿಯಾದ ಪ್ರೈಸನ್ನು ಕೊಟ್ಟು ರೈತರಿಂದ ಕೊಂಡುಕೊಳ್ಳಬೇಕಾಗಬಹುದು. ತಮಗೂ ಇವೆಲ್ಲಾ ಗೊತ್ತಿದೆ.

ಮಾನ್ಯ ಸಭೆ ತಿಳಿದುಕೊಳ್ಳಬೇಕಾದ ಮತ್ತು ಸಭೆಯ ಮುಖಾಂತರ ದೇಶಕ್ಕೆ ತಿಳಿಸತಕ್ಕ ಒಂದು ವಿಚಾರವಿದೆ. ನೂರು ಜನ ರೈತರಲ್ಲಿ ೭೫ ಜನ ರೈತರು ಎಂದರೆ ಮೆಣಸಿನಕಾಯಿ, ಹತ್ತಿ, ರಾಗಿ, ಬತ್ತ ಇವು ಯಾವುದನ್ನೇ ಬೆಳೆಯಲಿ ಒಂದೆರಡು ತಿಂಗಳಲ್ಲಿ ಮಾರಬೇಕು. ಅವರ ಆರ್ಥಿಕ ಪರಿಸ್ಥಿತಿ ಹೇಗಿರುತ್ತದೆಂದರೆ ಬೆಳೆದಂಥ ಪದಾರ್ಥಗಳನ್ನು ಒಂದೆರಡು ತಿಂಗಳಲ್ಲಿ ಮಾರಾಟ ಮಾಡಲೇಬೇಕು. ಪ್ರತಿಯೊಬ್ಬ ರೈತನೂ ಬೇರೊಬ್ಬರಲ್ಲಿ, ಸೊಸೈಟಿಯಲ್ಲಿ, ಅಂಗಡಿಯಲ್ಲಿ ಅಥವಾ ಒಬ್ಬ ಲೇವಾದೇವಿ ಮಾಡುವ ಸಾಹುಕಾರನಲ್ಲಿ ಸಾಲ ಮಾಡಿರುತ್ತಾರೆ. ಕಣ ಆಗುವುದೇ ತಡ ಅವನಿಗೆ ಹಣ ಕೊಟ್ಟಿರುವವರು ಒಂದು ಚೀಲ ಹಾಕಿಕೊಂಡು ಕುಳಿತಿರುತ್ತಾರೆ. ಎಷ್ಟೋ ಸಂದರ್ಭಗಳಲ್ಲಿ ಮೊದಲೇ ಒಂದು ಒಪ್ಪಂದ ಮಾಡಿಕೊಂಡಿರುತ್ತಾರೆ. ರೈತನು ಬೀಜ, ಗೊಬ್ಬರ ಅಥವಾ ಬೇರೆ ವಸ್ತುಗಳಿಗಾಗಿ ಸಾಲ ಮಾಡಲು ಹೋದಾಗ ಇಂಥ ದರಕ್ಕೆ ಸುಗ್ಗಿಯಲ್ಲಿ ಧಾನ್ಯವನ್ನು ಮಾರಾಟ ಮಾಡಬೇಕೆಂದು ಒಪ್ಪಂದ ಮಾಡಿಕೊಂಡು ಆ ರೀತಿ ಬರೆಸಿಕೊಂಡಿರುತ್ತಾನೆ. ಸುಗ್ಗಿಯ ಕಾಲದಲ್ಲಿ ೭೦ ರೂಪಾಯಿ ಪೇಟೆ ಧಾರಣೆ ಇದ್ದರೆ ೫೫ ರೂಪಾಯಿ ದರದಲ್ಲಿ ಇವರು ತೆಗೆದುಕೊಳ್ಳುತ್ತಾರೆ. ದರದಲ್ಲಿ ಕಡಿಮೆ, ತೂಕದಲ್ಲಿ ಸಹ ವ್ಯತ್ಯಾಸ ಮಾಡಿ ಪಡೆದುಕೊಳ್ಳುತ್ತ ಇರುತ್ತಾರೆ. ಹೀಗೆ ಈ ದೇಶದಲ್ಲಿರುವ ೭೫ ಪರ್ಸೆಂಟ್ ಜನರು ಮಾರಿದ್ದಾರೆ ಅವರಿಗೆ ನಾವು ಕೊಡುವ ದರದಿಂದ ಸುಗ್ಗಿಯ ಕಾಲದಲ್ಲಿ ಸಾವುಕಾರರ ಅಥವಾ ವ್ಯಾಪಾರಿಗಳ ಬಾಯಿಗೆ ಸಿಕ್ಕುವುದನ್ನು ತಪ್ಪಿಸಿದಂತೆ ಆಗುತ್ತದೆ ಅಷ್ಟು ಜನರು ಧಾನ್ಯವನ್ನು ಸರ್ಕಾರಕ್ಕೆ ತಂದು ಕೊಡಲು ಸಿದ್ಧ ಎನ್ನುವುದು ಸ್ಪಷ್ಟವಾಗುತ್ತದೆ. ಕೆಲವು ಜನ ರೈತರು ನಮ್ಮಲ್ಲಿ ಬಂದಿದ್ದು ಲೆವಿಗಿಂತ ಹೆಚ್ಚು ಧಾನ್ಯವನ್ನು ಕೊಟ್ಟರೆ ಬೋನಸ್ ಏನಾದರೂ ಕೊಡುತ್ತೀರಾ ಎಂದು ಕೇಳಿದರು. ಹಾಗೇನಾದರೂ ನೀವು ಕೊಟ್ಟರೆ ಬೋನಸ್ ಕೊಡುತ್ತೇನೆಂದು ನಾನು ಅವರಿಗೆ ಹೇಳಿದೆ. ಸರಕಾರಕ್ಕೆ ಇದರಿಂದ ಎರಡು ಕೋಟಿ ರೂಪಾಯಿ ನಷ್ಟ ಹೆಚ್ಚು ಖರ್ಚಾಗುವಹಾದರೂ ಕೊಡುವುದಕ್ಕೆ ಸಿದ್ಧವಾಗಿದ್ದೇವೆ. ಸರ್ಕಾರಕ್ಕೆ ಹೆಚ್ಚು ಹೆಚ್ಚು

ಆಹಾರಧಾನ್ಯ ಬೇಕು. ನಾನು ಈಗಾಗಲೇ ಹೇಳಿದಂತೆ ೭೫ ಪರ್ಸೆಂಟ್ ಜನ ರೈತರಿಗೆ ನಾವು ಕೊಡುವ ದರದಿಂದ ಸಂತೋಷವಾಗಿ ಅವರು ಧಾನ್ಯವನ್ನು ಖಂಡಿತವಾಗಿ ಕೊಡುತ್ತಾರೆ ಎನ್ನುವುದು ನನಗೆ ಸಾಬೀತಾಗಿದೆ. ನನಗೆ ಗೊತ್ತಿದೆ. ಇನ್ನುಳಿದ ೨೫ ಪರ್ಸೆಂಟ್ ಜನರಲ್ಲಿ ಆರು ತಿಂಗಳು ಬಿಟ್ಟು ಪರದಾಟ ಮಾಡುವವರು ಬಹಳ ಜನರಿದ್ದಾರೆ. ಕೇವಲ ಐದಾರು ಪರ್ಸೆಂಟ್ ಜನರು ಮಾತ್ರ ಹಾಗೆಯೇ ಉಳಿಯುತ್ತಾರೆ. ಅವರು ಯಾರು ಎಂದರೆ ದೊಡ್ಡ ದೊಡ್ಡ ರೈತರು, ಹಣವಿರುವವರು, ವ್ಯಾಪಾರಸ್ಥರ ಜೊತೆಯಲ್ಲಿ ಮಿಲ್ ಮಾಲೀಕರ ಜೊತೆಯಲ್ಲಿ ಸ್ನೇಹ ಮಾಡಿಕೊಂಡಿರುವರು. ಯಾವುದೋ ಒಂದು ಕಾಲದಲ್ಲಿ ನಮ್ಮ ದೇಶದಲ್ಲಿ ಬರೀ ವ್ಯಾಪಾರಸ್ಥರು ಮಾತ್ರ ವ್ಯಾಪಾರ ಮಾಡುತ್ತಿದ್ದರು. ಹಳ್ಳಿಯಲ್ಲಿದ್ದ ರೈತರು ವ್ಯಾಪಾರಕ್ಕೆ ಹೋಗುತ್ತಿರಲಿಲ್ಲ. ತಾನು ಹೆಚ್ಚು ಬೆಳೆದುದನ್ನು ಹಳ್ಳಿಯಲ್ಲಿನ ಇತರ ರೈತರಿಗೆ ಸಾಲವಾಗಿ ಕೊಡುತ್ತಿದ್ದ. ಆ ಪದ್ಧತಿ ಹಿಂದೆ ಹಳ್ಳಿಗಳಲ್ಲಿತ್ತು. ಈ ಹೊತ್ತು ಆ ಪದ್ಧತಿ ಹೊರಟು ಹೋಗುತ್ತಿದೆ. ಆದರೆ ಈಗ ಹಳ್ಳಿಯಲ್ಲಿರುವ ದೊಡ್ಡ ರೈತರು ಎಲ್ಲರ ಹತ್ತಿರ ದೋಚಿ ಅವರು ಮರಿ ಸಾಹುಕಾರರು ಸೇಟ್‌ಗಳಾಗುವುದಕ್ಕೆ ಹೊರಟಿದ್ದಾರೆ. ಇಂಥವರು ಐದಾರು ಪರ್ಸೆಂಟ್ ರೈತರಿದ್ದಾರೆ.

ಮಾನ್ಯ ಕೃಷ್ಣಪ್ಪನವರು ಹೇಳಿದರು ಅಂತರ ಜಿಲ್ಲಾ ಸಾಗಾಣಿಕೆಯನ್ನು ತೆಗೆದುಬಿಟ್ಟರೆ ಎಲ್ಲ ಸರಿಹೋಗುತ್ತದೆ ಎಂದು. ನಾನು ಜಿಲ್ಲೆಯಿಂದ ಜಿಲ್ಲೆಗೆ ಇರುವ ನಿರ್ಬಂಧವನ್ನು ತೆಗೆದಿದ್ದರೆ ಬಹುಶಃ ನಾನು ಈ ಸ್ಥಿತಿಯಲ್ಲಿರುವುದಕ್ಕೆ ನನ್ನನ್ನು ಬಿಡುತ್ತಿರಲಿಲ್ಲ. ಜಿಲ್ಲೆಯಿಂದ ಜಿಲ್ಲೆಗೆ ಆಹಾರಧಾನ್ಯಗಳನ್ನು ಸಾಗಿಸುವುದಕ್ಕೆ ಇರುವ ನಿರ್ಬಂಧವನ್ನು ತೆಗೆಯದೆ ಇರುವುದಕ್ಕೆ ಮೂರ್ಖತನವೇನಿಲ್ಲ, ಮೊಂಡುತನದಿಂದ ಏನೂ ಮಾಡುತ್ತಿಲ್ಲ ಈ ನಿರ್ಬಂಧವನ್ನು ತೆಗೆದರೆ ನನಗೇನೂ ಕೋಡು ಕಡಿಮೆಯಾಗುವುದಿಲ್ಲ ಮಾನ್ಯ ಸದಸ್ಯರ ಮನಸ್ಸಿಗೆ ಒಪ್ಪುವಂಥ ಕೆಲವು ವಿಚಾರಗಳನ್ನು ತಿಳಿಸಿದರೆ ನನ್ನ ನಿರ್ಧಾರವನ್ನು ಒಪ್ಪಿಕೊಳ್ಳುತ್ತಾರೆಂದು ಕಾಣುತ್ತದೆ. ದೇಶದಲ್ಲಿ ಏನಾಗಿದೆ ಎನ್ನುವುದನ್ನು ತಿಳಿಯದೆ ಯಾವ ವಿಚಾರವನ್ನೂ ಹೇಳಬಾರದು. ಜಿಲ್ಲೆಯಿಂದ ಜಿಲ್ಲೆಗೆ ಆಹಾರ ಧಾನ್ಯಗಳ ಸಾಗಾಣಿಕೆಯ ಮೇಲಿನ ನಿರ್ಬಂಧವನ್ನು ತೆಗೆದಿದ್ದರೆ ಏನಾಗುತ್ತಿತ್ತು ಎನ್ನುವುದನ್ನು ಹೇಳುತ್ತೇನೆ. ಈಗ ಆಹಾರ ಧಾನ್ಯಗಳ ದಾಸ್ತಾನು ಇರುವುದು ಮಿಲ್ಲುಗಳಲ್ಲಿಲ್ಲ, ಬೆಂಗಳೂರು ನಗರದಲ್ಲಿರುವ ದೊಡ್ಡ ದೊಡ್ಡ ಮಳಿಗೆಗಳಲ್ಲಿ ಎಂದು ಯಾರಾದರೂ ತಿಳಿದುಕೊಂಡಿದ್ದರೆ ತಪ್ಪಾಗುತ್ತದೆ. ಹಳ್ಳಿಯಲ್ಲಿರುವ ಐದಾರು ಪರ್ಸೆಂಟ್ ಜನರು ಇವರುಗಳ ಏಜಂಟರಾಗಿರುತ್ತಾರೆ. ಮಿಲ್ ಮಾಲೀಕರಿಗೆ ಮತ್ತು ಖಾಸಗಿ ಸಗಟು ವ್ಯಾಪಾರ ಮಾಡುವವರಿಗೆ ಮತ್ತು ಈ ರೈತರಿಗೆ ಅನೇಕ ರೀತಿಯಲ್ಲಿ ಸಂಬಂಧವಿರುತ್ತದೆ ಈ ರೈತರು ಇವರುಗಳ ಪರವಾಗಿ ಹಳ್ಳಿಗಳಲ್ಲಿ ದಾಸ್ತಾನುಗಾರರಾಗಿದ್ದಾರೆ.

ಅವರು ಏನು ಮಾತಾಡುತ್ತಾರೆಂದರೆ ಕಡಮೆ ದರದಲ್ಲಿ ಕೊಂಡುಕೊಂಡು ದಾಸ್ತಾನು ಇಟ್ಟಿರುತ್ತಾರೆ. ಒಂದು ಕ್ವಿಂಟಾಲಿಗೆ ೬೦ ರೂಪಾಯಿ, ೮೦ ರೂಪಾಯಿ, ನೂರು ರೂಪಾಯಿ ಹೀಗೆಲ್ಲ ತೆಗೆದುಕೊಂಡು ದಾಸ್ತಾನು ಇಟ್ಟುಕೊಂಡಿರುವವರಿದ್ದಾರೆ

ಅವರು ಎಷ್ಟು ಬೆಲೆಗೆ ಬೇಕಾದರೂ ಮಾರಾಟ ಮಾಡುತ್ತಾರೆ. ಇಂದು ದುರಾಸೆ ತುಟ್ಟತುದಿಗೆ ಮುಟ್ಟಿದೆ. ಈ ದುರಾಸೆಯ ಪರಿಣಾಮವಾಗಿ ಸಮಾಜವನ್ನು ಹಿಂಡುತ್ತಿದ್ದಾರೆ. ಅವರಿಗೆ ೧೫೦ ರೂಪಾಯಿ ಸಾಲದು, ೨೦೦ ರೂಪಾಯಿ ಬೆಲೆಯೂ ಸಾಲದು, ೩೦೦ ರೂಪಾಯಿ ಕೂಡ ಸಾಲದು; ಈ ರೀತಿ ದುರಾಸೆಯಿಂದ ಕೂಡಿದ್ದಾರೆ. ಇವರಿಗೆ ಎಷ್ಟು ಕೊಡಬೇಕು ಸ್ವಾಮಿ? ಈ ಹೊತ್ತು ಮಂಡ್ಯದಲ್ಲಿ ಯಾರ ಹತ್ತಿರವಾದರೂ ೧೨೦ ರೂಪಾಯಿಗೆ ತೆಗೆದುಕೊಂಡು ಬಂದರೆ, ಅದನ್ನು ಬೆಂಗಳೂರಿನಲ್ಲಿ ತಂದು ೩೫೦ ರೂಪಾಯಿಗಳಿಗೆ ಮಾರಬಹುದು ಎನ್ನುವ ಆಸೆ ಇದೆ.

ಶ್ರೀ ಎಚ್. ಟಿ. ಕೃಷ್ಣಪ್ಪ — ಮಂಡ್ಯದಲ್ಲಿ ಒಂದು ಕೆ.ಜಿ. ಅಕ್ಕಿ ಬೆಲೆ ೧–೬೦ ಪೈಸೆ ಇದ್ದಾಗ ಬೆಂಗಳೂರಿನಲ್ಲಿ ೨–೬೦ ರಿಂದ ೨–೭೦ ಪೈಸೆ ವರೆಗೆ ಮಾರಾಟವಾಗುತ್ತಿತ್ತು. ಆದ್ದರಿಂದ ಒಂದು ಜಿಲ್ಲೆಯಿಂದ ಮತ್ತೊಂದು ಜಿಲ್ಲೆಗೆ ನಿರ್ಬಂಧವನ್ನು ಮಾಡುವದಕ್ಕೆ ಏಕೆ ಹೋಗುತ್ತೀರಿ ಎಂದು ನಾನು ಹೇಳಿದೆ.

ಶ್ರೀ ಡಿ ದೇವರಾಜ ಅರಸ್.—ಮಂಡ್ಯದಲ್ಲಿ ಈ ಹೊತ್ತು ಕೊನೇ ಪಕ್ಷ ಒಂದು ಲಕ್ಷ ಒಂದೂವರೆ ಲಕ್ಷ ಟನ್ ಭತ್ತವಿದೆ. ಹಾಗಾದರೆ ಮಂಡ್ಯದಲ್ಲಿ ಏಕೆ ೨–೫೦ ರೂಪಾಯಿಗಳಿಗೆ ಮಾರುವವಕ್ಕೆ ಹೊರಟಿದ್ದಾರೆ? ಮಂಡ್ಯ ಜಿಲ್ಲೆಯವರು ಅಲ್ಲಿಯೇ ಹೆಚ್ಚು ಬೆಲೆಗೆ ಮಾರಾಟ ಮಾಡುತ್ತಿರಬೇಕಾದರೆ ಬೇರೆ ಊರುಗಳ ಜನರ ವಿಚಾರದಲ್ಲಿ ಉದಾರತೆ ಹೇಗೆ ಬರುತ್ತದೆ? ಪರ್ಮಿಟ್ ಮೇಲೆ ಆಹಾರ ಧಾನ್ಯಗಳನ್ನು ಸಾಗಿಸುವಾಗ ಒಂದೇ ಪರ್ಮಿಟ್ ಮೇಲೆ ಎರಡು ಮೂರು ಸಲ ಸಾಗಿಸಿದ್ದಾರೆನ್ನುವದನ್ನು ನಾನು ಒಪ್ಪಿಕೊಳ್ಳುತ್ತೇನೆ. ಎಲ್ಲವನ್ನೂ ನಾನು ಪರ್ಫೆಕ್ಟಾಗಿ ಇಟ್ಟಿದ್ದೇನೆ ಎಂದು ಹೇಳುವಷ್ಟು ಮೂರ್ಖತನ ನನಗಿಲ್ಲ. ಸಾವಿರಾರು ಜನ, ಲಕ್ಷಾಂತರ ಜನರನ್ನು ನಂಬಿ ಕೆಲಸ ಮಾಡುವಾಗ ಎಲ್ಲರೂ ಕಣ್ಣಲ್ಲಿ ಕಣ್ಣಿಟ್ಟು ಸರಿಯಾಗಿ ಕೆಲಸ ಮಾಡಬೇಕಾಗಿದೆ. ನಮ್ಮ ಅಧಿಕಾರಿಗಳು ಮೂರು ನಾಲ್ಕು ದಿವಸಗಳ ಹಿಂದೆ ಬೆಂಗಳೂರಿನಿಂದ ಬೊಂಬಾಯಿಗೆ ಹೋಗುತ್ತಿದ್ದ ಒಂದು ಲಾರಿಯನ್ನು ಹಿಡಿದರು. ಸಣ್ಣ ಸಣ್ಣ ಡೀಲ್‌ವುಡ್ ಪೆಟ್ಟಿಗೆಗಳಲ್ಲಿ ಅಕ್ಕಿಯನ್ನು ತುಂಬಿ ಸಾಗಿಸುತ್ತಿದ್ದುದು ಕಂಡುಬಂತು. ಗೋಣಿ ಚೀಲಗಳಲ್ಲಿ ಸಾಗಿಸಿದರೆ ಗೊತ್ತಾಗುತ್ತದೆ ಎಂದು ಹೀಗೆ ಪೆಟ್ಟಿಗೆಗಳಲ್ಲಿ ಬೇರೆ ಸಾಮಾನು ತುಂಬಿದ್ದಾರೆಂದು ತಿಳಿಯುವಂತೆ ಈ ರೀತಿ ಪೆಟ್ಟಿಗೆಗಳಲ್ಲಿ ಅಕ್ಕಿಯನ್ನು ಸಾಗಿಸುತ್ತಿದ್ದರು. ಚೀಲಗಳಾದರೆ ಅದರಲ್ಲಿ ಏನಿದೆ ಎಂದು ಸಕ್ಕರಗುತ್ತಿ ಹಾಕಿ ನೋಡುವದಕ್ಕಾಗುತ್ತದೆ. ಪೆಟ್ಟಿಗೆಗಳಲ್ಲಿ ಹಾಕಿದರೆ ಸಾಮಾನ್ಯವಾಗಿ ಯಾರಿಗೂ ಗೊತ್ತಾಗುವದಿಲ್ಲ. ಹೀಗೆ ಸಾಗಾಣಿಕೆಯಾಗುತ್ತಿದ್ದ ಲಾರಿಯನ್ನು ಹಿಡಿದಿದ್ದಾರೆ ಏಕೆ ಹೀಗೆ ಮಾಡುತ್ತಾರೆಂದರೆ ಒಂದು ಲಾರಿಯನ್ನು ಸಾಗಿಸಿದರೆ ೨೫ ಸಾವಿರ ರೂಪಾಯಿ ಲಾಭ ಸಿಕ್ಕುತ್ತದೆ ಹೀಗಿರುವಾಗ ತಾವು ಯೋಚನೆಮಾಡಿ, ನಾನೇನಾದರೂ ಜಿಲ್ಲೆಯಿಂದ ಜಿಲ್ಲೆಗೆ ಹೋಗಲು ಇರುವ ನಿರ್ಬಂಧವನ್ನು ತೆಗೆದಿದ್ದರೆ ಏನಾಗುತ್ತಿತ್ತು? ನಮ್ಮ ರಾಜ್ಯದಲ್ಲಿರುವ ಅಕ್ಕಿ ಎಲ್ಲಾ ಎರಡೇ ದಿವಸದಲ್ಲಿ ಹೊರಗೆ ಬರುತ್ತದೆ. ೭೫ ಪರ್ಸೆಂಟ್ ಜನ ರೈತರಲ್ಲಿ ಭತ್ತವಿಲ್ಲ ಹಾಗಿದ್ದರೆ ಯಾರಿಗೋಸ್ಕರ

ಶ್ರೀ ಕೆ. ಎಚ್. ಹನುಮೇಗೌಡ.— ರೈತರಿಗೆ ಫೌಂಡೇಷನ್ ಸೀಡ್ಸ ಕೊಡುವಾಗ ಪ್ರೋಸೆಸಿಂಗ್ ಮಾಡಿ ಕೆಮಿಕಲ್ ಟ್ರೀಟ್‌ಮೆಂಟ್ ಮಾಡಿರುವ ಬೀಜಗಳನ್ನು ಕೊಡದೇ ಇರುವುದರಿಂದ ರೈತರಿಗೆ ತೊಂದರೆಯಾದೆ ಇದಕ್ಕೆ ಮೂಲ ಕಾರಣ ದೇಶದಲ್ಲಿ ಹೆಚ್ಚು ಪ್ರೋಸಿಂಗ್ ಸೆಂಟರುಗಳು ಇಲ್ಲದೇ ಇರುವುದು. ಇದರಿಂದಾಗಿ ಎಲ್ಲಾ ರೈತರಿಗೂ ಪ್ರೋಸೆಸ್‌ಸಿಂಗ್ ಸೀಡ್ಸ್ ಕೊಡುವುದು ಕಷ್ಟವಾಗುತ್ತದೆ. ಈ ದೃಷ್ಟಿಯಿಂದ ಸರ್ಕಾರದವರು ಕನಿಷ್ಟಪಕ್ಷ ಜಿಲ್ಲೆಗೆ ಒಂದರಂತೆ ಆವರೂ ಪ್ರೊಸಸಿಂಗ್ ಸೆಂಟರನ್ನು ಸರ್ಕಾರದ ವತಿಯಿಂದ ತೆಗೆದು ಬೀಜಗಳನ್ನು ಪ್ರೋಸಸ್ ಮಾಡಿ ಕೆಮಿಕಲ್ ಟ್ರೀಟ್ ಮಾಡಿ ರೈತರಿಗೆ ಹಂಚುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ.— ಎಲ್ಲೆಲ್ಲಿ ಇಂಥಾ ಪ್ರೊಸಸಿಂಗ್ ಸೆಂಟರನ್ನು ತೆಗೆಯುವುದು ಅವಶ್ಯಕತೆ ಇದೆ ಅಲ್ಲೆಲ್ಲಾ ಅವುಗಳನ್ನು ತೆರೆಯುವುದು ಸರ್ಕಾರದ ಉದ್ದೇಶವಾಗಿದೆ. ಈ ಬೀಜಗಳನ್ನು ಹೆಚ್ಚು ಸರ್ಕಾರಿ ಫಾರಂಗಳಲ್ಲಿಯೇ ಬೆಳೆದು ರೈತರಿಗೆ ಹಂಚಬೇಕು ಎಂದು ಸರ್ಕಾರದ ಯೋಚನೆ ಇದೆ.

ಶ್ರೀ ಕೆ. ಎಚ್. ಹನುಮೇಗೌಡ.— ಸರ್ಕಾರದ ಫಾರಂಗಳಲ್ಲಿ ಉತ್ಪತ್ತಿ ಮಾಡಿರತಕ್ಕ ಬೀಜಗಳು ಸರಿಯಾಗಿಲ್ಲ ಎಂದು ಕಂಪ್ಲೆಂಟ್ ಬಂದಿದೆ ಎಂದು ಕೇಳಿದ್ದೇನೆ. ಅಂತಾ ಕಂಪ್ಲೆಂಟ್‌ಗಳು ಯಾವ ಯಾವ ಫಾರಂಗಳಿಂದ ಬಂದಿದೆ. ಅದನ್ನು ಸರಿಪಡಿಸುವುದಕ್ಕೆ ಸರ್ಕಾರದವರು ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಕೆ. ಎಚ್. ಪಾಟೀಲ— ಬೀಜಗಳ ವಿತರಣೆಯ ಕ್ರಮದಲ್ಲಿ ಕೆಲವು ಲೋಪದೋಷಗಳು ಆಗಿವೆ ಎಂದು ದೂರು ಬಂದಿದೆಯೇ ಹೊರತು ಸರ್ಕಾರಿ ಫಾರಂಗಳಲ್ಲಿ ಉತ್ಪಾದನೆ ಮಾಡತಕ್ಕ ಬೀಜಗಳು ಸಮರ್ಪಕವಾಗಿಲ್ಲ ಎಂಬ ದೂರು ಬಂದಿಲ್ಲ. ಆದ್ದರಿಂದ ಮುಂದಿನ ವರ್ಷದಿಂದ ಬೀಜಗಳ ವಿತರಣೆಯ ಸರಿಯಾದ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಶ್ರೀ ಕೆ. ಎಚ್. ಹನುಮೇಗೌಡ — ಹಾಸನ ರೈತರಿಗೆ ಸೀಡ್‌ಪ್ರೋಸಸಿಂಗ್ ಸೆಂಟರು ಇಲ್ಲದೆ ಅನಾನುಕೂಲವಾಗಿದೆ. ಆದ್ದರಿಂದ ಅಲ್ಲಿಗೆ ಒಂದು ಸೀಡ್ ಪ್ರೊಸಸಿಂಗ್ ಸೆಂಟರನ್ನು ಕೊಡಬೇಕೆಂದು ಅಲ್ಲಿನ ರೈತರು ಬಹಳ ವರ್ಷಗಳಿಂದ

†Indicates that remarks or speeches have not been revised by the member concerned.

ಒತ್ತಾಯ ಮಾಡುತ್ತಿದ್ದಾರೆ. ಆದ್ದರಿಂದ ಈ ವರ್ಷವಾದರೂ ಹಾಸನಕ್ಕೆ ಒಂದು ಸೀಡ್ ಪ್ರೋಸೆಸಿಂಗ ಸೆಂಟರನ್ನು ಕೊಡುವುದನ್ನು ಪರ್ಯಾಲೋಚನೆ ಮಾಡುತ್ತೀರಾ?

ಶ್ರೀ ಕೆ. ಎಚ್. ಪಾಟೀಲ.— ಅದು ಅಲ್ಲಿ ಅವಶ್ಯ ಇದ್ದರೆ ಮಾನ್ಯ ಸದಸ್ಯರ ಅಭಿಪ್ರಾಯವನ್ನು ಪರಿಶೀಲಿಸುತ್ತೇವೆ.

DISTRIBUTION OF CULTIVABLE LANDS IN DAVANAGERE TALUK

371 Smt. NAGAMMA C. KESHAVAMURTHY (Davanagere).-

Will the Minister for Revenue be pleased to state:—

(a) the number of acres of cultivable land available for distribution in Davanagere Taluk ;

(b) the action taken to distribute such land to the landless people in this Taluk ;

(c) the procedure followed for distribution of such land ?

Sri N. HUTCHMASTHY GOWDA (Minister for Revenue).—

(a) 596 acres and 7 guntas as on 1st July 1973.

(b) All the applications have been placed before the Taluk Land Grant Consultative Committee. Orders will issue only after receipt of recommendations of the Committee by the Tahsildar.

(c) After receipt of application, due enquiries will be made and records built up as per Rules 4, 5 and 6 of Mysore Land Grant Rules, 1969 and the applications will be placed before the Taluk Land Grant Consultative Committee. The reconmend tions of the Committee will be ordinarilly accepted by the competent sanctioning authority.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ದಾವಣಗೆರೆ ತಾಲೂಕಿನಲ್ಲಿ ಸಾಗುವಳಿಗೆ ಯೋಗ್ಯವಾದ ಜಮೀನು ಕೊಡುವ ಸಂಬಂಧದಲ್ಲಿ ಎಷ್ಟು ಅಪ್ಲಿಕೇಷನ್‌ಗಳು ಶಿಫಾರಸ್ಸಾಗಿ ಬಂದಿವೆ, ಎಷ್ಟು ಅಪ್ಲಿಕೇಷನ್‌ಗಳಿಗೆ ಆರ್ಡರ್ ಇಷ್ಯೂ ಮಾಡಿದ್ದೀರಿ ?

†ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅಲ್ಲಿ ೧೦೫೦ ಎಕರೆ ೧ ಗುಂಟೆ ಜಮೀನು ಇದೆ. ಅಲ್ಲಿ ಒಂದು ವರ್ಷದಲ್ಲಿ ೪೭೬ ಎಕರೆ ೩೨ ಗುಂಟೆ ಜಮೀನನ್ನು ರೈತರಿಗೆ ಮಂಜೂರು ಮಾಡಿದೆ. ಅದರಲ್ಲಿ ಬಹುತೇಕ ಕಮೀಟಿಯವರ ಶಿಫಾರಸನ್ನು ಒಪ್ಪಿಕೊಂಡು ಅದರ ಮೇಲೆ ಸಾಗುವಳಿ ಚೀಟಿಯನ್ನು ಕೊಟ್ಟಿದ್ದಾರೆ.

ಶ್ರೀಮತಿ ನಾಗಮ್ಮ ಸಿ ಕೇಶವಮೂರ್ತಿ — ಈಗ ತಾವು ಜಮೀನು ಮಂಜೂರಾತಿಯ ಸಮಾಲೋಚನಾ ಸಮಿತಿಯ ಸಿಫಾರಸಿನ ಮೇಲೆ ಅಲ್ಲಿ ಜಮೀನು ಮಂಜೂರು ಮಾಡಿ ಸಾಗುವಳಿ ಚೀಟ್ ಕೊಟ್ಟಿದ್ದೇವೆ ಎಂದು ಹೇಳಿದಿರಿ; ಹಾಗಾದರೆ ಎಷ್ಟು ಜನಗಳಿಗೆ ಅಲ್ಲಿ ಜಮೀನನ್ನು ಮಂಜೂರು ಮಾಡಿದ್ದೀರಿ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಎಷ್ಟು ಜನಗಳಿಗೆ ಮಂಜೂರಾಗಿದೆ ಎನ್ನುವ ಅಂಕಿ ಅಂಶಗಳು ಈಗ ನನ್ನಲ್ಲಿ ಇಲ್ಲ. ಅಲ್ಲಿ ಎಷ್ಟು ಎಕರೆ ಜಮೀನು ಮಂಜೂರಾಗಿದೆ ಎನ್ನುವುದನ್ನು ನಾನು ಈಗಾಗಲೇ ಹೇಳಿದ್ದೇನೆ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ಈಗ ಸಾಗುವಳಿಗೆ ಯೋಗ್ಯವಾದ ಜಮೀನನ್ನು ಸರ್ಕಾರದವರು ರೈತರಿಗೆ ಏನು ಮಂಜೂರು ಮಾಡುತ್ತಾರೆ ಅದಕ್ಕೆ ಆದಷ್ಟು ಕಡಿಮೆ ರೇಟನ್ನು ನಿಗದಿ ಮಾಡುವುದಕ್ಕೆ ಆದೇಶ ಕೊಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸರ್ಕಾರದವರು ೪–೫ ವರ್ಷಗಳ ಹಿಂದೆ ಯಾವಯಾವ ತಾಲೂಕಿನಲ್ಲಿ ಖುಷ್ಕಿ ಜಮೀನಿನ ಬೆಲೆ ಎಷ್ಟು, ತರೀ ಜಮೀನಿನ ಬೆಲೆ ಎಷ್ಟು ಎಂಬುದನ್ನು ತರಿಸಿ ಅದರ ಆಧಾರದ ಮೇಲೆ ಆ ಜಮೀನಿನ ಬೆಲೆಯನ್ನು ನಿಗದಿ ಮಾಡಲಾಗುತ್ತಿದೆ. ಅದನ್ನು ಇನ್ನೂ ಬದಲಾವಣೆ ಮಾಡಿಲ್ಲ. ೪–೫ ವರ್ಷಗಳ ಹಿಂದೆ ಇದ್ದ ಪರಿಸ್ಥಿತಿಗೂ ಈಗಿನ ಪರಿಸ್ಥಿತಿಗೂ ವ್ಯತ್ಯಾಸ ಇದೆ. ಈಗ ಜಮೀನಿನ ಬೆಲೆ ಜಾಸ್ತಿಯಾಗಿದೆ ಎಂಬುದು ಮಾನ್ಯ ಸದಸ್ಯರಿಗೆ ಗೊತ್ತಿರುವುದರಿಂದ ಅದನ್ನು ಕಡಿಮೆ ಮಾಡತಕ್ಕ ಅಭಿಪ್ರಾಯ ಸರ್ಕಾರಕ್ಕೆ ಸದ್ಯಕ್ಕೆ ಇಲ್ಲ.

UNAUTHORISED CULTIVATION OF GOMAL LANDS IN DAVANAGERE TALUK

374. Smt. NAGAMMA C. KESHAVA MURTHY (Davanagare).—Will the Minister for Revenue be pleased to state:—

(a) the extent of gomal land under unauthorised cultivation in Davanagere Taluk ;

(b) the steps taken to evict persons form cultivating the above gomal lands ;

(c) the extent of land available in Davanagere taluk for the distribution to the landless agriculturists ?

Sri N. HUTCHAMASTHY GOWDA (Minister for Revenue).—

(a) 696 Acres 35 Guntas.

(b) T. T. proceedings have been taken.

(c) 596 Acres 7 Guntas as on 7th July 1973.

ಈ ಪ್ರಶ್ನೆಗೆ ಕೊಟ್ಟಿರುವ ಉತ್ತರದಲ್ಲಿ (ಇ)ನಲ್ಲಿ ೭-೭-೧೯೭೩ ಎಂದು ಕೊಟ್ಟಿರುವುದನ್ನು ೧-೭-೧೯೭೧ ಎಂದು ತಿದ್ದುಪಡಿ ಮಾಡಿಕೊಳ್ಳಬೇಕು.

†ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ದಾವಣಗೆರೆ ತಾಲೂಕಿನಲ್ಲಿ ಗೋಮಾಳದ ಜಮೀನನ್ನು ಅಕ್ರಮವಾಗಿ ಎಷ್ಟು ಜನ ಸಾಗುವಳಿ ಮಾಡುತ್ತಿದ್ದಾರೆ. ಆ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕಾರ್ಯಕ್ರಮಗಳು ಏನು? ಆ ಜಮೀನನ್ನು ಅವರಿಗೆ ಕೊಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆ ವಿವರವನ್ನು ಪೂರ್ಣವಾಗಿ ಇನ್ನೂ ಸಂಗ್ರಹಿಸಿಲ್ಲ ಅಕ್ರಮವಾಗಿ ಸಾಗುವಳಿ ಮಾಡಿದವರು ಸಾಕಷ್ಟು ಹಿಡುವಳಿದಾರರಾಗಿದ್ದರೆ ಅಂಥವರನ್ನು ಭೂಮಿಯಿಂದ ಉಚ್ಚಾಟನೆ ಮಾಡಬೇಕೆಂದು ಅಧಿಕಾರಿಗಳಿಗೆ ಆದೇಶ ನೀಡಲಾಗಿದೆ. ಅವರು ಜಮೀನನ್ನು ಅಕ್ರಮವಾಗಿ ಸಾಗುವಳಿ ಮಾಡುತ್ತಿದ್ದಾರೆ ಎಂದು ಸರ್ಕಾರದ ಗಮನಕ್ಕೆ ಬಂದ ಕೂಡಲೇ ಆ ಬಗ್ಗೆ ಕ್ರಮ ತೆಗೆದುಕೊಂಡು ಯಾವ ಯಾವ ಜಮೀನು ಅಕ್ರಮವಾಗಿ ಸಾಗುವಳಿ ಮಾಡುತ್ತಿದ್ದಾರೆ, ಆ ಜಮೀನನ್ನು ಸಾಗುವಳಿ ಮಾಡತಕ್ಕವರಿಗೇ ಕೊಡಬೇಕೇ ಅಥವಾ ಕೊಡಬಾರದೇ ಎನ್ನುವ ವಿಚಾರದಲ್ಲಿ ನಿಯಮಗಳ ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೊಣಂದೂರ ಲಿಂಗಪ್ಪ.—ದಾವಣಗೆರೆ ತಾಲೂಕಿನ ಕಾಡಜ್ಜಿ ಗ್ರಾಮದ ಭೂಹೀನ-ರೈತರು ಈ ಜಮೀನನ್ನು ತಮಗೆ ಕೊಡಬೇಕೆಂದು ಚಳುವಳಿ ನಡೆಸಿದಾಗ, ತಾವು ಸ್ಥಳದ ಪರಿಶೀಲನೆ ಮಾಡಿ ಅದನ್ನು ಅವರಿಗೇ ಕೊಡಬೇಕೆಂದು ಇತ್ಯರ್ಥ ಮಾಡಿರುವುದು ನಿಜವೇ ? ಈ ರೀತಿ ಇತ್ಯರ್ಥ ಮಾಡಿದ್ದರೂ ಸಹ ಅವರಿಗೆ ಇಲ್ಲಿಯವರೆಗೆ ಸಾಗುವಳಿ ಚೀಟಿಯನ್ನು ಕೊಡದಿರುವುದಕ್ಕೆ ಕಾರಣವೇನು ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ಆ ಜಮೀನನ್ನು ತೋಟಗಾರಿಕೆ ಇಲಾಖೆಗೆ ಫಾರಂ ಮಾಡಲು ಕೊಡಲಾಗಿದೆ. ನಾನು ಮೊನ್ನೆ ದಾವಣಗೆರೆಗೆ ಹೋಗಿದ್ದಾಗ ಶ್ರೀಮಾನ್ ಲಿಂಗಪ್ಪನವರ ಪಕ್ಷದವರು ಮತ್ತು ಕೆಲವು ಹರಿಜನರು ನನ್ನ ಬಳಿ ಬಂದು ಆ ಜಮೀನನ್ನು ಬಹಳ ವರ್ಷಗಳಿಂದ ತಾವು ಸಾಗುವಳಿ ಮಾಡುತ್ತಿರುವುದರಿಂದ ತಮಗೆ ಕೊಡಬೇಕೆಂದು ಕೇಳಿದರು. ಆಗ ನಾನು ಸಂಬಂಧಪಟ್ಟ ಮಂತ್ರಿಗಳ ಹತ್ತಿರ ಸಮಾಲೋಚನೆ ಮಾಡುವುದಾಗಿ ಹೇಳಿದೆ. ಅದರಂತೆ ಈಗ ಅದು ಯಾವ ಹಂತದಲ್ಲಿದೆ, ಅದನ್ನು ಅವರಿಗೆ ಕೊಡುವುದಕ್ಕೆ ಸಾಧ್ಯವಿದೆಯೋ ಎಂಬುದನ್ನು ಪರಿಶೀಲನೆ ಮಾಡುತ್ತೇನೆಂಬುದನ್ನು ಮಾತ್ರ ಈ ದಿವಸ ಹೇಳುವುದಕ್ಕೆ ಸಾಧ್ಯ.

ಶ್ರೀ ಎಸ್. ಜಿ. ಹಾಲಪ್ಪ.—ನನಗೆ ತಿಳಿದಿರುವಂತೆ ಈ ೬೯೬ ಎಕರೆ ೩೫ ಗುಂಟೆ ಜಮೀನನ್ನು ಅಕ್ರಮ ಸಾಗುವಳಿ ಮಾಡಿರುವವರು ಬಹಳ ಬಲಿಷ್ಠರಾದವರು ಮತ್ತು ಜಮೀನುದಾರರು. ನೀವು ಟಿ. ಟಿ. ಫೈನ ಹಾಕಿದರೂ ಸಹ ಅದನ್ನು ಯಾವ ರೀತಿ ಮುಗಿಸಬೇಕು ಎಂಬುದು ಅವರಿಗೆ ಗೊತ್ತಿದೆ. For years together, they are-in un-authorised possession of land and they are making hugh profits at the cost of poor people.

ಈ ರೀತಿ ಅಕ್ರಮ ಸಾಗುವಳಿಯನ್ನು ಬಹಳ ವರ್ಷಗಳಿಂದ ನೀರಾವರಿ ಜಮೀನಿನಲ್ಲಿ ಮಾಡುತ್ತಿರುವುದರಿಂದ ಅವರ ವಿರುದ್ಧ ಏತಕ್ಕೆ ಕ್ರಮ ತೆಗೆದುಕೊಂಡಿಲ್ಲ. ಆ ಜಮೀನಿನಲ್ಲಿ ಬೆಳೆ ಇದ್ದರೂ ಸಹ ಸರ್ಕಾರದವರು ಏತಕ್ಕೆ ಸ್ವಾಧೀನಕ್ಕೆ ತೆಗೆದುಕೊಳ್ಳಬಾರದು ? ಕತ್ತಲಗಿರಿ ಗ್ರಾಮದಲ್ಲಿ ಈ ರೀತಿ ನಡೆದಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ—ಯಾರು ಯಾರು ಸಫಿಷಿಯಂಟ್ ಹೋಲ್ಡರ್ಸ್ ಇದ್ದಾರೆ, ಅವರೇನಾದರು ಜಮೀನನ್ನು ಅಕ್ರಮ ಸ್ವಾಧೀನ ಮಾಡಿಕೊಂಡಿದ್ದರೆ ಅಂತಹವರನ್ನು ಎವಿಕ್ಟ್ ಮಾಡಲು ನಿರ್ದಿಷ್ಟವಾದ ಕಾರ್ಯಕ್ರಮ ಕೈಗೊಳ್ಳಬೇಕೆಂದು ಅಧಿಕಾರಿಗಳಿಗೆ ತಿಳಿಸಿದ್ದೇನೆ. ಅದರಂತೆ ಕಾರ್ಯಕ್ರಮ ತೆಗೆದುಕೊಳ್ಳುತ್ತಿದ್ದಾರೆ. ಮಾನ್ಯ ಸದಸ್ಯರು ಹೇಳಿದಂಥ ಗ್ರಾಮಕ್ಕೆ ನಾನು ಹೋಗಿದ್ದಾಗ ಕೆಲವರು ಈ ವಿಷಯವನ್ನು ನನ್ನ ಗಮನಕ್ಕೆ ತಂದಿದ್ದಾರೆ. ಆ ಬಗ್ಗೆ ನಿರ್ದಿಷ್ಟವಾದ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಅಧಿಕಾರಿಗಳಿಗೆ ತಿಳಿಸಿ ಬಂದಿದ್ದೇನೆ.

ಶ್ರೀ ಎನ್. ಜಿ. ಹಾಲಪ್ಪ.—ಆದರೆ ಇಲ್ಲಿಯವರೆಗೆ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ.

ಅಧ್ಯಕ್ಷರು.—ಅಕ್ರಮ ಸ್ವಾಧೀನದಲ್ಲಿರುವ ಜಮೀನಿನಲ್ಲಿ ಬೆಳೆ ಇದ್ದರೂ ಸಹ ಅದನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲವೇ ಎಂದು ಮಾನ್ಯ ಸದಸ್ಯರು ಕೇಳಿದರು ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ರೂಲ್ಸ್ ಪ್ರಕಾರ ಅಕ್ರಮ ಸ್ವಾಧೀನದಲ್ಲಿರುವ ಜಮೀನನ್ನು ಯಾವ ಸಮಯದಲ್ಲಿಯಾದರೂ ಸಹ ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆ. ಆದರಂತೆ ಸ್ವಾಧೀನಕ್ಕೆ ತೆಗೆದುಕೊಳ್ಳಲು ಸೂಕ್ತ ಕಾರ್ಯಕ್ರಮ ಕೈಕೊಳ್ಳುತ್ತೇವೆ

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—೫೯೬ ಎಕರೆ ೭ ಗುಂಟೆ ಜಮೀನು, ಜಮೀನಿಲ್ಲದ ಬೇಸಾಯಗಾರರಿಗೆ ಹಂಚುವುದಕ್ಕೆ ಇದೆ ಎಂದು ಹೇಳಿದ್ದೀರಿ. ಕೆಲವು ಜಮೀನದಾರರು ಇಂತಹ ಜಮೀನನ್ನು ಅಕ್ರಮವಾಗಿ ಸ್ವಾಧೀನಪಡಿಸಿಕೊಂಡು ತಮ್ಮ ಹೆಸರಿನಲ್ಲಿ ಪಹಣಿ ಬರೆಸಿಕೊಂಡು ತಾವೇ ಅದರ ಒಡೆಯರು ಎಂದು ಹೇಳಿಕೊಳ್ಳುತ್ತಿದ್ದಾರೆ. ಇದರ ಜೊತೆಗೆ ತಾವೇ ಇಲ್ಲಿ ಹೇಳಿರುವಂತೆ ೬೯೬ ಎಕರೆ ೩೫ ಗುಂಟೆ ಗೋಮಾಳ ಜಮೀನು ಅಕ್ರಮ ಸಾಗುವಳಿಯಾಗುತ್ತಿದೆ. ಸರ್ಕಾರದವರು ಇವರನ್ನೆಲ್ಲಾ ಎವಿಕ್ಟ್ ಮಾಡುವುದರ ಮೂಲಕ ಈ ಎಲ್ಲ . ಜಮೀನನ್ನು ಸ್ವಾಧೀನಪಡಿಸಿಕೊಂಡು ಲ್ಯಾಂಡ್ ಗ್ರಾಂಟ್ ರೂಲ್ಸ್ ಪ್ರಕಾರ ಹೊಸದಾಗಿ ಜಮೀನು ಇಲ್ಲದವರಿಗೆ ಹಂಚುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅಕ್ರಮ ಸ್ವಾಧೀನದಲ್ಲಿರುವ ಜಮೀನನ್ನು ಯಾವ ರೀತಿ ವಿಲೇವಾರಿ ಮಾಡಬೇಕು ಎಂಬುದಕ್ಕೆ ಒಂದು ನಿಯಮವಿದೆ. ಮತ್ತು ಹೆಚ್ಚಿಗೆ ಇರತಕ್ಕಂಥ ಜಮೀನನ್ನು ಯಾವ ರೀತಿ ವಿಲೇವಾರಿ ಮಾಡಬೇಕು ಎಂಬು

ದಕ್ಕೆ ಬೇರೆ ನಿಯಮವಿದೆ. ಈ ನಿಯಮಗಳ ಪ್ರಕಾರ ವಿತರಣೆ ಮಾಡಬೇಕಾಗಿದೆ. ಅಕ್ರಮವಾಗಿ ಸ್ವಾಧೀನಪಡಿಸಿಕೊಂಡಿರುವವರಲ್ಲಿ ಸಫಿಷಿಯಂಟ್ ಹೋಲ್ಡರ್ಸ್ ಇದ್ದರೆ, ಅಂತಹವರಿಗೆ ಆ ಜಮೀನು ಕೊಡಬಾರದೆಂದು ನಾನು ನಿರ್ದಿಷ್ಟವಾಗಿ ಅಧಿಕಾರಿಗಳಿಗೆ ಆದೇಶ ಕಳುಹಿಸಿದ್ದೇನೆ. ಅದರಂತೆ ಅವರು ಮಾಡುತ್ತಾರೆ. ಆ ವಿಷಯದಲ್ಲಿ ಮಾನ್ಯ ಸದಸ್ಯರು ಶಂಕೆ ಇಟ್ಟುಕೊಳ್ಳಬೇಕಾಗಿಲ್ಲ.

Smt. NAGAMMA C. KESHVAMURTHY.—How many applications have been received for the grant of this Gomal land and how many have been disposed?

ಶ್ರೀ ಎನ್. ಹುಚ್ಚಮಾಸ್ತಿಗೌಡ—ಎಷ್ಟು ಅರ್ಜಿಗಳು ಬಂದಿವೆ ಎಂಬ ಬಗ್ಗೆ ವಿವರಗಳು ಇಲ್ಲ ಎಂದು ನಾನು ಮೊದಲೇ ಹೇಳಿದ್ದೇನೆ.

9–30 P. M.

PROMOTION TO FIELD ASSISTANTS AS AGRICULTURAL ASSISTANTS

378. Sri M. M. SAJJAN (Muddebihal).— Will the Minister for Agriculture and Forests be pleased to state:—

(a) the reasons for not promoting the Field Assistants as Agricultural Assistants since 1st November 1956 upto this day ;

(b) Whether it has come to the notice of Government that such Field Assistants are promoted as Agricultural Assistants in Maharashtra State ;

(c) whether there are about four hundred vacancies of Agricultural Assistants in Mysore State to be filled in as on 13th April 1973 ;

(d) if so, the reason for not filling up so far ;

(e) the reasons for the difference in salaries and allowances as between Agricultural Assistants and Field Assistants though the nature of work and responsibility of both sets of officials are the same ?

Sri K. H. PATIL.— (Minister for Agriculture and Forests).—

(a) Due to finalisation of Inter-State Seniority list the promotion was held up since long. Even though amendments to Cadre and Recruitment Rules were issued

by Government in 1965, provisional Inter-State Seniority list published in 1966 has been finalised in September 1972. Instructions have been issued to the Director of Agriculture to give promotion according to the final Inter-State Seniority list.

(b) We are not aware of such steps being taken in Maharashtra Government.

(c) There are about 300 vacancies of Agricultural Assistants.

(d) For the reasons stated above, Vide replies to question (a).

(e) The duties and the responsibilities are not the same as presumed. As per the principles prescribed for the equation of posts, the various posts have been equated with the various pay scales of the New State of Mysore taking into consideration the nature of duties and responsibilities, experience and qualification.

Sri M. M. SAJJAN.-May I know why the field assistants were not promoted pending finalisation of the seniority list as is done in other departments of Government ?

†Sri K. H. PATIL.— There are so many difficulties. As the House is aware, the Inter-State Seniority List was to be finalised consulting the respective State Governments, and from 1956 to 1966 the provisional lists were not finalised on account of certain difficulties. Ultimately, I am glad to say that this Governmet has finalised the list and instructions have already been issued to the Director of Agriculture to give promotion according the final Inter-State Seniority list.

Sri M. M. SAJJAN.— When such promotions have been given in other departments of Government pending finalisation of the Inter-State Seniority list, why promotions were not given in this Department ?

Sri K. H. PATIL.— I cannot reply on behalf of other departments. But I can say that the previous Government ought to have done it; they have not done it. I am looking into it.

ಶ್ರೀ ಜೆ ಎಲ್. ಕಬಾಡಿ.— ೧೯೬೫-೬೬ರಲ್ಲಿ ಮಾಡಿದಂಥ ಪಟ್ಟಿ ಯೋಗ್ಯವಾಗಿರಲಿಲ್ಲ ಎಂಬುದಾಗಿ ತಿಳಿದು ಅದರಲ್ಲಿ ಅನ್ಯಾಯದ ಅತಿರೇಕವಾಗಿದೆಯೆಂದು ತಿಳಿದು ಬಂದಮೇಲೆ ನ್ಯಾಯವನ್ನು ದೊರಕಿಸಿಕೊಳ್ಳುವುದಕ್ಕೋಸ್ಕರ ಅವರು ಕೋರ್ಟಿಗೆ ಹೋದರು. ಆಮೇಲೆ ಸರ್ಕಾರದ ಆದೇಶದ ಪ್ರಕಾರ ಬೊಂಬಾಯಿ ಕರ್ನಾಟಕದವರಿಗೆ ಈಗಿನ ಸೀನಿಯಾರಿಟಿ ಪಟ್ಟಿ ಅನ್ವಯಿಸುತ್ತದೆಂದು ಹೇಳಿದ್ದರಿಂದ ಅಲ್ಲಿನವರಿಗೆ ಬಹಳ ಅನ್ಯಾಯವಾಗಿದೆ. ಅವರು ಈಗಾಗಲೇ ಒಂದು ಮನವಿಯನ್ನು ಸರ್ಕಾರಕ್ಕೆ ಕೊಟ್ಟಿರುವುದರಿಂದ ಅದರ ಬಗ್ಗೆ ಪುನರ್ಪರಿಶೀಲನೆಮಾಡಿ ಅವರಿಗೆ ಯಾವ ರೀತಿಯಲ್ಲಿಯೂ ಅನ್ಯಾಯವಾಗದಂತೆ ನೋಡಿಕೊಳ್ಳುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ.— ಅವರಿಗೆ ಅತಿರೇಕದ ಅನ್ಯಾಯ ಏನಾಗಿದೆಯೋ ಅದು ಸರ್ಕಾರಕ್ಕೆ ಗೊತ್ತಿಲ್ಲ. ಅವರು ಇನ್ನೂ ಹೆಚ್ಚಿಗೆ ಮುಂಬಡ್ತಿ ಪಡೆಯಬೇಕೆಂದು ಕೋರ್ಟಿಗೆ ಹೋದರು. ಹೈಕೋರ್ಟಿನಲ್ಲಿ ಅದರ ಬಗ್ಗೆ ಆರ್ಡರ್ ಆಗಿದೆ. ಆದರೆ ಹೈಕೋರ್ಟಿನ ಆರ್ಡರ್ ಪ್ರಕಾರ ರೆಸ್ಪೆಕ್ಟ್ ಮಾಡುವುದು ಸರ್ಕಾರದ ಕರ್ತವ್ಯ. ಇದು ಬರೀ ಬೊಂಬಾಯಿ ಕರ್ನಾಟಕದವರಿಗೆ ಅನ್ವಯಿಸಬೇಕೆಂದಲ್ಲ, ಮೈಸೂರಿನವರಿಗೂ ಮತ್ತು ಹೈದರಾಬಾದನವರಿಗೂ ಅನ್ವಯಿಸುತ್ತದೆ. ಆದರೆ ಇದರಿಂದ ಯಾರಿಗೂ ಅನ್ಯಾಯವಾಗದಂತೆ ನೋಡಿಕೊಂಡು ಫೈನಲ್ ಲಿಸ್ಟನ್ನು ತೀವ್ರವಾಗಿ ಮಾಡುತ್ತೇವೆ

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು.— ಈಗ ಉತ್ತರದಲ್ಲಿ ಕೇವಲ ಫೀಲ್ಡ್ ಅಸಿಸ್ಟಂಟ್ಸ್ ಅವರ ಬಗ್ಗೆ ಉತ್ತರ ಹೇಳಿದೆ. ಅವರ ಬಡ್ತಿಯ ಬಗ್ಗೆ ವಿವರಗಳನ್ನು ಕೊಡಲಾಗುತ್ತದೆಂದು ಹೇಳಿದೆ. ಆದರೆ (ಸಿ)ಗೆ ಉತ್ತರವಾಗಿ ಇನ್ನೂ ವ್ಯವಸಾಯ ಸಹಾಯಕರ ಹುದ್ದೆಗಳು ೩೦೦ ಖಾಲಿಇವೆ ಯೆಂಬುದಾಗಿ ಹೇಳಿದೆ. ಅವುಗಳನ್ನು ಭರ್ತಿಮಾಡುವ ಬಗ್ಗೆ ಏನು ಉತ್ತರವನ್ನು ಕೊಡುತ್ತೀರಿ?

ಶ್ರೀ ಕೆ. ಎಚ್. ಪಾಟೀಲ.— ನಾನು ಈಗಾಗಲೇ ಉತ್ತರ ಹೇಳಿದ ಹಾಗೆ ಫೈನಲ್ ಲಿಸ್ಟ್ ಮಾಡುವ ಪ್ರಕಾರ ಪ್ರೊಮೋಷನ್ಸ್ ಕೊಡಬೇಕೆಂದು ಡೈರೆಕ್ಟರ್ ಅವರಿಗೆ ತಿಳಿಸಿದೆ. ಆಗ ಪ್ರಾಯಶಃ ಎಲ್ಲಾ ವಾದವಿವಾದಗಳು ದೂರವಾಗುತ್ತವೆ.

ಶ್ರೀ ಜಿ ಪುಟ್ಟಸ್ವಾಮಿ.— ಈಕ್ವೇಷನ್ ಆಫ್ ಪೋಸ್ಟ್ಸ್ ಅವುಗಳಿಗೆ ತಕ್ಕ ವೇತನ ಶ್ರೇಣಿಗಳನ್ನು ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ ಬಡ್ತಿಗಳನ್ನು ಇವರಿಗೆ ಕೊಡುವಾಗ ಅವರಲ್ಲಿ ಹಿಂದುಳಿದವರ ಬಗ್ಗೆ ಹಾಗೂ ನಿಮ್ನವರ್ಗದವರ ಬಗ್ಗೆ ಯಾವ ರೀತಿ ಅನ್ಯಾಯವಾಗದಂತೆ ಸರ್ಕಾರ ನೋಡಿಕೊಳ್ಳುತ್ತದೆಂದು ಭರವಸೆಯನ್ನು ಕೊಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ.— ಕೇಡರ್ ಆಂಡ್ ರಿಕ್ರೂಟ್‌ಮೆಂಟ್ ರೂಲ್ಸ್‌ನ್ನು ಅನುಸರಿಸದೇ ಭರ್ತಿಕೊಡುವದಕ್ಕಾಗುವುದಿಲ್ಲ. ಅವಶ್ಯಕವಿರುವ ಕಡೆಗಳಲ್ಲಿ ಷೆಡ್ಯೂಲ್ಡ್ ಕ್ಯಾಸ್ಟಿನವರಿಗೆ ಕೊಡತಕ್ಕ ರಿಜರ್ವೇಷನ್ ಕಾಪಾಡಬೇಕೆಂದು ನಾನು ಈಗಾಗಲೇ ತಿಳಿಸಿದ್ದೇನೆ.

Sri M. M. SAJJAN:— In answer to (a) it is stated that instructions have been issued to the Director of Agriculture to give promotions according to the final Inter-State Seniority list. That being so, I understand that for the last one year no promotion has been given to anybody–why?

Sri K. H. PATIL;— Unfortunately, the Director of Agriculture sought so my clarifications, and since the clarifications have now been given, I am sure he will have to finalise it without any loss of time.

MADAM SPEAKER.— We will take up question. No 394 afterwords soon ofter the Hon. Minister is present.

DOCTORS WORKING IN HOSPITALS AT BANGALORE FOR MORE THAN 5 YEARS

402. Sri A. M. SURYANARAYAN GOWDA (Yelahanka).— Will the Minister for Health be pleased to state :—

The names of the doctors (Assistant Surgeons, Surgeons, etc.,) working in Victoria, Vani Vilas, Bowring and Minto Hospitals for more than five years ?

Sri H. SIDDAVEERAPPA (Minister of Health).—

(1) Victoria Hospital, Bangalore :

1 Dr. M. Hamya Naik, Assistant Surgeon,
2 Dr. V. L. Rajagopal Rao, Assistant Surgeon.

(2) Vani Vilas Hospital, Bangalore :

Dr. K. R. Saroja, Assistant Surgeon.

(3) Minto Opthalmic Hospital, Bangalore :

Nill

(4) Bouring and Lady Curzon Hospitals, Bangalore :

Nill

ಶ್ರೀ ಎ. ಎಂ. ಸೂರ್ಯನಾರಾಯಣ ಗೌಡ.—ಈಗ ಸಿಟಿಯಲ್ಲಿರತಕ್ಕ ಅನೇಕ ಆಸ್ಪತ್ರೆಗಳಲ್ಲಿ ೫ ವರ್ಷಗಳಿಗಿಂತ ಮೇಲ್ಪಟ್ಟು ಕೆಲಸ ಮಾಡಲ್ಪಟ್ಟು ಕೆಲಸ ಮಾಡುತ್ತಿರುವ ಡಾಕ್ಟರ್ಸ್ ಎಷ್ಟು ಜನರು ಇದ್ದಾರೆ?

ಶ್ರೀ ಎಚ್. ಸಿದ್ದವೀರಪ್ಪ.—ಮಾನ್ಯ ಸದಸ್ಯರು ಕೇಳಿರತಕ್ಕ ಪ್ರಶ್ನೆ ಅಸಿಸ್ಟಂಟ ಸರ್ಜನ್ಸ್ ಸರ್ಜನ್ಸ್‌ಗೆ ಸಂಬಂಧಪಟ್ಟುದು. ಈಗ ಇರತಕ್ಕ ವಿಕ್ಟೋರಿಯಾ ಆಸ್ಪತ್ರೆ,

ಮಿಂಟೋಆಸ್ಪತ್ರೆ ಮತ್ತು ವಾಣಿವಿಲಾಸ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿರುವ ಡಾಕ್ಟರ್‌ಗಳಲ್ಲಿ ಕೆಲವರು ಟೀಚಿಂಗ ಆಸ್ಪತ್ರೆಯ ಸಿಬ್ಬಂದಿ ವರ್ಗದವರಾಗಿರುವವರೂ ಇದ್ದಾರೆ. ಅವರ ಪೈಕಿ ಕೆಲವರು ಈ ಆಸ್ಪತ್ರೆಗಳಲ್ಲಿದ್ದಾರೆ. ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಡಾ. ಪ್ರಭು ಅವರು, ಡಾ. ಚಿನ್ನಯ್ಯನವರು, ಡಾ. ರೇಣುಕ ಅವರು, ಡಾ. ಬಷೀರ್ ಅಹಮದ್ ಅವರು, ಮತ್ತು ಡಾ. ಜಯದೇವಪ್ಪನವರು ಮಿಂಟೋ ಆಸ್ಪತ್ರೆಯಲ್ಲಿ ಡಾ ಎಂ. ರಾವ, ಡಾ. ಬಡ್ಡಿಯಪ್ಪ ಅವರು, ಮತ್ತು ವಾಣಿವಿಲಾಸ ಆಸ್ಪತ್ರೆಯಲ್ಲಿ ಡಾ. ರುದ್ರಮ್ಮ, ಡಾ. ಬೆಣಕಪ್ಪನವರು ಇಷ್ಟು ಜನರು ಆ ರೀತಿ ಯಲ್ಲಿದ್ದಾರೆ.

ಶ್ರೀ ಎ. ಎಂ. ಸೂರ್ಯನಾರಾಯಣ ಗೌಡ.—ವಾಣಿವಿಲಾಸ ಆಸ್ಪತ್ರೆಯಲ್ಲಿ ೫ ವರ್ಷಗಳಗಿಂತ ಹೆಚ್ಚಿಗೆ ಕೆಲಸ ಮಾಡಿರುವವರು ಇನ್ನೂ ಇದ್ದಾರೆ. ಅವರು ಯಾರ್ಯಾರು ಎಂಬುದನ್ನು ತಿಳಿಸುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪ.—ನಮಗೆ ಸಿಕ್ಕಿರುವ ವರದಿಯ ಪ್ರಕಾರ ಇಷ್ಟು ಹೇಳಿದ್ದೇನೆ ಮಾನ್ಯ ಸದಸ್ಯರಿಗೆ ಇನ್ನೂ ಹೆಚ್ಚಿಗೆ ಇದರ ಬಗ್ಗೆ ಮಾಹಿತಿ ಬೇಕೆಂದರೆ ಅವನ್ನೂ ಹೆಚ್ಚಿಗೆ ತನಿಸಿ ವಿಚಾರ ಮಾಡುತ್ತೇನೆ.

ಶ್ರೀ ಎ. ಎಂ. ಸೂರ್ಯನಾರಾಯಣ ಗೌಡ—ಅಲ್ಲಲ್ಲಾ ಅವರನ್ನು ೫ ವರ್ಷ ಗಳಿಗೆ ಮೇಲ್ಪಟ್ಟು ಇಡುವ ಉದ್ದೇಶವಾದರೂ ಏನು? ವಿಕ್ಟೋರಿಯಾ ಮತ್ತು ಬೌರಿಂಗ ಆಸ್ಪತ್ರೆಗಳಲ್ಲಿ ೩ ವರ್ಷಗಳಿಂದ ಹಾಗೂ ೫ ವರ್ಷಗಳಿಂದಲೂ ಆ ಡಾಕ್ಟರಗಳನ್ನು ಇಡುವ ಉದ್ದೇಶವಾದರೂ ಏನು?

ಶ್ರೀ ಎಚ್. ಸಿದ್ದವೀರಪ್ಪ.—ಉದ್ದೇಶ ಯಾವುದೂ ಇಲ್ಲ. ಈಗ ಇರತಕ್ಕ ಪರಿಸ್ಥಿತಿಯಲ್ಲಿ ಟೀಚಿಂಗ ಕಾಲೇಜುಗಳಿಗೆ ಅಟ್ಯಾಚ್ಡ ಆಗಿರತಕ್ಕ ಆಸ್ಪತ್ರೆಗಳಲ್ಲಿರುವವ ರನ್ನು ನಾವು ಎಲ್ಲಿಗೆ ಬೇಕೆಂದರೆ ಅಲ್ಲಿಗೆ ಟ್ರಾನ್ಸಫರ ಮಾಡುವದಿಲ್ಲ. ಅವರು ಕೇವಲ ಈ ೩-೪ ಜಾಗಗಳಲ್ಲಿಯೇ ಸುತ್ತಾಡಬೇಕು ಅವರೇನಿದ್ದರೂ ಸರ್ಕಾರದ ಕಾಲೇಜು ಗಳು ಇರುವ ಕಡೆಗಳಲ್ಲಿ ಅಂದರೆ, ಬಳ್ಳಾರಿ, ಮೈಸೂರು, ಹುಬ್ಬಳ್ಳಿ ಮತ್ತು ಬೆಂಗ ಳೂರು ಈ ಸ್ಥಳಗಳಲ್ಲಿ ಅವರು ವರ್ಗವಾಗಬೇಕು ಏಕೆಂದರೆ ಇನ್ನು ಕೆಲವು ಕಡೆ ಗಳಲ್ಲಿ ಕೆಲವಾರು ಕೋರ್ಸಸ್ ಇರುವದಿಲ್ಲ. ಆದರೆ ಯಾರೇ ಡಾಕ್ಟರ ಆಗಲಿ ಅವರು ಒಂದೇ ಜಾಗದಲ್ಲಿ ಬಹಳ ವರ್ಷಗಳಿಂದ ಇದ್ದಾರೆಂಬುದು ಕಂಡುಬಂದರೆ, ಅಂತಹವ ರನ್ನು ಬೇರೆ ಇನ್ನೊಂದು ಊರಿಗೆ ಕಳುಹಿಸುವದಕ್ಕೆ ಅವಕಾಶವಿದೆಯೆಂದು ಗೊತ್ತಾ ದರೆ ಆಗ ಅಂತಹವರನ್ನೂ ಸಹ ಟ್ರಾನಫರ್ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಟಿ ಎಂ. ಮಂಜುನಾಥ.—ಬೆಂಗಳೂರಿನಲ್ಲಿ ಹೆಚ್ಚು ಅನುಭವಸ್ಥರಾದ ಹಾಗೂ ಉನ್ನತ ಮಟ್ಟದ ವೈದ್ಯರು ಇದ್ದು ಇಲ್ಲಿ ಅನೇಕ ವೈದ್ಯ ಸೌಕರ್ಯಗಳು ಇರು ವುದರಿಂದಲೇ ಬೆಂಗಳೂರಿಗೆ ಅನೇಕ ಕಡೆಗಳಿಂದ ಶಸ್ತ್ರಚಿಕಿತ್ಸೆಗೋಸ್ಕರ ಹಾಗೂ ಇನ್ನೂ ಅನೇಕ ಕಾರಣಗಳಿಂದ ಜನರು ಬರುತ್ತಾರೆ. ಆದರೆ ಈ ಪ್ರಶ್ನೆಗೆ ಅನುಗುಣ

ವಾಗಿ ಡಾಕ್ಟರುಗಳು ೫ ವರ್ಷಕ್ಕೆ ಮೇಲ್ಪಟ್ಟು ಕೆಲಸ ಮಾಡಿದ್ದರೆ, ಅಂತಹವರನ್ನು ವರ್ಗ ಮಾಡುವದರಿಂದ, ಅಂತಹ ಅನುಭವವುಳ್ಳ ವೈದ್ಯರು ಮುಂದೆ ಶಸ್ತ್ರಚಿಕಿತ್ಸೆ ಮಾಡುವುದಕ್ಕೆ ಸಿಗದೇ ರೋಗಿಗಳಿಗೆ ಇದರಿಂದ ಅನಾನುಕೂಲವಾಗುವದಿಲ್ಲವೇ? ಆದ್ದರಿಂದ ಈ ವಿಚಾರವನ್ನು ಮತ್ತೆ ಪರಿಶೀಲನೆ ಮಾಡುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪ — ಇದುವರೆಗೂ ಯಾವ ರೋಗಿಗಳಿಗೂ ಆ ರೀತಿಯಾಗಿ ಅನಾನುಕೂಲವಾಗಿದೆಯೆಂದು ವರದಿ ಸರ್ಕಾರಕ್ಕೆ ಬಂದಿಲ್ಲ. ಆದರೆ ಈಗಿರುವ ಪರಿಸ್ಥಿತಿಯಲ್ಲಿ ಬೆಂಗಳೂರಿನಲ್ಲಿರತಕ್ಕ ವೈದ್ಯಕೀಯ ಸೌಕರ್ಯ ಮೈಸೂರಿನಲ್ಲಿಯೂ ಇದೆ. ಹುಬ್ಬಳ್ಳಿಯಲ್ಲಿ ಸಹ ಇದೆ. 'ಆದರೆ ಟೀಚಿಂಗ್ ಕಾಲೇಜಿಸ್ ವಿಷಯವಾಗಿ ಹೇಳುವುದಾದರೆ, ಕೆಲವು ಕಡೆ ಅತ್ಯವಶ್ಯಕವಾಗಿ ಕಂಡುಬಂದಾಗ್ಗೆ ಅವರನ್ನು ಅಲ್ಲಿ ಇಡದೆ ಮಾನ್ಯ ಶ್ರೀ ಸೂರ್ಯನಾರಾಯಣಗೌಡರು ಹೇಳಿದ ಪ್ರಕಾರ ಇಲ್ಲಿಯೆ ಜಹಗೀರಾಗಿ ಕೂಡಿಸಬಾರದು. ಮಾನ್ಯ ಸದಸ್ಯರು ಹೇಳತಕ್ಕ ನೀತಿ ಸರಿಯಾಗಿದೆ. ಅದನ್ನು ವಿಚಾರ ಮಾಡೋಣ.

ಶ್ರೀ ಕೆ. ಎನ್. ವೀರಪ್ಪಗೌಡ.— ಬೆಂಗಳೂರಿನ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಾ ಇರುವ ಡಾಕ್ಟರುಗಳಲ್ಲಿ ಐದು ವರ್ಷಗಳಿಗೂ ಮೇಲ್ಪಟ್ಟು ಇರತಕ್ಕವರು ಈಗ ವಿಕ್ಟೋರಿಯಾ, ಮಿಂಟೋ ಮತ್ತು ವಾಣೀವಿಲಾಸ ಆಸ್ಪತ್ರೆಗಳಲ್ಲಿ ಎಷ್ಟು ಜನರು ಇದ್ದಾರೆ?

ಶ್ರೀ ಎಚ್. ಸಿದ್ಧವೀರಪ್ಪ.— ಬೆಂಗಳೂರಿನಲ್ಲಿಯೇ ಒಂದು ಆಸ್ಪತ್ರೆಯಿಂದ ಇನ್ನೊಂದು ಆಸ್ಪತ್ರೆಗೆ ಸುತ್ತಾಡಿಕೊಂಡು ಸುಮಾರು ೫ ವರ್ಷಗಳಿಗೂ ಮೇಲ್ಪಟ್ಟು ಕೆಲಸಮಾಡುತ್ತಿರುವವರ ಬಗ್ಗೆ ಮಾನ್ಯ ಸದಸ್ಯರಿಗೆ ಬೇಕಾದರೆ ಅಂಕಿಅಂಶಗಳನ್ನು ತರಿಸಿ ಹೇಳುತ್ತೇನೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ.— ಕೇವಲ ಅಸಿಸ್ಟೆಂಟ್ ಸರ್ಜನ್ಸ್ ಮತ್ತು ಸರ್ಜನ್ಸ್ ಬಗ್ಗೆ ತಾವು ಹೇಳುತ್ತಿದ್ದೀರಿ. ಅಂದಮೇಲೆ ಇದರಲ್ಲಿ ಕೊಟ್ಟಿರತಕ್ಕ ನಾಲ್ಕು ಆಸ್ಪತ್ರೆಗಳಿಗೆ ಸಂಬಂಧಪಟ್ಟ ಅಂಕಿಅಂಶಗಳು ನಿಮ್ಮಲ್ಲಿವೆಯೆಂದು ನನಗೆ ಅರ್ಥವಾಗುತ್ತದೆ. ಈ ನಾಲ್ಕು ಆಸ್ಪತ್ರೆಗಳಲ್ಲಿ ೫ ವರ್ಷಗಳಿಗಿಂತ ಹೆಚ್ಚಿಗೆ ಕೆಲಸಮಾಡುತ್ತಾ ಇರತಕ್ಕ ಡಾಕ್ಟರುಗಳು ಏನಾದರೂ ರೂರಲ್ ಪಾರ್ಟ್ಸ್‌ಗಳಲ್ಲಿ ಸರ್ವಿಸ್ ಮಾಡಿದ್ದಾರೆಯೋ? ಯಾರಾದರೂ ಒಬ್ಬರು ಅಲ್ಲಿ ಹೋಗಿ ಸರ್ವಿಸ್ ಮಾಡಿರುವ ಬಗ್ಗೆ ಅಂಕಿ ಅಂಶವೇನಾದರೂ ಇದೆಯೋ?

ಶ್ರೀ ಎಚ್. ಸಿದ್ಧವೀರಪ್ಪ.— ಕಾಲೇಜಿನಲ್ಲಿರತಕ್ಕ ಲೆಕ್ಚರರ್ಸ್ ರೂರಲ್ ಸರ್ವಿಸ್ ಮಾಡುವುದಕ್ಕೆ ಅವಕಾಶವಿಲ್ಲ. ಕಾಲೇಜುಗಳು ಎಲ್ಲಿಇವೆಯೋ ಅವಕ್ಕೆ ಆಟ್ಯಾಚ್ಡ್ ಆಗಿರತಕ್ಕ ಆಸ್ಪತ್ರೆಗಳಲ್ಲಿಯೇ ಅವರು ಸುತ್ತಾಡಬೇಕು. ಈಗ ಹೊಸದಾಗಿ ಕೆಲವು ಕಡೆಗಳಲ್ಲಿ ಮೊಬೈಲ್ ಆಸ್ಪತ್ರೆಗಳೆಂಬುದಾಗಿ ಮಾಡುತ್ತಿರುವುದರಿಂದ ರೂರಲ್ ಏರಿಯಾಗಳಲ್ಲಿ ಅದರಲ್ಲಿಯೂ ಬೆಂಗಳೂರು ಮತ್ತು ಮೈಸೂರ ಮುಂತಾದ ಪ್ರದೇಶ

ಗಳಲ್ಲಿ ಅವುಗಳ ಅವಶ್ಯಕತೆ ಹೆಚ್ಚಾಗಿರುವುದರಿಂದ ಅಲ್ಲಿಯೂ ಮೊಬೈಲ್ ಡಿಸಪೆನ್ಸರಿ ಎಂಬುದಾಗಿ ಮಾಡಿ ಅಲ್ಲಿಗೆ ಅವರಲ್ಲಿ ಅನೇಕರನ್ನು ಈಗಾಗಲೇ ಹಾಕಿದ್ದೇವೆ.

ಶ್ರೀ ಎ. ಎಂ. ಸೂರ್ಯನಾರಾಯಣಗೌಡ.— ಆಸ್ಪತ್ರೆಗಳಲ್ಲಿ ಐದು ವರ್ಷಕ್ಕೆ ಮೇಲ್ಪಟ್ಟು ಇರುವಂಥ ಡಾಕ್ಟರುಗಳು ಬೇಕಾದಷ್ಟು ಜನರಿದ್ದಾರೆ. ಅಂಥವರನ್ನು ಸೋಷಿಯಲ್ ಜಸ್ಟಿಸ್ ದೃಷ್ಟಿಯಿಂದ ಬೇರೆ ಕಡೆಗೆ ವರ್ಗ ಮಾಡುವುದಕ್ಕೆ ಸಾಧ್ಯವಿದೆಯೇ ?

ಶ್ರೀ ಎಚ್. ಸಿದ್ಧವೀರಪ್ಪ.—ಅದನ್ನು ವಿಚಾರ ಮಾಡೋಣ.

LAND BELONGING TO BULL TEMPLE AND MALLIKARJUN SWAMY TEMPLE

410. Sri T. R. Shamanna (Fort).— Will the Minister for Municipal Administration be pleased to state :—

(a) whether the Water Supply and Sewerage Board has taken an extensive land belonging to Bull temple and Mallikarjunswamy Temple in Division No. 32 for purposes of constructing water tank;

(b) whether the Water Supply Board had agreed to pay Rs. 3,000 per annum as lease consideration to the above temple;

(c) whether the Water supply Board has paid any amount so far to the Bull Temple Funds;

(d) if not, whether the Government would take necessary steps to see that payment of the amount due, so far and the future payments are made regularly;

(e) whether the Government would take action to get the ground in the area cleared soon where heaps of soft stones are piled up near about the temple giving shelter to reptiles ?

Sri B. Basavalingappa (Minister for Municipal Administration.—

( ) No.

(b) Does not arise in view of reply to clause (a).

(c) Does not arise.

(d) Does not arise.

(e) Action is being taken by the Bangalore Water Supply and Sewerage Board to keep the area clean.

ಶ್ರೀ ಟಿ. ಆರ್. ಶಾಮಣ್ಣ.— ಬೆಂಗಳೂರು ನಗರದ ಕೆಂಪೇಗೌಡರು ಕಟ್ಟಿಸಿದ ಪುರಾತನ ಕಾಲದ ಪ್ರಸಿದ್ಧ ದೇವಸ್ಥಾನವಾದ ಬಸವಣ್ಣ ದೇವಸ್ಥಾನಕ್ಕೆ ಸಂಬಂಧಪಟ್ಟ ಜಾಗವನ್ನು ನೀರು ಸರಬರಾಜು ಆಫೀಸಿನವರು ತೆಗೆದುಕೊಂಡು ವರ್ಷಕ್ಕೆ ಮೂರು ಸಾವಿರ ರೂಪಾಯಿ ಕೊಡುತ್ತೇವೆಂದು ಒಪ್ಪಂದ ಮಾಡಿಕೊಂಡಿದ್ದರೂ ಕೂಡ ಕೊಡುವುದಕ್ಕೆ ಆಗುವುದಿಲ್ಲವೆಂದು ಉತ್ತರದಲ್ಲಿ ಹೇಳಿದ್ದಾರೆ. ಇದಕ್ಕೆ ಸರಿಯಾದ ದಾಖಲೆಗಳನ್ನು ಕೊಟ್ಟರೆ ಆ ಹಣವನ್ನು ಕೊಡಿಸುವುದಕ್ಕೆ ಏರ್ಪಾಡು ಮಾಡುತ್ತಾರೆಯೇ ?

†ಶ್ರೀ ಬಿ. ಬಸವಲಿಂಗಪ್ಪ.— ಒಪ್ಪಂದ ಆಗಿಲ್ಲ. ಆ ಜಮೀನು ದೇವಸ್ಥಾನಕ್ಕೆ ಸೇರಿಲ್ಲವಾದ್ದರಿಂದ ಕೊಡುವ ಅವಶ್ಯಕತೆ ಇಲ್ಲ.

ಶ್ರೀ ಟಿ. ಆರ್. ಶಾಮಣ್ಣ.— ವಾಟರ್ ಸಪ್ಲೈ ಬೋರ್ಡಿನಿಂದ ಬಂದಿರತಕ್ಕ ಕಾಗದವಿದೆ. ಅದರಲ್ಲಿ " it was agreed by the Temple authorities to lease the land required for Rs. 3,000/ per year pending final orders of the Government" ಎಂದು ಹೇಳಿದ್ದಾರೆ. ಇದರ ಜೊತೆಗೆ ಮಾನ್ಯ ಮಂತ್ರಿಗಳು ಬಂದು ಆ ಜಾಗವನ್ನು ಪರಿಶೀಲನೆ ಮಾಡಿದಾಗ ಕೊಡುತ್ತೇವೆಂದು ಹೇಳಿದ್ದರು. ಎಷ್ಟೋ ಕಡೆ ದರೋಡೆಗಳು ಆಗುತ್ತಿದ್ದು, ಈ ದೇವಸ್ಥಾನದ ಆಸ್ತಿಯನ್ನು ದರೋಡೆ ಮಾಡುವುದಕ್ಕೆ ಹೋಗದೆ ದಯವಿಟ್ಟು ಹಣವನ್ನು ತಕ್ಷಣ ಕೊಡಿಸಿಕೊಡುತ್ತಾರೆಯೇ ?

ಶ್ರೀ ಬಿ. ಬಸವಲಿಂಗಪ್ಪ.— ಅದು ಯಾರೋ ಒಬ್ಬ ವ್ಯಕ್ತಿಯ ಆಸ್ತಿಯಲ್ಲ. ಮಾನ್ಯ ಸದಸ್ಯರ ಪ್ರಕಾರ ಅದು ಬಸವಣ್ಣ ದೇವಸ್ಥಾನಕ್ಕೆ ಸೇರಿದ್ದು ಎಂದು ಹೇಳುತ್ತಿದ್ದಾರೆ. ನಾವು ಪುನಃ ಪರಿಶೀಲನೆ ಮಾಡಿದ ನಂತರ ದೇವಸ್ಥಾನಕ್ಕೆ ಸೇರಿಲ್ಲ ಎನ್ನುವುದು ವೇದ್ಯವಾಗಿದೆ. ಅದಕ್ಕೋಸ್ಕರ ಕೊಡತಕ್ಕ ಪ್ರಮೇಯ ಉದ್ಭವಿಸುವುದೇ ಇಲ್ಲ.

ಶ್ರೀ ಎಂ ಎಸ್. ಕೃಷ್ಣನ್.— ಆ ಜಾಗ ದೇವಸ್ಥಾನಕ್ಕೆ ಸೇರಿದೆಯೋ ಇಲ್ಲವೋ ಎನ್ನುವ ಬಗ್ಗೆ ಕಾಂಟ್ರೊವರ್ಸಿ ಇದೆ ಎಂದು ಗೊತ್ತಾಗುತ್ತದೆ. ಆ ಬಗ್ಗೆ ಪುನರ್‌ಪರಿಶೀಲನೆ ಮಾಡಿ, ದೇವಸ್ಥಾನಕ್ಕೆ ಸೇರಿದ್ದರೆ ವಾಟರ್ ಸಪ್ಲೈ ಬೋರ್ಡ್ ಪತ್ರದ ಪ್ರಕಾರ ಮೂರು ಸಾವಿರ ರೂಪಾಯಿ ಕೊಡಲು ಒಪ್ಪಿಗೆ ಕೊಟ್ಟಿರುವಂತೆ ಕೊಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.— ಮಾನ್ಯ ಸದಸ್ಯರಾದ ಶಾಮಣ್ಣನವರು ತೋರಿಸಿದ ಕಾಗದ ಮೊದಲನೇ ಹಂತದಲ್ಲಿ ಬರೆದದ್ದು ಪರಿಶೀಲನೆ ಮಾಡುವುದಕ್ಕೆ ಮುಂಚೆ ಕೊಟ್ಟದ್ದು. ಪರಿಶೀಲನೆ ಮಾಡಿದ ನಂತರ ಆ ಜಾಗ ದೇವಸ್ಥಾನಕ್ಕೆ ಸೇರಿದ್ದಲ್ಲ ಎಂದು ಕಂಡುಬಂದುದರಿಂದ ಹಣ ಕೊಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಟಿ. ಆರ್. ಶಾಮಣ್ಣ.— ಅಲ್ಲಿರತಕ್ಕ ಜಾಗ ಕಲ್ಲು ಬಂಡೆಗಳಿಂದ ಕೂಡಿದ್ದು ಹಾವು, ಹಲ್ಲಿ ಮುಂತಾದುವು ಸೇರಿಕೊಂಡು ಜನಗಳಿಗೆ ತೊಂದರೆ

ಯಾಗಿದೆ. ಆ ಜಾಗವನ್ನು ಸ್ವಚ್ಛ ಮಾಡಿಕೊಡುವುದಾಗಿ ಹೇಳಿದ್ದರು. ಮಾನ್ಯ ಮಂತ್ರಿಗಳು ಜಾಗವನ್ನು ಪರಿಶೀಲನೆ ಮಾಡಿ, ಸಂಬಂಧಪಟ್ಟ ಕಾಗದ ಪತ್ರಗಳನ್ನು ಪರಿಶೀಲನೆ ಮಾಡಿ ಪುನ: ತಮ್ಮ ವಿಚಾರವನ್ನು ನ್ಯಾಯವಾಗಿ ಬದಲಾವಣೆ ಮಾಡುವುದಕ್ಕೆ ಆಶ್ವಾಸನೆಯನ್ನು ಕೊಡುತ್ತಾರೆಯೇ ?

ಶ್ರೀ ಬಿ. ಬಸವಲಿಂಗಪ್ಪ.— ನಾನು ಮೊನ್ನೆ ತಾನೇ ಪರಿಶೀಲನೆ ಮಾಡಿದ್ದೇನೆ. ಆ ಜಾಗದಲ್ಲಿ ಕಲ್ಲು ಗುಂಡುಗಳಿರುವುದು ನಿಜ. ಅದನ್ನೆಲ್ಲ ತೆಗೆಸಿ ಆ ಜಾಗವನ್ನು ಚೊಕ್ಕಟವಾಗಿ ಇಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

SETTING UP OF TECHNICAL CELL

418 Sri. M. VEERAPPA MOILY (Karkal).- Will the Chief Minister be pleased to state.—

Whether the Government has any proposal before it to set up technical Cell, attached to each Minister, consisting of experts on respective subjects for the purpose of consultation and to make each Ministery more job oriented and purposeful ?

Sri H. M. CHANNABASAPPA (Minister for Public Works & Electricity) [on behalf of (Sri D. DEVARAJ URS Chief Minister)].— No.

Sri M. VEERAPPA MOULY.— We find that lagislative and executive decisions are taken either on beauracratic note or on political reasons. Does the Government think atleast that there are also some experts who could involve themselves in decision making process and whereby we could avoid piece-meal legislations and defective execution of the legislations. Will the Government atleast consider to form technical cells for each Department ?

†Sri H. M. CHANNABASAPPA.- I don't think there is any necessity for technical cells to be created on the lines the hon. member has suggested. Wherever Government have taken decisions on matters involving technical points Government does take the opinion and advice of the technical men.

ಶ್ರೀ ಕೆ ಆರ್ ಶ್ರೀನಿವಾಸುಲು ನಾಯ್ಡು.— ರಾಜ್ಯಕ್ಕೆ ದಕ್ಷ ಮತ್ತು ಒಳ್ಳೆಯ ಆಡಳಿತವನ್ನು ಕೊಡುವ ದೃಷ್ಟಿಯಿಂದ. ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಹೆಚ್ಚು ಎಕಾನಮಿ ಮೆಷರ್ಸ್ ಇರುವುದರಿಂದ ಪರಿಣತರನ್ನು ನೇಮಕ ಮಾಡುವುದಕ್ಕೆ ಬದಲು

ಇಲಾಖೆಯಲ್ಲಿನ ಕೆಲವರನ್ನು ಆರಿಸಿ ತಾಂತ್ರಿಕ ಸಲಹೆ ಕೊಡಲು ಇಡುವುದು ಒಳ್ಳೆಯದಲ್ಲವೇ?

ಶ್ರೀ ಎಚ್. ಎಂ. ಚನ್ನಬಸಪ್ಪ — ಮಾನ್ಯ ಸದಸ್ಯರು ಮೂಲ ಪ್ರಶ್ನೆಯಲ್ಲಿ ಕೇಳಿರುವಂಥ ರೀತಿಯಲ್ಲಿ ಟೆಕ್ನಿಕಲ್ ಸೆಲ್ ಅವಶ್ಯಕವಿಲ್ಲ. ಎಲ್ಲೆಲ್ಲಿ ತೀರ್ಮಾನಗಳನ್ನು ತೆಗೆದುಕೊಳ್ಳುವಾಗ ತಾಂತ್ರಿಕ ತಜ್ಞರ ಸಲಹೆ ಬೇಕೋ ಆಯಾ ಕಾಲದಲ್ಲಿ ಅಂಥ ತಾಂತ್ರಿಕ ಸಲಹೆಯನ್ನು ಪಡೆದೇ ತೀರ್ಮಾನಗಳನ್ನು ನಾವು ಮಾಡತಕ್ಕದ್ದು.

ಶ್ರೀ ಎಂ. ಎಸ್. ಕೃಷ್ಣನ್.— ಪಾರ್ಲಿಮೆಂಟಿನಲ್ಲಿ ಯಾವ ರೀತಿ ಒಂದೊಂದು ಮಿನಿಸ್ಟ್ರಿಗೂ ಕನ್‌ಸಲ್ಟೇಟಿವ್ ಅಥವಾ ಅಡ್ವೈಸರಿ ಕಮೀಟಿಗಳನ್ನು ಅಲ್ಲಿನ ಕೆಲವು ನಾಯಕರನ್ನು ಸೇರಿಸಿ ಮಾಡಿದ್ದಾರೆ ಅದೇ ರೀತಿ ಇಲ್ಲಿಯೂ ಕೂಡ ಎಲ್ಲ ಮಿನಿಸ್ಟ್ರಿಗಳಿಗೂ ಸಲಹೆ ಮಾಡಲು ಕಮಿಟಿಗಳನ್ನು ಮಾಡುವಕ್ಕೆ ಯೋಜನೆ ಮಾಡುತ್ತಾರೆಯೋ?

ಶ್ರೀ ಎಚ್. ಎಂ. ಚನ್ನಬಸಪ್ಪ.— ಪ್ರಶ್ನೆ ಇರುವುದು ತಾಂತ್ರಿಕಜ್ಞರ ಸೆಲ್ ರಚನೆ ಮಾಡುವ ವಿಚಾರದಲ್ಲಿ. ಮಾನ್ಯ ಸದಸ್ಯರು ಕೇಳುತ್ತಿರುವುದು ಸಲಹಾ ಸಮಿತಿಗಳನ್ನು ಮಾಡುತ್ತೀರಾ ಎಂದು. ಇದಕ್ಕೂ ಅದಕ್ಕೂ ಸಂಬಂಧವಿಲ್ಲ.

NON-PAYMENT OF SALARY TO PEONS

471. Sri B. S. VEERABHADRAPPA (Kudligi).— Will the Minister for Education be pleased to state:—

(a) whether it has come to the notice of the Government that the salary of 34 peons who are working in all the school of Bellary District Local Boards which were taken over by the Goverament has not been paid for the last 3–4 years, since the date of their taking over ;

(b) if so, the action taken by the Government in this behalf ?

Sri A. R. BADARINARAYANA (Minister for Education).—

(a) Yes.

(b) The matter of payment of arrears of salary to these 34 persons is under the active concideration of the Government.

ಶ್ರೀ ಬಿ. ಎಸ್. ವೀರಭದ್ರಪ್ಪ.— ಈ ಇಳ ನೌಕರರ ಸಂಬಳವನ್ನು ಎಷ್ಟು ದಿವಸಗಳಲ್ಲಿ ಕೊಡುವ ಪ್ರಯತ್ನ ಮಾಡುತ್ತಾರೆ?

† ಶ್ರೀ ಎ. ಆರ್. ಬದರೀನಾರಾಯಣ — ಈ ವಿಚಾರ ಸರಕಾರದ ಮುಂದೆ ಬಂದಿದ್ದು ಹಣಕಾಸು ಇಲಾಖೆಯುವರಿಂದ ಕೊಡುವದಕ್ಕಾಗುವದಿಲ್ಲವೆನ್ನುವ ತೀರ್ಮಾ

ನವಾಗಿತ್ತು. ಪುನ: ಈ ಬಗ್ಗೆ ಮನವಿ ಬಂದಮೇಲೆ ಅದನ್ನು ಪರಿಶೀಲನೆ ಮಾಡಬೇಕೆಂದು ಕಳುಹಿಸಿದ್ದೇನೆ.

ಶ್ರೀ ಬಿ. ಎಸ್. ವೀರಭದ್ರಪ್ಪ.—ಎಷ್ಟು ಸಮಯದಲ್ಲಿ ಕೊಡಲಿಕ್ಕೆ ಪ್ರಯತ್ನ ಮಾಡುತ್ತಾರೆ?

ಶ್ರೀ ಎ. ಆರ್. ಬದರೀನಾರಾಯಣ.— ಫೈನಾನ್ಸಿಯಲ್ ಫೀಸಿಬಿಲಿಟಿ ನೋಡಿಕೊಂಡು ಅವರಿಗೆ ಹಳೇ ಸಂಬಳ ಕೊಡಿಸಿಕೊಡುವ ವಿಚಾರವನ್ನು ಪರಿಶೀಲನೆ ಮಾಡಿಸುತ್ತೇನೆ.

ಶ್ರೀ ಬಿ. ಎಸ್. ವೀರಭದ್ರಪ್ಪ.—ಅವರಿಗೆ ಇಲ್ಲಿಯವರೆಗೂ ಸಂಬಳವನ್ನೇ ಕೊಟ್ಟಿಲ್ಲ. ಈಗಿನಿಂದಲಾದರೂ ಸಂಬಳ ಕೊಳುವುದಕ್ಕೆ ಪರಿಶೀಲನೆ ಮಾಡುತ್ತಾರೆಯೋ ?

ಶ್ರೀ ಎ ಆರ್. ಬದರೀನಾರಾಯಣ.—ಆ ಶಾಲೆಗಳನ್ನು ಸರ್ಕಾರ ವಹಿಸಿಕೊಂಡಾಗ ಅವರು ಸರ್ಕಾರಿ ನೌಕರರು ಎಂದು ಸರ್ಕಾರಕ್ಕೆ ಬಂದಿಲ್ಲ. ಅವರಿಗೆ ಕಂಟಿನ್‌ಜೆನ್ಸಿಯಿಂದ ಸಂಬಳವನ್ನು ಕೊಡುತ್ತ ಟೆಂಪೋರರಿ ನೌಕರರಾಗಿ ಇಟ್ಟುಕೊಂಡಿದ್ದರು.

ಶ್ರೀ ಬಿ. ಎಸ್. ವೀರಭದ್ರಪ್ಪ.—ಅವರನ್ನು ಅದೇ ರೀತಿ ಮುಂದುವರಿಸಿಕೊಂಡು ಹೋಗುತ್ತಾರೆಯೋ ಹೇಗೆ?

ಶ್ರೀ ಎ. ಆರ್. ಬದರೀನಾರಾಯಣ.—ಒಂದು ಸಲ ಆಗುವದಿಲ್ಲವೆಂದು ತೀರ್ಮಾನವಾಗಿದೆ. ಪುನ: ಪರಿಶೀಲನೆ ಮಾಡುತ್ತಿದ್ದೇವೆಂದು ತಿಳಿಸಿದೆ.

ಶ್ರೀ ಶರಣಪ್ಪ—ಹಣಕಾಸು ಇಲಾಖೆಯವರು ಯಾವ ಆಧಾರದ ಮೇಲೆ ಕೊಡುವದಕ್ಕೆ ಆಗುವದಿಲ್ಲವೆಂದು ಹೇಳಿದರು? ಅದಕ್ಕೆ ಕಾರಣವೇನು?

ಶ್ರೀ ಎ. ಆರ್. ಬದರಿನಾರಾಯಣ—ಅವರಿಗೆ ತಂಗಳ ಸಂಬಳ ನಿಗದಿಯಾಗಿರಲಿಲ್ಲ. ಒಂದು ಮಗುವನ್ನು ಕರೆದುಕೊಂಡು ಬಂದರೆ ಇಷ್ಟು ಕೊಡಬೇಕು ಎಂದು ನಿಗದಿ ಮಾಡಿ ಕಾಂಟ್ರಾಕ್ಟ ಬೇಸಿಸ್ ಮೇಲೆ ಹಿಂದೆ ಕೊಡುತ್ತಿದ್ದರು.

ಶ್ರೀ ಕೆ. ಮಾದೇಗೌಡ—ಪ್ರೌಢ ಶಾಲೆಗಳಿಗೆ ೭೫ ಪರ್ಸೆಂಟ ಗ್ರಾಂಟಾಗಿ ಕೊಡತಕ್ಕ ಕಾಲದಲ್ಲಿ ಇದನ್ನೆಲ್ಲ ಪರಿಶೀಲನೆ ಮಾಡಿತ್ತೇ ಹೇಗೆ?

ಶ್ರೀ ಎ ಆರ್. ಬದರೀನಾರಾಯಣ.—ಆ ಶಾಲೆಗಳನ್ನು ಸರ್ಕಾರಕ್ಕೆ ವಹಿಸಿಕೊಟ್ಟಾಗ ಸರ್ಕಾರಿ ನೌಕರರ ಪಟ್ಟಿಯಲ್ಲಿ ಇವರ ಹೆಸರುಗಳನ್ನು ಕಳುಹಿಸಿರಲಿಲ್ಲ. ಆ ಮೇಲೆ ಬೇರೆಯಾಗಿ ಕಳುಹಿಸಿದ್ದು ಟೆಂಪೊರರಿ ಎಸ್ಟಾಬ್ಲಿಷ್‌ಮೆಂಟ ಎನ್ನುವ ರೀತಿಯಲ್ಲಿ ಪರಿಗಣಿಸಿದ್ದರಿಂದ ಸರ್ಕಾರ ವಿಮರ್ಶೆ ಮಾಡಿ ಕೊಡುವದಕ್ಕಾಗುವದಿಲ್ಲ ಎನ್ನುವ ತೀರ್ಮಾನಕ್ಕೆ ಬಂತು. ಪುನ: ಮನವಿ ಬಂದಿದ್ದು ಅದನ್ನು ವಿಮರ್ಶೆ ಮಾಡುತ್ತಿದ್ದೇವೆ.

ಶ್ರೀ ಕೆ ಮಾದೇಗೌಡ.—ನೌಕರರ ಸಂಬಳ ಸಾರಿಗೆಗಳಿಗಾಗಿ ೮೫ ಪರ್ಸೆಂಟ್ ಸರ್ಕಾರದಿಂದ ಕೊಡುತ್ತಿಲ್ಲಿವೇ?

ಶ್ರೀ ಎ. ಆರ್. ಬದರೀನಾರಾಯಣ.—ಪ್ರೌಢ ಶಾಲೆಗಳ ಉಪಾಧ್ಯಾಯರಿಗೆ ಸಂಬಳವನ್ನು ಪೂರ್ತಿಯಾಗಿ ಸರ್ಕಾರದಿಂದಲೇ ಕೊಡುತ್ತಿದ್ದೇವೆ.

SANCTION OF LOAN BY S. C. HOUSE BUILDING CO-OPERATIVE SOCIETIES IN TIPTUR TALUK

228. Sri T. M. MANJUNATH (Tiptur).— Will the Minister for Co-operative be pleased to state:—

(a) whether there are any Scheduled Caste House Building Co-operation Societies in Tiptur taluk ;

(b) if so, the number of share holders who have applied for loan from these Societies ;

(c) the amount of loan paid so far and the number of persons for whom loans have been granted ?

Sri A. SHANKARA ALVA (Minister for Co-operation).—

(a) Yes. There is only one Scheduled Caste and Scheduled Tribe House Building Co-operative Society in Tiptur taluk.

(b) 368.

(c) (i) Rs. 21,490.
(ii) 28 members.

ಈ ಪ್ರಶ್ನೆಗೆ (ಇ) ಗೆ ಕೊಟ್ಟಿರುವ ಉತ್ತರದಲ್ಲಿ ೨೧,೯೦ ರೂಪಾಯಿಗಳು ಎಂದು ಇರುವದನ್ನು ೨೧೪೯೦ ರೂಪಾಯಿಗಳು ಎಂದು ತಿದ್ದುಪಡಿ ಮಾಡಿಕೊಳ್ಳಬೇಕು.

† ಶ್ರೀ ಟಿ. ಎಂ. ಮಂಜುನಾಥ.— ಸ್ವಾಮಿ ಈ ತಿಪಟೂರು ತಾಲ್ಲೂಕಿನಲ್ಲಿ ತಕ್ಕ ಹರಿಜನ ಗಿರಿಜನರ ಗೃಹನಿರ್ಮಾಣ ಸಂಘಕ್ಕೆ ಇದುವರೆಗೆ ೨೧೪೯೦ ರೂಪಾಯಿಗಳನ್ನು ಕೊಟ್ಟಿದ್ದೇವೆ ಎಂದು ಹೇಳಿದ್ದೀರಿ. ಈಗ ಈ ಹಣವನ್ನು ಅರ್ಜಿಹಾಕಿಕೊಂಡ ಷೇರ್ ಹೋಲ್ಡರುಗಳಿಗೆ ಮನೆಗಳನ್ನು ಕಟ್ಟುವದಕ್ಕಾಗಿ ಮೊದಲನೆ ಕಂತನ್ನು ಕೊಟ್ಟಿದ್ದಾರೆ ಎಂದು ಕಾಣುತ್ತದೆ. ಅವರಿಗೆ ೨ನೇ ಕಂತನ್ನು ಕೊಡದೇ ಇರುವದಕ್ಕೆ ಕಾರಣವೇನು ? ಈಗ ಫಸ್ಟ್ ಇನ್‌ಸ್ಟಾಲ್‌ಮೆಂಟ್ ತೆಗೆದುಕೊಂಡಿರುವವರು ಮನೆಗಳನ್ನು ಕಟ್ಟಿ ಎಷ್ಟು ವರ್ಷ ಆಯಿತು? ಅವರ ಗತಿ ಏನು?

ಶ್ರೀ ಎ. ಶಂಕರ ಆಳ್ವ.— ಸೆಕೆಂಡ್ ಇನ್‌ಸ್ಟಾಲ್‌ಮೆಂಟಿನಲ್ಲಿ ೧೨ ಸಾವಿರ ರೂಪಾಯಿಗಳನ್ನು ಈ ಸೊಸೈಟಿಗೆ ೧೫-೭-೧೯೬೬ರಲ್ಲಿ ರಿಲೀಜ್ ಮಾಡಿಸಿ ತುಮಕೂರು ಡಿ.ಸಿ.ಸಿ. ಬ್ಯಾಂಕಿನಲ್ಲಿ ಇಟ್ಟಿದ್ದಾರೆ. ಈಗ ಸಹಕಾರ ಸಂಘದ ಸದಸ್ಯರಿಗೆ ಪೇಮೆಂಟ್ ಮಾಡುವದನ್ನು ಕ್ಯಾನ್ಸಲ್ ಮಾಡಿದ್ದಾರೆ. ಆ ಸಹಕಾರ ಸಂಘದಲ್ಲಿ ಸೆಕ್ರೆಟರಿ ಆಗಿದ್ದ ಶ್ರೀ ಲಕ್ಕಯ್ಯ ಎನ್ನುವವರ ಮೇಲೆ ಹಣದ ದುರುಪಯೋಗದ ಆಪಾದನೆ ಬಂದು ಅವರನ್ನು ತೆಗೆದು ಹಾಕಿದ ನಂತರ ಅವರು ಸರಕಾರಕ್ಕೆ ಅಪೀಲು ಹೋಗಿ ಅವರು ಸ್ಟೇ ತಂದರು ಅವರು ಆ ಸಹಕಾರ ಸಂಘದ ಅಧಿಕಾರವನ್ನು ಅಡ್ಮಿನಿಸ್ಟ್ರೇಟರಿಗೆ ಬಿಟ್ಟುಕೊಡಲಿಲ್ಲ. ಸ್ಟೇ ವೆಕೇಟ್ ಆದನಂತರ ಅಡ್ಮಿಸ್ಟ್ರೇಟರು ಆ ಸಹಕಾರ ಸಂಘವನ್ನು ವಹಿಸಿಕೊಂಡಮೇಲೆ ಆ ಎಸ್.ಪಿ. ಆ್ಯಂಡ್ ಎನ್.ಟಿ. ಸಹಕಾರ ಸಂಘಕ್ಕೆ ಹಣ ಕೊಡಬೇಕೆಂದು ಮತ್ತೆ ಸ್ಟೇಟ್ ಹೌಸಿಂಗ್ ಬೋರ್ಡಿಗೆ ಪತ್ರ ಬರೆದಿದ್ದರು. ಆದರೆ ಹೌಸಿಂಗ್ ಬೋರ್ಡಿನವರು ಹೆಚ್ಚು ಹಣವನ್ನು ಕೊಡುವದ ಕ್ಕಾಗುವದಿಲ್ಲ, ಸಾಲ ಕೂಡ ಸಿಕ್ಕುವದಿಲ್ಲ ಎಂದು ಬರೆದಿದ್ದಾರೆ.

ಶ್ರೀ ಟಿ. ಎಂ. ಮಂಜುನಾಥ.— ಈಗ ಆ ಸಹಕಾರ ಸಂಘದಲ್ಲಿ ಸಾಲವನ್ನು ತೆಗೆದುಕೊಂಡವರು ಗೋಡೆಯನ್ನು ಕಟ್ಟಿ ಹಾಗೆಯೇ ನಿಲ್ಲಿಸಿದ್ದಾರೆ. ಆದ್ದರಿಂದ ಅವರಿಗೆ ಹಿಂದೆ ಸಾಲ ಕೊಟ್ಟಿರುವದನ್ನು ಮಾಫೀ ಮಾಡುತ್ತೀರಾ? ಈಗ ಆ ಸಹಕಾರ ಸಂಘದಲ್ಲಿ ಸಾಲವನ್ನು ಪಡೆಯಲು ೩೬೮ ಜನಗಳು ಅರ್ಜಿಯನ್ನು ಹಾಕಿದ್ದಾರೆ ಜನತಾ ವಸತಿ ಗೃಹನಿರ್ಮಾಣ ಯೋಜನೆಯಲ್ಲಿ ಹರಿಜನ ಗಿರಿಜನರಿಗೆ ಮನೆಗಳನ್ನು ಕಟ್ಟಿಕೊಳ್ಳಲು ಸಾಲವನ್ನು ಕೊಡುತ್ತಿಲ್ಲ. ಆದ್ದರಿಂದ ಈಗ ಆ ಸಹಕಾರ ಸಂಘಕ್ಕೆ ಮನೆ ಕಟ್ಟಿಕೊಳ್ಳಲು ಸಾಲಕ್ಕಾಗಿ ಅರ್ಜಿ ಹಾಕಿಕೊಂಡಿರುವ ಹರಿಜನರಿಗೆ ಮನೆ ಕಟ್ಟಿಕೊಳ್ಳಲು ಯಾವ ರೀತಿ ಸಹಾಯ ಮಾಡುತ್ತೀರಾ ?

ಶ್ರೀ ಎ. ಶಂಕರ ಆಳ್ವ —ಅಡ್ಮಿನಿಸ್ಟ್ರೇಟರು ಆ ಸಹಕಾರ ಸಂಘಕ್ಕೆ ಬಂದ ನಂತರ ೩೬೮ ಮನೆಗಳಿಗೆ ೧೮ ೪೦ ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ಸ್ಟೇಟ್ ಹೌಸಿಂಗ್‌ಬೋರ್ಡಿಗೆ ಒಂದು ಪತ್ರವನ್ನು ಕಳುಹಿಸಿದ್ದರು. ಈಗ ಸ್ಟೇಟ್ ಹೌಸಿಂಗ್ ಬೋರ್ಡಿನವರು ೨೨,೭೯೨ ಮನೆಗಳಿಗೆ ೪.೮೮ ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆ. ಇದರಲ್ಲಿ ಅಮೌಂಟ್ ರಿಲೀ ಆಗರುವದು ೪.೧೬ ಕೋಟಿ ರೂಪಾಯಿಗಳು. ಈಗ ಇರತಕ್ಕ ಡಿಮ್ಯಾಂಡ್ ಅನ್ನು ಪೂರೈಸುವದಕ್ಕೆ ಮತ್ತೆ ಎಲ್.ಐ.ಸಿ.ಗೆ ಸಾಲಕ್ಕಾಗಿ ಬರೆದಿದೆ. ಅವರಿನ್ನೂ ಸಾಲ ಕೊಟ್ಟಿಲ್ಲ. ಆದ್ದರಿಂದ ಅದನ್ನು ಯಾವರೀತಿ ವಿಲೇವಾರಿ ಮಾಡಬೇಕು ಎಂಬುದನ್ನು ಪರಿಶೀಲನೆ ಮಾಡುತ್ತಿದ್ದೇವೆ.

MURDERS, DACOITIES, ETC., CRIMES COMMITTED IN THE STATE

202. Sri PRABHAKAR TELKAR(Kalgi).—Will the Chief Minister be pleased to state:-

(a) the number of murders, thefts, robberies, dacoities and other crimes occurred during the period from August 1972 to the end of July 1973 in Gulbarga District;

(b) the number of such case occurred during the period from August 1971 to the end of July 1972 in Gulbarga District ?

Sri H. M. CHANNABASAPPA (Minister for Public Works and Electricity) [on behelf of Sri D. DEVARAJ URS (Chief Minister)].—

(a)	1.	Murders	63
	2.	Thefts	423
	3.	Robberies	29
	4.	Dacoities	52
	5.	Other Crimes	1214
(b)	1.	Murders	78
	2.	Thefts	340
	3.	Robberies	12
	4.	Dacoities	34
	5.	Other Crimes	1354

Sri PRABHAKAR TELKAR.— The number of murders that took place in Gulbarga District upto July 1973 is given here. Will the minister give reasons for committing such murders- whether due to dispute over property, women, etc., ?

† Sri H. M. CHANNABASAPPA.— Is it ever possible to give reasons for so many murders that have been committed from 1-8-1971 till July 1972 ?

Sri PRABHAKAR TELKAR.— May I know whether the police have found out any increase or decrease of offences of thefts, robberies, dacoities, etc., during the drought period as compared to the same period during the previous years ?

Sri H. M. Channabasappa.— The hon. member has not asked for details for the years before 1971 and therefore it will not be pssible to give information now.

M. S. R. T. C. BUS STAND AT BETHAMANGALA

394 Sri K. M. Doreswamy Naidu (Bethamangala).–Will the Minister for Labour be pleased to state.—

a) the number of buses playing daily from Bethamangala Bus Stand;

b) whether it has come to the notice of the Government that the waiting room facilities have not been provided to the passengers in the said Bus stand;

c) the reasons for not taking action even though many representations have been received from the public;

d) whether any action would be taken to remove the difficulties at least in future ?

Sri Azeez Sait (Minister for Labour).—

a) Arrival

1. M. S. R. T. C. 24
2. Inter-Regional Paivate Buses: 22

Departure

1. M. S. R. T. C. 24
2. Inter-Regional Private Buses. 22

b) Yes.

c) Action will be taken to provide only big shelter for the convenience of the passengers after the selection of a suitable site.

d) Yes.

ಶ್ರೀ ಕೆ. ಎಂ. ದೊರೆಸ್ವಾಮಿ ನಾಯ್ಡು.—ಸ್ವಾಮಿ ನಮ್ಮ ಬೇತಮಂಗಲದ ಎಂ. ಎಸ್. ಆರ್. ಟಿ. ಸಿ. ಬಸ್ ನಿಲ್ದಾಣಕ್ಕೆ ಪ್ರತಿದಿವಸ ೨೪ ಎಂ. ಎಸ್. ಆರ್. ಟಿ. ಸಿ. ಬಸ್ಸುಗಳು, ಇತರ ಖಾಸಗೀ ಬಸ್ಸುಗಳು ೨೨, ಹೀಗೆ ಒಟ್ಟು ೪೬ ಬಸ್ಸುಗಳು ಪ್ರತಿದಿವಸ ಬಂದುಹೋಗುತ್ತಿವೆ. ಆದ್ದರಿಂದ ಅಲ್ಲಿ ಪ್ರಯಾಣಿಕರು ತಂಗಲು ಸೌಕರ್ಯಗಳು ಇಲ್ಲ, ಅಲ್ಲಿ ಒಂದು ಷೆಲ್ಟರ್ ಹಾಕಿಸಿಕೊಟ್ಟು ಪ್ರಯಾಣಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ಸಾರ್ವಜನಿಕರಿಂದ ೨–೩ ವರ್ಷಗಳಿಂದ ಬೇಡಿಕೆ

ಬಂದರೂ ಕೂಡ ಆ ಬಗ್ಗೆ ಯಾವ ತರಹ ಕಾರ್ಯಕ್ರಮವನ್ನೂ ತೆಗೆದ ಕೊಂಡಿರುವು ದಿಲ್ಲ ಇದಕ್ಕೆ ಕಾರಣವೇನು ?

†ಶ್ರೀ ಅಜೀಜ್ ಸೇಟ್.—ಅಲ್ಲಿ ಸೂಕ್ತ ಜಾಗ ಸಿಕ್ಕಿಲ್ಲ.

ಶ್ರೀ ಕೆ. ಎಂ. ದೊರೆಸ್ವಾಮಿ ನಾಯ್ಡು.—ಅದಕ್ಕೆ ಬೇಕಾವ ಯೋಗ್ಯ ನಿವೇಶನ ದೊರಕಿಸಿ ಕೊಳ್ಳಲು ಸರ್ಕಾರದವರು ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ ?

ಶ್ರೀ ಅಜೀಜ್ ಸೇಟ್ —ಅದಕ್ಕೆ ಬೇಕಾದ ಜಾಗವನ್ನು ಮಾನ್ಯ ಸದಸ್ಯರು ಕೊಡಿಸಿಕೊಟ್ಟರೆ ಅಲ್ಲಿ ಬಸ್ ಷೆಲ್ಟರ್ ಹಾಕಿಕೊಡುತ್ತೇವೆ.

ಶ್ರೀ ಕೆ. ಎಂ. ದೊರೆಸ್ವಾಮಿ ನಾಯ್ಡು.—ಅಲ್ಲಿ ಅದಕ್ಕೆ ಬೇಕಾದ ಜಾಗವನ್ನು ಒದಗಿಸಿಕೊಡುವ ಪ್ರಯತ್ನ ಮಾಡಿದರೆ ಅಲ್ಲಿ ಅದಷ್ಟು ಜಾಗ್ರತೆ ಬಸ್ ಷೆಲ್ಟರ್ ಹಾಕಿಸಿಕೊಡುತ್ತೀರಾ ?

ಶ್ರೀ ಅಜೀಜ್ ಸೇಟ್.—ಮಾನ್ಯ ಸದಸ್ಯರು ಜಾಗವನ್ನು ಕೊಡಿಸಿಕೊಟ್ಟರೆ ತಕ್ಷಣ ಬಸ್ ಷೆಲ್ಟರ್ ಹಾಕಿಸಿಕೊಡುತ್ತೇವೆ.

MURDER OF SRI BABULAL AT HIRIYUR

454. Sri H. T. KRISHNAPPA (Nagamangala) and Sri BAPU GOWDA (Shahapur).—Will the Chief Minister be pleased to state.—

(a) whether Government is aware of the murder of one Sri Babulal at Hiriyur on 7th May 1973 ;

(b) if so, the reasons for the murder ;

(c) whether accused are charge-sheeted by the police ;

(d) if not, the reasons for the same ?

Sri H. M. CHANNABASAPPA (Minister for Public Works and Electricity) [on behalf of Sri D. DEVARAJ URS (Chief Minister)].—

(a) Yes.

(b) The motive for the murder is not yet establi hed.

(c) No.

(d) The case is still under investigation.

ಶ್ರೀ ಎಚ್. ಟಿ. ಕೃಷ್ಣಪ್ಪ.— ಸ್ವಾಮಿ ಈ ಹಿರಿಯೂರಿನಲ್ಲಿ ನಡೆದ ಬಾಬುಲಾಲ ಎಂಬುವವರ ಕೊಲೆಯ ಸಂಬಂಧದ ಮೊಕದ್ದಮೆಯಲ್ಲಿ ಅಪರಾಧಿಗಳು ಯಾರು ಯಾರು ಅವರನ್ನು ಅರೆಸ್ಟ್ ಮಾಡಿದ ತಾರೀಖನ್ನು ಹೇಳುತ್ತೀರಾ ?

†ಶ್ರೀ ಎಚ್. ಎಂ. ಚನಬಸಪ್ಪ.— ಅಪರಾಧಿಗಳು ಇನ್ನೂ ಪತ್ತೆಯಾಗಿಲ್ಲ.

ಶ್ರೀ ಎಚ್. ಟಿ. ಕೃಷ್ಣಪ್ಪ.— ಹಾಡು ಹಗಲಿನಲ್ಲಿ ಈ ಖೂನಿ ನಡೆದಿದೆ. ದರೋಡೆ ನಡೆದಿದೆ. ಇದು ನಡೆದು ಈಗಾಗಲೇ ೪ ತಿಂಗಳಾಗಿವೆ. ಇನ್ನೂ ಆ ಅಪರಾಧಿಗಳನ್ನು ಹಿಡಿದು ಅರೆಸ್ಟ್ ಮಾಡಿಲ್ಲ. ಆ ಅಪರಾಧಿಗಳು ನಿಮ್ಮ ಪಕ್ಷದವರು ಎಂದು ಅವರನ್ನು ವಹಿಸಿಕೊಂಡಿದ್ದೀರಾ ?

Sri H. M. Channabasappa.— I object the manner in which the question is put. He cannot make such an argument.

ಶ್ರೀ ಎಚ್. ಟಿ. ಕೃಷ್ಣಪ್ಪ– ಇದು ಆರ್ಗ್ಯುಮೆಂಟ್ ಪ್ರಶ್ನೆ ಅಲ್ಲ. ಆ ಅಪರಾಧಿಗಳು ನಿಮ್ಮ ಪಕ್ಷದ ಕೆಲವು ದೊಡ್ಡ ಪ್ರಭಾವಶಾಲಿಗಳ ಆಶ್ರಯದಲ್ಲಿರುವುದರಿಂದ ಅವರನ್ನು ಇದುವರೆಗೂ ಬಂಧಿಸಿಲ್ಲ. ಅವರ ಮೇಲೆ ಚಾರ್ಜ್‌ಷೀಟ್ ಹಾಕಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.— ಮಾನ್ಯ ಸದಸ್ಯರ ಅಭಿಪ್ರಾಯ ಶುದ್ಧ ತಪ್ಪು

ಶ್ರೀ ಎಚ್. ಟಿ. ಕೃಷ್ಣಪ್ಪ — ಅಲ್ಲಿಯ ಸ್ಥಳೀಯ ಪೋಲೀಸ್ ಅಧಿಕಾರಿಗಳು ಅಲ್ಲಿಯ ಕೆಲವು ಸ್ಥಳೀಯರ ಪ್ರಭಾವಕ್ಕೆ ಒಳಗಾಗಿದ್ದಾರೆ ಎಂದು ದೂರು ಬಂದಿರುವುದರಿಂದ ಅದಕ್ಕೆ ಒಂದು ವಿಶೇಷ ಪೋಲೀಸ್ ಸಿಬ್ಬಂದಿಯನ್ನು ನೇಮಿಸಿ ತನಿಖೆ ಮಾಡಿಸುತ್ತೀರಾ ?

ಶ್ರೀ ಎಚ್. ಎಂ. ಚನಬಸಪ್ಪ.— ಆ ರೀತಿ ಆಪಾದನೆಗಳು ಬಂದರೆ ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ. ಈ ಕೇಸಿನಲ್ಲಿ ಸಿ. ಐ. ಡಿ. ಅವರು ಇನ್‌ವೆಸ್ಟಿಗೇಷನ್ ಮಾಡುತ್ತಿದ್ದಾರೆ.

ಶ್ರೀ ಎಚ್. ಟಿ. ಕೃಷ್ಣಪ್ಪ.— ಆ ಬಗ್ಗೆ ಆಪಾದನೆಗಳು ಏನಾದರೂ ಬಂದಿವೆಯೇ ?

ಶ್ರೀ ಎಚ್. ಎಂ ಚನ್ನಬಸಪ್ಪ — ಈ ಸಂಬಂಧದಲ್ಲಿ ಒಂದು ಅರ್ಜಿ ಬಂದಿದೆ. ಆದ್ದರಿಂದ ಅನುಮಾನಕ್ಕೆ ಎಡೆ ಇಲ್ಲದಂತೆ ಇರಲಿ ಎಂದು ಈ ಬಗ್ಗೆ ಸಿ. ಐ. ಡಿ. ಅವರು ಇನ್‌ವೆಸ್ಟಿಗೇಷನ್ ಮಾಡುತ್ತಿದ್ದಾರೆ.

ಅಧ್ಯಕ್ಷರು — ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಗಿಯಿತು.

Questions for Answers on the Day (but not taken up)

UPPER KRISHNA CANAL WORK IN GULBARGA DISTRICT

244. Sri BAPU GOWDA (Shahapur).— Will the Minister of State for Major Irrigation be pleased to state:—

(a) whether Upper Krishna canal work in Gulbarga District has been taken by under 64-Famine;

(b) if so, the length of canal excavated so far;

(c) the expenditure incurred upto 15-8-1973;

(d) whether the Government has any proposal to continue this work even after the famine condition is over?

Sri H. N. NANJE GOWDA (Minister of State for Major Irrigation).—

(a) Yes.

(b) Excavation of canals in upper Krishna has been tackled in 63 Miles.

(c) Expenditure incurred during:

1972-73	Rs. 21.16 lakhs
1973-74	Rs. 73.25 lakhs

(to end of 31-7-1973).

(d) Yes. This work will be continued even after famine condition is over.

RESTORATION OF BAGGANADU TANK IN HIRIYUR TALUK

390. Sri V. MASIYAPPA (Challakere).— Will the Minister for Public Works and Electricity be pleased to state:

(a) whether the estimates for the restoration of Bagganadu tank in Hiriyur Taluk, Chitradurga District has been sanctioned by the Government;

(b) if so, when the work is likely to be started?

Sri H. M. CHANABASAPPA (Minister for Public Works and Electricity).—

(a) No.

(b) This does not arise in view of reply to item (a).

NON-INCLUSION OF NAMES OF CHIEF OFFICERS AND MUNICIPALTIES IN M. A. S. LIST

401. Sri M. B. RAMASWAMY (Anekal).— Will the Minister for Municipal Administration be plased to state

(a) the number of Town Municipalties, Sanitary Boards, Town Boards, Corporations, City Municipalties and Notified Areas in the State.

(b) whether all of them have been taken to Municipal list.

(c) the number of notified Areas left out from the list and the reasons for not including in the list.

(d) whether it is a fact that several employees have been effected due to omissions of their names in the M. A. S. list

(e) whether it is a fact that the names of several employees have been removed from the list. if so, the names of the Chief officers, Municipalties left without including in the M. A. S. list ?

Sri B. BASAVALINGAPPA (Minister for Municipal Administration).—

(a)

(1)	Town Municipal Councils	210
(2)	Sanitary Boards	2
(3)	Town Boards	nil
(4)	Corporations	2
(5)	City Municipal Councils	14
(6)	Notified Area Committees	6

(b) There is no such list

(c) Does not arise, in view of reply clause (b)

(d) No.

(e) All the Chief Officers who were working in the Municipalities on the appointed day, i. e. 1st September 1970. have been taken over under the Mysore Municipal Adininistrtive Service.

10-00 A. M.

CALLING ATTENTION TO MATTERS OF URGENT PUBLIC IMPORTANCE

(i) Re: felling of forest in the Kodakani village of Soraba Taluk.

Sri KAGODU THIMMAPPA (Sagara).—I call the attention of the Minister for Agriculture and Forests to the fell ng of forest in Kodakani Village of Soraba Taluk.

Sri K. H. PATIL.— I wish to state as follows :—

There is an extent of 800 acres of minor forest at Kodkani in Sorab Taluk. The rainfall received in this zone is around 80″. This particular minor forest has a semievergreen type of vegetation containing mostly softwoods and the stocking is also quite poor. This type of natural forest yields low financial return. The increment put on per acre which is available for exploitation is about 10 tonnes over a period of 30 years in the best of conditions. An extent of 500 acres from this minor forest was selected for raising Eucalyptus plantations by Mysore State Forest Corporation Ltd. Eucalyptus has comeup very well in the adjoining area. It puts on an increment of 20 to 30 tonnes in this zone over a period of 10 years. Hence, in consideration of the economic apvantages of raising the industrial pulp material, it was dicided to take up Eucalyptus planting in this area.

It is brought out in the Notice that the public have protested against the clear felling of this rich forest. There has been protest but this has been from the encroachers in the area on the plea that the area should be made available to them for cultivation. During December 1972 a Member of this Legislature represented to me that the felling opera-

tions may not be taken up till the encroachers harvest the crop. I had stayed the felling operations pending enquiry. The Enquiry refealed that felling could be conducted without damaging the agricultural crops. Thereafter the stay was vacated. Again during last month the same Member represented that the clear felling operations should not be taken up here. On further enquiry it was verified that the encroachments covered an extent of about 70 acres and that the felling could be undertaken in such a manner that in the encroached area the clear felling could be taken up after harvesting of the agricultural crop. 500 acres have been earmarked here for clearance by way of 7 coupes of which the sale has been confirmed in case of 4 coupes. Instructions have been issued to the Department that the balance 3 coupes which contain the maximum encroached area may be taken up for clearance after the harvesting of the agricultural crop.

It may therefore be seen that even in the case of encroachers, Government have bestowed the maximum consideration to see that their efforts to raise agricultural crops at the current instance, do not go a waste. It would not be proper to condone such encroachments in the larger interest of the STATE.

ಶ್ರೀ ಕಾಗೋಡು ತಿಮ್ಮಪ್ಪ.—ಇಲ್ಲಿ ಅಕ್ರಮ ಸಾಗುವಳಿ ಮಾಡಿರುವದು ೭೦ ಎಕರೆಗಳು. ಅಕ್ರಮ ಸಾಗುವಳಿ ಮಾಡಿರುವವರ ಅನುಕೂಲಕ್ಕಾಗಿ ಅಲ್ಲಿದ್ದ ಕಾಡನ್ನು ಇಲ್ಲಿಯುವರೆಗೆ ಕಡಿಯಬಾರದೆಂದು ತೀರ್ಮಾನ ತೆಗೆದುಕೊಂಡು, ಈಗ ಅಲ್ಲಿ ನೀಲಗಿರಿ ಮರಗಳನ್ನು ಬೆಳೆಸುವದಕ್ಕೆ ಹೊರಟಿದ್ದೀರಿ. ಈ ೫೦೦ ಎಕರೆ ಕಾಡಿನ ಪ್ರದೇಶ ಏನಿದೆ, ಈ ಪ್ರದೇಶದಲ್ಲಿ ತಾವೇನಾದರೂ ನೀಲಗಿರಿ ಮರಗಳನ್ನು ಬೆಳೆಸುವದಕ್ಕೆ ಹೊರಟರೆ, ಅಲ್ಲಿರತಕ್ಕಂಥ ನೈಸರ್ಗಿಕ ಸಂಪತ್ತೇ ಹೊರಟು ಹೋಗುತ್ತದೆ ಮತ್ತು ಅದರ ಸುತ್ತುಮುತ್ತಲ ಪ್ರದೇಶವೆಲ್ಲಾ ಹಾಳಾಗಿ ಹೋಗುತ್ತದೆ. ಈಕಾಡು ಇರುವ ಪ್ರದೇಶಕ್ಕೆ ಒಂದು ಮೈಲಿ ದೂರದಲ್ಲಿ ಸಾವಿರಾರು ಎಕರೆ ಜಮೀನು ಇದೆ. ಅಲ್ಲಿ ಬೇಕಾದರೆ ತಾವು ನೀಲಗಿರಿ ಮರಗಳನ್ನು ಬೆಳೆಸಬಹುದು. ಈ ರೀತಿ ಮಾಡದೆ ೫೦೦ ಎಕರೆ ಕಾಡಿನ ಪ್ರದೇಶದಲ್ಲಿ ನೀಲಗಿರಿ ಮರಗಳನ್ನು ಬೆಳೆಸಿದ್ದೇ ಆದರೆ ನೈಸರ್ಗಿಕ ಸೌಂದರ್ಯವೇ ಹಾಳಾಗಿ ಹೋಗುತ್ತದೆ. ಆದ್ದರಿಂದ ಈ ಕಾಡನ್ನು ಹಾಗೆಯೇ ಉಳಿಸಿಕೊಂಡು, ಬೇರೆ ಕಡೆಯಲ್ಲಿ ಈ ನೀಲಗಿರಿ ಮರಗಳನ್ನು ಬೆಳೆಸುವದಕ್ಕೆ ಕಾರ್ಯಕ್ರಮ ಕೈಕೊಳ್ಳಬೇಕೆಂದು ಹೇಳುತ್ತೇನೆ. ಈಗೇನಾದರೂ ಕಾರ್ಯಕ್ರಮ ತೆಗೆದು

ಕೊಂಡಿದ್ದರೆ ಅದನ್ನು ತಡೆಹಿಡಿದು, ತಾವು ವಾಸ್ತವಿಕವಾಗಿ ಒಂದು ಸಲ ಸ್ಥಳ ಪರಿಶೀಲನೆ ಮಾಡಿ ನಂತರ ಕಾರ್ಯಕ್ರಮ ಕೈಕೊಳ್ಳುವದಕ್ಕೆ ವ್ಯವಸ್ಥೆ ಮಾಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಕೆ. ಎಚ್. ಪಾಟೀಲ — ಈಗ ನನ್ನ ಮುಂದಿರುವ ವರದಿಯ ಪ್ರಕಾರ, ತಜ್ಞರ ಸಲಹೆಯಂತೆ ಆ ಪ್ರದೇಶದಲ್ಲಿ ನೀಲಗಿರಿ ಮರಗಳನ್ನು ಬೆಳೆಸಬೇಕೆಂಬ ಕಾರ್ಯಕ್ರಮವಿದೆ. ಆದರೆ ಮಾನ್ಯ ಸದಸ್ಯರು ಕೇಳಿರುವ ಪ್ರಕಾರ ನಾನೇ ಸ್ವತ: ಆ ಸ್ಥಳವನ್ನು ಪರಿಶೀಲನೆ ಮಾಡಿ ನಂತರ ಯೋಗ್ಯವಾದ ಕಾರ್ಯಕ್ರಮ ಕೈಕೊಳ್ಳುತ್ತೇನೆ.

Re: Indiscriminate issue of No Objection Certificates by the C. I. T. B. in respect of Agricultural lands.

Sri T. R. SHAMANNA (Fort).—I beg to cell the attention of the hon. Minister for Municipal Anministration to the indiscriminate issue of No Objection Certificates by the City Improvement Trust Board in respect of Agiicultural lands to make them non agricultural lands.

Sri B. BASAVALINGAPPA (Minister for Municipal Administration and Housing).—I wish to make the following statement;

Issue of no objection certificate for the formation of Private Layout are being dealt by City Improvement Trust Board on a reference from the Deputy Commissioner or from the Societies and individuals. The opinion of City Improvement Trust Board will be furnished based on the outline Development plan prepared by the Planning Authority and approved by the Government and also based on the guide lines issued by the Government for the formation of layouts.

If the area comes outside the City Improvement Trust Board limits the opinion will be furnished stating that there is no City Improvement Trust Board Scheme in this area, and the opinion of the Planning Authority for the change of Zoning will have to be considered by the Planning Authority.

The representation of the President, Patrika Naukara Gruha Nirmana Sahakara Sangha, Bangalore requesting for issue of no objection Certificate to form a private layout in Sy. Nos. 66, 67, 68, 69, 70, 71, 74 and 78 of Chokkasandra Village, Bangalore South Taluk was presented on

30–7–1973. It came up before the Board at its meeting held on 29–8–1973, subject No. 1222. It was then resolved that further information be obtained regarding the Registration of the Institution, personnel of the Managing Committee, List of members of the Sangha Financial position and the land requested is owned by the sangha or not.

The authorities have submitted the list of members, mentioning the association as registered one and giving the names of the Managing Committee requesting for issue of no objection Certificate to purchase the land.

The subject again came up before the Board on 19–9–1973 vide subject No. 1337 and the Board has decided to defer the subject for want of further information. The area rquested for no objection Certificate does not come within the City Improvement Trust Board limits.

As regards Dinshaw Estate near Jalahalli no reference has been received by the City Improvement Trust Board in this regard.

ಶ್ರೀ ಟಿ. ಆರ್. ಶಾಮಣ್ಣ.—ದಿನ್‌ಷಾ ಎಸ್ಟೇಟಿನ ೩೦೦ ಎಕರೆಗಳ ಪೈಕಿ ೧೨೦ ಎಕರೆಗಳಿಗೆ ನೋ ಅಬ್ಜೆಕ್ಷನ್ ಸರ್ಟಿಫಿಕೇಟನ್ನು ಟ್ರಸ್ಟ ಬೋರ್ಡಿನವರು ಕೊಟ್ಟಿರುವದು ತಮ್ಮ ಗಮನಕ್ಕೆ ಬಂದಿದೆಯೇ? ಬಂದಿಲ್ಲದಿದ್ದರೆ, ಆ ಬಗ್ಗೆ ದಾಖಲೆ ಪತ್ರಗಳನ್ನು ತಮಗೆ ತಂದುಕೊಟ್ಟರೆ ತಕ್ಕ ಕಾರ್ಯಕ್ರಮ ಕೈಕೊಳ್ಳುತ್ತೀರಾ?

ಶ್ರೀ ಬಿ ಬಸವಲಿಂಗಪ್ಪ.—ಈ ವಿಚಾರದಲ್ಲಿ ಸರ್ಕಾರಕ್ಕೆ ಅಂತಹ ಯಾವ ಒಂದು ಕಾಗದ ಪತ್ರಗಳೂ ಬಂದಿಲ್ಲ. ಮಾನ್ಯ ಸದಸ್ಯರು ಕೊಟ್ಟಿದ್ದಾರೆ ಎಂದು ಹೇಳಿರುವದರಿಂದ ನಾನು ಸಂಬಧಪಟ್ಟ ಕಾಗದಪತ್ರಗಳನ್ನು ತರಿಸಿಕೊಂಡು ಸೂಕ್ತ ಕಾರ್ಯಕ್ರಮ ಕೈಕೊಳ್ಳುತ್ತೇನೆ.

ಶ್ರೀ ಟಿ. ಆರ್ ಶಾಮಣ್ಣ.—ಲ್ಯಾಂಡ ರಿಫಾರಮ್ಸ್ ಆಕ್ಟ ಜಾರಿಗೆ ಬರುವಾಗ ಅನೇಕರು ಅಗ್ರಿಕಲ್ಚರಲ್ ಲ್ಯಾಂಡನ್ನು ನಾನ್-ಅಗ್ರಿಕಲ್ಚರಲ್ ಲ್ಯಾಂಡ ಎಂದು ಮಾರ್ಪಡಿಸಿ, ಹೆಚ್ಚಿನ ಲಾಭ ಮಾಡಿಕೊಳ್ಳುವದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಇದರ ಬಗ್ಗೆ ಸರ್ಕಾರದವರು ಸೂಕ್ತ ಕಾರ್ಯಕ್ರಮವನ್ನು ಕೈಕೊಳ್ಳುತ್ತಾರೆಯೇ?

ಶ್ರೀ ಬಿ. ಬಸವಲಿಂಗಪ್ಪ—ಮಾನ್ಯ ಸದಸ್ಯರು ವ್ಯಕ್ತಪಡಿಸತಕ್ಕಂಥ ಅಭಿಪ್ರಾಯವನ್ನು ಸರ್ಕಾರ ಮೆಚ್ಚುತ್ತದೆ. ಇಂದು ಯಾರು ಯಾರು ಲಾಭ ಬಡುಕತನದಲ್ಲಿ ನಿರತರಾಗಿದ್ದಾರೆ, ಅಂತಹವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂದಿದ್ದೇವೆ. ಮತ್ತು ಯಾರು ಯಾರು ಈ ರೀತಿ ಅಗ್ರಿಕಲ್ಚರಲ್ ಲ್ಯಾಂಡನ್ನು ನಾನ್ ಅಗ್ರಿಕಲ್ಚರಲ್

ಲ್ಯಾಂಡ ಎಂದು ಮಾರ್ಪಡಿಸಿದ್ದಾರೋ, ಅಂತಹ ಎಲ್ಲ ಜಮೀನನ್ನು ಅಕ್ವೈರ್ ಮಾಡಬೇಕೆಂದು ನಾವು ಯೋಚನೆ ಮಾಡುತ್ತಿದ್ದೇವೆ.

PAPERS LAID ON THE TABLE

Shri M. Y. GHORPADE (Minister for Finance).— Madam Speaker; I beg to lay ;

Notification No. S. O. 1268 dated 5th July, 1973

Exemption of tax payable under the Mysore Sales Tax Act on the sale of UNICEF Greeting Cards and Calendars.

Under Section 39 of the Mysore sales Tax Act, 1957.

MADAM SPEAKER.— The Paper is laid.

Third Report of the Committee on public Undertakings Presentation.

Sri S. M. KRISHNAN (Malleswarm).— Madam Speaker, since Shri B. Bhasker Shetty. the Chairman of the Committee on Public Undertakings has resigned from the Chairmanship of the Committee, I beg to present the Third Report of the Committee, on Public Undertakings in respect of certain aspects of management of the State Government Companies along with the minutes and proceedings of the meetings of the Committee.

MADAM SPEAKER.— The report is presented.

STATEMENT BY MINISTER

Re:Unprecedented flood havoc in Kanakapura Taluk

Shri H. M. CHANNABASAPPA (Minister for Public Works and Electricity).— Madam Speakar, Yesterday I promised to make a Statement about the unprecedented flood havoc in Kanakapura Taluk. In pursuance of my promise, I am making the Statement.

It is reportd that consequent to good rainfall, most of the tanks in Kanakapura taluk were brimful prior to 25th of this month. There was a sudden snap down pour of rain of about 7″ on the night of 26th September, 1973 for a short duration of about 6½ hours from 10.30 p.m. on 26-9-73 to

about 5. a.m. on 27-9-73. The down pour is said to have been concentrated in the catchment of Antharaganga hole which is about 156 sq. miles. As a result of this sudden and unprecedented heavy rains in the catchment ,Bhimasandra Konasandra, Gadarnhally, Averimala or Gattal and Dodda-sadenahally tanks in Gattal hole catchment breached in succession within a peroid of about 6 hours before day break on 27-9-73. Chikkasadenahally tank lying in the same catchment but lying in a small subsidiary valley was however saved from breach by promt lowering of the west-eweir. The flood waters of all these tanks together with the flood waters of Rathamalahole, Kutlehole and other adjoining valleys gushed into the Maralwadi tank. This tank commonly called Mavathur tank is the terminal major tank in the series discharges to Arkavathi river tnd is situated about 2½ miles from Kanakapura. The sudden guss of collective flood waters into this tank which was already full resulted in a flash overflow of about 9½' over the crest level of the waste weir and about 1½' over the full length of the bund, resulting in its breach on the left flank at about 9 a.m. on 27-9-73 the sawadies in charge of this tank are reported to have rushed to the tank site at about 5. 30 a.m. only to find an overflow of 1½' on the top of the bund and about 9½' on the wasteweir. Being helpless, they immediately contacted and reported to the Asst. Engineer. The Asst. Engineer rushed to the spot immediately and found himself also helpless. The Asst. Engineer took prompt action to inform the PWD, the police and Revenue authorities and also alerted the people of Adanakuppe, Boodikuppe, Boradanakuppe villages and low lying areas af Kanakapura town and of such other areas likely to be affected. The tank has breached in a length of about 500′ and about 50′ depth in the left flank. The downstream aporn of the waste weir is completely washed away for a length of about 300′ along with the toe-wall and baffle walls. The rear portion of the bund near the sluice on the right side is also severely scoured.

Maralavadi is one of the oldest tanks with an athorized ayacut of about 2000 acres. It is a estimated that the discharge prior to breach was about 37,000 cusecs

as againist the disigned discharge of 8,000 cusece. It is reported that on Handi Dasanna was living in a hut in garden of one Sri Narasegouda with his wife, Snnamma. daughter Lxmamma, is son-in-law and four grand children. Immediately on Seeing sudden gush of flood, the two male members are reported to have attempted to save themselves and other members of the family climbing coconut trees. They were able to say themselves and the four small children leaving the too female members to their fate. The two female members were washed away in the floods. The body of Smt. Sannamma is reported to have been recovered while that of Smt. Laxmamma is not traced so for.

The damages to life and property, lands, crops and houses, etc., are being assessed by the revenue authorities. The damage to the tank is estimated to be of the order of about Rs. 5.00 lakhs.

Konasandra Tank :

This tank is the first in the serias of Guttalhole. It is a small one having an ayacut of 27 acres. Probably this is the first tank to have reached during the downpour. The flood is reported to have over flown the bund resulting in the breach. No loss of life is reported here. But there has been damages to crops and lands. The damages to the bund is estimated to be about Rs. 10,000. The damages to the land and crops, etc., are seperetely beeing assessed by the revenue athorities.

Bhimasandra Tank:

This is another small tank situated at the commenc ment of a subsidiary valley joining gattala hole having ayacut of 12 acres. This is also reported to have breached during the down pour. The cast of feeling up the breach is the order of Rs. 6,000. The losses to land and crops are being estimated by the revenue athorities. There is no loss of life here.

Gadaranahalli Tank:

This is the next in the series of the bheemasandra tank. Breach of this tank is presumed to have been accelerated by the breach of the Bhimasandra tank situated higher up. The cost of repairs to the breach is said to be about Rs. 7,000. The loss of crop and land are being assessed by the revenue authorities, and no loss of life is reported here.

AVERIMALA TANK OTHERWISE KNOWN AS GATTAHOLE TANK.

This is a fairly big tank having an ayacut of 60 acres. It is situated below the confluence of the two valleys viz., Konarsandra tank valley on the one side and Gadarnahalla tank valley on the other. The breach of this tank is obviously caused by the sudden breach of the three tanks above. The breach is for over a length of 300′. About 20 acres of land are reported to have rendered unfit. It is said that a workman's shed has collapsed and some agricultural implements have been washed away. 5 employees of Rural Education Society are reported to have been sleeping in what is called as 'Gandhi Farm' a little away from Rampura village belonging to the society. Out of the 5 pepole, 3 are reported to have received injuries and are admitted to the local hospital at Kanakapura. They are reported to be progressing. The causes of injuries and other details are yet to be received. The remaining two Viz. Hutchiaya and Venkatesh are said to be missing. It is feared that they are washed away. In Adamkuppe, a nearby village, one Kari Ankaiya is also stated to be missing. His fate also appears to be the same as that of the other two. The cost of repairs to the tank bund is estimated at Rs 50,000. The damage to the crop and land are being assessed by the Revenue authorities.

DODDASADENAHALLY TANK

The sixth tank that has breached is that at Doddasadenahally. This is situated at another subsidiary valley of

Gattala hole. The breach is said to have been over a length of 100′. The bund has been badly damaged and the cost of the damages is assessed at Rs. 15,000. The damages to lands, crop and huts, etc., are being assessed by the Revenue Department.

CHIKKASADANAHALLY TANK

There is yet another tank affected. It is Chikkasadanahally tank situated in another subsidiary valley which join Gattala hole feeding Maralawadi tank. This has an ayacut of 13 acres. It would have also breached but for the timely action taken to lower the waste-weir. The flood waters of this tank has also added to the swollen inflow to the Maralawadi tank. The cost of repairing the tank is of the order of Rs. 5,000. The damage to crop, land and huts, etc., is being assessed by the Revenue authorities.

The Deputy Commissioner, Bangalore District (Rural) is reported to have received information of the breach of the Maralawadi tank at 10.15 a.m. on 27–9–73. Immediately on receipt of the information, he rushed to the spot along with the Supdt. of Police. They inspected a number of affected villages like Adanakuppe, Harohally, Budikoppa, etc. By that time, the Asst. Commissioner, Ramanagaram sub-division and other PWD. and Revenue Officers were already there on the spot inspecting the affected areas. At Budikuppe, it is said that nearly 100 houses were under water for about an hour (from 9 a. m. to 10 a. m.) in Tigalara and Vokkaligara beedis. By the time the water rushed in, the villages are said to have vacated the houses.

On receiving information of this flood havoc and the breach of the Maralawadi tank, the Minister for PWD and Electricity also rushed to the spot with the C. E., M. I. & PHE (S). This was at about 5.30 p. m. The PWD, Revenue and Police Officers had already made a rough survey.

Sriyuts S. Kariyappa and Puttadas, MLAs were also

there along with them and other officers, I inspected the breached Maralawadi tank and some of the affected areas. The tank was completely depleted and there was flow in the gorge of the breach. Necessary instructions were issued to the Chief Engineer and the Revenue authorities to make a cemprehensive assessment of the damages to life and property caused by the floods. They were also directed to provide all such relief as may be possible to the victims. The Revenue and the PWD are now busy with assessing the damages to life and property and giving of relief to the sufferers. A sum of Rs. 50,000 is made available to the Revenue authorities for giving on the spot relief to the victims. More money will be made available as and when required.

The approximate cost of the damage caused to all the 7 tanks is of the order of Rs. 6.00 lakhs.

The Chief Engineer, MI & PHE (South) has been instructed to take such immediate measures as may be necessary to conserve as much water as is poseible to save the standing crops.

Government will spare no pains to make a comprehensive assessment of loss of life and property and give such relief as is possible.

The information now furnished is what has been made available at short notice.

ಶ್ರೀ ವಾಟಾಳ್ ನಾಗರಾಜ್.— ಕೆರೆಗಳು ಒಡೆದು ಬಹಳ ತೊಂದರೆಯಾಗಿದೆ. ಆ ತೊಂದರೆಗೆ ಸಿಕ್ಕಿಗತಕ್ಕಂಥ ಜನರಿಗೆ ಸರ್ಕಾರ ಯಾವ ರೀತಿ ಪರಿಹಾರ ಕೊಡಬೇಕೆಂದು ಏನಾದರೂ ಪರಿಹಾರ ಕಂಡುಹಿಡಿದು ಸೂಕ್ತವಾದ ಪರಿಹಾರ ಕೊಡುವದಕ್ಕೆ ಪ್ರಯತ್ನ ಮಾಡಿದ್ದಾರೆಯೇ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.— ನಾನು ಈಗಾಗಲೇ ಸರ್ಕಾರ ಸೂಕ್ತ ಪರಿಹಾರ ಕೊಡುವದಕ್ಕೆ ಯೋಚನೆ ಮಾಡುತ್ತದೆಂದು, ಸ್ಥಳದಲ್ಲಿ ಸಹಾಯಕೊಡುತ್ತೇವೆಂದು ನನ್ನ ಸ್ಟೇಟಮೆಂಟಿನಲ್ಲಿ ತಿಳಿಸಿದ್ದೇನೆ.

(ii) Re : Missing of Smt. Sumitra Desai.

ಶ್ರೀ ಜಿ. ಎಲ್. ಕಬಾಡಿ.— ನಾನು ಶ್ರೀಮತಿ ಸುಮಿತ್ರಾ ದೇಸಾಯಿಯವರ ಪ್ರಕರಣದ ಬಗ್ಗೆ ಒಂದು ಕಾಲಿಂಗ್ ಅಟೆನ್‌ಷನ್ ನೋಟೀಸ್‌ನ್ನು ಕಳುಹಿಸಿದ್ದೆ,

ಅದಕ್ಕೆ ಇವೊತ್ತು ಸರ್ಕಾರದವತಿಯಿಂದ ಒಂದ ಸ್ಟೇಟ್‌ಮೆಂಟ್ ಮಾಡುತ್ತೇವೆಂದು ಹೇಳಿದ್ದರು, ದಯಮಾಡಿ ಅದನ್ನು ಈಗ ಮಾಡಲು ತಾವು ಅಪ್ಪಣೆ ಕೊಡಬೇಕು.

Sri H. M. CHANNABASAPPA.— Madam Speaker, I seek your permission to make the following statement : The Hon'ble members will recall that I had made a statement earlier in this House regarding the circumstances leading to the resignation of Shri R. D. Kittur, the then Minister of State for Home, Government of Mysore. There-after, I had also expressed my personal view that I was convinced that Sri Kittur was probably the victim of circumstances beyond his control and that there were no reasons to suspect that he was guilty of infringement of any of the moral codes. I had informed the House that I had accepted the resignation of Sri R. D. Kittur so that a fair and impartial enquiry could be conducted into the whole affair. This matter has been raised in the Assembly subsequently also and I would like to take this opportunity to make a full statement relating to the incidents.

2. Miss. Desai, aged about 41 years, is the daughter of late Sri R. R. Desai of Tigara village in Gujarat. She was educated in the High School at a place called Parti, five miles from her native place, and subsequently joined her brother Shri Sumanth R. Desai, a Scientific Officer in the Bhabha Atomic Research Centre, Trombay, Bombay and stayed in a rented house in Bombay. She had her higher education in Bombay and obtained degree in Arts. She took up a course for Ph. D., but did not complete it.

3. Miss. Sumitra Desai, by all accounts, is a woman of very high moral calibre, deeply interested in religion, philosophy and politics. She had independent ideas and seems to have decided not to get married or in any way to be beholden to anyone. She cut herself off from her own mother and brother and moved about in various places of religious and philosophical significance. Attempts were made by her brother and by her mother to get her back to the family-fold, but in vain. In fact, Miss Sumitra Desai would not even accept any monetary assistance from her

mother or brother, though the income of the family out of the estate was of the order of Rs. 60,000/— per annum.

4. In October 1972, she proceeded to Panaji and stayed in what is known as "Maganlal Mansion", a Gujarati house where her relative, a student in the medical college was also staying. After a few days, she shifted to the Circuit House at Panaji and stayed there for over six months. During this period, she secured some interviews with some of the prominent persons in Goa and mentioned to them that she was engaged in writing a thesis on contomporary writers on women and on Sant Meera Bai. Extensive investigations made have clearly established that Miss. Desai was of a deeply religious bent of mind and spent a great deal of her time in devotional prayers, etc., Miss Desai visited the Public Library at Panaji a number of times and during one of her visits, she came to know some ladies who spoke to her in glowing terms of their friend, Smt. Kittur, wife of Shri R. D. Kittur, the then Minister of State for Home in the Government of Mysore.

5. Some family circumstances seem to have greatly upset her, and on 16th May 1973, Miss Desai left Panaji by bus for Londa. She was seen off at Panaji by her friends and before leaving, Miss Desai stated that she had decided to go to an ashram in Bangalore.

Miss. Desai's friends requested her to call on Mrs. Kittur who, in their opinion, would prove to be of a great help to her in Bangalore and could give her whatever assistance she might need.

6. Miss Desai travelled by train and reached Bangalore on the morning of 17th May 1973. After ascertaining the address of R. D. Kittur at the Bangalore Railway Station, she proceeded to his official residence at 9-30 a. m. She was prevented from going inside by the security staff. Miss. Desai sought an interview with Mrs. Kittur and that was granted. Mrs. Kittur made kind enquiries of Miss. Desai and when she found Miss. Desai had arrived that morning in a strange place and had not had food and had no place to stay, she invited her to stay in the official

residence of the Minister till Shri Kittur's return from Delhi for a period of 3 to four days. This was purely a humane gesture on the part of Mrs. Kittur in keeping with the tradition of Indian hospitality.

7. I would like to make it clear that on the day Miss. Desai came to Bangalore, Sri Kittur was not here, but was on tour.

Miss. Desai borrowed a postal envelope from Mrs. Kittur and wrote to her friends in Goa mentioning that sh had made up her mind to see Mr. R. D. Kittur before going to an ashram. This letter is clearly indicative of the fact that her visit to Bangalore was in order to go to an ashram and it was only during her journey in train that she made up her mind to see Sri Kittur and that she had no prior engagem fixed to do so. In this letter also, she has paid a tribute to the hospitality of Mrs. Kittur.

9. On 18th May 1973, Sri Kittur returned to Bangalore at about 9-30 a. m. from Delhi. An hour later, Mrs. Kittur mentioned to him about the arrival of Miss Desai. Sri Kittur contacted Miss Desai in the Verandah of the 1st floor of his official residence and found Miss Desai to be taking in manner which seemed incoherent and eratic.

10. In any case, Miss. Desai expressed her desire to meet Smt. Padmas-ini Asuri who was working in the institute for mentally retared children known as' Asha Niketan'. It would appear that Sri Kittur thought it best to send her away as quickly as possible. He therefore enlisted the assistance of the local police for making arrangements for her transport to the institute. Since Miss Desai was a stranger to the City and was, as I said earlier, talking in a rather incoherent and eratic manner, he directed the Deputy Commissioner of police to maintain a watch over her.

11. A taxi was fetched with the assistance of the local police and Miss. Desai went to ashram in that taxi. She was accompanied by the Personal Assistant to the Minister and constable in mufti.

12. Miss. Desai stayed in the institute till the next morning.

13. While staying at the institute, Miss Desai had informed some of the office bearers of the institute that she wished to visit Sri Sathya Sai Baba Ashram at White field Enquiries made at Whitefield disclosed that Miss. Desai stayed in the Railway quarters on the 20th and 21st May 1973 and in the Ashram of Sri Sathya Sai Baba on 22, 23, 24 and 25th May 1973. She again stayed in the railway quarters on the 26th May 1973. On the 28th; Miss. Desai left Whitefield by train at 11.00 a. m. Despite all afforts her further movements remain untraced.

10.30 P. M.

† ಶ್ರೀ ಟಿ. ಆರ್. ಶಾಮಣ್ಣ.— ಇಷ್ಟೆಲ್ಲಾ ಆದರೂ ಮಾನ್ಯ ಕಿತ್ತೂರ ಅವರನ್ನು ಏಕೆ ಬಲಿ ಕೊಟ್ಟರಿ ?

ಶ್ರೀ ಕಾಗೋಡು ತಿಮ್ಮಪ್ಪ.— ಇದರಲ್ಲಿ ಏನಾಗಿದೆ ಎಂದರೆ....

ಅಧ್ಯಕ್ಷರು.— ಇದರ ಬಗ್ಗೆ ಈಗ ಚರ್ಚೆ ಏನೂ ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.— ಕ್ಲಾರಿಫಿಕೇಷನ್ ಕೇಳುತ್ತೇನೆ. ಸುಮಿತ್ರಾ ದೇಸಾಯಿಯವರು ಎಲ್ಲಿಗೆ ಹೋಗುತ್ತಾರೆ ಎಲ್ಲಿಗೆ ಬರುತ್ತಾರೆ ಎನ್ನುವ ವಿಷಯ ಪ್ರಾಮುಖ್ಯವಲ್ಲ. ಈ ಪ್ರಕರಣದಲ್ಲಿ ಮಾನ್ಯ ಕಿತ್ತೂರ ಅವರು, ಮುಂದಿನ ತನಿಖೆಗೆ ಅನುವು ಆಗಲಿ ಎಂದು ರಾಜಿನಾಮೆ ಕೊಟ್ಟಿದ್ದಾರೆ. ಈ ನಿಮ್ಮ ತನಿಖೆಯಿಂದ ಕಿತ್ತೂರ ಅವರು ಎಷ್ಟರಮಟ್ಟಿಗೆ ಅಪರಾಧಿ ನಿರಪರಾಧಿ ಎನ್ನುವುದು ಸರ್ಕಾರದ ಮುಖಾಂತರ ಹೊರಗೆ ಬರಬೇಕು. ಅಲ್ಲದೆ ಮಾನ್ಯ ಕಿತ್ತೂರ ಅವರು ಸ್ಪಷ್ಟವಾಗಿ, ತಮ್ಮ ಕಾಗದದಲ್ಲಿ ತಿಳಿಸಿದ ಪ್ರಕಾರ ಒಬ್ಬ ಡೆಪ್ಯೂಟಿ ಕಮಿಷನರಗೆ ಇನ್ಸಟ್ರಕ್ಷನ್ ಕೊಟ್ಟು ಇವಳನ್ನು ವಾಚ್ ಮಾಡಬೇಕು ಎಂದು ಹೇಳಿದ್ದಾರೆ. ಇಷ್ಟು ಇನ್ಸಟ್ರಕ್ಷನ್ ಕೊಟ್ಟರೂ ಸಂಬಂಧಪಟ್ಟ ಪೋಲೀಸ ಇಲಾಖೆಯವರು ಅವಳ ಚಲನವಲನಗಳನ್ನು ಗಮನಿಸಿಲ್ಲ ಮತ್ತು ಅವಳನ್ನು ಹೊರಗೆ ಹೋಗುವುದಕ್ಕೆ ಏಕೆ ಬಿಟ್ಟರು ? ಈ ಪ್ರಕರಣ ಪತ್ರಿಕೆಯಲ್ಲಿ ಬಂದಿರತಕ್ಕದ್ದು ಕೂಡ ಒಬ್ಬ ಪ್ರಮುಖ ಪೋಲೀಸ ಅಧಿಕಾರಿಯಿಂದ, ಸರ್ಕಾರದವರು ಹಿಂದೆ ಕೊಟ್ಟಿರತಕ್ಕ ಹೇಳಿಕೆಗೂ, ಈಗ ಕೊಟ್ಟಿರತಕ್ಕ ಹೇಳಿಕೆಗೂ ವ್ಯತ್ಯಾಸ ಕಾಣುತ್ತದೆ. ಕಿತ್ತೂರ ಅವರ ಮನೆಯಲ್ಲಿ ಸುಮಿತ್ರಾ ದೇಸಾಯಿ ಮೂರು ದಿವಸ ಇದ್ದಾಗ ಅವಳ ನಡತೆ ಚೆನ್ನಾಗಿತ್ತು ಎಂದುಕಾಣುತ್ತದೆ. ಕಿತ್ತೂರು ಅವರು ದಿಲ್ಲಿಯಿಂದ ಬಂದಾಗ ಅವಳು ಸ್ವಲ್ಪ ಇನ್‌ಕೊಹೆರೆಂಟ್ ಆಗಿ ಅನುಮಾನಾಸ್ಪದವಾದ ರೀತಿಯಲ್ಲಿ ಮಾತನಾಡಿದ್ದು ಕಂಡಿದ್ದಾರೆಂದು ತಾವು ಹೇಳಿದ್ದೀರಿ. ಇದರಲ್ಲಿ ಒಬ್ಬ ಮಂತ್ರಿ ತನ್ನ ಸ್ಥಾನಕ್ಕೆ ರಾಜೀನಾಮೆ ಕೊಡುವಾಗ ಅವನು

ಎಷ್ಟರಮಟ್ಟಿಗೆ ಅಪರಾಧಿ, ನಿರಪರಾಧಿ ಎನ್ನತಕ್ಕದ್ದನ್ನು ಬಹಿರಂಗಪಡಿಸಬೇಕು. ಒಬ್ಬ ಮಂತ್ರಿ ಸ್ಥಾನದಲ್ಲಿರುವವರನ್ನು ತುಳಿಯುವುದು ಬಹಳ ಸುಲಭ. ಇವತ್ತು ಇದು ಅವರಿಗೆ ಆಗಿರಬಹುದು. ನಾಳೆ ನನಗೆ ಆಗಬಹುದು. ಸರ್ಕಾರ ಇವತ್ತು ಮಾನ್ಯ ಕಿತ್ತೂರ ಅವರನ್ನು ಅಪರಾಧಿ ಎಂದು ಹೇಳುತ್ತಾರೆಯೇ, ನಿರಪರಾಧಿ ಎಂದು ಹೇಳುತ್ತಾರೆಯೇ, ಈ ಎರಡು ಮಾತನ್ನೂ ಸ್ಪಷ್ಟಪಡಿಸಿಲ್ಲ. ಇದರಿಂದ ಅನುಮಾನಕ್ಕೆ ಆಸ್ಪದವಾಗುತ್ತದೆ. ಇವತ್ತು ಸಾರ್ವಜನಿಕರಲ್ಲಿ ಏನೋ ಒಂದು ರೀತಿಯ ಅನುಮಾನ ಮಾನ್ಯ ಕಿತ್ತೂರ ಅವರ ಮೇಲೆ ಬಂದಿದೆ. ಇದು ಮಂತ್ರಿಮಂಡಲದ ಮೇಲೆ ಬಂದ ಕಪ್ಪು ಛಾಯೆಯಾಗಿದೆ. ಈ ಅಪಾದನೆಯಿಂದ ಇವರನ್ನು ಮುಕ್ತರನ್ನಾಗಿ ಮಾಡುವುದಕ್ಕೆ ಸರ್ಕಾರ ಯಾವುದೇ ಪ್ರಯತ್ನವನ್ನು ಮಾಡಿಲ್ಲ. ಇದರ ಬಗ್ಗೆ ನಮಗೆ ಸ್ಪಷ್ಟೀಕರಣಬೇಕು. ಸಂಬಂಧಪಟ್ಟ ಅಧಿಕಾರಿಗೆ ಸರ್ಕಾರದ ಮಂತ್ರಿಗಳು ಇವಳ ಬಗ್ಗೆ ಸೂಚನೆ ಕೊಟ್ಟಿದ್ದರೂ, ಸೂಚನೆ ಪ್ರಕಾರ ಇವರು ಏಕೆ ನಡೆದುಕೊಳ್ಳಲಿಲ್ಲ. ಇವರ ಬಗ್ಗೆ ಏನು ಕ್ರಮ ತೆಗೆದುಗೂಂಡಿದ್ದೀರಿ ? ಎನ್ನುವುದು ನಮಗೆ ಗೊತ್ತಾಗಬೇಕು. ಪತ್ರಿಕೆಗೆ ಕೊಟ್ಟಿರತಕ್ಕ ವರದಿ, ಒಬ್ಬ ಪೋಲೀಸ ಅಧಿಕಾರಿಯ ಮನೆಯಿಂದ ಹೊರಟಿದೆ. ಇದರ ಬಗ್ಗೆಯೂ ನಮಗೆ ಸ್ಪಷ್ಟೀಕರಣಬೇಕು.

ಶ್ರೀ ಜೆ.ಎಲ್.ಕಬಾಡಿ (ಬಳ್ಳೊಳ್ಳಿ) — ಸುಮಿತ್ರಾ ದೇಸಾಯಿಯವರ ಪ್ರಕರಣ ಮೆ ೨೨ನೇ ತಾರೀಖಿನ ಸಂಯುಕ್ತ ಕರ್ನಾಟಕ ದಿನಪತ್ರಿಕೆಯಲ್ಲಿ ಪ್ರಕಟಣೆಯಾಯಿತು. ಸುಮಿತ್ರಾ ದೇಸಾಯಿ ಎಜುಕೇಟೆಡ್, ಅವರು ಹಾಗೆ ಇದ್ದರು, ಹೀಗೆ ಇದ್ದರೂ ಎಂದು ಪ್ರಕಟಣೆಯಾಯಿತು. ಅದಾದ ನಂತರ ಈವಿಷಯ ಹೊರಗೆ ಹೇಗೆಬಿತ್ತು, ಇದಕ್ಕೆ ಯಾರು ಕಾರಣಭೂತರು ? ಕಿತ್ತೂರ ಅವರ ಮನೆಯ ಹೆಂಗಸರೇ ? ಪತ್ರಿಕೆಗೆ ಇನ್‌ಫರ್ಮೇಷನ ಕೊಟ್ಟಿದ್ದು ಯಾರು ಎನ್ನುವುದಕ್ಕೆ ಪೂರ್ತಿ ಎನ್‌ಕ್ವಯರಿ ಆಗಬೇಕು. ಏಕೆಂದರೆ ಪೋಲೀಸರ ಧಕ್ಷತೆ ಮತ್ತು ಅಧಕ್ಷತೆಯ ಪ್ರಶ್ನೆಯನ್ನು ಒಳಗೊಂಡಿದೆ. ಪೋಲೀಸರು ಸರ್ಕಾರದ ಮೇಲೆ ಒಂದು ಕಳಂಕ ತರಬೇಕು ಎನ್ನುವ ಉದ್ದೇಶದಿಂದ ಇದು ಪತ್ರಿಕೆಯಲ್ಲಿ ಪ್ರಕಟಣೆಯಾಗಿದೆ ಎನ್ನುವುದು ತಮ್ಮ ಹೇಳಿಕೆಯಿಂದ ಸ್ಪಷ್ಟವಾಗಿ ಗೊತ್ತಾಗುತ್ತದೆ. ಅದಕ್ಕೋಸ್ಕರ ಈ ಒಂದು ಆರೋಪವನ್ನು ಮುಚ್ಚಿಕೊಳ್ಳಬೇಕು ಎನ್ನುವ ಉದ್ದೇಶದಿಂದ ಸರ್ಕಾರ ಮಾನ್ಯ ಕಿತ್ತೂರ ಅವರನ್ನು ಬಲಿ ಕೊಟ್ಟಿದ್ದಾರೆ. ಒಬ್ಬ ಹರಿಜನ ಮಂತ್ರಿಯನ್ನು ಬಲಿಕೊಟ್ಟಿದ್ದಾರೆ. ಅದರ ಸಲುವಾಗಿ, ಇಡೀ ದೇಶದಲ್ಲಿ ಹರಿಜನರಿಗಾದಂಥ ನೋವು, ಸರ್ಕಾರದ ಮೇಲೆ ಅದರ ಪರಿಣಾಮ ಆಗದೆ ಇರಲಾರದು. ಇದರ ಬಗ್ಗೆ ತಾವು ಪೂರ್ತಿಯಾದ ತನಿಖೆಯನ್ನು ನಡೆಸಬೇಕು. ಇದರಲ್ಲಿ ಯಾವ ಅಧಿಕಾರಿ ಏನು ಮಾಡಿದ್ದಾನೆ, ಎನ್ನುವುದನ್ನು ಪೂರ್ತಿಯಾಗಿ ತನಿಖೆ ಮಾಡಲಿಕ್ಕೆ ತಾವು ತಯಾರಿದ್ದೀರಾ ? ಇದರ ಬಗ್ಗೆ ಕ್ರಮವನ್ನು ಹೇಗೆ ತೆಗೆದುಕೊಳ್ಳುತ್ತೀರಿ ? ಎನ್ನುವುದನ್ನು ನಮಗೆ ಸ್ಪಷ್ಟಪಡಿಸಬೇಕು. ಮತ್ತೆ, ಮಾನ್ಯ ಮುಖ್ಯಮಂತ್ರಿಗಳಿಗೆ ಕಿತ್ತೂರ ಅವರು ಪತ್ರವನ್ನು ಬರೆದಿದ್ದಾರೆ. ಕಿತ್ತೂರ ಅವರು ಇವರಿಗೆ ಏನು ಬರೆದರು, ಯಾವ ತರಹಸ್ಟೇಟ್‌ಮೆಂಟ್ ಮಾಡಿದ್ದಾರೆ, ರಾಜೀನಾಮೆ

ಕೊಡಬೇಕಾದರೆ, ಏನೇನು ಕಾರಣವನ್ನು ಅವರು ಕೊಟ್ಟಿದ್ದಾರೆ, ಇದನ್ನೆಲ್ಲಾ ಸ್ಪಷ್ಟವಾಗಿ ಹೇಳಿಲ್ಲ. ಹರಿಜನ ಮಂತ್ರಿಯವರ ಮೇಲೆ ಮಾಡಿರತಕ್ಕ ಅಪಾದನೆಯನ್ನು, ಕಳಂಕದೋಷವಾಗಿರತಕ್ಕ ವಿಚಾರವನ್ನು ಸ್ಪಷ್ಟವಾಗಿ ತಾವು ಇನ್‌ವೆಸ್ಟಿಗೇಟ್ ಮಾಡಬೇಕು ಎಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ

ಶ್ರೀ ಕೆ. ಪ್ರಭಾಕರ.— ಮಾನ್ಯ ಅಧ್ಯಕ್ಷರೇ, ಮಾನ್ಯ ಕಿತ್ತೂರ ಅವರ ಪ್ರಕರಣ ಹೊರಬಿದ್ದು ಸುಮಾರು ೧೫ ದಿವಸವಾಯಿತು.

ಅಧ್ಯಕ್ಷರು.— ಅದರ ಮೇಲೆ ತಮ್ಮ ಭಾಷಣವಾಗಬೇಕೆ ?

ಶ್ರೀ ಜೆ. ಎಲ್. ಕಬಾಡಿ — ಅವರಿಗೆ ಗೊತ್ತಿರತಕ್ಕ ವಿಚಾರಗಳು ಕೆಲವು ಇವೆ, ಅವರು ಬಿಚ್ಚು ಮನಸ್ಸಿನಿಂದ ಹೇಳುತ್ತಾರೆಂದು ನಾನು ಹೇಳುತ್ತೇನೆ.

ಅಧ್ಯಕ್ಷರು.— ಇದರ ಬಗ್ಗೆ ವಾದವಿವಾದ ಇತ್ತು. ಚೀಫ್ ಮಿನಿಸ್ಟರ್ ಅವರು ನಾನು ಸ್ಟೇಟ್‌ಮೆಂಟ್ ಮಾಡುತ್ತೇನೆಂದು ಹೇಳಿದರು, ಆ ರೀತಿ ಸ್ಟೇಟ್‌ಮೆಂಟ್ ಅನ್ನು ಮಾಡಿದ್ದಾರೆ. ಅದರ ಮೇಲೆ ಒಬ್ಬೊಬ್ಬರು ಭಾಷಣ ಮಾಡುವುದಕ್ಕೆ ಹೋಯಿತು ಎಂದರೆ ಹೇಗೆ ?

ಶ್ರೀ ಎಂ. ಎಸ್. ಕೃಷ್ಣನ್.— ಸ್ಪಷ್ಟೀಕರಣ ಕೇಳಬೇಕು

ಅಧ್ಯಕ್ಷರು — ಮಾನ್ಯ ತಿಮ್ಮಪ್ಪನವರು ಇದರ ಬಗ್ಗೆ ೫ ನಿಮಿಷ ಭಾಷಣ ಮಾಡಿದರು. ಮಾನ್ಯ ಪ್ರಭಾಕರ್ ಅವರು ೧೦ ನಿಮಿಷ ಮಾತನಾಡುತ್ತಾರೆ, ಹೀಗೆ ಆಯಿತು ಎಂದರೆ ನಾವು ಬಿಲ್ಸ್ ತೆಗೆದುಕೊಳ್ಳುವುದು ಯಾವಾಗ ?

ಶ್ರೀ ಕೆ. ಪ್ರಭಾಕರ್ — ಈ ವಿಷಯದ ಬಗ್ಗೆ ಪ್ರಭಾಕರ ಅವರಿಗೆ ಕೆಲವು ವಿಷಯ ಗೊತ್ತು ಅವರು ಹೇಳಬೇಕು ಎಂದು ಮಾನ್ಯ ಗೆಳೆಯರು ಏನು ಹೇಳಿದರು ಅದು ಸುಳ್ಳು. ಪತ್ರಿಕೆಯಲ್ಲಿ ಊಹೆಯ ಮೇಲೆ ಕೆಲವು ವಿಷಯಗಳನ್ನು ಹಾಕಿದ್ದರು. ನನ್ನ ಅಭಿಪ್ರಾಯದಲ್ಲಿ ಮಾನ್ಯ ಕಿತ್ತೂರ್ ಅವರು ನೀತಿ ಸಂಬಂಧವಾದ ತಪ್ಪನ್ನು ಮಾಡಿಲ್ಲ ಎನ್ನುವುದು ಸ್ವವೇದ್ಯ, ನಿರ್ವಿವಾದ ವಿಚಾರ ಎನ್ನುವುದು ತಾವು ಓದಿದಂತ ಹೇಳಿಕೆಯಿಂದ ಗೊತ್ತಾಗುತ್ತದೆ. ಇದು ನನ್ನಮಟ್ಟಿಗೆ ನಿರ್ವಿವಾದವಾದುದು. ಬೆಂಗಳೂರಿನ ಆಶ್ರಮವಾಸಿಯಾಗುವುದಾದರೆ ಅನುಕೂಲಮಾಡಿ ಕೊಡುವುದಾಗಿ ತಿಳಿಸಿದ್ದಾರೆ. ಇದಕ್ಕೆ ಹಿನ್ನೆಲೆ ಗೊತ್ತಿಲ್ಲ. ಸುಮಿತ್ರ ದೇಸಾಯಿವರು ಬೆಂಗಳೂರಿಗೆ ಹೋದಾಗ ಕಿತ್ತೂರವರ ಮನೆಯವರು ಅನುಕೂಲ ಮಾಡಿಕೊಡುವರು ಎಂದು ಹೇಳಿರುವದಾಗಿ ಕೆಲವರು ಹೇಳಿದರು ಎಂದು ವರದಿಯಾಗಿದೆ. ಬೆಂಗಳೂರಿನಲ್ಲಿ ೧೮ ಲಕ್ಷ ಜನರಿರುವಾಗ ಕಿತ್ತೂರ ಮನೆಯವರೇ ಏಕೆ ಅನುಕೂಲ ಮಾಡಿಕೊಡುವದಾಗಿ ಹೇಳಿದರು. ಈ ವಿಚಾರದಲ್ಲಿ ಅನುಮಾನವಿದೆ. ಸತ್ಯಾಸತ್ಯತೆ ತಿಳಿಯದೆ ಕಿತ್ತೂರರವರು ಬಲಿಯಾಗುವದಕ್ಕೆ ಅವಕಾಶ ಕೊಡಬೇಡಿ ಎಂದು ಹೇಳಿರುವದೂ ಇದೆ. ನಿಜವಾಗಿಯೂ ನೋಡಿದರೆ ಕಿತ್ತೂರರವರು ತಪ್ಪಿತಸ್ಥರಲ್ಲ ಎಂಬುದು ಸ್ವಯಂವೇದ್ಯವಾಗಿದೆ. ಈಗ ಮುಂದಿನ ವಿಚಾರ ಗೊತ್ತಿಲ್ಲ. ಎನ್‌ಕ್ವೈರಿ ಆಗಬೇಕೆಂದು ಹೇಳು

ವದಾದರೆ ಕಿತ್ತೂರರವರ ವಿಚಾರ ಇನ್ನೂ ಕೆಲವು ದಿವಸ ಹೀಗೇ ಇರಬೇಕು. ಎನ್‌ಕ್ವೈರಿ ಆಗಿದೆ. ಮುಂದಿನ ವಿಷಯ ಗೊತ್ತಿಲ್ಲ ಅಂದರೆ ಮತ್ತೆ ಕಿತ್ತೂರರವರು ಮಂತ್ರಿಯಾಗಿ ಬರಬೇಕು, ಒಬ್ಬರನ್ನು ಬಲಿಕೊಟ್ಟು ಇನ್ನೊಬ್ಬರು ಮಂತ್ರಿಯಾಗುವದು ನೀಚತನ. ಇನ್ನೂ ಎನ್‌ಕ್ವೈರಿ ಆಗಬೇಕೆಂದರೆ ಸರ್ವ ಪರೀಕ್ಷೆಯಲ್ಲಿ ಕಿತ್ತೂರರವರು ಇರಬೇಕು. ಅವರು ಒಳ್ಳೆಯವರೆ ದು ಗೊತ್ತಾದರೆ ಮತ್ತೆ ಅವರು ಮಂತ್ರಿಯಾಗಲೂ ಅವಕಾಶ ಕೊಡಬೇಕು. ಎನ್‌ಕ್ವೈರಿ ಕಂಪ್ಲೀಟ್ ಆಗುವವರೆಗೆ ಅವರು ತಪ್ಪಿತಸ್ತರೆಂಬ ಭಾವನೆಯಿದ್ದರೆ ಹೀಗೆ ಇರಬೇಕು ಎನ್‌ಕ್ವೈರಿ ಮುಂದುವರೆಯುತ್ತದೆ ಎಂದು ಹೇಳಿಲ್ಲ. ಕಿತ್ತೂರವರು ತಪ್ಪಿತಸ್ತರಲ್ಲವೆಂದು ಹೇಳಿರುವದರಿಂದ ನಮಗೆ ನಿಜವಾಗಿಯೂ ಸಂತೋಷವಾಗಿದೆ. ಕಿತ್ತೂರವರು ತಪ್ಪಿತಸ್ತರಲ್ಲ, ಮುಂದಿನ ವಿಷಯವೇನಾಗಿದೆ ಗೊತ್ತಿಲ್ಲ, ಸುಮಿತ್ರಾ ಚರಿತ್ರೆ ಇಲ್ಲಿಗೆ ಮುಗಿಯಿತು ಎಂದು ಹೇಳುವದಾದರೆ ಕಿತ್ತೂರರವರು ಮಂತ್ರಿಯಾಗಬೇಕು. ಎನ್‌ಕ್ವೈರಿ ಮುಗಿಯದೆ ಇದ್ದರೆ ಕಿತ್ತೂರರವರು ಈಗ ಮಂತ್ರಿಯಾಗುವದಿಲ್ಲ.

ಶ್ರೀ ಎಂ. ಮಲ್ಲಪ್ಪ.— ತಾವೇನು ಹೇಳಬೇಕೆಂದಿದ್ದೀರೋ ಅದು ಡೆಪ್ಯೂಟಿ ಲೀಡರ್‌ರವರಿಗೆ ಗೊತ್ತಾಗಿದೆ. ಆದುದರಿಂದ ದಯೆಯಿಟ್ಟು ತಾವು ಇನ್ನು ಹೇಳುವದು ಬೇಡ, ಬೇರೆಯವರಿಗೆ ಅವಕಾಶ ಕೊಡಿ.

ಶ್ರೀ ಕೆ. ಪ್ರಭಾಕರ್.— ಈಗ ಕಿತ್ತೂರರವರು ತಪ್ಪಿತಸ್ಥರಲ್ಲ, ಅವರು ಮಂತ್ರಿಯಾಗಿ ಬರುವದು ಸೂಕ್ತ. ಎನ್‌ಕ್ವೈರಿ ಮುಗಿದಿದೆಯೋ, ಇಲ್ಲವೇ ಎಂಬುದನ್ನು ಖಚಿತವಾಗಿ ಹೇಳಬೇಕು. ಸುಮಿತ್ರಾ ದೇಸಾಯಿ ಒಳ್ಳೆಯವರು ಎಂದು ಹೇಳುವುದರಿಂದ ಕಿತ್ತೂರರವರ ತಪ್ಪಿಲ್ಲ. ನಾನು ಹೇಳಿದ ವಿಷಯಗಳ ಬಗ್ಗೆ ಮಂತ್ರಿಗಳು ಸ್ಪಷ್ಟಪಡಿಸಬೇಕು, ವಿಶದೀಕರಿಸಬೇಕು.

ಶ್ರೀ ವಾಟಾಳ ನಾಗರಾಜ್ — ಅಧ್ಯಕ್ಷರೇ, ಹಿಂದೆ ಕೊಟ್ಟ ಹೇಳಿಕೆಗೂ ಈಗ ಕೊಟ್ಟಿರುವ ಹೇಳಿಕೆಗೂ ಬಹಳ ಅಂತರವಿದೆ. ಹಿಂದೆ ಕಿತ್ತೂರ್‌ರವರು ಹೇಳಿರುವ ಪ್ರಕಾರ ದೆಹಲಿಯಿಂದ ಬಂದಾಗ ಅವರನ್ನು ನೋಡಿದ್ದಾರೆ. ೧೮ ನೆಯ ತಾರೀಖು ಅವರು ಬಂದರು, ೧೯ ನೋಡಿವರು. ಮೂರು ದಿವಸ ಅವರ ಮನೆಯಲ್ಲಿ ಇದ್ದರು ಎಂದು ಹೇಳಿದ್ದಾರೆ. ಸರಿಯಾದ ವಿಚಾರ ಸರಕಾರಕ್ಕೆ ಗೊತ್ತಿಲ್ಲ. ಅಧಿಕಾರಿಗಳು ಮಿಸ್‌ಲೀಡ್ ಮಾಡುತ್ತಿದ್ದಾರೆ. ಇದು ಸ್ಪಷ್ಟವಾಗಿದೆ. ಡಿ. ಸಿ. ಪಿ. ಎಲ್ ಆಂಡ್ ಓ ಅವರು ಕಿತ್ತೂರರವರನ್ನು, ಸುಮಿತ್ರ ದೇಸಾಯಿಯವರನ್ನು ವಿಸಿಟ್ ಮಾಡಿದ್ದಾರೆ ಅವರ ರಿಪೋರ್ಟ್ ಏನು ? ಅಧಿಕಾರಿಗಳ ವರದಿಯೇನು ? ಅದರ ಬಗ್ಗೆ ಇದುವರೆಗೆ ಸರಕಾರ ಸ್ಪಷ್ಟೀಕರಿಸುತ್ತಾ ಇಲ್ಲ. ಇದರ ಅರ್ಥವೇನು ? ಉದ್ದೇಶಪೂರ್ವಕವಾಗಿ ದಿನಕ್ಕೊಂದು ಕಟ್ಟು ಕಥೆ ಕಟ್ಟುತ್ತಾ ಇದ್ದೀರಿ ಎಂಬುದು ಇದರಿಂದ ಅರ್ಥವಾಗುತ್ತದೆ. ಸರಕಾರದ ಸ್ಪಷ್ಟ ಅಭಿಪ್ರಾಯ ಸೂಚಿತವಾಗಿಲ್ಲ. ಕಿತ್ತೂರ್‌ರವರು

ಅಪರಾಧಿಯೋ, ಅಲ್ಲವೇ ಎಂಬುದು ಹೇಳಿಕೆಯಲ್ಲಿ ಸ್ಪಷ್ಟವಾಗಿಲ್ಲ. ಇದು ಸ್ಪಷ್ಟವಾಗಬೇಕು. ಸರಕಾರ ಇದನ್ನು ಈ ಕ್ಷಣದಲ್ಲಿ ತೀರ್ಮಾನ ಮಾಡಲಿ.

ಮತ್ತೊಂದು ವಿಚಾರ. ವೈಟ್‌ಫೀಲ್ಡ್‌ನಲ್ಲಿ ಮೂರು ದಿವಸ ಇದ್ದರು ಎಂದು ಹೇಳುತ್ತಿದ್ದಾರೆ. ಇದ್ದರೆ ಸರಕಾರ ಏಕೆ ಅವರನ್ನು ವಿಾಟ್ ಮಾಡಲಿಲ್ಲ ? ಪೋಲೀಸಿನವರೇಕೆ ಅವರನ್ನು ವಿಾಟ್ ಮಾಡಲಿಲ್ಲ ? ಜವಾಬ್ದಾರಿಯುತವಾದ ಒಬ್ಬ ಮಂತ್ರಿಗಳ ಮೇಲೆ ಆರೋಪ ಬಂದಿದೆ. ಸರಕಾರ ಇದರ ಬಗ್ಗೆ ಸರಿಯಾದ ಎನ್‌ಕ್ವೈರಿ ನಡೆಸಿ ಒಂದು ನಿರ್ಧಾರಕ್ಕೆ ಬರಲೇಬೇಕು. ಮಂತ್ರಿಗಳು ಅಪರಾಧಿಯೋ ಅಲ್ಲವೇ ಎಂಬುದನ್ನು ಸಾಬೀತು ಮಾಡಬೇಕು. ಸುಮಿತ್ರಾದೇಶಾಯಿ ಸಿಕ್ಕಿಲ್ಲವೆಂದು ಹೇಳುತ್ತಿದ್ದಾರೆ. ಮೂರು ದಿವಸ ವೈಟ್‌ಫೀಲ್ಡ್‌ನಲ್ಲಿದ್ದರೆ ಏಕೆ ಹೋಗಿ ತನಿಖೆ ಮಾಡಲಿಲ್ಲ ? ಇದನ್ನು ಸ್ಪಷ್ಟ ಮಾಡದೆ ಒಬ್ಬರಮೇಲೆ ಗೂಬೆ ಕೂಡಿಸುವದು ಬೇಡ

ಶ್ರೀ ಎಂ. ಎಸ್. ಕೃಷ್ಣನ್.— ನಾನೂ ಸಹ ಒಂದು ವಿಷಯ ಹೇಳಬೇಕು. ಮಾನ್ಯ ಚನ್ನಬಸಪ್ಪನವರ ಹೇಳಿಕೆ ಪೂರ್ವಗ್ರಹ ಪೀಡಿತರ ಕಟ್ಟುಕಥೆಯ ರೀತಿಯಲ್ಲಿದೆ ಎಂದು ಸ್ಪಷ್ಟವಾಗಿ ಹೇಳಬೇಕಾಗಿದೆ. ಮೊದಲನೆಯ ಪಾಯಿಂಟ್ ಏನೆಂದರೆ ಅವರ ಹೇಳಿಕೆಯಲ್ಲಿ ಮುಂದೇನು ಮಾಡಿದರು ಎಂಬ ಪ್ರಶ್ನೆಯ ಬಗ್ಗೆ ಉತ್ತರ ಕೊಟ್ಟಿಲ್ಲ. ೧೫ ದಿವಸ ೨೮ ರವರೆಗೆ ಬೆಂಗಳೂರಿನಲ್ಲಿದ್ದರು ಎಂದು ಈಗ ಮೊದಲನೆಯ ಸಲ ಹೇಳಿದ್ದೀರಿ. ಇದರಿಂದ ಅಸೆಂಬ್ಲಿಯಲ್ಲಿ ಚರ್ಚೆಯಾಗುವಾಗ ಸುಮಿತ್ರಾ ದೇಶಾಯಿಯವರು ಬೆಂಗಳೂರಿನಲ್ಲೇ ಇದ್ದರು ಎಂಬುದು ಸ್ಪಷ್ಟವಾಗುವದು. ೨೮ ರಿಂದ ಮಾಯವಾಗಿದ್ದಾರೆ ಮಾಯವಾದ ಮೇಲೆ ಡಿ. ಸಿ. ಸುತ್ತು ಪೋಲಿಸಿನವರಿಗೆ ಅವರ ಮೇಲೆ ನಿಗ ಇಡಬೇಕೆಂದು ತಿಳಿವಳಿಕೆ ಕೊಡಲಾಗಿದೆ. ಏಕೆ ಕೊಟ್ಟರಿ ? ಈಗ ಏನಾಗಿದೆಯೋ ಗೊತ್ತಿಲ್ಲ ಸಿ. ಬಿ. ಐಗೆ ಈ ವಿಚಾರವನ್ನು ಒಪ್ಪಿಸಿರುವದಾಗಿ ಪತ್ರಿಕೆಯಲ್ಲಿ ಬಂದಿದೆ ಸಿ. ಬಿ. ಐ ವರದಿಯೇನು ಎಂಬುದನ್ನು ಸ್ಪಷ್ಟಮಾಡಿಲ್ಲ. ಲೇಟೆಸ್ಟ ಪೊಸಿಷನ್ ಗೊತ್ತಿಲ್ಲ. ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಸುಮಿತ್ರಾ ದೇಶಾಯಿ ಕಲ್ಕತ್ತಾದಲ್ಲಿ ಸ್ಪಷ್ಟವಾಗಿ ಹೇಳಿಕೆ ಕೊಟ್ಟಿದ್ದಾರೆ ಎಂದು ಪ್ರಕಟವಾಗಿದೆ. ಅವರಲ್ಲಿ ಮಾತನಾಡಿದಾಗ ಅವರ ವರ್ತನೆ ಬೇರೆ ರೀತಿಯಾಗಿದೆ ಎಂದು ತಿಳಿಸಿದ್ದಾರೆ. ಸಿ ಬಿ.ಐ. ಮಾಡಿರುವುದೇನು ಎಂಬುದನ್ನು ಹೇಳಬೇಕು. ಕಿತ್ತೂರ್‌ರವರ ಸ್ಟೇಟ್‌ಮೆಂಟ ಸಹ ಇದೆ

"I am a teetctaller. I have not done any such thing. I am a family man".

ಎಂದು ಅವರು ಹೇಳಿದ್ದಾರೆ.

ಹೀಗೆಲ್ಲಾ ಇರುವುದರಿಂದ ಇವುಗಳ ಬಗ್ಗೆ ಸರ್ಕಾರದವರು ಒಂದು ಸ್ಪಷ್ಟವಾದ ಅಭಿಪ್ರಾಯವನ್ನು ಕೊಡಬೇಕು. ಹಾಗೆ ಮಾಡದಿದ್ದರೆ ಸಾರ್ವಜನಿಕರಿಗೆ ಆ ಕಿತ್ತೂರ್ ಅವರ ಬಗ್ಗೆ ಏನೊಂದು ಅಭಿಪ್ರಾಯ ಮಾಡಬಹುದೆಂದರೆ ಅವರು ಈ ಕೆಲಸವನ್ನು ಮಾಡಿದ್ದರೂ ಮಾಡಿರಬಹುದೆಂಬ ಶಂಕೆ ಮೂಡುವುದಕ್ಕೆ ಅವಕಾಶವಾಗಿ' ಅದನ್ನು

ಈ ದಿವಸ ಮುಚ್ಚಿಹಾಕುವುದಕ್ಕಾಗಿ ಸರ್ಕಾರದವರು ಈ ರೀತಿ ಹೇಳಿಕೆಗಳನ್ನು ಕೊಡುತ್ತಾರೆಂಬ ಒಂದು ಅಭಿಪ್ರಾಯಕ್ಕೆ ಬರಲು ಅವಕಾಶವಾಗುತ್ತದೆ. ಆದುದರಿಂದ ಸರ್ಕಾರದವರು ಈ ವಿಚಾರದಲ್ಲಿ ಒಂದು ಸ್ಪಷ್ಟವಾದ ಹೇಳಿಕೆಯನ್ನು ಕೊಡಬೇಕೆಂದು ಹೇಳುತ್ತೇನೆ.

ಇನ್ನೊಂದು ವಿಚಾರವೇನೆಂದರೆ ಆ ಪೋಲೀಸಿನವರು ಈ ವಿಚಾರದಲ್ಲಿ ಇಷ್ಟು ಅಜಾಗರೂಕತೆಯಿಂದ ವರ್ತಿಸಿದ್ದರ ಬಗ್ಗೆ ಸರ್ಕಾರದವರು ಏನು ಕಾರ್ಯಕ್ರಮ ಕೈಗೊಂಡಿದ್ದಾರೆ ಎಂಬುದನ್ನು ತಿಳಿಸಬೇಕು ಅಲ್ಲದೆ ಆ ಡೆಪ್ಯೂಟಿ ಕಮಿಷನರ್ ಆಫ್ ಪೋಲೀಸ್ ಲಾ ಅಂಡ್ ಆರ್ಡರ್ ಅವರು ಆ ಸುಮಿತ್ರಾ ದೇಸಾಯಿ ಅವರನ್ನು ಜೊತೆಯಲ್ಲಿ ಕರೆದುಕೊಂಡು ಹೋಗಲು ಸಾಧ್ಯವಿಲ್ಲ ಎಂದು ಹೇಳಿ ರಿಕ್ಷಾದಲ್ಲಿ ಕರೆದುಕೊಂಡು ಹೋಗುವಂತೆ ಹೇಳುವುದಕ್ಕೆ ಕಾರಣವೇನು ? Was a written complaint given by any body to the Police ? The personal Assistant of the Minister was entrusted with the work of sending her away in a taxi. Somebody asked her to get into the taxi and then she was taken to Ashanikethan. It leads to suspicion regarding the behaviour of Kittur as well as the Police. What actiou are you going to take in view of the importance of this subject.

ಶ್ರೀ ಜಿ. ಎನ್. ಪಾಟೀಲ್.—ಆ ಸುಮಿತ್ರಾ ದೇಶಾಯಿ ಅವರ ಬಗ್ಗೆ ಸಂಯುಕ್ತ ಕರ್ಣಾಟಕ ಪತ್ರಿಕೆಯಲ್ಲಿ ಏನೊಂದು ಪ್ರಕಟಣೆ ಹೊರಟಿತ್ತು - ಆ ಸುದ್ದಿ ಅವರಿಗೆ ಹೇಗೆ ಬಂತು ಎಲ್ಲಿಂದ ಬಂತು ಎಂಬುದನ್ನೂ ಕೂಡ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾನ್ಯ ಅಧ್ಯಕ್ಷರೇ....

Sri J. P. SARWESH.—Sri Kittoor did nothing in this matter and he is not at all responsible for anything. He has sacrificed his post just for a rumour spreading about him.

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾನ್ಯ ಅಧ್ಯಕ್ಷರೇ: ಶ್ರೀಗಳಾದ ಕಾಗೋಡು ತಿಮ್ಮಪ್ಪ ವಾಟಾಳ್ ನಾಗರಾಜ್, ಜೆ. ಎಲ್. ಕಬಾಡಿ, ಎಂ ಎಸ್. ಕೃಷ್ಣನ್ ಮತ್ತು ಪ್ರಭಾಕರ್ ಅವರು ಕೆಲವು ವಿಷಯಗಳನ್ನು ಪ್ರಸ್ತಾಪಮಾಡಿದ್ದಾರೆ. ನಾನಾಗಲೇ ಕೊಟ್ಟಂಥ ಹೇಳಿಕೆಯಲ್ಲಿ ಯಾರಿಗೂ ಅನುಮಾನಕ್ಕೆ ಆಸ್ಪದವಿಲ್ಲದ ರೀತಿಯಲ್ಲಿ ಸ್ಪಷ್ಟವಾಗಿ ಸರ್ಕಾರಕ್ಕೆ ಇದುವರೆಗೂ ಏನು ತಿಳಿದುಬಂದಿದೆ ಅದನ್ನು ಈ ಮಾನ್ಯ ಸಭೆಗೆ ನಿರೂಪಣೆ ಮಾಡಿದ್ದೇನೆ. ನಾನು ಈಗಾಗಲೇ ಹೇಳಿರತಕ್ಕ ಹೇಳಿಕೆಯಲ್ಲಿ ಯಾವುದಾದರೂ ವಿಷಯಗಳು ಸರಿಯಾಗಿ ಅರ್ಥವಾಗದಿದ್ದಲ್ಲಿ ಅಂಥದನ್ನು ಅವರು ಕೇಳಲಿ ನಾನು ಮತ್ತೆ ವಿಶದೀಕರಿಸುತ್ತೇನೆ. ಆದರೆ ಅದನ್ನು ಬಿಟ್ಟು ಸದಸ್ಯರುಗಳು

ತಮ್ಮ ತಮಗೆ ಯಾವರೀತಿ ಊಹಾಪೋಹಗಳು ಬರುತ್ತವೋ ಅವುಗಳಿಗೆ ತಕ್ಕಂತೆ ವಿಷಯಗಳನ್ನು ರೂಪಿಸಿಕೊಂಡು ಅವುಗಳಿಗೆಲ್ಲ ಸರಿಯಾಗಿ ಉತ್ತರ ಕೊಡಿ ಎಂದು ಕೇಳುವುದು ಸರಿಯಾದುದಲ್ಲ ಶ್ರೀ ಕಾಗೋಡು ತಿಮ್ಮಪ್ಪನವರು ಹೇಳಿದಂತೆ ಕೆಲವು ವಿಷಯಗಳು ಪತ್ರಿಕೆಯಲ್ಲಿ ವರದಿಯಾಗಿರಬಹುದು. ಆದರೆ ಪತ್ರಿಕೆಯಲ್ಲಿ ಎಷ್ಟೋ ವಿಷಯಗಳು ಬರುತ್ತವೆ ಅವುಗಳಲ್ಲಿ ಕೆಲವು ತಪ್ಪಿರಬಹುದು, ಇನ್ನು ಕೆಲವು ಉತ್ಪ್ರೇಕ್ಷೆ ಮಾಡಿದಂಥವುಗಳಾಗಿರಬಹುದು, ಇನ್ನು ಕೆಲವು ಅವುಗಳಲ್ಲಿ ವಾಸ್ತವಾಂಶಗಳೂ ಇರಬಹುದು. ಆದರೆ ಅವರು ಆ ವಿಷಯಗಳೆಲ್ಲಾ ಎಲ್ಲಿಂದ ತಂದರು, ಹೇಗೆ ತಂದರು ಎಂದರೆ ಆ ವಿಷಯಗಳನ್ನು ಅವರಿಗೆ ಕೆಲವರು ಯಾರು ಯಾರಾದರೂ ತಿಳಿಸಿರಬಹುದು, ಇಲ್ಲವೇ ಅವರೇ ಸ್ವತಃ ಆ ವಿಚಾರಗಳನ್ನು ಪ್ರಕಟಿಸಿರಬಹುದು. ಆದರೆ ಅದು ಹೀಗೆ ಆಗಿದೆ ಎಂದು ಹೇಳುವುದು ಬಹಳ ಕಷ್ಟ. ಆದರೆ ಮಾನ್ಯ ಸದಸ್ಯರಾದರೂ ಆ ಪತ್ರಿಕೆಯ ವರದಿಯನ್ನು ಪ್ರಸ್ತಾಪಿಸಿ ಹೇಳಿದ್ದಾದರೂ ಏನು 'ಅಲ್ಲಿ ಹೀಗೆ ಆಯಿತಂತೆ ಅಲ್ಲಿ ಹೀಗೆ ನಡೀತಂತೆ, 'ಎಂದು ಬರೀ' ಅಂತೆ ಕಂತೆಗಳ ವಿಚಾರ ಹೇಳಿದರೇ ವಿನಾ ಅವರೇನೂ ಆ ವಿಚಾರಗಳು 'ಹೀಗೇ ನಡೆಯಿತು' ಇಂಥವರೇ ಹೇಳಿದರೆಂದೇನೂ ಹೇಳಲಿಲ್ಲ. ಹೀಗೆ ಮಾನ್ಯ ಸದಸ್ಯರುಗಳು ತಮ್ಮ ಮನಸ್ಸಿಗೆ ಬಂದಂತೆ ವಿಷಯಗಳನ್ನು ಬೆಳೆಸುತ್ತಾ ಹೋಗಿ ಅದಕ್ಕೆ ನೀವು ಉತ್ತರ ಕೊಡಿ ಎಂದು ವಾದಿಸುವುದು ಸರಿಯಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಇಲ್ಲಿ ವಿಷಯಗಳನ್ನು ಹೇಳುವುದರಲ್ಲಿ ನೀವೊಬ್ಬರೆ ಸತ್ಯ ಹರಿಶ್ಚಂದ್ರರು, ಇನ್ನುಳಿದ ಆ ಪತ್ರಿಕೆಯವರೆಲ್ಲಾ ಅಸತ್ಯವಂತರು, ಅಲ್ಲವೇ?

Sri KAGODU TIMMAPPA.—Are you prepared to conduct a judicial enquiry if the facts are available?

Sri H.M.CHANNABASAPPA.—It is not correct on the part of the Hon. Members to intervene when I am standing here to reply. I have noted down every point that has been raised and answer them one by one. Sri Krishna is a very old member and he has respect for rules and regulations. Please listen to me. ಪ್ರಶ್ನಿಸಿನವರಿಗೆ ಆ ವಿಚಾರಗಳು ಹೇಗೆ ಗೊತ್ತಾದವು ಎಂಬುದನ್ನು ತಿಳಿಸಬೇಕೆಂದರೆ ಅದು ಸಾಧ್ಯವಿಲ್ಲ.

ಇನ್ನು ಶ್ರೀ ಕಿತ್ತೂರ ಅವರು ನಿರಪರಾಧಿಗಳೇ ಅಲ್ಲವೇ ಎಂಬುದನ್ನು ತಿಳಿಸಬೇಕೆಂದು ಕೇಳಿದ್ದಾರೆ. ಅವರ ಮೇಲೆ ಯಾವ ಅಪಾದನೆಯೂ ಇಲ್ಲ ಎಂದು ಅನುಮಾನಕ್ಕೆ ಆಸ್ಪದ ಬಾರದ ರೀತಿಯಲ್ಲಿ ನಾನಾಗಲೇ ಹೇಳಿದ್ದೇನೆ.

ಶ್ರೀ ಟಿ. ಆರ್. ಶ್ಯಾಮಣ್ಣ.—ಹಾಗಾದರೆ ಅವರನ್ನು ಪುನಃ ಏಕೆ ಮಂತ್ರಿ ಮಂಡಲಕ್ಕೆ ಸೇರಿಸಿಕೊಳ್ಳಲಿಲ್ಲ?

Sri KAGODU TIMMAPPA.—He was pressurised to resign.

Sri H. M. CHANNABASAPPA.—That is left to him.

Sri S. M. Krishna.—Due to pressure he might have done it.

Sri H. M. CHANNABASPPA.—It is your imagination. What you say is a fact from your point of view. ಶ್ರೀ ಕಿತ್ತೂರರು ಏಕೆ ರಾಜೀನಾಮೆ ಕೊಟ್ಟರು? ಅವರು ಕೊಡಬೇಕಾಗಿರಲಿಲ್ಲ ಎಂದು ಹೀಗೆ ಅನೇಕ ವಿಚಾರಗಳನ್ನು ಮಾನ್ಯ ಸದಸ್ಯರು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ಪತ್ರಿಕೆಯಲ್ಲಿ ಬಂದಿರುವ ವಿಚಾರಗಳು ಸತ್ಯವಾದದ್ದು ಎಂದು ಮಾನ್ಯ ಮಂತ್ರಿಗಳಾದ ಶ್ರೀಮಾನ ಚನ್ನಬಸಪ್ಪನವರು ಇದೇ ಸದನದಲ್ಲಿ ಹೇಳಿದ್ದಾರೆ. ಇದು ಸಭೆಯ ರಿಕಾರ್ಡುಗಳಲ್ಲಿದೆ. ಬೇಕಾದರೆ ಪರಿಶೀಲಿಸಬಹುದು

Sri H. M. CHANNABASAPPA —Hon. member Sri Vatal Nagaraj is an old member of this House.

11-00 A.M.

Sri M. S. KRISHNAN.—How can the hon. Minister say that there is no truth in it? Once he had said that there was some truth in it and now he says that there is no truth in it. We cannot recouncile this position.

ಶ್ರೀ ವಾಟಾಳ ನಾಗರಾಜ.—ತಾವು ಇದೇ ಸಭೆಯಲ್ಲಿ ಹೇಳಿದ್ದೀರಿ. ಪತ್ರಿಕೆಯಲ್ಲಿ ಕೂಡ ಸ್ಪಷ್ಟವಾಗಿ ಹೇಳಿಕೆ ಬಂದಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಂತೆ ಕಂತೆ ಎಂದು ಇಲ್ಲಿ ಹೇಳಿದರೆ ಅದಕ್ಕೆ ನಾವೇನು ಹೇಳುವುದಕ್ಕಾಗುತ್ತದೆ? ಶ್ರೀಮಾನ ವಾಟಾಳ ನಾಗರಾಜರವರು ಸುಮಿತ್ರಾ ದೇಸಾಯಿ ವಿಚಾರ ಎಂದರೆ ಇಲ್ಲದ ಎಲ್ಲ ವಿಚಾರಗಳನ್ನೂ ಇಲ್ಲಿ ತರುತ್ತಾರೆ. ಇದೇ ರೀತಿ ಇಲ್ಲಿ ನಮ್ಮ ಸರಕಾರದ ಬಗ್ಗೆ ನಾಲ್ಕೈದು ಜನ ಸದಸ್ಯರು ಬೇರೆ ಬೇರೆ ವಿಚಾರಗಳನ್ನು ಹೇಳಿದ್ದಾರೆ. ಇದರ ಬಗ್ಗೆ ಸರಕಾರ ಕೊಟ್ಟಿರುವ ಹೇಳಿಕೆ ನೋಡಿದರೆ ಎಲ್ಲ ವಿಚಾರಗಳೂ ಅದರಿಂದ ಸ್ಪಷ್ಟವಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ತಾವು ಅನ್ಯಾಯವಾಗಿ ಒಬ್ಬ ಮಂತ್ರಿಗಳನ್ನು ಬಲಿ ಕೊಟ್ಟಿರಿ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಯಾರನ್ನೂ ಬಲಿ ಕೊಡಲಿಲ್ಲ. ಮಂತ್ರಿಗಳು ಬೇಕಾದರೆ ಇರಬಹುದು ಇಲ್ಲವೆ ಒಪ್ಪದಿದ್ದರೆ ಅವರು ಬಿಡಬಹುದು. ಆದುದರಿಂದ್ದ ಪತ್ರಿಕೆಯಲ್ಲಿ ಏನೋ ಒಂದು ರೀತಿ ಹೇಳಿಕೆ ಬಂದಿದೆ ಎಂದು ಇದೇ ಆಧಾರವಾಗಿಟ್ಟು ಕೊಂಡು ಇಲ್ಲಿ ಆಪಾದನೆ ಮಾಡತಕ್ಕದ್ದು ಸರಿಯಲ್ಲ.

Sri Kagodu Timmappa.—One of the Police is responsible for this information.

Sri H. M. Channabasappa.—That is your imagination.

Sri M. S. Krishnan.—Are you prepared to inquire into this matter? We are saying that the Police Official has given the news. May I know whether the Governmet is prepared to enquire into this matter?

ಶ್ರೀ ಎಚ್. ಎಂ. ಚನ್ನಬಸಪ್ಪ.— ಇಲ್ಲಿ ಏನು ಸ್ಟೇಟಮೆಂಟ ಇಡಲಾಗಿದೆ ಅದರಲ್ಲಿ ಎಲ್ಲ ವಿವರಗಳನ್ನೂ ಕೊಡಲಾಗಿದೆ.

ಅಧ್ಯಕ್ಷರು.—ಒಂದು ವಿಚಾರ ತಮ್ಮ ಗಮನಕ್ಕೆ ತರಬೇಕಾಗಿದೆ. ಇದರ ಬಗ್ಗೆ ಮುಖ್ಯ ಮಂತ್ರಿಗಳು ಸ್ಟೇಟಮೆಂಟ ಮಾಡಬೇಕೆಂದು ಕೇಳುತ್ತಿದ್ದರು, ಅದರ ಪ್ರಕಾರ ಇಲ್ಲಿ ಸ್ಟೇಟಮೆಂಟ ಮಾಡಿದ್ದಾರೆ, ಆದರೆ ಇದರ ವಿವರಗಳು ಬಂದಿಲ್ಲ ಎಂದು ಹೇಳಿದಾಗ ಮತ್ತೆ ಇದನ್ನು ಕಾಲಿಂಗ ಅಟೆನ್‌ಷನ್ ಮೂಲಕ ಇಲ್ಲಿ ಪ್ರಸ್ತಾಪ ಮಾಡಲು ಅವಕಾಶ ಕೊಡಲಾಗಿದೆ. ಇದರ ಬಗ್ಗೆ ಸ್ವಲ್ಪ ತಮಗೆಲ್ಲ ಅವಕಾಶ ಕೊಟ್ಟು ವಿವರಗಳನ್ನು ಕೇಳಲು ಅವಕಾಶ ಮಾಡಿದರೆ ಈ ರೀತಿ ಮಧ್ಯ ಮಧ್ಯದಲ್ಲಿ ಎದ್ದು ಮಾನ್ಯ ಮಂತ್ರಿಗಳು ಹೇಳುವಾಗ ತಡೆದರೆ ಅದು ಸರಿಯಾಗುವದಿಲ್ಲ. ಈ ವಿಚಾರದಲ್ಲಿ ಎಲ್ಲ ಎನಕ್ವೈರಿಯನ್ನು ಸಿ ಬಿ ಐ.ಗೆ ಬಿಡಲಾಗಿದೆ ಎಂದು ಹೇಳಿದ್ದಾರೆ ಮತ್ತೆ ಇದರಲ್ಲಿ ಯಾವ ಎನ್‌ಕ್ವೈರಿಯೂ ಬರುವುದಿಲ್ಲ. The whole matter is seized by the C.B.I. Now the statement has been made by the Minister. There ends the matter.

ಶ್ರೀ ಎಚ್. ಎಂ. ಚನ್ನಬಸಪ್ಪ.—ಪತ್ರಿಕೆಯಲ್ಲಿ ಪ್ರಕಟಣೆ ಮಾಡಿದರು ಎಂದರು. ಆ ಪ್ರಕಟಣೆಗೆ ಯಾರು ಹೊಣೆ? ಅಂತಹ ಪ್ರಕಟಣೆ ಮಾಡಬೇಕು ಎಂದು ಹೇಳಿದವರು ಯಾರು? ಈ ರೀತಿ ಸುಮ್ಮನೆ ಆರೋಪ ಮಾಡುವುದು ಸರಿಯಲ್ಲ. ಸರ್ಕಾರ ಏನಾದರೂ ಮಾಡಿರುವುದರಲ್ಲಿ ತಪ್ಪಾಗಿದ್ದರೆ ಅದರ ಬಗ್ಗೆ ತನಿಖೆ ನಡೆಸುತ್ತೇವೆ, ತನಿಖೆಯಿಂದ ತಪ್ಪಿತಸ್ಥರಾದವರಿಗೆ ಶಿಕ್ಷೆ ಮಾಡಲಾಗುತ್ತದೆ.

(ಇಂಟರಸೆಕ್ಷನ್‌ಗಳು)

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಒಂದು ದಿವಸ ಇವನ್ನೆಲ್ಲ ಚರ್ಚೆಮಾಡೋಣ.

Sri M. S. Krishnan.—From what has been stated, it appears, as if he is above suspicion. He is not prepared to say categorically what his approach is.

Sri H. M. Channabasappa.—If you please read my statement, you will then appreciate the position.

ಶ್ರೀ ವಾಟಾಳ್ ನಾಗರಾಜ.— ತಮ್ಮ ಸ್ಟೇಟಮೆಂಟಿನಲ್ಲಿ ಸರಿಯಾಗಿಲ್ಲ. ಒಂದೊಂದು ಸಾರಿ ಒಂದೊಂದು ರೀತಿಯಾಗಿ ಹೇಳಿಕೆ ಕೊಡುತ್ತಿದ್ದೀರಿ. ಹೀಗಾದರೆ ಇದನ್ನು ಅರ್ಥಮಾಡುವುದಾದರೂ ಹೇಗೆ?

ಅಧ್ಯಕ್ಷರು.—ತಾವು ಸಭೆಯಲ್ಲಿ ಇಲ್ಲದೇ ಹೋದರೆ ನಾವೇನು ಮಾಡಲಿಕ್ಕಾಗುತ್ತದೆ? ಇದರ ಬಗ್ಗೆ ಪಿ. ಡಬ್ಲ್ಯೂ. ಡಿ. ಮಿನಿಸ್ಟರು ಆಗಲೇ ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ ಆಗ ಇಲ್ಲಿ ನೀವು ಇರಲಿಲ್ಲ ಅವರ ಹೇಳಿಕೆ ಓದಿದರೆ ನಿಮಗೆ ಎಲ್ಲ ಗೊತ್ತಾಗುತ್ತದೆ.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಸ್ಟೇಟ್‌ಮೆಂಟ್ ಬೇಕೆಂದು ಹೇಳಿದರು, ಅದರಂತೆ ಇಲ್ಲಿ ಸ್ಟೇಟ್‌ಮೆಂಟನ್ನು ಕೊಡಲಾಗಿದೆ ಇದರ ಬಗ್ಗೆ ಎಲ್ಲ ವಿವರಗಳನ್ನೂ ವಿವರವಾಗಿ ತಿಳಿಸಲಾಗಿದೆ. ಸುಮಿತ್ರಾ ದೇಸಾಯಿಯವರನ್ನು ಪತ್ತೆಹಚ್ಚುವ ಕಾರ್ಯವನ್ನು ಸಿ. ಬಿ. ಐ.ಗೆ ಒಪ್ಪಿಸಲಾಗಿದೆ ಎಂದು ಅನೇಕ ವೇಳೆ ಮುಖ್ಯ ಮಂತ್ರಿಗಳು ಈ ಸಭೆಯಲ್ಲೇ ಹೇಳಿದ್ದಾರೆ. ಇದುವರೆಗೆ ಸರಕಾರದ ಕಡೆಯಲ್ಲಿ ಏನು ವಿವರಗಳು ಬಂದಿವೆ ಅದನ್ನು ಸಭೆಗೆ ತಿಳಿಸಬೇಕೆಂದು ಕೇಳಿದರು. ಇದುವರೆಗೆ ಸರಕಾರದ ಬಳಿ ಇದ್ದ ವಿವರಗಳನ್ನೆಲ್ಲಾ ಸೇರಿದಂತೆ ಇಲ್ಲಿ ಒಂದು ಹೇಳಿಕೆ ಕೊಡಲಾಗಿದೆ, ಮುಖ್ಯ ಮಂತ್ರಿಗಳು ಆಗಲೇ ಎಲ್ಲವನ್ನು ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ಇದೊಂದು ಗಂಭೀರವಾದ ಪ್ರಶ್ನೆ ಮತ್ತು ಚರಿತ್ರಾರ್ಹವಾದ ವಿಷಯ, ಮುಂದೆ ಜನರೇ ನಿಮ್ಮನ್ನು ನೋಡುತ್ತಾರೆ, ದೇಶವೂ ನಿಮ್ಮನ್ನು ನೋಡುತ್ತದೆ.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ದೇಶದಲ್ಲಿರುವ ಜನತೆ ಎಲ್ಲವನ್ನೂ ನೋಡುತ್ತದೆ. ಇದುವರೆಗೆ ನಾವು ಹೇಳಿರುವ ಎಲ್ಲ ವಿಚಾರಗಳೂ ಸ್ಟೇಟಮೆಂಟಿನಲ್ಲಿ ವಿಶದವಾಗಿವೆ.

Sri KAGODU THIMMAPPA.—As per the statement of Sri Kittur, the Police Officer has failed to comply with his instructions.

MADAM SPEAKER.—You may imagine whatever you want. No more questions and no more answers would be permitted now. We shall now go to the next subject.

Re : Shifting of the Bus-stand located at Gandhi Square, Mysore

ಶ್ರೀ ವಾಟಾಳ್ ನಾಗರಾಜ (ಚಾಮರಾಜಪೇಟೆ).—ಮಾನ್ಯ ಅಧ್ಯಕ್ಷರೇ, ಮೈಸೂರಿನಲ್ಲಿರುವ ಗಾಂಧಿ ಸ್ಕ್ವೇರಿನಲ್ಲಿ ಸುಮಾರು ನೂರಾರು ಬಸ್ಸುಗಳು ನಿಲ್ಲುವುದಕ್ಕೆ ಒಂದು ಸ್ಟ್ಯಾಂಡು ಇದೆ. ಇದನ್ನು ಈಗ ಬೇರೆಕಡೆಗೆ ವರ್ಗಾಯಿಸಬೇಕೆಂದು ಕಾರ್ಪೊರೇಷನ್ ತೀರ್ಮಾನ ಮಾಡಿದೆ ಎಂದು ನನಗೆ ಮೈಸೂರಿನಿಂದ ಬಂದ ಕೆಲವು ಜನರು ನನ್ನ ಹತ್ತಿರ ಹೇಳಿದರು. ಇದರಿಂದ ಜನತೆಗೆ ಕಷ್ಟವಾಗುತ್ತದೆ. ಈಗಿರುವ

ಗಾಂಧಿ ಸ್ಕ್ವೇರ್ ಬಳಿ ಇರುವ ಸ್ಟ್ಯಾಂಡನ್ನು ಬೇರೆ ಕಡೆಗೆ ವರ್ಗ ಮಾಡಬಾರದು. ಅದು ಈಗ ಇರುವ ಕಡೆಯಲ್ಲಿಯೇ ಇರಬೇಕು, ಇದರ ಬಗ್ಗೆ ಸರಕಾರದ ಮಂತ್ರಿಗಳು ಉತ್ತರ ಹೇಳಬೇಕೆಂದು ಕೇಳುತ್ತೇನೆ.

ಶ್ರೀ ಅಜೀಜ್ ಸೇಟ್.—ಮಾನ್ಯ ಅಧ್ಯಕ್ಷರೇ, ಶ್ರೀ ವಾಟಾಳ್ ನಾಗರಾಜ್‌ರವರಿಗೆ ಯಾರೋ ಮೈಸೂರಿನ ಕೆಲವು ಜನರು ಬಂದು ಮೈಸೂರಿನಲ್ಲಿರುವ ಬಸ್ ಸ್ಟ್ಯಾಂಡಿನ ವಿಷಯ ಹೇಳಿರುವುದು ನೋಡಿ ನನಗೆ ಬಹಳ ಆಶ್ಚರ್ಯವಾಗುತ್ತಿದೆ.

ವಾಟಾಳ್ ನಾಗರಾಜ್‌ರವರಿಗೆ ಮೈಸೂರ ಸಿಟಿಯ ಬಹುಭಾಗ ಸಂಪರ್ಕ ಇಲ್ಲ. ಅವರು ಯಾವಾಗ ಬಂದರೂ ಟೌನ್ ಹಾಲ್‌ನಲ್ಲಿ ಭಾಷಣ ಮಾಡಿ ಹೋಗುವವರು. ಗಾಂಧಿ ಸ್ಕ್ವಯರ್‌ನಲ್ಲಿ (ಚೌಕದಲ್ಲಿ) ಪ್ರೈವೇಟ್ ಬಸಸ್ ಕಾಂಟ್ರ್ಯಾಕ್ಟ್ ಕ್ಯಾರೇಜ್ಸ್ ಸುತ್ತ ನಿಂತುಕೊಂಡು ಟ್ರಾಫಿಕ್‌ಗೆ ಜಾಮ್ ಆಗುತ್ತಿತ್ತು. ಆದ್ದರಿಂದ ಮುನಿಸಿಪಲ್ ಬಸ್ ಸ್ಟ್ಯಾಂಡಿನಲ್ಲಿ ಪ್ರೈವೇಟ್ ಬಸ್‌ಸ್ ಕಾಂಟ್ರ್ಯಾಕ್ಟ್ ಕ್ಯಾರೇಜಸ್ ಎಲ್ಲಾ ಇರಲಿ ಎಂದು ಮಾಡಿದೆ. ಅದು ಕ್ಯಾಂಟೀನ್ ಬಿಲ್ಡಿಂಗ್ ಹತ್ತಿರವೇ ಇರುವುದರಿಂದ ಜನಗಳಿಗೆ ಸೌಕರ್ಯವಾಗುತ್ತದೆ ಬಿಸಿನೆಸ್ ಓನರ್ಸ್ ಒಂದು ರೆಪ್ರಜೆಂಟೇಷನ್ ಕೊಟ್ಟಿದ್ದಾರೆ. ಬಿಸಿನೆಸ್ ಓನರ್ಸ್ ಬಂದು ವಾಟಾಳ್ ನಾಗರಾಜ್‌ರವರನ್ನು ಭೇಟಿ ಮಾಡಿರುವುದು. ಜನ ಬಂದು ಅವರನ್ನು ಭೇಟಿ ಮಾಡಿಲ್ಲ. ಕನಿಷ್ಟ ಪಕ್ಷ ನಮ್ಮ ಆಫೀಸ್ ಹತ್ತಿರ ನಿಂತುಕೊಳ್ಳುವುದಕ್ಕೆ ಅವಕಾಶ ಕೊಡಿ ಎಂದು ಅವರು ಕೇಳುತ್ತಿದ್ದಾರೆ. ನಾನು ಎಗ್ಸಾಮಿನ್ ಮಾಡಿಸುತ್ತಿದ್ದೇನೆ. ಗಾಂಧಿ ಚೌಕದಲ್ಲಿ ಅರ್ಧ ಮುಕ್ಕಾಲು ಜನ ಬಸ್ ಓನರ್ಸ್ ಆಫೀಸ ಇಟ್ಟುಕೊಂಡಿದ್ದಾರೆ. ಒಂದು ವೇಳೆ ಮದುವೆಗೆ ಹೋಗಬೇಕೆಂದರೆ the entire bus has to be booked. Therefore I do not see any reason why that particular bus should stop at Gandhi Square.

ಎಲ್ಲ ಬಸ್ಸುಗಳು ಮುನಿಸಿಪಲ್ ಬಸ್ ಸ್ಟ್ಯಾಂಡಿಗೆ ಹೋಗಲಿ ಎಂದು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್‌ರವರು ಮೋಟಾರ್ ವೆಹಿಕಲ್ ಆಕ್ಟ್ ಪ್ರಕಾರ ನೋಟಿಫಿಕೇಷನ್ ಮಾಡಿದ್ದಾರೆ. First, let them honour it; let them go to the Bus stand. ಅವರು ಬಸ್ ಸ್ಟ್ಯಾಂಡಿಗೆ ಹೋಗಲಿ ಜನಗಳಿಗೆ ಏನು ಅನಾನುಕೂಲ ಆಗುತ್ತದೆ ಎಂಬುದನ್ನು ನೋಡಿ ಜನಗಳಿಗೆ ಅನಾನುಕೂಲ ಆಗುವ ಹಾಗಿದ್ದರೆ ಬಸ್ ಎಲ್ಲಿ ನಿಲ್ಲಿಸಬೇಕೆಂಬುದನ್ನು ಆಲೋಚನೆ ಮಾಡೋಣ. ಎಲ್ಲಾ ಬಸ್‌ಗಳನ್ನು ತಂದು ಗಾಂಧಿ ಚೌಕದಲ್ಲಿ ನಿಲ್ಲಿಸುವುದಕ್ಕೆ ಅವಕಾಶವಿಲ್ಲ. ಯಾರು ಬಂದಿದ್ದರೋ ಅವರಿಗೆ ಸರ್ಕಾರದ ಪರವಾಗಿ ಜನಗಳ ಹಿತಕ್ಷ್ಯೇಮಕ್ಕರವಾಗಿ ಬಸ್ ಸ್ಟ್ಯಾಂಡಿಗೇ ಹೋಗುವುದಕ್ಕೆ ಬುದ್ಧಿವಾದ ಹೇಳಿ ಕಳುಹಿಸಿ, ಪ್ಯಾಸೆಂಜರ್ ಪಿಕ್ ಅಪ್ ಮಾಡಬೇಕಾದರೆ ರಣಜಿ ಸಿನಿಮಾ ಮಂದಿರದ ಹತ್ತಿರ ಬಸ್ ಸ್ಟಾಪ್ ಮಾಡಿ, ಪ್ರೈವೇಟ್ ಬಸ್ ನಿಲ್ಲುವ ಹಾಗೆ ಏರ್ಪಾಡು ಮಾಡೋಣ. ಗಾಂಧಿ ಚೌಕದಲ್ಲಿ ಎಲ್ಲಾ ನಿಲ್ಲಿಸಬೇಕು ಎಂದರೆ ಜನಗಳಿಗೆ ತೊಂದರೆಯಾಗುತ್ತದೆ. ತಾವು ಹೊಸ ಕಾರ್ ತೆಗೆದುಕೊಳು

ತ್ತಿದ್ದೀರಿ, ಕಾರಿನಲ್ಲಿ ಹೋಗಬೇಕಾದರೆ ಅವಕಾಶ ಸಿಕ್ಕುವುದಿಲ್ಲ ಬಹಳ ತೊಂದರೆಯಾಗುತ್ತದೆ. ಒನ್ ವೇ ಟ್ರಾಫಿಕ್ ಮಾಡಿದ್ದೇವೆ. ದಯವಿಟ್ಟು ಬಸ್ ಓನರ್ಸ್‌ಗೆ ಬುದ್ಧಿವಾದ ಹೇಳಿ ಎಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ.

Re : Action taken on the disturbances at Mandya

ಶ್ರೀ ಕಾಗೋಡು ತಿಮ್ಮಪ್ಪ.— ಮಂಡ್ಯದಲ್ಲಿ ನಡೆದ ಘಟನೆ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ?

ಶ್ರೀ ಎಚ್. ಎಂ. ಚನಬಸಪ್ಪ.— ನಮಗೆ ಬಂದಿರತಕ್ಕ ಸಮಾಚಾರ ಮಾನ್ಯ ಸಭೆಯಲ್ಲಿ ಓದುತ್ತೇನೆ. ಬಸವರಾಜು ಎನ್ನತಕ್ಕವರು, 'ಮಂಜುನಾಥ್ ಬಸ್ ಪ್ರೊಪ್ರೈಟರ್' ಅವರು ಹಸ್ತಪತ್ರಿಕೆಯನ್ನು ಹೊರಡಿಸಿದ್ದಾರೆ, ಎಂದು ಎಲಿಗೇಷನ್ ಬಂದಿದೆ. ಕನ್ನಡದಲ್ಲಿ ಕೆಂಪು ಅಕ್ಷರದಲ್ಲಿ ಪ್ರಿಂಟ್ ಮಾಡಿದ್ದಾರೆ. ಆ ಕಾಪಿಯನ್ನು ಸೀಜ್ ಮಾಡಿ, ಅವರ ಮೇಲೆ ಕ್ರೈಮ ನಂ. ೭೯/೭೩ ಅಂಡರ್ ಸೆಕ್ಷನ್ ೧೫೩ (ಎ) ಮತ್ತು ೨೯೫ (ಎ) ಇಂಡಿಯನ್ ಪೀನಲ್ ಕೋಡ್‌ನ ಪ್ರಕಾರ ಕೇಸ್ ರಿಜಿಸ್ಟರ್ ಮಾಡಿ, ಅವರನ್ನು ಕಸ್ಟಡಿಗೆ ತೆಗೆದುಕೊಳ್ಳಲಾಗಿದೆ. ಕೇಸ್‌ನ್ನು ಇನ್‌ವೆಸ್ಟಿಗೇಷನ್ ಮಾಡುತ್ತಿದ್ದೇವೆ.

MYSORE MUNICIPAL LAWS (AMENDMENT) BILL 1973.

INTRODUCTION

Sri B. BASAVALINGAPPA (Minister for Municipal Administration) :

I beg to introduce :

"The Mysore Municipal Laws (Amendment) Bill, 1973"

Madam Speaker : The Bill is introduced.**

The Mysore Private Educational Institutions (Discipline and Control) Bill, 1973.

Motion to Consider

(Debate Contd)

†ಶ್ರೀ ಮಹೇಂದ್ರ ಕುಮಾರ ಕಲ್ಲಪ್ಪ (ಹುಲ್ಲೂರ).—ಮಾನ್ಯ ಅಧ್ಯಕ್ಷರೇ ಇವತ್ತು ಎಜ್ಯುಕೇಷನ್ ಬಗ್ಗೆ ನನಗೆ ಮಾತನಾಡಲು ಅವಕಾಶ ಕೊಟ್ಟ ಸಲುವಾಗಿ

** Bill reproduced as Annexure to this volume.

ನಾನು ತಮ್ಮನ್ನು ವಂದಿಸುತ್ತಾ ಕೆಲವು ನನ್ನ ವಿಚಾರಗಳನ್ನು ಸರ್ಕಾರದ ಮುಂದೆ ಇಡಲು ಇಷ್ಟಪಡುತ್ತೇನೆ.

ಅಧ್ಯಕ್ಷರೇ, ನಾವು ಸ್ವಾತಂತ್ರ್ಯಾನಂತರ ನಮ್ಮ ಸರ್ಕಾರವು ಈ ವಿದ್ಯಾಭ್ಯಾಸದ ಸಲುವಾಗಿ ಬೇಕಾದಷ್ಟು ಹಣವನ್ನು ಖರ್ಚು ಮಾಡುತ್ತಾ ಬಂದಿದೆ. ಇಲ್ಲಿಯ ವರೆಗೆ ಎಜ್ಯುಕೇಷನ್‌ಗೆ ಎಷ್ಟು ಮಹತ್ವ ಕೊಡಬೇಕು ಅಷ್ಟು ಮಹತ್ವ ಹಿಂದಿನ ಸರ್ಕಾರ ಕೊಡಲಿಲ್ಲ ಎಂದು ನನಗನ್ನಿಸುತ್ತದೆ. ಯಾತಕ್ಕೆಂದರೆ ಹೈದರಾಬಾದ ಕರ್ನಾಟಕದಲ್ಲಿ ಎಷ್ಟೋ ಹಳ್ಳಿಗಳಲ್ಲಿ ಸರ್ಕಾರಿ ಸಾಲೆಗಳಿಲ್ಲ. ಶಾಲೆಗಳು ಇದ್ದರೂ ಆ ಶಾಲೆಗಳಲ್ಲಿ ಮಾಸ್ಟರ ಕೂಡಲಿಕ್ಕೆ ಕುರ್ಚಿ ಕೂಡ ಆ ಶಾಲೆಯಲ್ಲಿ ಸಿಗಲಾರದಂಥ ಅನೇಕ ಶಾಲೆಗಳು ಇವೆ. ಇದೇ ರೀತಿಯಾಗಿ ಹುಡುಗರಿಗೆ ಯಾವ ರೀತಿ ಅನುಕೂಲ ಇರಬೇಕು, ವಿದ್ಯಾರ್ಥಿಗಳಿಗೆ ಯಾವ ರೀತಿ ವಿದ್ಯಾರ್ಜನೆ ಮಾಡುವುದಕ್ಕೆ ಸಹಾಯ ಮಾಡಬೇಕು ಅಂಥ ಸಹಾಯ ಏನು ಇದೆ ಅದು ಬಹಳಷ್ಟು ಸ್ಕೂಲ್‌ಗಳಲ್ಲಿ ಸಿಗುತ್ತಾ ಇಲ್ಲ. ನನಗೆ ತಿಳಿದ ಮಟ್ಟಿಗೆ ಈ ಸರ್ಕಾರದ ಎಜ್ಯುಕೇಷನ್ ಬಗ್ಗೆ ಸಿಟಿಗಳಿಗೆ ಮಹತ್ವ ಕೊಟ್ಟಿದ್ದರೂ ಸಹ ಹಳ್ಳಿಗಳ ಕಡೆಗೆ ಬಹಳಷ್ಟು ನಿರ್ಲಕ್ಷ್ಯ ಮಾಡಿದ್ದಾರೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅನೇಕ ಕಾಲೇಜುಗಳಲ್ಲಿ ಅನೇಕ ಯೂನಿವರ್ಸಿಟಿಗಳಲ್ಲಿ ಅವಕ್ಕೆ ಬೇಕಾದ ಕಟ್ಟಡ ಆಗಲೀ ಅಥವಾ ಸ್ಟಾಫ್ ಬಗ್ಗೆಯಾಗಲೀ ಬೇಕಾದಷ್ಟು ಲಕ್ಷ್ಯಕೊಟ್ಟು ವ್ಯವಸ್ಥೆ ಮಾಡಿದ್ದಾರೆ ಆದರೆ ಹಳ್ಳಿಗಳನ್ನು ನೋಡಿದರೆ ಅಲ್ಲಿ ಸ್ಕೂಲ್ ಇಲ್ಲ, ಅಲ್ಲಿನ ಮಾಸ್ಟರ್ ಇರಲಿಕ್ಕೆ ಸರಿಯಾದ ವ್ಯವಸ್ಥೆ ಇಲ್ಲ. ಈ ರೀತಿಯಾಗಿ ಹಳ್ಳಿಗಳಿಗೆ ನಿರ್ಲಕ್ಷ್ಯ ಆಗಿದೆ.

ಅಧ್ಯಕ್ಷರೇ, ಇವತ್ತು ಯಾವುದೇ ದೊಡ್ಡ ಆಫೀಸರು ಆಗಲೀ ಅಥವಾ ದೊಡ್ಡ ವಿದ್ಯಾವಂತರು ಆಗಲಿ ಅವರು ಬಂದಿರುವುದು ಹಳ್ಳಿಯಿಂದಲೇ. ಆದುದರಿಂದ ನಾವು ಈ ಹಳ್ಳಿ ಶಾಲೆಗಳಿಗೆ ಮಹತ್ವ ಕೊಡಬೇಕು ಎಂದು ಸರ್ಕಾರದಲ್ಲಿ ಪ್ರಾರ್ಥನೆ ಮಾಡುತ್ತೇನೆ. ಹಳ್ಳಿಗಳಿಂದ ಬರುವಂಥ ವಿದ್ಯಾರ್ಥಿಗಳು ಬಹಳ ಕಷ್ಟಪಡುತ್ತಾರೆ. ಅಲ್ಲಿ ಇರುವಂಥ ಟೀಚರ್ಸ್ ಬಹಳಷ್ಟು ಕಷ್ಟ ಅನುಭವಿಸಬೇಕಾಗುತ್ತದೆ, ಯಾತಕ್ಕೆಂದರೆ ಹಳ್ಳಿಯಲ್ಲಿ ಮಾಸ್ಟರ್ ಇರುವುದಕ್ಕೆ ಮನೆ ಸಿಕ್ಕುವುದಿಲ್ಲ. ಒಂದು ವೇಳೆ ಮಾಸ್ಟರ್ ಇದ್ದರೆ ಮನೆ ಸಿಕ್ಕೀತು ಎಂದರೆ ಹುಡುಗರು ಸಿಕ್ಕುವುದಿಲ್ಲ. ಕೆಲವೊಂದು ಊರಿನಲ್ಲಿ ಒಬ್ಬ ಮಾಸ್ಟರ್ ಆ ಊರಿಗೇ ಹೋಗುವುದಿಲ್ಲ ಈ ರೀತಿ ಹಳ್ಳಿಗಳ ಸ್ಕೂಲುಗಳು ಬಹಳ ಅನ್‌ಕೇರ್ಡ್ ಫಾರ್ ಆಗಿದೆ. ಆದುದರಿಂದ ದಯವಿಟ್ಟು ಹಳ್ಳಿಗಳಲ್ಲಿರುವ ಸ್ಕೂಲ್‌ಗಳಿಗೆ ಹೆಚ್ಚಿನ ಗಮನ ಕೊಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಪ್ರಾರ್ಥನೆ ಮಾಡುತ್ತೇನೆ

ಮತ್ತೊಂದು ವಿಷಯವನ್ನು ನಾನು ಹೇಳುವದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ, ಹೈದರಾಬಾದ್ ಕರ್ನಾಟಕದಲ್ಲಿ, ಬೀದರನಲ್ಲಿ ಅನೇಕ ಗವರ್ನಮೆಂಟ್ ಶಾಲೆಗಳಿವೆ. ಅಲ್ಲಿ ಗವರ್ನಮೆಂಟ್ ಕಟ್ಟಡಗಳಿಲ್ಲ. ಆ ಕಟ್ಟಡಗಳ ಬಗ್ಗೆ ಹೆಚ್ಚಿನ ಗಮನಕೊಡಬೇಕು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಬೀದರ ಜಿಲ್ಲೆಯಲ್ಲಿ ಕೇವಲ ಒಂದೇ ಒಂದು ಬಿಟಿ ಟ್ರೈನಿಂಗ್ ಸ್ಕೂಲು ಇದೆ. ಅಲ್ಲಿ ಕೇವಲ ೫೦ ಜನರಿಗೆ ಟ್ರೈನಿಂಗ ಕೊಡುತ್ತಾರೆ ಮುಂದೆ ಅಪಾಯಿಂಟಮೆಂಟ್ ಆಗಬೇಕಾದರೆ ಸರಕಾರದವರು ಒಂದು ನಿಯಮ ಇಟ್ಟುಕೊಂಡಿದ್ದಾರೆ. ಅದರ ಪ್ರಕಾರ ಟ್ರೈನಿಂಗ್‌ಗೆ ಮಹತ್ವ ಕೊಡುತ್ತಾರೆ. ದಯವಿಟ್ಟು ಸರಕಾರಕ್ಕೆ ಬೇಡಿ ಕೊಳ್ಳುವದು ಏನೆಂದರೆ ತಾಲ್ಲೂಕುಗಳಲ್ಲಿ ಎಲ್ಲೆಲ್ಲಿ ಜೂನಿಯರ್ ಕಾಲೇಜುಗಳಿವೆ, ಆ ಕಾಲೇಜುಗಳಲ್ಲಿ ಬಿ.ಟಿ. ಟ್ರೈನಿಂಗ್ ಇನ್‌ಸ್ಟಿಟ್ಯೂಟ್ ಇಂಟರ್‌ಡ್ಯೂಸ್ ಮಾಡಿ. ವಿದ್ಯಾರ್ಥಿಗಳು ೨ ವರ್ಷ ಜೂನಿಯರ್ ಕಾಲೇಜು ಅಭ್ಯಾಸ ಮುಗಿಸಿ ಮುಂದೆ ಅಲ್ಲಿ ಓದುವದಕ್ಕೆ ಅನುಕೂಲವಾಗಬೇಕು ಈ ರೀತಿ ಸರಕಾರ ಬೀದರ್ ಜಿಲ್ಲೆಯಲ್ಲಿ, ಹೈದರಾಬಾದ್ ಕರ್ನಾಟಕದಲ್ಲಿ ಹೆಚ್ಚಿನ ಮಹತ್ವಕೊಟ್ಟು ಪ್ರತಿಯೊಂದು ತಾಲ್ಲೂಕಿನಲ್ಲಿ ಬಿ. ಟಿ. ಟ್ರೈನಿಂಗ್ ಇನ್‌ಸ್ಟಿಟ್ಯೂಟ್ ಇಂಟರ್‌ಡ್ಯೂಸ್ ಮಾಡಬೇಕು ಎಂದು ನನ್ನ ಪ್ರಾರ್ಥನೆ. ಈಗ ಬಿ.ಟಿ.ಐ. ಸ್ಕೂಲ್‌ನಲ್ಲಿ ಟ್ರೈನಿಂಗ್ ಟೀಚರ್ಸ್ ಇದ್ದಾರೆ, ಷೆಡ್ಯೂಲ್ಡ್ ಕ್ಯಾಸ್ಟ್ ಟೀಚರ್ಸ್ ಎನಿದ್ದಾರೆ ಅವರಿಗೆ ಹೌಸ್‌ರೆಂಟ್ ಹಿಂದಿನ ಸರಕಾರ ಕೊಡುತ್ತ ಇತ್ತು. ಈಗ ೩ ವರ್ಷದ ಹಿಂದೆ ಹೌಸ್‌ರೆಂಟ್ ಕೊಡುವದನ್ನು ನಿಲ್ಲಿಸಿ ದ್ದಾರೆ. ಅಲ್ಲಿ ಕೆಲಸಮಾಡುವವರಿಗೆ ಅಥವಾ ಟ್ರೇನೀಸ್‌ಗೆ ಇದರಿಂದ ತೊಂದರೆಯಾಗಿದೆ. ಸರಕಾರ ಮೊದಲಿನಂತೆ ಹೌಸ್‌ರೆಂಟ್ ಕೊಡುವದನ್ನು ಜಾರಿಯಲ್ಲಿ ತರಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ. ಟ್ರೈನಿಂಗ್ ಸೇರಿದವರಿಗೆ, ಡಿಪಾರ್ಟ ಮೆಂಟಗೆ ಹೋದವರಿಗೆ ಸ್ಟೈಫಂಡ ಕೊಡುತ್ತಾ ಇದ್ದಾರೆ. ಹೊಸದಾಗಿ ಬರುವವರಿಗೆ ಸ್ಟೈಫಂಡ ಕೊಡುವದಿಲ್ಲ. ಹೊಸದಾಗಿ ಬಂದ ಕ್ಯಾಂಡೀಡೇಟ್ಸ್‌ಗೆ ಕೂಡ ಸ್ಟೈಫಂಡ ಕೊಡಬೇಕು ಎಂದು ಸರ್ಕಾರಕ್ಕೆ ಬೇಡಿಕೊಳ್ಳುತ್ತಾ, ನನಗೆ ಕೆಲವು ಮಾತುಗಳನ್ನು ಆಡುವದಕ್ಕೆ ಅನುಮತಿ ಕೊಟ್ಟ ಸಲುವಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ (ಹೊಸನಗರ).— ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ವಿದ್ಯಾ ಸಚಿವರು ತಂದಿರತಕ್ಕ ಈ ಸುಧಾರಿತ ಬಿಲ್ ಏನಿದೆ ಅದಕ್ಕೆ ಹಾರ್ದಿಕವಾಗಿ ಸ್ವಾಗತ ಬಯಸುತ್ತೇನೆ. ಈ ಖಾಸಗಿ ವಿದ್ಯಾಸಂಸ್ಥೆಗಳಿಗೆ ಒಂದು ಇತಿಹಾಸ ಇದೆ. ಸ್ವಾತಂತ್ರ್ಯ ಬರಲಿಕ್ಕೆ ಮೊದಲು ರಾಷ್ಟ್ರೀಯ ಚಾರಿತ್ರ್ಯದ ಆಧಾರದ ಮೇಲೆ, ದೇಶದ ಮೇಲಿನ ಅಭಿಮಾನದ ಮೇಲೆ ಸ್ಥಾಪನೆ ಆದ ಖಾಸಗಿ ವಿದ್ಯಾಸಂಸ್ಥೆಗಳು ಆ ಕಾಲದಲ್ಲಿ ಪರಂಪರಾನುಗತವಾಗಿ ದೇಶದ ಪ್ರಜಾಸತ್ತೆಗೆ ರಾಷ್ಟ್ರೀಯ ಮನೋಭಾವ ಬೆಳೆಸತಕ್ಕ ಶಾಲೆಗಳು ಆಗಿದ್ದವು ಅಂತಹ ಒಂದು ಸಂಸ್ಥೆಗಳ ಅವಶ್ಯಕತೆ ಆ ಕಾಲದಲ್ಲಿ ಭಾರತ ದೇಶದಲ್ಲಿ ತುಂಬ ಇತ್ತು ಎಂದು ಹೇಳಬಹುದು. ಯಾವ ಬ್ರಿಟಿಷ್ ಸರಕಾರ ಸ್ಥಾಪಿಸಿದ ಕೇವಲ ಕಾರಕೂನರನ್ನು ತಯಾರು ಮಾಡುವಂಥ ಗುಲಾಮಗಿರಿ ಮನೋಭಾವ ಬೆಳೆಯುವಂಥ ಶಿಕ್ಷಣ ಕೊಡುವ ಶಾಲೆ ಏನಿತ್ತು, ಆ ಶಾಲೆಯನ್ನು ಮೂಲೋತ್ಪಾದನೆ ಮಾಡಿ, ಸ್ವಾತಂತ್ರ್ಯ ಯೋಧರನ್ನು ತಯಾರು ಮಾಡುವಂಥ ಖಾಸಗಿ ವಿದ್ಯಾಸಂಸ್ಥೆಗಳು ಆ ಕಾಲದಲ್ಲಿ

ಉದ್ಭವವಾಯಿತು. ಅವುಗಳಿಂದ ಭಾರತ ದೇಶದ ಜನಕ್ಕೆ ಉತ್ತಮವಾದ ಸೇವೆ ಆ ಕಾಲದಲ್ಲಿ ಸಂದಿತು. ಆದರೆ ಕ್ರಮೇಣ ಸ್ವಾತಂತ್ರ್ಯ ಬಂದನಂತರ ಪರಿಸ್ಥಿತಿ ಬದಲಾವಣೆ ಆಯಿತು. ವಿದ್ಯಾಸಂಸ್ಥೆಗಳು ಬಹುತೇಕ ಉದರಂಭರಣದ ಶಾಲೆಗಳಾಗಿ ಪರಿವರ್ತನೆಗೊಂಡುವು. ಯಾವ ಶಾಲೆಗಳಿಗೆ ಉಜ್ವಲ ಭವಿಷ್ಯವಿತ್ತೋ, ಯಾವ ಶಾಲೆಗಳು ಭಾರತ ದೇಶದ ಕಿರೀಟ ಪ್ರಾಯವಾಗಿದ್ದುವೊ, ಅಂಥಾ ವಿದ್ಯಾಸಂಸ್ಥೆಗಳು ಕೇವಲ ಉದರಂಭರಣಕ್ಕಾಗಿ ವ್ಯಾವಹಾರಿಕ ರೀತಿಯಾದಂಥ ವಿದ್ಯಾಸಂಸ್ಥೆಗಳಾಗಿ ಕೆಲಸ ಮಾಡಲು ದೇಶದಲ್ಲಿ ಪ್ರಾರಂಭವಾದುವು. ಕೇವಲ ತನ್ನ ಸಾಂಸಾರಿಕ ಹಿತಚಿಂತನೆಗಾಗಿ, ನಾವು ಉದ್ಯೋಗಕ್ಕಾಗಿ ಯಾವ ರೀತಿ ಕೈಗಾರಿಕೆ ಅಥವಾ ಇನ್ನೇನಾದರೂ ಉದ್ಯೋಗ ಪ್ರಾರಂಭ ಮಾಡುತ್ತೇವೋ ಆ ರೀತಿಯಲ್ಲಿ ಖಾಸಗಿ ಸಂಸ್ಥೆಗಳು ನಾಯಿಕೊಡೆಗಳಂತೆ ದೇಶದ ಮೂಲೆ ಮೂಲೆಗಳಲ್ಲಿ ಉದ್ಭವವಾದವು. ಇಂತಹ ವಿದ್ಯಾಸಂಸ್ಥೆಗಳಲ್ಲಿ ಆಗತಕ್ಕ ಅನ್ಯಾಯ ಅಷ್ಟಿಷ್ಟಲ್ಲ. ಬಹುತೇಕ ಎಲ್ಲಾ ವಿದ್ಯಾಸಂಸ್ಥೆಗಳು ಕೂಡ ಈ ರೀತಿ ಅನ್ಯಾಯ ಮಾಡುತ್ತಿವೆ ಎನ್ನುವ ಅರ್ಥದಲ್ಲಿ ನಾನು ಮಾತನಾಡಲಿಕ್ಕೆ ಬಯಸುವದಿಲ್ಲ. ಕೆಲವು ವಿದ್ಯಾಸಂಸ್ಥೆಗಳು ಇವತ್ತಿಗೂ ಉತ್ತಮವಾದ ಸೇವೆಯನ್ನು ಸಲ್ಲಿಸುತ್ತಿವೆ. ಉದಾಹರಣೆಗೆ ಹೇಳುವದಾದರೆ ಬೆಂಗಳೂರಿನ ನ್ಯಾಷನಲ್ ಕಾಲೇಜು ಇದೆ. ಇದರಂತೆ ಅನೇಕ ಉದಾತ್ತವಾದ ಸಂಸ್ಥೆಗಳಿವೆ.

ವಿದ್ಯಾರ್ಥಿಗಳ ಬಗ್ಗೆ ಹೆಚ್ಚಿನ ಗಮನ ಕೊಟ್ಟು, ಆತನ ವಿದ್ಯಾಭಿವೃದ್ಧಿಗೆ' ಆತನ ಚೇತನ ಶಕ್ತಿ ಹೊರ ಹೊಮ್ಮಿಸಲಿಕ್ಕೆ ಹೆಚ್ಚಿನ ನಿಗಾ ಕೊಟ್ಟು ಕೆಲಸ ಮಾಡತಕ್ಕ ವಿದ್ಯಾ ಸಂಸ್ಥೆಗಳು ಇವತ್ತಿಗೂ ಕೂಡ ಇವೆ. ಪ್ರತಿವರ್ಷ ಬರತಕ್ಕ ಪರೀಕ್ಷೆ ಫಲಿತಾಂಶ ಪರಿಗಣನೆಗೆ ತೆಗೆದುಕೊಂಡರೆ ಸರ್ಕಾರಿ ಸಂಸ್ಥೆಗಳಿಗಿಂತ ಖಾಸಗಿ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳು ಉತ್ತಮವಾದ ಜ್ಞಾನ ಭಂಡಾರವನ್ನು ಗಳಿಸಿಕೊಂಡು ಪರಿಣತರಾಗಿ ಉತ್ತೀರ್ಣರಾಗಿ ಹೊರಗೆ ಬರತಕ್ಕ ವಿದ್ಯಾರ್ಥಿಗಳಿದ್ದಾರೆ. ಪ್ರತಿವರ್ಷ ರ್‍ಯಾಂಕ ಬರುವವರು ಖಾಸಗೀ ವಿದ್ಯಾ ಸಂಸ್ಥೆಗಳಲ್ಲಿ ಓದತಕ್ಕ ವಿದ್ಯಾರ್ಥಿಗಳು ಜಾಸ್ತಿ ಎನ್ನುವದು ಸತ್ಯಾಂಶ. ಆದರೆ ಇದರ ಹಿನ್ನೆಲೆಯಲ್ಲಿ ಇನ್ನೊಂದು ಮುಖ ಇದೆ. ಆ ಮುಖ ಶೋಷಣೆ. ಎರಡು ಹಂತದಲ್ಲಿ ಶೋಷಣೆ ನಡೆಯುತ್ತಿದೆ. ಒಂದು ಯಾವುದಾದರೂ ಶಾಲೆ ನಡೆಸಲಿಕ್ಕೆ ಲೈಸನ್ಸ ತೆಗೆದುಕೊಂಡು ಬಿಡುವುದು. ಕೆಲವಾರು ನಿದರ್ಶನಗಳನ್ನು ಕಣ್ಣಾರೆ ಕಂಡಿದ್ದೇನೆ. ಕೆಲವು ಉಪಾಧ್ಯಾಯರಿಗೆ ೭೦೦ ರೂಪಾಯಿ ಸಂಬಳ ಇದ್ದರೆ, ೧೦೦ ರೂಪಾಯಿ ಸಂಬಳ ಕೊಟ್ಟು ೭೦೦ ರೂಪಾಯಿ ರಸೀದಿ ಕೊಡುವ ವಿದ್ಯಾಸಂಸ್ಥೆಗಳಿವೆ ಉಪಾಧ್ಯಾಯನ ಮೇಲೆ ವಿನಾಕಾರಣ ಯಾವ ತರಹದ ಆಪಾದನೆಗಳು ಇಲ್ಲದೇ ಇದ್ದರೂ ಕೂಡ ತನ್ನ ಮೂಗಿನ ನೇರಕ್ಕೆ ನಡೆದುಕೊಳ್ಳಲಿಲ್ಲ ಎಂದು ಯಾವ ವಿಚಾರಣೆಯೂ ಇಲ್ಲದೆ ಹೊರಗೆ ಹಾಕುವ ವಿದ್ಯಾ ಸಂಸ್ಥೆಗಳಿವೆ.

ಇನ್ನು ಕೆಲವು ವಿದ್ಯಾ ಸಂಸ್ಥೆಗಳಲ್ಲಿ ಸರಕಾರದಿಂದ ಲಕ್ಷಾಂತರ ರೂಪಾಯಿಗಳಷ್ಟು ಗ್ರಾಂಟನ್ನು ಪಡೆದುಕೊಂಡು ಸರಕಾರಕ್ಕೆ ವಿರೋಧವಾಗಿ ರಾಜಕೀಯ

ಚಟುವಟಿಕೆಗಳೂ ನಡೆಯುತ್ತಿರುವದು ನಮಗೆ ಕಂಡುಬರುತ್ತಿವೆ. ವಿದ್ಯಾ ಸಂಸ್ಥೆಗಳು ರಾಜಕೀಯವಾಗಿ ಇಂದು ಪರಿಣಮಿಸುತ್ತಿವೆ. ಇಂತಹ ವಿದ್ಯಾ ಸಂಸ್ಥೆಗಳು ನಮ್ಮ ಶಿವಮೊಗ್ಗ ಜಿಲ್ಲೆಯಲ್ಲೂ ಇವೆ, ಇಲ್ಲಿರುವ ಉಪಾಧ್ಯಾಯರುಗಳು ಯಾವುದೋ ಒಂದು ರಾಜಕೀಯ ಪಕ್ಷದಲ್ಲಿ ಪಾತ್ರವಹಿಸಿ ಅದರಲ್ಲಿ ನೇರವಾದ ಸಂಪರ್ಕ ಇಟ್ಟು ಕೊಂಡಿರುತ್ತಾರೆ. ಇಂತಹ ಕೆಲವರು ಜನಸಂಘದ ಪರವಾಗಿ ನೇರವಾಗಿ ಪಾತ್ರವಹಿಸಿ ಕೆಲಸ ಮಾಡುತ್ತಿರುತ್ತಾರೆ ಮತ್ತು ಇಲ್ಲಿ ಉಪಾಧ್ಯಾಯರಾಗಿಯೂ ಕೆಲಸ ಮಾಡು ತ್ತಿರುತ್ತಾರೆ, ಇಂತಹ ಉಪಾದ್ಯಾಯರುಗಳು ಕೆಲವು ಖಾಸಗಿ ವಿದ್ಯಾ ಸಂಸ್ಥೆ ಗಳಲ್ಲಿದ್ದಾರೆ.

11–30 A.M.

Sri A. R BADARINARAYANA.—We find there are persons beloging to political affiliations in the Council and in the Assembly. We cannot prevent such people belonging to political affiliations being in such institutions.

ಶ್ರೀ ಎಸ್, ಎಂ. ಶೀರನಾಳಿ ಚಂದ್ರಶೇಖರ್.—ಕನಿಷ್ಟ ಪಕ್ಷ ಅಸೆಂಬ್ಲಿ ಸದಸ್ಯ ರಾಗಿ ರಾಜಕೀಯ ಪಕ್ಷದಲ್ಲಿದ್ದುಕೊಂಡು ವಿದ್ಯಾ ಸಂಸ್ಥೆಗಳಲ್ಲೂ ಉಪಾಧ್ಯಾಯರಾಗಿ ರತಕ್ಕವರು ರಾಜಕೀಯ ಕೆಲಸ ಮಾಡುವದು ಸೂಕ್ತವಲ್ಲ ಎಂದು ನಾನು ತಿಳಿದು ಕೊಂಡಿದ್ದೇನೆ.

Sri A. R. BADRINARAYANA.— Head Masters and Principals of such Colleges are in the Legislature.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.— ಇದನ್ನು ನಾನು ಏಕೆ ಹೇಳುತ್ತೇನೆಂದರೆ ಮಕ್ಕಳ ವಿದ್ಯಾಭ್ಯಾಸದ ಅಭಿವೃದ್ಧಿಗೆ ಇದರಿಂದ ಕುಂದಕವಾಗು ತ್ತದೆ, ವಿದ್ಯಾಸಂಸ್ಥೆಗಳು ರಾಜಕೀಯ ಸಂಸ್ಥೆಗಳ ವೇದಿಕೆಯಾಗಿ ಪರಿವರ್ತನೆಯಾಗು ತ್ತದೆ ಎನ್ನುವ ಮಾತನ್ನು ಇಲ್ಲಿ ಹೇಳಬಯಸುತ್ತೇನೆ. ಇನ್ನು ಅನುಚಾನವಾಗಿ ಬಂದಿ ರುವ ಇಂತಹ ಖಾಸಗಿ ವಿದ್ಯಾಸಂಸ್ಥೆಗಳಲ್ಲಿ ಈಚೆಗೆ ಕೆಲವು ಅವ್ಯವಸ್ಥೆಗಳಾಗುತ್ತಿರು ವುದನ್ನು ತಪ್ಪಿಸಲು ಇಂತಹ ಒಂದು ಬಿಲ್ಲನ್ನು ತಂದಿರುವುದು ಸೂಕ್ತ, ಈ ಬಿಲ್ಲಿನ ಕೆಲವು ಕ್ಲಾಸುಗಳನ್ನು ಓದಿದ್ದೇನೆ. ಕ್ಲಾಸು (೬) ರಲ್ಲಿ ಅಪೀಲುಗಳನ್ನು ಹಾಕು ವುದಕ್ಕಾಗಿ ಟ್ರಿಬ್ಯುನಲ್ ರಚಿಸುವಾಗ ಇದರಲ್ಲಿ ಡಿಸ್ಟ್ರಿಕ್ಟ್ ಜಡ್ಜ್ ಕೇಡರಿ ನವರು ಇರಬೇಕೆಂದು ಇದರಲ್ಲಿ ಮಾಡಲಾಗಿದೆ ಮತ್ತು ಆಯಾ ಜಿಲ್ಲೆಗಳಲ್ಲಿರುವ ಡಿಸ್ಟ್ರಿಕ್ಟ್ ಜಡ್ಜ್‌ರವರಿಗೇ ಇದನ್ನು ವಹಿಸಬೇಕೆಂದು ಮಾಡಿರುವುದು ನಿಜವಾಗಿಯೂ ಸ್ತುತ್ಯಾರ್ಹವಾದುದು. ಮಾನ್ಯ ವಿದ್ಯಾ ಮಂತ್ರಿಗಳು ಸರಿಯಾಗಿ ವಿಚಾರಮಾಡಿ ಜನರಿಗೆ ನ್ಯಾಯ ಒದಗಿಸಿಕೊಡುವುದಕ್ಕೆ ಇರುವ ನ್ಯಾಯಾಲಯಕ್ಕೆ ಇದನ್ನೂ ಸೇರಿ ಸಿರುವುದರಿಂದ ಸರಕಾರಕ್ಕೆ ಇದರಿಂದ ಹೆಚ್ಚಿನ ಹೊರೆ ಏನೂ ಬರುವದಿಲ್ಲ, ಇದಕ್ಕಾಗಿ ನಾನು ಅವರನ್ನು ಶ್ಲಾಘನೆ ಮಾಡುತ್ತೇನೆ. ಇನ್ನಿತರ ಕ್ಲಾಸುಗಳ ಬಗ್ಗೆ ವಿವರಣೆ

ಕೊಡಲು ಹೋಗವುದಿಲ್ಲ, ಈ ಬಿಲ್ಲಿನಲ್ಲಿ ಶಿಕ್ಷೆಯ ಬಗ್ಗೆ ಕೂಡ ಅವಕಾಶ ಮಾಡಿದ್ದಾರೆ. ನಾನು ಮೊದಲೇ ಹೇಳಿದಂತೆ ಕೆಲವು ವಿದ್ಯಾ ಸಂಸ್ಥೆಗಳಲ್ಲಿ ಉಪಾಧ್ಯಾಯರಿಗೆ ೨೫೦ ರೂಪಾಯಿಗಳ ಸಂಬಳ ಎಂದು ರಶೀದಿ ಬರಿಸಿಕೊಂಡು ಉಪಾಧ್ಯಾಯರುಗಳಿಗೆ ಕೇವಲ ನೂರು ರೂಪಾಯಿಗಳಷ್ಟು ಮಾತ್ರ ಕೊಡುತ್ತಿದ್ದಾರೆ. ಇಂತಹ ಅನ್ಯಾಯಗಳನ್ನು ಹೇಳಲು ಉಪಾಧ್ಯಾಯರುಗಳು ಹೆದರುತ್ತಿದ್ದಾರೆ, ಆದುದರಿಂದ ಇಂತಹ ಅನ್ಯಾಯಗಳನ್ನು ತಪ್ಪಿಸಲು ಈ ಅಂಶವನ್ನು ಈ ಬಿಲ್ಲಿನಲ್ಲಿ ಅಳವಡಿಸಲು ಸರಕಾರ ಯೋಚಿಸಬೇಕೆಂದು ಸಲಹೆ ಮಾಡುತ್ತೇನೆ. ಇದಕ್ಕೂ ಒಂದು ಮಿತಿ ಇರಬೇಕು, ಇಂತಹ ವಿದ್ಯಾ ಸಂಸ್ಥೆಗಳು ಇಂದು ಅನೇಕ ಇವೆ. ಇಂತಹ ಅನ್ಯಾಯಗಳನ್ನು ಹತ್ತಿಕ್ಕಬೇಕು. ಇಂದು ವಿದ್ಯಾ ಸಂಸ್ಥೆಗಳನ್ನು ರಾಜಕೀಯಕ್ಕಾಗಿ ಉಪಯೋಗಿಸುತ್ತಿರುವುದು ಜಾಸ್ತಿಯಾಗುತ್ತಿದೆ, ಇದರ ಬಗ್ಗೆ ಸರ್ಕಾರ ಯೋಚನೆ ಮಾಡಬೇಕು. ಇಂದು ಕೆಲವು ಖಾಸಗಿ ವಿದ್ಯಾ ಸಂಸ್ಥೆಗಳು ವಿದ್ಯಾ ಸೇವೆ ಮಾಡಬೇಕೆಂದು ಮಾಡುತ್ತಿವೆ. ಇವುಗಳಲ್ಲಿ ಕೆಲವು ಕಡೆ ಕ್ಯಾಪಿಟೇಷನ್ ಫೀಸ್ ಎಂದು ವಸೂಲು ಮಾಡುತ್ತಾರೆ, ಕೆಲವು ಕಡೆ ಪರದೇಶಗಳಿಂದ ಬರುವವರು ಡಾಲರು ಲೆಕ್ಕದಲ್ಲಿ ಕೊಡುತ್ತಾರೆ. ಸುಮಾರು ೫೦–೬೦ ಸಾವಿರ ರೂಪಾಯಿಗಳಷ್ಟು ಫಾರಿನ್ ಎಕ್ಸ್‌ಚೇಂಜ್ ಬರುತ್ತಿದೆ. ಇಂತಹ ಅವ್ಯವಸ್ಥೆಗಳನ್ನು ತಪ್ಪಿಸಬೇಕು ಮತ್ತು ಸರಿಯಾದ ವ್ಯವಸ್ಥೆ ಮಾಡಬೇಕು ಇಷ್ಟು ಹೇಳಿ ಈ ಬಿಲ್ಲನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ ಮತ್ತು ಮಾನ್ಯ ವಿದ್ಯಾ ಮಂತ್ರಿಗಳು ಇಂತಹ ಒಂದು ಬಿಲ್ಲು ತಂದುದಕ್ಕಾಗಿ ಅವರಿಗೆ ಶಹಬಾಸಗಿರಿಯನ್ನೂ ಕೊಟ್ಟು ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

Sri H. SIDDAVEERAPPA. — If I may intervene, inform the hon. member about some capitation fee which he mentioned. There is a Government Order issued, which I have placed on the Table. We should remember one thing that so far as private colleges are concerned, we are not giving any grant, not even naya paisa. They are running on their own excepting we are giving them clinical facilities, that is, some hospitals are attached for clinical work which is necessary for proper education. There was a time when these people had unlimited powers of doing whatever they liked and doing whatever they thought fit, where probably there was room for malpractices of the nature just now mentioned. I have made enquires after the Government Order is issued. Ev ry body knows that out of 100 admissions.25 will be at the discretion of the management exclusively. They can claim any capitation fee legally, provided they pass on receipt. So far that position is concerned, there is also a raider attached that so far as

